ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಚವ್ಹಾಣ ರವಿ ನಾನಾ

ಮಾರ್ಗದರ್ಶಕರು

ಡಾ. ಡಿ.ವಿ.ಪರಮಶಿವಮೂರ್ತಿ

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೧

ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಚವ್ಹಾಣ ರವಿ ನಾನಾ

ಮಾರ್ಗದರ್ಶಕರು

ಡಾ. ಡಿ.ವಿ.ಪರಮಶಿವಮೂರ್ತಿ

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೧

ಮಾರ್ಗದರ್ಶಕರ ಪ್ರಮಾಣಪತ್ರ

ಚವ್ಹಾಣ ರವಿ ನಾನಾ ಇವರು ಬರೆದು ಸಾದರಪಡಿಸಿದ **ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗ ದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15-11-2011
ಸ್ಥಳ : ವಿದ್ಯಾರಣ್ಯ


ಡಾ.ಡಿ.ವಿ.ಪರಮಶಿವಮೂರ್ತಿ

ಸಂಶೋಧಕರ ಪ್ರಮಾಣಪತ್ರ

ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಡಿ.ವಿ.ಪರಮಶಿವಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಚವ್ಹಾಣ ರವಿ ನಾನಾ
ಸಂಶೋಧಕ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ



ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಆಕರಗಳು

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಆಕರಗಳು

೧.೧. ಪೀಠಿಕೆ

ಭಾರತವು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಭವ್ಯ ಪರಂಪರೆಯ ದೇಶವಾಗಿದ್ದು ವಿಶ್ವದ ಅತ್ಯಂತ ಪ್ರಾಚೀನ ಮಾನವ ಸಂಸ್ಕೃತಿಯ ನೆಲೆಗಳಲ್ಲಿ ಒಂದಾಗಿದೆ. ಹರಪ್ಪಾ ಸಂಸ್ಕೃತಿಯ ಕಾಲದಿಂದ ವಿಕಾಸವಾಗುತ್ತಾ ಬಂದ ಇಲ್ಲಿಯ ಮಾನವ ಜೀವನಸಂಸ್ಕೃತಿ ಹಲವು ಹತ್ತು ಉಪಸಂಸ್ಕೃತಿಗಳಲ್ಲಿ ಕವಲೊಡೆಯುತ್ತ ನಿರಂತರವಾಗಿ ಸಾಗಿಬಂದಿರುವುದು ಇಲ್ಲಿಯ ವೈಶಿಷ್ಟ್ಯ. ಸಾವಿರಾರು ವರುಷಗಳ ಈ ಸಾಂಸ್ಕೃತಿಕ ಪ್ರವಾಹಕ್ಕೆ ದೇಶದ ಪ್ರತಿಭಾಗವು ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸುತ್ತ ಬಂದಿದೆ. ಭಾರತ ದೇಶದ ಪ್ರತಿರೂಪದಂತಿರುವ ಕನ್ನಡನಾಡು ಕೂಡ ವೈವಿಧ್ಯ ಜೀವನಸಂಸ್ಕೃತಿ, ಭಾಷೆ, ಜನಾಂಗ, ಉಡುಗೆ, ತೊಡುಗೆ, ಆಚರಣೆ, ನಂಬಿಕೆ, ಕಲೆ ಮುಂತಾದವುಗಳ ತೊಟ್ಟಿಲಾಗಿದೆ. ಕನ್ನಡನಾಡಿನ ಪ್ರತಿ ಭಾಗಗಳೂ ಕೂಡ ಈ ರೀತಿಯ ಸಾಂಸ್ಕೃತಿಕ ವೈಶಿಷ್ಟ್ಯಗಳ ಕಣಜಗಳಾಗಿವೆ. ಅಂತೆಯೇ ತಿರುಳ್ಗನ್ನಡದ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಪ್ರದೇಶವು ಕೂಡ ಇದಕ್ಕೆ ಹೊರತಾಗಿಲ್ಲ.

ಅವಿಭಜಿತ ರಾಯಚೂರ ಜಿಲ್ಲೆಯ ಪ್ರದೇಶವು ತನ್ನ ಎರಡೂ ಗಡಿಗಳಲ್ಲಿ ಕೃಷ್ಣ–ತುಂಗಭದ್ರ ನದಿಗಳನ್ನು ಪಡೆದಿದೆ. ಈ ಪ್ರದೇಶವು ತೊರೆಗಳ ನಡುವಣ ಎಡೆಯಲ್ಲಿರುವುದರಿಂದ ಚರಿತ್ರೆಯಲ್ಲಿ ಮತ್ತು ಶಾಸನಗಳಲ್ಲಿ 'ಎಡತೊರೆ–ಇರ್ಸಾಸಿರ' ನಾಡೆಂದು ದಾಖಲಿಸಿವೆ. ಈ ಪ್ರದೇಶವನ್ನು 'ದೋ–ಅಬ್' ಎಂದೂ ಕರೆಯಲಾಗಿದೆ. ಈ ದೋ–ಅಬ್‌ನ ಒಂದು ಆಯಕಟ್ಟಿನ ನೆಲೆಯಲ್ಲಿರುವುದೇ ಕುಷ್ಟಗಿ ತಾಲ್ಲೂಕು ಪ್ರದೇಶ.

ಪ್ರಾಗಿತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಈ ಪ್ರದೇಶ ಪ್ರಾಚೀನ ಮಾನವನ ತೀವ್ರ ಚಟುವಟಿಕೆಯ ನೆಲೆಯಾಗಿದೆ. ಇಲ್ಲಿ ಹಲವಾರು ಬೃಹತ್ ಶಿಲಾಯುಗದ ನೆಲೆಗಳು, ನೂರಾರು ಶಿಲಾಸಮಾಧಿಗಳು ಕಂಡುಬಂದಿವೆ. ಜೊತೆಗೆ ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಕಾಲದ ಸುಮಾರು ನೂರಕ್ಕೂ ಅಧಿಕ ಚಿತ್ರಿತ ಗವಿಗಳು ಕಂಡುಬಂದಿದ್ದು, ಈ ಪ್ರದೇಶವನ್ನು ಕರ್ನಾಟಕದ ಪ್ರಾಗಿತಿಹಾಸ ಕಾಲದ ಗವಿವರ್ಣ ಚಿತ್ರಗಳ ಕೇಂದ್ರನೆಲೆ ಎಂದು ಗುರುತಿಸಲಾಗಿದೆ.

ಆದಿಚಾರಿತ್ರಿಕ ಕಾಲಕ್ಕೆ ಸಂಬಂಧಿಸಿದಂತೆ ಮೌರ್ಯ ಸಾಮ್ರಾಜ್ಯದ ಅಶೋಕನ ಶಾಸನಗಳು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಅಂದರೆ ಕೊಪ್ಪಳದ ಗವಿಮಠ, ಪಾಲ್ಕಿಗುಂಡು, ಮಸ್ಕಿ ಮತ್ತು ನೆರೆಯ ನಿಟ್ಟೂರು, ಉದೇಗೊಳಂಗಳಲ್ಲಿ ಶಾಸನಗಳು ದೊರೆತಿವೆ. ಮಸ್ಕಿ, ನಿಟ್ಟೂರು ಹಾಗೂ ಉದೇಗೊಳಂ ಶಾಸನಗಳು ಅಶೋಕನ ಹೆಸರನ್ನು ಉಲ್ಲೇಖಿಸಿರುವುದು ವೈಶಿಷ್ಟ್ಯವಾಗಿದೆ. ಚಾರಿತ್ರಿಕ ಕಾಲಕ್ಕೆ ಸಂಬಂಧಿಸಿದಂತೆ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಈ ಪ್ರದೇಶ

[illegible]

[illegible]

[illegible]

[illegible]

ಒಳಪಟ್ಟಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಇದು ತಿರುಳ್ಗನ್ನಡ ನಾಡಾಗಿತ್ತೆಂದು ನೃಪತುಂಗನ ಆಸ್ಥಾನ ಕವಿ ಶ್ರೀವಿಜಯನು ತನ್ನ ಕವಿರಾಜಮಾರ್ಗ ಗ್ರಂಥದಲ್ಲಿ ವರ್ಣಿಸಿದ್ದಾನೆ. ಅದೇ ರೀತಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿಯು ಇದು ಅವರ ಶಾಸನ, ಸ್ಮಾರಕಗಳ ಶ್ರೀಮಂತ ನೆಲೆಯಾಗಿದೆ. ಅದರಂತೆ ಚಾಲುಕ್ಯ ಮಾಂಡಲಿಕರಲ್ಲಿ ಹಲವು ರಾಜಮನೆತನಗಳು ಈ ಪ್ರದೇಶದಲ್ಲೇ ಆಳ್ವಿಕೆ ನಡೆಸಿದ್ದು ವಿಶೇಷ. ಅವರಲ್ಲಿ ಯಲಬುರ್ಗಿ ಸಿಂಧರು, ಸಾಲಗುಂಧದ ಸಿಂಧರು, ಕರಡಿಕಲ್ಲ ಕದಂಬರು, ವಿಪ್ರನಾರಾಯಣದ ನೊಳಂಬ ಪಲ್ಲವರು ಪ್ರಮುಖರಾಗಿದ್ದಾರೆ.

ಕುಷ್ಟಗಿ ಪ್ರದೇಶದ ಸಮೀಪದಲ್ಲಿರುವ ಕುಮ್ಮಟರಾಜ್ಯಕ್ಕೆ ನಾಡಿನ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. ದೆಹಲಿ ಸುಲ್ತಾನರ ದಾಳಿಗೆ ದಕ್ಷಿಣದ ಎಲ್ಲ ರಾಜ್ಯಗಳು ನಲುಗಿದರೂ ಆ ದಾಳಿಗಳನ್ನು ಸಮರ್ಥವಾಗಿ ಎದುರಿಸಿದ ಏಕೈಕ ರಾಜ್ಯವೆಂದರೆ ಕುಮ್ಮಟರಾಜ್ಯ. ಈ ರಾಜ್ಯದ ಅರಸರಾದ ಕಂಪಿಲರಾಯ ಹಾಗೂ ಅವನ ಹಿರಿಯ ಹೆಂಡತಿ ಹರಿಯಲಾದೇವಿಯ ಮಗ ಕುಮಾರರಾಮ ತನ್ನ ಶೌರ್ಯ ಸಾಹಸಗಳಿಂದ ಗಂಡುಗಲಿ ಎಂದು ಪ್ರಸಿದ್ಧನಾಗಿದ್ದಾನೆ. ಕುಮಾರರಾಮ ಒಬ್ಬ ಸಾಂಸ್ಕೃತಿಕ ವೀರನಾಯಕನೆಂದೇ ಜನಪ್ರಿಯನಾಗಿದ್ದಾನೆ. ಈ ಪ್ರದೇಶ ವಿಜಯನಗರ, ಬಹಮನಿ, ಆದಿಲಷಾಹಿಗಳ ಕಾಲದಲ್ಲಿ ಸ್ಪರ್ಧಾಕಣವಾಗಿ ರೂಪಗೊಂಡು ಹಲವು ಸ್ಥಿತ್ಯಂತರಗಳನ್ನು ಅನುಭವಿಸಿತು. ಹೀಗೆ ಹತ್ತು ಹಲವು ರಾಜಕೀಯ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ಈ ಪ್ರದೇಶದ ಅಧ್ಯಯನ ಮಹತ್ವದ್ದಾಗಿದೆ.

ಒಂದು ನಾಡಿನ ಪ್ರದೇಶದ ಜೀವನ ಸಂಸ್ಕೃತಿಯ ಅರಿಯುವಿಕೆಗೆ ಅಲ್ಲಿಯ ಸಾಂಸ್ಕೃತಿಕ ಅವಶೇಷಗಳು ಪ್ರಧಾನ ಆಕರಗಳಾಗಿ ನಿಲ್ಲುತ್ತವೆ. ಸಮಕಾಲೀನ ವೈವಿಧ್ಯಮಯವಾದ ಬದುಕಿನ ಸಂಗತಿಗಳಿಗೆ ಸಾಕ್ಷಿಯಾದ ಶಿಲಾಶಾಸನಗಳು, ಸ್ಮಾರಕಗಳು ಅತ್ಯಮೂಲ್ಯವಾದವು. ಇಂಥವುಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಆಯಾ ಪ್ರದೇಶದ ಸಾಂಸ್ಕೃತಿಕ ಬದುಕಿನ ಅಂಶಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳನ್ನು ಕುರಿತು ಅಧ್ಯಯನವನ್ನು ನಡೆಸಲಾಗಿದೆ.

೧.೨. ಅಧ್ಯಯನದ ಉದ್ದೇಶ

ಒಂದು ನಾಡಿನ ಇತಿಹಾಸವನ್ನು ಅಧ್ಯಯನ ಮಾಡಲು ಹಲವಾರು ಸಾಧನ ಸಾಮಗ್ರಿಗಳ ಮೊರೆಹೋಗಬೇಕಾದುದು ಅನಿವಾರ್ಯ. ಇತಿಹಾಸ ರಚನೆಗೆ ನೆರವಾಗುವ ಆಕರ ಸಾಮಗ್ರಿ ಗಳನ್ನು ಹೆಚ್ಚಾಗಿ ಪ್ರಾಚ್ಯವಸ್ತು ಮತ್ತು ಸಾಹಿತ್ಯ ಮೂಲಗಳಿಂದ ಸಂಗ್ರಹಿಸಬಹುದಾಗಿದೆ. ಪ್ರಾಚ್ಯವಸ್ತುಗಳಲ್ಲಿ ಶಾಸನ, ನಾಣ್ಯ ಮತ್ತು ಸ್ಮಾರಕಗಳು. ಸಾಹಿತ್ಯದಲ್ಲಿ ದೇಶ–ವಿದೇಶಿಯರ ಬರೆಹಗಳು, ಸಮಕಾಲೀನ ಕೃತಿಗಳು, ಜನಪದ ಸಾಹಿತ್ಯ ಈ ಎಲ್ಲದರ ನೆರವು ಪಡೆಯಲಾಗಿದೆ. ಆದರೂ ಮುಖ್ಯ ಸಾಧನಗಳೆಂದರೆ 'ಶಾಸನಗಳು ಮತ್ತು ಸ್ಮಾರಕಗಳು' ಎಂದು ಹೇಳಬಹುದು. ಇವುಗಳು ನಮ್ಮ ಪೂರ್ವಜರ ಜೀವನ ಶೈಲಿಗೆ ಸಾಕ್ಷಿಯಾಗಿ ಅನೇಕ ಹಳ್ಳಿಗಳಲ್ಲಿ ಸಿಗುತ್ತವೆ.

ಇತಿಹಾಸದ ಕಲ್ಪನೆ ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತ ಬರುತ್ತಿದೆ. ನಮ್ಮ ಹಿರಿಯ ತಲೆಮಾರಿನ ಇತಿಹಾಸ ಸಂಶೋಧಕರು ತಮ್ಮ ಅಧ್ಯಯನಗಳಲ್ಲಿ ಶಾಸನಗಳನ್ನು

ಪ್ರಮುಖವಾಗಿ ಬಳಸಿಕೊಂಡಿದ್ದರೂ ಅವುಗಳಲ್ಲಿ ರಾಜಕೀಯ ಮಹತ್ವವನ್ನು ಮಾತ್ರ ಗುರುತಿಸಲು ಪ್ರಯತ್ನಿಸಿದ್ದಾರೆ.[೧] ಆದರೆ ಡಾ. ಎಂ.ಚಿದಾನಂದಮೂರ್ತಿಯವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಕರ್ನಾಟಕದ ಕನ್ನಡ ಶಾಸನಗಳನ್ನು ವಿಭಿನ್ನ ದೃಷ್ಟಿಯಿಂದ ಅಧ್ಯಯನ ಮಾಡಿ ವಿಶ್ಲೇಷಿಸುವಲ್ಲಿ ಯಶಸ್ವಿಯಾದರು. ಅವರು ತಮ್ಮ ಮಹಾಪ್ರಬಂಧದ ಪ್ರಾರಂಭದಲ್ಲಿ ಹೇಳಿದ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಸಮಂಜಸವೆನಿಸುತ್ತದೆ. 'ಒಂದು ನಾಡಿನ ಇತಿಹಾಸವೆಂದರೆ, ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹು ಪ್ರಚಲಿತವಾಗಿದೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ಈ ರಾಜಕೀಯ ಇತಿಹಾಸವೇ ಪ್ರಧಾನವಾಗಿದ್ದು ಗ್ರಂಥದ ಕೊನೆಯಲ್ಲಿ ಆ ನಾಡಿನ ಕಲೆ, ಧರ್ಮ ಇತ್ಯಾದಿಗಳನ್ನು ಕುರಿತ ವಿಷಯಗಳು ಅನುಬಂಧದ ರೂಪದಲ್ಲಿರುವುದುಂಟು ಅಥವಾ ಅವುಗಳನ್ನು ನಿರೂಪಿಸುವ ಕೆಲವು ಅಧ್ಯಾಯಗಳು ಬಂದಿರುವುದುಂಟು. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ. ಅಲ್ಲಿ ಬದುಕಿದ ಜನ. ಹೀಗೆ ಬದುಕಿದ ಜನರ ಒಂದು ಗಣನೀಯ ಭಾಗ, ಆ ನಾಡನ್ನಾಳಿದ ರಾಜಸಮೂಹ. ಒಂದು ದೇಶದ ನಿಜವಾದ ಇತಿಹಾಸವೆಂದರೆ, ಆ ಜನತೆಯ ಇತಿಹಾಸ. ಜನತೆ ಬದುಕಿದ ರೀತಿ ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು. ಅವರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ'[೨] ನನ್ನ ಅಧ್ಯಯನದ ಪರಿಕಲ್ಪನೆಯೂ ಇದೇ ಆಗಿದೆ. ಡಿ.ವಿ.ಜಿ ಅವರು ಹೇಳಿದ ಹಾಗೆ,

"ದೇಶ ಚರಿತ್ರೆಯು ಆ ದೇಶದ ಜನಸಮಷ್ಟಿಯ ಚರಿತ್ರೆ
ಆ ಜನತೆಯ ಒಟ್ಟು ಜೀವನವನ್ನು ಕುರಿತ ಚರಿತ್ರೆ
ಮತ್ತು ಜನಜೀವನದ ಎಲ್ಲ ಕ್ಷೇತ್ರಗಳಿಗೂ ಸೇರಿದ ಚರಿತ್ರೆ"

ಕಳೆದ ದಶಕದಿಂದ ಇತಿಹಾಸಕಾರರು ಇತಿಹಾಸ ರಚನೆಗೆ ಆಕರಗಳ ಅಧ್ಯಯನ ಮಾಡುವ ದೃಷ್ಟಿಕೋನ ಬದಲಾಗಿದೆ. ಕೇವಲ ರಾಜಕಿಯ ಚರಿತ್ರೆಯ ಅಧ್ಯಯನ ಮಾರ್ಗವನ್ನು ಬಿಟ್ಟು ಸಾಂಸ್ಕೃತಿಕ ಇತಿಹಾಸ ಅಧ್ಯಯನ ಮತ್ತು ರಚನೆಯತ್ತ ಗಮನ ಹರಿಸುತ್ತಿದ್ದಾರೆ. ನಮ್ಮ ಜನರ ದಿನನಿತ್ಯದ ಬದುಕನ್ನು ಅವರ ಸಂಪ್ರದಾಯ, ರೀತಿ-ನೀತಿಗಳನ್ನು, ಅವರ ಬದುಕಿನ ಏಳುಬೀಳಿನ ಹಾದಿಯನ್ನು ವಿವಿಧ ಮಗ್ಗುಲುಗಳಿಂದ ಅಧ್ಯಯನ ಮಾಡ ತೊಡಗಿದ್ದಾರೆ. ಇಂತಹ ಅಧ್ಯಯನದ ಫಲವಾಗಿ ಐತಿಹಾಸಿಕ ಆಕರಗಳಲ್ಲಿ ಪ್ರಮುಖವೆನಿಸುವ ಶಾಸನ ಮತ್ತು ಸ್ಮಾರಕಗಳನ್ನು ವಿಭಿನ್ನ ದೃಷ್ಟಿಯಲ್ಲಿ ಅಧ್ಯಯನ ಮಾಡತೊಡಗಿದರು. ಇದರಿಂದಾಗಿ ನಮಗೆ ಪರಿಚಯವೇ ಇಲ್ಲದಿದ್ದ ನಮ್ಮ ನಾಡಿನ ಪ್ರಾಚೀನ ಜನಜೀವನ ಶೈಲಿಯ ಅಧ್ಯಯನಕ್ಕೆ ಅವಶ್ಯವೆನಿಸುವ ಆಕರಗಳ ಅಮೂಲ್ಯ ಭಂಡಾರವನ್ನು ತೆರೆದಂತಾಯಿತು.[೩] ಶಾಸನಗಳು ಇತಿಹಾಸ ಪುನರಚನೆಯಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಇತಿಹಾಸ ಸ್ವರೂಪಕ್ಕೆ ಶಾಸನ ಸಾಮಗ್ರಿಯೇ ಜೀವನಾಡಿ. ಸ್ಮಾರಕ ಶಾಸನಗಳಿಗೆ ಸಂಬಂಧಿಸಿದಂತೆ ವೀರಗಲ್ಲುಗಳು, ಮಾಸ್ತಿಕಲ್ಲುಗಳು ಮತ್ತು ನಿಷಿಧಿಕಲ್ಲುಗಳು ಪ್ರಮುಖವಾಗಿವೆ. ವೀರಗಲ್ಲುಗಳು ವೀರಪರಂಪರೆಯ ದ್ಯೋತಕಗಳಾಗಿರುವದರೊಂದಿಗೆ, ಅಪರೂಪವೆನಿಸುವ ರಣರಂಗದ ಚಿತ್ರವನ್ನು ಅದಕ್ಕೆ

ಪೂರಕವಾದ ಸಾಧನ ಸಾಮಗ್ರಿಗಳ ವಿವರವನ್ನು ಒದಗಿಸುತ್ತವೆ. ಗಂಡನೊಂದಿಗೆ ಸಹಗಮನ ಮಾಡಿ ಮಹಾಸತಿಯರೆನಿಸಿಕೊಂಡವರ ಸ್ಮಾರಕಗಳೇ ಮಾಸ್ತಿಕಲ್ಲು. ಇವುಗಳು ನಮ್ಮ ಸಮಾಜದ ಮಾನಸಿಕ ಹಿನ್ನೆಲೆ, ಸತಿ ಹೋದವಳ ತ್ಯಾಗದ ಬಗ್ಗೆ ಜನತೆ ತೋರುತ್ತಿದ್ದ ಗೌರವಗಳಿಗೆ ಪ್ರತೀಕವಾಗಿ ನಿಂತಿವೆ. ನಿಷಿಧಿಕಲ್ಲುಗಳು ಪ್ರಾಣೋತ್ಕ್ರಮಣ ಪರ್ಯಂತ ಉಪವಾಸ ವ್ರತ ಹಿಡಿದು ಸಾವನ್ನಪ್ಪಿದ ಜೈನ ಶ್ರಾವಕ ಶ್ರಾವಕಿಯರ ಸ್ಮಾರಕಗಳಾಗಿವೆ.

ಒಂದು ದೇಶದ ಸಂಸ್ಕೃತಿಯ ಪ್ರತಿಕೃತಿಗಳೆಂದರೆ ಅಲ್ಲಿಯ ಸ್ಮಾರಕಗಳೇ. ಕೆಲವೊಮ್ಮೆ ಸಾಹಿತ್ಯ ಮತ್ತು ಶಾಸನಗಳು ತಿಳಿಸಲಾರದ ಅಂಶಗಳನ್ನು ಸ್ಮಾರಕಗಳ ಅಧ್ಯಯನದಿಂದ ತಿಳಿಯಬಹುದು. ಪ್ರಾಚೀನ ದೇವಾಲಯ ಹಾಗೂ ಇತರ ಸ್ಮಾರಕಗಳ ಅಧ್ಯಯನ ಬೇರೆಬೇರೆ ಧರ್ಮಗಳ ಪ್ರಭಾವ ಅಂದಿನ ಜನಜೀವನ ಆಯಾ ಕಾಲದ ಕಲಾಭಿರುಚಿ, ಕಲಾಕುಶಲತೆ ಮೊದಲಾದ ವಿಷಯಗಳ ಚಿತ್ರಣವನ್ನೊದಗಿಸುತ್ತವೆ.

ಕೊಪ್ಪಳ ಜಿಲ್ಲೆಯ ಆಡಳಿತಕ್ಕೊಳಪಟ್ಟಿರುವ ಕುಷ್ಟಗಿ ತಾಲ್ಲೂಕು ಬರಗಾಲದ ಪ್ರದೇಶವಾಗಿದೆ. ಈ ಪ್ರದೇಶವು ಮೌರ್ಯ, ಶಾತವಾಹನ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚುರಿ, ಯಾದವರು, ಹೊಯ್ಸಳರು, ವಿಜಯನಗರ ಅರಸರ ಮತ್ತು ನಾಯಕರ ಆಳ್ವಿಕೆಗೆ ಒಳಪಟ್ಟಿತ್ತೆಂದು ಈ ಪ್ರದೇಶದಲ್ಲಿ ದೊರೆತ ಶಾಸನ ಇತರ ಅವಶೇಷಗಳಿಂದ ತಿಳಿದುಬರುತ್ತದೆ. ಈ ಪ್ರದೇಶದ ಸಂಸ್ಕೃತಿ, ಪರಂಪರೆ, ಶಾಸನ ಮತ್ತು ಸ್ಮಾರಕಗಳ ಬಗ್ಗೆ ಈವರೆಗೆ ಸಮಗ್ರ ಅಧ್ಯಯನ ನಡೆದಿಲ್ಲ. ನಡೆದಿದ್ದರೂ ಕೊಪ್ಪಳವನ್ನು ಕೇಂದ್ರವಾಗಿರಿಸಿಕೊಂಡು ಹೆಚ್ಚು ಅಧ್ಯಯನಗಳು ನಡೆದಿವೆ. ಈ ಪ್ರದೇಶದ ಬಗ್ಗೆ ಕೆಲವು ಲೇಖನಗಳು ಪತ್ರಿಕೆ ಸಂಚಿಕೆಗಳಲ್ಲಿ ಬಂದಿದ್ದರೂ ಅವು ಶಾಸನ ಮತ್ತು ಸ್ಮಾರಕಗಳನ್ನು ಅವಲಂಬಿಸಿಲ್ಲ. ಇಲ್ಲಿರುವ ಶಾಸನ ಮತ್ತು ಸ್ಮಾರಕಗಳ ಬಗ್ಗೆ ಪೂರ್ಣ ಪ್ರಮಾಣದ ಅಧ್ಯಯನ ಈವರೆಗೆ ನಡೆದಿಲ್ಲ. ಈ ಭಾಗದ ಸ್ಮಾರಕ ಶಿಲೆಗಳಾದ ವೀರಗಲ್ಲು, ಮಾಸ್ತಿಕಲ್ಲು ಮುಂತಾದವುಗಳ ಬಗ್ಗೆ ಹೆಚ್ಚು ಅಧ್ಯಯನ ನಡದೇ ಇಲ್ಲ. ಬರಗಾಲದ ನಾಡಾಗಿರುವ ಈ ಪ್ರದೇಶದ ಶಾಸನ ಮತ್ತು ಸ್ಮಾರಕಗಳ ಮೂಲಕ ಆ ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುವ ಮತ್ತು ಅಭಿವ್ಯಕ್ತಪಡಿಸುವ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈಗ ಬರಗಾಲದ ಪ್ರದೇಶವೆಂದು ಖ್ಯಾತವಾದ ಈ ಭಾಗದ ಜನರು ಪ್ರತಿವರ್ಷವೂ ಹೊಟ್ಟೆಪಾಡಿಗಾಗಿ ಉದ್ಯೋಗಗಳನ್ನು ಅರಸುತ್ತ ವಲಸೆ ಹೋಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ವಸತಿ, ಆಹಾರ ಮತ್ತು ಶಿಕ್ಷಣ ನೀರಿನಂತಹ ಮೂಲಭೂತ ಸೌಕರ್ಯಗಳಿಂದಲೇ ವಂಚಿತವಾಗಿರುವ ಈ ಪ್ರದೇಶ ಪೂರ್ವಕಾಲದಲ್ಲಿ ಹೇಗಿತ್ತು? ಎಂಬ ಅನೇಕ ವಿಷಯಗಳ ಬಗ್ಗೆ ಉತ್ತರ ಹುಡುಕುವ ಒಂದು ಸಣ್ಣ ಪ್ರಯತ್ನವೇ ಈ ನಮ್ಮ ಅಧ್ಯಯನವಾಗಿದೆ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨ರಲ್ಲಿ ಪ್ರಕಟಗೊಂಡಿರುವ ಈ ಪ್ರದೇಶದ ೩೧ ಶಾಸನಗಳು, ಪ್ರಕಟವಾಗದಿರುವ ಕೆಲವು ಶಾಸನಗಳನ್ನು ವೀರಗಲ್ಲು, ಮಾಸ್ತಿಕಲ್ಲು, ಲಿಂಗಮುದ್ರೆ, ವಾಮನಮೂರ್ತಿ, ಯಂತ್ರಕಲ್ಲು, ಸ್ಮಾರಕಗಳು, ಮೂರ್ತಿಶಿಲ್ಪಗಳು, ಕೋಟೆಗಳು

ಮತ್ತು ಕೆರೆ-ಬಾವಿಗಳ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ, ಈ ಕೆಳಕಂಡ ಪ್ರಶ್ನೆಗಳನ್ನು ಗಮನದಲ್ಲಿರಿಸಿಕೊಂಡು ಕುಷ್ಟಗಿ ಪ್ರದೇಶದ ಸಮಗ್ರ ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

೧. 'ಕುಷ್ಟಗಿ' ಹೆಸರಿಗೆ ಕಾರಣವೇನು?
೨. ಕುಷ್ಟಗಿಯ ಪ್ರಾಚೀನ ಸಂಸ್ಕೃತಿ ಹೇಗಿತ್ತು?
೩. ಕುಷ್ಟಗಿ ಬರಗಾಲದ ನಾಡೆಂಬ ಖ್ಯಾತಿ ಪಡೆಯಲು ಕಾರಣವೇನು?
೪. ಈ ತಾಲ್ಲೂಕಿನ ಇತಿಹಾಸದ ಮಹತ್ವವೇನು?
೫. ಇಲ್ಲಿನ ಆಚರಣೆ ಹೇಗಿತ್ತು?
೬. ಇಲ್ಲಿನ ಶಾಸನಗಳ ಸ್ಥಾನಮಾನ ಮತ್ತು ಅವುಗಳ ಮಹತ್ವವೇನು?
೭. ಕುಷ್ಟಗಿಯ ಜನರ ಅಶೋತ್ತರಗಳು ಶಾಸನಗಳಲ್ಲಿ ಹೇಗೆ ಬಿಂಬಿತವಾಗಿವೆ?
೮. ಇಲ್ಲಿನ ಜನರ ಜೀವನ ಹೇಗಿತ್ತು?
೯. ಜನಸಾಮಾನ್ಯರ ಇತಿಹಾಸ ಇಲ್ಲಿನ ಶಾಸನಗಳಲ್ಲಿ ಹೇಗೆ ಬಿಂಬಿತವಾಗಿದೆ?
೧೦. ಶಾಸನಗಳಲ್ಲಿ ಕಂಡುಬರುವ ವಿಶೇಷ ಅಂಶಗಳು.
೧೧. ಶಾಸನಗಳ ಭಾಷೆ ಮತ್ತು ಶಿಲ್ಪ.
೧೨. ಶಾಸನಗಳ ಬಗ್ಗೆ ಜನರ ಅರಿವು.
೧೩. ಪಕ್ಕದಲ್ಲಿರುವ ಕೊಪ್ಪಳದ ಜೈನ ಧರ್ಮದ ಪ್ರಭಾವ ಹೇಗಾಗಿದೆ?
೧೪. ಇಲ್ಲಿನ ಧರ್ಮದ ಸ್ಥಿತಿಗತಿ.
೧೫. ಧರ್ಮ-ದಾನದ ಹೆಸರಿನಲ್ಲಿ ನಡೆದ ಈ ಭಾಗದ ಶೋಷಿತರ ವಿವರಗಳು.
೧೬. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಭವಿಷ್ಯ.
೧೭. ಜನರೊಂದಿಗೆ ದೇವಾಲಯ - ಸ್ಮಾರಕಗಳ ಸಂಬಂಧ.
೧೮. ನಿತ್ಯಬದುಕಿನ ಅಗತ್ಯತೆಗಳ ನಿರ್ಮಾಣ.
೧೯. ಪ್ರಸ್ತುತ ಕಾಲದಲ್ಲಿ ಜನರ ಆಧ್ಯತೆಗಳು.
೨೦. ಸ್ಮಾರಕಗಳ ಮೇಲೆ ವಲಸೆಯ ಪ್ರಭಾವ.

೧.೩. ಅಧ್ಯಯನದ ವ್ಯಾಪ್ತಿ

ಒಂದು ತಾಲ್ಲೂಕು ಪ್ರದೇಶವನ್ನು ಗಮನದಲ್ಲಿರಿಸಿಕೊಂಡು ಆ ಪ್ರದೇಶದಲ್ಲಿ ದೊರಕುವ ಶಾಸನಗಳು ಮತ್ತು ಸ್ಮಾರಕಗಳನ್ನು ಆಧಾರವಾಗಿಟ್ಟುಕೊಂಡು ಆ ಪ್ರದೇಶದ ಸಮಗ್ರ ಚರಿತ್ರೆಯನ್ನು ಸಂಶೋಧನೆ ಮಾಡುವ ಕ್ರಮ ಇತ್ತೀಚೆಗೆ ಆರಂಭವಾಗಿದೆ. ಪ್ರಸ್ತುತ ನನ್ನ ಅಧ್ಯಯನವು 'ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು' ಎಂಬುದಾಗಿದ್ದು ಇದು ನಿರ್ದಿಷ್ಟ ಪ್ರದೇಶ, ವಿಷಯ ಹಾಗೂ ಕಾಲ ವ್ಯಾಪ್ತಿಯನ್ನು ಹೊಂದಿದೆ. ಶೀರ್ಷಿಕೆಯೇ ಸೂಚಿಸುವಂತೆ ಅಧ್ಯಯನಕ್ಕೆ ನಿರ್ದಿಷ್ಟವಾಗಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕನ್ನು ಆಯ್ದುಕೊಳ್ಳಲಾಗಿದೆ. ತಾಲ್ಲೂಕಿನ ಎಲ್ಲಾ ಗ್ರಾಮ, ಪಟ್ಟಣಗಳು ಇಲ್ಲಿ ಸೇರಿದ್ದು ಒಂದು ನಿರ್ದಿಷ್ಟ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ.

ನಮ್ಮ ಈ ಅಧ್ಯಯನವು ಕೇವಲ ಪ್ರಾಚೀನ ಶಾಸನಗಳ ಮತ್ತು ಸ್ಮಾರಕಗಳ ಕುರಿತು ವಿಷಯ ವ್ಯಾಪ್ತಿಯನ್ನು ಹೊಂದಿದೆ. ಶಾಸನ ಮತ್ತು ಸ್ಮಾರಕಗಳನ್ನು ಸಾಧ್ಯವಾದಷ್ಟು ವಿಶ್ಲೇಷಿಸಿ, ಅಧ್ಯಯನಕ್ಕೆ ಒಳಪಡಿಸಲಾಗಿದೆ. ಶಾಸನಗಳಲ್ಲಿ ಉಪಪ್ರಕಾರವಾದ ಸ್ಮಾರಕಶಿಲೆಗಳನ್ನು ಮತ್ತು ಸ್ಮಾರಕಗಳಲ್ಲಿ ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆಗಳು ಮತ್ತು ಪುರಾತನ ಕೆರೆ ಬಾವಿಗಳ ಬಗೆಗೂ ಇಲ್ಲಿ ಗಮನಿಸಲಾಗಿದೆ. ಅಂತೆಯೇ ಪ್ರಸ್ತುತ ಅಧ್ಯಯನಕ್ಕೆ ಕಾಲಘಟ್ಟದ ಮಿತಿಯನ್ನು ಹೊಂದಲಾಗಿದೆ. ಕ್ರಿ.ಶ.೬ನೆಯ ಶತಮಾನದಿಂದ ಕ್ರಿ.ಶ.೧೭-೧೮ನೆಯ ಶತಮಾನದ ಕಾಲಮಿತಿಯಲ್ಲಿ ಈ ಅಧ್ಯಯನವನ್ನು ನಡೆಸಲಾಗಿದೆ.

೧.೪. ಅಧ್ಯಯನದ ಸ್ವರೂಪ

ಈ ನನ್ನ ಅಧ್ಯಯನವನ್ನು ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದು, ಅವುಗಳನ್ನು ಈ ಕೆಳಗಿನಂತೆ ವಿಭಜಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಆಕರಗಳು ಎಂಬುದಾಗಿದೆ. ಕರ್ನಾಟಕದ ಶಾಸನ, ವೀರಗಲ್ಲು, ಮಾಸ್ತಿಕಲ್ಲು ಮತ್ತು ಇತರ ಐತಿಹಾಸಿಕ ಅವಶೇಷಗಳ ಕುರಿತು ಈಗಾಗಲೇ ಅನೇಕ ಮಹಾಪ್ರಬಂಧಗಳು ಪ್ರಕಟವಾಗಿವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಮಹಾಪ್ರಬಂಧದಲ್ಲಿ ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ದೊರೆತಿರುವ ಶಾಸನ, ಸ್ಮಾರಕ, ವೀರಗಲ್ಲು, ಮಾಸ್ತಿಕಲ್ಲು ಮತ್ತು ಐತಿಹಾಸಿಕ ಅವಶೇಷಗಳ ಕುರಿತು ಸಮಗ್ರ ಅಧ್ಯಯನ ನಡೆಸಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಬಳಸಿಕೊಂಡ ಆಕರ ಸಾಮಗ್ರಿಗಳನ್ನು ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯ 'ಕುಷ್ಟಗಿ ಪರಿಸರದ ಪರಿಚಯ ಮತ್ತು ಹಿನ್ನೆಲೆ' ಎಂಬ ಶೀರ್ಷಿಕೆಯಲ್ಲಿ ಕುಷ್ಟಗಿ ಪ್ರದೇಶದ ಭೌಗೋಳಿಕ, ಪ್ರಾಗಿತಿಹಾಸ ಮತ್ತು ಇತಿಹಾಸವನ್ನು ಕುರಿತು ವಿವರಿಸಲಾಗಿದೆ. ಭೌಗೋಳಿಕ ಪರಿಚಯದಲ್ಲಿ ನದಿ, ಹಳ್ಳ, ಕೆರೆಗಳು, ನೀರಾವರಿ ಸೌಲಭ್ಯ, ಬೆಳೆಗಳು, ಬೆಟ್ಟ, ಅರಣ್ಯ, ಸಸ್ಯ, ಪ್ರಾಣಿಗಳು, ಹವಾಮಾನ, ಮಣ್ಣು, ಶಿಲೆ ಮತ್ತು ಖನಿಜಗಳ ಕುರಿತು ವಿವರಿಸಲಾಗಿದೆ. ಪ್ರಾಗಿತಿಹಾಸದಲ್ಲಿ ಆದಿಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ, ನೂತನ ಶಿಲಾಯುಗ ಸಂಸ್ಕೃತಿ ಅದರಲ್ಲಿ ಶಿಲಾಯುಗ ಸಂಸ್ಕೃತಿ, ಶಿಲಾ ತಾಮ್ರಯುಗ ಸಂಸ್ಕೃತಿ, ಕಬ್ಬಿಣ ಬೃಹತ್ ಶಿಲಾಯುಗ ಸಂಸ್ಕೃತಿ, ಪ್ರಾಗಿತಿಹಾಸ ಕಾಲದ ಚಿತ್ರಕಲೆ, ಗವಿವರ್ಣಚಿತ್ರಗಳು ಮತ್ತು ಬಯಲುಬಂಡೆ ಕೊರೆದ ಮತ್ತು ಕುಟ್ಟಿದ ಚಿತ್ರಗಳ ಕುರಿತು ವಿವರಿಸಲಾಗಿದೆ. ಇತಿಹಾಸ ಕಾಲದಲ್ಲಿ ಈ ಪ್ರದೇಶದಲ್ಲಿ ದೊರೆತ ಶಾಸನ, ಸ್ಮಾರಕ ಮತ್ತು ಇತರ ಅವಶೇಷಗಳ ಹಿನ್ನೆಲೆಯಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕಲ್ಯಾಣ ಚಾಲುಕ್ಯರು, ಕಲಚುರಿಗಳು, ಹೊಯ್ಸಳರು ಮತ್ತು ವಿಜಯನಗರದ ಅರಸರವರೆಗೆ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯ 'ಶಾಸನಗಳ ಅಧ್ಯಯನ' ಎಂಬುದರಲ್ಲಿ ಈ ಪ್ರದೇಶದ ಶಾಸನಗಳ ಸಮಗ್ರ ಅಧ್ಯಯನ ಕೈಗೊಳ್ಳಲಾಗಿದೆ. ಶಾಸನ ಅಧ್ಯಯನ ಇತಿಹಾಸ, ಶಾಸನಗಳ

ವಸ್ತು-ವಿಷಯ ಮತ್ತು ವೈವಿಧ್ಯ, ಶಾಸನಗಳಲ್ಲಿ ಪ್ರಾರ್ಥನಾ ಶ್ಲೋಕ, ಕಾಲದ ನಿರೂಪಣೆ, ಆಡಳಿತ ವಿಭಾಗಗಳು, ಅಧಿಕಾರಿ ವರ್ಗ, ಶಿಕ್ಷಣ ಕೇಂದ್ರಗಳು, ವರ್ತಕ ಸಂಘಗಳು, ಅಳತೆ ಮತ್ತು ಮಾಪನಗಳು, ಜನಸಾಮಾನ್ಯರ ಚಿತ್ರಣ, ಶಾಸನೋಕ್ತ ಗ್ರಾಮನಾಮಗಳು ಮತ್ತು ವೃತ್ತಿಸೂಚಕ ನಾಮಗಳು, ಕವಿಗಳು, ಶಾಪಾಶಯಗಳು, ಶೈವ, ವೈಷ್ಣವ ಮತ್ತು ಜೈನ ದಾನ ಶಾಸನಗಳು, ವೀರಗಲ್ಲು, ಮಾಸ್ತಿಕಲ್ಲುಗಳು ಮತ್ತು ಇತರೇ ಸ್ಮಾರಕ ಶಾಸನಗಳನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯ 'ಶಾಸನಶಿಲ್ಪ' ಎಂಬುದರಲ್ಲಿ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳ ಶಿಲ್ಪಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಶೈವ, ವೈಷ್ಣವ ಮತ್ತು ಜೈನ ಶಾಸನಗಳ ಶಿಲ್ಪಗಳನ್ನು, ಸ್ಮಾರಕ ಶಾಸನಗಳಾದ ವೀರಗಲ್ಲುಗಳು (ತುಱುಗೋಳ್,ಬೇಟೆ) ಮಾಸ್ತಿಕಲ್ಲು ಮತ್ತು ಆತ್ಮಬಲಿ ಕಲ್ಲುಗಳ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಶೈವ ಶಿಲ್ಪಗಳಲ್ಲಿ ಕಂಡುಬರುವ ಲಿಂಗಮುದ್ರೆ ಕಲ್ಲುಗಳಂತೆ, ವೈಷ್ಣವ ಶಾಸನಶಿಲ್ಪಗಳಲ್ಲಿ ವಾಮನಮುದ್ರೆ ಮತ್ತು ರೇಖಾಚಿತ್ರಗಳು ಕಂಡುಬರುತ್ತವೆ. ಇವುಗಳ ಕುರಿತು ವಿವರವಾಗಿ ಅಧ್ಯಯನ ನಡೆಸಲಾಗಿದೆ.

ಐದನೆಯ ಅಧ್ಯಾಯ 'ಸ್ಮಾರಕಗಳ ಅಧ್ಯಯನ' ಎಂಬುದರಲ್ಲಿ ಐತಿಹಾಸಿಕ ಸ್ಮಾರಕಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಪುರಾತನ ಶೈವ, ವೈಷ್ಣವ ಮತ್ತು ಇತರೆ ದೇವಾಲಯಗಳ ವಾಸ್ತುಶೈಲಿಯನ್ನು ವಿವರಿಸಲಾಗಿದೆ. ಮೂರ್ತಿಶಿಲ್ಪಗಳಲ್ಲಿ ಮಹಿಷಮರ್ದಿನಿ, ಸಪ್ತಮಾತೃಕೆ, ವೀರ ಭದ್ರ, ಗಜಲಕ್ಷ್ಮಿ, ಸೂರ್ಯ, ಗಣಪತಿ, ಶಿವಲಿಂಗ, ನಂದಿ ಮತ್ತು ಜೈನ ಮೂರ್ತಿಶಿಲ್ಪಗಳ ಕುರಿತು ಬರೆಯಲಾಗಿದೆ. ಈ ಪ್ರದೇಶದಲ್ಲಿರುವ ಕೋಟೆಗಳ ಬಗ್ಗೆ ಚರ್ಚಿಸಲಾಗಿದೆ. ಈ ಭಾಗದ ಶಾಸನ ಗಳಲ್ಲಿ ಉಲ್ಲೇಖಿತ ಕೆರೆಗಳ ಬಗ್ಗೆ ಹಾಗೇ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದ ಪುರಾತನ ಬಾವಿಗಳನ್ನು ಕುರಿತು ವಿವರಿಸಲಾಗಿದೆ.

ಆರನೆಯ ಅಧ್ಯಾಯವಾದ 'ಸಮಾರೋಪ' ಎಂಬುದರಲ್ಲಿ ಮೇಲ್ಕಂಡ ಅಧ್ಯಾಯಗಳಲ್ಲಿ ನಾನು ಕಂಡುಕೊಂಡ ವಿಷಯ, ಸ್ವರೂಪ ಮತ್ತು ಫಲಿತಗಳನ್ನು ವಿವರಿಸಿದ್ದೇನೆ. ಅಧ್ಯಯನ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳನ್ನು ಮಾರ್ಗದರ್ಶರು, ವಿದ್ವಾಂಸರುಗಳೊಂದಿಗೆ ಸೂಕ್ತ ರೀತಿಯಲ್ಲಿ ಪರಿಹರಿಸಿಕೊಂಡು ವಿವಿಧ ಮಾರ್ಗಗಳಲ್ಲಿ ನನಗೆ ಹೊಳೆದ ವಿಚಾರಗಳನ್ನು ಚರ್ಚಿಸಲಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ನನ್ನ ಅಧ್ಯಯನದ ಫಲಿತದ ಸಿಂಹಾವಲೋಕನ ಮತ್ತು ಅವಲೋಕನ ಈ ಅಧ್ಯಾಯದಲ್ಲಿದೆ.

೧.೫. ಆಕರಗಳು

ಯಾವುದೇ ದೇಶದ ಇತಿಹಾಸವನ್ನು ಅರಿಯಲು ಸಹಾಯವಾಗುವ ಪ್ರಮುಖ ಆಕರಗಳೆಂದರೆ ಶಾಸನಗಳು, ಸ್ಮಾರಕಗಳು, ಸಾಹಿತ್ಯ ಕೃತಿಗಳು ಮತ್ತು ಜನಪದ ಸಾಹಿತ್ಯ ಮುಂತಾದವುಗಳು. ಪ್ರಾಮಾಣಿಕತೆಯಿಂದ ಹೇಳುವುದಾದರೆ ಆಕರಗಳಲ್ಲಿ ಮೊದಲ ಸ್ಥಾನ ಶಾಸನಗಳಿಗೆ ಸಲ್ಲುತ್ತದೆ. ಆದ್ದರಿಂದ ಪ್ರಸ್ತುತ ಮಹಾಪ್ರಬಂಧಕ್ಕೆ ಕುಷ್ಟಗಿ ತಾಲ್ಲೂಕಿನ ಪ್ರದೇಶಗಳಲ್ಲಿ ಕಂಡುಬಂದಿರುವ ಶಾಸನ ಮತ್ತು ಸ್ಮಾರಕಗಳನ್ನು ಈ ಪ್ರಬಂಧದ ಮೂಲ ಆಕರಗಳಂತೆ

ಬಳಸಿಕೊಳ್ಳಲಾಗಿದೆ. ಶಾಸನ ಮತ್ತು ಸ್ಮಾರಕಗಳ ಕ್ಷೇತ್ರದಲ್ಲಿ ಈಗಾಗಲೆ ಅನೇಕ ವಿದ್ವಾಂಸರು ಸಂಶೋಧನೆಗಳನ್ನು ಕೈಗೊಂಡು ಫಲಿತಗಳನ್ನು ಪ್ರಕಟಿಸಿದ್ದಾರೆ. ಆದರೆ ಒಂದು ತಾಲ್ಲೂಕಿನ ಪ್ರದೇಶವನ್ನು ಆಧಾರವಾಗಿಟ್ಟುಕೊಂಡು ಆ ಪ್ರದೇಶದ ಸಮಗ್ರ ಸಂಶೋಧನೆ ಮಾಡುವ ಕ್ರಮ ಇತ್ತೀಚೆಗೆ ಆರಂಭವಾಗಿದೆ. ಈ ನಿಟ್ಟಿನಲ್ಲಿ ಸಮಗ್ರವಾಗಿ ಅಧ್ಯಯನಕ್ಕೆ ಒಳಪಡದ ಕುಷ್ಟಗಿ ತಾಲ್ಲೂಕನ್ನು ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಪ್ರಸ್ತುತ ಮಹಾಪ್ರಬಂಧಕ್ಕೆ ಕುಷ್ಟಗಿ ತಾಲ್ಲೂಕಿನ ಪ್ರದೇಶಗಳಲ್ಲಿ ಕಂಡುಬಂದಿರುವ ಶಾಸನ ಮತ್ತು ಸ್ಮಾರಕಗಳನ್ನು ಈ ಪ್ರಬಂಧದ ಮೂಲ ಆಕರಗಳಂತೆ ಬಳಸಿಕೊಳ್ಳಲಾಗಿದೆ.

ಈವರೆಗೆ ಕೊಪ್ಪಳ ಜಿಲ್ಲೆಯ ಶಾಸನಗಳ ಎರಡು ಸಂಪುಟಗಳು ಪ್ರಕಟವಾಗಿವೆ. ಒಂದು 'ಇನ್ಸ್ಕ್ರಿಪ್ಷನ್ಸ ಆಫ್ ಕರ್ನಾಟಕ' ಸಂಪುಟ–೩, ಮತ್ತೊಂದು 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨'. ಇವುಗಳಲ್ಲಿ ಪ್ರಕಟವಾದ ಶಾಸನಗಳನ್ನು ಮತ್ತು ಅಪ್ರಕಟಿತ ಶಾಸನಗಳನ್ನು ನನ್ನ ಅಧ್ಯಯನದ ಮೂಲ ಆಕರಗಳಂತೆ ಬಳಸಿಕೊಳ್ಳಲಾಗಿದೆ. ಈ ತಾಲ್ಲೂಕಿನ ಅಧ್ಯಯನಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯದ ಫಲಶೃತಿಯಾಗಿ ಬೆಳಕಿಗೆ ಬಂದ ಸ್ಮಾರಕ ಶಿಲೆಗಳಾದ ವೀರಗಲ್ಲುಗಳು, ನಿಸಿಧಿಗಲ್ಲುಗಳು, ಬಲಿಕಲ್ಲುಗಳು ಸತಿಕಲ್ಲುಗಳು, ಯಂತ್ರಕಲ್ಲುಗಳು ಮತ್ತು ವಾಮನಮೂರ್ತಿ ಕಲ್ಲುಗಳನ್ನು ಆಕರಗಳಂತೆ ಬಳಸಿಕೊಂಡಿದ್ದೇನೆ. ಹನುಮಗೌಡ.ಸಿ. ಅವರು ಬರೆದ 'ಕುಷ್ಟಗಿ ತಾಲ್ಲೂಕು ದರ್ಶನ', ಶರಣಪ್ಪ ವಡಗೇರಿ ಅವರು ಬರೆದ 'ಕುಷ್ಟಗಿ ತಾಲ್ಲೂಕು ದರ್ಶನ' ವಿಲಾಸ.ಎಂ.ಜೋಗಿನ ಅವರ 'ಕುಷ್ಟಗಿ ತಾಲ್ಲೂಕಾ ಪೂರ್ವ ಹಾಗೂ ಲಿಂಗಸ್ಗೂರು ತಾಲ್ಲೂಕು ದಕ್ಷಿಣ ಭಾಗದ ಪ್ರಾಚ್ಯ ಅವಶೇಷಗಳ ಅನ್ವೇಷಣೆ ಮತ್ತು ಅಧ್ಯಯನ' ಎಂ.ಫಿಲ್ ಪ್ರಬಂಧ(ಅಪ್ರಕಟಿತ) ಎಚ್.ಎಸ್.ಪಾಟೀಲ ಮತ್ತು ಅಲ್ಲಮಪ್ರಭು ಬೆಟ್ಟದೂರು ಅವರುಗಳ ಸಂಪಾದಿತ ಕೃತಿ 'ಕೊಪ್ಪಳ ಜಿಲ್ಲಾ ದರ್ಶನ', ಅಶ್ವಥ ಅವರ 'ಕೊಪ್ಪಳ ಜಿಲ್ಲೆ ಒಂದು ಸಾಂಸ್ಕೃತಿಕ ಅಧ್ಯಯನ' ಪಿಎಚ್.ಡಿ ಪ್ರಬಂಧ(ಅಪ್ರಕಟಿತ) ಸುಜಾತಾ ಮಲ್ಲನಗೌಡರ ಅವರ 'ರಾಯಚೂರ–ಕೊಪ್ಪಳ ಜಿಲ್ಲೆಯ ಕೋಟೆಗಳು ಒಂದು ಅಧ್ಯಯನ' ಪಿಎಚ್.ಡಿ ಪ್ರಬಂಧ(ಅಪ್ರಕಟಿತ) ಡಾ. ಸಿದ್ಧಲಿಂಗಪ್ಪ ಕೊಟ್ನಿಕಲ್ ಅವರ 'ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ', ಡಾ. ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಡಾ. ಎಸ್.ವೈ.ಸೋಮಶೇಖರ, ಮಾಡಲಗೇರಿ ಕೊಟ್ರೇಶ ಅವರ 'ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ', ಸಿ.ಎಸ್.ಪಾಟೀಲ ಅವರ 'ಟೆಂಪಲ್ಸ ಆಫ್ ರಾಯಚೂರು–ಬಳ್ಳಾರಿ ಡಿಸ್ಟ್ರಿಕ್ಟ್' ಇನ್ನು ಅನೇಕ ಸಾಹಿತ್ಯ ಕೃತಿಗಳು ನನ್ನ ಅಧ್ಯಯನಕ್ಕೆ ಸಹಕಾರಿಯಾಗಿವೆ.

ರಾಯಚೂರು ಜಿಲ್ಲಾ ಗ್ಯಾಜಿಟಿಯರ್, ಸ್ಮರಣ ಸಂಚಿಕೆಗಳಾದ ತಿರುಳ್ಗನ್ನಡ, ಎಡದೊರೆ ನಾಡು, ಗವಿದೀಪ್ತಿ, ಕೃಷ್ಣಗಿರಿ–ಸಾಹಿತ್ಯಸಿರಿ, ಮಾನ್ಯಪುರ, ಕಪಿಲತೀರ್ಥ, ಅಕ್ಷಯ, ಕಾಯಕಸಿರಿ ವಿವಿಧ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಲೇಖನಗಳು, ಗವಿಸಿದ್ದೇಶ್ವರ ಪುರಾಣ, ಚಂದಾ ಲಿಂಗೇಶ್ವರ ಪುರಾಣ, ಕೈಫಿಯತ್ತುಗಳು, ಲಾವಣಿಗಳು ಮತ್ತು ಐತಿಹ್ಯಗಳನ್ನು ನನ್ನ ಅಧ್ಯಯನದ ಪೂರಕ ಆಕರಗಳನ್ನಾಗಿ ಬಳಸಿಕೊಂಡಿರುವೆನು.

ಅಡಿಟಿಪ್ಪಣಿಗಳು:

೧. ಪರಮಶಿವಮೂರ್ತಿ.ಡಿ.ವಿ, ಕನ್ನಡ ಶಾಸನಶಿಲ್ಪ ಪು.೧

೨. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೧

೩. ಪರಮಶಿವಮೂರ್ತಿ.ಡಿ.ವಿ, ಕನ್ನಡ ಶಾಸನಶಿಲ್ಪ ಪು.೧

ಅಧ್ಯಾಯ – ೨

ಕುಷ್ಟಗಿ ಪರಿಸರದ ಪರಿಚಯ ಮತ್ತು ಹಿನ್ನೆಲೆ

೨.೧. ಭೌಗೋಳಿಕ ಪರಿಚಯ

೨.೨. ಪ್ರಾಗಿತಿಹಾಸ

೨.೩. ಇತಿಹಾಸ

ಅಧ್ಯಾಯ – ೨

ಕುಷ್ಟಗಿ ಪರಿಸರದ ಪರಿಚಯ ಮತ್ತು ಹಿನ್ನೆಲೆ

೨.೧ ಭೌಗೋಳಿಕ ಪರಿಚಯ

ಯಾವುದೇ ದೇಶದ ಇತಿಹಾಸ, ಜನಜೀವನ ಮತ್ತು ಸಾಂಸ್ಕೃತಿಕ ಪರಂಪರೆಗಳು ಅಲ್ಲಿನ ಭೌಗೋಳಿಕ ಲಕ್ಷಣಗಳಿಂದ ಪ್ರಭಾವಿತವಾಗಿರುತ್ತವೆ. ರಿಚರ್ಡ್ ಹಕ್ಲೂಯಾತ್ ಎಂಬ ಪಾಶ್ಚಾತ್ಯ ವಿದ್ವಾಂಸ ಭೂಗೋಳ ಮತ್ತು ಕಾಲಗಣನೆಶಾಸ್ತ್ರಗಳು ಇತಿಹಾಸದ ಸೂರ್ಯಚಂದ್ರರೆಂದು, ಎರಡು ಕಣ್ಣುಗಳೆಂದು ವರ್ಣಿಸಿದ್ದಾರೆ.[೧] ಭೌಗೋಳಿಕ ಲಕ್ಷಣಗಳೆಂದರೆ, ಬೆಟ್ಟ, ಅರಣ್ಯ, ಸಸ್ಯ, ಪ್ರಾಣಿಗಳು, ಮಣ್ಣು, ಶಿಲೆ–ಖನಿಜ, ಹವಾಮಾನ, ನದಿ–ಹಳ್ಳ, ಕೆರೆಗಳು ಮುಂತಾದವುಗಳು.

ಕರ್ನಾಟಕವು ಭಾರತದ ಅತ್ಯಂತ ಪುರಾತನ ಜನವಸತಿ ಭೂಪ್ರದೇಶಗಳಲ್ಲಿ ಒಂದಾಗಿದೆ. ಇಲ್ಲಿಯ ಇತಿಹಾಸ ಮತ್ತು ಸಂಸ್ಕೃತಿಗಳು ಭೌಗೋಳಿಕ ಲಕ್ಷಣಗಳಿಂದ ಪ್ರಭಾವಿತವಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಕೊಪ್ಪಳ ಜಿಲ್ಲೆ ಐತಿಹಾಸಿಕ ಸ್ಥಳ. ಈ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಕುಷ್ಟಗಿಯೂ ಒಂದು. ಇದು ಕೊಪ್ಪಳದಿಂದ ಸುಮಾರು ೫೦ ಕಿ.ಮೀ. ದೂರದಲ್ಲಿದ್ದು, ಭೌಗೋಳಿಕವಾಗಿ ವಿಶಾಲವಾಗಿದ್ದು, ಸುಮಾರು ೧೬೬ ಚ.ಕಿ.ಮೀ ಭೂ ವಿಸ್ತೀರ್ಣವನ್ನು ಹೊಂದಿದೆ. ಸಮುದ್ರ ಮಟ್ಟದಿಂದ ೫೮೯ ಮೀ.ಗಳ ಎತ್ತರದಲ್ಲಿದೆ. ೭೫°.೩೦° ಪೂರ್ವ ರೇಖಾಂಶದಿಂದ ೭೬°.೩೦° ಪೂರ್ವ ರೇಖಾಂಶದವರೆಗೆ ಹಾಗೂ ೧೫°.೩೦° ಉತ್ತರ ಅಕ್ಷಾಂಶದವರೆಗೆ ಈ ತಾಲ್ಲೂಕಿನ ಪ್ರದೇಶವು ಹರಡಿಕೊಂಡಿದೆ.

ಕೊಪ್ಪಳದ ಉತ್ತರ ಭಾಗದಲ್ಲಿ ಕುಷ್ಟಗಿ ತಾಲ್ಲೂಕು ಇದ್ದು ಈ ತಾಲ್ಲೂಕಿನ ಉತ್ತರಕ್ಕೆ ಬಾಗಲಕೋಟೆ ಜಿಲ್ಲೆಯ ಹುನಗುಂದ, ಬಾದಾಮಿ ತಾಲ್ಲೂಕುಗಳು, ಪೂರ್ವಕ್ಕೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು, ಪಶ್ಚಿಮಕ್ಕೆ ಗದಗ ಜಿಲ್ಲೆಯ ರೋಣ ತಾಲ್ಲೂಕು, ದಕ್ಷಿಣಕ್ಕೆ ತವರು ಜಿಲ್ಲೆಯ ಯಲಬುರ್ಗಾ ತಾಲ್ಲೂಕುಗಳು ಇವೆ. ಈ ತಾಲ್ಲೂಕಿನಲ್ಲಿ ಒಟ್ಟು ೧೭೭ ಕಂದಾಯ ಗ್ರಾಮಗಳಿದ್ದು, ಇವುಗಳಲ್ಲಿ ೧೬೩ ಗ್ರಾಮಗಳಲ್ಲಿ ಜನವಸತಿ ಇದೆ. ಇನ್ನುಳಿದ ೧೪ ಗ್ರಾಮಗಳು ಅನೇಕ ಕಾರಣಗಳಿಂದ ಸ್ಥಳಾಂತರಗೊಂಡು ಸಮೀಪದ ಕಂದಾಯ ಗ್ರಾಮಗಳಲ್ಲಿ ವಿಲೀನಗೊಂಡಿವೆ. ಆಡಳಿತದ ಅನುಕೂಲವಾಗಲಿ ಎಂದು ಕುಷ್ಟಗಿ, ಹನುಮಸಾಗರ, ಹನುಮನಾಳ ಮತ್ತು ತಾವರಗೆರೆ ಎಂಬ ನಾಲ್ಕು ಹೋಬಳಿಗಳನ್ನು ರೂಪಿಸಲಾಗಿದೆ.

ಬೆಟ್ಟ, ಅರಣ್ಯ, ಸಸ್ಯಪ್ರಾಣಿಗಳು:

ಕುಷ್ಟಗಿ ತಾಲ್ಲೂಕಿನ ಪ್ರದೇಶವು ದಕ್ಷಿಣ ಪ್ರಸ್ಥಭೂಮಿಯ ವ್ಯಾಪ್ತಿಗೆ ಬರುವುದರಿಂದ ಬೃಹತ್ ಪ್ರಮಾಣದ ಬೆಟ್ಟಗಳು ಕಂಡುಬರುವುದಿಲ್ಲ. ತಾಲ್ಲೂಕಿನ ಬೀಳಗಿ, ಹನುಮಸಾಗರ,

[illegible]

[illegible]

[illegible]

[illegible]

[illegible]

[illegible]

[illegible]

[illegible]

ಮಾಲಗಿತ್ತಿ, ಚಂದ್ರಗಿರಿ, ಗುಡ್ಡದದೇವಲಾಪುರ, ತಾವರಗೆರೆ ಮತ್ತು ಕಾಟಾಪುರಗಳಲ್ಲಿ ಸಣ್ಣ ಪ್ರಮಾಣದ ಬೆಟ್ಟಗಳಿವೆ. ಇವುಗಳಲ್ಲಿ ತಾವರಗೆರೆ ಸಮೀಪದಲ್ಲಿ ತಿಮ್ಮಪ್ಪಯ್ಯನಗುಡ್ಡ, ಗಾಣಗಿತ್ತಿಗುಡ್ಡ, ಮೌಲಾಲಿಗುಡ್ಡ, ಕರಡಿಗುಡ್ಡ ಮುಂತಾದ ಗುಡ್ಡಗಳ ಸಾಲುಗಳೇ ಇವೆ. ಈ ಪ್ರದೇಶದಲ್ಲಿ ಕಂಡುಬರುವ ಎಲ್ಲ ಬೆಟ್ಟ-ಗುಡ್ಡಗಳಲ್ಲಿ ಕುಷ್ಟಗಿಯಿಂದ ಪೂರ್ವಕ್ಕೆ ೩೦ ಮೈಲುಗಳ ದೂರದಲ್ಲಿರುವ ಜಗದಗುಡ್ಡವೇ ಎತ್ತರವಾದುದಾಗಿದೆ. ಈ ಗುಡ್ಡವು ಸುಮಾರು ೨೧೦೧ ಅಡಿ ಎತ್ತರವಾಗಿದೆ.

ಕುಷ್ಟಗಿ ತಾಲ್ಲೂಕಿನಲ್ಲಿ ದಟ್ಟವಾದ ಅರಣ್ಯ ಇಲ್ಲವಾದರೂ, ಸುಮಾರು ೨೭೫೦.೧೯ ಹೆಕ್ಟೇರ್ (ಶೇ.೧೨.೮೪) ಸಾಮಾನ್ಯ ಅರಣ್ಯ ಪ್ರದೇಶವಿದೆ. ಆದರೆ ಇಲ್ಲಿಯ ಶುಷ್ಕ ಹವಾಗುಣ ದಿಂದಾಗಿ ದಟ್ಟವಾದ ಅರಣ್ಯಗಳ ಬೆಳವಣಿಗೆ ಅಸಾಧ್ಯ. ಸಾಮಾನ್ಯವಾಗಿ ಈ ಪ್ರದೇಶಗಳಲ್ಲಿ ಬೇವು, ಮಾವು, ಜಾಲಿ, ಹುಣಸೆ, ನೀಲಗಿರಿ, ಶ್ರೀಗಂಧ ಮುಂತಾದ ಗಿಡಮರಗಳನ್ನು ಕಾಣಬಹುದಾಗಿದೆ. ಇತ್ತೀಚೆಗೆ ಅರಣ್ಯ ಇಲಾಖೆಯು 'ಸಾಮಾಜಿಕ ಅರಣ್ಯ ಯೋಜನೆ'ಯಡಿ ಈ ಪ್ರದೇಶದಲ್ಲಿ ಅರಣ್ಯ ಬೆಳೆಸುವ ಮತ್ತು ಅಭಿವೃದ್ಧಿ ಪಡಿಸುವ ಕಾರ್ಯ ಹಮ್ಮಿಕೊಂಡಿದೆ. ಸಾಮಾನ್ಯವಾಗಿ ಈ ತಾಲ್ಲೂಕಿನ ಪ್ರದೇಶದಲ್ಲಿ ಸಪೋಟ, ಪೇರಲ, ದಾಳಿಂಬೆ, ಬಾರೆ, ಪಪ್ಪಾಯಿ, ನೇರಳೆ, ಉಪ್ಪಲಿಕಾಯಿ, ಸೀತಾಫಲ ಗಿಡಗಳು ಕಂಡುಬರುತ್ತವೆ.

ಕುಷ್ಟಗಿ ತಾಲ್ಲೂಕು ಅಲ್ಲಲ್ಲಿ ಚದುರಿದ ಅರಣ್ಯ ಪ್ರದೇಶವನ್ನು ಹೊಂದಿದೆ. ಬೆಟ್ಟ ಮತ್ತು ಹಳ್ಳಗಳಲ್ಲಿ ಸಾಮಾನ್ಯವಾಗಿ ಮೊಲ, ನರಿ, ಕರಡಿ, ಜಿಂಕೆ, ತೋಳ, ಕತ್ತೆಕಿರುಬ, ಚಿರತೆ, ಕಾಡುಹಂದಿ ವಿವಿಧ ರೀತಿಯ ಹಾವುಗಳು, ಕಪ್ಪು, ಕೆಂಪು ಮುಖದ ಮಂಗಗಳು ಮೊದಲಾದ ಪ್ರಾಣಿಗಳು, ಅಪಾರ ಪಕ್ಷಿಸಂಕುಲ ಕಂಡುಬರುತ್ತವೆ.

ಮಣ್ಣು, ಶಿಲೆ – ಖನಿಜ:

ಕುಷ್ಟಗಿ ತಾಲ್ಲೂಕು ಒಟ್ಟು ೧,೩೫,೭೭೯ ಹೆಕ್ಟೇರ್ ಭೂಪ್ರದೇಶ ಹೊಂದಿದೆ. ಇದರಲ್ಲಿ ೯೯,೯೭೩ ಹೆಕ್ಟೇರ್ ಭೂಮಿ ಮಾತ್ರ ವ್ಯವಸಾಯಕ್ಕೆ ಯೋಗ್ಯವಾಗಿದೆ. ೭೬೨೬ ಹೆಕ್ಟೇರ್ ಭೂಮಿ ಇತರ ಉದ್ದೇಶಗಳಿಗಾಗಿ, ೩೮೪೫ ಹೆಕ್ಟೇರ್ ಭೂಮಿ ಗೋಮಾಳ ಹಾಗೂ ೨೩೬೧ ಹೆಕ್ಟೇರ್ ಭೂಮಿ ಕೃಷಿ ಯೋಗ್ಯವಲ್ಲದ ಪ್ರದೇಶವೆಂದು ಪರಿಗಣಿತವಾಗಿದೆ. ತಾಲ್ಲೂಕಿನಲ್ಲಿ ಶೇಕಡಾ ೭೬ರಷ್ಟು ಕೆಂಪು ಮರಳು ಮಿಶ್ರಿತ ಮತ್ತು ಶೇಕಡಾ ೨೪ರಷ್ಟು ಕಪ್ಪು(ಎರೆ) ಮಣ್ಣಿನ ಭೂಮಿ ಇದೆ. ಕುಷ್ಟಗಿ, ಬಿಜಕಲ್, ಟಕ್ಕಳಕಿ, ಗುಮಗೇರಾ, ಟೆಂಗುಂಟಿ, ಗುಡದೂರ ಮೊದಲಾದ ಭಾಗಗಳಲ್ಲಿ ಮಾತ್ರ ಕಪ್ಪು ಮಣ್ಣಿನ ಭೂಮಿಯಿದೆ.

ತಾಲ್ಲೂಕಿನ ಬಹುಪಾಲು ಭೂಪ್ರದೇಶವು ಪ್ರೀಕೇಂಬ್ರಿಯನ್ ಹಾಗೂ ಕೇಂಬ್ರಿಯನ್ ಯುಗದಲ್ಲಿ ನಿರ್ಮಾಣಗೊಂಡ ಭೂಪದರಗಳಿಂದ ರೂಪಗೊಂಡಿದ್ದು, ಕುಷ್ಟಗಿ ಪ್ರದೇಶ ಈ ಪದರು ಶಿಲಾಪಟ್ಟಿಯಲ್ಲಿದೆ.[೨] ಕಬ್ಬಿಣದ ಅದಿರಾದ ಹೆಮಟೈಟಿನ ಹಲವು ಹಳೆಯ ಗಣಿಗಳು ತಾಲ್ಲೂಕಿನ ಜಾಜದಗುಡ್ಡ, ಕಲ್ಮಂಗಿ, ಮೈದಾರದೊಡ್ಡಿ ಮತ್ತು ನಂದಿಹಳ್ಳಿ ಎಂಬ ಗ್ರಾಮಗಳಲ್ಲಿವೆ.

[illegible]

ಹನುಮಸಾಗರದ ಬೆಟ್ಟದಲ್ಲಿ ದೊರೆಯುವ ಮರಳುಕಲ್ಲುಗಳು ಕಟ್ಟಡ ಮತ್ತು ಮೂರ್ತಿ ಶಿಲ್ಪಗಳಿಗೆ ಬಳಸುತ್ತಾರೆ. ತಾವರಗೆರೆಯ ಬಳಿ ೬೩೦ ಮೀಟರ್ ಉದ್ದ ಮತ್ತು ೩ ರಿಂದ ೩೦ ಮೀಟರ್ ಅಗಲವಾಗಿರುವ ಬೆಣಚು ಖನಿಜದ ನಿಕ್ಷೇಪ ಇದೆ. ಇದರ ಸಿಲಿಕಾನ್ ಡೈ ಆಕ್ಸೈಡ್ ಶೇಕಡಾ ೯೬.೩೦ ರಿಂದ ೯೯.೨೦ ಇದ್ದರೆ, ಕಬ್ಬಿಣದ ಅಂಶ ಶೇಕಡಾ ೦.೦೯ ರಿಂದ ೧.೫೨ರಷ್ಟು ಇದೆ.[೭] ಸೇಬಿನಕಟ್ಟಿ, ಪುರ್ತಗೇರಾ, ಬಿಸನಾಳ, ಕಡೂರ, ಬಂಡರಗಲ್ಲು ಹಾಗೂ ಹುಲಗೇರಿಗಳ ಸಮೀಪದಲ್ಲೆಲ್ಲ ಕೆಂಪುಮರಳು ಕಲ್ಲು(ರೆಡ್ ಸ್ಯಾಂಡ್‌ಸ್ಟೋನ್) ದೊರೆಯುತ್ತವೆ.

ಹವಾಮಾನ

ಕುಷ್ಟಗಿ ತಾಲ್ಲೂಕಿನ ಪ್ರದೇಶವು ಒಣ ಹವೆಯಿಂದ ಕೂಡಿದ ಪ್ರದೇಶವಾಗಿದ್ದು ಬೇಸಿಗೆಯಲ್ಲಿ ಅತಿ ಉಷ್ಣ ಹಾಗೂ ಚಳಿಗಾಲದಲ್ಲಿ ಅತಿ ಚಳಿಯಿಂದ ಕೂಡಿದ ಹವಾಮಾನ ಇಲ್ಲಿರುತ್ತದೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ೫೮೯ ಮೀಟರ್‌ಗಳ ಎತ್ತರದಲ್ಲಿದೆ. ಕೊಪ್ಪಳ ಜಿಲ್ಲೆಯ ಎತ್ತರ ಪ್ರದೇಶ ಇದಾಗಿರುವುದರಿಂದ ಉಳಿದ ತಾಲ್ಲೂಕುಗಳಿಗಿಂತ ಇಲ್ಲಿ ಹಿತಕರವಾದ ಹವಾಗುಣ ಕಂಡುಬರುತ್ತದೆ. ಇಲ್ಲಿ ಗರಿಷ್ಟ ೪೦.೯' ಸೆಲ್ಸಿಯಸ್ ಹಾಗೂ ಕನಿಷ್ಠ ೧೫.೩' ಸೆಲ್ಸಿಯಸ್ ಉಷ್ಣಮಾನವಿರುತ್ತದೆ. ಮಳೆಗಾಲದಲ್ಲಿ ಮಳೆ ಸಾಮನ್ಯವಾಗಿರುತ್ತದೆ. ಇಲ್ಲಿ ವಾಡಿಕೆಯ ಮಳೆ ಪ್ರಮಾಣ ೫೭೧.೪ ಮಿ.ಮಿ ಇದ್ದು, ವಾಸ್ತವಿಕ ಸರಾಸರಿ ಮಳೆ ೫೮೨.೧ ಮಿ.ಮೀ.ಗಳು ಇರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳುವ ತಾಲ್ಲೂಕು ಇದಾಗಿದೆ.

ನದಿ, ಹಳ್ಳ, ಕೆರೆಗಳು

ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಯಾವುದೇ ಪ್ರಮುಖ ನದಿ ಹರಿಯುತ್ತಿಲ್ಲ. ಆದರೆ ಇಲ್ಲಿ ಹಳ್ಳ-ಕೊಳ್ಳ ಮತ್ತು ಕೆರೆಗಳು ಹೆಚ್ಚಾಗಿವೆ. ತಾಲ್ಲೂಕಿನ ಹನುಮಸಾಗರ, ನಿಡಶೇಸಿ, ಹುಲಿಯಾಪುರ, ಚಿತ್ತವಾಡಗಿ. ನಂದಾಪುರ, ಮಾಲಗಿತ್ತಿ ಮತ್ತು ರಂಗಾಪುರ ಹಳ್ಳಿಗಳಲ್ಲಿ ಪ್ರಮುಖ ಹಳ್ಳಗಳು ಹುಟ್ಟಿ ಹರಿಯುತ್ತವೆ. ಹನುಮಸಾಗರ ಬಳಿ ಹುಟ್ಟುವ ಹಳ್ಳವು ಕಡೂರು ಯರಿಗೋನಾಳಗಳ ಮೂಲಕ ಉತ್ತರಾಭಿಮುಖವಾಗಿ ಹರಿದರೆ, ನಿಡಶೇಸಿ ಬಳಿ ಹುಟ್ಟುವ ಹಳ್ಳವು ಈಶಾನ್ಯಾಭಿಮುಖವಾಗಿ ಹರಿಯುತ್ತ ದೋಟಿಹಾಳ, ಬಳೂಟಗಿ ಗ್ರಾಮಗಳ ಮೂಲಕ ಹಾದು ಮುದೇನೂರ ಹತ್ತಿರ ಹರಿಯುವ ಹೀರೆಹಳ್ಳವನ್ನು ಸೇರುತ್ತದೆ. ಈ ಹೀರೆಹಳ್ಳವು ಮುಂದೆ ತುಂಗಭದ್ರಾ ನದಿಗೆ ಸೇರುತ್ತದೆ.

ಅದೇ ರೀತಿ ಹುಲಿಯಾಪುರದ ಬಳಿ ಹುಟ್ಟುವ ಹಳ್ಳ ಆಗ್ನೇಯಾಭಿಮುಖವಾಗಿ ಹರಿದು ಪುರದ ಮೂಲಕ ಉತ್ತರದ ಕಡೆಗೆ ಹರಿಯುತ್ತದೆ. ನಂದಾಪುರದ ಬಳಿ ಹುಟ್ಟುವ ಹಳ್ಳ ಈಶಾನ್ಯಾಭಿಮುಖವಾಗಿ ಹರಿದು ರಾಮಪುರ, ಕಿಲಾರಹಟ್ಟಿಗಳ ಮೂಲಕ ಹರಿಯುತ್ತದೆ. ಮಾಲಗಿತ್ತಿ, ರಂಗಾಪುರ ಬಳಿ ಹುಟ್ಟುವ ಹಳ್ಳವು ಭೀಮನಗಡದ ಹತ್ತಿರದಿಂದ ಹರಿಯುತ್ತದೆ. ಈ ಎಲ್ಲ ಹಳ್ಳಗಳು ಮಲಪ್ರಭಾನದಿಗೆ ಸೇರುತ್ತವೆ. ಈ ಹಳ್ಳಗಳೆಲ್ಲ ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದು ಬೇಸಿಗೆಯಲ್ಲಿ ಬರಿದಾಗಿರುತ್ತವೆ. ಇವುಗಳಲ್ಲಿ ಚಿತ್ತವಾಡಗಿ, ಹುಲಿಯಾಪುರ, ನಿಡಶೇಸಿ, ಸಂಗನಾಳ, ತಾವರಗೆರೆ ಮತ್ತು ಪುರದ ಕೆರೆಗಳು ಪ್ರಮುಖವಾದವುಗಳಾಗಿವೆ. ಇವುಗಳಲ್ಲಿ

ತಾವರಗೆರೆ ಕೆರೆ ಪುರಾತನ ಐತಿಹ್ಯವನ್ನು ಹೊಂದಿದೆ. ಈ ಐತಿಹ್ಯವನ್ನು ಐದನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನೀರಾವರಿ ಸೌಲಭ್ಯ ಮತ್ತು ಬೆಳೆಗಳು

ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಯಾವುದೇ ಬೃಹತ್ ನೀರಾವರಿ ಯೋಜನೆಗಳು ಅನುಷ್ಠಾನಗೊಂಡಂತಿಲ್ಲ. ಸುಧಾರಿತ ಕೃಷಿ ಪದ್ಧತಿ ಪ್ರಧಾನವಾಗಿದ್ದು, ಜೊತೆಗೆ ಮಳೆ, ಕೆರೆ, ಬಾವಿ ಮತ್ತು ಕೊಳವೆಬಾವಿಗಳೇ ನೀರಾವರಿಯ ಉಪಮೂಲಗಳಾಗಿವೆ. ಚಿತ್ತವಾಡಗಿ ಹಳ್ಳಕ್ಕೆ ಕೆರೆಯನ್ನು ಕಟ್ಟಲಾಗಿದೆ. ಈ ಕೆರೆಯಲ್ಲಿ ಸಂಗ್ರಹವಾಗುವ ನೀರಿನಿಂದ ೮೯೦.೬೮ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಹುಲಿಯಾಪುರ, ನಿಡಶೇಸಿ, ಸಂಗನಾಳ-ಪುರಗಳ ಹಳ್ಳಕ್ಕೆ ಕೆರೆಗಳನ್ನು ಕಟ್ಟಲಾಗಿದೆ. ಈ ಕೆರೆಗಳಲ್ಲಿ ಸಂಗ್ರಹವಾಗುವ ನೀರಿನಿಂದ ಕ್ರಮವಾಗಿ ೧೮೫೦, ೮೬೦, ೮೦೦, ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಇವುಗಳಲ್ಲದೆ ಅನೇಕ ಹಳ್ಳಿಗಳಲ್ಲಿ ಕಟ್ಟಲಾಗಿರುವ ಸಣ್ಣ-ಸಣ್ಣ ಕಟ್ಟೆಗಳಿಂದ ಸಮೀಪದ ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಒಟ್ಟಾರೆ ಹಳ್ಳ, ಕೆರೆ, ಬಾವಿ, ಕೊಳವೆ ಬಾವಿಗಳ ಮೂಲಕ ತಾಲ್ಲೂಕಿನ ೨೭೫.೧೯ ಹೆಕ್ಟೇರ್ ಭೂಮಿ ನೀರಾವರಿಗೆ ಒಳಪಟ್ಟಿದೆ.

ಈ ತಾಲ್ಲೂಕಿನ ಪ್ರದೇಶದ ರೈತರು ಜೋಳ, ಸಜ್ಜೆ, ನವಣಿ, ಭತ್ತ, ತೊಗರಿ, ಮೆಕ್ಕೆಜೋಳ ಮೊದಲಾದ ಆಹಾರ ಬೆಳೆಗಳನ್ನು ಬೆಳೆಯುತ್ತಾರೆ. ಶೇಂಗಾ, ಎಳ್ಳು, ಸೂರ್ಯಕಾಂತಿ, ಹತ್ತಿ, ಔಡಲ, ಅವರೆ, ಗುರೆಳ್ಳು ಮೊದಲಾದ ವಾಣಿಜ್ಯ ಬೆಳೆಗಳು ಬೆಳೆಯುತ್ತಾರೆ.

ಕುಷ್ಟಗಿ ತಾಲ್ಲೂಕಿನ ಪ್ರದೇಶ ಸಶಕ್ತವಾದ ದಖ್ಖನ ಪ್ರಸ್ಥಭೂಮಿಯಲ್ಲಿ ಸಮಾವೇಶ ವಾಗುತ್ತಿದ್ದರೂ, ಪೂರಕವಾಗಿ ಬೆಟ್ಟ-ಗುಡ್ಡ, ಅರಣ್ಯ, ಹಳ್ಳ-ಕೆರೆಗಳನ್ನು ಹೊಂದಿದ್ದರೂ, ಅವುಗಳು ಪರಿಮಿತವಾಗಿರುವದರಿಂದ ಇಲ್ಲಿಯ ಜೀವನ ಸಂಸ್ಕೃತಿ ಸಮೃದ್ಧವಾಗಿ ಬೆಳೆಯುವಲ್ಲಿ ತಕ್ಕ ಮಟ್ಟಿಗೆ ಕೊರತೆಯನ್ನುಂಟು ಮಾಡಿರುವುದನ್ನು ಗುರುತಿಸಬಹುದು. ಆದರೂ ಈ ಪ್ರದೇಶಕ್ಕೆ ಪೂರಕವಾದ ಜೀವನ ಸಂಸ್ಕೃತಿ ಪ್ರಾಗಿತಿಹಾಸ ಕಾಲದಿಂದಲೂ ಬೆಳೆದು ಬಂದಿರುವುದನ್ನು ಗಮನಿಸಬಹುದು. ಈ ಸಾಂಸ್ಕೃತಿಕ ಬೆಳವಣಿಗೆಗೆ ಇಲ್ಲಿಯ ಭೌಗೋಳಿಕ ಪರಿಸರದ ಪ್ರಭಾವ ದಟ್ಟವಾಗಿದೆ.

೨.೨ ಪ್ರಾಗಿತಿಹಾಸ

ಕನ್ನಡನಾಡಿನ ಮಾನವ ಜೀವನ ಸಂಸ್ಕೃತಿಯು ಪ್ರಾಗಿತಿಹಾಸ ಕಾಲದಿಂದಲೇ ಪ್ರಾರಂಭಗೊಳ್ಳುತ್ತದೆ. ಭಾರತದ ಪ್ರಾಗಿತಿಹಾಸ ಅಧ್ಯಯನದ ಆರಂಭ ಕರ್ನಾಟಕದ ಪ್ರದೇಶದಿಂದಲೇ ಆಗಿದೆ. ಭೂಗರ್ಭಶಾಸ್ತ್ರಜ್ಞರು ಕರ್ನಾಟಕವು ಭಾರತದ ಅತ್ಯಂತ ಪುರಾತನ ಭಾಗಗಳಲ್ಲಿ ಒಂದು ಎಂದು ತೀರ್ಮಾನ ಮಾಡಿದ್ದಾರೆ. ಪುರಾತತ್ವ ಸಂಶೋಧಕರ ಪ್ರಕಾರ ಇದು ಪ್ರಾಚೀನ ಕಾಲದ ಮಾನವನ ಆವಾಸಸ್ಥಾನಗಳಲ್ಲಿ ಒಂದಾಗಿತ್ತು. ಕರ್ನಾಟಕದ ಹಲವಾರು ಕಡೆಗಳಲ್ಲಿ ನಡೆದಿರುವ ಭೂಸಂಶೋಧನೆಗಳು ಪ್ರಾಗಿತಿಹಾಸ ಯುಗದ ಅಂದರೆ, ಶಿಲಾಯುಗಗಳ ಸಂಸ್ಕೃತಿಗಳನ್ನು ಬೆಳಕಿಗೆ ತಂದಿವೆ. ಮಾನವನು ಅನಾಗರಿಕತೆಯಿಂದ ನಾಗರಿಕತೆಗೆ, ಗುಹೆಯಿಂದ ಗೃಹನಿರ್ಮಾಣಕ್ಕೆ, ಬೇಟೆಗಾರಿಕೆಯಿಂದ ಕೃಷಿಗೆ, ಆಹಾರ ಸಂಗ್ರಹಣೆಯಿಂದ ಆಹಾರ ಉತ್ಪಾದನೆಗೆ,

ವಲಸೆಗಾರಿಕೆಯಿಂದ ಸ್ಥಿರ ಜೀವನಕ್ಕೆ, ಶಿಲಾಯುಧಗಳಿಂದ ಲೋಹಗಳ ಬಳಕೆಯ ಕಡೆಗೆ ಹೇಗೆ ದಾಪುಗಾಲು ಹಾಕಿದನೆಂಬ ವಿಷಯಗಳನ್ನು ಶಿಲಾಯುಗ ಸಂಸ್ಕೃತಿಗಳು ಪರಿಚಯಿಸುತ್ತವೆ. ಪ್ರಾಗಿತಿಹಾಸ ಕಾಲದ ಮಾನವನು ಗುಡ್ಡದ ತಗ್ಗು ಹಾಗೂ ನದಿದಂಡೆಗಳ ಸಮೀಪದಲ್ಲಿ ವಾಸಿಸಲು ಹೆಚ್ಚು ಇಷ್ಟ ಪಡುತ್ತಿದ್ದನೆಂಬ ಅಂಶ ಕರ್ನಾಟಕದಲ್ಲಿ ಪತ್ತೆಯಾಗಿರುವ ನಿವೇಶನ ಮತ್ತು ಅವಶೇಷಗಳಿಂದ ತಿಳಿದುಬರುತ್ತದೆ. ಇದು ಸಹಜವಾದುದಾಗಿದೆ. ಏಕೆಂದರೆ ರಕ್ಷಣೆಗೆ ಗುಹೆಗಳು, ಆಹಾರಕ್ಕೆ ನೀರು, ಮಾನವನ ಮುಖ್ಯ ಜೀವನಾಧಾರ ಅಂಶಗಳಾಗಿವೆ.

ಕುಷ್ಟಗಿ ಪ್ರದೇಶವು ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ, ಸಶಕ್ತವಾಗಿ ದಖನ್ ಪ್ರಸ್ಥ ಭೂಮಿಯಲ್ಲಿದೆ. ಈ ಪ್ರದೇಶ ಪ್ರಾಚೀನ ಮಾನವನ ಚಟುವಟಿಕೆಗಳಿಗೆ ಪೂರಕವಾದ್ದರಿಂದ ಇದು ಆ ಕಾಲದ ಮಾನವನ ವಾಸ್ತವ್ಯದ ಪ್ರಮುಖ ಸ್ಥಳವಾಗಿತ್ತೆಂದು ಊಹಿಸಬಹುದು. ಕುಷ್ಟಗಿಯ ದಕ್ಷಿಣದಲ್ಲಿ ತುಂಗಭದ್ರಾ ಮತ್ತು ಉತ್ತರದಲ್ಲಿ ಕೃಷ್ಣಾ ನದಿಗಳು ಉತ್ತರಾಭಿಮುಖವಾಗಿ ಹರಿಯುತ್ತವೆ. ಈ ಪ್ರದೇಶದಲ್ಲಿ ಕ್ರಿ.ಶ.೧೮೩೬ರಿಂದ ಒಂದಲ್ಲಾ ಒಂದು ಹಂತದ ಪ್ರಾಗಿತಿಹಾಸ ಮಾನವನ ವಸ್ತು, ಅವಶೇಷಗಳು ಆಕಸ್ಮಿಕವಾಗಿ ಶೋಧವಾಗಿವೆ. ಬ್ರಿಟಿಶ್ ಅಧಿಕಾರಿ ಕ್ಯಾಪ್ಟನ್ ಕ್ಯೂಬೋಲ್ಡ್ ಅವರು ಕ್ರಿ.ಶ.೧೮೩೬ರಲ್ಲಿ ಕುಷ್ಟಗಿ ಸಮೀಪದ ಕುಡತಿನಿ ಮತ್ತು ಕಪ್ಪಗಲ್‌ನ ಬೂದಿದಿಬ್ಬ ನೆಲೆಗಳನ್ನು ಪ್ರಪ್ರಥಮ ಶೋಧಿಸಿದರು.[೩] ಡಾ. ಪ್ರೀಮ್‌ರೂಸ್ ಅವರು ಕ್ರಿ.ಶ.೧೮೪೨ ರಲ್ಲಿ ರಾಯಚೂರಿನ ತಮ್ಮ ಕೈ ತೋಟವನ್ನು ಸ್ವಚ್ಛಗೊಳಿಸುವ ಸಮಯದಲ್ಲಿ ಶಿಲೋಪಕರಣಗಳಾದ ಬಾಣದ ಮೊನೆ ಹಾಗೂ ನೀಳಚಕ್ಕೆ ಮೊದಲಾದವು ದೊರೆತವು.[೪] ಕುಷ್ಟಗಿಯ ಪೂರ್ವದಲ್ಲಿರುವ ಲಿಂಗಸೂಗೂರಿನಲ್ಲಿ ಕ್ಯಾಪ್ಟನ್ ಮೇಡೋಸ್ ಟೇಲರ್ ಅವರು ನಂತರ ಕ್ರಿ.ಶ.೧೮೭೨ರಲ್ಲಿ ವಿಲಿಯಂ ಪ್ರೇಸರ್ ಅವರು ಬಳ್ಳಾರಿಯ ಉತ್ತರ ಬೆಟ್ಟದ ಸಂಗನಕಲ್ಲು ಸ್ಥಳದಲ್ಲಿ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಶೋಧಿಸಿರುವರು.

ಭಾರತದ ಪ್ರಾಗಿತಿಹಾಸದ ಪಿತಾಮಹರೆಂಬ ಅಭಿದಾನಕ್ಕೆ ಪಾತ್ರರಾಗಿರುವ ಭೂವಿಜ್ಞಾನಿಯಾದ ರಾಬರ್ಟ ಬ್ರೂಸ್‌ಫೂಟ್ ಅವರು ಕ್ರಿ.ಶ.೧೮೮೮ರಲ್ಲಿ ಮಲಪ್ರಭಾ ನದಿಯ ಪ್ರದೇಶದಲ್ಲಿ ಕುಷ್ಟಗಿಯ ಸಮೀಪದಲ್ಲಿರುವ ಬಾದಾಮಿ ತಾಲ್ಲೂಕಿನ ಖ್ಯಾಡ್, ಡಾಣಕ ಹಾಗೂ ಶಿರೂರುಗಳಲ್ಲಿ ಆದಿ ಹಳೆಶಿಲಾಯುಗ ಕಾಲದ ಶಿಲಾಯುಧಗಳನ್ನು ಪತ್ತೆ ಹಚ್ಚಿದರು. ಕ್ರಿ.ಶ.೧೯೬೫ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನ ಸ್ನಾತಕೋತ್ತರ ಮತ್ತು ಸಂಶೋಧನಾ ಸಂಸ್ಥೆಯ ಪುರಾತತ್ವಶಾಸ್ತ್ರ ವಿಭಾಗದ ಝುಡ್.ಡಿ.ಅನ್ಸಾರಿ ಅವರು ತುಂಗಭದ್ರಾ ನದಿಯ ದಂಡೆಯ ಮೇಲಿರುವ ನಿಟ್ಟೂರು (ಸಿರಗುಪ್ಪಾ.ತಾ) ಗ್ರಾಮದಲ್ಲಿ ಆದಿ ಹಳೆಶಿಲಾಯುಗದ ಕಲ್ಲಿನ ಉಪಕರಣಗಳನ್ನು ಶೋಧಿಸಿದರು.[೫] ಕ್ರಿ.ಶ.೧೯೫೭ರಲ್ಲಿ ಬಿ.ಕೆ.ಥಾಪರ್ ಅವರು ಕುಷ್ಟಗಿ ಸಮೀಪದ ಮಸ್ಕಿಯಲ್ಲಿ, ಕ್ರಿ.ಶ.೧೯೬೦ರಲ್ಲಿ ಎಫ್.ಆರ್.ಅಲ್ಚಿನ್ ಅವರು ಪಿಕ್ಲಿಹಾಳ(ರಾಯಚೂರು.ಜಿ)ದಲ್ಲಿ ನವ ಶಿಲಾಯುಗದ ಅವಶೇಷಗಳನ್ನು ಶೋಧಿಸಿದರು. ಇತ್ತೀಚೆಗೆ ರಾಜ್ಯ ಪ್ರಾಚ್ಯವಸ್ತು ಹಾಗೂ ವಸ್ತುಸಂಗ್ರಹಾಲಯ ಇಲಾಖೆಯವರು ವಟಕಲ್(ಮಾನ್ವಿ.ತಾ)ನಲ್ಲಿ ಉತ್ಖನನ ನಡೆಸಿ ನೂತನ ಶಿಲಾಯುಗದ ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ.

ಡಾ. ಅ.ಸುಂದರ ಅವರು ಕೊಪ್ಪಳ, ರಾಯಚೂರು, ಬಾಗಲಕೋಟೆ ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಿನ ಸಂಶೋಧನೆ ಕೈಗೊಂಡು ಬೃಹತ್ ಶಿಲಾಸಂಸ್ಕೃತಿಯ ವಿಭಿನ್ನ ಮಾದರಿಯ ಕಲ್ಗೋರಿಗಳನ್ನು ಪತ್ತೆ ಹಚ್ಚಿದರು. ಕುಷ್ಟಗಿ ತಾಲ್ಲೂಕಿನ ಸಮೀಪದಲ್ಲಿರುವ ಗಂಗಾವತಿ-ಕೊಪ್ಪಳ ಮಧ್ಯದ ಹಿರೇಬೆಣಕಲ್ ಪರ್ವತಶ್ರೇಣಿ ಪ್ರದೇಶದಲ್ಲಿ ಹಲವಾರು ನೂತನ ಶಿಲಾಯುಗದ, ಬೃಹತ್ ಶಿಲಾಯುಗದ ಮತ್ತು ಇತಿಹಾಸ ಆರಂಭ ಕಾಲದ ನೆಲೆಗಳು ಹಾಗೂ ಹಲವಾರು ಕಲ್ಗೋರಿಗಳನ್ನು ಗುರುತಿಸಿದರು. ಹೀಗೆ ಅನೇಕ ಪುರಾತತ್ವಜ್ಞರು ಹೊಸ ಹೊಸ ನೆಲೆಗಳನ್ನು ಶೋಧಿಸುತ್ತಲೇ ಇದ್ದಾರೆ. ಇಂಥ ಶೋಧಿಸಿದ ನೆಲೆಗಳಲ್ಲಿ ಕೇವಲ ನಾಲ್ಕನ್ನು ವೈಜ್ಞಾನಿಕ ಕ್ರಮದಿಂದ ಉತ್ಖನನ ಮಾಡಲಾಗಿದೆ. ಅವುಗಳು ಮಸ್ಕಿ(ಬಿ.ಕೆ.ಥಾಪರ್-ಕ್ರಿ.ಶ.೧೯೫೪) ಪಿಕ್ಲಿಹಾಳ (ಎಫ್.ಆರ್.ಅಲ್ಚಿನ್-ಕ್ರಿ.ಶ.೧೯೬೦) ತೆಕ್ಕಲಕೋಟೆ (ಎಂ.ಎಸ್.ನಾಗರಾಜರಾವ್-ಕ್ರಿ.ಶ.೧೯೬೩) ಮತ್ತು ಸಂಗನಕಲ್ಲು(ಝುಡ್.ಡಿ.ಅನ್ಸಾರಿ ಮತ್ತು ಎಂ.ಎಸ್.ನಾಗರಾಜರಾವ್-ಕ್ರಿ.ಶ.೧೯೬೯) ಈ ಎಲ್ಲ ವಿದ್ವಾಂಸರು ಶೋಧಿಸಿದ ಉತ್ಖನನಗಳ ವರದಿಗಳು ಪ್ರಕಟವಾಗಿದ್ದು, ಅವುಗಳಿಂದ ನೂತನ ಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭ ಕಾಲದ ಜನಜೀವನ ಚಿತ್ರವನ್ನು ಸ್ಥೂಲವಾಗಿ ಅರಿಯಬಹುದಾಗಿದೆ.

ಅದೇ ರೀತಿ ಶಿಲಾಯುಗ, ತಾಮ್ರಯುಗ, ಕಬ್ಬಿಣಯುಗ ಮತ್ತು ಬೃಹತ್‌ಶಿಲಾಯುಗ ಕಾಲಕ್ಕೆ ಸೇರುವ ಗವಿವರ್ಣ ಹಾಗೂ ಬಯಲುಬಂಡೆ ಚಿತ್ರಗಳು ಕುಷ್ಟಗಿ ಪರಿಸರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪತ್ತೆಯಾಗಿವೆ. ವಿಶೇಷವಾಗಿ ಡಾ. ಅ.ಸುಂದರ ಮತ್ತು ಡಾ. ಶರಣಬಸಪ್ಪ ಕೋಲ್ಕಾರ ಅವರು ಕೊಪ್ಪಳ-ತಾವರಗೇರಿ-ಗಂಗಾವತಿ ಪ್ರದೇಶಗಳಲ್ಲಿ ಸುಮಾರು ೧೦೦ಕ್ಕೂ ಹೆಚ್ಚು ಚಿತ್ರಿತ ಗವಿಗಳನ್ನು ಶೋಧಿಸಿದ್ದಾರೆ. ಈ ಚಿತ್ರಗಳಿಂದ ಕುಷ್ಟಗಿ ಪರಿಸರದಲ್ಲಿ ವಾಸವಿದ್ದ ಪ್ರಾಚೀನ ಮಾನವನ ಜೀವನ ಚಟುವಟಿಕೆಗಳಾದ ಪಶುಪಾಲನೆ, ಮನರಂಜನೆ(ಸಮೂಹನೃತ್ಯ), ಮಾಂತ್ರಿಕ ಆರಾಧನೆ, ಮೈಥುನ, ಕಲಾಭಿಜ್ಞತೆ ಮುಂತಾದವುಗಳನ್ನು ಅರಿಯಲು ಸಹಾಯಕವಾಗಿದೆ. ವಿಶೇಷವೆಂದರೆ ಕೊಪ್ಪಳ ಪರಿಸರವನ್ನು ಗವಿಚಿತ್ರಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಬಿಂಬೇಟ್ಕಾ ಎಂದು ವಿದ್ವಾಂಸರು ಗುರುತಿಸಿದ್ದಾರೆ.[೬]

ಹಳೆಶಿಲಾಯುಗ ಸಂಸ್ಕೃತಿಗಳು

ಕರ್ನಾಟಕದಲ್ಲಿ ಹಳೆಶಿಲಾಯುಗ ಸಂಸ್ಕೃತಿಯನ್ನು ಆದಿಹಳೆ ಶಿಲಾಯುಗ ಸಂಸ್ಕೃತಿ, ಮಧ್ಯ ಹಳೆಶಿಲಾಯುಗ ಸಂಸ್ಕೃತಿ ಮತ್ತು ಅಂತ್ಯ ಹಳೆಶಿಲಾಯುದ ಸಂಸ್ಕೃತಿ ಎಂದು ವಿಭಜಿಸಲಾಗಿದೆ. ಈ ಕ್ರಮವಾಗಿ ಕುಷ್ಟಗಿ ಪರಿಸರದ ಹಳೆಶಿಲಾಯುಗ ಸಂಸ್ಕೃತಿಯ ಅಧ್ಯಯನ ಮಾಡಲಾಗಿದೆ.

ಆದಿ ಹಳೆಶಿಲಾಯುಗ ಸಂಸ್ಕೃತಿ

ಭಾರತದಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕ್ರಿ.ಶ.೧೮೬೩ರಲ್ಲಿ ಕಂಡುಬಂದಿವೆ. ಕರ್ನಾಟಕದಲ್ಲಿ ಈ ಸಂಸ್ಕೃತಿಯ ನೆಲೆಗಳು ಮತ್ತು ಅವಶೇಷಗಳು ಅಲ್ಲಲ್ಲಿ ದೊರೆತಿವೆ. ಇಂಥ ನೆಲೆಗಳ ಮತ್ತು ಅವಶೇಷಗಳ ಅಧ್ಯಯನವನ್ನು ಮೊಟ್ಟಮೊದಲು ಆರ್.ವಿ. ಜೋಶಿಯವರು ಕ್ರಿ.ಶ.೧೯೫೫ರಲ್ಲಿ ಮಲಪ್ರಭಾ ನದಿಕೊಳ್ಳದಲ್ಲಿ ಕೈಗೊಂಡರು. ಆರ್.ಎಸ್.ಪಪ್ಪು

ಅವರು ಕ್ರಿ.ಶ.೧೯೭೪ರಲ್ಲಿ ಕೃಷ್ಣಾ ಮೇಲ್ದಂಡೆ ಪ್ರದೇಶದಲ್ಲಿ ಇಂತಹ ಪ್ರಯತ್ನ ಮಾಡಿ ಮಾಹಿತಿಗಳನ್ನು ಸಂಗ್ರಹಿಸಿದರು. ಡಾ. ಕೆ.ಪದ್ದಯ್ಯ ಅವರು ಕ್ರಿ.ಶ.೧೯೬೮ರಲ್ಲಿ ಸೋಲಾಪೂರ ದೋ-ಆಬ್ ಪ್ರದೇಶದ ಅಧ್ಯಯನ ನಡೆಸಿ ಮಾಹಿತಿಗಳನ್ನು ಸಂಗ್ರಹಿಸಿದರು. ಉತ್ತರ ಕರ್ನಾಟಕದಲ್ಲಿ ಕೃಷ್ಣಾ ಮೇಲ್ದಂಡೆ ಮತ್ತು ಘಟಪ್ರಭಾ ಬಯಲಲ್ಲಿ ಈ ಸಂಸ್ಕೃತಿಯ ಅನೇಕ ನೆಲೆಗಳನ್ನು ಗುರುತಿಸಲಾಗಿದೆ. ಕುಷ್ಟಗಿ ಪರಿಸರದಲ್ಲಿ ಈ ಸಂಸ್ಕೃತಿ ಬೆಳೆದು ಬಂದಿತ್ತು ಎನ್ನುವದಕ್ಕೆ ಈ ಪ್ರದೇಶದ ಹನುಮಸಾಗರ, ಅನಗವಾಡಿ, ಕಲಾದಗಿ, ನಿಟ್ಟೂರು ಮತ್ತು ಹುಣಸಗಿ ನೆಲೆಗಳು ಸಾಕ್ಷಿಯಾಗಿವೆ.

ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಗ್ರಾಮವು ಈ ಸಂಸ್ಕೃತಿಯ ನೆಲೆಯಾಗಿದೆ. ಇಲ್ಲಿ ಕೈಗೊಡಲಿ ಹಾಗೂ ಕೊಚ್ಚುಗತ್ತಿಗಳು ದೊರೆತಿವೆ.[೭] ಬಾಗಲಕೋಟೆ ಜಿಲ್ಲೆಯಲ್ಲಿರುವ ಅನಗವಾಡಿಯೂ ಈ ಸಂಸ್ಕೃತಿಯ ನೆಲೆ. ಇಲ್ಲಿ ಕೈಗೊಡಲಿ, ಮಚ್ಚುಗತ್ತಿ, ಸೀಳುಗತ್ತಿ, ಹೆರೆಗತ್ತಿ, ಚಕ್ರಾಕಾರದ ಉಪಕರಣಗಳು ದೊರೆತಿವೆ. ಈ ಉಪಕರಣಗಳು ಫ್ರಾನ್ಸ್ ದೇಶದ ಆದಿ ಹಳೆ ಶಿಲಾಯುಗದ ಮಾದರಿ ನೆಲೆಯಾದ ಸೈಂಟ್ ಅಶ್ಯೂಲ್ ಎಂಬಲ್ಲಿಯ ಉಪಕರಣಗಳಿಗೆ ಹೋಲುತ್ತವೆ. ಸುರಪುರ ತಾಲ್ಲೂಕಿನ ಗುಳಬಾಳ ಮತ್ತು ಹುಣಸಗಿ ಗ್ರಾಮಗಳು ಈ ಸಂಸ್ಕೃತಿಯ ನೆಲೆಗಳಾಗಿವೆ. ಸುರಪುರದಲ್ಲಿ ದೊರೆತ ಉಪಕರಣಗಳು ಸುಧಾರಿಸಿದ ಅಶ್ಯೂಲ್ ಲಕ್ಷಣಗಳನ್ನು ಹೊಂದಿವೆ. ಈ ಪ್ರದೇಶದಲ್ಲಿ ಹೇರಳವಾಗಿ ಸುಣ್ಣದ ಹರಳುಗಳು ದೊರೆಯುವುದರಿಂದ ಶಿಲೋಪಕರಣಗಳನ್ನು ತಯಾರಿಸಲು ಇದೇ ಕಲ್ಲನ್ನು ಬಳಸಿರುವದು ಗಮನಾರ್ಹ. ಇದೇ ರೀತಿಯಲ್ಲಿ ಹುಣಸಗಿಯಲ್ಲಿ ಕಲ್ಲಿನ ಉಪಕರಣಗಳು ಕಂಡುಬಂದಿವೆ. ದಪ್ಪ ಚಕ್ಕೆಗಳಿಂದ ಮಾಡಿದ ಕೈಗೊಡಲಿ, ಸೀಳುಗತ್ತಿ, ಚಾಕು, ಮಚ್ಚುಗತ್ತಿ, ನೆಲವನ್ನು ಕೆತ್ತುವ ಹೆರೆಯುವಂಥವು ಇವೆ. ಮಚ್ಚುಗತ್ತಿ, ಭೂಮಿಯನ್ನು ಕೆದರುವ, ಹೆರೆಯುವ ಚಕ್ಕೆಗಳಿರುವುದರಿಂದ ಈ ಕೈಗಾರಿಕೆಯು ಅಶೂಲ್ ಸಂಸ್ಕೃತಿಯ ಪ್ರಾಚೀನ ಹಂತಕ್ಕೆ ಸಮೀಪವಾಗಿದೆ. ಶಿರಗುಪ್ಪ ತಾಲ್ಲೂಕಿನ ನಿಟ್ಟೂರು ಈ ಸಂಸ್ಕೃತಿಯ ನೆಲೆ. ಇಲ್ಲಿ ಆಯುಧೋಪಕರಣಗಳು ಮತ್ತು ಆಕಳು-ಎತ್ತುಗಳ ಅಸ್ಥಿಗಳ ಪಡಿಯಚ್ಚು ದೊರೆತಿವೆ. ಇಲ್ಲಿ ಕೈಗೊಡಲಿ, ಸೀಳುಗತ್ತಿಗಳಂತ ಆಯುಧಗಳು ದೊರೆತಿದ್ದು, ಈ ಪ್ರಕಾರದ ಸಂಸ್ಕೃತಿಯ ನೆಲೆಗಳು ಕರ್ನಾಟಕ ದಲ್ಲಿ ಪತ್ತೆಯಾಗಿರುವುದು ಇದೇ ಪ್ರಥಮ ಎಂದು ಹೇಳಬಹುದು.

ಇಂಥ ಇನ್ನೂ ಕೆಲ ನೆಲೆಗಳು ಕುಷ್ಟಗಿ ಪ್ರದೇಶದ ಪಶ್ಚಿಮಕ್ಕೆ ಇರುವ ಮಲಪ್ರಭಾ ನದಿಯ ಬಯಲು ಪ್ರದೇಶದಲ್ಲಿ ಸುಮಾರು ೧೯ ನೆಲೆಗಳು(ಆರ್.ವಿ.ಜೋಶಿ-ಕ್ರಿ.ಶ.೧೯೫೫-೫೧) ಹಾಗೂ ಇವುಗಳ ಉತ್ತರಕ್ಕೆ ಬಾಗಲಕೋಟೆ, ಅಥಣಿ ಪ್ರದೇಶದ ಕೃಷ್ಣಾನದಿ ಬಯಲು ಪ್ರದೇಶದಲ್ಲಿ ಸುಮಾರು ೧೨ ನೆಲೆಗಳು (ಆರ್.ಎಸ್.ಪಪ್ಪು-ಕ್ರಿ.ಶ.೧೯೭೪) ಶೋಧವಾಗಿವೆ. ಈ ಸಂಸ್ಕೃತಿ ಇಂದಿಗೆ ಒಂದು ಲಕ್ಷದಿಂದ ನಾಲ್ಕು ಲಕ್ಷ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತ್ತೆಂದು ವಿದ್ವಾಂಸರು ನಿರ್ಧರಿಸಿರುವರು.

ಮಧ್ಯ ಹಳೆಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ಈ ಸಂಸ್ಕೃತಿಯ ಅನೇಕ ನೆಲೆಗಳು ಈವರೆಗೆ ಶೋಧಿತವಾಗಿವೆ. ಆರ್.ಡಿ. ಬ್ಯಾನರ್ಜಿಯವರು ಈ ಸಂಸ್ಕೃತಿಯ ಉಪಕರಣಗಳು ಇರುವ ಬಗ್ಗೆ ಕ್ರಿ.ಶ.೧೯೫೭ರಲ್ಲಿ ಗುರುತಿಸಿದರು. ಘಟಪ್ರಭಾ, ಮಲಪ್ರಭಾ, ಕೃಷ್ಣಾ ಮತ್ತು ಡೋಣಿ ನದಿಗಳ ಕೆಲವು ಭಾಗ, ಸುರಪುರ ನದಿ ಸಂಗಮಗಳಲ್ಲಿ ಈ ಸಂಸ್ಕೃತಿಯ ಶಿಲೋಪಕರಣಗಳು ಗುರುತಿಸಲಾಗಿದೆ. ಕೈಗೊಡಲಿ, ಮಚ್ಚುಗತ್ತಿ, ಹೆರೆಗತ್ತಿ, ಕಡಿಗತ್ತಿ, ನೀಳಚಕ್ಕೆ ಮಾನೆ, ಕೊರೆಯುಳಿ ಮೊದಲಾದ ಉಪಕರಣಗಳು ಕಂಡುಬಂದಿವೆ.

ಕುಷ್ಟಗಿ ಪ್ರದೇಶಕ್ಕೆ ಸಂಬಂಧಿಸಿದಂತೆ ಕೃಷ್ಣಾ ನದಿಯ ಬಲದಂಡೆಯಲ್ಲಿರುವ ಕಮ್ಮಲದಿನ್ನಿ ಗ್ರಾಮದ ಪ್ರದೇಶವು ಈ ಸಂಸ್ಕೃತಿಯ ನೆಲೆ. ಇದು ಉಪಕರಣಗಳ ಉದ್ಯಮ ಕೇಂದ್ರವೆಂದು ತಿಳಿಯುತ್ತದೆ.[೮] ಡಾ. ಅ.ಸುಂದರ ಅವರು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಡೋಣಿ ನದಿಯ ಪ್ರದೇಶದಲ್ಲಿರುವ ಸಾಲ್ವಡಗಿ, ಮಟಕನದೇವನಹಳ್ಳಿ(ಬುಡಪನಹಳ್ಳಿ) ಮತ್ತು ಕೊವಳ್ಳಿ ಎಂಬ ಗ್ರಾಮಗಳಲ್ಲಿ ಹೇರಳವಾಗಿ ಈ ಸಂಸ್ಕೃತಿಯ ಅವಶೇಷಗಳನ್ನು ಗುರುತಿಸಿದ್ದಾರೆ.

ಸಂಗನಕಲ್ಲಿನಲ್ಲಿ ನಡೆದ ಕ್ರಿ.ಶ.೧೯೬೪ರ ಉತ್ಖನನದಲ್ಲಿ(ಎಂ.ಎಸ್.ನಾಗರಾಜರಾವ್-ಕ್ರಿ.ಶ. ೧೯೬೯)ರಲ್ಲಿ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಈ ಸಂಸ್ಕೃತಿಯ ಉಪಕರಣಗಳು ಚಕ್ಕೆಕಲ್ಲಿನವುಗಳಾಗಿವೆ. ಉಪಕರಣಗಳ ತಯಾರಿಕೆ, ಮೂಲ ತಾಂತ್ರಿಕತೆ ಜೊತೆಗೆ ತಿವೆಲ್ವಾ, ಕ್ಲಾಕ್ಟನ್, ವಸ್ಯೂರ್ ತಂತ್ರಗಳ ಬಳಕೆ ಪ್ರಾರಂಭವಾಯಿತು. ಈ ಹಂತದಲ್ಲಿ ತಾಂತ್ರಿಕತೆಯ ಬೆಳವಣಿಗೆಯನ್ನು ಗುರುತಿಸಬಹುದು. ಹೆಚ್ಚಿನ ನೆಲೆಗಳು ಉಪಕರಣಗಳ ಉತ್ಪಾದನಾ ನೆಲೆಗಳೆಂದು ತಿಳಿಯುತ್ತದೆ. ಈ ಸಂಸ್ಕೃತಿ ಇಂದಿಗೆ ಸುಮಾರು ಹತ್ತು ಸಾವಿರದಿಂದ ನಲವತ್ತು ಸಾವಿರ ವರ್ಷಗಳಷ್ಟು ಪುರಾತನವಾದುದೆಂದು ಊಹಿಸಲಾಗಿದೆ.

ಅಂತ್ಯ ಹಳೆಶಿಲಾಯುಗ ಸಂಸ್ಕೃತಿ

ಹಳೆಯ ಶಿಲಾಯುಗ ಸಂಸ್ಕೃತಿಯ ಕೊನೆಯ ಹಂತವೇ ಅಂತ್ಯ ಹಳೆಶಿಲಾಯುಗ. ಈ ಸಂಸ್ಕೃತಿಯ ಬಗ್ಗೆ ತೀರ ಕಡಿಮೆ ತಿಳಿದುಬಂದಿದೆ. ಕೃಷ್ಣಾ, ತಂಗಾ ಮತ್ತು ಡೋಣಿ ನದಿ ಕೊಳ್ಳಗಳಲ್ಲಿ ಈ ಸಂಸ್ಕೃತಿಯ ನೆಲೆಗಳು ಕಂಡುಬಂದಿವೆ. ಕುಷ್ಟಗಿ ಪ್ರದೇಶದಲ್ಲಿ ಮೊಟ್ಟಮೊದಲಿಗೆ ಕ್ರಿ.ಶ.೧೯೫೯ರಲ್ಲಿ ಸಾಲವಾಡಗಿ(ಮುದ್ದೇಬಿಹಾಳ-ತಾ)ಯಲ್ಲಿ ಈ ಸಂಸ್ಕೃತಿ ಉಪಕರಣ ಉತ್ಪಾದನಾ ನೆಲೆಯನ್ನು ಡಾ. ಅ.ಸುಂದರ ಅವರು ಗುರುತಿಸಿದರು. ಎಂ.ಶೇಷಾದ್ರಿಯವರು ಸಹ ಈ ನೆಲೆಯಲ್ಲಿ ಮತ್ತು ಸಮೀಪದ ನೆಲೆಗಳಲ್ಲಿ ಅಂತ್ಯ ಹಳೆ ಶಿಲಾಯುಗದ ನೀಳ ಚಕ್ಕೆಗಳ ಕೈಗಾರಿಕೆಯ ಅವಶೇಷ ಮತ್ತು ನೀಳಚಕ್ಕೆಗಳನ್ನು ಶೋಧಿಸಿದರು.

ಡಾ. ಕೆ.ಪದ್ದಯ್ಯನವರು ಕ್ರಿ.ಶ.೧೯೮೨ರಲ್ಲಿ ಸಾಲವಾಡಗಿ ಹತ್ತಿರ ಮೆರಲಬಾವಿಯಲ್ಲಿ ಈ ಸಂಸ್ಕೃತಿಯ ಒಂದು ನೆಲೆಯನ್ನು ಶೋಧಿಸಿದರು. ಕ್ರಿ.ಶ.೧೯೬೩ರಲ್ಲಿ ಅವರು ಮೆರಲಬಾವಿ, ಗುಳ್‌ಬಾಳ್, ಬೆನಹಟ್ಟಿ ಮತ್ತು ಹುಣಸಗಿಯಲ್ಲಿ ಹೆಚ್ಚಿನ ಅನ್ವೇಷಣೆ ಮಾಡಿದಾಗ ಮಧ್ಯ ಹಳೆ ಶಿಲಾಯುಗದ ಅನಂತರ ಮತ್ತು ಸೂಕ್ಷ್ಮ ಶಿಲಾಯುಗದ ಹಿಂದಿನ ಹಂತದಲ್ಲಿ ಈ ಸಂಸ್ಕೃತಿ ಇದ್ದದ್ದು ಗೊತ್ತಾಯಿತು. ಈ ಸಂಸ್ಕೃತಿಯು ಹಿಮಯುಗದ ಹಾಗೂ ಪ್ರಚಲಿತ ಯುಗದ ಪ್ರಾರಂಭ

ಕಾಲದ್ದೆಂದು ಊಹಿಸಲಾಗಿದೆ. ಈ ಸಂಸ್ಕೃತಿ ಇಂದಿಗೆ ಸುಮಾರು ಹತ್ತು ಸಾವಿರ ವರ್ಷಗಳಿಂದ ಇಪ್ಪತ್ತೈದು ಸಾವಿರ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತೆಂದು ತಿಳಿಯುತ್ತದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ಈ ಸಂಸ್ಕೃತಿಯ ನೆಲೆಗಳನ್ನು ಕ್ರಿ.ಶ.೧೯೪೯ರಲ್ಲಿ ಗುರುತಿಸಲಾಗಿದೆ. ಈ ಯುಗದ ಉಪಕರಣಗಳು ಗಮನಾರ್ಹ ಪ್ರಮಾಣದಲ್ಲಿ ದೊರಕಿವೆ. ಈ ಉಪಕರಣಗಳು ಬೆಣಚುಕಲ್ಲು ಮತ್ತು ಉತ್ತಮ ಕಲ್ಲುಗಳಾದ ಜಾಸ್ಪರ್ ಮತ್ತು ಚರ್ಟಿಕಲ್ಲುಗಳಲ್ಲಿ ಮಾಡಿದ್ದಾಗಿದೆ. ಸಾಮಾನ್ಯವಾಗಿ ಇವು ಆಕೃತಿಯಲ್ಲಿ ತೀರಾ ಸಣ್ಣದಾಗಿರುತ್ತವೆ. ಸಾಮಾನ್ಯವಾಗಿ ಒಂದು ಸೆಂ.ಮೀ. ಹಾಗೂ ಐದು ಮೀ.ಮೀ ಉದ್ದಗಲಕ್ಕಿಂತ ಹೆಚ್ಚೇನು ಇಲ್ಲ. ಇವುಗಳ ಇಂಥ ಸಣ್ಣ ಪ್ರಮಾಣದ ಆಕಾರದ ಮೇಲೆಯೇ ಈ ಸಂಸ್ಕೃತಿಯನ್ನು ಸೂಕ್ಷ್ಮಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ.

ಕುಷ್ಟಗಿ ಪ್ರದೇಶದ ಹತ್ತಿರದ ಸಂಗನಕಲ್ಲಿನಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಯು ಕಂಡುಬಂದಿದ್ದು, ಇಲ್ಲಿಯ ನೂತನ ಶಿಲಾಯುಗಕ್ಕಿಂತ ಹಿಂದಿನ ಕಾಲದ ಸಾಂಸ್ಕೃತಿಕ ಪದರುಗಳಲ್ಲಿ ಈ ಸಂಸ್ಕೃತಿಯ ಉಪಕರಣಗಳು ದೊರೆತಿವೆ. ಆದ್ದರಿಂದ ಈ ಸಂಸ್ಕೃತಿಯು 'ಈಚಿನ ಯುಗ'ದ ಪ್ರಾರಂಭ ಕಾಲದ ನಂತರದ್ದು ಎಂದು ಗೊತ್ತುಪಡಿಸಲಾಗಿದೆ. ಇಲ್ಲಿಯ ಉಪಕರಣಗಳು ಗಾರೆಗಲ್ಲಿ(ಕ್ಯಾಲ್ಸಿಡೋಣಿ)ನವು. ಸಮಾನಾಂತರ ಅಂಚುಳ್ಳ ನೀಳಚಕ್ಕೆಗಳು, ಮೊನೆಗಳು, ಅರ್ಧಚಂದ್ರಾಕೃತಿಯಂತಹ ತ್ರಿಕೋನಾಕಾರದ ಮತ್ತು ದ್ವಿಬಾಹು ಸಮಾನಾಂತರ ಚತುರ್ಭುಜಾಕೃತಿಯಂಥಹ ಮೊದಲಾದ ಉಪಕರಣ ಆಕೃತಿಗಳು ಇವೆ. ಇವೆಲ್ಲವು ಸಾಮಾನ್ಯವಾಗಿ ನೀಳಚಕ್ಕೆಗಳನ್ನು ತುಂಡುಮಾಡಿ ಅವುಗಳ ಅಂಚುಗಳನ್ನು ಅವಶ್ಯವಾದ ರೀತಿಯಲ್ಲಿ ತಂದು ಉಪಕರಣಗಳನ್ನಾಗಿ ಮಾಡಲಾಗಿದೆ. ಗಂಗಾವತಿ ತಾಲ್ಲೂಕಿನ ಮಲ್ಲಾಪುರ ಗ್ರಾಮವು ಈ ಸಂಸ್ಕೃತಿಯ ನೆಲೆಯಾಗಿದ್ದು, ಗವಿಯ ಒಳಭಾಗದಲ್ಲಿ ಹೆರೆಚೆಕ್ಕೆ ಮತ್ತು ಅರ್ಧಚಂದ್ರಾಕೃತಿ ಉಪಕರಣಗಳು ಇಲ್ಲಿ ದೊರೆತಿವೆ. ಈ ಸಂಸ್ಕೃತಿಯ ನೆಲೆಗಳ ಅಧ್ಯಯನ ಆಗಿನ ಜನರ ಆಹಾರ ಪದ್ದತಿ, ವಸತಿಕ್ರಮ, ಶವಸಂಸ್ಕಾರ ಪದ್ಧತಿ ಮುಂತಾದ ಪ್ರಮುಖ ಅಂಶಗಳ ಬಗೆಗೆ ಮಾಹಿತಿ ಒದಗಿಸುತ್ತವೆ. ಆ ಕಾಲದ ಬಂಡೆಗಳ ಮೇಲಿನ ಭಿತ್ತಿ ವರ್ಣಚಿತ್ರಗಳು, ಆ ಯುಗದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆ ಯುಗದ ಜನರ ನಂಬಿಕೆಗಳ ಬಗೆಗೆ ತಿಳಿಸಿರುವುದರ ಜೊತೆಗೆ ಅವರ ಕಲೆಗಾರಿಕೆಯ ವಿಶಿಷ್ಟತೆಯನ್ನು ತಿಳಿಯಬಹುದಾಗಿದೆ.

ಈ ಸಂಸ್ಕೃತಿಯ ಹಂತವು ಮಾನವನು ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತು, ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆಯ ಜೊತೆಗೆ ಆಹಾರ ಉತ್ಪಾದನೆ ಆರಂಭಿಸಿದಂತೆ ತೋರುತ್ತದೆ. ಒಟ್ಟಿನಲ್ಲಿ ಈ ಯುಗದಲ್ಲಿ ಮಾನವನ ಜೀವನ ಕ್ರಮವು ಅಲೆಮಾರಿ ಹಂತದಿಂದ ಮುಕ್ತ ಅಲೆಮಾರಿಗಳಾಗಿ ಸಹಬಾಳ್ವೆಗೆ ಎಡೆಮಾಡಿಕೊಟ್ಟಿತು. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಜನರು ಪರಸ್ಪರ ತಿಳುವಳಿಕೆಯಿಂದ ವ್ಯವಸ್ಥಿತ ಸಮಾಜವನ್ನು ರೂಪಿಸತೊಡಗಿದರು. ಈ ಸಂಸ್ಕೃತಿಯು ಇಂದಿಗೆ ಸುಮಾರು ಎರಡು ಸಾವಿರದಾ ಐದನೂರು ವರ್ಷದಿಂದ ಹತ್ತು ಸಾವಿರ ವರ್ಷಗಳಷ್ಟು ಪೂರ್ವದಲ್ಲಿದ್ದಿತೆಂದು ತಿಳಿಯುತ್ತದೆ.

ನೂತನ ಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ನೂತನ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಶೋಧನೆಗಳು ಕ್ರಿ.ಶ.೧೮೭೨ರಲ್ಲಿ ಆರಂಭವಾಯಿತು. ಈ ಸಂಸ್ಕೃತಿಯ ನೆಲೆಗಳು ಪ್ರಮುಖ ನದಿಗಳಾದ ಭೀಮಾ, ಕೃಷ್ಣಾ, ತುಂಗಭದ್ರಾ, ಕಾವೇರಿ ಇವುಗಳ ಉಪನದಿಗಳ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ಈ ಶಿಲಾಯುಗದ ಮುಖ್ಯ ಲಕ್ಷಣವೆಂದರೆ, ಬಹು ಸುಧಾರಿತ ಕಲ್ಲಿನ ಆಯುಧ, ನಯವಾದ ಕಣಗಳಿಂದ ಕೂಡಿದ 'ಟ್ರಾಫ್' ಎನ್ನುವ ಕಲ್ಲಿನಿಂದಲೇ ಈ ಆಯುಧಗಳು ತಯಾರಾದವು. ಈ ಕಲ್ಲು ಕರ್ನಾಟಕದಲ್ಲಿ ಹೇರಳವಾಗಿ ದೊರೆಯುತ್ತದೆ. ಈ ಕಾರಣವಾಗಿ ಮಾನವನು ಕರ್ನಾಟಕವನ್ನೇ ತನ್ನ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡನು.

ಕುಷ್ಟಗಿ ಪ್ರದೇಶದಲ್ಲಿ ಈ ಸಂಸ್ಕೃತಿಯ ನೆಲೆಗಳು ಕೊಪ್ಪಳ, ಬಂಡಿಹರ್ಲಾಪುರ, ಆರ್ಹಾಳ, ಅರಳಹಳ್ಳಿ, ಆನೆಗೊಂದಿ, ಕಕ್ಕರಗೋಳ, ಮಲ್ಲಾಪುರ, ಮುಸಲಾಪುರ, ರಾಮದುರ್ಗ, ವೆಂಕಟಾಪುರ, ಹರಳಾಪುರ, ಅಕ್ಕರಗೋಳ, ನಿಡಗುಂದಿ, ಯಾವಗಲ್, ಮೆಣಸಿಗಿ ಮತ್ತು ಸವಡಿ ಮುಂತಾದ ಹಳ್ಳಿಗಳಲ್ಲಿ ಕಂಡುಬಂದಿವೆ.[೧೧] ಈ ನೆಲೆಗಳಲ್ಲಿ ಅನೇಕ ಶಿಲೋಪಕರಣಗಳು, ಮಣ್ಣಿನ ಪಾತ್ರೆಗಳು ದೊರೆತಿವೆ.

ಈ ಸಂಸ್ಕೃತಿಯ ಜನರು ವಾಸ್ತವ್ಯದ ನೆಲೆಗಳನ್ನು ನಿರ್ಮಿಸಿಕೊಂಡಿದ್ದು ಪ್ರಾಣಿಸಾಕಣೆ, ಆಹಾರದ ಬೆಳೆಗಳನ್ನು ಬೆಳೆಸಿ ತಮ್ಮ ಜೀವನೋಪಾಯಕ್ಕಾಗಿ ಸಾಧಾರಣ ಕ್ರಮದಲ್ಲಿ ವ್ಯವಸಾಯ ಮಾಡಲಾರಂಭಿಸಿದರು. ಹಾಗೆಯೇ ಅಲಂಕಾರ ಸಾಧನಗಳನ್ನು ಬಳಸಿದ್ದು, ಕಲೆಯ ಪ್ರದರ್ಶನ ಧಾರ್ಮಿಕ ನಂಬಿಕೆ, ಶವಸಂಸ್ಕಾರ, ಮೊದಲಾದ ವಿಧಿವಿಧಾನ ಪದ್ದತಿಗಳನ್ನು ರೂಢಿಸಿಕೊಂಡು ಸುಸಂಸ್ಕೃತ ಜೀವನ ಕ್ರಮವನ್ನು ರೂಢಿಸಿಕೊಂಡರು. ಈ ಸಂಸ್ಕೃತಿಯ ಕಾಲಮಾನವನ್ನು ಮೂರು ಹಂತಗಳಲ್ಲಿ ವಿಭಜಿಸಲಾಗಿದೆ. ಮೊದಲನೆಯ ಹಂತ: ಕ್ರಿ.ಪೂ.ಸು.೨೦೦೦–೧೭೦೦. ಎರಡನೆಯ ಹಂತ: ಕ್ರಿ.ಪೂ.ಸು.೧೭೦೦–೧೪೦೦. ಮೂರನೆಯ ಹಂತ: ಕ್ರಿ.ಪೂ.ಸು.೧೪೦೦–೧೦೦೦ರವರೆಗೆ ಇದ್ದಿತೆಂದು ಅರಿಯಬಹುದಾಗಿದೆ.

ಶಿಲಾ ತಾಮ್ರಯುಗ ಸಂಸ್ಕೃತಿ

ನೂತನ ಶಿಲಾಯುಗ ಸಂಸ್ಕೃತಿಯ ನಂತರ ವಿಕಾಸದ ಹಂತವಿದು. ಭೀಮಾ–ಕೃಷ್ಣಾ ನದಿಗಳ ಪ್ರದೇಶಗಳು ಫಲವತ್ತಾದ ಕಪ್ಪು ಭೂಮಿಯಲ್ಲಿ ಈ ಸಂಸ್ಕೃತಿಯ ಹೆಚ್ಚು ನೆಲೆಗಳು ಕಂಡು ಬಂದಿವೆ. ತಾಮ್ರ, ಅದಿರಿನ ಜ್ಞಾನ ಲೋಹವಾಗಿ ಲೋಹದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ದತಿ ಮೊದಲಾದ ಮುಖ್ಯ ಲಕ್ಷಣಗಳನ್ನು ಗುರುತಿಸಿಕೊಂಡ ಸಂಸ್ಕೃತಿ ಇದಾಗಿದೆ.

ಕುಷ್ಟಗಿ ಪ್ರದೇಶದಲ್ಲಿ ಈ ಸಂಸ್ಕೃತಿಯ ನೆಲೆಗಳು ತಾವರಗೆರೆ, ಗವಿಮಠ, ಬೇವಿನಹಾಳ, ಶಿವಪುರ, ಆರ್ಹಾಳ, ಅರಳಹಳ್ಳಿ, ಅಂಜನಹಳ್ಳಿ, ಆನೆಗೊಂದಿ, ಇಂದರಗಿ, ಕನಕಗಿರಿ, ಕೇಸರಪಟ್ಟಿ, ಕುಂಟೋಜಿ, ಗೋನಾಳ, ಚಿಕ್ಕರಾಂಪೂರ, ತಿಪ್ಪನಹಾಳು, ತಿಮ್ಮಲಾಪುರ, ನಂದಿಹಳ್ಳಿ, ನಾರಾಯಣಪುರ, ಮನ್ನಾಪುರ, ಬಂಡಿಹರ್ಲಾಪುರ, ಮಲ್ಲಾಪುರ, ಹಿರೇಜಂತಕಲ್,

ಹೊಸಕೇರಾ, ಹಿರೇಬೆಣಕಲ್, ಹೆಬ್ಬಾಳ, ಹೇರೂರು, ಕೇರಿಹಳ್ಳಿ, ಕೌಜಗೇರಿ, ಬಸರಕೋಡ, ಬೆಳವಣಿಕಿ, ಹೀರೆಹಾಳ, ಹೊಳೆಆಲೂರು, ಆಸಂಗಿ, ಕುಟುಕನಕೆರಿ, ತೆಗ್ಗಿ, ಬಾದಾಮಿ, ಶಿಡ್ಲಫಡಿ, ಹೊಸಮಹಾಕೂಟ ಮುಂತಾದವುಗಳಲ್ಲಿ ಕಂಡುಬಂದಿವೆ.[೧೧]

ಈ ಸಂಸ್ಕೃತಿಯು ಹೆಚ್ಚು ಸುಧಾರಿತವಾದದ್ದು. ಶಿಲೋಪಕರಣಗಳ ಬಳಕೆ ಮತ್ತು ಮಡಕೆ ಮಾದರಿ ವಿಶೇಷವಾಗಿ ಕಂಡುಬರುತ್ತದೆ. ಈ ಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರೆಂದು ದೊರೆತ ಮಣ್ಣಿನಗೊಂಬೆ ಹಾಗೂ ಮಡಕೆ ಪಾತ್ರೆಗಳ ಮೇಲಿನ ವರ್ಣ ರೇಖಾಚಿತ್ರಗಳಿಂದ ತಿಳಿದುಬರುತ್ತದೆ. ಈ ಸಂಸ್ಕೃತಿಯ ಕಾಲಮಾನವನ್ನು ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಕಾಲಮಾನವೆಂದು ನಿರ್ಧರಿಸಲಾಗಿದೆ. ಕೃಷ್ಣಾ ಮೇಲ್ದಂಡೆಯ ಈ ಸಂಸ್ಕೃತಿಯು ಸುಮಾರು ಕ್ರಿ.ಪೂ.೨೩೦೦–೧೦೦೦, ಭೀಮಾ–ತುಂಗಭದ್ರಾ ಮೇಲ್ದಂಡೆಯ ಈ ಸಂಸ್ಕೃತಿಯು ಸುಮಾರು ಕ್ರಿ.ಪೂ.೧೩೦೦–೮೦೦ ಎಂದು ತಿಳಿಯಲಾಗಿದೆ.

ಬೃಹತ್ ಶಿಲಾಯುಗ ಸಂಸ್ಕೃತಿ

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಿವಿಧ ಮಾದರಿಯ ಬೃಹತ್ ಶಿಲಾ ಸಮಾಧಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗದ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಯುಗದಲ್ಲಿ ಕಬ್ಬಿಣದ ಬಳಕೆಯು ಆರಂಭವಾಯಿತು. ಕರ್ನಾಟಕದಲ್ಲಿ ಈ ಸಂಸ್ಕೃತಿಯ ಸಾವಿರಾರು ನೆಲೆಗಳು ಬೆಳಕಿಗೆ ಬಂದಿವೆ. ವಿಲ್ಲರ್‌ರವರು ಕ್ರಿ.ಶ.೧೯೪೭ರಲ್ಲಿ ನಡೆಸಿದ ಬ್ರಹ್ಮಗಿರಿಯ ಉತ್ಖನನದಿಂದ ಆರಂಭವಾಗಿ ಇಲ್ಲಿಯವರೆಗೆ ಹತ್ತಾರು ಉತ್ಖನನಗಳು ನಡೆದಿವೆ.[೧೨] ಈ ಸಂಸ್ಕೃತಿಯ ನೆಲೆಗಳು ಗಷ್ಟುಕಲ್ಲು ಮತ್ತು ಗ್ರಾನೈಟ್ ಕಲ್ಲಿನ ಬೆಟ್ಟಗಳ ಪ್ರದೇಶಗಳಾದ ಬೆಳಗಾವಿ, ವಿಜಾಪುರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಕೋಲಾರ, ಬೆಂಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿವೆ.[೧೩]

ಕುಷ್ಟಗಿ ಪ್ರದೇಶದಲ್ಲಿ ಈ ಸಂಸ್ಕೃತಿಯ ನೆಲೆಗಳು ತಾವರಗೆರೆ, ವೆಂಕಟಾಪುರ, ಎಮ್ಮಿಗುಡ್ಡ, ಕೊಪ್ಪಳ, ಬಿಳೇಬಾವಿ, ಬೆಣಕಲುಗುಡ್ಡ, ಶಿವಪುರ, ಆಗೋಲಿ, ಅರಳಿಹಳ್ಳಿ, ಆನೆಗೊಂದಿ, ಗಡ್ಡಿ, ಗುಡೂರು, ಚಿಕ್ಕಬೆಣಕಲ್, ಚಿಕ್ಕರಾಂಪೂರ, ಜಂಗಮರಕಲ್ಲುಗುಡಿ, ತಿಮ್ಮಾಪುರ, ಬೆನಕಲ್, ಬಸರಿಹಾಳ, ಬಂಡರಹಾಳ, ಮರಕುಂದಿ, ಮಲ್ಲಾಪೂರ, ಯಮ್ಮಿಗುಡ್ಡ, ರಾಜನ್‌ಕೋಲಾರ್, ವೆಂಕಟಾಪುರ, ಸಾಣಾಪುರ, ಹೀರೆಬೆಣಕಲ್, ತಿಪ್ಪನಹಾಳ, ಅಕ್ಕರಗಾಳ, ಆಸಂಗಿ, ಗುಳೇದಗುಡ್ಡ, ಪಟ್ಟದಕಲ್ಲು, ಉಣಚಗೇರಿ, ಉದಗಟ್ಟಿ, ಕಾಲಕಾಲೇಶ್ವರ, ಗಜೇಂದ್ರಗಡ, ಗೌಡಗೇರಿ, ರಾಜೂರು, ಹಿರೇಹಾಳಗಳಲ್ಲಿ ಕಂಡುಬಂದಿವೆ.[೧೪]

ಈ ಸಂಸ್ಕೃತಿಯಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ತಿಗರಿಯ ಮೇಲೆ ಮಾಡಿದ ಮಡಿಕೆಗಳು ಹೇರಳವಾಗಿ ಕಂಡುಬಂದಿವೆ. ಶಂಖದ ಬಳೆ, ಮಣ್ಣಿನ ಮಣಿ, ಚಿಕ್ಕ ಚಿಕ್ಕ ಆಟದ ಬಿಲ್ಲೆಗಳು ಮತ್ತು ಗೊಲಿಗಳು ದೊರೆತಿವೆ. ಈ ಕಾಲದಲ್ಲಿ ದೊಡ್ಡ–ದೊಡ್ಡ ಕಲ್ಲಿನ ಬಂಡೆ ಮತ್ತು ಚಪ್ಪಡಿಗಳಿಂದ ಮಾಡಿದ ಇವರ ಗೋರಿಗಳಲ್ಲಿಯೂ ಸಾಕಷ್ಟು ವೈವಿಧ್ಯ ಇದೆ. ಶಿಲಾವರ್ತುಲಗಳಲ್ಲಿ ಸಮಾಧಿಯ ಸುತ್ತಲೂ ಗುಂಡಿಯಹತ್ತಿ ಬಂಡೆಗಳನ್ನು ನೆಟ್ಟಿರುತ್ತಾರೆ. ಮಧ್ಯದಲ್ಲಿ ಸಮಾಧಿಯಿರುತ್ತದೆ. ಒರಟಾದ

ಕಲ್ಲು ಬಂಡೆಗಳಿಂದ ನಿರ್ಮಿತವಾದ ಶಿಲಾತೊಟ್ಟಿಗಳು, ಕಲ್ಲು ಚಪ್ಪಡಿಯ ಶವತೊಟ್ಟಿಗಳು, ಸಮಾಧಿಗುಂಡಿಗಳು, ನೆಡುಗಲ್ಲುಗಳು, ಸಾಲುಗಲ್ಲುಗಳು, ಶವಜಾಡಿಗಳೂ ಮುಂತಾದವು ವಿವಿಧ ರೀತಿಯ ಸಮಾಧಿಗಳು. ಯಾವ ರೀತಿಯ ಸಮಾಧಿಯೇ ಆಗಿರಲಿ, ಅದರಲ್ಲಿ ಕಾಣಬರುವ ಮುಖ್ಯ ಅಂಶವೆಂದರೆ, ಮನುಷ್ಯನ ಮೂಳೆಗಳನ್ನು ತೊಟ್ಟಿಯಲ್ಲಿಟ್ಟು, ಅವುಗಳ ಜೊತೆಗೆ ಕಬ್ಬಿಣದ ಆಯುಧಗಳು, ಮಡಿಕೆ-ಕುಡಿಕೆಗಳು, ಮಣಿಗಳು ಮುಂತಾದವುಗಳನ್ನು ಹೂತಿಟ್ಟು ಸಮಾಧಿಯನ್ನು ರಚಿಸುತ್ತಿದ್ದರು. ಈ ಸಂಸ್ಕೃತಿಯ ಕಾಲಮಾನವು ಉತ್ತರ ಕರ್ನಾಟಕದಲ್ಲಿ ಕ್ರಿ.ಪೂ.ಸು. ೧೨೦೦-೧೦೦೦ರ ಸುಮಾರಿಗೆ ಆರಂಭವಾಗಿ ಕ್ರಿ.ಪೂ.ಸು.೩-೨ನೆಯ ಶತಮಾನದವರೆಗೆ ಪ್ರವರ್ಧಮಾನದಲ್ಲಿತ್ತೆಂದು ತಿಳಿಯುತ್ತದೆ.

ಪ್ರಾಗಿತಿಹಾಸ ಕಾಲದ ಚಿತ್ರಕಲೆ

ಕೊಪ್ಪಳ ಪ್ರದೇಶವು ಬೆಟ್ಟಸಾಲುಗಳಿಂದ ಕೂಡಿದೆ. ಈ ಬೆಟ್ಟಗಳಲ್ಲಿ ಅಸಾಮಾನ್ಯ ಕಂದು ಇಲ್ಲವೇ ಬೂದುವರ್ಣದ ಕಣಶಿಲೆಯ ಬಂಡೆಗಳಿವೆ. ಇಲ್ಲಿಯ ಕಲ್ಲಾಸರೆ ಗವಿಗಳಲ್ಲಿ ವಿರಳವಾಗಿ ವರ್ಣಚಿತ್ರಗಳಿವೆ. ಈ ಪ್ರದೇಶದಲ್ಲಿ ಶಿಲಾ ತಾಮ್ರಯುಗ, ಕಬ್ಬಿಣಯುಗದ ಬೃಹತ್ ಶಿಲಾಯುಗದ, ಇತಿಹಾಸ ಆರಂಭಕಾಲದ ಸಾಂಸ್ಕೃತಿಕ ಅವಶೇಷಗಳುಳ್ಳ ನೆಲೆಗಳು ಕೊಪ್ಪಳ, ಹಿರೇಬೆಣಕಲ್, ಆಗೋಲಿ, ಆನೆಗೊಂದಿ ಮೊದಲಾದಡೆ ಬೆಳಕಿಗೆ ಬಂದಿವೆ. ಇಲ್ಲಿಯ ಬೆಟ್ಟಗುಡ್ಡಗಳಲ್ಲಿಯ ಪ್ರಾಗಿತಿಹಾಸ ಕಾಲದ ಕಲಾ ಸಂಪತ್ತನ್ನು ಆಂಗ್ಲ ಭೂಗರ್ಭತಜ್ಞರಾದ ಲಿಯೊನಾರ್ಡಮನ್‌ರವರು ಕ್ರಿ.ಶ.೧೯೩೫ರಲ್ಲಿ ಪ್ರಥಮವಾಗಿ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್‌ನಲ್ಲಿ ಚಿತ್ರಗಳಿದ್ದ ಮೂರು ಗವಿಗಳನ್ನು ಶೋಧಿಸಿದರು. ಡಾ. ಅ.ಸುಂದರ ಅವರು ಕ್ರಿ.ಶ.೧೯೬೮ರಲ್ಲಿ ಇನ್ನೂ ಒಂಬತ್ತು ಕಡೆ ಚಿತ್ರಗಳನ್ನು ಶೋಧಿಸಿದರು. ಇದೇ ಪ್ರದೇಶದಲ್ಲಿ ಬಿಳೆಬಾವಿ, ನಾರಾಯಣಪೇಟೆ, ಬಂಡಿಹರ್ಲಾಪುರ, ಮಲ್ಲಾಪುರ, ಆನೆಗೊಂದಿ, ತಿರುಮಲಾಪುರಗಳಲ್ಲಿ ವರ್ಣಚಿತ್ರಗಳನ್ನು, ತಾವರಗೆರೆಯ ಬಂಡೆಯಲ್ಲಿ ಕೊರೆದ ಚಿತ್ರಗಳನ್ನು ಶೋಧಿಸಿದರು. ಡಾ. ಆರ್.ಎಂ.ಷಡಕ್ಷರಯ್ಯ ಹಾಗೂ ಸ್ವಿಟ್ಜರ್ ಲ್ಯಾಂಡಿನ ಬ್ರಿಗೆಟ್ಟಿಯವರು ಮಲ್ಲಾಪುರದಲ್ಲಿ, ಶಂಭುಲಿಂಗಪ್ಪ ಮತ್ತು ಬಿ.ಸಿ.ಪಾಟೀಲರವರು ಕೊಪ್ಪಳ ಬೆಟ್ಟಗಳಲ್ಲಿ ಕೆಲವು ಚಿತ್ರಗಳನ್ನು ಶೋಧಿಸಿದರು. ಡಾ. ಶರಣಬಸಪ್ಪ ಕೋಲ್ಕಾರ ಅವರು ಕೊಪ್ಪಳದ ಪ್ರದೇಶದ ಎಲ್ಲ ಬೆಟ್ಟಗುಡ್ಡಗಳಲ್ಲಿ ಹೊಸದಾಗಿ ೬೮ ಚಿತ್ರಿತ ಗವಿಗಳು ಮತ್ತು ನಾಲ್ಕು ಕಡೆ ಬಂಡೆಗಳಲ್ಲಿ ಕೊರೆದ ಚಿತ್ರಗಳನ್ನು ಶೋಧಿಸಿದರು. ವಿಲಾಸ.ಎಂ.ಜೋಗಿನ ಅವರು ಡಾ. ಅ.ಸುಂದರ ಅವರ ಮಾರ್ಗದರ್ಶನದಲ್ಲಿ ಕುಷ್ಟಗಿಯ ಪೂರ್ವಭಾಗದಲ್ಲಿಯ ಪ್ರಾಗಿತಿಹಾಸ ನೆಲೆಗಳನ್ನು ಮತ್ತು ಕಲ್ಲಾಸರೆಯ ವರ್ಣಚಿತ್ರಗಳನ್ನು ಶೋಧಿಸಿದರು.

ಗವಿವರ್ಣ ಚಿತ್ರಗಳು

ಆದಿಮಾನವನು ತಾನು ವಾಸಿಸುತ್ತಿದ್ದ ಗವಿಗಳ ಇಲ್ಲವೇ ತಾತ್ಕಾಲಿಕವಾಗಿ ಆಶ್ರಯ ಪಡೆದಿದ್ದ ಕಲ್ಲಾಸರೆಗಳ ಭಾವಣಿ, ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿರುತ್ತಾನೆ. ಸಾಮಾನ್ಯವಾಗಿ ಮನುಷ್ಯರ ಪ್ರಾಣಿಗಳ ಮತ್ತು ವಿಚಿತ್ರವಾದ ರೇಖಾಚಿತ್ರಗಳು ಇಲ್ಲಿರುತ್ತವೆ. ಈ ಚಿತ್ರಗಳು ಒಂದೇ ಪ್ರಮಾಣದಲ್ಲಿರುವುದಿಲ್ಲ. ಕೇವಲ ಒಂದೆರಡು ಅಥವಾ ಕೆಲವು ಚಿತ್ರಗಳಿರಬಹುದು. ಅಥವಾ ಹಲವಾರು ಚಿತ್ರಗಳು ಇರಬಹುದು. ಎಲ್ಲಾ ಚಿತ್ರಗಳು ಒಂದು ಕಾಲದವಲ್ಲ. ಆದ್ದರಿಂದ ವಿವಿಧ

ಪ್ರಮಾಣದ ಆಕೃತಿಗಳ ನಿರೂಪಣೆಯಲ್ಲೂ ಸ್ವಲ್ಪ ಭಿನ್ನತೆ ಇರುತ್ತದೆ. ಈ ಚಿತ್ರಗಳು ಹೆಚ್ಚಾಗಿ ಕೆಮ್ಮಣ್ಣಿನ ಬಣ್ಣದಲ್ಲಿರುತ್ತವೆ. ಬಣ್ಣದ ಛಾಯೆಯು ಕಾಲ ವೈಪರಿತ್ಯದಿಂದ ಹಾಗೂ ಇತರ ಕಾರಣಗಳಿಂದ ಒಂದೇ ಸಮನಾಗಿರುವುದಿಲ್ಲ. ಅಪರೂಪವಾಗಿ ಕಾಡಿಗೆ ಕಪ್ಪು ಹಾಗೂ ಮಿಶ್ರ ಹಳದಿ, ಮಸುಕು ಬಿಳಿಯ ದ್ವಿವರ್ಣಗಳಲ್ಲಿಯೂ ಚಿತ್ರಗಳಿರುತ್ತವೆ. ಈಗಾಗಲೇ ಈ ಪರಿಸರದ ಗವಿವರ್ಣಚಿತ್ರಗಳು ಶೋಧನೆ ಆಗಿವೆ. ಅವು ಈ ಕೆಳಗಿನಂತೆ ನೋಡಬಹುದಾಗಿದೆ. ಕೊಪ್ಪಳ ತಾಲ್ಲೂಕಿನ ಕೊಪ್ಪಳದಲ್ಲಿ-೯, ಬಿಳೆಬಾವಿಯಲ್ಲಿ-೨ ಇಂದರಗಿಯಲ್ಲಿ-೧, ನಾರಾಯಣಪೇಟೆಯಲ್ಲಿ-೪, ಬಂಡಿಹರ್ಲಾಪುರದಲ್ಲಿ-೧, ಹೊಸಬಂಡಿಹರ್ಲಾಪುರದಲ್ಲಿ-೫, ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್‌ನಲ್ಲಿ-೧೭, ಚಿಕ್ಕಬೆಣಕಲ್‌ನಲ್ಲಿ-೩, ಎಮ್ಮಿಗುಡ್ಡದಲ್ಲಿ-೨, ಗಡ್ಡಿಯಲ್ಲಿ-೩, ಆಗೋಲಿಯಲ್ಲಿ-೭, ಹಂಪಸದುರ್ಗದಲ್ಲಿ-೨, ಬೊಮ್ಮಸಾಗರತಾಂಡಾದಲ್ಲಿ-೧, ರಾಮದುರ್ಗದಲ್ಲಿ-೧, ಆನೆಗೊಂದಿಯಲ್ಲಿ-೯, ಅಂಜನಹಳ್ಳಿಯಲ್ಲಿ-೨, ಮಲ್ಲಾಪುರದಲ್ಲಿ-೧೪, ತಂಬಾದಲ್ಲಿ-೫, ತಿರುಮಲಾಪುರದಲ್ಲಿ-೧, ಚಿಕ್ಕರಾಂಪೂರದಲ್ಲಿ-೬, ರಾಂಪೂರದಲ್ಲಿ-೩, ಸಂಗಾಪುರದಲ್ಲಿ-೧೦, ಗೂಗಿಬಂಡಿಯಲ್ಲಿ-೧ ಹಾಗೂ ಕುಷ್ಟಗಿ ತಾಲ್ಲೂಕಿನ ತಾವರಗೆರೆಯಲ್ಲಿ-೭ ಗವಿಗಳಲ್ಲಿ ವರ್ಣ ಚಿತ್ರಗಳು ಕಂಡುಬಂದಿವೆ.[೧೫] ತಾವರಗೆರೆಯಿಂದ ೩ಕಿ.ಮೀ. ದೂರದ ಗಾಣಗಿತ್ತಿ, ಸಂತೆಬಜಾರ, ರೋಣಿ, ಆನೆ ಎಂಬ ಗುಡ್ಡಗಳಲ್ಲಿ ವರ್ಣಚಿತ್ರಗಳಿವೆ. ಗಾಣಗಿತ್ತಿ ಗುಡ್ಡದಲ್ಲಿ ೧೨ ಜಿಂಕೆಗಳ ಸಮೂಹ, ಗಿಡದಿಂದ ಮಂಗ ಒಂದು ಜಿಗಿಯುತ್ತಿರುವ ಚಿತ್ರ, ಇಬ್ಬರು ಮನುಷ್ಯರು ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಕುಣಿಯುತ್ತಿರುವ ಚಿತ್ರ ಮತ್ತು ಪ್ರಾಣಿಗಳ ಚಿತ್ರಗಳನ್ನು ಚಿತ್ರಿಸಲಾಗಿದೆ.

ಬಯಲುಬಂಡೆ ಕೊರೆದ ಮತ್ತು ಕುಟ್ಟಿದ ಚಿತ್ರಗಳು

ಬಯಲುಬಂಡೆ ಚಿತ್ರಗಳು ದೊಡ್ಡ ದೊಡ್ಡ ಬಂಡೆಗಳ ರಾಶಿಯಂತಿರುವ ಬೆಟ್ಟಗಳ ಮಧ್ಯದ ಮತ್ತು ಮೇಲಿನ ಹಂತಗಳಲ್ಲಿ ಬಯಲಿನಲ್ಲಿರುವ ಬಂಡೆಗಳಲ್ಲಿ ಇಲ್ಲವೇ ನೀರಿನ ತಾಣದಲ್ಲಿಯ ಬಂಡೆಗಳಲ್ಲಿ ಇಂತಹ ಚಿತ್ರಗಳು ಕಂಡುಬರುತ್ತವೆ. ಸಮಾನ ಮೇಲ್ಮೈಯ ಮೇಲೆ ಬೇಕಾದ ಚಿತ್ರವನ್ನು ಮೂಡಿಸುವುದಕ್ಕೆ ಅನುಕೂಲವಾದ ಸಪೂರವಾದ ಮೊಂಡ ತುದಿಯುಳ್ಳ ಉದ್ದನೆ ಕಲ್ಲು ತುಂಡಿನಿಂದ ಏಕ ಪ್ರಕಾರವಾಗಿ ಕಟ್ಟಿ ಕುಟ್ಟಿ ಬಿಡಿಸುವುದು. ಇಲ್ಲವೇ ಉಳಿಯಂತಹ ಮೊನಚಾದ ಉಪಕರಣದಿಂದ ಗೆರೆಗಳನ್ನು ಮೂಡಿಸಿಚಿತ್ರಗಳನ್ನು ಮೂಡಿಸುತ್ತಿದ್ದರು. ಕೊರೆದ ತಂತ್ರಗಳಲ್ಲಿ ಚಿತ್ರಗಳು ಕೇವಲ ಬಾಹ್ಯ ರೇಖೆಗಳಲ್ಲಿ ರಚಿಸಲಾಗಿರುತ್ತದೆ. ಮತ್ತು ಈ ರೇಖೆಗಳು ಸ್ವಲ್ಪ ಆಳವಾಗಿರುತ್ತವೆ. ಕುಟ್ಟುವಿಕೆ ತಂತ್ರದಲ್ಲಿ ಇಡೀ ಚಿತ್ರದ ಪೂರ್ಣ ಛಾಯಾರೂಪದ ಚಿತ್ರ ಸಿದ್ಧವಾಗುತ್ತದೆ. ಇಲ್ಲಿ ಬಂಡೆಯ ಮೇಲ್ಮೈ ಮಾತ್ರ ಕಚ್ಚಾಗಿ ಚಿತ್ರಗಳು ಮೂಡಿರುತ್ತವೆ. ಕೊರೆದ ಮತ್ತು ಕುಟ್ಟುವಿಕೆಯ ಚಿತ್ರಗಳಲ್ಲಿ ಗೂಳಿಗಳೇ ಬಹಳ. ಕಾಡುಕೋಣ ಕಡಿಮೆ. ಮನುಷ್ಯನ ಚಿತ್ರಗಳು ತೀರ ಕಡಿಮೆ.

ಕುಷ್ಟಗಿ ಪರಿಸರದ ಮಲ್ಲಾಪುರ, ಬಸಾಪಟ್ಟಣ, ಸಿದ್ದಿಕೇರಿ, ಆಗೋಲಿ, ಹಿರೇಬೆಣಕಲ್ ಮತ್ತು ತಾವರಗೆರೆಗಳಲ್ಲಿ ಬಯಲು ಬಂಡೆಗಳಲ್ಲಿ ಕೊರೆದು ಇಲ್ಲವೇ ಕುಟ್ಟಿ ಮೂಡಿಸಿದ ಪ್ರಾಗಿತಿಹಾಸ ಕಾಲದ ಚಿತ್ರಗಳು ಕಂಡುಬರುತ್ತವೆ.[೧೬] ತಾವರಗೆರೆಯ ಗಾಣಗಿತ್ತಿ ಗುಡ್ಡದಲ್ಲಿ ಒಂದು ಬಂಡೆಗಲ್ಲಿನ ಮೇಲೆ ಗಿಡದಲ್ಲಿ ಕುಳಿತ ಕೋತಿಗಳು ಮತ್ತು ಜಿಂಕೆಗಳಂತಹ ಪ್ರಾಣಿಗಳ ಚಿತ್ರಗಳಿವೆ.

ಇನ್ನೊಂದು ಬಂಡೆಯ ಕೆಳಭಾಗದಲ್ಲಿ ಎದುರೆದುರಾಗಿ ನಿಂತ ಎರಡು ಜಿಂಕೆ(ಸಾರಂಗ)ಗಳ ಚಿತ್ರಗಳಿವೆ. ಇವುಗಳ ಜೊತೆಗೆ ಚೇಳಿನಾಕಾರದ ಅನೇಕ ಚಿತ್ರಗಳು ಚಿತ್ರಿಸಲ್ಪಟ್ಟಿವೆ. ಇವುಗಳಿಂದ ಈ ಪರಿಸರದ ಪ್ರಾಚೀನ ಮಾನವನ ಸಾಮಾಜಿಕ ಜೀವನ, ನಂಬಿಕೆ, ಕಲೆ, ಆರಾಧನೆ, ಮಾಂತ್ರಿಕತೆ ಮುಂತಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು.

೨.೩ ಇತಿಹಾಸ

ಮನುಕುಲದ ಗತಕಾಲದ ಚಟುವಟಿಕೆಗಳನ್ನು ಕುರಿತು ವ್ಯವಸ್ಥಿತವಾಗಿ ಹೇಳುವವು ಇತಿಹಾಸ. ಇದು ಮನುಷ್ಯ ಜೀವನದ ಹಲವು ಅನನ್ಯ ಘಟನೆಗಳ ಮತ್ತು ಸಂಚಲನಗಳ ಒಂದು ವಿಶ್ವಾಸಾರ್ಹ ದಾಖಲೆ. ರಾಜಕೀಯ, ಸಮಾಜ, ಆರ್ಥಿಕ, ಸಂಸ್ಕೃತಿ, ಪರಿಸರ ಮತ್ತು ಚಿಂತನೆಗಳ ಹಿನ್ನಲೆಯಲ್ಲಿ ಮನುಷ್ಯನ ಗತಕಾಲದ ಚಟುವಟಿಕೆಗಳನ್ನು ಸಾಧ್ಯವಾದಷ್ಟು ವಸ್ತುನಿಷ್ಠವಾಗಿ ದಾಖಲಿಸುವ ಮರು ನಿರೂಪಿಸುವ ಶಿಸ್ತಿನ ಕಾರ್ಯ ಇತಿಹಾಸ ನಿರ್ವಹಿಸುತ್ತದೆ.

ಮೌರ್ಯರು

ಭಾರತದಲ್ಲಿ ಏಳಿಗೆಗೆ ಬಂದ ಸಾಮ್ರಾಜ್ಯಗಳಲ್ಲಿ ಮೌರ್ಯ ಸಾಮ್ರಾಜ್ಯವೇ ಮೊಟ್ಟ ಮೊದಲನೆಯದು. ಭಾರತಕ್ಕೆ ಮೊದಲ ಬಾರಿಗೆ ಕೇಂದ್ರಿಕೃತ ಆಡಳಿತ ವ್ಯವಸ್ಥೆಯನ್ನೊಳಗೊಂಡ ಪ್ರಭುತ್ವವನ್ನು ಸ್ಥಾಪಿಸಿದ ಕೀರ್ತಿ ಮೌರ್ಯರಿಗೆ ಸಲ್ಲುತ್ತದೆ. ಮೌರ್ಯ ಸಾಮ್ರಾಜ್ಯವು ಕ್ರಿ.ಪೂ. ಸು.೩೨೩ ರಿಂದ ಕ್ರಿ.ಪೂ.೧೮೭ ರವರೆಗೆ ಅಸ್ತಿತ್ವದಲ್ಲಿತ್ತು. ಇದರ ಸ್ಥಾಪಕ ಚಂದ್ರಗುಪ್ತಮೌರ್ಯ. ಇವನು ಮೌರ್ಯ ಸಾಮ್ರಾಜ್ಯದ ಮೊದಲ ಅಧಿಪತಿಯಾದಾಗ ಕರ್ನಾಟಕವು ಅವನ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ.ಏಳನೆಯ ಶತಮಾನದ ಶ್ರವಣಬೆಳಗೊಳದ ಶಾಸನ ಮತ್ತು ಜೈನ ಗ್ರಂಥಗಳ ಪ್ರಕಾರ, ಚಂದ್ರಗುಪ್ತಮೌರ್ಯನು ತನ್ನ ಜೈನಗುರು ಭದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನವ್ರತ ನಡೆಸಿ ತನ್ನ ಜೀವನದ ಕೊನೆಯ ದಿನಗಳನ್ನು ಇಲ್ಲಿಯೇ ಕಳೆದನೆಂದು ಪ್ರತೀತಿಯಿದೆ. ಶ್ರವಣಬೆಳಗೊಳದ ಚಂದ್ರಗಿರಿ, ಚಂದ್ರಬಸದಿ ಮತ್ತು ಭದ್ರಬಾಹುವಿನ ಗುಹೆಗಳು ಇದಕ್ಕೆ ಆಧಾರಗಳಾಗಿವೆ. ಇವೆಲ್ಲವುಗಳಿಂದ ಕರ್ನಾಟಕದ ಪ್ರದೇಶ ಚಂದ್ರಗುಪ್ತಮೌರ್ಯನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದ ವಿಷಯ ಸ್ಪಷ್ಟವಾಗುತ್ತದೆ. ಮೌರ್ಯ ಸಾಮ್ರಾಜ್ಯದ ಶ್ರೇಷ್ಠ ಅರಸನಾದ ಅಶೋಕನು ಕ್ರಿ.ಪೂ.೨೭೩ ರಿಂದ ಕ್ರಿ.ಪೂ.೨೩೬ ರವರೆಗೆ ಆಳ್ವಿಕೆ ನಡೆಸಿದನು. ಇವನ ಆಳ್ವಿಕೆಯ ಕಾಲವು ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಭಾರತದ ಬಹುಭಾಗ ಕರ್ನಾಟಕವು ಒಳಗೊಂಡಂತೆ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು.

ಕರ್ನಾಟಕದಲ್ಲಿ ಈ ವರೆಗೆ ಅಶೋಕನ ಕಾಲದ ಹದಿನಾಲ್ಕು ಶಾಸನಗಳು ದೊರೆತಿವೆ. ಇವುಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟ್ಟಿಂಗರಾಮೇಶ್ವರಗಳಲ್ಲಿ ತಲಾ ಒಂದೊಂದರಂತೆ ಮೂರು ಶಾಸನಗಳು, ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದೇಗೋಳಂಗಳಲ್ಲಿ ತಲಾ ಎರೆಡರಂತೆ ನಾಲ್ಕು ಶಾಸನಗಳು, ರಾಯಚೂರ ಜಿಲ್ಲೆಯ ಮಸ್ಕಿಯಲ್ಲಿ ಒಂದು ಶಾಸನ, ಕೊಪ್ಪಳ ಜಿಲ್ಲೆಯ ಗವಿಮಠ ಮತ್ತು ಪಾಲ್ಕಿಗುಂಡುಗಳಲ್ಲಿ ತಲಾ ಒಂದೊಂದರಂತೆ ಎರಡು ಶಾಸನಗಳು ಮತ್ತು ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ನಾಲ್ಕು

ಶಾಸನಗಳು ಕಂಡುಬಂದಿವೆ. ಇವುಗಳೆಲ್ಲ ಅಶೋಕನ ಧರ್ಮಶಾಸನಗಳಾಗಿವೆ. ಈ ಶಾಸನಗಳು ದಕ್ಷಿಣ ಭಾರತದಲ್ಲಿ ಮೌರ್ಯರ ಆಡಳಿತದ ಬಗ್ಗೆ ವಿಶೇಷ ಬೆಳಕನ್ನು ಚೆಲ್ಲಿವೆ. ಅಶೋಕನು ತನ್ನ ಪ್ರಾಂತೀಯ ರಾಜಧಾನಿಗಳಾಗಿದ್ದ ಸುವರ್ಣಗಿರಿ(ಕನಕಗಿರಿ?) ಮತ್ತು ಇಸಿಲ(ಬ್ರಹ್ಮಗಿರಿ) ನಗರಗಳಲ್ಲಿದ್ದ ಮಹಾಮಾತ್ರರಿಗೆ ತನ್ನ ರಾಜಾಜ್ಞೆಗಳನ್ನು ಕಳುಹಿಸಿದ್ದುದು ಕಂಡುಬರುತ್ತದೆ. ಈ ಶಾಸನಗಳು ಧರ್ಮಶಾಸನಗಳಾಗಿದ್ದುದರಿಂದ ಅಂದಿನ ಜನತೆ ಧರ್ಮಾವಲಂಬಿಗಳಾಗುವಂತೆ ಪ್ರೇರೇಪಿಸುತ್ತದೆ ಎಂದು ತೋರುತ್ತದೆ. ಈ ಎಲ್ಲ ಶಾಸನಗಳು ಪ್ರಾಕೃತ ಭಾಷೆ ಹಾಗೂ ಬ್ರಾಹ್ಮಿಲಿಪಿಯಲ್ಲಿದ್ದು ಕ್ರಮೇಣ ಕನ್ನಡ ಮತ್ತು ತೆಲುಗು ಲಿಪಿಗಳಿಗೆ ಮೂಲ ಲಿಪಿಯಾಯಿತು.[೧೭]

ಕೊಪ್ಪಳ ಜಿಲ್ಲೆಯ ಇತಿಹಾಸವನ್ನು ಮೌರ್ಯರ ಕಾಲದಿಂದಲೇ ಗುರುತಿಸಬಹುದಾದರೂ, ಈ ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಇದುವರೆಗೂ ಮೌರ್ಯ ಅರಸರ ಶಾಸನಗಳಾಗಲಿ, ಐತಿಹಾಸಿಕ ಅವಶೇಷಗಳಾಗಲಿ ದೊರೆತಿಲ್ಲ. ಆದರೆ ಅಶೋಕನ ಧರ್ಮಶಾಸನಗಳು ಕುಷ್ಟಗಿಯ ದಕ್ಷಿಣದ ಕೊಪ್ಪಳ ಮತ್ತು ಪೂರ್ವದ ಮಸ್ಕಿಯಲ್ಲಿ ದೊರೆತಿವೆ. ಸಮೀಪದ ಗವಿಮಠ, ಮಸ್ಕಿ ಮತ್ತು ಪಾಲ್ಕಿಗುಂಡು ಬೆಟ್ಟ–ಗುಡ್ಡಗಳಲ್ಲಿ ಕಂಡುಬಂದಿವೆ. ಇವುಗಳ ಲಿಪಿ ಬ್ರಾಹ್ಮಿ, ಭಾಷೆ ಪ್ರಾಕೃತ. ಈ ಶಾಸನಗಳು ಬಡವನಾಗಲಿ, ಶ್ರೀಮಂತನಾಗಲಿ ಧರ್ಮದಲ್ಲಿ ಆಸಕ್ತಿ ಹೊಂದಿದ್ದು, ಅವರು ಪ್ರಯತ್ನಶೀಲರಾದರೆ, ಆ ಜನರು ಸ್ವರ್ಗವನ್ನು ಪಡೆಯುತ್ತಿದ್ದರು ಎಂದು ತಿಳಿಸುತ್ತವೆ.

ಗವಿಮಠ ಶಾಸನವು "ದೇವಾನಾಂಪ್ರಿಯನು ಹೀಗೆ ಹೇಳುತ್ತಾನೆ. ನಾನು ಎರಡೂವರೆ ವರ್ಷಗಳಿಗಿಂತ ಹೆಚ್ಚುಕಾಲ ಪ್ರಕಾಶದಲ್ಲಿ ಶಾಕ್ಯನಾಗಿದ್ದೆ. ಆದರೆ ಅಷ್ಟು ಚನ್ನಾಗಿ ಮನಸಿಟ್ಟು ಪ್ರಯತ್ನಿಸಲಿಲ್ಲ. ಆದರೆ ಈಗ ಒಂದು ಸಂವತ್ಸರಕ್ಕಿಂತ ಹೆಚ್ಚುಕಾಲ 'ಸಂಘ'ವನ್ನು ಪ್ರವೇಶಿಸಿ ಚೆನ್ನಾಗಿ ಪ್ರಯತ್ನಿಸಿರುವೆನು. ಈ ಕಾಲದಲ್ಲಿ ಜಂಬೂದ್ವೀಪದ ಜನರು ದೇವರುಗಳೊಂದಿಗೆ ಮಿಶ್ರರಾಗದಿದ್ದವರೆಲ್ಲರೂ ದೇವರುಗಳೊಂದಿಗೆ ಮಿಶ್ರರಾದರು. ಇದು ಪ್ರಯತ್ನದ ಫಲ. ಮಹಾತ್ಮರಿಂದ ಮಾತ್ರ ಇದು ಸಾಧ್ಯವೆಂದು ತಿಳಿಯಬೇಡಿ. ಕ್ಷುದ್ರ ಜನರೂ ಕೂಡ ತಮ್ಮ ಪ್ರಯತ್ನದಿಂದ ಸ್ವರ್ಗವನ್ನು ಪಡೆಯಬಹುದು. ಇದಕ್ಕಾಗಿಯೇ ಈ ಧರ್ಮಶ್ರವಣವನ್ನು ಮಾಡಿರುವುದು. ಕ್ಷುದ್ರರೂ, ಮಹಾತ್ಮರು ಎಲ್ಲರೂ ಪರಾಕ್ರಮಿಸಲಿ ಎಂದು ನೆರೆಯವರು ಕೂಡ ಇದನ್ನು ತಿಳಿಯಲಿ ಎಂದು ಪರಾಕ್ರಮ ಎಂದರೆ ಇದು, ಚಿರಸ್ಥಾಯಿಯಾಗಿ ನಿಲ್ಲಲಿ ಎಂದು ಇದು ವರ್ಧಿಸುತ್ತದೆ. ವಿಫುಲವಾಗಿ ವರ್ಧಿಸುತ್ತದೆ. ಈಗಿನದಕ್ಕಿಂತ ಒಂದೂವರೆಯಷ್ಟು ವರ್ಧಿಸುತ್ತದೆ"[೧೮] ಎಂದು ತಿಳಿಸುತ್ತದೆ.

ಅಶೋಕನ ಆಳ್ವಿಕೆಯಲ್ಲಿ ದಕ್ಷಿಣ ಪ್ರಾಂತದ ಮುಖ್ಯ ಸ್ಥಳವಾಗಿದ್ದ 'ಸುವರ್ಣಗಿರಿ' ಮಸ್ಕಿಯ ಹತ್ತಿರದಲ್ಲಿಯೇ ಇತ್ತೆಂಬುದು ಕೆಲವು ಸಂಶೋಧಕರ ಅಭಿಪ್ರಾಯವಾಗಿದೆ. ಇನ್ನೂ ಕೆಲವು ಸಂಶೋಧಕರ ಪ್ರಕಾರ, ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕನಕಗಿರಿಯೇ ಅಂದಿನ 'ಸುವರ್ಣಗಿರಿ'ಯಾಗಿತ್ತು. ಒಟ್ಟಿನಲ್ಲಿ ಗವಿಮಠ, ಪಾಲ್ಕಿಗುಂಡು, ಮಸ್ಕಿ ಮತ್ತು ಕನಕಗಿರಿ ಪ್ರದೇಶಗಳು ಕುಷ್ಟಗಿ ತಾಲ್ಲೂಕಿನ ಪ್ರದೇಶಕ್ಕೆ ಸಮೀಪದಲ್ಲಿಯೇ ಇರುವುದರಿಂದ, ಈ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದಾಗಿದೆ.

ಶಾತವಾಹನರು

ಮೌರ್ಯರ ಅವನತಿಯ ನಂತರ ಅವರ ಸಾಮಂತರಾಗಿದ್ದ ಶಾತವಾಹನರು ದಕ್ಷಿಣದ ಕರ್ನಾಟಕದಲ್ಲಿ ವಿಶಾಲವಾದ ರಾಜ್ಯವನ್ನು ಸ್ಥಾಪಿಸಿದರು. ದಕ್ಷಿಣದಲ್ಲಿ ಪ್ರಥಮ ಐತಿಹಾಸಿಕ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಇವರದ್ದಾಗಿದೆ. ಇವರು ಕ್ರಿ.ಪೂ.೨೩೫ ರಿಂದ ಕ್ರಿ.ಶ.೨೩೦ರ ವರೆಗೆ ಆಳ್ವಿಕೆ ನಡೆಸಿದರು. ಈ ಮನೆತನದ ಸ್ಥಾಪಕ ಸಿಮುಖ. ಕರ್ನಾಟಕವನ್ನಾಳಿದ ಮೊಟ್ಟ ಮೊದಲನೆಯ ಅರಸು ಮನೆತನ ಎಂದರೆ ಶಾತವಾಹನರದು. ಇವರ ಮೂಲ ನೆಲೆಯ ಬಗ್ಗೆ ವಿದ್ವಾಸರಲ್ಲಿ ಒಮ್ಮತದ ಅಭಿಪ್ರಾಯವಿಲ್ಲ. ಇವರನ್ನು 'ಆಂಧ್ರಭೃತ್ಯ'ರೆಂದು ಕರೆಯಲಾಗಿದ್ದರೂ ಇವರು ಕನ್ನಡಿಗರೇ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಮ್ಯಾಕಡೋಣಿ ಮತ್ತು ಹಿರೇಹಡಗಲಿ ಶಾಸನಗಳಿಂದ ಶಾತವಾಹನರ ಮೂಲನೆಲೆ 'ಶಾತವಾಹನೀಹಾರ'ವಾಗಿತ್ತೆಂದು ತಿಳಿದುಬರುತ್ತದೆ. ಡಾ. ವಿ.ಎಸ್.ಸುಕ್ತಂಕರರವರು ಮತ್ತು ಅನೇಕ ಸಂಶೋಧಕರ ಪ್ರಕಾರ 'ಶಾತವಾಹನೀಹಾರ' ಪ್ರದೇಶ ಎಂದರೆ, ಈಗೀನ ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಯ ಪ್ರದೇಶ[೧೯] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ವಿಂಧ್ಯಪರ್ವತದ ದಕ್ಷಿಣದಲ್ಲಿ ಕೃಷ್ಣಾನದಿಯವರೆಗೆ, ಪೂರ್ವ–ಪಶ್ಚಿಮಗಳಲ್ಲಿ ಸಮುದ್ರದ ವರೆಗೂ ಅಶೋಕನ ಸಾಮ್ರಾಜ್ಯದ ಭಾಗವಾಗಿದ್ದು, ನಂತರ ಅದು ಶಾತವಾಹನರ ವಶವಾಗಿತ್ತು. ದಕ್ಷಿಣದಲ್ಲಿ ಇವರ ಮೇರೆಯು ಕೊಲ್ಲಾಪುರ, ಬನವಾಸಿ ಮತ್ತು ಚಿತ್ರದುರ್ಗ ಪ್ರದೇಶಗಳಲ್ಲಿ ಹರಿದು ಹೋಗುತ್ತದೆ. ಈ ಗಡಿಯ ಉತ್ತರಭಾಗದ ಕನ್ನಡ ಪ್ರದೇಶಕ್ಕೆ 'ಕುಂತಳ ರಾಜ್ಯ' ಎಂದು ಹೆಸರಿತ್ತು.[೨೦] ಡಾ. ಫ್ಲೀಟ್‌ರವರ ಪ್ರಕಾರ ಕುಂತಳ ರಾಜ್ಯವು ದಕ್ಷಿಣಕ್ಕೆ ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಮತ್ತು ಹರಿಹರ, ಬಳ್ಳಾರಿ ಜಿಲ್ಲೆಯ ಹಂಪಿ ಇವುಗಳ ಉತ್ತರಕ್ಕೆ ಧಾರವಾಡ ಜಿಲ್ಲೆಯ ಹಾನಗಲ್ಲು, ಗದಗ ಜಿಲ್ಲೆಯ ಗದಗ, ಲಕ್ಷ್ಮೇಶ್ವರ, ಲಕ್ಕುಂಡಿ, ಬೆಳಗಾವಿ ಜಿಲ್ಲೆಯ ಬೆಳಗಾವಿ, ಸೌದತ್ತಿ, ಕೊಣ್ಣುರು ಮತ್ತು ಕಲ್ಯಾಣ ಪ್ರದೇಶಗಳನ್ನು ಒಳಗೊಂಡಿತ್ತು[೨೧] ಎಂದು ಹೇಳಲಾಗಿದೆ.

ಮತ್ಸ್ಯಪುರಾಣದ ಪ್ರಕಾರ ಶಾತವಾಹನರ ಹದಿಮೂರನೆಯ ದೊರೆಯ ಹೆಸರು 'ಕುಂತಸ್ವಾತಿ'. ವಾತ್ಸಾಯನನ ಕಾಮಸೂತ್ರದಲ್ಲಿ ಇವನನ್ನು 'ಕುಂತಳ ಶಾತಕರ್ಣಿ' ಎಂದು ಕರೆಯಲಾಗಿದೆ.[೨೨] ಶಾತವಾಹನರ ಹದಿನೇಳನೆಯ ದೊರೆ ಹಾಲನು ಪ್ರಾಕೃತದಲ್ಲಿ ರಚಿಸಿರುವ ತನ್ನ 'ಗಾಥಾಸಪ್ತಶತಿ' ಎಂಬ ಕೃತಿಯಲ್ಲಿ ತನ್ನನ್ನು ತಾನು ಕುಂತಳದ ರಾಜನೆಂದು ಕರೆದುಕೊಂಡಿದ್ದಾನೆ.

ಸುಮಾರು ಹನ್ನೆರಡನೆಯ ಶತಮಾನದ ವೇಳೆಗೆ ಕುಂತಳ ರಾಜ್ಯ ಮತ್ತು ಕರ್ನಾಟಕ ಎಂಬ ಎರಡು ಸಮಾನ ಪದಗಳಾದವು.[೨೩] ಈ ಮೇಲೆ ಹೇಳಿರುವ ಪ್ರಕಾರ ತುಂಗಭದ್ರಾ ನದಿಯ ಉತ್ತರಕ್ಕಿರುವ ಪ್ರದೇಶವು ಶಾತವಾಹನರ ಭಾಗವಾಗಿತ್ತೆಂದು ಸ್ಪಷ್ಟವಾಗುತ್ತದೆ. ಈ ಭಾಗದಲ್ಲಿಯೇ ಕೊಪ್ಪಳ, ಬಳ್ಳಾರಿ ಜಿಲ್ಲಾ ಪ್ರದೇಶಗಳಿವೆ. ಶಾತವಾಹನರ ವಂಶದ ಕನ್ನರ ಅಥವಾ ಕೃಷ್ಣ ಎಂಬುವವನು ಮಹಾರಾಷ್ಟ್ರದಿಂದ ಪೂರ್ವ ತೀರದ ಕಳಿಂಗದವರೆಗೆ ಆಳಿದನೆಂದು

ತಿಳಿದುಬರುತ್ತದೆ.[೨೪] ಒಟ್ಟಿನಲ್ಲಿ ಇಂದಿನ ಕೊಪ್ಪಳ ಜಿಲ್ಲೆಯ ಕೆಲ ಪ್ರದೇಶಗಳು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ.

ಕೊಪ್ಪಳ ತಾಲ್ಲೂಕಿನ ಚಿಕ್ಕಸಿಂದೋಗಿ ಗ್ರಾಮದಲ್ಲಿ ಶಾತವಾಹನರ ಕಾಲದ ೫೫೩೪ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳಿರುವ ತಾಮ್ರ ಪಾತ್ರೆಯೊಂದು ದೊರೆತಿದ್ದು ಈ ತಾಮ್ರ ಪಾತ್ರೆಯ ಮೇಲೆ 'ಚಿಂತಸ' ಅಥವಾ 'ಚೆಂತ' ಎಂಬ ಬ್ರಾಹ್ಮಿ ಬರಹವಿದೆ.[೨೫] 'ಚಿಂತ' ಎಂಬುದು ವ್ಯಕ್ತಿಯ ಹೆಸರೆಂದು ಹೇಳಲಾಗತ್ತದೆ.[೨೬] ಕೊಪ್ಪಳದಲ್ಲಿ ಬ್ರಾಹ್ಮಿಲಿಪಿಯ ನಾಣ್ಯವೊಂದು ದೊರೆತಿದ್ದು, ಅದರಲ್ಲಿ 'ಸಿರಿಸತಕ(ನಿ)' ಎಂದು ಉಲ್ಲೇಖವಿದೆ. ಈ ನಾಣ್ಯದ ಹಿಂಬದಿಯಲ್ಲಿ ವೃಕ್ಷವಿದೆ. ಇದು ಶಾತವಾಹನ ಅರಸ ಸಿರಿಶಾತಕರ್ಣಿಯ ಕಾಲದ್ದೆಂದು ಸ್ಪಷ್ಟವಾಗುತ್ತದೆ.[೨೭] ಕುಷ್ಟಗಿ ತಾಲ್ಲೂಕಿನ ಶ್ಯಾಡಲಗೇರಿ ಗ್ರಾಮದ ಧ್ರುವರಾಜ ಕೃಷ್ಣರಾವ ಕುಲಕರ್ಣಿ ಎಂಬುವವರ ಹೊಲದಲ್ಲಿ ಶಾತವಾಹನರ ಕೆಲವು ಅವಶೇಷಗಳು ಲಭಿಸಿವೆ. ಶಾತವಾಹನರ ಕಾಲಕ್ಕೆ ಸೇರಿದ ನಾಲ್ಕಾರು ಸೀಸದ ನಾಣ್ಯಗಳು ಮತ್ತು ಮಡಿಕೆ ಚೂರುಗಳು ದೊರೆತಿವೆ.[೨೮]

ಕ್ರಿ.ಶ.೧೫೦ರಲ್ಲಿ ಭಾರತಕ್ಕೆ ಬಂದಿದ್ದ ಈಜಿಪ್ಟ್ ವ್ಯಾಪಾರಿ ಟಾಲೆಮಿಯು ತನ್ನ 'A Guide to the Giogrophy' ಎಂಬ ಗ್ರಂಥದಲ್ಲಿ 'ಮುಡಗಲ್ಲ' ಎಂಬ ಸ್ಥಳವನ್ನು ಉಲ್ಲೇಖಿಸಿದ್ದಾನೆ. ಇದು ಕುಷ್ಟಗಿ ಸಮೀಪದ ಮುದಗಲ್ ಆಗಿದೆ. ಕುಷ್ಟಗಿ ತಾಲ್ಲೂಕಿನ ಪಕ್ಕದಲ್ಲಿರುವ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಚಾಲುಕ್ಯ ಪೂರ್ವ ಕಾಲದ ಇಟ್ಟಿಗೆಯ ರಚನೆಗಳ ಮೇಲೆ ಚಾಲುಕ್ಯರ ಕಾಲದ ಅನೇಕ ದೇವಾಲಯಗಳು ನಿರ್ಮಾಣಗೊಂಡಿವೆ. ಇವುಗಳ ಆಧಾರದಿಂದ ಈ ಪ್ರದೇಶವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ.

ಬನವಾಸಿ ಕದಂಬರು

ಶಾತವಾಹನರ ತರುವಾಯ ಕರ್ನಾಟಕದ ಪ್ರದೇಶದಲ್ಲಿ ಆಡಳಿತ ನಡೆಸಿದವರು ಕದಂಬರು. ಇವರದು ಕರ್ನಾಟಕವನ್ನಾಳಿದ ಪ್ರಥಮ ಕನ್ನಡ ಅರಸು ಮನೆತನ. ಬನವಾಸಿ (ವೈಜಯಂತಿಪುರ)ಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.ಸು.೩೪೫ ರಿಂದ ಕ್ರಿ.ಶ.೫೪೦ರವರಗೆ ಆಳ್ವಿಕೆ ನಡೆಸಿದರು. ಮಯೂರವರ್ಮನಿಂದ ಸ್ಥಾಪನೆಗೊಂಡ ಕದಂಬ ಮನೆತನದಲ್ಲಿ ಕಂಗವರ್ಮ, ಭಗೀರಥವರ್ಮ, ರಘುವರ್ಮ ಮತ್ತು ಕಾಕುಸ್ಥವರ್ಮರು ಆಳ್ವಿಕೆ ನಡೆಸಿದರು. ಇವರಲ್ಲಿ ಶ್ರೇಷ್ಠ ಅರಸ ಮಯೂರವರ್ಮ. ಈತನೇ ಮೊದಲಿಗೆ ಮಯೂರ ಶರ್ಮನೆಂದು ಕರೆಸಿಕೊಂಡಿದ್ದನು. ತಾಳಗುಂದ ಶಾಸನದ ಪ್ರಕಾರ, ಮಯೂರವರ್ಮನು ಪಲ್ಲವರ ವಿರುದ್ಧ ಸಿಡಿದೆದ್ದು, ಅವರನ್ನು ಸೋಲಿಸಿ ಪ್ರಬಲನಾದಾಗ, ಪಲ್ಲವರು ಮಯೂರವರ್ಮನನ್ನು ಎದುರು ಹಾಕಿಕೊಳ್ಳದೆ ಅವನಿಗೆ ಪಶ್ಚಿಮ ತೀರದಿಂದ ಮಲಪ್ರಭಾ ನದಿಯ(ಪ್ರೇಹಾರ)ವರೆಗಿನ ಪ್ರದೇಶವನ್ನು ಕೊಟ್ಟು ಅವನನ್ನು ರಾಜನೆಂದು ಮಾನ್ಯಮಾಡಿದರು.

ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ 'ಕುಪ್ಪಣದ ಚಾಮ'ನ ಉಲ್ಲೇಖವನ್ನು ಎತ್ತಿ ತೋರಿಸಲಾಗಿದೆ.[೨೯] ಈ ಆಧಾರದ ಮೇಲೆ ಕದಂಬರ ಕಾಲದಲ್ಲಿ ಕೊಪ್ಪಳವನ್ನು 'ಕುಪ್ಪಣ' ಎಂದು ಕರೆದಿರುವುದನ್ನು ಗಮನಿಸಬೇಕಾಗಿದೆ. ಕುಷ್ಟಗಿ ಪ್ರದೇಶದ ಸಮೀಪವಿರುವ ದೇವಿಹಾಳ್ ಮತ್ತು

[illegible]

ಸೊಂಡೂರ್‌ನಲ್ಲಿ ಕದಂಬರ ಕಾಲದ ಎರಡು ಶಿಲ್ಪಗಳು ದೊರತಿವೆ. ಶಿರಹಟ್ಟಿ ತಾಲ್ಲೂಕಿನ ದೇವಿಹಾಳದಲ್ಲಿ ಮಹಿಷಾಸುರಮರ್ದಿನಿ ಮತ್ತು ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿ ವಿಷ್ಣುವಿನ ವಿಗ್ರಹಗಳು ದೊರೆತಿವೆ.[೩೦] ಈ ಎಲ್ಲಾ ಆಕರ ಅಂಶಗಳಿಂದ ಕುಷ್ಟಗಿ ಪ್ರದೇಶವೂ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದಾಗಿದೆ.

ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಈ ಮನೆತನದವರು ವಾತಾಪಿ (ಬಾದಾಮಿ)ಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.೫೪೦ ರಿಂದ ಕ್ರಿ.ಶ.೭೫೭ರ ವರೆಗೆ ಆಳ್ವಿಕೆ ನಡೆಸಿದರು. ಜಯಸಿಂಹನಿಂದ ಸ್ಥಾಪನೆಗೊಂಡ ಚಾಲುಕ್ಯ ಸಾಮ್ರಾಜ್ಯದಲ್ಲಿ ಒಂದನೇ ಪುಲಿಕೇಶಿ, ಕೀರ್ತಿವರ್ಮ, ಮಂಗಳೇಶ, ಇಮ್ಮಡಿ ಪುಲಿಕೇಶಿ, ವಿನಯಾದಿತ್ಯ, ವಿಜಯಾದಿತ್ಯ ಮುಂತಾದವರು ಆಳ್ವಿಕೆ ನಡೆಸಿದರು. ಇವರಲ್ಲಿ ಶ್ರೇಷ್ಠ ಅರಸ ಇಮ್ಮಡಿ ಪುಲಿಕೇಶಿ. ಇವನ ಆಳ್ವಿಕೆಯ ಕಾಲಾವಧಿಯಲ್ಲಿ ಚೀನಾದ ಪ್ರವಾಸಿ ಹ್ಯೂಯನ್‌ತ್ಸಾಂಗನು ಚಾಲುಕ್ಯ ಸಾಮ್ರಾಜ್ಯದ ಅನೇಕ ಸ್ಥಳಗಳಿಗೆ ಭೇಟಿ ನೀಡಿದ್ದನು. ಅವನು ತನ್ನ ಬರೆಹಗಳಲ್ಲಿ ಹೆಸರಿಸಿದ ಸ್ಥಳಗಳಲ್ಲಿ 'ಕೊಂಕಿನಪುಲೋ' ಎಂಬುದು ಇಂದಿನ ಕೊಪ್ಪಳ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[೩೧]

ಇಮ್ಮಡಿ ಪುಲಿಕೇಶಿಯು ದಕ್ಷಿಣದ ಗಂಗ, ಕದಂಬ, ಅಳುಪ, ಪಲ್ಲವ, ಚೋಳ, ಕೊಂಕಣದ ಮೌರ್ಯರನ್ನು ಮತ್ತು ಉತ್ತರಪಥೇಶ್ವರನೆಂದು ಬಿರುದಾಂಕಿತನಾಗಿದ್ದ ಹರ್ಷ ವರ್ಧನನನ್ನು ಸೋಲಿಸಿ ದಕ್ಷಿಣಪಥೇಶ್ವರನೆಂದು ಬಿರುದನ್ನು ಧರಿಸಿದನು. ಇಡೀ ದಕ್ಷಿಣ ಪ್ರಸ್ಥಭೂಮಿ ಇವನ ಆಳ್ವಿಕೆಗೆ ಒಳಪಟ್ಟಿತ್ತು. ಅಲ್ಲದೇ ಇವನ ಸಾಮ್ರಾಜ್ಯ ಉತ್ತರದ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿ ನದಿಯವರೆಗೆ ಹರಡಿತ್ತು. ಒಟ್ಟಿನಲ್ಲಿ ಸಮಗ್ರ ಕರ್ನಾಟಕ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಇಂಥ ವಿಸ್ತಾರವಾದ ವ್ಯಾಪ್ತಿಯಲ್ಲಿ ಕುಷ್ಟಗಿ ಪ್ರದೇಶವೂ ಸೇರಿತ್ತು.

ಚಾಲುಕ್ಯರ ರಾಜಧಾನಿ ಬಾದಾಮಿಯು ಕುಷ್ಟಗಿಯ ಪ್ರದೇಶಕ್ಕೆ ಹೊಂದಿಕೊಂಡಿದೆ. ಕುಷ್ಟಗಿಯ ಹತ್ತಿರ ಇರುವ ಕುಕನೂರು, ಇಟಗಿ(ಯಲಬುರ್ಗಾ–ತಾ) ಹಲಗೇರಿ(ಕೊಪ್ಪಳ–ತಾ) ಗ್ರಾಮಗಳಲ್ಲಿ ತಲಾ ಒಂದೊಂದರಂತೆ ಒಟ್ಟು ಮೂರು ಶಾಸನಗಳು ಈವರೆಗೆ ದೊರೆತಿವೆ. ಕುಕನೂರು ಗ್ರಾಮದಲ್ಲಿರುವ ಶಾಸನವು ಬಾದಾಮಿ ಚಾಲುಕ್ಯ ಅರಸನಾದ ಒಂದನೇ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಈ ಶಾಸನವು ರಾಜಕುಮಾರರಾದ ವಿನಯಾದಿತ್ಯ ಹಾಗೂ ಚಂದ್ರಾದಿತ್ಯರನ್ನು ಉಲ್ಲೇಖಿಸುತ್ತ, ಸಿಂಧರಸನು ಕುಕನೂರನ್ನು ಆಳುತ್ತಿದ್ದ ವಿಷಯ ತಿಳಿಸುತ್ತದೆ.[೩೨] ಇಟಗಿ ಗ್ರಾಮದಲ್ಲಿರುವ ಶಾಸನವು ಬಾದಾಮಿ ಚಾಲುಕ್ಯ ಅರಸನಾದ ಸತ್ಯಾಶ್ರಯನ ಕಾಲದ್ದಾಗಿದೆ. ಈ ಶಾಸನದಿಂದ ಕುಷ್ಟಗಿ-ಯಲಬುರ್ಗಾ ಪ್ರದೇಶಗಳನ್ನು ಯಲಬುರ್ಗಿಯ ಸಿಂಧರು ಆಳುತ್ತಿದ್ದು ಇವರು ಬಾದಾಮಿ ಚಾಲುಕ್ಯರ ಮಾಂಡಲೀಕರಾಗಿ ಆಳುತ್ತಿದ್ದರೆಂದು ಸ್ಪಷ್ಟವಾಗುತ್ತದೆ.[೩೩] ಹಲಗೇರಿಯಲ್ಲಿರುವ ಶಾಸನವು ಚಾಲುಕ್ಯರ ಅರಸನಾದ ವಿಜಯಾದಿತ್ಯನ ಕಾಲದ್ದು. ಈ ಶಾಸನವು ವಿಜಯಾದಿತ್ಯನನ್ನು ಹೆಸರಿಸುವ ಜೊತೆಗೆ ಕೊಪ್ಪಳವನ್ನು 'ಕೊಪಣ'

ಎಂದು ಉಲ್ಲೇಖಿಸಲಾಗಿದೆ.[೩೪] ಈ ಮೇಲಿನ ಶಾಸನದಿಂದ ಕುಷ್ಟಗಿ ತಾಲ್ಲೂಕಿನ ಪ್ರದೇಶವು ಬಾದಾಮಿ ಚಾಲುಕ್ಯರ ವ್ಯಾಪ್ತಿಗೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗುತ್ತದೆ.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ನಂತರ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ನಡೆಸಿದವರು ರಾಷ್ಟ್ರಕೂಟರು. ಇವರು ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.೭೫೩ ರಿಂದ ಕ್ರಿ.ಶ.೯೭೩ರ ವರೆಗೆ ಆಳ್ವಿಕೆ ನಡೆಸಿದರು. ದಂತಿದುರ್ಗನಿಂದ ಸ್ಥಾಪನೆಗೊಂಡ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಒಂದನೇ ಕೃಷ್ಣ, ಎರಡನೇ ಗೋವಿಂದ, ಧ್ರುವ, ಮೂರನೇ ಗೋವಿಂದ, ಅಮೋಘವರ್ಷ ನೃಪತುಂಗ, ಎರಡನೇ ಕೃಷ್ಣ, ಮೂರನೇ ಇಂದ್ರ ಮುಂತಾದವರು ಆಳ್ವಿಕೆ ನಡೆಸಿದರು. ಈ ಸಾಮ್ರಾಜ್ಯ ಉತ್ತರದ ನರ್ಮದಾ ನದಿಯಿಂದ ದಕ್ಷಿಣದ ಕಾವೇರಿಯವರೆಗೆ ಹಬ್ಬಿದೆ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಮತ್ತು ಮಾಳವಾದಿಂದ ಪೂರ್ವದಲ್ಲಿ ಆಂಧ್ರಪ್ರದೇಶದ ವಾರಂಗಲ್ ಮತ್ತು ಕಡಪ ಜಿಲ್ಲೆಗಳವರೆಗೂ ವಿಸ್ತರಿಸಿತ್ತು.

ರಾಷ್ಟ್ರಕೂಟರ ಶ್ರೇಷ್ಠ ಅರಸನಾದ ನೃಪತುಂಗನ(ಅಮೋಘವರ್ಷನ) ಆಸ್ಥಾನ ಕವಿ ಶ್ರೀವಿಜಯನು ಕನ್ನಡ ಸಾಹಿತ್ಯದ ಪ್ರಥಮ ಗ್ರಂಥ 'ಕವಿರಾಜಮಾರ್ಗ'ದ ಕತೃವಾಗಿದ್ದಾನೆ. ಈ ಕೃತಿಯಲ್ಲಿ ಶ್ರೀವಿಜಯನು ಕುಷ್ಟಗಿ ಪ್ರದೇಶದ ಕೊಪ್ಪಳವನ್ನು 'ವಿದಿತ ಮಹಾಕೊಪಣ ನಗರ' ಎಂದು ಉಲ್ಲೇಖಿಸಿದ್ದಾನೆ. ಇದರಿಂದ ಕೊಪ್ಪಳವನ್ನೊಳಗೊಂಡ ಕುಷ್ಟಗಿ ಪ್ರದೇಶವು ಅಮೋಘ ವರ್ಷನ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯುತ್ತದೆ.

ಕುಷ್ಟಗಿ ಸಮೀಪದ ಕೊಪ್ಪಳದಲ್ಲಿ ದೊರೆತಿರುವ ರಾಷ್ಟ್ರಕೂಟರ ಕಾಲದ ಶಾಸನದಲ್ಲಿ 'ರಾಷ್ಟ್ರಕೂಟ ಮಹಾದಂಡನಾಯಕ ಬನವಾಸಿ ಕದಂಬರ ದಡಿಯಮರಸನು ಕೊಪ್ಪಳದಲ್ಲಿ ಜೈನ ಬಸದಿಯೊಂದನ್ನು ಕಟ್ಟಿಸಿ ಅದಕ್ಕೆ ಕಳಸಾರೋಹಣ ಮಾಡಿಸಿದ'ನೆಂದು ಉಲ್ಲೇಖವಿದೆ. ಉಪ್ಪಿನ ಬೆಟಗೇರಿಯ ಇನ್ನೊಂದು ಶಾಸನವು 'ಶಂಕರಗಂಡನೆಂಬ ಅಧಿಕಾರಿ ಕುಪಣ(ಕೊಪ್ಪಳ)ದಲ್ಲಿ ಜಯಧೀರ ಜಿನಾಲಯವನ್ನು ಕಟ್ಟಸಿದ್ದನು. ಇದಕ್ಕೆ ತಳವೃತ್ತಿಯಾಗಿ ರೊಟ್ಟಯ್ಯನು ಕುಕನೂರು-೩೦ರ ಗ್ರಾಮದ ಭೂಮಿಯನ್ನು ದತ್ತಿ ಬಿಟ್ಟುದಾಗಿ ತಿಳಿಸುತ್ತದೆ.[೩೫]

ಕುಷ್ಟಗಿ ಪ್ರದೇಶದ ಸಮೀಪದಲ್ಲಿರುವ ಭೋಗಾವತಿ(ಮಾನ್ವಿ-ತಾ) ಮತ್ತು ಯರಡೋಣಿ ಗಳಲ್ಲಿ ರಾಷ್ಟಕೂಟರ ಶಾಸನಗಳಿವೆ. ಭೋಗಾವತಿಯ ಶಾಸನವು ಅಕಾಲವರ್ಷ ಎರಡನೆಯ ಕೃಷ್ಣನ ಕಾಲದ್ದಾಗಿದೆ. ಇವನ ಮಗ ಎರಡನೇ ಜಗತ್ತುಂಗನು ತಂದೆಯ ಅಧೀನನಾಗಿ ಎಡದೊರೆ-೨೦೦೦ ಪ್ರಾಂತವನ್ನು ಅಣುಜೀವಿತವಾಗಿ ಅಳಿದ ಬಗ್ಗೆ ಹೇಳುತ್ತದೆ. ಕೃಷ್ಣ-ತುಂಗಭದ್ರಾ ನದಿಗಳ ನಡುವಿನ ಇಂದಿನ ಕೊಪ್ಪಳ-ರಾಯಚೂರ ಜಿಲ್ಲೆಗಳ ಪ್ರದೇಶವೇ ಎಡದೊರೆ-೨೦೦೦ ಪ್ರಾಂತವಾಗಿದೆ. ಯರಡೋಣಿ ಶಾಸನವು ಮೂರನೆಯ ಇಂದ್ರನ ಕಾಲದ್ದಾಗಿದ್ದು ಈ ಶಾಸನದಲ್ಲಿ ಇಂದ್ರನನ್ನು ' ಹಿರಣ್ಯ ವರ್ಷ' ಎಂದು ಕೆರೆಯಲಾಗಿದೆ.[೩೬]

ಕುಷ್ಟಗಿ ಪ್ರದೇಶದಲ್ಲಿ ರಾಷ್ಟ್ರಕೂಟರ ಕಾಲದ ಕೆಲವು ದೇವಾಲಯಗಳಿವೆ. ಅವುಗಳೆಂದರೆ ಕರಮುಡಿಯ ಕಲ್ಲೇಶ್ವರ ಮತ್ತು ಕುಸುಮೇಶ್ವರ, ಕಡೂರಿನ ಕಲ್ಲೇಶ್ವರ, ಮುಧೋಳದ ಸಿದ್ಧೇಶ್ವರ, ಕೊಣ್ಣೂರಿನ ಪರಮೇಶ್ವರ, ಹಲಗೇರಿಯ ಕಲ್ಲೇಶ್ವರ, ಸವಡಿಯ ಬ್ರಹ್ಮೇಶ್ವರ, ನರೇಗಲ್ಲಿನ ನಾರಾಯಣ, ಸೂಡಿಯ ಮಲ್ಲಿಕಾರ್ಜುನ ಹಾಗೂ ಜೋಡುಕಳಸದ ದೇವಾಲಯಗಳು ಮತ್ತು ಕುಕನೂರಿನ ನವಲಿಂಗೇಶ್ವರ ದೇವಾಲಯ ಪ್ರಮುಖವಾದವುಗಳಾಗಿವೆ. ಈ ಮೇಲಿನ ಎಲ್ಲ ದೇವಾಲಯಗಳನ್ನು ನೋಡಿದರೆ ಕುಷ್ಟಗಿಯ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ.

ತಲಕಾಡಿನ ಗಂಗರು

ಕರ್ನಾಟಕ ಪ್ರದೇಶದಲ್ಲಿ ರಾಜ್ಯವನ್ನು ಕಟ್ಟಿ ಆಳಿದ ರಾಜಮನೆತನಗಳಲ್ಲಿ ಗಂಗರು ಪ್ರಮುಖರಾಗಿದ್ದಾರೆ. ಇವರು ಆಳಿದ ಪ್ರದೇಶವು ಗಂಗವಾಡಿ-೯೬,೦೦೦ ಎಂದು ಪ್ರಸಿದ್ಧಿ ಪಡೆದಿದೆ. ಇವರು ಕ್ರಿ.ಶ.ಸು.೩೦೦ ರಿಂದ ಕ್ರಿ.ಶ.ಸು.೬೦೦ರವರೆಗೆ ಪರಮಾಧಿಕಾರಿಗಳಾಗಿ ನಂತರ ಕ್ರಿ.ಶ.ಸು. ೬೦೦ ರಿಂದ ಕ್ರಿ.ಶ.ಸು.೭೫೭ರವರೆಗೆ ಬಾದಾಮಿ ಚಾಲುಕ್ಯರ ಮಾಂಡಲಿಕರಾಗಿ, ಅನಂತರ ಕ್ರಿ.ಶ.ಸು.೭೫೭ ರಿಂದ ಕ್ರಿ.ಶ.ಸು.೯೭೩ರವರೆಗೆ ರಾಷ್ಟ್ರಕೂಟರ ಸಾಮಂತರಾಗಿ, ಕೊನೆಗೆ ಕ್ರಿ.ಶ.ಸು.೯೭೩ ರಿಂದ ಕ್ರಿ.ಶ.ಸು.೯೯೯ರವರೆಗೆ ಇವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದರು. ಕೊಂಗಣಿವರ್ಮ(ದಡಿಗ)ನಿಂದ ಸ್ಥಾಪನೆಗೊಂಡ ಗಂಗರ ಮನೆತನದಲ್ಲಿ ದುರ್ವಿನೀತ, ಶ್ರೀಪುರುಷ, ಎರಡನೇ ಶಿವಮಾರ, ಎರಡನೇ ಭೂತುಗ ಪ್ರಮುಖ ಅರಸರಾಗಿ ಹೊರ ಹೊಮ್ಮಿದ್ದಾರೆ.

ಕುಷ್ಟಗಿ ಪರಿಸರದಲ್ಲಿ ಕೆಲವು ಗಂಗರ ಕಾಲದ ಶಾಸನಗಳು ದೊರೆತಿವೆ. ಕುಷ್ಟಗಿಯ ಸಮೀಪದಲ್ಲಿರುವ ಇಟಗಿ(ಯಲಬುರ್ಗಾ-ತಾ)ಯ ಕ್ರಿ.ಶ.೯೫೯ರ ಶಾಸನದಲ್ಲಿ ರಾಷ್ಟಕೂಟರ ಮೂರನೇ ಕೃಷ್ಣನು ತುಂಗಭದ್ರಾ ನದಿಯ ಉತ್ತರಭಾಗ ಎಡದೊರೆ-೨೦೦೦, ಬೆಳ್ವೊಲ-೩೦೦, ಮಾಸವಾಡಿ-೧೪೦, ಕುಕನೂರು-೩೦, ಕೆಳವಾಡಿ-೩೦೦ರ ಪ್ರದೇಶಗಳನ್ನು ಗಂಗರ ಭೂತುಗ ಪೆರ್ಮಾಡಿಯ ಸಾಮಂತನಾದ ಬುಟ್ಟಯ್ಯನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಕುಕನೂರಿನಲ್ಲಿ ದೊರೆತಿರುವ ತಾಮ್ರಶಾಸನವು ಇಮ್ಮಡಿ ಮಾರಸಿಂಹನ ಕಾಲದ್ದಾಗಿದ್ದು, ಇದು ಗಂಗರ ಪಾರಂಪರಿಕ ವಂಶಾವಳಿಯ ಮಾಹಿತಿ ನೀಡುತ್ತದೆ.[೩೭]

ಕುಷ್ಟಗಿಯ ಸಮೀಪದಲ್ಲಿರುವ ಕೊಪ್ಪಳದಲ್ಲಿಯೂ ಗಂಗರ ಕಾಲದ ಅನೇಕ ನಿಷಧಿ ಕಲ್ಲುಗಳಿವೆ. ಇವುಗಳ ಮೇಲಿರುವ ಶಾಸನಗಳಿಂದ ಗಂಗರ ವಂಶದ ಅನೇಕರು ಕೊಪ್ಪಳಕ್ಕೆ ಬಂದು ಜಿನದೀಕ್ಷೆ ಪಡೆದು ಸದ್ಗತಿ ಪಡೆದಿರುವದು ತಿಳಿದುಬರುತ್ತದೆ. ಗಂಗರ ಅರಸ ಭೂತುಗನ ಪತ್ನಿ ಪದ್ಮಬ್ಬೆ, ಗಂಗ ಎರೆಯಂಗನ ಮಗಳಾದ ಗೋನಂಬೆ ಕಂತಿ, ಮಾರಸಿಂಗನ ತಂಗಿ ಜೆಜ್ಜಬ್ಬರಸಿ, ಚಂದಿಬ್ಬರಸಿ ಮೊದಲಾದವರು ಕೊಪ್ಪಳಕ್ಕೆ ಬಂದು ಸದ್ಗತಿ ಹೊಂದಿದರು.[೩೮] ಈ ಮೇಲಿನ ಅಂಶಗಳಿಂದ ಕುಷ್ಟಗಿ ತಾಲ್ಲೂಕಿನ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳ ಬಹುದಾಗಿದೆ.

ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟರ ನಂತರ ಕರ್ನಾಟಕ ಪ್ರದೇಶವನ್ನಾಳಿದವರು ಕಲ್ಯಾಣ ಚಾಲುಕ್ಯರು. ಇವರು ಬಾದಾಮಿ ಚಾಲುಕ್ಯರ ವಂಶಸ್ಥರಾಗಿದ್ದು, ಕಲ್ಯಾಣ(ಬೀದರ-ಜಿಲ್ಲೆ)ವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.ಸು.೯೭೩ ರಿಂದ ಕ್ರಿ.ಶ.ಸು.೧೧೮೯ರವರೆಗೆ ಆಳ್ವಿಕೆ ನಡೆಸಿದರು. ಎರಡನೇ ತೈಲಪ ಈ ಮನೆತನದ ಸ್ಥಾಪಕನಾಗಿದ್ದು, ಆರನೇ ವಿಕ್ರಮಾದಿತ್ಯ ಮತ್ತು ಮೂರನೇ ಸೋಮೇಶ್ವರ ಪ್ರಮುಖ ಅರಸರು. ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕುರುಹಾಗಿ ಇವರ ಕಾಲದ ಒಟ್ಟು ಹದಿನಾಲ್ಕು ಶಾಸನಗಳು ಕಂಡುಬಂದಿವೆ. ಅವುಗಳು ಹಿರೇಮನ್ನಾಪುರ, ಪುರ, ಗೋತಗಿ ಮತ್ತು ಅಂಟೂರಠಾಣ ಗ್ರಾಮಗಳಲ್ಲಿ ತಲಾ ಎರಡರಂತೆ ಒಟ್ಟು ಎಂಟು ಶಾಸನಗಳು, ಹನುಮನಾಳ, ಹೆಸರೂರು, ಸಿರಗುಪ್ಪ, ಮಂಕಲ್ಕೇರಿ, ಮುದೇನೂರು, ತಾವರಗೆರೆ ಗ್ರಾಮಗಳಲ್ಲಿ ತಲಾ ಒಂದರಂತೆ ಒಟ್ಟು ಆರು ಶಾಸನಗಳು ದೊರೆತಿವೆ.

ಹಿರೇಮನ್ನಾಪುರ ಗ್ರಾಮದಲ್ಲಿರುವ ಕ್ರಿ.ಶ.೯೯೭ರ ಶಾಸನವು ಚಾಲುಕ್ಯ ಜಯಸಿಂಹನ ವಂಶಾವಳಿಯ ಮಾಹಿತಿಯನ್ನು ನೀಡುತ್ತದೆ.

'ತೈಲಪದೇವ ದಕ್ಷಲಕ್ಷಾತಳ
ಮಂ ಪ್ರತಿಪಾಲಿಸಿ ನೀತಿಯ ರಕ್ಷಿಸಿದನಿಂತು
ತೈಲನರೇನ್ದ್ರಂ ॥ ಆತನಗ್ರಸುತಂ ಸತ್ಯಾಶ್ರಯ
ವಲ್ಲಭ ಸತ್ಯಾಶ್ರಯನ ಸುತ ವಿಕ್ರಮಾದಿ
ತ್ಯದೇವ ಸ್ವಸ್ತಿಭುವನ ಭವನಾಷ್ರಯ ಶ್ರೀಪ್ರಿಥ್ವೀ
ವಲ್ಲಭ ಮಹಾರಾಜಾಧಿರಾಜಂ ಪರಮೇಶ್ವ
ರಂ ಪರಮಭಟ್ಟಾರಕಂ ಶ್ರೀಜಯಸಿಂಹದೇವ'[೩೯]

ಇದೇ ಗ್ರಾಮದಲ್ಲಿರುವ ಕ್ರಿ.ಶ.ಸು.೧೧ನೆಯ ಶತಮಾನದ ಇನ್ನೊಂದು ಶಾಸನ[೪೦] ಚಾಲುಕ್ಯರ ಕಾಲದ್ದೇ ಆಗಿದ್ದು ಅದರಲ್ಲಿ ಅಹಮಲ್ಲದೇವನ ಸಾಮಂತ.......ವರ್ಮದೇವನು (ಹೆಸರು ತ್ರುಟಿತಗೊಂಡಿದೆ) ಎಡದೊರೆ-೨೦೦೦ನ್ನು ಆಳುತ್ತಿದ್ದಂತೆ ವಿವರವಿದೆ. ಇದರಲ್ಲಿ ಕರಡಿಕಲ್ಲು-೩೦೦, ನರೆಯಂಗಲ್-೧೨ಗಳ ಉಲ್ಲೇಖವಿದೆ. ಪುರ ಗ್ರಾಮದಲ್ಲಿರುವ ಕ್ರಿ.ಶ.೧೦೧೮ರ ಶಾಸನದಲ್ಲಿ[೪೧] ಚಾಳುಕ್ಯ ಜಗದೇಕಮಲ್ಲ(ಎರಡನೇ ಜಯಸಿಂಹ)ನ ಮತ್ತು ಅವನ ದಂಡನಾಯಕನ(ಹೆಸರು ಹಾಳಾಗಿದೆ) ಉಲ್ಲೇಖವಿದೆ. ಈ ದಂಡನಾಯಕನು ಕೆಳವಾಡಿ-೩೦೦ನ್ನು ಆಳುತ್ತಿದ್ದಾಗ, ಅಗ್ರಹಾರ ಬೈಳೆನೆಗೆಯೂರಿನ ಮುಖ್ಯಸ್ಥನಾದ ಕೊಣ್ಡಯವಾರಿ ಅಯ್ಯಣಯ್ಯನಿಗೆ ಪಂಪಾತೀರ್ಥದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಐದು ಮತ್ತರು ಗದ್ದೆಯನ್ನು, ಹನ್ನೆರಡು ಜನ ಬ್ರಾಹ್ಮಣರಿಗೆ ಮತ್ತು ಮೂಲಸ್ಥಾನ ದೇವರಿಗೆ ಬೇರೆ ಬೇರೆಯಾಗಿ ಭೂದಾನ ನೀಡಿದ ಉಲ್ಲೇಖವಿದೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.ಸು.೧೨ನೆಯ ಶತಮಾನದ ಇನ್ನೊಂದು ಶಾಸನದ[೪೨] ಪ್ರಕಾರ ಬಾಹತ್ತರ ನಿಯೋಗಾಧಿಪತಿ ರೇಚಿಮಯ್ಯ ದಂಡನಾಯಕನ ಅಧಿಕಾರಿ ಚಿಮಯ್ಯದಂಡನಾಯಕನು ಮುಖ್ಯವಾಗಿ ಶ್ರೀಕರಣಗಳು ನವಿಲೆ, ಅಗ್ರಹಾರ

ಸಿಂಧನೂರು, ಮಾದನೂರು, ನಿಡುಗೊಳ ಮುಂತಾದ ಸ್ಥಳಗಳ ಸಮಸ್ತ ನಾನಾದೇಸಿ ಮುಂಮರಿದಂಡಗಳು ಮಹಾನಾಡಾಗಿ ದೇವಸಭೆ, ಬ್ರಹ್ಮಸಭೆ, ರಾಜಸಭೆಯ ಸನ್ನಿಧಾನದಲ್ಲಿ ಸಭೆ ಸೇರಿದ್ದರು. ಇವರ ಜೊತೆಗೆ ಎಂಟುಹಿಟ್ಟು ಸಹಿತ ನಲವತ್ತೆಂಟು ಮನ್ನೆಯರು ಈ ಮಹಾಸಭೆಯಲ್ಲಿ ಸೇರಿದ್ದರು. ಇವರೆಲ್ಲಾ ಒಮ್ಮತದಿಂದ ಶ್ರೀಗವರೇಶ್ವರದೇವರ ಪೂಜೆಗೆ ಒಂದು ಮತ್ತರನ್ನು ದೇವರ ದತ್ತಿಯಾಗಿ ಇಪ್ಪತ್ತೈದು ಮನೆಗಳನ್ನು ನೀಡುತ್ತಾರೆ. ಹಾಗೆಯೆ ಅರಮನೆಯ ಸೇನಭೋವ ಬಸವರಸನಿಗೆ ಅರಮನೆಯ ಬಡಗಿ ಕಾಳೋಜ ಕಲ್ಲೋಜರಿಗೆ ಭೂಮಿ ದಾನ ನೀಡಿದ ವಿವರಗಳಿವೆ.

ಗೋತಗಿ ಗ್ರಾಮದಲ್ಲಿರುವ ಕ್ರಿ.ಶ.ಸು.೧೦೨೪ರ ಶಾಸನವು[೪೩] ಚಾಲುಕ್ಯ ಜಗದೇಕಮಲ್ಲನ ಕಾಲದ್ದಾಗಿದ್ದು ಇವನು ಕಲ್ಯಾಣಪುರದ ನೆಲೆವೀಡಿನಲ್ಲಿ ಆಳುತ್ತಿದ್ದಾಗ, ಅವನ ಪತ್ನಿಯಾದ ಪದ್ಮಲ ದೇವಿಯು ಕರಡಿಕಲ್ಲ-೩೦೦ರ ಬಳಿಯ ಗೋವನ್ತಿಗೆಯ ಸ್ವಯಂಭು ಕಲಿದೇವಸ್ವಾಮಿಗೆ ಕರಿಯನೆಲ ೫೪ ಮತ್ತರು, ೪೫೦ ಕಮ್ಮ ಭೂಮಿ, ೪೫೦ ಕಮ್ಮ ತೋಂಟವನ್ನು, ಒಟ್ಟು ೫೫ ಮತ್ತರು ಭೂಮಿಯನ್ನು ದಾನವಾಗಿ ನೀಡಿದ ಬಗ್ಗೆ ವಿವರವಿದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಶಾಸನವು[೪೪] ಕ್ರಿ.ಶ.೧೦೪೫ರ ಕಲ್ಯಾಣ ಚಾಳುಕ್ಯ ಅರಸ ತ್ರೈಲೋಕ್ಯಮಲ್ಲನ ಕಾಲದ್ದಾಗಿದೆ. ಇವನು ಮೊರಗನೂರ ಬೀಡಿನಲ್ಲಿದ್ದಾಗ ಎಡದೊರೆ-೨೦೦೦ದ ಕಂಪಣ ಕರಡಿಕಲ್ಲು-೩೦೦ರ ಬಳಿಯ ಗೋವನ್ತಿಗೆಯಲ್ಲಿ ಚಾಮಣ್ಣ ಭಟ್ಟೋಪಾಧ್ಯಾಯನಿಗೆ ಧಾರಾಪೂರ್ವಕವಾಗಿ ೩೦೦ ಮತ್ತರು ಕರಿಯ ಭೂಮಿಯನ್ನು ಮಾನ್ಯವಾಗಿ ನೀಡಿದ ವಿವರ ತಿಳಿದುಬರುತ್ತದೆ.

ಅಂಟೂರತಾಣ ಗ್ರಾಮದಲ್ಲಿರುವ ಕ್ರಿ.ಶ.೧೦೮೨ರ ಶಾಸನವು[೪೫] ಜಗದೇಕಮಲ್ಲನ ಕಾಲದ್ದಾಗಿದೆ. ಜಗದೇಕಮಲ್ಲನ ಮಹಾಮಣ್ಡಳೇಶ್ವರ ಜಗದೇಕಮಲ್ಲ ಪೆಮ್ಮಾಡಿದೇವರಸನು ಹತ್ತರತಾಣ(ಅಂಟೂರುತಾಣ)ದ ಶ್ರೀಸ್ವಯಂಭುದೇವರ ಅಂಗಭೋಗ, ನೈವೇದ್ಯಕ್ಕೆ ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ಕೊಟ್ಟ ದಾನಗಳನ್ನು ಉಲ್ಲೇಖಿಸಿದೆ. ಇನ್ನೊಂದು ಕ್ರಿ.ಶ.೧೧೯೫ರ ಶಾಸನವು[೪೬] ತ್ರಿಭುವನಮಲ್ಲದೇವನ ಕಾಲದ್ದಾಗಿದೆ. ಇವನ ಆಳ್ವಿಕೆಯಲ್ಲಿ ಮಹಾಪ್ರಧಾನ ಧರ್ಮಾಧ್ಯಕ್ಷ ಸೋಮೇಶ್ವರ ಭಟ್ಟೋಪಾಧ್ಯಯರು ಮತ್ತು ಅಚ್ಚುಪನ್ನಾಯದ ಅಧಿಷ್ಠಾಯಕ ದಣ್ಡನಾಯಕ ಮಹಾವಿಷ್ಣುವರಸರು ಇನ್ನೂ ಕೆಲವರು ಜೊತೆಗೂಡಿ ಪತ್ತರಟಾಣದ ಅಧಿಕಾರವರ್ಗದವರೂ ಸೇರಿ ಪೆಂದೆಯಕೆರೆಯಲ್ಲಿ ಸತ್ರಶಾಲೆಯನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.ಸು.೧೧-೧೨ನೆಯ ಶತಮಾನದ ಶಾಸನವು[೪೭] ತ್ರಿಭುವಸಮಲ್ಲದೇವನ ಕಾಲದ್ದಾಗಿದೆ. ಇದರಲ್ಲಿ ದಂಡನಾಯಕ ಸೋಭನರಸ ಪತ್ತರತಾಣ, ಬಮ್ಮೆಯನಾಯಕ ಮತ್ತು ಕೇಶವದೇವರ ಉಲ್ಲೇಖ ಕಂಡುಬರುತ್ತದೆ.

ಹನುಮನಾಳ ಗ್ರಾಮದಲ್ಲಿರುವ ಕ್ರಿ.ಶ.೧೧೯೯ರ ಶಾಸನವು[೪೮] ಚಾಳುಕ್ಯರಸ ತ್ರಿಭುವನ ಮಲ್ಲದೇವನ ಕಾಲದ್ದಾಗಿದೆ. ವೀರಬಣಂಜು ಧರ್ಮಕ್ಕೆ ಸೇರಿದ ಮತಿಯರ ಸಿಂಗಿಸೆಟ್ಟಿ, ಕೇತಿಸೆಟ್ಟಿ, ರೇವಯಗೇತಿಸೆಟ್ಟಿ, ಮಂಗಲದ ಕಲೆಯ ಬಾಚಿಸೆಟ್ಟಿ, ಬಾದಾಮಿಯ ಬಾತಿದೇವಸೆಟ್ಟಿ, ಹಾವರಿಯ ಹೆಚಿಸೆಟ್ಟಿ, ತಿಳಿವಳ್ಳಿಯ ಕರಿಯಮ್ಮಸೆಟ್ಟಿ, ಮೊತ್ತಕಾರ ಸಿರಿಯಸೆಟ್ಟಿ, ಕಾರಿಯ ಕೇತಿಸೆಟ್ಟಿ, ಕೆರುವೂರ ಎಡವಂಚಟ್ಟಿಸೆಟ್ಟಿ, ಸಿಗ್ಗಾವೆಯ ಭರವೆಸೆಟ್ಟಿ, ನಿಟ್ಟಸಿಂಗಿಯ ಬಬ್ಬುಳಸಿರಿಸೆಟ್ಟಿ, ಹೊರಿಸೆಟ್ಟಿ,

[illegible]

ಹುದ್ದಮನ ಸೋವಿಸೆಟ್ಟಿ, ಗಾಂಚಿಪೂರ ಆರಿಯಪಲಸೆಟ್ಟಿ, ರಾಜಪೂರ ನಾಗುಲಸೆಟ್ಟಿ, ಚಾಮುಣ್ಡಯ್ಯಸೆಟ್ಟಿ ಮುಂತಾದವರಲ್ಲದೆ ತಂಬುಲಿಗ ಸಾಸಿರ್ವ್ವರು, ಗವರಿಯರು, ಗಾತ್ರಿಗರು, ಅಶೇಷ ಸೆಟ್ಟಿಗಳು ಸೇರಿ ಕಿಸುಕಾಡೆಪ್ಪತ್ತರ ಬಳಿಯ ಬಾಡದ ಆಲುಂಗೆರೆಯ ಸಿಂಗಗಾಮುಂಡನು ಬಹುಶಃ ತಂಬುಲಿಗ ಸಾಸಿರ್ವ್ವರ ಎತ್ತು ಮುಂತಾದವನ್ನು ಕಳ್ಳರಿಂದ? ಬಿಡಿಸಿ ತಂದಾಗ ಅವನಿಗೆ ದಾನ ನೀಡಿದ ವಿಷಯ ತಿಳಿದುಬರುತ್ತದೆ.

ಹೆಸರೂರ ಗ್ರಾಮದಲ್ಲಿರುವ ಕ್ರಿ.ಶ.೧೧೧೦ಳರ ಶಾಸನದಲ್ಲಿ[೪೯] ಚಾಳುಕ್ಯರಸ ತ್ರಿಭುವನಮಲ್ಲ ದೇವನ ಕಾಲದ್ದಾಗಿದೆ. ಚಾಳುಕ್ಯರಾಯರ ಕುಲದೈವದ ಒಕ್ಕಲುಗಳು, ಮಣ್ಣಕೆರೆಯ ೫೦೦ ತಂತ್ರರು, ಊರೊಡೆಯ ಪನ್ನಿರ್ವ್ವರು ಆದಿತ್ಯದೇವರ ಅಂಗಭೋಗಕ್ಕೆ, ಜೀರ್ಣೋದ್ಧಾರಕ್ಕೆ ಚಾಮೋಜನ ಮಗ ಬೊಪ್ಪಣ್ಣನಿಗೆ ಹೆಗ್ಗೆರೆಯ ಪೂರ್ವಕ್ಕೆ ನಾಲ್ಕು ಮತ್ತರ ದಾನ ನೀಡಿದ ಉಲ್ಲೇಖವಿದೆ. ಸಿರಗುಪ್ಪ ಗ್ರಾಮದಲ್ಲಿರುವ ಕ್ರಿ.ಶ.ಸು.೧೧೧೦ರ ಶಾಸನವು[೫೦] ಸಿರಗೊಪ್ಪದ ರಾಚಮಗಾವುಣ್ಡ, ನಿರಮೊಪ್ಪ ಆಚಗಾವುಣ್ಡನು ಇದ್ದಾಗ ತುರುಗಳ್ಳರೊಡನೆ ಹೋರಾಡಿ ತಳಾರಿ ಕಾಳಬೋವನು ಮಡಿಯುತ್ತಾನೆ. ಇವನ ಮಗ ಬಮ್ಮಪನಿಗೆ ಹೊಲ ಹಾಗೂ ಮನೆಯನ್ನು ಮಾನ್ಯವಾಗಿ ನೀಡಿದ್ದನ್ನು ತಿಳಿಸುತ್ತದೆ.

ಮಂಕಲ್ಕೇರಿ ಗ್ರಾಮದಲ್ಲಿರುವ ಕ್ರಿ.ಶ.೧೧೨೩ರ ಶಾಸನವು[೫೧] ಚಾಳುಕ್ಯ ತ್ರಿಭುವನಮಲ್ಲನ ಕಾಲದ್ದಾಗಿದೆ. ತ್ರಿಭುವನಮಲ್ಲನು ಜಯಂತಿಪುರದಿಂದ ಆಳುತ್ತಿದ್ದಾಗ, ಉಚ್ಚಂಗಿಯ ಮಾಚ ಗಾವುಂಡನು ಊರ ಮುಂದಿನ ಮಲ್ಲೇಶ್ವರದೇವರ ಧೂಪದೀಪ, ನೈವೇದ್ಯಕ್ಕೆಂದು ಮೂಡಕೇರಿಯ ಬೊಮ್ಮಗಾವುಂಡನ ಎರೆಯ ಹೊಲದಲ್ಲಿ ಮೂರು ಮತ್ತರನ್ನು ಕ್ರಯಕ್ಕೆ ಪಡೆದು, ಈ ದಾನವನ್ನು ಸಂಕರಾಶಿ ಪಂಡಿತರ ಕೈಗೆ ನೀಡುತ್ತಾನೆ. ಈ ಧರ್ಮವನ್ನು ಕಲ್ಕೆರೆಯ ಎಂಟು ಗಾವುಂಡುಗಳು ಧರ್ಮದ ಹಣವನ್ನು ಪಡೆದು ಪ್ರತಿಪಾಳಿಸಬೇಕೆಂದಿದೆ. ನಾಮಗಾವುಂಡನು ಕಬ್ಬಳ್ಳಿಯ ಗುಂಡಿನ ದಕ್ಷಿಣಕ್ಕೆ ಒಂದು ಮತ್ತರು ಕೆಂಪುಮಣ್ಣಿನ ಹೊಲವನ್ನು ದೇವರ ನೈವೇದ್ಯಕ್ಕಾಗಿ ಬಿಟ್ಟಿರುವ ಮಾಹಿತಿ ಇದೆ. ತಾವರಗೆರೆ ಗ್ರಾಮದಲ್ಲಿರುವ ಶಾಸನವು[೫೨] ಕ್ರಿ.ಶ.೧೨ನೆಯ ಶತಮಾನದ್ದಾಗಿದೆ. ಇದರಲ್ಲಿ ಕುಂತಳ, ಕೆಳ್ವಡಿನಾಡು, ತಾವರಗೆರೆ, ತುಂಗಭದ್ರೆ, ವಾಜೇಶ್ವರ ಮತ್ತು ಸೋಮೇಶ್ವರ ಮುಂತಾದ ಉಲ್ಲೇಖವಿದೆ. ಮುದೇನೂರು ಗ್ರಾಮದಲ್ಲಿರುವ ಕ್ರಿ.ಶ.ಸು.೧೨ನೆಯ ಶತಮಾನ ಶಾಸನವು[೫೩] ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಈ ಶಾಸನದ ವಿಷಯ ಸ್ಪಷ್ಟವಾಗಿಲ್ಲ.

ಈ ಮೇಲೆ ಚರ್ಚಿಸಿರುವ ಎಲ್ಲಾ ಶಾಸನಗಳು ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಕಂಡುಬಂದಿವೆ. ಇವುಗಳಲ್ಲದೆ ಕಲ್ಯಾಣ ಚಾಲುಕ್ಯರ ಕಾಲದ ೨೪ ದೇವಾಲಯಗಳು ಈ ತಾಲ್ಲೂಕಿನಲ್ಲಿವೆ. ಈ ದೇವಾಲಯಗಳ ಬಗ್ಗೆ ಐದನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಮೇಲಿನ ಅಂಶಗಳಿಂದ ಕುಷ್ಟಗಿ ತಾಲ್ಲೂಕಿನ ಪ್ರದೇಶವು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿರುವ ಅಂಶ ಸ್ಪಷ್ಟವಾಗುತ್ತದೆ.

ಕಲಚುರಿಗಳು

ಕಲ್ಯಾಣ ಚಾಲುಕ್ಯರ ನಂತರ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ನಡೆಸಿದವರು ಕಲಚುರಿಗಳು. ಇವರು ಕ್ರಿ.ಶ.೧೧೫೭ ರಿಂದ ಕ್ರಿ.ಶ.೧೧೮೪ರವರೆಗೆ ಆಳ್ವಿಕೆ ನಡೆಸಿದರು. ಕಲಚುರಿವಂಶಗಳು ಗುಜರಾತ್ ಮಾಳ್ವ ಮತ್ತು ಕೊಂಕಣಗಳಲ್ಲಿ ಆಳುತ್ತಿದ್ದವು. ಕರ್ನಾಟಕದ ಕಲಚುರಿಗಳು ತಮ್ಮನ್ನು 'ಕಾಲಂಜರ ಪುರಾರವರಾಧೀಶ್ವರ'ರೆಂದು ಕರೆದುಕೊಂಡಿರುವುದರಿಂದ, ಇವರ ಪೂರ್ವಜರು ಮಧ್ಯಭಾರತದ 'ಕಾಲೇಂಜರ'ದವರಿರಬಹುದೆಂದು ಊಹಿಸಲಾಗಿದೆ. ಇವರು ಮೊದಲಿಗೆ ಚೇದಿ ರಾಜ್ಯವನ್ನು ಆಳುತ್ತಿದ್ದು ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ ಸಾಮಂತರು ಮತ್ತು ಸಂಬಂಧಿಗಳಾಗಿದ್ದರು. ಉಚಿತನಿಂದ ಆರಂಭವಾದ ಕಲಚುರಿಗಳ ಆಳ್ವಿಕೆಯಲ್ಲಿ ಎರಡನೇ ಬಿಜ್ಜಳ ಪ್ರಮುಖನಾಗಿದ್ದಾನೆ.

ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಕಲಚುರಿಗಳ ಕಾಲದ ಮೂರು ಶಾಸನಗಳು ದೊರೆತಿದ್ದು, ಅವು ಚಳಗೇರಾದಲ್ಲಿ ಒಂದು ಮತ್ತು ಪುರದಲ್ಲಿ ಎರಡು ಇವೆ. ಚಳಗೇರಿಯ ಕ್ರಿ.ಶ.೧೧೭೨ರ ಶಾಸನವು[೫೪] ಕಳಚುರಿ ಚಕ್ರವರ್ತಿ ರಾಯಮುರಾರಿ ಸೋವಿದೇವನ ಕಾಲದ್ದಾಗಿದೆ. ಬೂಚಮದಂಡನಾಯಕನು ಕಿಸುಗಾಡಿನ ಕೆಲ್ಲಂಗೆರೆಯಲ್ಲಿ ಲಕ್ಷ್ಮಿನಾರಾಯಣ ದೇವಾಲಯವನ್ನು ಕಟ್ಟಿಸುತ್ತಾನೆ. ಈ ದೇವಾಲಯಕ್ಕೆ ಲಕ್ಷ್ಮಿದೇವ ದಂಡನಾಯಕನ ಅನುಮತಿ ಪಡೆದು, ಭೂಮಿಯನ್ನು ಕ್ರಯವಾಗಿ ಪಡೆದು ದಾನ ನೀಡುತ್ತಾನೆ. ನಿಖರಳು, ಪ್ರಜೆಗಳು, ಅಧಿಕಾರಿಗಳು ನೀಡಿದ ದಾನದ ಮಾಹಿತಿ ನೀಡುತ್ತದೆ.

ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನವು[೫೫] ರಾಯಮುರಾರಿ ಸೋವಿ ದೇವನ ಕಾಲದ್ದು. ಅವನ ಆಳ್ವಿಕೆ ಅಯ್ಯಾವೊಳೆಯ ಬಳುವಣಿಗೆಯ ಮುಂಮುರಿದಣ್ಡಗಳ, ಅಲ್ಲದೆ ದೇಚರಸ, ಮಹಾದೇವರನ್ನು ಉಲ್ಲೇಖಿಸುತ್ತವೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೨-೧೩ನೆಯ ಶತಮಾನದ ಇನ್ನೊಂದು ಶಾಸನವು[೫೬] ಕಲಚುರಿ ಸಂಕಮದೇವನ ಕಾಲದ್ದಾಗಿದೆ. ಇಲ್ಲಿಯ ಬಸವರಸ, ಅಯ್ಯಪರಸ, ಕೇಶವದೇವ ಹದಿನೈದು ಸಮಯದವರು ಸಂಕ್ರಮಣದಲ್ಲಿ ಕೊಟ್ಟ ದಾನ ಗವರೇಶ್ವರದೇವರ ಪೂಜೆ-ಪುನಸ್ಕಾರ, ನೈವೇದ್ಯಕ್ಕೆ ಒಂದು ಗಾಣವನ್ನು ಗಾಣಿಗರು ನಂದಾ ದೀಪಕ್ಕೆಂದು, ಸೊಳಸಿಗೆ ಎಣ್ಣೆಯನ್ನು, ದವಸ, ಅಡಿಕೆ, ಅರುಶಿನ, ಮೆಣಸಿನ ಮೇಲಿನ ತೆರಿಗೆಯನ್ನು ಕೊಟ್ಟರು. ಇವರಲ್ಲದೆ ಮುಮ್ಮರಿದಂಡಗಳು ಮತ್ತು ಪ್ರಜೆಗಳು ಬೇರೆ ಬೇರೆ ದಾನಗಳನ್ನು ನೀಡಿದ ಉಲ್ಲೇಖವಿದೆ.

ಕುಷ್ಟಗಿಯ ಸಮೀಪದಲ್ಲಿರುವ ಕುಕನೂರಿನಲ್ಲಿ(ಯಲಬುರ್ಗಾ.ತಾ) ಕ್ರಿ.ಶ.೧೧೬೩ರ ಶಾಸನವು[೫೭] ಇಮ್ಮಡಿ ಬಿಜ್ಜಳನ ಕಾಲದ್ದಾಗಿದ್ದು ಹಂಪೆಯ ವಿರುಪಾಕ್ಷನ ಸನ್ನಿಧಿಯಲ್ಲಿ ಮಾಡಿದ ದಾನದ ಬಗ್ಗೆ ವಿವರಿಸುತ್ತದೆ. ಈ ಶಾಸನ ಬಿಜ್ಜಳನ ಕೈಕೆಳಗೆ ಅಮ್ಮಣರಸ, ಬೊಪ್ಪಣ್ಣನಾಯಕ, ಬೀವರಸ, ಸಾಯಣ, ವಿಟ್ಟಪಯ್ಯ, ಬಲದೇವ ದಂಡನಾಯಕರನ್ನಲ್ಲದೆ ಕರಣಗಳಾದ ಮಧುಸೂಧನ, ಆದಿತ್ಯದೇವ, ಸೋಮರಾಜ, ಬೊಪ್ಪದೇವ ಮತ್ತು ಚಾವುಂಡರನ್ನು ಉಲ್ಲೇಖಿಸಿದೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೧೭೦ರ ಶಾಸನವು[೫೮] ಕಲಚುರಿ ಕನ್ನಮನಿಂದ ಸೋವಿದೇವನ

ವರೆಗಿನ ಅವರ ವಂಶಾವಳಿಯ ಮಾಹಿತಿಯನ್ನು ನೀಡಿದ್ದು, ಸೋವಿದೇವನು ಮೋದಯನೂರ (ಮೂದೇನೂರು) ನೆಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ. ಇವನ ದಂಡಾಧೀಶನಾಗಿ ತೇಜಿರಾಜ ನಿರುತ್ತಾನೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೧೭೮ರ ಇನ್ನೊಂದು ಶಾಸನವು[೫೯] ಸಂಕಮದೇವನು ಮೊದೆಗನೂರಿನಲ್ಲಿದ್ದಾಗ(ಮಾದಿನೂರು) ಇವನ ಸೇನಾನಿ ಧಂನುಗಿ (ಧನ್ಯಚಮೂಪನು) ಬೆಳ್ವೊಲ ೩೦೦ರನ್ನು ಆಳುತ್ತಿದ್ದ. ಇವನು ತನ್ನ ತಾಯಿ ಚಂಡಾಬಾಯಿ, ಅಕ್ಕ ಲಳಿಯದೇವಿಯರೊಡಗೂಡಿ ಕುಕನೂರಿಗೆ ಬಂದು ಜೇಷ್ಠಾದೇವಿಯ ಪೂಜೆ ಮಾಡಿಸಿದುದನ್ನು ಉಲ್ಲೇಖಿಸುತ್ತದೆ. ಕುಷ್ಟಗಿ ಪ್ರದೇಶದ ಸಮೀಪದಲ್ಲಿರುವ ಗ್ರಾಮದಲ್ಲಿರುವ ಕ್ರಿ.ಶ.೧೧೭೭ರ ಶಾಸನದಲ್ಲಿ[೬೦] ಏಚಿಮಯ್ಯ ನಾಯಕನೆಂಬುವನು, ಕವಲೂರಿನ ಹರಿಹರ ದೇವಾಲಯವನ್ನು ನಿರ್ಮಿಸಿ, ಅದರ ಪೂಜಾ ಕಾರ್ಯಗಳಿಗೆ ಭೂದಾನ ನೀಡಿದ ವಿವರವಿದೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೧೭೯ರ ಇನ್ನೊಂದು ಶಾಸನದ ಪ್ರಕಾರ ಸಂಕಮದೇವನು ಕೌರೂರ(ಕವಲೂರು) ಹರಿಹರೇಶ್ವರ ದೇವಾಲಯಕ್ಕೆ ಎಡೆಹಳ್ಳಗೇರಿಯನ್ನು ಬೀಡುತ್ತಾನೆ. ಇವನ ಮಾಂಡಳಿಕನಾಗಿ ಬಾಚಿದೇವ ನಿರುತ್ತಾನೆ ಎಂಬ ಮಾಹಿತಿ ನೀಡುತ್ತದೆ. ಅಳವಂಡಿಯಲ್ಲಿರುವ ಕ್ರಿ.ಶ.೧೧೮೨ರ ಶಾಸನವು[೬೧] ಕಲಚುರಿಅಹವಮಲ್ಲನ ಕಾಲದಾಗಿದ್ದು ಅಳವಂಡಿಯ ಮಹಾಜನರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಮೇಲಿನ ವಿಚಾರಗಳನ್ನು ಗಮನಿಸಿದಾಗ ಕುಷ್ಟಗಿ ಪ್ರದೇಶ ಕಳಚೂರಿ ಅರಸರು ಆಳಿದ್ದರ ಕುರಿತು ದಾಖಲೆಗಳು ದೊರಕುತ್ತವೆ.

ಹೊಯ್ಸಳರು

ಕಲ್ಯಾಣ ಚಾಲುಕ್ಯರ ಪತನಾನಂತರ ಅವರ ಸಾಮಂತರಾಗಿದ್ದ ಹೊಯ್ಸಳರು ಸ್ವತಂತ್ರರಾಗಿ ಆಳ್ವಿಕೆ ಆರಂಭಿಸಿದರು. ಇವರು ಕ್ರಿ.ಶ.೧೦೦೬ ರಿಂದ ಕ್ರಿ.ಶ.೧೩೪೬ರವರೆಗೆ ಕರ್ನಾಟಕದ ಬಹುಭಾಗ ಮತ್ತು ತಮಿಳುನಾಡಿನ ಕೆಲವು ಭಾಗಗಳಲ್ಲಿ ಆಡಳಿತ ನಡೆಸಿದರು. ನೃಪಕಾಮ(ಸಳ)ನಿಂದ ಸ್ಥಾಪನೆಗೊಂಡ ಈ ಮನೆತನದಲ್ಲಿ ವಿಷ್ಣುವರ್ಧನ, ಇಮ್ಮಡಿ ಬಲ್ಲಾಳ ಮತ್ತು ಮುಮ್ಮಡಿ ಬಲ್ಲಾಳರು ಸಮರ್ಥ ಅರಸರಾಗಿ ಆಡಳಿತ ನಡೆಸಿದರು.

ಹೊಯ್ಸಳರ ಅರಸರಲ್ಲಿ ಸರ್ವಶ್ರೇಷ್ಠ ಅರಸನೆಂದು ಖ್ಯಾತಿ ಪಡೆದಿರುವ ವಿಷ್ಣುವರ್ಧನನು ತನ್ನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ.೧೧೩೭ರಲ್ಲಿ ಬಂಕಾಪುರ, ಬನವಾಸಿ, ಹಾನಗಲ್ಲು ಮತ್ತು ಕುಷ್ಟಗಿ ಸಮೀಪದ ಲಕ್ಕುಂಡಿಗಳನ್ನು ಜಯಿಸಿದನು. ಈ ವಿಜಯದ ಸ್ಮರಣಾರ್ಥವಾಗಿ ತಲಕಾಡು, ಬೇಲೂರು, ಮೇಲುಕೋಟೆ, ಬಂಕಾಪುರ ಮತ್ತು ಕುಷ್ಟಗಿ ಸಮೀಪದಲ್ಲಿರುವ ಗದಗಗಳಲ್ಲಿ ವೀರನಾರಾಯಣ ದೇವಾಲಯಗಳನ್ನು ಕಟ್ಟಿಸಿದನು.

ಹೊಯ್ಸಳರ ಇನ್ನೊರ್ವ ಶ್ರೇಷ್ಠ ಅರಸನಾದ ಇಮ್ಮಡಿ ಬಲ್ಲಾಳ(೨ನೇ ವೀರಬಲ್ಲಾಳ)ನ ಕಾಲದ ಶಾಸನಗಳು ಕುಷ್ಟಗಿ ಪ್ರದೇಶದ ನೆರೆಯ ಗದಗ,[೬೨] ಬೆಂತೂರು,[೬೩] ಮೇವುಂಡಿ,[೬೪] ನಾಗಾವಿ,[೬೫] ಬಳಗಾನೂರು,[೬೬] ಮುಳಗುಂದ,[೬೭] ಲಕ್ಕುಂಡಿ,[೬೮] ನರೆಗಲ್[೬೯]ಗಳಲ್ಲಿ ಕಂಡುಬಂದಿವೆ. ಕ್ರಿ.ಶ.೧೧೯೩ರಲ್ಲಿ ಕುಷ್ಟಗಿಯು ಸಮೀಪದ ಲೊಕ್ಕಿಗುಂಡಿ(ಲಕ್ಕುಂಡಿ)ಯನ್ನು ಎರಡನೇ ಬಲ್ಲಾಳನ ತಾತ್ಕಾಲಿಕ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ತಿಳಿದುಬರುತ್ತದೆ.[೭೦] ಈ ಬಲ್ಲಾಳನ

[illegible]

[illegible]

[illegible]

[illegible]

[illegible]

ಆಳ್ವಿಕೆಯ ಕುಷ್ಟಗಿ ಸಮೀಪದ ಕೊಪ್ಪಳದ ಪ್ರದೇಶದವರಗೆ ವಿಸ್ತರಿಸಿತ್ತು.[೨೧] ಇವನ ಕಾಲದಲ್ಲಿ ಬೊಪ್ಪಸೆಟ್ಟಿ ದಂಡನಾಯಕನು ಕಲಚುರಿ ರಾಜರು ಇರುವಾಗಲೇ ಸೇವುಣ ಮೊದಲಾದ ರಾಜರನ್ನು ಹಿಮ್ಮೆಟ್ಟಿ ರಾಜ್ಯ ವಿಸ್ತರಿಸಿದ್ದು ಕೊಪ್ಪಳದ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ.೧೨೦೪ರ ಶಾಸನದಿಂದ[೨೨] ಬೊಪ್ಪಸೆಟ್ಟಿಯು ಕೊಳತೂರು, ಲೊಕ್ಕಿಗುಂಡಿ(ಲಕ್ಕುಂಡಿ) ಕೊಪ್ಪಳ, ಬಂಕಾಪುರ, ಹೂಲಿ, ಕೊಗಳಿ, ಮುಳಗುಂದ, ಬಟ್ಟಕೆರೆ, ಹಾನಗಲ್ಲು, ನವಿಲ್ಗುಂದ, ಬೆಳಗುಳ, ಬಂದಣಿಕೆ, ಪುರಿಕರ ಮೊದಲಾದಡೆ ಇದ್ದ ಬಸದಿಗಳನ್ನು ಜೀರ್ಣೋದ್ಧಾರಗೊಳಿಸಿದ್ದನೆಂದು ತಿಳಿದುಬರುತ್ತದೆ.

ದೇವಗಿರಿ ಸೇವುಣರು

ದೇವಗಿರಿ ಸೇವುಣರು ಹೊಯ್ಸಳರ ಸಮಕಾಲೀನರು. ಇವರು ರಾಷ್ಟ್ರಕೂಟರ ಮತ್ತು ಪಶ್ಚಿಮ ಚಾಲುಕ್ಯರ ಸಾಮಂತರಾಗಿದ್ದರು. ಕರ್ನಾಟಕ ಮತ್ತು ಮಹಾರಾಷ್ಟ್ರದ ಪ್ರದೇಶಗಳಲ್ಲಿ ಇವರು ಆಳ್ವಿಕೆ ನಡೆಸಿದ್ದರು. ಇವರನ್ನು ದೇವಗಿರಿಯ ಯಾದವರೆಂದು ಸಹ ಕರೆಯುತ್ತಾರೆ. ಇವರ ಇತಿಹಾಸ ಕ್ರಿ.ಶ.೯ನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ.ಶ.೧೪ನೆಯ ಶತಮಾನದ ಮೊದಲ ಭಾಗದವರಗೆ ತಿಳಿದುಬರುತ್ತದೆ.

ಈ ಮನೆತನದ ಪ್ರತಾಪಶಾಲಿ ದೊರೆ ಐದನೇ ಭಿಲ್ಲಮನು ಕಲಚೂರಿಯರನ್ನು, ಪಶ್ಚಿಮದ ಚಾಲುಕ್ಯರನ್ನು ಸೋಲಿಸಿ ದಕ್ಷಿಣದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡನು. ಇಂದಿನ ಮಹಾರಾಷ್ಟ್ರದ ಔರಂಗಾಬಾದ ಜಿಲ್ಲೆಯಲ್ಲಿರುವ ದೇವಗಿರಿ(ದೌಲತಾಬಾದ)ಯನ್ನು ತನ್ನ ಆಡಳಿತದ ರಾಜಧಾನಿಯಾಗಿ ಮಾಡಿಕೊಂಡನು. ಇವನು ಕುಷ್ಟಗಿ ಸಮೀಪದ ಎರೆಯಂಬರ್ಗಗೆ (ಯಲಬುರ್ಗಾ) ರಾಜಧಾನಿಯಾಗಿದ್ದ ಕಿಸುಕಾಡ ನಾಡನ್ನು(ಯಲಬುರ್ಗಾ-ಕೊಪ್ಪಳ ಜಿಲ್ಲೆ, ಲಿಂಗಸುಗೂರು-ರಾಯಚೂರು ಜಿಲ್ಲೆ) ತರ್ದವಾಡಿ ನಾಡನ್ನು(ಬಿಜಾಪುರ ಜಿಲ್ಲೆ, ಬಾಗೇವಾಡಿ ತಾಲ್ಲೂಕಿನ ಮುತ್ತಿಗೆ ಸುತ್ತಲಿನ ಪ್ರದೇಶ) ಬೆಳವೊಲವನ್ನೂ(ಗದಗ ಜಿಲ್ಲೆ, ಗದುಗಿನ ಸುತ್ತಲಿನ ಪ್ರದೇಶ) ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡನು.[೨೩]

ಕುಷ್ಟಗಿ ಪ್ರದೇಶದ ಅಂಟೂರತಾಣ ಗ್ರಾಮದಲ್ಲಿ ಇವರ ಕಾಲಕ್ಕೆ ಸಂಬಂಧಿಸಿದ ಒಂದು ಶಾಸನ ದೊರೆತಿದೆ. ಕ್ರಿ.ಶ.೧೨೬೭ರ ಶಾಸನವು[೨೪] ಸೇವುಣರ ದೊರೆ ಮಹಾದೇವನ ಕಾಲದ್ದಾಗಿದ್ದು ಈ ಶಾಸನದಲ್ಲಿ ಇಂಗಳೇಶ್ವರದ ಬಳಿಯ ಮಹಾಪ್ರಧಾನಿ ತಿಪ್ಪರಸನ ಹೆಂಡತಿ ಗೋಣಮದೇವಿಯ ಸೋದರಳಿಯ ಮಾರಸೆಟ್ಟಿಮಯ್ಯನನ್ನು ಉಲ್ಲೇಖಿಸುತ್ತದೆ. ಕುಷ್ಟಗಿ ಪ್ರದೇಶದ ಸಮೀಪದಲ್ಲಿರುವ ಸಂಕನೂರಿನಲ್ಲಿರುವ ಕ್ರಿ.ಶ.೧೨೩೮ರ ಶಾಸನವು[೨೫] ಸೇವುಣರ ಎರಡನೆಯ ಸಿಂಘಣನ ಕಾಲದ್ದಾಗಿದೆ. ಇದರಲ್ಲಿ ಸಿಂಘಣನ ಸರ್ವಾಧಿಕಾರಿ ವಾಮನದೇವನಾಯಕನು ತನ್ನ ಪುತ್ರೋತ್ಸವ ಸಂದರ್ಭದಲ್ಲಿ ಕಿಸುಕಾಡು-೭೦೦ರ ಸಂಕಲೂರ(ಸಂಕನೂರ) ಸಂಕಲದೇವಿಗೆ ದಾನವನ್ನು ನೀಡಿದ ವಿವರವಿದೆ.

ಕುಷ್ಟಗಿಯ ನೆರೆಯ ಯಲಬುರ್ಗಾದಲ್ಲಿರುವ ಕ್ರಿ.ಶ.ಸು.೧೩ನೆಯ ಶತಮಾನದ ಶಾಸನವು[೨೬] ಹೊಯ್ಸಳ ಮತ್ತು ಕುಂತಳ ದೇಶಗಳಲ್ಲಿ ದೇಸಿಯಗಣದ ರಾಯಾಚಾರ್ಯನು

ಮುಮ್ಮಡಿ ಸಿಂಘಣನು ಎರೆಯಂಬರ್ಗೆ(ಯಲಬುರ್ಗಾ)ಯಲ್ಲಿ ಹಾಳಾದ ಜೈನಧರ್ಮವನ್ನು ಉದ್ಧರಿಸಿದನು. ಮೂಲ ಸಂಘದ ದೇಸಿಯಗಣದ ಪುಸ್ತಕಗುಚ್ಛದ ಕುಂದಕುಂದಾನ್ವಯದ ರೋಣ ಸಂಬಂಧದ ಎರೆಯಂಬರ್ಗೆಯ ನಗರ ಜಿನಾಲಯಕ್ಕೆ ಮಿಂಡಗುದ್ದಲಿಯ ಕೇತಿಸೆಟ್ಟಿಯ ಮಗ ಮಲ್ಲಸೆಟ್ಟಿಯು ಪಾರ್ಶ್ವನಾಥ ದೇವರ ವಿಗ್ರಹವನ್ನು ಮಾಡಿಸಿ ಕೊಟ್ಟ ಎಂಬ ವಿಷಯ ತಿಳಿದುಬರುತ್ತದೆ. ಈ ಮೇಲೆ ಚರ್ಚಿಸಿದ ಅಂಶಗಳಿಂದ ಕುಷ್ಟಗಿ ಪ್ರದೇಶವು ದೇವಗಿರಿ ಸೇವುಣರ ಆಡಳಿತಕ್ಕೊಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ.

ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮತ್ತು ಏಳಿಗೆ ಭಾರತದ ಇತಿಹಾಸದಲ್ಲಿಯೇ ಪ್ರಾಮುಖ್ಯತೆಯನ್ನು ಹೊಂದಿದೆ. ಇದು ಕರ್ನಾಟಕದ ಮಹಾಸಾಮ್ರಾಜ್ಯಗಳಲ್ಲಿ ಒಂದು. ದಕ್ಷಿಣದಲ್ಲಿ ಹೊಯ್ಸಳ, ಕಾಕತೀಯ ಮತ್ತು ಸೇವುಣರ ರಾಜ್ಯಗಳೆಲ್ಲವು ಉತ್ತರದ ಖಿಲ್ಜಿ ಮತ್ತು ತುಘಲಕ ಸಂತತಿಗಳ ಸುಲ್ತಾನರ ದಾಳಿಗೆ ಸಿಕ್ಕಿ ತತ್ತರಿಸಿ ಹೋದವು. ಮುಸ್ಲಿಂ ಸುಲ್ತಾನರ ರಾಜಕೀಯ ಮತ್ತು ಧಾರ್ಮಿಕ ದಾಳಿಗಳಿಂದ ಅವಸಾನದ ಅಂಚನ್ನು ತಲುಪಿದ. ಹಿಂದೂಧರ್ಮದ ಸಂಸ್ಕೃತಿಯ ಪೋಷಣೆಗಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ಕ್ರಿ.ಶ.೧೩೩೬ರಲ್ಲಿ ವಿದ್ಯಾರಣ್ಯರ ಪ್ರೇರಣೆಯಿಂದ ಹಕ್ಕ-ಬುಕ್ಕ ಸಹೋದರರು ವಿಜಯನಗರ ರಾಜ್ಯ ಸ್ಥಾಪನೆ ಮಾಡಿದರು. ಪ್ರಾರಂಭದಲ್ಲಿ ಆನೆಗೊಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಇವರು, ಅತ್ಯಲ್ಪ ಕಾಲದಲ್ಲೇ ಅದನ್ನು ಪಂಪಾಪುರಿಯ ಸಮೀಪದಲ್ಲಿ ನಿರ್ಮಿತವಾದ ಹೊಸ ಪಟ್ಟಣಕ್ಕೆ ಸ್ಥಳಾಂತರಿಸಿ ಅದಕ್ಕೆ 'ವಿಜಯನಗರ' ಎಂದು ಹೆಸರು ನೀಡಿದರು. ಈ ಸಾಮ್ರಾಜ್ಯವನ್ನು ಸಂಗಮ, ಸಾಳುವ, ತುಳು ಮತ್ತು ಅರವೀಡು ಎಂಬ ನಾಲ್ಕು ಅರಸು ಮನೆತನಗಳು ಆಳ್ವಿಕೆ ನಡೆಸಿದವು. ಈ ಮನೆತನಗಳ ಅರಸರ ಸತತ ಪ್ರಯತ್ನದಿಂದ ಈ ರಾಜ್ಯವು ಅಭಿವೃದ್ಧಿ ಹೊಂದಿ ಇಡೀ ದಕ್ಷಿಣ ಭಾರತವೇ ಅಂದರೆ ಕೃಷ್ಣಾ ನದಿಯಿಂದ ಶ್ರೀಲಂಕಾದವರೆಗಿನ ಪ್ರದೇಶವು ಏಕಚಕ್ರಾಧಿಪತ್ಯಕ್ಕೆ ಒಳಪಟ್ಟಿತ್ತು. ಈ ಸಾಮ್ರಾಜ್ಯದ ರಾಜಧಾನಿ ವಿಜಯನಗರದ ಆವರಣದಲ್ಲಿಯೇ ಇರುವ ಕುಷ್ಟಗಿ ಪ್ರದೇಶದಲ್ಲಿ ಈವರೆಗೆ ವಿಜಯನಗರ ಅರಸರ ನಾಲ್ಕು ಶಾಸನಗಳು ದೊರಕಿವೆ. ಅವುಗಳು ಚಂದಾಲಿಂಗ, ತಾವರಗೆರೆಗಳಲ್ಲಿ ತಲಾ ಒಂದರಂತೆ ಮತ್ತು ಪುರದಲ್ಲಿ ಎರಡು ಒಟ್ಟು ನಾಲ್ಕು ಶಾಸನಗಳು ಪ್ರಕಟವಾಗಿವೆ.

ಚಂದಾಲಿಂಗ ದೇವಾಲಲಯದ ಆವರಣದೊಳಗೆ ಇರುವ ಕ್ರಿ.ಶ.೧೩೪೫ರ ಶಾಸನವು[೨೨] ಭಂಡಾರಿ, ಹೆಗ್ಗಡೆ ಮಾರಮಯ್ಯ ಹೆಸರುಗಳನ್ನು ತಿಳಿಸುತ್ತದೆ. ತಾವರಗೆರೆಯ ವೀರಭದ್ರ ದೇವಾಲಯದ ಬಳಿ ಇರುವ ಕ್ರಿ.ಶ.೧೫೪೭ರ ಶಾಸನವು[೨೮] ಸದಾಶಿವದೇವರಾಯರ ಕಾಲದ್ದಾಗಿದೆ. ಅವನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಜದೇವನು ತಾವರಕೆರೆಯ ತಿಂಮೋಜ, ಕಂಡೋಜ, ಭದ್ರೋಜ ಇವರ ಬಿನ್ನಹವನ್ನು ಕೇಳಿ ತಾವರಕೆರೆಯ ಸೀಮೆಯ ೧೩೦ ಗ್ರಾಮಗಳ ಕ್ಷೌರಿಕರಿಗೆ ಅಂನು ಪನ್ನು ಬಿಟ್ಟ ಬಿರಾಡ ಎಲ್ಲವನ್ನು ಮನ್ನಾ ಮಾಡಿದ ವಿಷಯ ತಿಳಿದುಬರುತ್ತದೆ.

ಪುರದಲ್ಲಿರುವ ಕ್ರಿ.ಶ.ಸು.೧೪೪೬ರ ಶಾಸನದಲ್ಲಿ[೮೯] ಸೋಮನಾಥ ದೇವರಿಗೆ ದಾನ ಕೊಟ್ಟ ಉಲ್ಲೇಖವಿದೆ. ಪುರದ ಬನದಾಯವೆಯ ವೋಹಿಲಾಪುರದ ಆಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿ ಪ್ರತಾಪದೇವರಾಯನಿಗೆ ಪುಣ್ಯವಾಗಬೇಕೆಂದು ದೇವರ ನೈವೇದ್ಯಕ್ಕೆ ತ್ರಿಸಂಧ್ಯಾಕಾಲದಲ್ಲಿ ಶ್ರೀಸಜ್ಜನ ಶುದ್ಧ ಶಿವಾಚಾರ ಸಂಪನ್ನ ಸೋಮಯದೇವಅಯ್ಯನವರಿಗೆ ದೇವರ ನೈವೇದ್ಯಕ್ಕೆ ನೆಲ್ಲುಯಿಲ್ಲವೆಂದು ವೊಹಿಲಾಪುರದ ಹೊಲದ ಒಳಗೆ ಬನದಾಯವೆಗಳೂ ಕೆರೆಯನ್ನು ಕಟ್ಟಿಸಿ ಕೊಟ್ಟ ಉಲ್ಲೇಖವಿದೆ. ಪುರದಲ್ಲಿರುವ ಕ್ರಿ.ಶ.೧೫೪೭ರ ಇನ್ನೊಂದು ಶಾಸನವು[೯೦] ಸದಾಶಿವ ರಾಯನ ಕಾಲದ್ದಾಗಿದ್ದು ಅರ್ಕಾಜೆ ತಂಮಪನಾಯಕನ ಮಗ ವಿರುಪಣನಾಯಕನು ಕೊಟ್ಟ ದಾನದ ವಿವರವಿದೆ. ವೀರಸದಾಶಿವದೇವರಾಯನು ಕೃಷ್ಣಪನಾಯಕನಿಗೆ ಪುರ ಗ್ರಾಮದಲ್ಲಿ ಸೋಮೇಶ್ವರಮಹಾಲಿಂಗಕ್ಕೆ ಊರಿನ ಪಶ್ಚಿಮಕ್ಕೆ ಮಡೆಹೊಲ, ಗದ್ದೆ, ಹುಣಸೆಮರಗಳು, ಸೆಟರ ಕಾಣಿಕೆ, ನಾಡ, ತಳವಾರಿಕೆ, ಗವುಡ ಮಾನ್ಯದ ಹಣ, ಅಂಗಡಿ, ಗಾಣ, ಮಗ್ಗ, ಸಿದ್ಧಾಯ, ಕಡ್ಡಾಯ, ವೋಜರು ತರುವ ಹಣ, ಉಪ್ಪಿನಮೋಳೆ ಮುಂತಾದ ಸಕಲ ಸುವರ್ಣದಾಯ, ಭತ್ತದ ಆದಾಯವನ್ನು ಸಂಕ್ರಾಂತಿ ಪುಣ್ಯಕಾಲದಲ್ಲಿ ದತ್ತಿಯಾಗಿ ಬಿಟ್ಟ ವಿವರಗಳಿವೆ. ಇದಲ್ಲದೆ ಸದಾಶಿವದೇವರಾಯನಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದೂ, ಕೃಷ್ಣಪನಾಯಕನಿಗೆ ಪುಣ್ಯವಾಗ ಬೇಕೆಂದೂ, ವಿರುಪಣನಾಯಕನು ಹಸ್ತಿನಾವತಿ ವಳಿತಕ್ಕೆ ಸೇರುವ ಕೆಳವಡಿನಾಡೊಳಗೆ ಕೆಲವು ದಾನಗಳನ್ನು ನೀಡಿರುವ ವಿಷಯ ತಿಳಿದುಬರುತ್ತದೆ. ಇನ್ನು ತುಂಗಭದ್ರೆಯ ದಕ್ಷಿಣಕ್ಕೆ ಸಮಕಾಲೀನ ಸಂದರ್ಭದಲ್ಲಿ ಯಾವುದೇ ಪ್ರಬಲ ರಾಜ್ಯಗಳು ಆಸ್ತಿತ್ವದಲ್ಲಿರಲಿಲ್ಲ. ಪೂರ್ವದಲ್ಲಿ ಆಸ್ತಿತ್ವದಲ್ಲಿದ್ದ ಹೊಯ್ಸಳ ರಾಜ್ಯ, ಕುಮ್ಮಟ ರಾಜ್ಯ ಮುಂತಾದ ರಾಜ್ಯಗಳ ಅಧಿಕಾರಿವರ್ಗ ಮತ್ತು ಪ್ರಜಾಸಮೂಹದ ಒಟ್ಟು ಆಶಯವೇ ಮೈದಳಿದಂತೆ, ವಿಜಯನಗರ ಸಾಮ್ರಾಜ್ಯ ರೂಪಗೊಂಡಿತು. ಹಾಗಾಗಿ ಅದು ಹುಟ್ಟುತ್ತಲೇ ಯಾವುದೇ ಪ್ರತಿರೋಧವಿಲ್ಲದೇ ದಕ್ಷಿಣದ ಬಹುಭಾಗದಲ್ಲಿ ವ್ಯಾಪಿಸಿ ನಿಂತಿತು.

ಕುಷ್ಟಗಿ ಪ್ರದೇಶದಲ್ಲಿ ಈವರೆಗೆ ವಿಜಯನಗರ ಕಾಲದ ನಾಲ್ಕು ದೇವಾಲಯಗಳಿವೆ (ಈ ದೇವಾಲಯಗಳ ಬಗ್ಗೆ ಪ್ರತ್ಯೇಕ ಅಧ್ಯಾಯದಲ್ಲಿ ವಿವರಿಸಲಾಗಿದೆ). ಈ ಮೇಲಿನ ಅಂಶಗಳಿಂದ ಕುಷ್ಟಗಿ ಪ್ರದೇಶ ವಿಜಯನಗರ ಆಡಳಿತಕ್ಕೊಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ. ಕುಷ್ಟಗಿ ಪರಿಸರ ರಾಯಚೂರ ದೋ-ಅಬ್‌ನಲ್ಲಿ ಸಮಾವೇಶವಾಗುತ್ತದೆ. ಈ ದೋ-ಅಬ್ ಪ್ರದೇಶ ವಿಜಯ ನಗರದ ಉತ್ತರಗಡಿ ಪ್ರದೇಶವಾಗಿದೆ. ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ಕ್ರಿ.ಶ.೧೩೪೭ರಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪಿಸಲ್ಪಟ್ಟಿತು. ಅದು ದಕ್ಷಿಣದ ಕೃಷ್ಣಾ ನದಿಯವರೆಗಿನ ಪ್ರದೇಶದ ಮೇಲೆ ಅದು ತನ್ನ ಹಿಡಿತವನ್ನು ಸಾಧಿಸಿತ್ತು. ಹೀಗಾಗಿ ಉತ್ತರದಲ್ಲಿ ಕೃಷ್ಣಾನದಿ, ದಕ್ಷಿಣದಲ್ಲಿ ತುಂಗಭದ್ರಾ ನದಿಗಳ ಗಡಿಗಳನ್ನಾಗಿ ಒಳಗೊಂಡ ರಾಯಚೂರ ದೋ-ಅಬ್ ಪ್ರದೇಶವು ಎರಡು ರಾಜ ಪ್ರಭುತ್ವಗಳ ನಡುವಿನ ರಾಜಕೀಯ ಸ್ಪರ್ಧಾಕಣವಾಯಿತು. ಇಲ್ಲಿಯ ರಾಯಚೂರ ಮತ್ತು ಮುದಗಲ್ ಕೋಟೆಗಳ ಮೇಲೆ ನಿಯಂತ್ರಣ ಹೊಂದಲು ಪರಸ್ಪರರು ತೀವ್ರ ಹೋರಾಟ ನಡೆಸಿದರು. ಈ ಪರಿಣಾಮವಾಗಿ ಈ

ಪ್ರದೇಶ ಕೆಲವು ಸಲ ವಿಜಯನಗರದ ಅಧೀನದಲ್ಲಿದ್ದರೆ, ಮತ್ತೇ ಕೆಲವು ಸಲ ಬಹಮನಿ ಸುಲ್ತಾನರ ವಶದಲ್ಲಿ ಸೇರುತ್ತಿತ್ತು.

ಹೀಗಾಗಿ ಇಲ್ಲಿ ವಿಜಯನಗರದ ಪ್ರಭುತ್ವ ನಿರಂತರವಾಗಿ ಉಳಿಯಲು ಸಾಧ್ಯವಾಗಲಿಲ್ಲ. ಈ ಪರಿಣಾಮವಾಗಿ ಇಲ್ಲಿಂದ ಉತ್ತರಕ್ಕೆ ಬಹಮನಿ ರಾಜ್ಯ ಇದ್ದುದರಿಂದ ರಾಜ್ಯ ವಿಸ್ತರಣೆ ಸಾಧ್ಯವಾಗಲಿಲ್ಲ. ಅಲ್ಲದೆ ಈ ರಾಜಕೀಯ ಅನಿಶ್ಚಿತತೆಯಿಂದ ಕುಷ್ಟಗಿ ಪರಿಸರದಲ್ಲಿ ವಿಜಯನಗರ ಕಾಲದ ದೇವಾಲಯಗಳು, ಮೂರ್ತಿಶಿಲ್ಪಗಳು ಮತ್ತು ಶಾಸನಗಳನ್ನು ಹೆಚ್ಚಾಗಿ ನಿರ್ಮಿಸಲು ಸಾಧ್ಯವಾಗಲಿಲ್ಲವೇನೊ ಎಂದು ಭಾಸವಾಗುತ್ತದೆ. ಅದಕ್ಕೆ ಪೂರಕವಾಗಿ ಶಾಸನಗಳು ಅಧಿಕ ಸಂಖ್ಯೆಯಲ್ಲಿ ರಚನೆಯಾಗಲಿಲ್ಲ.

ಅಡಿಟಿಪ್ಪಣಿಗಳು

೧. ರಾಮಲಿಂಗಪ್ಪ.ಎಚ್. ಕರ್ನಾಟಕದ ಇತಿಹಾಸ ೧೯೯೭. ಪು.೧೭
೨. ಚಂದ್ರಶೇಖರ.ಎಚ್. ರಾಯಚೂರು ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳು, ೧೯೯೩. ಪು. ೪೨
೩. ಶಿವತಾರಕ.ಕೆ.ಬಿ. ಕರ್ನಾಟಕ ಪುರಾತತ್ವ ನೆಲೆಗಳು, ೧೯೯೧. ಪು.೪
೪. ಅದೇ. ಪು.೪
೫. ಶರಣಬಸಪ್ಪ ಕೋಲ್ಕಾರ. ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು, ಎಂ. ಫಿಲ್ ಪ್ರಬಂಧ (ಅಪ್ರಕಟಿತ) ೧೯೯೪ ಪು.೧೫
೬. ಶರಣಬಸಪ್ಪ ಕೋಲ್ಕಾರ. ಶಿಲಾಯುಗದ ಗವಿಚಿತ್ರಗಳು, ಪಿ.ಎಚ್‌ಡಿ ಪ್ರಬಂಧ. ಪು.೧೯
೭. ಶಿವತಾರಕ.ಕೆ.ಬಿ. ಕರ್ನಾಟಕ ಪುರಾತತ್ವ ನೆಲೆಗಳು, ಪು.೬೩
೮. ಅದೇ. ಪು.೬೬
೯. ಗುರುರಾಜರಾವ್.ಬಿ.ಕೆ. ಕರ್ನಾಟಕದ ಶಿಲಾಯುಗ ಸಂಸ್ಕೃತಿಗಳು, ೧೯೭೦. ಪು.೪೭
೧೦. ಶಿವತಾರಕ.ಕೆ.ಬಿ. ಕರ್ನಾಟಕದ ಪುರಾತತ್ವ ನೆಲೆಗಳು, ೧೯೯೧. ಪು.೮
೧೧. ಅದೇ. ಪು.೧೪
೧೨. ನರಸಿಂಹಮೂರ್ತಿ.ಎ.ವಿ. ಕರ್ನಾಟಕದಲ್ಲಿ ಪುರಾತತ್ವ ಶೋಧನೆ. ೧೯೭೯. ಪು.೧೫
೧೩. ಕರ್ನಾಟಕ ರಾಜ್ಯ ಗ್ಯಾಜೆಟಿಯರ ಪು.
೧೪. ಶಿವತಾರಕ.ಕೆ.ಬಿ. ಕರ್ನಾಟಕ ಪುರಾತತ್ವ ನೆಲೆಗಳು. ೧೯೯೧. ಪು.೧೮
೧೫. ಶರಣಬಸಪ್ಪ ಕೋಲ್ಕಾರ. ಕೊಪ್ಪಳ ಜಿಲ್ಲೆಯ ಪ್ರಾಗ್ಯೈತಿಹಾಸ ಕಾಲದ ಕಲೆ ೨೦೦೭. ಪು.೭
೧೬. ಅದೇ. ಪು.೧೦
೧೭. ರಾಮಲಿಂಗಪ್ಪ.ಎಚ್. ಕರ್ನಾಟಕದ ಇತಿಹಾಸ. ೧೯೯೭. ಪು.೩೨
೧೮. ಕ.ವಿ.ವಿ. ಶಾ.ಸಂ.೨. ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು. ಶಾ.ಸಂ.೨೮ ಗವಿಮಠ
೧೯. ತಿಪ್ಪೇರುದ್ರಸ್ವಾಮಿ. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ೧೯೯೨. ಪು.೮೧
೨೦. ಶೇಷಾದ್ರಿ.ಎಂ. 'ಚಾರಿತ್ರಿಕ ಯುಗ' ಕರ್ನಾಟಕ ಪರಂಪರೆ. ಸಂ.೧. ೧೯೭೦. ಪು.೧೨೧
೨೧. ಅದೇ. ಪು.೧೨೧-೧೨೪
೨೨. ತಿಪ್ಪೇರುದ್ರಸ್ವಾಮಿ. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ೧೯೯೨. ಪು.೮೫
೨೩. ಶೇಷಾದ್ರಿ.ಎಂ. 'ಚಾರಿತ್ರಿಕ ಯುಗ' ಕರ್ನಾಟಕ ಪರಂಪರೆ ಸಂ.೧. ೧೯೭೦. ಪು.೧೨೨
೨೪. ಶಿರೂರ.ಬಿ.ವ್ಹಿ. ಕೊಪ್ಪಳ ನಗರ ಒಂದು ಐತಿಹಾಸಿಕ ಕೇಂದ್ರ ತಿರುಳ್ಗನ್ನಡ ೧೯೯೩. ಪು.೪
೨೫. ಅದೇ ಪು.೫-೬
೨೬. ಪಾಟೀಲ.ಬಿ.ಸಿ. ಕೊಪ್ಪಳ ಸಾಂಸ್ಕೃತಿಕ ಪರಂಪರೆ. ೧೯೯೮. ಪು.೨೦
೨೭. ಸುರೇಶ.ಕೆ.ಎಂ ಮತ್ತು ಇತರರು, ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ೨೦೦೧ ಪು.೬
೨೮. ರಾಜೇಂದ್ರಪ್ಪ.ಎಸ್. ಕುಷ್ಟಗಿ ತಾಲ್ಲೂಕು ದರ್ಶನ. ಪು.೨೨೯
೨೯. ರಾಜಶೇಖರಪ್ಪ.ಬಿ. ಚಂದ್ರವಳ್ಳಿ ಶಾಸನದ ಮೇಲೆ ಹೊಸಬೆಳಕು. ಸಂ.೬೯, ಪು.೨
೩೦. ಶರಣಬಸಪ್ಪ ಕೊಲ್ಕಾರ. ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು. ಎಂ.ಫಿಲ್ ಪ್ರಬಂಧ (ಅಪ್ರಕಟಿತ) ಪು.೨೨
೩೧. ಸುರೇಶ.ಕೆ.ಎಂ ಮತ್ತು ಇತರರು, ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ. ಪು.೭
೩೨. ರಾಜೇಂದ್ರಪ್ಪ.ಎಸ್. ಕುಷ್ಟಗಿ ತಾಲ್ಲೂಕು ದರ್ಶನ ಪು.೨೪೫
೩೩. ಕ.ವಿ.ವಿ.ಶಾ.ಸಂ.೨ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾ. ಶಾ.ಸಂ.೬೪ ಇಟಗಿ ಕ್ರಿ.ಶ.ಸು.೫ನೆಯ ಶತ
೩೪. ರಾಜೇಂದ್ರಪ್ಪ.ಎಸ್. ಕುಷ್ಟಗಿ ತಾಲ್ಲೂಕು ದರ್ಶನ. ಪು.೨೪೬

೩೫. ಸುರೇಶ.ಕೆ.ಎಂ. ಮತ್ತು ಇತರರು. ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ. ೨೦೦೧ ಪು.೯-೧೦

೩೬. ಶರಣಬಸಪ್ಪ ಕೋಲ್ಕಾರ. ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು, ಎಂ.ಫಿಲ್ (ಅಪ್ರಕಟಿತ) ಪು.೨೫

೩೭. ಸುರೇಶ.ಕೆ.ಎಂ ಮತ್ತು ಇತರರು. ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲೆ, ೨೦೦೧. ಪು.೯

೩೮. ಅದೇ ಪು. ೧೨

೩೯. ಕ.ವಿ.ವಿ. ಶಾ.ಸಂ. ೨. ಕೊಪ್ಪಳ ಜಿಲ್ಲೆ ಕುಷ್ಟಗಿ ತಾ. ಶಾ.ಸಂ.೭ ಹೀರೆಮನ್ನಾಪುರ ಕ್ರಿ.ಶ.೯೯೭

೪೦. ಅದೇ. ಶಾ.ಸಂ. ೮ ಹೀರೆಮನ್ನಾಪುರ ಕ್ರಿ.ಶ.ಸು.೧೧ನೆಯ ಶತಮಾನ

೪೧. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೪೨. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೪೩. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೦೨೪

೪೪. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೪೫. ಅದೇ. ಶಾ.ಸಂ. ೨೭ ಅಂಟೂರಠಾಣ ಕ್ರಿ.ಶ.೧೦೮೨

೪೬. ಅದೇ. ಶಾ.ಸಂ. ೨೮ ಅಂಟೂರಠಾಣ ಕ್ರಿ.ಶ.೧೯೫

೪೭. ಅದೇ. ಶಾ.ಸಂ. ೨೯ ಅಂಟೂರಠಾಣ ಕ್ರಿ.ಶ.೧೧-೧೨ನಯ ಶತ

೪೮. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೯೯

೪೯. ಅದೇ. ಶಾ.ಸಂ. ೨ ಹೆಸರೂರ ಕ್ರಿ.ಶ.೧೧೦೪

೫೦. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦

೫೧. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೫೨. ಅದೇ. ಶಾ.ಸಂ. ೧೧ ತಾವರಗೆರೆ ಕ್ರಿ.ಶ.೧೨ನೆಯ ಶತಮಾನ

೫೩. ಅದೇ. ಶಾ.ಸಂ. ೬ ಮುದೇನೂರು ಕ್ರಿ.ಶ.ಸು.೧೨ನೆಯ ಶತ

೫೪. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೫೫. ಅದೇ. ಶಾ.ಸಂ. ೧೬ ಪುರ ಕ್ರಿ.ಶ.೧೨ನೆಯ ಶತಮಾನ

೫೬. ಅದೇ. ಶಾ.ಸಂ. ೧೫ ಪುರ ಕ್ರಿ.ಶ.ಸು.೧೨-೧೩ನೆಯ ಶತಮಾನ

೫೭. ಕ.ವಿ.ವಿ. ಶಾ.ಸಂ.೨. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾ. ಶಾ.ಸಂ.೪೦ ಕುಕನೂರ ಕ್ರಿ.ಶ.೧೧೬೩

೫೮. ಅದೇ. ಶಾ.ಸಂ. ೪೧ ಕುಕನೂರ ಕ್ರಿ.ಶ.೧೧೭೦

೫೯. ಅದೇ. ಶಾ.ಸಂ. ೫೨ ಕುಕನೂರ ಕ್ರಿ.ಶ.೧೧೭೮

೬೦. ಕ.ವಿ.ವಿ. ಶಾ.ಸಂ.೨. ಕೊಪ್ಪಳ ಜಿಲ್ಲೆ ಕುಷ್ಟಗಿ ತಾ. ಶಾ.ಸಂ.೩ ಗೋತಗಿ ಕ್ರಿ.ಶ.ಸು.೧೧೨೪

೬೧. ಅದೇ. ಶಾ.ಸಂ.೯ ಹಿರೇಮನ್ನಾಪುರ ಕ್ರಿ.ಶ.೯೯೭

೬೨. ಗದಗ. ಎಸ್.ಐ.ಐ.೧೫. ಶಾ.ಸಂ.೨೧೪. ಕ್ರಿ.ಶ.೧೯೨

೬೩. ಬೆಂತೂರು. ಎಸ್.ಐ.ಐ.೧೫.. ಶಾ.ಸಂ.೨೧೫. ಕ್ರಿ.ಶ.೧೯೯

೬೪. ಮೆವ್ವಂಡಿ. ಎಸ್.ಐ.ಐ.೧೫. ಶಾ.ಸಂ.೨೧೧. ಕ್ರಿ.ಶ.೧೧೬೬

೬೫. ನಾಗಾವಿ. ಎಸ್.ಐ.ಐ.೧೫. ಶಾ.ಸಂ.೨೨೧. ಕ್ರಿ.ಶ.೧೨೧೧

೬೬. ಬಳಗಾನೂರ. ಎಸ್.ಐ.ಐ.೧೫. ಶಾ.ಸಂ.೨೨೩. ಕ್ರಿ.ಶ.೧೨೦೫

೬೭. ಮುಳಗುಂದ. ಎಸ್.ಐ.ಐ.೧೫. ಶಾ.ಸಂ.೨೨೦ ಕ್ರಿ.ಶ.೧೨೦೭

೬೮. ಲಕ್ಕುಂಡಿ. ಎಸ್.ಐ.ಐ.೧೫. ಶಾ.ಸಂ.೨೦೯,೫೫೬,೫೫೭,೫೫೮,೫೫೯,೫೬೦,೫೬೧, (೧೧೩೫)

೬೯. ನರೇಗಲ್. ಎಸ್.ಐ.ಐ.೧೫. ಶಾ.ಸಂ.೨೧೨ ಕ್ರಿ.ಶ.೧೯೭

೭೦. ಕರ್ನಾಟಕ ಪರಂಪರೆ. ಸಂ.೧. ಪು.೪೭೧

೭೧. ಸುರೇಶ.ಕೆ.ಎಂ ಮತ್ತು ಇತರರು, ಕರ್ನಾಟಕ ದೇವಾಲಯ ಕೋಶ
ಕೊಪ್ಪಳ ಜಿಲ್ಲೆ ೨೦೦೧ ಪು.೯

೭೨. ಅದೇ ಪು. ೧೧

೭೩. ಕರ್ನಾಟಕ ಪರಂಪರೆ. ಸಂ. ೧, ೧೯೭೦ ಪು. ೪೭೮

೭೪. ಕ.ವಿ.ವಿ. ಶಾ.ಸಂ.೨. ಕೊಪ್ಪಳ ಜಿಲ್ಲೆ ಕುಷ್ಟಗಿ ತಾ. ಶಾ.ಸಂ.೨೬ ಅಂಟೂರತಾಣ ಕ್ರಿ.ಶ.೧೨೬೭

೭೫. ಕ.ವಿ.ವಿ. ಶಾ.ಸಂ.೨. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾ. ಶಾ.ಸಂ.೨೮ ಸಂಕನೂರ ಕ್ರಿ.ಶ.೧೨೩೮

೭೬. ಅದೇ. ಶಾ.ಸಂ.೦೬ ಯಲಬುರ್ಗಾ ಕ್ರಿ.ಶ.ಸು.೧೩ನೆಯ ಶತಮಾನ

೭೭. ಕ.ವಿ.ವಿ. ಶಾ.ಸಂ. ೨ ಕೊಪ್ಪಳ ಜಿಲ್ಲೆ ಕುಷ್ಟಗಿ ತಾ. ಶಾ.ಸಂ.೨೫ ಚಂದಾಲಿಂಗ ಕ್ರಿ.ಶ.೧೩೪೫

೭೮. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೭೯. ಅದೇ. ಶಾ.ಸಂ. ೧೨ ಪುರ ಕ್ರಿ.ಶ.ಸು.೧೪೪೬

೮೦. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

ಅಧ್ಯಾಯ – ೩

ಶಾಸನಗಳ ಅಧ್ಯಯನ

ಅಧ್ಯಾಯ – ೩

ಶಾಸನಗಳ ಅಧ್ಯಯನ

೩.೧. ಶಾಸನ ಅಧ್ಯಯನದ ಇತಿಹಾಸ

ಪ್ರಾಚೀನ ಕಾಲದಿಂದಲೂ ಕರ್ನಾಟಕವು ಸಕಲ ಸಂಪದ್ಭರಿತವಾದ ನಾಡಾಗಿತ್ತು. ಈ ಕಾರಣದಿಂದ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಯಾದವ, ವಿಜಯನಗರ ಅರಸು ಮನೆತನಗಳು ಹೀಗೆ ಅನೇಕ ರಾಜವಂಶಗಳು ಈ ನಾಡನ್ನು ಆಳಿದ್ದಾರೆ. ಇವರ ಆಳ್ವಿಕೆಯ ಕುರುಹುಗಳಾಗಿ ಕೋಟೆ, ಕೊತ್ತಲ, ದೇವಾಲಯಗಳು, ಮಂಟಪಗಳು ಮತ್ತು ಸಾವಿರಾರು ಶಾಸನಗಳು ಹೀಗೆ ಅನೇಕ ಐತಿಹಾಸಿಕ ಅವಶೇಷಗಳು ದೊರೆಯುತ್ತವೆ. ಶಾಸನಗಳ ದೃಷ್ಟಿಯಿಂದ ಕರ್ನಾಟಕವನ್ನು ಶಾಸನಗಳ ಕಣಜ[೧] ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಅತಿ ಹೆಚ್ಚು ಶಾಸನಗಳು ಸಿಗುವ ರಾಜ್ಯ ತಮಿಳುನಾಡು ಮೊದಲನೆಯ ಸ್ಥಾನದಲ್ಲಿದೆ. ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ಆದರೆ ಶಾಸನಗಳಲ್ಲಿನ ವೈವಿಧ್ಯತೆ ಮತ್ತು ಶಿಲ್ಪಗಳು ತೋರಿಸುವ ಸೌಂದರ್ಯ ಪ್ರಜ್ಞೆಯನ್ನು ನೋಡಿದರೆ ತಮಿಳುನಾಡಿಗಿಂತ ಕರ್ನಾಟಕವೇ ಈ ದಿಸೆಯಲ್ಲಿ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ. ಈಗಾಗಲೆ ಶಾಸನಗಳ ಕುರಿತು ಅನೇಕ ವಿದ್ವಾಂಸರು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಅಂತಹ ಅಧ್ಯಯನಗಳ ಪಕ್ಷಿನೋಟ ಈ ಕೆಳಗಿನಂತಿದೆ.

ಮೌರ್ಯರ ಅರಸನಾದ ಅಶೋಕನ ಕಾಲದಿಂದ ನಮ್ಮಲ್ಲಿ ಶಾಸನಗಳನ್ನು ಬರೆಸುವ ಪದ್ಧತಿಯು ಪ್ರಾರಂಭವಾಯಿತು. ಕಾಲ ಕಳೆದಂತೆ ಸಾವಿರಾರು ಶಾಸನಗಳು ರಚಿತಗೊಂಡವು. ಕಾಲಾನಂತರದಲ್ಲಿ ಭಾರತೀಯರು ತಾವು ಬರೆದ ಶಾಸನಗಳನ್ನು ತಾವೇ ಓದುವುದು ಅಸಾಧ್ಯವಾಯಿತು. ಇದಕ್ಕೆ ಕಾರಣ ಶಾಸನಗಳನ್ನು ಬರೆಯಲು ಬಳಸಿದ ಲಿಪಿಗಳು ಕಾಲದಿಂದ ಕಾಲಕ್ಕೆ ಬದಲಾವಣೆಯಾಗುತ್ತಿದ್ದುದೇ ಕಾರಣವಾಗಿವೆ. ಕ್ರಿ.ಶ.೧೩ನೆಯ ಶತಮಾನದಲ್ಲಿ ಫಿರೋಜ ಶಾಹ ತುಘಲಕನ ನಂತರ ಕ್ರಿ.ಶ.೧೬ನೆಯ ಶತಮಾನದಲ್ಲಿ ಮೊಗಲ ಸುಲ್ತಾನ ಅಕ್ಬರನು ಅಶೋಕನ ಕಾಲದ ಶಾಸನಗಳನ್ನು ಓದಿಸಲು ಪ್ರಯತ್ನಿಸಿದನು. ಆದರೆ ಬ್ರಾಹ್ಮಿಲಿಪಿಯಲ್ಲಿದ್ದ ಈ ಶಾಸನಗಳನ್ನು ಓದಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ನಂತರ ಈ ಶಾಸನಗಳನ್ನು ಓದುವ ಕಾರ್ಯ ಕೈಗೆತ್ತಿಕೊಂಡವರು ಬ್ರಿಟೀಶರು.

ವಾರನ್‌ಹೆಸ್ಟಿಂಗ್ಸ್ ಬಂಗಾಲದ ಗರ್ವನರನಾಗಿದ್ದಾಗ ಕಲ್ಕತ್ತಾ ನ್ಯಾಯಾಲಯದ ನ್ಯಾಯಧೀಶನಾದ ವಿಲಿಯಂ ಜೋನ್ಸನು ಕ್ರಿ.ಶ.೧೭೮೪ರಲ್ಲಿ 'ಏಶಿಯಾಟಿಕ್ ಸೊಸಾಯಿಟಿ ಆಫ್ ಬೆಂಗಾಲ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ನಂತರ ಭಾರತದ ಪುರಾತತ್ವ ಅವಶೇಷಗಳನ್ನು ಸಂಶೋಧಿಸಿ ಪ್ರಕಟಿಸಲು 'ಏಶಿಯಾಟಿಕ್ ರಿಸರ್ಚ' ಎಂಬ ಪತ್ರಿಕೆಯನ್ನು ಕ್ರಿ.ಶ.೧೭೮೯ರಲ್ಲಿ ಆರಂಭಿಸಿದನು. ಈತನು ಕ್ರಿ.ಶ.೧೭೯ರಲ್ಲಿ ವಿಜಯನಗರದ ರಾಜರು ದತ್ತಿ ಕೊಟ್ಟ ವಿಷಯವುಳ್ಳ

ತಾಮ್ರ ಶಾಸನವನ್ನು ಸಂಶೋಧಿಸಿ 'A royal grant of land in Karnataka' ಎಂಬ ಲೇಖನವನ್ನು ಬರೆದು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದನು. ಕರ್ನಾಟಕದ ಶಾಸನಗಳ ಬಗ್ಗೆ ಪ್ರಕಟವಾದ ಪ್ರಪ್ರಥಮ ಲೇಖನ ಇದಾಗಿದೆ. ಕೋಲ್‌ಬ್ರೂಕ್ ಅವರು 'ಏಶಿಯಾಟಿಕ್ ರಿಸರ್ಚಸ್' ಎಂಬ ಪತ್ರಿಕಾ ಸಂಪುಟದಲ್ಲಿ "In the Scarcity of anthentic history of the Hindu race. Importance is justly attached to all genuine monuments and especially inscriptions on stone & metal. Which are occasionally discovered throug various accidents" ಎಂದು ಶಾಸನಾಭ್ಯಾಸದ ಮಹತ್ವವನ್ನು ಒತ್ತಿ ಹೇಳಿದ್ದಾರೆ.

ಬ್ರಾಹ್ಮಿಲಿಪಿಯಲ್ಲಿದ್ದ ಅಶೋಕನ ಕಾಲದ ಶಾಸನಗಳು ಯಾರಿಂದಲೂ ಓದಲು ಸಾಧ್ಯವಾಗದೆ ಉಳಿದಿದ್ದವು. ಏಶಿಯಾಟಿಕ್ ಸಂಸ್ಥೆಯ ಸದಸ್ಯನಾಗಿದ್ದ ಜೇಮ್ಸ ಪ್ರಿನ್ಸೆಫ್ ಎಂಬುವವನು ಕ್ರಿ.ಶ.೧೮೩೪ರಲ್ಲಿ ಭಾರತೀಯ ಶಾಸನಗಳನ್ನು ಓದುವ ಕಾರ್ಯವನ್ನು ಆರಂಭಿಸಿದನು.[೫] ಕ್ರಿ.ಶ.೧೮೩೭–೩೮ರಲ್ಲಿ ಇವನು ಅಲಹಾಬಾದಿನ ಲೋಹಸ್ತಂಭಗಳ ಮೇಲಿನ ಬ್ರಾಹ್ಮಿಲಿಪಿಯನ್ನು ಓದುವದರಲ್ಲಿ ಯಶಸ್ವಿಯಾದನು. ಏಶಿಯಾಟಿಕ್ ಸಂಸ್ಥೆಯ ಸಲಹೆಯ ಮೇರೆಗೆ ಬ್ರಿಟೀಶ್ ಸರಕಾರವು 'Archiological Department'ನ್ನು ಸ್ಥಾಪಿಸಿ ಅದಕ್ಕೆ ಡೈರೆಕ್ಟರರನ್ನು ನೇಮಿಸಿತು.

ಕರ್ನಾಟಕದ ಶಾಸನಗಳ ಒಂದು ವ್ಯವಸ್ಥಿತವಾದ ಅಧ್ಯಯನವು ಆರಂಭವಾದದ್ದು ವಾಲ್ಟರ್ ಇಲಿಯಟ್ ಎಂಬಾತನಿಂದ. ಕ್ರಿ.ಶ.೧೮೩೭ರಲ್ಲಿ ಪ್ರಕಟವಾದ ಅವರ 'Hindu Inscriptions' ಎಂಬ ಲೇಖನದಿಂದ ಕರ್ನಾಟಕದ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸಗಳ ಅಧ್ಯಯನದಲ್ಲಿ ಒಂದು ಹೊಸ ಅಧ್ಯಾಯವೇ ಆರಂಭವಾಗುತ್ತದೆ. ಮೈಸೂರಿನ ಆಂಗ್ಲ ಸೈನ್ಯದಲ್ಲಿ ಅಧಿಕಾರಿಯಾಗಿದ್ದ ಕರ್ನಲ್ ಮೆಕೆಂಜಿ ಎಂಬಾತನಿಗೆ ಸಂಶೋಧನೆಯ ಹುಚ್ಚು ರಕ್ತಗತವಾಗಿತ್ತು. ಈತನು ಮೈಸೂರು ರಾಜ್ಯದ ಭೌಗೋಳಿಕ ಪರೀವಿಕ್ಷಣೆ ಕೈಗೊಂಡು ಅನೇಕ ಶಾಸನಗಳನ್ನು ಮತ್ತು ಹಳೆಯ ಗ್ರಂಥಗಳನ್ನು ಸಂಗ್ರಹಿಸಿ ಇಂಗ್ಲೆಂಡಿಗೆ ಕಳುಹಿಸಿದನು. ಮೆಕೆಂಜಿಗೆ ಈ ಕಾರ್ಯದಲ್ಲಿ ಸಹಾಯ ಮಾಡಿದವನು ಕವಲ್ಲಿ ವೆಂಕಟಬೋರೈಯ. ಮೆಕೆಂಜಿಯು ಸುಮಾರು ೬೦೦೦ ಶಾಸನಗಳನ್ನು ಸಂಗ್ರಹಿಸಿದನು. ಕರ್ನಾಟಕದ ಶಾಸನಗಳ ಅಭ್ಯಾಸಕ್ಕೆ ಈತನು ಆಸ್ತಿಭಾರವನ್ನು ಹಾಕಿದನು.

ಬ್ರೌನ್ಸ, ಕೋಲ್‌ಬ್ರುಕ್, ಪ್ರೋ. ವಿಲ್ಸನ್, ಮೆಕೆಂಜಿ, ಬೋರಯ್ಯ, ಹೆನ್ಸಿವಥೆನ್ ಮತ್ತು ಪ್ರಿನ್ಸೆಫ್ ಅವರುಗಳು ಕರ್ನಾಟಕದ ಶಾಸನಗಳ ಬಗ್ಗೆ ನೂರಾರು ಲೇಖನಗಳನ್ನು ಇಂಗ್ಲೀಷನಲ್ಲಿ ಬರೆದರು. ಪ್ರೋ. ಮ್ಯಾಕ್ಸಮುಲ್ಲರ್ ಅವರಿಗೆ ಭಾರತಕ್ಕೆ ಬರುವ ಸುಯೋಗ ಒದಗಿಬರಲಿಲ್ಲ. ಆದರೂ ಇವರು ಪ್ರೋ. ವಿಲ್ಸನ್‌ರಿಂದ ಭಾರತ ದೇಶದ ಸಾಹಿತ್ಯ ದರ್ಶನವನ್ನು ಕೇಳಿ ತಿಳಿದುಕೊಂಡರು. ಹಾಗೆಯೇ ಮೆಕೆಂಜಿ ಕಳುಹಿಸಿದ ಭಾರತದ ಅನೇಕ ಹಳೆಯ ಗ್ರಂಥರಾಶಿಯನ್ನು ಓದಿ ತಿಳಿದುಕೊಂಡು ಜಗತ್ಪ್ರಸಿದ್ಧ ವಿದ್ವಾಂಸರೆನಿಸಿಕೊಂಡರು.

ವಾಲ್ಟರ್ ಇಲಿಯಟ್ಟ್ ಅವರು ಕರ್ನಾಟಕದ ೧೩೦೦ ಶಾಸನಗಳನ್ನು ಸಂಗ್ರಹಿಸಿ ೫೯೫ ಲೇಖನಗಳನ್ನು ಬರೆದು 'Karnatak-Desha Inscriptions' ಎಂಬ ಗ್ರಂಥದಲ್ಲಿ ಪ್ರಕಟಿಸಿದರು. ಕ್ರಿ.ಶ.೧೮೬೫-೬೬ರಲ್ಲಿ ಮೈಸೂರು ಮತ್ತು ಉತ್ತರ ಕರ್ನಾಟಕದಲ್ಲಿ ಶಾಸನಗಳ ಭಾವಚಿತ್ರಗಳನ್ನು ತೆಗೆದು ಸಂಗ್ರಹಿಸುವ ಕಾರ್ಯಾರಂಭವಾಯಿತು. ಕ್ರಿ.ಶ.೧೮೭೬ರಲ್ಲಿ ಡಾ. ಬರ್ಗೆಸ್ ಮತ್ತು ಡಾ. ಕಿಟೆಲ್ಲ ಮುಂತಾದ ವಿದ್ವಾಂಸರು 'Indian Antiquary' ಎಂಬ ಪತ್ರಿಕೆಯನ್ನಾರಂಭಿಸಿದರು. ಈ ಪತ್ರಿಕೆ ಕರ್ನಾಟಕದ ಶಾಸನಗಳ ಅಧ್ಯಯನಕ್ಕೆ ಉತ್ತೇಜನ ನೀಡುವುದರ ಜೊತೆಗೆ ಪುರಾತನ ಅವಶೇಷಗಳ ಅಧ್ಯಯನ ಮತ್ತು ಮಹತ್ವದ ಕಡೆ ಸರಕಾರದ ಗಮನ ಹರಿಸುವಂತೆ ಮಾಡಿತು.

ಜಾನ್ ಫೇಥ್‌ಫುಲ್ ಫ್ಲೀಟ್ ಮತ್ತು ಬೆಂಜಮಿನ್ ಲೂಯಿ ರೈಸ್ ಇವರಿಬ್ಬರೂ ಕರ್ನಾಟಕದ ಸಮಗ್ರ ಶಾಸನಗಳನ್ನು ಬೆಳಕಿಗೆ ತಂದ ದಿಗ್ಗಜರು. ಫ್ಲೀಟ್ ಅವರು ಒಟ್ಟು ೯ ಸಂಪುಟಗಳಲ್ಲಿ ಕರ್ನಾಟಕದ ಕನ್ನಡ, ಸಂಸ್ಕೃತ ಶಾಸನಗಳನ್ನು ಪ್ರಕಟಿಸಿದ್ದಾರೆ. ಕ್ರಿ.ಶ.೧೮೭೯ರಲ್ಲಿ ಬಿ.ಎಲ್.ರೈಸ್ ಅವರು 'Mysore Inscription' ಎಂಬ ಗ್ರಂಥ ಪ್ರಕಟಿಸಿದರು. ನಂತರ 'Epigraphia Carnatica'ಎಂಬ ಹೆಸರಿನಲ್ಲಿ ೧೨ ಸಂಪುಟಗಳು ಪ್ರಕಟಗೊಂಡಿವೆ. ಆರ್.ರಾಮರಾವ್, ಡಾ. ಎಸ್.ಸಿ.ನಂದೀಮಠ, ರಾಜಪುರೋಹಿತ, ಪ್ರೋ. ಕೆ.ಜೆ.ಕುಂದಣಗಾರ, ಆರ್.ಎಸ್.ಪಂಚಮುಖಿ, ನೆಲಮಂಗಲ ಲಕ್ಷ್ಮಿನಾರಾಯಣರಾಯ, ಡಾ. ಪಿ.ಬಿ.ದೇಸಾಯಿ, ಡಾ. ಜಿ.ಎಸ್.ಗಾಯಿ, ಆರ್.ನರಸಿಂಹಾಚಾರ್ಯ, ಎಂ.ಎಚ್.ಕೃಷ್ಣ ಮುಂತಾದವರು ಶಾಸನಗಳ ಅಧ್ಯಯನ ಆರಂಭಿಸಿದರು.

ಕ್ರಿ.ಶ.೧೮೯೬ ರಿಂದ ಕ್ರಿ.ಶ.೧೯೦೬ರವರೆಗೆ ಆರ್.ನರಸಿಂಹಾಚಾರ್ಯರು ಮೈಸೂರು ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರರಾಗಿದ್ದಾಗ, 'Mysore Archaeological Report'ಗಳನ್ನು ಪ್ರಕಟಿಸಿದರು. ಇದರಲ್ಲಿ ಅನೇಕ ಹೊಸ ಶಾಸನಗಳನ್ನು ಬೆಳಕಿಗೆ ತಂದರು. ಡಾ. ಎಂ.ಎಚ್.ಕೃಷ್ಣ ಅವರು ಮೈಸೂರು ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದಾಗ Epigraphia Carnatica Volume-೧೩,೧೪,೧೫ ಮತ್ತು ೧೬ನೆಯ ಸಂಪುಟಗಳನ್ನು ಹೊರತಂದರು. ೧೭ನೆಯ ಸಂಪುಟವನ್ನು ಡಾ. ಶೇಷಾದ್ರಿಯವರು ಪ್ರಕಟಿಸಿದರು.

'Archaeological Survey of India' ಇಲಾಖೆಯವರು 'South Indian Inscriptions' ಎಂಬ ಹೆಸರಲ್ಲಿ ೨೦ ಸಂಪುಟಗಳನ್ನು ಪ್ರಕಟಿಸಿದರು. ಈ ಸಂಪುಟಗಳಿಗೆ ಎಚ್.ಕೃಷ್ಣಶಾಸ್ತ್ರೀ, ಕೆ.ವ್ಹಿ.ಸುಬ್ರಹ್ಮಣ್ಯ ಅಯ್ಯರ, ಆರ್.ಶಾಮಶಾಸ್ತ್ರಿ, ಎನ್.ಲಕ್ಷ್ಮಿನಾರಾಯಣರಾಯ, ಆರ್.ಎಸ್.ಪಂಚಮುಖಿ, ಡಾ. ಪಿ.ಬಿ.ದೇಸಾಯಿ, ಕೆ.ಜಿ.ಕೃಷ್ಣನ್ ಹಾಗೂ ಡಾ. ಜಿ.ಎಸ್.ಗಾಯಿಯವರು ಸಂಪಾದಕರಾಗಿದ್ದರು.

ಕ್ರಿ.ಶ.೧೯೩೯ರಲ್ಲಿ ಧಾರವಾಡದಲ್ಲಿ 'ಕನ್ನಡ ಸಂಶೋಧನಾ ಸಂಸ್ಥೆ' ಸ್ಥಾಪಿಸಲ್ಪಟ್ಟಿತು. ಇಲ್ಲಿಂದ 'ಕರ್ನಾಟಕ ಇನ್ಸಕ್ರಿಪ್ಷನ್ಸ್'ನ ೬ ಸಂಪುಟಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಮೊದಲಿನ

ಮೂರು ಸಂಪುಟಗಳು ಆರ್.ಎಸ್.ಪಂಚಮುಖಿಯವರಿಂದ, ೪ನೆಯದು ಮೇವುಂಡಿ ಮಲ್ಲಾರಿ ಮತ್ತು ಎ.ಎಂ.ಅಣ್ಣಿಗೇರಿಯವರಿಂದ ೫, ೬ನೆಯ ಸಂಪುಟಗಳು ಡಾ. ಬಾ.ರಾ.ಗೋಪಾಲರಿಂದ ಸಂಪಾದನೆಗೊಂಡಿವೆ.

ಹೀಗೆ ಕರ್ನಾಟಕದ ಶಾಸನಗಳ ಶೋಧ ಮತ್ತು ಅಧ್ಯಯನ ಆರಂಭಗೊಂಡಿತು. ಪ್ರೋ. ಕೆ.ಜೆ.ಕುಂದಣಕಾರ, ಡಾ. ಪಿ.ಬಿ.ದೇಸಾಯಿ, ಡಾ. ಎಚ್.ಎಸ್.ರಿತ್ತಿ, ಆರ್.ಎಸ್. ಪಂಚಮುಖಿ, ಕಪಟ್ರಾಳ ಕೃಷ್ಣರಾಯ, ಡಾ. ಎಂ.ಚಿದಾನಂದಮೂರ್ತಿ, ಡಾ. ಎಂ.ಎಂ.ಕಲಬುರ್ಗಿ ಇನ್ನೂ ಅನೇಕ ಕನ್ನಡ ನಾಡಿನ ವಿದ್ವಾಂಸರು ಶಾಸನಗಳ ಅಧ್ಯಯನಕ್ಕೆ ತೊಡಗಿ ಅನೇಕ ದೃಷ್ಟಿಕೋನಗಳಿಂದ ನಮ್ಮ ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ.

ಕುಷ್ಟಗಿ ತಾಲ್ಲೂಕಿನ ಶಾಸನಗಳ ಅಧ್ಯಯನ ಹೀಗೆ ನಡೆದಿದೆ ಎನ್ನುವುದರ ಸಮೀಕ್ಷೆ ಈ ಕೆಳಗಿನಂತೆ ಗಮನಿಸಬಹುದಾಗಿದೆ. ಕ್ರಿ.ಶ.೧೯೩೨ರಲ್ಲಿ ಬಿ.ಕೆ.ಯಜ್ದಾನಿ ಅವರು ಕೊಪ್ಪಳದ ಆರು ಶಾಸನಗಳನ್ನು 'ಎಪಿಗ್ರಾಫಿಯಾ ಇಂಡೋ ಮೊಸ್ಲೆಮಿಕಾ ವಿಭಾಗ-೬' ರಲ್ಲಿ ಪ್ರಕಟಿಸಿದರು. ಕ್ರಿ.ಶ.೧೯೩೫ರಲ್ಲಿ ಸಿ.ಆರ್. ಕೃಷ್ಣಮಾಚಾರಲು ಅವರು ಬರೆದ 'Kannada Inscription of Koppal' ಎಂಬ ಗ್ರಂಥವನ್ನು ಆಂದ್ರಪ್ರದೇಶ ಸರಕಾರದ ಪುರಾತತ್ವ ಇಲಾಖೆ ಪ್ರಕಟಿಸಿತು. ಕ್ರಿ.ಶ.೧೯೫೨ರಲ್ಲಿ ಆರ್.ಎಲ್.ಟರ್ನರ್ ಅವರು ಗವಿಮಠ ಮತ್ತು ಪಾಲ್ಕಿಗುಂಡಿನಲ್ಲಿರುವ ಅಶೋಕನ ಕಾಲದ ಶಾಸನಗಳನ್ನು ಓದಿದರು. ಕ್ರಿ.ಶ.೧೯೫೯ರಲ್ಲಿ ಡಾ. ಪಿ.ಬಿ.ದೇಸಾಯಿ ಅವರು ಅಂದಿನ ರಾಯಚೂರ ಜಿಲ್ಲೆಯ (ಇಂದಿನ ಕೊಪ್ಪಳ ಜಿಲ್ಲೆಯ ಪ್ರದೇಶವು ಒಳಗೊಂಡು) ೫೩ ಶಾಸನಗಳನ್ನು ಉತ್ಖನನ ಮಾಡಿ 'ಶಾಸನ ಪರಿಚಯ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದರು. ಕ್ರಿ.ಶ.೧೯೭೬ರಲ್ಲಿ ಡಾ. ಶ್ರೀನಿವಾಸ ರಿತ್ತಿ ಅವರು 'ಗವಿದೀಪ್ತಿ' ಎಂಬ ಸ್ಮರಣಸಂಚಿಕೆಯಲ್ಲಿ 'ಕೊಪ್ಪಳ ನಾಡಿನ ಶಾಸನಗಳು' ಎಂಬ ಲೇಖನವನ್ನು ಬರೆದರು. ಕ್ರಿ.ಶ.೧೯೯೮ರಲ್ಲಿ ಹಂಪಾ ನಾಗರಾಜಯ್ಯ ಅವರು 'ಕೊಪ್ಪಳ ಶಾಸನಗಳು' ಎಂಬ ಗ್ರಂಥವನ್ನು ಪ್ರಕಟಿಸಿದರು. ಕ್ರಿ.ಶ.೧೯೯೮ರಲ್ಲಿ ಡಾ. ಚನ್ನಬಸಪ್ಪ ಪಾಟೀಲ ಮತ್ತು ಶ್ರೀಮತಿ ವಿನೋದಾ ಪಾಟೀಲ ಅವರು "Inscription's of Koppal District' (Insenptions of Karnataka – Vol-III) ಬರೆದು ಮೈಸೂರು ಪುರಾತತ್ವ ಇಲಾಖೆಯಿಂದ ಪ್ರಕಟಿಸಿದರು. ಇದರಲ್ಲಿ ಜಿಲ್ಲೆಯಾದ್ಯಂತ ಒಟ್ಟು ೪೩೩ ಶಾಸನಗಳ ಉಲ್ಲೇಖವಿದ್ದು, ಅವುಗಳಲ್ಲಿ ಕುಷ್ಟಗಿ ತಾಲ್ಲೂಕಿನಲ್ಲಿ ಒಟ್ಟು ೩೫ ಶಾಸನಗಳಿವೆ. ARIE (Annnal Reports on Indian Epigraphy)ಯಲ್ಲಿ ಕುಷ್ಟಗಿ ತಾಲ್ಲೂಕಿನ ಕ್ರಿ.ಶ.೧೯೯೫-೯೬ರಲ್ಲಿ ಒಂದು ಶಾಸನ, ಕ್ರಿ.ಶ.೧೯೮೦-೮೧ರಲ್ಲಿ ಒಂಭತ್ತು ಶಾಸನಗಳು, ೧೯೮೧-೮೨ರಲ್ಲಿ ಹದಿನೆಂಟು ಶಾಸನಗಳು, ಕ್ರಿ.ಶ.೧೯೮೪-೮೫ರಲ್ಲಿ ಒಂದು ಶಾಸನ, ಕ್ರಿ.ಶ.೧೯೮೫-೮೬ರಲ್ಲಿ ಎರಡು ಶಾಸನಗಳು, ಕ್ರಿ.ಶ.೧೯೮೯-೯೦ರಲ್ಲಿ ನಾಲ್ಕು ಶಾಸನಗಳು ಹೀಗೆ ಒಟ್ಟು ೩೫ ಶಾಸನಗಳು ಪ್ರಕಟಗೊಂಡಿವೆ.

ಕ್ರಿ.ಶ.೧೯೯೯ರಲ್ಲಿ ಡಾ. ದೇವರಕೊಂಡಾರೆಡ್ಡಿ, ಡಾ. ಕೆ.ಜಿ.ಭಟಸೂರಿ, ಶ್ರೀ. ಕಲವೀರ ಮನ್ವಾಚಾರ ಮತ್ತು ಡಾ. ಡಿ.ವಿ.ಪರಮಶಿವಮೂರ್ತಿ ಅವರುಗಳ ಸಂಪಾದಕತ್ವದಲ್ಲಿ 'ಕನ್ನಡ

[illegible]

ವಿಶ್ವವಿದ್ಯಾಲಯ, ಶಾಸನ ಸಂಪುಟ-೨ ಕೊಪ್ಪಳ ಜಿಲ್ಲೆ' ಪ್ರಕಟಗೊಂಡಿತು. ಇದರಲ್ಲಿ ಜಿಲ್ಲೆಯಾದ್ಯಂತ ಒಟ್ಟು ೩೭೮ ಶಾಸನಗಳ ಉಲ್ಲೇಖವಿದ್ದು, ಕುಷ್ಟಗಿ ತಾಲ್ಲೂಕಿನ ೩೧ ಶಾಸನಗಳು ಪ್ರಕಟಗೊಂಡಿವೆ. ಈ ಶಾಸನಗಳ ಮೂಲ ಪದ್ಯಗಳೊಂದಿಗೆ ಸಂಕ್ಷಿಪ್ತ ಸಾರಾಂಶ ಸಹಿತವಾಗಿ ಇದರಲ್ಲಿ ವಿವರಿಸಲಾಗಿದೆ. ಒಂದು ಎರಡು ಪದಗಳಿರುವ, ಅಸ್ಪಷ್ಟವಾದ, ತ್ರುಟಿತ ಶಾಸನಗಳನ್ನು ಹೊರತುಪಡಿಸಿ ಸ್ಪಷ್ಟವಾದ ಶಾಸನಗಳನ್ನು ಮಾತ್ರ ಇಲ್ಲಿ ಪ್ರಕಟಿಸಲಾಗಿದೆ. ಈ ನಮ್ಮ ಅಧ್ಯಯನದಲ್ಲಿ ಒಂದು ಪದದ ಮತ್ತು ಅಸ್ಪಷ್ಟ ಮಾಹಿತಿಯ ಶಾಸನಗಳನ್ನು ಹೊರತುಪಡಿಸಿ ಸ್ಪಷ್ಟವಾದ ಶಾಸನಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿಯವರೆಗೆ ನಡೆದ ಅಧ್ಯಯನ ಗಮನಿಸಿ ನಡೆಯದಿರುವ ಅಧ್ಯಯನವನ್ನು ನನ್ನ ಸಂಶೋಧನೆಗೆ ಒಳಪಡಿಸುವಾಗ ಕುಷ್ಟಗಿ ಪರಿಸರ ಇತಿಹಾಸ ಸಂಸ್ಕೃತಿಯನ್ನು ಬಿತ್ತರಿಸುವ ಕಾರ್ಯವನ್ನು ಕೈಗೊಂಡಿದ್ದೇನೆ. ಈ ವಿಷಯವನ್ನು ಕುರಿತು ಅಧ್ಯಯನದ ಕೊರತೆಯನ್ನು ಈ ನಮ್ಮ ಅಧ್ಯಯನದ ಮೂಲಕ ನೀಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ.

೩.೨. ಶಾಸನ ವಸ್ತು, ವಿಷಯ ಮತ್ತು ವೈವಿಧ್ಯ

ಕರ್ನಾಟಕದ ಇತಿಹಾಸ ಹಾಗೂ ಪ್ರಾಚೀನ ಸಂಸ್ಕೃತಿಯನ್ನು ತಿಳಿಯುವಲ್ಲಿ ನಮಗೆ ಏಕೈಕ ಆಧಾರವೆಂದರೆ ಶಾಸನಗಳು. ಈ ಶಾಸನಗಳನ್ನು ಆಕರ ಮಾಡಿಕೊಂಡು ಇತಿಹಾಸದ ಪುಟಗಳಲ್ಲಿ ಗತಿಸಿಹೋದ ಅರಸರ, ಅವರ ವಂಶಾವಳಿ, ಸೈನಿಕ ಸಾಧನೆ, ಧಾರ್ಮಿಕ, ಕಲೆ, ವಾಸ್ತುಶಿಲ್ಪಗಳ ಇತಿಹಾಸವನ್ನು ಮರು ರಚಿಸಲು ಸಾಧ್ಯವಾಗಿದೆ. ಭಾರತ ದೇಶದಲ್ಲಿ ಶಾಸನಗಳ ಚರಿತ್ರೆ ಮೌರ್ಯರ ಶ್ರೇಷ್ಠ ಅರಸನಾದ ಅಶೋಕನ ಕಾಲದಿಂದ ಆರಂಭಗೊಂಡು ವಿಜಯನಗರದ ಕೊನೆಯ ಕಾಲಾವಧಿಯವರೆಗೆ ಮುಂದುವರೆಯುತ್ತದೆ. ಈ ನಾಡನ್ನು ಆಳಿದ ಮೌರ್ಯರು, ಪಲ್ಲವರು, ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಯಾದವರು, ಹೊಯ್ಸಳರು ಮತ್ತು ವಿಜಯನಗರದವರೆಗೆ ಸುಮಾರು ೧೮ ಶತಕಗಳ ಸುದೀರ್ಘ ಕಾಲಾವಧಿಯಲ್ಲಿ ಸಾವಿರಾರು ಶಾಸನಗಳು ರೂಪಗೊಂಡಿವೆ.[೧]

ರಾಜನ ಆಜ್ಞೆಯಂತೆ ಅವನು ಕೊಟ್ಟ ದಾನ ಧರ್ಮವನ್ನು ಘೋಷಿಸುವುದಕ್ಕಾಗಿ ಈ ಶಾಸನಗಳು ರಚಿತವಾದವು. ತಾಳೇಗರಿ ಬೂರ್ಜ್ವಪತ್ರ, ಕಾಗದಗಳ ಮೇಲೆ ಕಂಡುಬರುವ ಬರೆಹಗಳನ್ನು ಬಿಟ್ಟು ಬಹುಕಾಲ ಉಳಿಯುವಂಥ ಸಾಮಗ್ರಿಯ ಮೇಲೆ ಕೆತ್ತಿರುವ ಬರೆಹಗಳನ್ನು ಶಾಸನಗಳೆಂದು ಹೇಳಬಹುದಾಗಿದೆ. 'ಶಾಸನ' ಎಂಬ ಶಬ್ದ ಸಂಸ್ಕೃತದ 'ಶಾಸ್' ಎಂಬ ಶಬ್ದದಿಂದ ಬಂದಿದೆ. 'ಶಾಸ್' ಎಂದರೆ ಅಪ್ಪಣೆ ಮಾಡು, ಘೋಷಣೆಗಳನ್ನು ಹೊರಡಿಸು, ಆಜ್ಞೆಮಾಡು ಎಂಬ ಅರ್ಥಗಳು ಹೊರಡುತ್ತವೆ.

ಕೌಟಿಲ್ಯನ ಪ್ರಕಾರ 'ಶಾಸನ' ರಾಜರ ಆಜ್ಞೆಗಳನ್ನು ತಿಳಿಸುವ ಬರೆಹವನ್ನು ಹೇಳುತ್ತವೆ.[೨] ಶುಕ್ರಾಚಾರ್ಯರ ಶುಕ್ರನೀತಿಸಾರದ ಪ್ರಕಾರ 'ಶಾಸನ ಪತ್ರದಲ್ಲಿ ರಾಜನ ಸ್ವಂತ ರುಜುವೂ, ಆಜ್ಞೆ ಹೊರಟ ದಿನಾಂಕವೂ ಇರಬೇಕು. ಆ ಶಾಸನವು ಹೀಗೆ ಆರಂಭವಾಗಬೇಕು. ನೀವೆಲ್ಲ ಕೇಳಿರಿ. ನೀವೆಲ್ಲ ಹೀಗೆ ಮಾಡಬೇಕು. ಈ ಆಜ್ಞೆಯಂತೆ ನಡೆದುಕೊಳ್ಳಬೇಕು'. ಇವು ಸಾಮಂತರಿಗೆ

[illegible]

ಮಾಂಡಲೀಕರಿಗೆ ಮತ್ತು ಇತರ ಅಧಿಕಾರಿಗಳಿಗೆ ಒಪ್ಪಿಸಿದ ಕರ್ತವ್ಯಗಳ ನಿರೂಪಣೆಗಳು. 'ಲೇಖನವಿಲ್ಲದೆ ಆಜ್ಞೆ ಮಾಡುವ ರಾಜ ಇಂತಹ ಆಜ್ಞೆ ಪತ್ರಗಳಿಲ್ಲದೆ ಅಧಿಕಾರವನ್ನು ಪ್ರಯೋಗಿಸುವ ಅಧಿಕಾರಿಗಳಿಬ್ಬರೂ ಚೋರರು' 'ರಾಜಮುದ್ರಾ ಸಹಿತವಾದ ರಾಜನೇ ನಿಜವಾದ ರಾಜ ಬರಿಯ ರಾಜ ರಾಜನೇ ಅಲ್ಲ'.[೩]

ಯಾಜ್ಞವಲ್ಕ್ಯ ಸಂಹಿತೆಯ ಪ್ರಕಾರ 'ಭೂಮಿಯನ್ನು ದಾನ ಮಾಡುವಾಗಲೋ ಅಥವಾ ಯಾವುದಾದರೂ ಶಾಶ್ವತವಾದ ಏರ್ಪಾಟನ್ನು ಮಾಡುವಾಗಲೋ ಅದರ ನಿಯಮಗಳನ್ನು ಮುಂದಿನ ರಾಜರ ತಿಳುವಳಿಕೆಗಾಗಿ ವಸ್ತ್ರಪಟ ಅಥವಾ ತಾಮ್ರಪಟದ ಮೇಲೆ ಬರೆಯಿಸಬೇಕು. ಅದರಲ್ಲಿ ತನಗಿಂತ ಹಿಂದಿನ ತಲೆಮಾರುಗಳ ವಿಷಯ, ದಾನವನ್ನು ಸ್ವೀಕರಿಸುವವನ ವಿಷಯ, ದಾನದ ಪ್ರಮಾಣ, ಭೂಮಿಯ ಮೇರೆಗಳು, ದಿನಾಂಕ ಇವುಗಳನ್ನು ನಿರೂಪಿಸಿ ತನ್ನ ಮುದ್ರೆ ಮತ್ತು ಸಹಿ ಹಾಕಬೇಕು. ಹೀಗೆ ದಾನವು ಶಾಶ್ವತವಾಗಿ ನಡೆಯುವಂತೆ ಮಾಡಬೇಕು'.[೪]

ವೇದಕಾಲದ ಯಜ್ಞಯಾಗಾದಿಗಳ ಕಾಲದಲ್ಲಿ ಧರ್ಮಶಾಸನಗಳನ್ನು ಬರೆದಿಡುವ ಪದ್ಧತಿ ಪ್ರಚಲಿತವಾಗಿದ್ದಂತೆ ತಿಳಿದುಬರುತ್ತದೆ.[೫] ಅಶೋಕನ ಕಾಲದಲ್ಲಿ ಶಾಸನಗಳು ದಾನ ಪತ್ರಗಳ ರೂಪವನ್ನಲ್ಲದೆ, ಧರ್ಮಬೋಧನೆಯ ಪಾಠಗಳಾಗಿಯೂ ಪರಿಣಮಿಸಿದವು. ಅಂದರೆ, ಶಾಸನಗಳ ಹುಟ್ಟಿಗೆ ಧರ್ಮವೇ ಮೂಲ ಪ್ರೇರಕ ಶಕ್ತಿಯಾಗಿ ಪರಿಣಮಿಸಿತ್ತೆನ್ನಬಹುದು. 'ಶಾಸನಗಳ ಉಗಮ ದಾನಧರ್ಮಗಳಲ್ಲಿ' ಎಂಬ ಮಾತನ್ನು ಇದು ಸಮರ್ಥಿಸುತ್ತದೆ. ಸಾಮಾನ್ಯವಾಗಿ ರಾಜನ ಇಲ್ಲವೆ ಅವನ ಅಧಿಕಾರಿಗಳಿಂದ ಮಂತ್ರಿಗಳು ಮೊದಲಾದವರ ಆಜ್ಞೆಯಂತೆ ಶಾಸನಗಳು ಬರೆಸಲ್ಪಟ್ಟವು. ಎಲ್ಲಾ ಶಾಸನಗಳು ಆಜ್ಞೆಯನ್ನೇ ಹೊಂದಿರುವುದಿಲ್ಲ. ಆದರೆ ಈ ರೀತಿಯ ಬರೆಹಗಳು ರಾಜರ ಮಂತ್ರಿಗಳ ಮತ್ತು ಇತರ ಅಧಿಕಾರಿಗಳ ಅಧಿಕಾರದ ಮುದ್ರೆಯಿಂದ ರಚಿತವಾಗುತ್ತಿದ್ದವು. ಅಂದರೆ ಈ ಬರೆಹಗಳು ಪ್ರಮಾಣಯುಕ್ತ ಅಥವಾ ಅಧಿಕಾರಯುಕ್ತವಾಗಿದ್ದುದರಿಂದ ಈ ರೀತಿಯ ಬರೆಹಗಳೆಲ್ಲವನ್ನು 'ಶಾಸನ' ಎಂದು ಕರೆಯುತ್ತೇವೆ.[೬]

ಕರ್ನಾಟಕದಲ್ಲಿ ಶಾಸನಗಳು ನಮಗೆ ಕ್ರಿ.ಪೂ.೩ನೆಯ ಶತಮಾನದಿಂದ ಕಂಡುಬಂದರೂ ಅವುಗಳ ರಚನೆ ನಿಯಮಗಳನ್ನು ರೂಪಿಸಿದ್ದು ಸ್ಮೃತಿಗಳ ಕಾಲಕ್ಕೆ. ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ, ಬೃಹಸ್ಪತಿ, ಯಾಜ್ಞವಲ್ಕ್ಯ ಸ್ಮೃತಿ ಮೊದಲಾದ ಗ್ರಂಥಗಳು ಈ ಬಗ್ಗೆ ತಿಳಿಸುತ್ತವೆ. ಸಾಮಾನ್ಯವಾಗಿ ಕಲ್ಲು, ಲೋಹ, ತಗಡು, ನಾಣ್ಯ, ವಿಗ್ರಹ, ಶಂಖ, ದಂತ, ಮಣ್ಣಿನ ಮಡಕೆ, ಮರ, ಪ್ರಾಣಿಗಳ ಚರ್ಮ ಮುಂತಾದ ವಸ್ತುಗಳ ಮೇಲೆ ಕಾಣಬರುವ ಬರವಣಿಗೆಗಳನ್ನು ಮಾತ್ರ ಶಾಸನವೆಂದು ಹೇಳುತ್ತೇವೆ. ಇವುಗಳಲ್ಲದೆ ಚಿನ್ನ, ಬೆಳ್ಳಿ, ಹಿತ್ತಾಳೆ, ಕಂಚು ಮುಂತಾದ ಲೋಹಗಳ ಮೇಲೆ ಮತ್ತು ಲೋಹೇತರ ವಸ್ತುಗಳ ಮೇಲೆಯೂ ಶಾಸನಗಳನ್ನು ಬರೆದಿರುವ ನಿದರ್ಶನಗಳನ್ನು ಕಾಣಬಹುದಾಗಿದೆ. ಕಾಗದ, ಓಲೆಗರಿ, ತಾಳೆಗರಿ ಮುಂತಾದ ವಸ್ತುಗಳ ಮೇಲಿನ ಬರವಣಿಗೆಯನ್ನು ಶಾಸನದಲ್ಲಿ ಸಾಮಾನ್ಯವಾಗಿ ಸೇರಿಸುವುದಿಲ್ಲ.

ಶಾಸನಗಳನ್ನು ಯಾವ ವಸ್ತು ಮಾಧ್ಯಮದ ಮೇಲೆ ಕೊರೆಯಲಾಗಿದೆ ಎಂಬ ಅಂಶದ ಮೇಲೆ ವರ್ಗೀಕರಿಸಲಾಗುತ್ತದೆ. ಶಿಲಾಶಾಸನ ಮತ್ತು ತಾಮ್ರಶಾಸನ ಎಂಬೆರಡು ಪ್ರಕಾರಗಳೇ

ಪ್ರಮುಖವಾದ ವಿಭಾಗಗಳು. ಕರ್ನಾಟಕದ ಆರಂಭ ಶಾಸನಗಳು ಬಹುಪಾಲು ತಾಮ್ರಶಾಸನಗಳೇ ಆಗಿವೆ. ಕುಷ್ಟಗಿ ತಾಲ್ಲೂಕಿನಾದ್ಯಂತ ಈ ವರೆಗೆ ಯಾವುದೇ ತಾಮ್ರಶಾಸನಗಳು ದೊರೆತಿರುವ ಬಗ್ಗೆ ತಿಳಿದುಬಂದಿಲ್ಲ. ಆದರೆ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨ರಲ್ಲಿ ೩೧ ಶಿಲಾಶಾಸನಗಳು ಪ್ರಕಟವಾಗಿವೆ. ನಮ್ಮ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಐದು ಅಪ್ರಕಟಿತ ಶಾಸನಗಳು ಕಂಡುಬಂದಿವೆ. ಆದರೆ ಅವುಗಳ ಮೇಲಿರುವ ಅಕ್ಷರಗಳು ಅಸ್ಪಷ್ಟವಾಗಿದ್ದು, ಶಿಲ್ಪಗಳು ಸ್ಪಷ್ಟವಾಗಿವೆ.

ಕರ್ನಾಟಕದಲ್ಲಿ ಕ್ರಿ.ಪೂ.೩ನೆಯ ಶತಮಾನದಿಂದ ಶಾಸನಗಳ ಇತಿಹಾಸ ಆರಂಭ ಗೊಂಡರು ಕ್ರಿ.ಶ.೮ನೆಯ ಶತಮಾನದ ನಂತರ ಶಿಲಾಶಾಸನಗಳು ವಿಫುಲವಾಗಿ ದೊರೆಯುತ್ತವೆ. ಕ್ರಿ.ಶ.೧೨ನೆಯ ಶತಮಾನದಲ್ಲಂತೂ ಅಸಂಖ್ಯಾತ ಶಿಲಾಶಾಸನಗಳು ಕಂಡುಬಂದಿವೆ. ದಾನ ಶಾಸನಗಳು, ಪ್ರಶಸ್ತಿ ಶಾಸನಗಳು, ವೀರಗಲ್ಲು, ಮಾಸ್ತಿಕಲ್ಲು ಅಥವಾ ಮಹಾಸತಿ ಕಲ್ಲುಗಳು, ರಾಜಾಜ್ಞೆಗಳು ಧಾರ್ಮಿಕ ಆತ್ಮಹತ್ಯೆಯನ್ನು ಮಾಡಿಕೊಂಡ ವೀರರ ಸ್ಮಾರಕಗಳು, ಯಂತ್ರಕಲ್ಲುಗಳು, ಗಡಿಕಲ್ಲುಗಳು, ಲಿಂಗಮುದ್ರೆ, ವಾಮನಮೂರ್ತಿ ಕಲ್ಲುಗಳು ಇತರೆ ಶಾಸನಗಳನ್ನು ಎಂಬುದಾಗಿ ವಿಂಗಡಿಸಬಹುದು. ನನ್ನ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಕುಷ್ಟಗಿ ಪರಿಸರದಲ್ಲಿ ಬಹುತೇಕ ಶಾಸನಗಳು ದಾನ ಶಾಸನಗಳೇ ಇವೆ.

ಶಾಸನಗಳು ಶಾಶ್ವತವಾಗಿರಬೇಕೆಂಬ ಆಕಾಂಕ್ಷೆಯಿಂದ ಕಲ್ಲಿನ ಮೇಲೆ ಕೆತ್ತಿಸುವ ಕಾರ್ಯ ಪ್ರಾರಂಭವಾಯಿತು. ಆರಂಭದ ಶಾಸನಗಳು ಒರಟಾದ ಬಂಡೆಗಳ ಮೇಲೆ ಕೆತ್ತಲಾಗುತ್ತಿತ್ತು. ಅಲ್ಲದೆ ಶಾಸನಗಳು ಚಿಕ್ಕದಾಗಿದ್ದು, ನೇರವಾಗಿ, ವಿಷಯ ಪ್ರವೇಶ ಮಾಡುತ್ತಿದ್ದವು. ಶಾಸನಗಳ ರಚನೆಯಲ್ಲಿ ಯಾವುದೇ ವ್ಯವಸ್ಥಿತ ಕ್ರಮ ಕಂಡುಬರುವುದಿಲ್ಲ. ಕ್ರಿ.ಶ.ಸು.೯-೧೦ನೆಯ ಶತಮಾನದ ನಂತರದ ಶಾಸನಗಳ ಕೆತ್ತನೆಯಲ್ಲಿ ಒಂದು ವ್ಯವಸ್ಥಿತ ಪದ್ಧತಿ ಬೆಳೆದುಬಂದಿತು. ಶಾಸನಗಳನ್ನು ಕಲಾತ್ಮಕವಾಗಿ ಮಾಡುವ ದೃಷ್ಟಿಯಿಂದ ಕಲ್ಲನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ಅದರ ಮೇಲ್ಭಾಗವನ್ನು ನಯವಾಗಿ ಮಾಡಿ ಅದಕ್ಕೆ ಹೊಳಪನ್ನು ಕೊಟ್ಟು ಅವುಗಳ ಮೇಲೆ ಶಾಸನಗಳನ್ನು ಬರೆಯುತ್ತಿದ್ದರು. ಸಾಮಾನ್ಯವಾಗಿ ಶಾಸನಗಳನ್ನು ಶಾಸನಾಧಿಕಾರಿಗಳು ಸುಣ್ಣ ಅಥವಾ ಬಣ್ಣದಿಂದ ಕಲ್ಲಿನ ಮೇಲೆ ಬರೆಯುತ್ತಿದ್ದರು. ಅದರಂತೆ ಕಲ್ಲಿನ ಕೆಲಸಗಾರನು ಅಕ್ಷರಗಳನ್ನು ಕಲ್ಲಿನ ಮೇಲೆ ಕೆತ್ತುತ್ತಿದ್ದನು. ಕೆತ್ತುವಾಗ ಆಕಸ್ಮಿಕ ತಪ್ಪುಗಳಾದರೆ ಹಂಸಪಾದಗಳನ್ನು ಹಾಕಿ ಸೂಚಿಸಲಾಗುತ್ತಿತ್ತು.

ಯಾವುದೇ ಬರೆಹವನ್ನು ಆರಂಭಿಸುವ ಮುನ್ನ ಶುಭ ಸೂಚಕ ಚಿಹ್ನೆ ಅಥವಾ ಪದ, ಸಂಕೇತಗಳನ್ನು ಮತ್ತು ಸಂಸ್ಕೃತ ಭಾಷೆಯ ಮಂಗಳ ಶ್ಲೋಕಗಳನ್ನು ಬರೆಯುವ ಸಂಪ್ರದಾಯ ರೂಢಿಯಲ್ಲಿತ್ತು. ಈ ಸಂಪ್ರದಾಯ ಶಾಸನಗಳ ರಚನೆಯಲ್ಲಿಯೂ ಕಂಡುಬರುತ್ತದೆ. ಕುಷ್ಟಗಿ ಪರಿಸರದ ಶಾಸನಗಳಲ್ಲಿ ಉಲ್ಲೇಖಿತ ಪ್ರಾರ್ಥನಾ ಶ್ಲೋಕಗಳನ್ನು ಪ್ರತ್ಯೇಕ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಪ್ರಾರ್ಥನಾ ಶ್ಲೋಕದ ನಂತರ ಶಾಸನವು ಯಾವ ಅರಸನ ಆಳ್ವಿಕೆಗೆ ಒಳಪಟ್ಟಿ ರುತ್ತದೆಯೋ ಆ ಅರಸನ ಎಲ್ಲ ಬಿರುದುಗಳೊಂದಿಗೆ ಆರಂಭವಾಗುತ್ತದೆ. ಅರಸನ ವಂಶವೃಕ್ಷದ ಅಥವಾ ವಂಶಾವಳಿಯ ಮಾಹಿತಿ ಮತ್ತು ವರ್ಣನೆಯು ಹಲವು ಶಾಸನಗಳಲ್ಲಿ ಕಂಡುಬರುತ್ತವೆ.

ಶಾಸನಗಳಲ್ಲಿ ಕಂಡುಬರುವ ಈ ಭಾಗವನ್ನು 'ರಾಜಾವಳಿ' ಎಂದು ಕರೆಯುತ್ತಾರೆ. ಕುಷ್ಟಗಿ ಪರಿಸರದ ಹಿರೇಮನ್ನಾಪುರದಲ್ಲಿರುವ ಕ್ರಿ.ಶ.೯೭ರ ಶಾಸನದಲ್ಲಿ[2] ಚಾಳುಕ್ಯ ಜಯಸಿಂಹನ ವಂಶಾವಳಿಯ ಉಲ್ಲೇಖವಿದೆ. ಸಾಮಾನ್ಯವಾಗಿ ರಾಜಾವಳಿಗಳನ್ನು ಅಧಿಕಾರಯುತವಾಗಿ ನಿರೂಪಿಸಬಲ್ಲ ಕವಿಗಳು ಆಳರಸರ ಸಮ್ಮತಿಯೊಂದಿಗೆ ನಿರ್ಮಾಣಮಾಡುತ್ತಿದ್ದರು.

ರಾಜನ ಬಿರುದು, ಪ್ರಶಸ್ತಿ, ರಾಜನ ವಂಶಾವಳಿಗಳು ಪ್ರಸ್ತಾಪವಾದ ಮೇಲೆ ಶಾಸನವನ್ನು ತಯಾರು ಮಾಡಿದ ಅಥವಾ ದಾನವನ್ನು ನೀಡಿದ ಕಾಲ ತೇದಿಯ ವಿವರಗಳನ್ನು ಶಾಸನದ ಪಾಠವು ಒಳಗೊಂಡಿರುತ್ತದೆ. ಶಾಸನಗಳಲ್ಲಿ ಪಕ್ಷ, ತಿಥಿ, ನಕ್ಷತ್ರ, ಸಂವತ್ಸರ, ಶಕ ಕಾಲವು ದಾನ ಕೊಡುವ ರಾಜನ ರಾಜ್ಯಭಾರದ ವರ್ಷಗಳನ್ನು ಒಳಗೊಂಡಿರುತ್ತದೆ. ಶಾಸನಗಳಲ್ಲಿ ಕಾಲಗಳ ಉಲ್ಲೇಖವಾಗಿರುತ್ತವೆ. ಇದು ಶಕವರ್ಷಗಳಲ್ಲಿರುತ್ತದೆ. ಹೆಚ್ಚಾಗಿ ಶಾಲಿವಾಹನ ಶಕೆ ಕೆಲವು ಕಡೆ ವಿಕ್ರಮ ಶಕೆ ಕಂಡುಬರುತ್ತವೆ. ಒಟ್ಟಿನಲ್ಲಿ ನಿಖರವಾದ ರೀತಿಯಲ್ಲಿ ಕಾಲವನ್ನು ಶಾಸನಗಳಲ್ಲಿ ನಿರೂಪಿತಗೊಂಡಿರುತ್ತವೆ. ಕುಷ್ಟಗಿ ಪರಿಸರದ ಶಾಸನಗಳಲ್ಲಿಯ ಕಾಲದ ಕುರಿತು ನಿರೂಪಣೆಯನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

ದಾನ ಕೊಟ್ಟವನ ವಿವರಗಳು ದಾನವನ್ನು ಸ್ವೀಕರಿಸುವ ವ್ಯಕ್ತಿಯ ಅಥವಾ ಯಾವುದಾದರೂ ಸಂಸ್ಥೆಗೆ ದಾನ ನೀಡಿದ್ದರೆ ಸಂಸ್ಥೆಯ ಪ್ರಸ್ತಾಪ ಬರುತ್ತದೆ. ಒಂದು ಪ್ರದೇಶದ ಸಾಮಾಜಿಕ, ಆರ್ಥಿಕ ಇತಿಹಾಸವನ್ನು ಅಧ್ಯಯನ ಮಾಡುವವರಿಗೆ ಶಾಸನಗಳಲ್ಲಿರುವ ದಾನದ ವಿವರ ಭಾಗವು ಅತ್ಯಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತವೆ. ಕುಷ್ಟಗಿ ಪರಿಸರದ ದಾನಶಾಸನಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಲಾಗಿದೆ. ದಾನದ ವಿವರಣೆಯ ನಂತರ ತಾನು ನೀಡಿದ ದಾನವು ಮುಂದಿನ ತಲೆಮಾರಿನವರೆಗೂ, ಸೂರ್ಯ ಚಂದ್ರರು ಇರುವವರೆಗೂ ಕಾಪಾಡಿಕೊಂಡು ಹೋಗಬೇಕೆಂಬ ದಾನಿಯ ವಿನಯಪೂರ್ವಕ ಆಗ್ರಹ ಇರುತ್ತದೆ. ಇದು ದಾನವನ್ನು ಕಾಪಾಡಿದವರಿಗೆ ದೊರೆಯುವ ಶ್ರೇಯಸ್ಸನ್ನು ಕುರಿತದ್ದಾಗಿರುತ್ತದೆ. ದಾನವನ್ನು ಅಪಹರಿಸಿದವರಿಗೆ ಪ್ರಾಪ್ತವಾಗುವ ಪಾಪಗಳ ಬಗ್ಗೆ ಪ್ರಸ್ತಾಪವಿರುತ್ತದೆ. ಇವು ಕೆಲವು ಶಾಸನಗಳಲ್ಲಿ ಬಿಡಿ-ಬಿಡಿಯಾಗಿದ್ದರೆ, ಕೆಲವು ಶಾಸನಗಳಲ್ಲಿ ಶ್ಲೋಕಗಳು ಉಕ್ತವಾಗಿರುತ್ತವೆ. ಇದನ್ನು 'ದಾನಚ್ಛೇದೋಪವರ್ಣನ್' ಎಂಬುದಾಗಿ ಕರೆಯುತ್ತಾರೆ. ಅಂದರೆ 'ಫಲಶೃತಿ' ಎಂದರ್ಥ. ಕೆಲವು ಶಾಸನಗಳಲ್ಲಿ ದೇಶಿಯ ಭಾಷೆಯಲ್ಲಿ ಬೈಗುಳಗಳನ್ನೇ ಪ್ರಯೋಗಿಸಿರುವುದುಂಟು. ಈ ಭಾಗವನ್ನು 'ಶಾಪಾಶಯ' ಎಂದು ಕರೆಯುತ್ತಾರೆ.

ಶಾಪಾಶಯದ ನಂತರ ಶಾಸನದ ಮುಖ್ಯವಾದ ಭಾಗ ಮುಗಿದಂತೆಯೇ. ಆನಂತರ ಶಾಸನವನ್ನು ತಯಾರು ಮಾಡಿದವನ, ಬರೆದವನ, ಕೆತ್ತಿದವನ ಹೆಸರುಗಳು ಕಂಡುಬರುತ್ತವೆ. ಈ ಹೆಸರುಗಳು ಎಲ್ಲಾ ಶಾಸನಗಳಲ್ಲಿಯೂ ಉಲ್ಲೇಖ ಗೊಂಡಿರುವುದಿಲ್ಲ. ಕೆಲವೊಮ್ಮೆ ಮಾತ್ರ ಶಾಸನಗಳ ಕೊನೆಯಲ್ಲಿ ದತ್ತಿಯನ್ನು ನೀಡುವವರ, ದತ್ತಿಯನ್ನು ನೀಡುವ ವೇಳೆಯಲ್ಲಿ ಸಾಕ್ಷಿಗಳಾಗಿದ್ದವರ 'ವೊಪ್ಪ' ಇರುತ್ತದೆ. ಶಾಸನದ ಪರಿಭಾಷೆಯಲ್ಲಿ ವೊಪ್ಪ ಎಂದರೆ ಒಪ್ಪಿಗೆ ಇದೆ ಎಂದರ್ಥ. ಎಲ್ಲಾ ಶಾಸನಗಳು ಮೇಲೆ ವಿವರಿಸಿದ ಪ್ರಕಾರದಲ್ಲಿಯೇ ಇವೆ ಎಂದಾಗಲಿ, ಅವುಗಳು ಹೀಗೆಯೇ ಇರಬೇಕು ಎಂಬ ಯಾವ ನಿಯಮವೂ ಇಲ್ಲ.

೩.೩. ಶಾಸನಗಳಲ್ಲಿ ಪ್ರಾರ್ಥನಾ ಶ್ಲೋಕಗಳು

ಭಾರತೀಯರ ಜೀವನ ಆರಂಭವಾಗುವುದೇ ಪೂಜೆ ಪುನಸ್ಕಾರಗಳಿಂದ. ಪೂಜೆ ಮಾಡುತ್ತ ಮಂಗಳ ಹಾಡುವದು, ದೇವರ ಸ್ತುತಿಗೈಯುವದು ವಾಡಿಕೆ. ಹಾಗೆಯೇ ನಮ್ಮ ಪ್ರಾಚೀನ ಕಾಲದ ಶಾಸನಗಳನ್ನು ಬರೆಯುವ ಮುನ್ನ ಶುಭವಾಚಕ ಚಿಹ್ನೆ, ಪದಗಳನ್ನು, ಶ್ಲೋಕಗಳನ್ನು ಬರೆಯುವ ವಾಡಿಕೆಯಿದೆ. ಪ್ರಾಚೀನ ಶಾಸನಗಳಲ್ಲಿ ಇಂತಹ ಪದ್ಯಗಳು ಕಂಡುಬರುವುದಿಲ್ಲ. ಆದರೆ ಆ ವರ್ತಮಾನದ ಶಾಸನಗಳು ಚಿಕ್ಕದಾಗಿದ್ದು, ನೇರ ವಿಷಯವನ್ನು ಪ್ರವೇಶ ಮಾಡುತ್ತಿದ್ದವು. ಕ್ರಮೇಣ ಶಾಸನಗಳ ರಚನೆಯು ಒಂದು ವ್ಯವಸ್ಥಿತ ರೂಪ ಪಡೆದದ್ದು ಕ್ರಿ.ಶ.ಒಂಬತ್ತು-ಹತ್ತನೆಯ ಶತಮಾನಗಳಲ್ಲಿ.[೮]

ಕ್ರಿ.ಶ.ಒಂಬತ್ತನೆಯ ಶತಮಾನದವರೆಗಿನ ಶಾಸನಗಳಲ್ಲಿ ಪ್ರಾರ್ಥನಾ ಶ್ಲೋಕ ಅಥವಾ ಮಂಗಳ ಶ್ಲೋಕಗಳು ದೊರೆಯುವದಿಲ್ಲ. ನಂತರದಲ್ಲಿ ರಚಿತಗೊಂಡ ಶಾಸನಗಳು ಸಾಮಾನ್ಯವಾಗಿ ಇಂಥ ಶ್ಲೋಕದೊಂದಿಗೆ ಪ್ರಾರಂಭವಾಗಿರುವುದು ಕಂಡುಬರುತ್ತವೆ. ಈ ಶ್ಲೋಕಗಳಿಗಿಂತ ಮುಂಚೆ ಸಿದ್ಧಂ, ಸಿದ್ಧಿರಸ್ತು, ಸ್ವಸ್ತಿಶ್ರೀ, ಸ್ವಸ್ತಿ ಸಮಸ್ತ, ಶುಭಮಸ್ತು, ಶ್ರೀಶುಭಮಸ್ತು, ಓಂ, ಓಂ ನಮಃ ಶಿವಾಯ ಮುಂತಾದವುಗಳು ಕಂಡುಬರುತ್ತವೆ. ಕುಷ್ಟಗಿ ಪರಿಸರದ ಹದಿನೈದು ಶಾಸನಗಳಲ್ಲಿ ಇಂಥ ಶ್ಲೋಕಗಳು ಕಂಡುಬರುತ್ತವೆ.

'ಸ್ವಸ್ತಿ' ಎಂದು ಉಲ್ಲೇಖವಿರುವ ಒಂದೇ ಶಾಸನ ಸಿರುಗುಪ್ಪದಲ್ಲಿದೆ.[೯] 'ಸ್ವಸ್ತಿಶ್ರೀ' ಎಂದು ಉಕ್ತವಾಗಿರುವ ಒಂದು ಶಾಸನ ಆಚನೂರು ಗ್ರಾಮದಲ್ಲಿದೆ.[೧೦] 'ಸ್ವಸ್ತಿ ಸಮಸ್ತ' ಎಂದು ಉಲ್ಲೇಖವಿರುವ ಏಂಟು ಶಾಸನಗಳಿದ್ದು ಅವುಗಳು ಮಂಕಲ್ಕೇರಿ[೧೧] ಹೆಸರೂರು[೧೨] ಗೋತಗಿ[೧೩] ಪುರ[೧೪] ಚಳಗೇರಿ[೧೫] ಹನುಮನಾಳ[೧೬] ಅಂಟೂರತಾಣ[೧೭] ಈ ಗ್ರಾಮಗಳಲ್ಲಿವೆ. 'ಶುಭಮಸ್ತು', 'ಶ್ರೀ ಶುಭಮಸ್ತು' ಎಂದು ಉಲ್ಲೇಖವಿರುವ ಶಾಸನಗಳು ಕ್ರಮವಾಗಿ ತಾವರಗೆರೆ[೧೮] ಮತ್ತು ಪುರ[೧೯] ಗ್ರಾಮಗಳಲ್ಲಿವೆ. 'ಓಂ ನಮಃ ಶಿವಾಯ' ಎಂದು ಉಲ್ಲೇಖವಿರುವ ಮೂರು ಶಾಸನಗಳು ಪುರ,[೨೦] ಅಂಟೂರತಾಣ[೨೧]ಮತ್ತು ಮಾಲಗಿತ್ತಿ[೨೨] ಗ್ರಾಮಗಳಲ್ಲಿವೆ.

ಕಾಲಕ್ರಮೇಣ ಇವುಗಳು ವಿಸ್ತೃತವಾಗಿ ಶಬ್ದಗಳ ರೂಪದಲ್ಲಿದ್ದದ್ದು ಸುದೀರ್ಘವಾದ ಗದ್ಯ ಪದ್ಯಾತ್ಮಕ ದೇವತಾ ಸ್ತೋತ್ರಗಳ ರೂಪವನ್ನು ಪಡೆದುಕೊಂಡವು. ಶಾಸನಗಳ ಆರಂಭದಲ್ಲಿರುವ ಪ್ರಾರ್ಥನಾ ಶ್ಲೋಕಗಳು ಸಾಮಾನ್ಯವಾಗಿ ಸಂಸ್ಕೃತದಲ್ಲಿರುತ್ತವೆ. ಇಂಥ ಶ್ಲೋಕಗಳು ಶಿವ, ವಿಷ್ಣು, ಜಿನ ಮುಂತಾದ ದೇವತೆಗಳನ್ನು ಕೊಂಡಾಡುತ್ತವೆ. ಕ್ರಿ.ಶ.ಒಂಬತ್ತನೆಯ ಶತಮಾನದಿಂದ ಹದಿನೇಳ ನೆಯ ಶತಮಾನದವರೆಗಿನ ಶಾಸನಗಳಲ್ಲಿ ಶೈವ ಪಂಥದವರು ಶಿವನನ್ನು, ವೈಷ್ಣವ ಪಂಥದವರು ವಿಷ್ಣುವನ್ನು, ಜೈನ ಧರ್ಮದವರು ಜೀನನನ್ನು ಸ್ತುತಿಸುವ ಶ್ಲೋಕಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ಈವರೆಗೆ ದೊರೆತ ಶಾಸನಗಳು ಹೆಚ್ಚಾಗಿ ಶೈವ ಧರ್ಮಕ್ಕೆ ಸಂಬಂಧಿಸಿವೆ. ಇಲ್ಲಿ ಶೈವ ಧರ್ಮದ ಅರಸರು ಭಾರತವನ್ನು ಆಳಿದ್ದರ ಕಾರಣವಾಗಿರಬೇಕು. ಶೈವ ಧರ್ಮದ ಶಾಸನಗಳ ಆರಂಭ

"ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ

ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ"

ಎಂದು ಶಿವನನ್ನು ಸ್ತುತಿಸುವಂತಾಗಿದೆ. ಇದು ಭಾರತೀಯರ ಜನಪ್ರಿಯ ಪ್ರಾರ್ಥನಾ ಶ್ಲೋಕವು ಹೌದು. ಈ ಶ್ಲೋಕದ ಆಶಯ ಹೀಗಿದೆ, 'ಯಾರ ಶಿರಸ್ಸಿನಲ್ಲಿ ಚಂದ್ರನು ಮನೋಹರವಾದ ಚಾಮರದಂತಿದ್ದಾನೋ, ಯಾರು ಮೂರು ಲೋಕಗಳಿಗೂ ಆಧಾರಸ್ತಂಭದಂತಿದ್ದಾನೋ, ಆ ಶಂಭುವಿಗೆ ನಮಸ್ಕಾರಗಳು.' ಈ ಶ್ಲೋಕವು ಸಂಸ್ಕೃತ ಭಾಷೆಯಲ್ಲಿದ್ದು ಇದು ಬಾಣಭಟ್ಟ ವಿರಚಿತ 'ಹರ್ಷಚರಿತ'ದ ಒಂದು ಮಂಗಳ ಶ್ಲೋಕವಾಗಿದೆ. ಈ ಶ್ಲೋಕವು ನಮ್ಮ ಶಾಸನ ಕವಿಗಳ ಮನಸ್ಸನ್ನು ಹೆಚ್ಚು ಆಕರ್ಷಿಸಿದೆ ಎನ್ನಬಹುದು. ಈ ಶ್ಲೋಕ ನಮ್ಮ ಶಾಸನ ಕವಿಗಳ ಮನಸ್ಸು ಬಹುವಾಗಿ ಆಕರ್ಷಿಸಿದೆ. ಈ ಶ್ಲೋಕದಷ್ಟು ವೈಷ್ಣವ, ಜೈನ ಶ್ಲೋಕಗಳು ಪ್ರಸಿದ್ಧಿ ಪಡೆಯಲಿಲ್ಲವೆನೊ? ನಾನು ಕೈಗೊಂಡ ಶಾಸನ ಅಧ್ಯಯನದಲ್ಲಿ ಈ ಶ್ಲೋಕವಿರುವ ಶಾಸನಗಳು, ತಾವರಗೆರೆ,[೨೩] ಪುರ,[೨೪] ಚಳಗೇರಿ,[೨೫] ಮಾಲಗಿತ್ತಿ[೨೬]ಗಳಲ್ಲಿ ದೊರೆತಿರುವ ಶಾಸನಗಳಲ್ಲಿ ಕಂಡುಬರುತ್ತವೆ.

ವೈಷ್ಣವ ಧರ್ಮದ ಶಾಸನಗಳು ಸ್ವಲ್ಪ ಕಡಿಮೆ ಎಂದು ಹೇಳಬಹುದು. ಈ ಧರ್ಮದ ಶಾಸನಗಳ ಆರಂಭ ಈ ಕೆಳಗಿನಂತೆ ಗಮನಿಸಬಹುದಾಗಿದೆ.

"ಜಯತ್ಯಾವಿಷ್ಕೃತಂ ವಿಷ್ಣೋರ್ವರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ"

ಎಂದು ವಿಷ್ಣುವನ್ನು ಸ್ತುತಿಸುವ ಸಂಸ್ಕೃತ ಶ್ಲೋಕದೊಂದಿಗೆ ಆರಂಭವಾಗಿರುತ್ತವೆ. ಈ ಶ್ಲೋಕದ ಆಶಯ ಹೀಗಿದೆ, 'ಸಮುದ್ರವನ್ನು ಕ್ಷೋಭೆಗೊಳಸಿ ಭೂದೇವಿಯನ್ನು ತನ್ನ ಬಲ ಕೋರೆ ದಾಡೆಯ ಮೇಲೆ ಕುಳ್ಳರಿಸಿಕೊಂಡಿರುವ ವರಾಹ ರೂಪಿಯಾದ ವಿಷ್ಣುವಿಗೆ ಜಯವಾಗಲಿ.' ಈ ಸಂಸ್ಕೃತ ಭಾಷೆಯಲ್ಲಿರುವ ವಿಷ್ಣುಸ್ತುತಿ ಶ್ಲೋಕವು ಕ್ರಿ.ಶ.೭೦೮ರ ರಾಯಗಡದ ತಾಮ್ರ ಶಾಸನದಲ್ಲಿ ಕಂಡುಬರುತ್ತದೆ. ಕನ್ನಡ ಶಾಸನಗಳಲ್ಲಿ ಈ ಶ್ಲೋಕವಿರುವ ಶಾಸನ ಪ್ರಥಮ ಬಾರಿಗೆ ಕಂಡುಬಂದದ್ದು ಕಳಸದಲ್ಲಿರುವ ಕ್ರಿ.ಶ.೯೩೦ರ ಶಾಸನದಲ್ಲಿ. ಕುಷ್ಟಗಿ ಪರಿಸರದಲ್ಲಿ ವೈಷ್ಣವ ಶಾಸನಗಳಿದ್ದರೂ ಈ ಶ್ಲೋಕದಿಂದ ಆರಂಭಗೊಂಡಿಲ್ಲ. ಆದರೆ ಚಳಗೇರಿಯಲ್ಲಿರುವ ಕ್ರಿ.ಶ. ೧೧೭೨ರ ಶಾಸನವು[೨೭] ವೈಷ್ಣವ ಧರ್ಮದ ಶಾಸನವಾಗಿದ್ದರೂ ಈ ಶಾಸನದ ಆರಂಭ ಶೈವ ಧರ್ಮದ ಶ್ಲೋಕದೊಂದಿಗೆ ಆರಂಭವಾಗಿರುವುದರಿಂದ ಇದೊಂದು ವಿಶೇಷ ಶಾಸನ ಎಂದು ಗುರುತಿಸಬಹುದಾಗಿದೆ.

ಜೈನ ಶಾಸನಗಳು ಸಾಮಾನ್ಯವಾಗಿ ಜಿನನ ಸ್ತುತಿಯಿಂದ ಆರಂಭವಾಗುತ್ತವೆ. ಪ್ರಾಚೀನ ಜೈನ ಶಾಸನಗಳಲ್ಲಿ 'ಭದ್ರಮಸ್ತು ಜಿನಶಾಸನಾಯ' ಎಂದು ಉಲ್ಲೇಖವಾಗಿರುತ್ತದೆ. ಕ್ರಿ.ಶ.ಸು.೧೦– ೧೧ನೆಯ ಶತಮಾನದ ನಂತರ ಜೈನ ಶಾಸನಗಳಲ್ಲಿ ಹೆಚ್ಚಾಗಿ ಈ ಕೆಳಕಂಡ ಶ್ಲೋಕ ಕಂಡು ಬರುತ್ತದೆ.

"ಶ್ರೀಮತ್‌ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ
ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ"

[illegible]

[illegible]

[illegible]

[illegible]

[illegible]

ಈ ಶ್ಲೋಕದ ಆಶಯ ಹೀಗಿದೆ, 'ಮೂರು ಲೋಕಗಳಿಗೆ ಒಡೆಯನೂ ಪರಮಗಂಭೀರನೂ ಅಮೋಘವಾದ ಸ್ಯಾದ್ವಾದವನ್ನೇ ಲಾಂಛನವಾಗಿ ಹೊಂದಿರುವ ಜಿನನಿಗೆ. ಜಿನ ಶಾಸನಕ್ಕೆ ಜಯವಾಗಲಿ.' ಕುಷ್ಟಗಿ ಪರಿಸರದ ಜೈನ ಶಾಸನಗಳಲ್ಲಿ ಈ ಶ್ಲೋಕ ಕಂಡುಬಂದಿರುವುದಿಲ್ಲ.

೩.೪. ಕಾಲದ ನಿರೂಪಣೆ

ಶಾಸನಗಳಲ್ಲಿ ಕಂಡುಬರುವ ಭಾರತೀಯ ರೀತಿಯ ಕಾಲಸೂಚನೆಗಳು ಅನೇಕ ವಿಧಗಳಾಗಿವೆ. ಅತ್ಯಂತ ಪ್ರಾಚೀನ ಕಾಲದ ಶಾಸನಗಳಲ್ಲಿ ಕಾಲ ತಿಳಿಸಿರುವುದಿಲ್ಲ. ಕ್ರಿ.ಪೂ.ಸು. ಎರಡನೆಯ ಶತಮಾನದಿಂದ ರಾಜನ ಆಳಿಕೆಯ ವರ್ಷ, ಋತು, ಪಕ್ಷ, ದಿನಗಳು ಮಾತ್ರ ಕಂಡುಬಂದಿವೆ. ಕ್ರಿ.ಶ.ಐದನೆಯ ಶತಮಾನದಿಂದ ಸಾಮಾನ್ಯವಾಗಿ ಶಾಸನಗಳಲ್ಲಿ ಶಕ, ಸಕ, ವರ್ಷ, ಮಾಸ, ಸವಂತ್ಸರ, ಪಕ್ಷ, ದಿನ, ನಕ್ಷತ್ರ, ಗ್ರಹಣ ಇತ್ಯಾದಿ ಅಂಶಗಳು ಕಂಡುಬರುತ್ತವೆ.[೨೮]

ಶಾಸನಗಳಲ್ಲಿ ದೇವತಾಸ್ತುತಿಯ ನಂತರ ಪ್ರಸ್ತುತ ರಾಜನ ವಂಶಾವಳಿಯ ವರ್ಣನೆ ನಂತರ ಕಾಲ ನಿರ್ದೇಶನ ಉಲ್ಲೇಖಗೊಂಡಿರುತ್ತದೆ. ಕೆಲವು ಶಾಸನಗಳಲ್ಲಿ ವರ್ಷ, ದಿವಸ, ನಕ್ಷತ್ರ, ಯೋಗ, ಕರಣ, ಲಗ್ನಾದಿಗಳು, ವಾರ, ಮಾಸ, ಪಕ್ಷ, ಶಕವರ್ಷಗಳ ವಿವರಗಳೆಲ್ಲ ಕಂಡುಬರುತ್ತವೆ.[೨೯] ಭಾರತದಲ್ಲಿ ಎರಡು 'ಶಕ'ಗಳು ಅತ್ಯಂತ ಪ್ರಸಿದ್ಧಿ ಪಡೆದಿವೆ. ಒಂದು ಉತ್ತರ ಭಾರತದಲ್ಲಿ 'ವಿಕ್ರಮಶಕೆ', ಮತ್ತೊಂದು ದಕ್ಷಿಣಭಾರತದಲ್ಲಿ 'ಶಾಲಿವಾಹನಶಕೆ'. ಕರ್ನಾಟಕದ ಆರಂಭ ಕಾಲದ ಶಾಸನಗಳಿಂದ ಮೊದಲ್ಗೊಂಡು ವಿಜಯನಗರ ಕಾಲದವರೆಗಿನ ಬಹು ಶಾಸನಗಳಲ್ಲಿ 'ಶಕಸವಂತ್ಸರ', 'ಶಕವರ್ಷ' ಅಥವಾ 'ಶಾಲಿವಾಹನ ಶಕ' ಎಂದು ಉಲ್ಲೇಖಗೊಂಡಿರುವುದನ್ನು ಗಮನಿಸಬಹುದಾಗಿದೆ. ಇವುಗಳ ಹೆಸರಿನಲ್ಲಿ ವ್ಯತ್ಯಾಸವಿದೆಯೇ ವಿನಃ ಕಾಲಗಣನೆಯಲ್ಲಿ ಯಾವೊಂದು ವ್ಯತ್ಯಾಸವು ಇಲ್ಲ.

ಶಕವರ್ಷ

ಈ ಶಕಸಂವತ್ಸರವು ಕ್ರಿ.ಶ.೭೮ರಿಂದ ಕುಶಾನ ಮನೆತನದ ಒಂದನೆಯ ಕನಿಷ್ಕನಿಂದ ಪ್ರಾರಂಭವಾಗಿದೆ. ಈ ೭೮ನ್ನು ಶಕಕ್ಕೆ ಕೂಡಿಸಿದರೆ, ಕ್ರಿ.ಶ. ವರ್ಷ ದೊರೆಯುತ್ತದೆ ಮತ್ತು ಕ್ರಿ.ಶ.ದಲ್ಲಿ ೭೮ನ್ನು ಕಳೆದರೆ ಶಕಸಂವತ್ಸರದ ವಿವರ ದೊರೆಯುತ್ತದೆ. ಉದಾಹರಣೆಗಾಗಿ ಪುರ ಗ್ರಾಮದ ಸೋಮಶೇಖರಯ್ಯನವರ ಹೊಲದಲ್ಲಿರುವ ಶಾಸನದಲ್ಲಿ 'ಸಕವರ್ಷ ೯೪೦ನೆಯ ಸ್ವಿಕೃತ್ಥ ಸಂವತ್ಸರ' ಎಂದು ಉಲ್ಲೇಖವಿದೆ. ಈ ಶಾಸನದಲ್ಲಿ ಶಕವರ್ಷ ೯೪೦ ಎಂದಿದೆ. ಇದಕ್ಕೆ ೭೮ನ್ನು ಕೂಡಿಸಿದರೆ, ನಮಗೆ ಕ್ರಿ.ಶ.ದ ತೇದಿಯ ವಿವರವು ದೊರೆಯುತ್ತದೆ. ಈ ಶಾಸನದ ಕಾಲವು ಕ್ರಿ.ಶ.೧೦೧೮ ಎಂದು ಸ್ಪಷ್ಟವಾಗುತ್ತದೆ. ಈ ಶಕ ವರ್ಷಗಳನ್ನು ಶಾಸನಗಳಲ್ಲಿ ಅಂಕಿ ಸಂಖ್ಯೆಗಳ ಮತ್ತು ಕೆಲವೊಂದು ವೇಳೆ ಅಕ್ಷರಗಳಲ್ಲಿಯೂ ಬರೆದಿರುವುದುಂಟು. ಈ ರೀತಿಯ ಬರೆವಣಿಗೆಗಳು ಅಪರೂಪವೆಂದೇ ಹೇಳಬಹುದು. ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಕೆಲವು ಶಕವರ್ಷದ ಉಲ್ಲೇಖಗಳು ಈ ಕೆಳಗಿನಂತಿವೆ.

೧. ಸಕವರ್ಷ ೯೪೬ನೆಯ ರಕ್ತಾಕ್ಷಿ ಸಂವತ್ಸರ[೩೦]

೨. ಸಕವರ್ಷ ೯೬೭ನೆಯ ಪಾರ್ಥಿವ ಸಂವತ್ಸರ[೩೧]

೩. ಶಾಲಿವಾಹನ ಶ....... ಕ್ರೋಧನ ಸಂವತ್ಸರ[೩೨]

೪. ಸಕವರ್ಷ ೯೪೦ನೆಯ ಸ್ವಿಕೃತ್ಥ ಸಂವತ್ಸರ[೩೩]

೫. ಶಾಲಿವಾಹನ ಶಕವರುಷ ೧೪೬೯ನೆಯ ಪ್ಲವಂಗ ಸಂವತ್ಸರ[೩೪]

ವಿಕ್ರಮ ಶಕೆ

ಕರ್ನಾಟಕದ ಕೆಲವು ಅರಸರು ತಾವು ಸಿಂಹಾಸನಕ್ಕೆ ಬಂದ ವರ್ಷದಿಂದ ತಮ್ಮ ಕಾಲಗಣನೆಯನ್ನು ಪ್ರಾರಂಭಿಸಿದ್ದಾರೆ. ಇಂಥ ಕಾಲಗಣನೆಯನ್ನು ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನು ಕ್ರಿ.ಶ.೧೦೭೬ ರಿಂದ ಚಾಲುಕ್ಯ ವಿಕ್ರಮಶಕೆಯನ್ನು ಆರಂಭಿಸಿದನು. ಈ ಶಕೆಯು ಸುಮಾರು ೧೨೦ ವರ್ಷಗಳ ಕಾಲ ಬಳಕೆಯಲ್ಲಿತ್ತು.[೩೫] ಚಾಲುಕ್ಯ ವಿಕ್ರಮಶಕೆಯ ಸಂಖ್ಯೆ ಯಾವುದೇ ಇರಲಿ ಅದಕ್ಕೆ ೧೦೭೬ನ್ನು ಕೂಡಿಸಿದರೆ, ನಮಗೆ ಕ್ರಿ.ಶ.ದ ತೇದಿಯ ವಿವರಗಳು ದೊರೆಯುತ್ತವೆ. ಉದಾಹರಣೆಗಾಗಿ ಮಂಕಲ್ಕೇರಿ ಗ್ರಾಮದ ಶಾಲೆಯ ಬಳಿ ಇರುವ ಶಾಸನದಲ್ಲಿ 'ಚಾಳುಕ್ಯ ವಿಕ್ರಮ ವರಿಷದ ೪೯ನೆಯ ಸೋಭಕ್ರಿತ ಸಂವತ್ಸರದ' ಎಂದು ಉಲ್ಲೇಖವಿದೆ. ಈ ಶಾಸನದಲ್ಲಿ ಚಾಳುಕ್ಯ ವಿಕ್ರಮ ವರ್ಷ ೪೯ ಎಂದಿದೆ. ಇದಕ್ಕೆ ೧೦೭೬ನ್ನು ಕೂಡಿಸಿದರೆ, ನಮಗೆ ಕ್ರಿ.ಶ.ದ ತೇದಿಯ ವಿವರಗಳು ದೊರೆಯುತ್ತದೆ. ಈ ಶಾಸನದ ಕಾಲವು ಕ್ರಿ.ಶ.೧೧೨೫ ಎಂದು ಸ್ಪಷ್ಟವಾಗುತ್ತದೆ. ನನ್ನ ಶಾಸನ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಚಾಳುಕ್ಯ ವಿಕ್ರಮ ವರ್ಷದ ಉಲ್ಲೇಖಗಳು ಈ ಕೆಳಗಿನಂತಿವೆ.

೧. ಚಾಳುಕ್ಯ ವಿಕ್ರಮ ವರಿಷದ ೪೯ನೆಯ ಸೋಭಕ್ರಿತ ಸಂವತ್ಸರದ[೩೬]

೨. ಚಾಳುಕ್ಯ ವಿಕ್ರಮ ವರ್ಷದ ೨೯ನೆಯ ತಾರಣ ಸಂವತ್ಸ... [೩೭]

೩. ಚಾಳುಕ್ಯ ವಿಕ್ರಮ ಕಾಲದೊಳಗಣ ವಿಕ್ರುತ ಸಂವತ್ಸರದ [೩೮]

೪. ಚಾಳುಕ್ಯ ವಿಕ್ರಮ ಕಾಳದ ೨೪ನೆಯ ಪ್ರಮಾದಿ ಸಂವತ್ಸರದ[೩೯]

೫. ಚಾಳುಕ್ಯ ವಿಕ್ರಮ ಕಾಲದ ದುಂದುಭಿ ಸಂವತ್ಸರದ[೪೦]

೬. ಚಾಳುಕ್ಯ ವಿಕ್ರಮ ೨೧ನೆಯ ಯುವ ಸಂವತ್ಸರದ[೪೧]

ಸಂವತ್ಸರಗಳು

ಭಾರತೀಯರಲ್ಲಿ ಸಂವತ್ಸರಗಳ ಬಗ್ಗೆ ತುಂಬ ನಂಬಿಕೆಯಿದೆ. ಆ ಸಂವತ್ಸರಗಳ ಕುರಿತು ಹೀಗೆ ಹೇಳಬಹುದಾಗಿದೆ. ಶಕವರ್ಷದ ನಂತರದ ಸ್ಥಾನವನ್ನು ಅಲಂಕರಿಸುವುದೇ ಪ್ರಭಾವಾದಿ ಸಂವತ್ಸರ. ಪ್ರತಿ ಸಂವತ್ಸರವು ಚೈತ್ರ ಮಾಸದಿಂದ ಪ್ರಾರಂಭಗೊಂಡು ಹನ್ನೆರಡು ಮಾಸಗಳಲ್ಲಿ ನಡೆಯುತ್ತಿರುತ್ತದೆ. ಜೊತೆಗೆ ಆಯಾ ಸಂವತ್ಸರದ ಆಯಾ ತಿಂಗಳು ಅಥವಾ ಮಾಸವನ್ನು ತಿಳಿಸಿರುತ್ತಾರೆ. ಕುಷ್ಟಗಿ ಪರಿಸರದಲ್ಲಿರುವ ಶಾಸನಗಳಲ್ಲಿ ಸಂವತ್ಸರಗಳ ಉಲ್ಲೇಖಗಳಿವೆ. ಅವುಗಳೆಂದರೆ, ಸೋಭಕ್ರಿತ ಸಂವತ್ಸರ,[೪೨] ತಾರಣ ಸಂವತ್ಸರ,[೪೩] ರಕ್ತಾಕ್ಷಿ ಸಂವತ್ಸರ,[೪೪] ಪಾರ್ತ್ಥಿವ ಸಂವತ್ಸರ,[೪೫] ವಿಕ್ರುತ ಸಂವತ್ಸರ,[೪೬] ಹೇಮಳಂಬಿ ಸಂವತ್ಸರ[೪೭] ಪ್ಲವಂಗ ಸಂವತ್ಸರ[೪೮] ಕ್ರೋಧನ ಸಂವತ್ಸರ,[೪೯] ವಿಕಾರಿ ಸಂವತ್ಸರ,[೫೦] ಪ್ಲವಂಗ ಸಂವತ್ಸರ,[೫೧] ಸಿಕೃತ್ಥ ಸಂವತ್ಸರ,[೫೨] ಸುಭಕ್ರಿತ ಸಂವತ್ಸರ,[೫೩] ಪ್ರಮಾದಿ ಸಂವತ್ಸರ,[೫೪] ಪಾರ್ಥಿವ ಸಂವತ್ಸರ,[೫೫] ಪ್ರಭವ ಸಂವತ್ಸರ,[೫೬] ದುಂದುಭಿ

ಸಂವತ್ಸರ,[೫೭] ಯುವ ಸಂವತ್ಸರ[೫೮] ಹೀಗೆ ಸಂವತ್ಸರಗಳನ್ನು ಅಂದಿನ ಜನತೆ ಗಮನದಲ್ಲಿಟ್ಟುಕೊಂಡು ದಾನ ಧರ್ಮಗಳಲ್ಲಿ ತೊಡಗುತ್ತಿದ್ದರೆಂದು ಶಾಸನಗಳನ್ನು ಅವಲೋಕಿಸಿದಾಗ ನಮಗೆ ತಿಳಿದುಬರುತ್ತದೆ.

ಪಕ್ಷಗಳು

ಸಂವತ್ಸರಗಳ ನಂತರ ಕಾಲಗಣನೆಯ ಪ್ರಕಾರ ಪ್ರತಿಯೊಂದು ಮಾಸವು ಎರಡು ಪಕ್ಷಗಳನ್ನು ಒಳಗೊಂಡಿರುತ್ತವೆ. ಈ ಪಕ್ಷಗಳು ಹದಿನೈದು ತಿಥಿಗಳಾಗಿ ವಿಭಜಿಸಲ್ಪಟ್ಟಿರುತ್ತವೆ. ಚಂದ್ರನು ಬೆಳೆಯುತ್ತ, ಹುಣ್ಣಿಮೆಯ ದಿನ ಉಜ್ವಲವಾಗಿ ಪ್ರಕಾಶಿಸುತ್ತಾನೆ. ಈ ಅವಧಿಯ ಸಮಯವನ್ನೇ 'ಶುಕ್ಲಪಕ್ಷ'ವೆಂದು ಕರೆಯುತ್ತಾರೆ. ಇದನ್ನು ಶಾಸನಗಳಲ್ಲಿ 'ಶುದ್ಧ' ಎಂದು ಹೆಸರಿಸಿರುತ್ತಾರೆ. ಹುಣ್ಣಿಮೆಯ ಅನಂತರ ಚಂದ್ರನು ಕ್ರಮೇಣ ಕ್ಷಿಣಿಸುತ್ತಾ ಬಂದು ಅಮವಾಸ್ಯೆಯ ದಿನ ಸಂಪೂರ್ಣ ಕಾಣದಾಗುವನು. ಈ ಹದಿನೈದು ದಿನಗಳನ್ನು 'ಕೃಷ್ಣಪಕ್ಷ'ವೆಂದು ಕರೆಯುತ್ತಾರೆ. ಇದನ್ನು ಶಾಸನಗಳಲ್ಲಿ 'ಬಹುಳ' ಎಂದು ಹೆಸರಿಸಿರುವುದನ್ನು ಗಮನಿಸಬಹುದು. ಕುಷ್ಟಗಿ ಪರಿಸರದ ಹತ್ತು ಶಾಸನಗಳಲ್ಲಿ ಶುಕ್ಲಪಕ್ಷದ ಉಲ್ಲೇಖಗಳಿವೆ. ಅವುಗಳು

೧. 'ಶ್ರೀಮಚ್ಚಾಳುಕ್ಯ ವಿಕ್ರಮ ವರಿಷದ ೪೯ನೆಯ ಸೋಭಕ್ರಿತ ಸಂವತ್ಸರದ ಕಾರ್ತಿಕ ಸುದ್ಧ ೧'[೫೯]
೨. 'ಚಾಳುಕ್ಯ ವಿಕ್ರಮ ವರ್ಷದ ೨೯ನೆಯ ತಾರಣ ಸಂವತ್ಸ....ಸು ೨'[೬೦]
೩. 'ಸ್ವಸ್ತಿಶ್ರೀ ಚಾಳುಕ್ಯ ವಿಕ್ರಮ ಕಾಲದೊಳಗಣ ವಿಕ್ರುತ ಸಂವತ್ಸರದ ಶ್ರಾವಣ ಸು ೫'[೬೧]
೪. '೯೧೯ ನೆಯ ಹೇಮಳಂಬಿ ಸಂವತ್ಸರದ ಕಾರ್ತ್ತಿಕ ಸುದ್ಧ ೧೩'[೬೨]
೫. 'ಶುಭಮಸ್ತು ಪ್ಲವಂಗ ಸಂವತ್ಸರದ ಶ್ರಾವಣ ಶು ೬'[೬೩]
೬. 'ಮಾರ್ಗ್ಗಶಿರ ಸುದ್ದ ೭'[೬೪]
೭. '೩ನೆಯ ವಿಕಾರಿ ಸಂವತ್ಸರದ ಚೈತ್ರ ಸುದ್ದ'[೬೫]
೮. 'ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ ಕಾಳದ ೨೪ನೆಯ ಪ್ರಮಾದಿ ಸಂವತ್ಸರದ ಪೌಷ್ಯ ಸುದ್ಧ ೧೦'[೬೬]
೯. '೮ನೆಯ ಪ್ರಭವ ಸಂವತ್ಸರದ ಭಾದ್ರಪದ ಮಾಸ ಸುಕ್ಲಪಕ್ಷ'[೬೭]
೧೦. 'ಶ್ರೀ ಮಚ್ಚಾಳುಕ್ಯ ವಿಕ್ರಮ ಕಾಲದ.... ದಂದುಭಿ ಸಂವತ್ಸರದ ಚೈತ್ರ ಸು ೯'[೬೮]

ಕುಷ್ಟಗಿ ಪರಿಸರ ಎರಡು ಶಾಸನಗಳಲ್ಲಿ ಕೃಷ್ಣಪಕ್ಷದ ಉಲ್ಲೇಖಗಳಿವೆ. ಅವುಗಳು,

೧. 'ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ ೧೪೪೯ನೆಯ ಪ್ಲವಂಗ ಸಂವತ್ಸರದ ಪುಷ್ಯ ಬಹುಳ ಬಿದಿಗೆಯಲೂ'[೬೯]
೨. 'ಚಾಳುಕ್ಯ ವಿಕ್ರಮ ಕಾಲದ ೨೧ ನೆಯ ಯುವ ಸಂವತ್ಸರದ ಪುಷ್ಯ ಬ ೧೧'[೭೦]

ಸಾಮಾನ್ಯವಾಗಿ ಎಲ್ಲ ಶಾಸನಗಳಲ್ಲಿ ತೇದಿಯ ವಿವರಗಳು ವಿವರವಾಗಿರುವುದಿಲ್ಲ. ಕೆಲವು ಬಾರಿ ಪದದ ಮೊದಲ ಅಕ್ಷರವನ್ನು ಅಂದರೆ 'ವ', 'ಶಿ', 'ಗ್ರೀ', 'ಹೇ' ಮುಂತಾದ ಋತುಗಳನ್ನು

ನಮೂದಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ವಸಂತ, ಶಿಶಿರ, ಗ್ರೀಷ್ಮ ಮತ್ತು ಹೇಮಂತ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಪಕ್ಷವನ್ನು ತಿಳಿಸಲು ಶಾಸನಗಳಲ್ಲಿ 'ಸು' ಅಥವಾ 'ಶು', 'ಬ' ಎಂದು ನಮೂದಿಸಿದ್ದು ಅವುಗಳು 'ಸುದ್ಧ' ಅಥವಾ 'ಶುದ್ಧ', 'ಬಹುಳ' ಎಂದು ತಿಳಿದುಕೊಳ್ಳಬೇಕು. ಕೆಲವು ಶಾಸನಗಳಲ್ಲಿ 'ಸುಕ್ಲಪಕ್ಷ',[೭೧] 'ಬಹುಳ'[೭೨] ಎಂದು ಸಹ ಉಲ್ಲೇಖಿಸಿರುತ್ತಾರೆ.

ತಿಥಿಗಳು

ಸೂರ್ಯ–ಚಂದ್ರರ ನಡುವೆ ಇರುವ ಅಂತರಕ್ಕೆ ತಿಥಿ ಎಂದು ಕರೆಯಲಾಗುತ್ತದೆ. ಅಮವಾಸ್ಯೆಯ ದಿನದಂದು ಸೂರ್ಯ–ಚಂದ್ರರು ಒಟ್ಟಿಗೆ ಇರುವುದರಿಂದ ಅದು ಶೂನ್ಯ ತಿಥಿಯಾಗಿರುತ್ತದೆ. ಚಂದ್ರನು ಒಂದು ಸುತ್ತು ಸುತ್ತಿಕೊಂಡು ಬರಲು ೩೬೦ ಡಿಗ್ರಿಗಳಿಗೆ ೩೦ ತಿಥಿಗಳಾಗುತ್ತವೆ. ಆದರೆ ಸೂರ್ಯ–ಚಂದ್ರರ ಚಲನಾವೇಗದಲ್ಲಿ ವ್ಯತ್ಯಾಸವಿರುವುದರಿಂದ ೧೫ ತಿಥಿಗಳಾಗುತ್ತವೆ. ಸ್ಥೂಲವಾಗಿ ಶುಕ್ಲಪಕ್ಷದಲ್ಲಿ ೧೫, ಕೃಷ್ಣಪಕ್ಷದಲ್ಲಿ ೧೫ ತಿಥಿಗಳಿವೆ. ಶಾಸನಗಳಲ್ಲಿ ತಿಥಿಗಳನ್ನು ಸಂಖ್ಯೆಯ ಮೂಲಕ ಸೂಚಿಸಲಾಗಿರುತ್ತದೆ. ಸುದ್ಧ ೧,[೭೩] ಸು ೨,[೭೪] ಸು ೫,[೭೫] ಸುದ್ದ ೧೩,[೭೬] ಶು ೬,[೭೭] ಸುದ್ಧ ೭,[೭೮] ಸುದ್ಧ ೧೦,[೭೯] ಸು ೯,[೮೦] ಎಂದು ಉಲ್ಲೇಖಿತಗೊಂಡಿವೆ. ಇವುಗಳನ್ನು ಕ್ರಮವಾಗಿ ಶುಕ್ಲಪಕ್ಷದ ಪಾಡ್ಯ, ಬಿದಿಗೆ, ಪಂಚಮಿ, ತ್ರಯೋದಶಿ, ಷಷ್ಠಿ, ಸಪ್ತಮಿ, ದಶಮಿ, ನವಮಿ ಎಂದು ತಿಳಿದುಕೊಳ್ಳಬೇಕು. ಬ ೧೧[೮೧]ನ್ನು ಕೃಷ್ಣಪಕ್ಷದ ಏಕಾದಶಿ ಎಂದು ಅರ್ಥೈಸಿಕೊಳ್ಳಬೇಕು. ಇಲ್ಲಿನ ಶಾಸನಗಳಲ್ಲಿ ತಿಥಿಗಳ ಹೆಸರುಗಳನ್ನು ಮಂಕಲ್ಕೇರಿ,[೮೨] ಹೆಸರೂರು,[೮೩] ಗೋತಗಿ,[೮೪] ಸಿರಗುಪ್ಪ,[೮೫] ಪುರ,[೮೬] ಚಳಗೇರಿ,[೮೭] ಹನುಮನಾಳ,[೮೮] ಚಂದಾಲಿಂಗ[೮೯] ಮತ್ತು ಅಂಟೂರತಾಣ[೯೦] ಗ್ರಾಮಗಳಲ್ಲಿರುವ ಶಾಸನಗಳಲ್ಲಿ ಕಾಣಬಹುದಾಗಿದೆ.

ಅನೇಕ ಶಾಸನಗಳಲ್ಲಿ ಕಾಲದ ಉಲ್ಲೇಖಗೊಂಡಿರುವುದಿಲ್ಲ. ಉಲ್ಲೇಖಗೊಂಡಿದ್ದರೂ ತಪ್ಪಾಗಿ ಉಲ್ಲೇಖವಾಗಿರುತ್ತವೆ. ಅಂತಹ ಸಂದರ್ಭದಲ್ಲಿ ಆ ಶಾಸನದಲ್ಲಿ ಬರುವ ರಾಜನ ಹೆಸರು, ಲಿಪಿ, ಭಾಷೆಗಳ ಆಧಾರದ ಮೇಲೆ ಶಾಸನದ ಕಾಲ ನಿರ್ಧರಿಸಬಹುದಾಗಿದೆ.

ಗ್ರಹಣಗಳು

ಭಾರತದಲ್ಲಿ ವೇದಯುಗದಿಂದಲೇ ಗ್ರಹಣಗಳನ್ನು ಗುರುತಿಸುತ್ತಾ ಬಂದಿದ್ದಾರೆ. ಗ್ರಹಣಗಳು ಕಾಲನಿರ್ಣಯಕ್ಕೆ ಬಹಳ ಸಹಾಯಕವಾಗಿವೆ. ಭಾರತಿಯ ಸಂಸ್ಕೃತಿಯ ಇತಿಹಾಸದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳಲ್ಲಿ ಗ್ರಹಣಗಳ ಉಲ್ಲೇಖಗಳಿವೆ. ಒಂದು ವರ್ಷದಲ್ಲಿ ಐದು ಸೂರ್ಯ, ಎರಡು ಚಂದ್ರ ಅಥವಾ ನಾಲ್ಕು ಸೂರ್ಯ ಮೂರು ಚಂದ್ರ ಗ್ರಹಣಗಳು ಸಂಭವಿಸಬಹುದು.

ಸೂರ್ಯ ಗ್ರಹಣವು ಸೂರ್ಯನು ರಾಹುಕೇತುಗಳಿಂದ ೧೮.೯ ಡಿಗ್ರಿಗಳಿರುವವರೆಗೂ ಸಾಧ್ಯವಾಗುತ್ತದೆ. ಚಂದ್ರ ಗ್ರಹಣವು ರಾಹುಕೇತುಗಳಿಂದ ೧೦.೪೪ ಡಿಗ್ರಿಗಳಲ್ಲಿ ಸೂರ್ಯನಿದ್ದರೆ ಸಂಭವಿಸುತ್ತದೆ.[೯೧] ದಾನ ಕೊಡಲು ಸೂರ್ಯ, ಚಂದ್ರ ಗ್ರಹಣಕಾಲಗಳು ಪುಣ್ಯಕಾಲ ಗಳಾದುದರಿಂದ ಶಾಸನಗಳಲ್ಲಿ ಹೇಳಲ್ಪಟ್ಟಿವೆ. ಕುಷ್ಟಗಿ ಪರಿಸರದ ಶಾಸನಗಳಲ್ಲಿ ಸೂರ್ಯ–ಚಂದ್ರರ ಗ್ರಹಣಗಳ ಉಲ್ಲೇಖಗಳು ಕಂಡುಬರುತ್ತವೆ. ಮಂಕಲ್ಕೇರಿ[೯೨] ಮತ್ತು ಅಂಟೂರತಾಣ[೯೩]

ಶಾಸನಗಳಲ್ಲಿ ಸೂರ್ಯ ಗ್ರಹಣಗಳ ಉಲ್ಲೇಖಗಳಿವೆ. ಗೋತಗಿ,[೯೪] ಪುರ,[೯೫] ಚಳಗೇರಿ,[೯೬] ಶಾಸನಗಳಲ್ಲಿ ಚಂದ್ರ ಗ್ರಹಣಗಳ ಉಲ್ಲೇಖಗಳಿವೆ.

ವಾರಗಳು

ವಾರಗಳಿಗೆ ಗ್ರಹಗಳ ಹೆಸರುಗಳಿವೆ. ಕ್ರಿ.ಪೂ.೫-೬ನೆಯ ಶತಮಾನದ ಬೌದ್ಧಾಯನ ಆಪಸ್ತಂಬ ಸೂತ್ರಗಳಲ್ಲಿ ವಾರಗಳ ಹೆಸರುಗಳಿವೆ.[೯೭] ದಿನವನ್ನು ೨೪ ಗಂಟೆಯಂತೆ ವಿಭಜಿಸಿ ಸುರ್ಯೋದಯ ಕಾಲದಲ್ಲಿ ಯಾವ ಗ್ರಹ ಅಧಿಪತ್ಯ ಪಡೆದಿರುವುದೋ ಆ ಗ್ರಹದ ಹೆಸರು ವಾರಕ್ಕೆ ಬಂದಿತೆಂದು ಹೇಳಲಾಗುತ್ತದೆ. ಕ್ರಿ.ಶ.೫ನೆಯ ಶತಮಾನದ ನಂತರ ಶಾಸನಗಳಲ್ಲಿ ವಾರಗಳ ಹೆಸರು ಕಂಡುಬರುತ್ತವೆ.

ಕುಷ್ಟಗಿ ಪರಿಸರದ ಹತ್ತು ಶಾಸನಗಳಲ್ಲಿ ವಾರಗಳ ಹೆಸರು ಕಂಡುಬಂದಿವೆ. ಮಂಕಲ್ಕೇರಿಯ[೯೮] ಶಾಸನದಲ್ಲಿ ಸೋಮವಾರ, ಹೆಸರೂರು[೯೯] ಮತ್ತು ಚಳಗೇರಿ[೧೦೦]ಯ ಶಾಸನಗಳಲ್ಲಿ ಬುಧವಾರ, ಚಂದಾಲಿಂಗದ[೧೦೧] ಶಾಸನದಲ್ಲಿ ಗುರುವಾರ, ಗೋತಗಿ,[೧೦೨] ಸಿರಗುಪ್ಪ,[೧೦೩] ಪುರ,[೧೦೪] ಹನುಮನಾಳ,[೧೦೫] ಅಂಟೂರತಾಣ[೧೦೬]ಗಳಲ್ಲಿರುವ ಶಾಸನಗಳಲ್ಲಿ ಆದಿವಾರ(ರವಿವಾರ)ದ ಉಲ್ಲೇಖಗಳಿವೆ. ಇನ್ನುಳಿದ ವಾರಗಳು ಈವರೆಗೆ ದೊರೆತಿರುವ ಯಾವುದೇ ಶಾಸನದಲ್ಲಿಯೂ ಕಂಡುಬಂದಿಲ್ಲ.

೩.೫. ಆಡಳಿತ ವಿಭಾಗಗಳು

ಪ್ರಾಚೀನ ಕಾಲದಲ್ಲಿ ದೊರೆಗಳು ತಮ್ಮ ಸಾಮ್ರಾಜ್ಯವನ್ನು ಆಡಳಿತ ಅನುಕೂಲಕ್ಕಾಗಿ ಪ್ರಾಂತ, ನಾಡು, ವಿಷಯ, ಪ್ರದೇಶ ಮುಂತಾದ ವಿಭಾಗಗಳ ರೂಪದಲ್ಲಿ ವಿಭಜಿಸಿ ಆಡಳಿತ ನಿರ್ವಹಿಸುತ್ತಿದ್ದರು. ಸಾಮಾನ್ಯವಾಗಿ ಆಡಳಿತ ವಿಭಾಗಗಳನ್ನು ಆಯಾ ವಿಭಾಗಗಳ ಮುಖ್ಯ ಸ್ಥಳಗಳ ಹೆಸರಿನಿಂದಲೇ ಕರೆಯಲಾಗುತ್ತಿತ್ತು. ಈ ಹೆಸರುಗಳ ಜೊತೆ ಜೋಡಿಸಲಾದ ಸಂಖ್ಯೆಗಳ ಅರ್ಥ ಸೂಚನೆ ಏನೆಂಬುದರ ಬಗ್ಗೆ ವಾದ ವಿವಾದಗಳು ನಡೆದೇ ಇವೆ. ಅವು ಆಯಾ ಭಾಗಗಳ ಸಾಗುವಳಿ ಭೂಮಿ ಇಲ್ಲವೆ ಮನೆತನಗಳ ಮುಖ್ಯಸ್ಥರ ಸಂಖ್ಯೆಯನ್ನು ಸೂಚಿಸುತ್ತವೆ.[೧೦೭] ಡಾ. ಫ್ಲೀಟ್ ಅವರು 'ಈ ಸಂಖ್ಯೆಗಳು ಪಟ್ಟಣ-ಹಳ್ಳಿಗಳ ಸಮೂಹವನ್ನು ಸೂಚಿಸುತ್ತವೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಕೆಳವಡಿ-೩೦೦ ಕರಡಿಕಲ್ಲು-೩೦೦, ಎಡದೊರೆ-೨೦೦೦, ಕಿಸುಕಾಡು-೭೦ ಮತ್ತು ನರೆಯಂಗಲ-೧೨ ಈ ಆಡಳಿತ ವಿಭಾಗಗಳ ಉಲ್ಲೇಖವಿದ್ದು ಅವುಗಳನ್ನು ಈ ಕೆಳಗಿನಂತೆ ಅಭ್ಯಾಸಿಸಲಾಗಿದೆ.

ಎಡದೊರೆ - ೨೦೦೦

ಎಡದೊರೆನಾಡು ಎರಡು ಸಾವಿರ ಹಳ್ಳಿಗಳ ಒಂದು ಆಡಳಿತ ವಿಭಾಗ. ಈ ವಿಭಾಗವು ಇಂದಿನ ರಾಯಚೂರು, ಕೊಪ್ಪಳ, ಕುಷ್ಟಗಿ, ಶಹಪುರ ಮತ್ತು ಸುರಪುರ ತಾಲ್ಲೂಕಿನ ವ್ಯಾಪ್ತಿಯನ್ನು ಹೊಂದಿತ್ತು. ಷಾಹಿ ಸುಲ್ತಾನರ ಆಳ್ವಿಕೆಯಲ್ಲಿ ಅದನ್ನು 'ದೋ-ಅಬ್' ಎಂದು ಕರೆಯಲಾಯಿತು.[೧೦೮] ಎಡದೊರೆನಾಡಿನ ಗಡಿಯನ್ನು ಡಾ. ಜೆ.ಎಫ್.ಫ್ಲೀಟರು ಉತ್ತರಕ್ಕೆ ಕೃಷ್ಣಾನದಿ, ದಕ್ಷಿಣಕ್ಕೆ ತುಂಗಭದ್ರಾ ನದಿಗಳ ನಡುವಿನ ಪ್ರದೇಶವೆಂದೂ ಸೂಚಿಸಿದರು.[೧೦೯]

ಕುಷ್ಟಗಿ ತಾಲ್ಲೂಕಿನ ಎರಡು ಶಾಸನಗಳಲ್ಲಿ ಈ ಎಡದೊರೆ-೨೦೦೦ರ ಉಲ್ಲೇಖ ಕಂಡುಬರುತ್ತವೆ. ಗೋತಗಿಯ ನಾಗಕನ್ನಿಕಾ ದೇವಾಲಯದಲ್ಲಿರುವ ಕ್ರಿ.ಶ.೧೦೪೫ರ ಶಾಸನದಲ್ಲಿ[೧೧೦] ಚಾಮುಣ್ಡ ಭಟ್ಟೋಪಾಧ್ಯಾಯನಿಗೆ ಚಾಳುಕ್ಯ ರಾಜ ತ್ರೈಳೋಕ್ಯಮಲ್ಲನು(೧ನೆಯ ಸೊಮೇಶ್ವರ) ಎಡದೊರೆ-೨೦೦೦ದ ಕಂಪಣ ಕರಡಿಕಲ್ಲ-೩೦೦ರ ಬಳಿಯ ಗೋವನ್ತಿಗೆಯಲ್ಲಿ ಭೂಮಿಯನ್ನು ದಾನವಾಗಿ ನೀಡಿದ ವಿಷಯ ಉಲ್ಲೇಖವಿದೆ. ಹಿರೇಮನ್ನಾಪುರದ ದುರ್ಗಮ್ಮ ದೇವಾಲಯದ ಗೋಡೆಯಲ್ಲಿರುವ ಸುಮಾರು ಕ್ರಿ.ಶ.ಸು.೧೧ನೆಯ ಶತಮಾನದ ಶಾಸನದಲ್ಲಿ[೧೧೧] ಅಹವಮಲ್ಲದೇವನ ಸಾಮಂತನಾದ ವರ್ಮದೇವನು ಎಡದೊರೆ-೨೦೦೦ನ್ನು ಆಳುತ್ತಿದ್ದಂತೆ ಉಲ್ಲೇಖವಿದೆ.

ಕರಡಿಕಲ್ಲು – ೩೦೦

ಎಡದೊರೆ ನಾಡಿನ ಉಪವಿಭಾಗಗಳಲ್ಲಿ ಕರಡಿಕಲ್ಲು-೩೦೦ ಒಂದು. ಇಂದಿನ ಲಿಂಗಸೂಗೂರು ತಾಲ್ಲೂಕಿನ ಚಿಕ್ಕ ಹಳ್ಳಿಯಾದ 'ಕರಡಕಲ್ಲು' ಅಂದಿನ ಮುಖ್ಯ ಪಟ್ಟಣವಾಗಿತ್ತು. ಲಿಂಗಸೂಗೂರು ತಾಲ್ಲೂಕಿನ ಎಲ್ಲ ಹಳ್ಳಿಗಳು ಮತ್ತು ಕುಷ್ಟಗಿ, ಹುನಗುಂದ, ಮಾನ್ವಿ ಹಾಗೂ ಸಿಂಧನೂರು ತಾಲ್ಲೂಕಿನ ಕೆಲವು ಹಳ್ಳಿಗಳು ಈ ವಿಭಾಗದಲ್ಲಿ ಸಮಾವೇಶಗೊಂಡಿದ್ದವೆಂದು ಹೇಳಬಹುದು.[೧೧೨]

ಕುಷ್ಟಗಿ ತಾಲ್ಲೂಕಿನ ಮೂರು ಶಾಸನಗಳಲ್ಲಿ ಈ ಕರಡಿಕಲ್ಲ-೩೦೦ರ ಉಲ್ಲೇಖ ಕಂಡುಬರುತ್ತದೆ. ಹಿರೇಮನ್ನಾಪುರದ ದುರ್ಗಮ್ಮ ದೇವಾಲಯ ಗೋಡೆಯಲ್ಲಿರುವ ಕ್ರಿ.ಶ. ಸು.೧೧ನೆಯ ಶತಮಾನದ ದಾನ ಶಾಸನದಲ್ಲಿ[೧೧೩] 'ಕರಡಿಕಲ್ಲ್ ನಾಡಿನೊಳು' ಎಂದು ಈ ವಿಭಾಗದ ಉಲ್ಲೇಖವಿದೆ. ಈ ಮೇಲಿನ ಉಲ್ಲೇಖದಿಂದ ಹಿರೇಮನ್ನಾಪುರ ಗ್ರಾಮವು ಕರಡಿಕಲ್ಲ ವಿಭಾಗದಲ್ಲಿತ್ತೆಂದು ಅರಿಯಬಹುದಾಗಿದೆ. ಗೋತಗಿಯ ನಾಗಕನ್ನಿಕಾ ದೇವಾಲಯದಲ್ಲಿನ ಕ್ರಿ.ಶ. ೧೦೨೪ರ ಶಾಸನದಲ್ಲಿ[೧೧೪] ಚಾಳುಕ್ಯ ಜಗದೇಕಮಲ್ಲದೇವನ(ಇಮ್ಮಡಿ ಜಯಸಿಂಹ) ಪತ್ನಿಯಾದ ಪದ್ಮಲದೇವಿಯು ಕರಡಿಕಲ್ಲ-೩೦೦ರ ಬಳಿಯ ಗೋವನ್ತಿಗೆಯ ಸ್ವಯಂಭೂ ಕಲಿದೇವಸ್ವಾಮಿಗೆ ಕರಿಯನೆಲ, ಭೂಮಿ, ತೋಟವನ್ನು ದಾನ ನೀಡಿದ ಬಗ್ಗೆ ತಿಳಿಯುತ್ತದೆ. ಇದೇ ಸ್ಥಳದಲ್ಲಿರುವ ಕ್ರಿ.ಶ.೧೦೪೫ರ ಇನ್ನೊಂದು ಶಾಸನದಲ್ಲಿ[೧೧೫] ಚಾಳುಕ್ಯ ತ್ರೈಳೋಕ್ಯಮಲ್ಲನು(೧ನೆಯ ಸೋಮೇಶ್ವರ) ಕರಡಿಕಲ್ಲ-೩೦೦ರ ಬಳಿಯ ಗೋವನ್ತಿಗೆಯಲ್ಲಿ ಚಾಮುಣ್ಡ ಭಟ್ಟೋಪಾಧ್ಯಾಯನಿಗೆ ಭೂಮಿಯನ್ನು ದಾನವಾಗಿ ನೀಡಿದ ಬಗ್ಗೆ ಉಲ್ಲೇಖವಿದೆ.

ಕೆಳವಡಿ – ೩೦೦

ಎಡದೊರೆನಾಡಿನ ಉಪಭಾಗಗಳಲ್ಲಿ ಕೆಳವಡಿ-೩೦೦ ಒಂದು. ಕೆಳವಡಿನಾಡು ಇಂದಿನ ಸಿಂಧನೂರು, ಗಂಗಾವತಿ, ಕುಷ್ಟಗಿ, ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕಿನ ವ್ಯಾಪ್ತಿಯನ್ನು ಹೊಂದಿತ್ತೆಂದು ಹೇಳಬಹುದು.[೧೧೬] ಸಿಂಧನೂರು ತಾಲ್ಲೂಕಿನ ದೇವರಗುಡಿಯ ಒಂದು ಶಾಸನವು 'ಕೆಳವಾಡಿ-೩೦೦ರ ರಾಜಧಾನಿ ಕಲುಕೆರೆ' ಎಂದು ಸ್ಪಷ್ಟವಾಗಿ ಹೇಳಿದೆ.[೧೧೭] ಆದ್ದರಿಂದ ಇಂದಿನ

ಗಂಗಾವತಿ ತಾಲ್ಲೂಕಿನ 'ಕಲಕೇರಿ' ಗ್ರಾಮವೇ ಈ ವಿಭಾಗದ ಮುಖ್ಯ ಪಟ್ಟಣವಾಗಿತ್ತೆಂದು ಹೇಳಬಹುದು.

ಕುಷ್ಟಗಿ ತಾಲ್ಲೂಕಿನ ಒಂದು ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ಪುರದ ಸೋಮಶೇಖರಯ್ಯನವರ ಹೊಲದಲ್ಲಿರುವ ಕ್ರಿ.ಶ.೧೦೧೮ರ ಶಾಸನದಲ್ಲಿ[೧೧೮] ಚಾಳುಕ್ಯ ಜಗದೇಕಮಲ್ಲನ ದಂಡನಾಯಕ(ಹೆಸರು ಹಾಳಾಗಿದೆ) ಈ ಕೆಳವಡಿ-೩೦೦ನ್ನು ಆಳುತ್ತಿದ್ದ. ಅಗ್ರಹಾರ ಬೈಳೆನೆಗೆಯೂರಿನ ಮುಖ್ಯಸ್ಥನಾದ ಕೊಣ್ಡಯವಾರಿ ಅಯ್ಯಣಯ್ಯನಿಗೆ ಪಂಪಾತೀರ್ಥದ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಐದು ಮತ್ತರು ಗದ್ದೆಯನ್ನು ದಾನವಾಗಿ ನೀಡಿದ್ದರ ಉಲ್ಲೇಖವಿದೆ. ಇದರಿಂದ ಜಗದೇಕಮಲ್ಲನ ದಂಡಾಧಿಕಾರಿ ಆಳುತ್ತಿದ್ದ ಕೆಳವಡಿ-೩೦೦ರ ವ್ಯಾಪ್ತಿಗೆ ಈ ಪ್ರದೇಶವು ಒಳಪಟ್ಟಿತ್ತೆಂದು ಹೇಳಬಹುದು.

ಕಿಸುಕಾಡು – ೭೦

ಬೆಳ್ವಲನಾಡಿನ ಪ್ರಮುಖ ಆಡಳಿತದ ಉಪವಿಭಾಗವಾಗಿತ್ತು ಈ ಕಿಸುಗಾಡು-೭೦. ಇದರ ಮುಖ್ಯ ಸ್ಥಳ ಪಟ್ಟದಕಲ್ಲು. ಇಂದಿನ ಬಾಗಲಕೋಟ ಜಿಲ್ಲೆಯ ಬಾದಾಮಿ, ಹುನಗುಂದ ಮತ್ತು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು.

ಕುಷ್ಟಗಿ ತಾಲ್ಲೂಕಿನ ನಾಲ್ಕು ಶಾಸನಗಳಲ್ಲಿ ಕಿಸುಕಾಡು ೭೦ರ ಉಲ್ಲೇಖಗಳಿವೆ. ಹನುಮನಾಳದ ಚಾವಡಿಯಲ್ಲಿರುವ ಕ್ರಿ.ಶ.೧೦೯೯ರ ಶಾಸನದಲ್ಲಿ[೧೧೯] ಕಿಸುಕಾಡೆಪ್ಪತ್ತರ ಬಾಡದ ಆಲುಂಗೆರೆಯ ಸಿಂಗಗಾಮುಂಡನು ತಂಬುಲಿಗ ಸಾಸಿರ್ವ್ವರ ಎತ್ತು ಮುಂತಾದವುಗಳನ್ನು ರಕ್ಷಿಸಿದ್ದಕ್ಕಾಗಿ, ಅನೇಕ ಸೆಟ್ಟಿಗಳು, ಗವರಿಯರು, ಗಾತ್ರಿಗರೆಲ್ಲರೂ ಸೇರಿ ದಾನ ನೀಡಿದ ವಿಷಯ ಉಲ್ಲೇಖಗೊಂಡಿದೆ. ಮಂಕಲ್ಕೇರಿಯ ಶಾಲೆಯ ಹತ್ತಿರದ ಕ್ರಿ.ಶ,೧೧೨೩ರ ಶಾಸನದಲ್ಲಿ[೧೨೦] ಕಿಸುಕಾಡು ಎಂದಿದೆ. ಚಳಗೇರಿಯ ಲಕ್ಷ್ಮಿ ದೇವಾಲಯದ ಎದುರು ಇರುವ ಕ್ರಿ.ಶ.೧೧೭೨ರ ಶಾಸನದಲ್ಲಿ[೧೨೧] 'ಕಿಸುಕಾಡು ನಾಡಿನಲ್ಲಿ ಕೆಲ್ಲಂಗೆರೆ ಇತ್ತು' ಎಂಬ ಉಲ್ಲೇಖ ಕಂಡುಬರುತ್ತದೆ. ಆಚನೂರಿನ ಮಲ್ಲಿಕಾರ್ಜುನ ದೇವಾಲಯದ ಬಳಿ ಶಾಸನದಲ್ಲಿ[೧೨೨] 'ಸ್ವಸ್ತಿಶ್ರೀ ಕಿಸುಕಾಡವೆಪ್ಪತ್ತರ ವೊಜರು' ಎಂದು ಉಲ್ಲೇಖವಿದೆ. ಇವುಗಳ ಆಧಾರದಿಂದ ಈ ಪ್ರದೇಶವು ಕಿಸುಗಾಡು-೭೦ರಲ್ಲಿತ್ತೆಂದು ಊಹಿಸಬಹುದಾಗಿದೆ.

ನರೆಯಂಗಲು – ೧೨

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನರೇಗಲ್ ಗ್ರಾಮವೇ ನರೆಯಂಗಲ್ ಎಂದು ಕರೆಯಿಸಿಕೊಂಡಿತ್ತು. ಇದು ಪ್ರಾಚೀನ ಕಾಲದಲ್ಲಿ ನೆರೆಯಂಗಲು-೧೨ ಗ್ರಾಮಗಳಿಗೆ ಮುಖ್ಯ ಪಟ್ಟಣವಾಗಿತ್ತು. ಕುಷ್ಟಗಿ ತಾಲ್ಲೂಕಿನ ಒಂದು ಶಾಸನದಲ್ಲಿ ಈ ನರೆಯಂಗಲ್-೧೨ರ ಉಲ್ಲೇಖ ಕಂಡುಬರುತ್ತದೆ. ಹಿರೇಮನ್ನಾಪುರದ ದುರ್ಗಮ್ಮ ದೇವಾಲಯದ ಗೋಡೆಯಲ್ಲಿರುವ ಕ್ರಿ.ಶ.೧೧ನೆಯ ಶತಮಾನದ ಶಾಸನದಲ್ಲಿ[೧೨೩] 'ನರೆಯಂಗಲ್ಲ ಊರೊಡೆಯಯ್ಯೂವರ್ಗ್ಗೆ ಧಾರಾಪೂರ್ವ್ವಕಂ ಕೊಟ್ಟ ಶಾಸನ....' ಎಂದಿದೆ. ಇದರಿಂದ ಈ ಗ್ರಾಮವು ನರೆಯಂಗಲ್ಲಗೆ ಸೇರಿತ್ತೆಂದು ತರ್ಕಿಸಬಹುದಾಗಿದೆ.

೩.೬ ಅಧಿಕಾರಿ ವರ್ಗ

ಪ್ರಾಚೀನ ಕರ್ನಾಟಕ ಪರಂಪರಾಗತ ಆಡಳಿತ ವ್ಯವಸ್ಥೆಯು ಪ್ರಮುಖವಾಗಿ ಎರಡು ಭಾಗಗಳಿಂದ ಕೂಡಿದ್ದವು. ಅವುಗಳೇ ರಾಜ್ಯಾಡಳಿತ ಮತ್ತು ಊರುಗಳ ಆಡಳಿತ. ಇವುಗಳನ್ನು ಅಧಿಕಾರದ ಅನುಕೂಲಕ್ಕಾಗಿ ಮಾಡಿಕೊಳ್ಳಲಾಗಿದೆ. ಏಕೆಂದರೆ, ಇವೆರೆಡಕ್ಕೂ ಸಂಬಂಧವಿದೆ. ಇವೆರೆಡೂ ಒಂದರ ಸಹಾಯದಿಂದ ಮತ್ತೊಂದು ನಡೆಯುತ್ತಿದ್ದಿತು. ಈ ಎರಡು ವಿಭಜನೆಯಲ್ಲಿ ಬಹಳಷ್ಟು ಮಹತ್ವವಿದೆ. ನಗರ ಮತ್ತು ಗ್ರಾಮಗಳ ಮೊತ್ತವೇ ರಾಜ್ಯ. ಇದಕ್ಕೆ ರಾಜನೇ ಅಧಿಪತಿ. ಎಲ್ಲವೂ ರಾಜನ ಆಳ್ವಿಕೆಗೆ ಒಳಪಟ್ಟಿದ್ದವು. ಪ್ರಾಚೀನ ಕರ್ನಾಟಕದ ಶಾಸನ ಪರಂಪರೆಯಲ್ಲಿ ಉಲ್ಲೇಖವಾಗಿರುವಂತೆ ಗ್ರಾಮಗಳ ಆಳ್ವಿಕೆಯನ್ನು ಪರಿಶೀಲಿಸಿದಾಗ ಅಲ್ಲಿನ ಕೆಲವು ವಿಷಯಗಳು ಆಡಳಿತದ ಪ್ರತ್ಯೇಕ ಘಟಕವೆಂಬಂತೆ ನಡೆದುಕೊಳ್ಳುತ್ತಿತ್ತು. ಇಲ್ಲಿನ ಒಂದೊಂದು ಗ್ರಾಮವು ದೊಡ್ಡ ಸಾಮ್ರಾಜ್ಯದ ರಾಜ್ಯದೊಳಗಿನ ಪುಟ್ಟದಾದ ರಾಜ್ಯಗಳು ಎಂಬಂತೆ ಬಿಂಬಿತವಾಗಿವೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಿತ ಅಧಿಕಾರ ವರ್ಗವನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಅ. ಅರಸರು

'ರಾಜ್ಯ' ಎನ್ನುವುದು ಅರಸನಿಗೆ ಅಥವಾ ರಾಜನಿಗೆ ಸೇರಿದುದಾಗಿರುತ್ತದೆ. ಇದರ ರಕ್ಷಣೆ, ಪ್ರಜೆಗಳ ರಕ್ಷಣೆ ಈತನ ಜವಾಬ್ದಾರಿಯಾಗಿತ್ತು. ಅರಸನ ಸ್ಥಾನಮಾನಗಳನ್ನು ಕುರಿತು ಒಂದು ಗ್ರಾಮದ ಜನಜೀವನವು ಆ ಗ್ರಾಮದ ದೇವಸ್ಥಾನ ಸುತ್ತ ರೂಪಿತವಾಗುತ್ತಿದ್ದಂತೆ ಒಂದು ದೇಶದ ಜನಜೀವನವು ಆ ದೇಶದ ರಾಜನನ್ನು ಅವಲಂಬಿಸುತ್ತಿತ್ತು. ಅವನ ಏಳು-ಬೀಳುಗಳೇ ರಾಜ್ಯದ ಏಳು-ಬೀಳುಗಳು. ಇಂಥ ಅರಸರ ಉಲ್ಲೇಖಗಳು ಶಾಸನಗಳಲ್ಲಿವೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯ, ಕಲಚುರಿಮತ್ತು ವಿಜಯನಗರ ಮನೆತನದ ಅರಸರುಗಳ ಹೆಸರುಗಳು ಉಲ್ಲೇಖಿತಗೊಂಡಿವೆ.

ಅ.೧. ಕಲ್ಯಾಣ ಚಾಲುಕ್ಯ ಅರಸರು

ಕರ್ನಾಟಕವನ್ನು ಬಹುಕಾಲ ಆಳಿದ ಅರಸು ಮನೆತನಗಳಲ್ಲಿ ಕಲ್ಯಾಣ ಚಾಲುಕ್ಯ ಮನೆತನವು ಒಂದು. ಕಲ್ಯಾಣ ಎಂದರೆ ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣವೆಂದು ಗುರುತಿಸಬಹುದಾಗಿದೆ. ಈ ಕಲ್ಯಾಣವನ್ನು ರಾಜಧಾನಿಯನ್ನಾಗಿರಿಸಿಕೊಂಡು ಇವರು ಕ್ರಿ.ಶ.೯೭೩ ರಿಂದ ಕ್ರಿ.ಶ.೧೧೮೯ರವರೆಗೆ ಸರಿಸುಮಾರು ೨೦೦ ವರ್ಷಗಳ ಕಾಲ ಆಳ್ವಿಕೆ ನಡೆಸಿ ಕನ್ನಡ ನಾಡಿನ ಐತಿಹಾಸಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಬಹುಮನ್ನಣೆಗಳಿಸಿದ ಶ್ರೇಷ್ಠ ಅರಸು ಮನೆತನ ಎಂದು ಖ್ಯಾತಿ ಪಡೆದಿದೆ. ಈ ಮನೆತನದ ಅರಸರಾದ ಜಯಸಿಂಹ, ತ್ರೈಲೋಕ್ಯಮಲ್ಲ (೧ನೆಯ ಸೋಮೇಶ್ವರ), ಜಗದೇಕಮಲ್ಲ(೨ನೆಯ ಜಯಸಿಂಹ), ತ್ರಿಭುವನಮಲ್ಲದೇವ(೬ನೆಯ ವಿಕ್ರಮಾದಿತ್ಯ)ರ ಹೆಸರುಗಳ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬಂದಿವೆ.

ಜಯಸಿಂಹ

ಕಲ್ಯಾಣ ಚಾಲುಕ್ಯ ಅರಸರಲ್ಲಿ ಒಬ್ಬನಾದ ಎರಡನೇ ಜಯಸಿಂಹನನ್ನು ಶಾಸನಗಳಲ್ಲಿ ಜಗದೇಕಮಲ್ಲದೇವ ಎಂದು ಉಲ್ಲೇಖಿಸಲಾಗಿದೆ. ಇವನು ಕ್ರಿ.ಶ.೧೦೧೫ ರಿಂದ ಕ್ರಿ.ಶ.೧೦೧೪ ರವರೆಗೆ ಆಳ್ವಿಕೆ ನಡೆಸಿದನು. ಇವನ ವಂಶಾವಳಿಯ ಬಗ್ಗೆ ಮಾಹಿತಿ ನೀಡುವ ಒಂದು ಶಾಸನ ನನ್ನ ಅಧ್ಯಯನ ವ್ಯಾಪ್ತಿಯ ಹೀರೆಮನ್ನಾಪುರ ಗ್ರಾಮದಲ್ಲಿದೆ.

"ತೈಲಪದೇವ ದಕ್ಷಲಕ್ಷಾತಳ
ಮಂ ಪ್ರತಿಪಾಲಿಸಿ ನೀತಿಯ ರಕ್ಷಿಸಿದನಿಂತು
ತೈಲನರೇನ್ದ್ರಂ ॥ ಆತನಗ್ರಸುತಂ ಸತ್ಯಾಶ್ರಯ
ವಲ್ಲಭ ಸತ್ಯಾಶ್ರಯನ ಸುತ ವಿಕ್ರಮಾದಿ
ತ್ಯದೇವ ಸ್ವಸ್ತಿಭುವನ ಭವನಾಷ್ರಯ ಶ್ರೀಪ್ರಿಥ್ವೀ
ವಲ್ಲಭ ಮಹಾರಾಜಾಧಿರಾಜಂ ಪರಮೇಶ್ವ
ರಂ ಪರಮಭಟ್ಟಾರಕಂ ಶ್ರೀಜಯಸಿಂಹದೇವ"[೧೨೪]

ತೈಲಪನ ಮಗ ಸತ್ಯಾಶ್ರಯ, ಸತ್ಯಾಶ್ರಯನ ಮಗ ವಿಕ್ರಮಾದಿತ್ಯ, ವಿಕ್ರಮಾದಿತ್ಯನ ಮಗ ಜಯಸಿಂಹ ಎಂದು ಜಯಸಿಂಹನ ಹೆಸರನ್ನು ಬಿರುದುಗಳೊಂದಿಗೆ ಉಲ್ಲೇಖಿಸಿ ರಾಜ್ಯಭಾರ ಮಾಡಿದ ಉಲ್ಲೇಖವಿದೆ. ಈ ಜಗದೇಕಮಲ್ಲನನ್ನು

"ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪ್ರಿಥ್ವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ
ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ
ಶ್ರೀಮಜ್ಜಗದೇಕಮಲ್ಲದೇವರು"

ಎಂದು ಪುರದಲ್ಲಿರುವ ಕ್ರಿ.ಶ.೧೦೧೮[೧೨೫], ಗೋತಗಿಯಲ್ಲಿರುವ ಕ್ರಿ.ಶ.೧೦೨೪[೧೨೬] ಮತ್ತು ಅಂಟೂರತಾಣದಲ್ಲಿರುವ ಕ್ರಿ.ಶ.೧೦೮೨[೧೨೭]ರ ಶಾಸನಗಳು ಉಲ್ಲೇಖಿಸಿವೆ .

ತ್ರೈಲೋಕ್ಯಮಲ್ಲ

ಒಂದನೇ ಸೋಮೇಶ್ವರನನ್ನು ತ್ರೈಲೋಕ್ಯಮಲ್ಲ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವನು ಕಲ್ಯಾಣ ಚಾಲುಕ್ಯ ವಂಶದ ಗಣ್ಯ ಅರಸರಲ್ಲಿ ಒಬ್ಬನು. ಕ್ರಿ.ಶ.೧೦೪೩ ರಿಂದ ಕ್ರಿ.ಶ.೧೦೬೮ರ ವರೆಗೆ ಆಳ್ವಿಕೆ ನಡೆಸಿದನು. ಗೋತಗಿಯಲ್ಲಿರುವ ಕ್ರಿ.ಶ.೧೦೪೫ರ ಶಾಸನದಲ್ಲಿ

"ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪ್ರಿಥ್ವೀವಲ್ಲಭಮ
ಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರ
ಕ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ
ಶ್ರೀಮತ್ರೈಲೋಕ್ಯಮಲ್ಲದೇವರ"[೧೨೮] ಎಂದು ಸಕಲ ಬಿರುದುಗಳೊಂದಿಗೆ ವರ್ಣಿತ

ಗೊಂಡಿದ್ದಾನೆ.

ತ್ರಿಭುವನಮಲ್ಲ (ಆರನೇ ವಿಕ್ರಮಾದಿತ್ಯ)

ಕನ್ನಡನಾಡನ್ನು ಆಳಿದ ಅರಸರಲ್ಲಿ ರಾಷ್ಟ್ರಮಟ್ಟದ ಗೌರವ ಸಂಪಾದಿಸಿದ ಚಕ್ರವರ್ತಿಗಳಲ್ಲಿ ವಿಕ್ರಮಾದಿತ್ಯನಿಗೆ ಪ್ರಥಮಸ್ಥಾನ ಸಲ್ಲುತ್ತದೆ. ಕಲ್ಯಾಣ ಚಾಲುಕ್ಯ ಅರಸರಲ್ಲಿ 'ತ್ರಿಭುವನಮಲ್ಲ' ಎಂಬ ಬಿರುದಾಂಕಿತದ ಶ್ರೇಯಸ್ಸು ಹೊಂದಿರುವ ಆರನೇ ವಿಕ್ರಮಾದಿತ್ಯ ಚಾಲುಕ್ಯ ಮನೆತನದ ಶ್ರೇಷ್ಠ ಅರಸ. ಇವನು ಒಂದನೇ ಸೋಮೇಶ್ವರನ ದ್ವಿತೀಯ ಪುತ್ರ. ಹೆಸರೂರಿನಲ್ಲಿರುವ ಕ್ರಿ.ಶ.೧೧೦೪ರ ಶಾಸನದಲ್ಲಿ

> "ಸಮಸ್ತ ಗುಣಗಣಾಳಂಕ್ರಿತ ಚಾರುಚಾರಿತ್ರ ನಯವಿನಯ ಗುಣಸೀಳ (ಸಂ)
> ಪನ್ನರು ಸುಜನಪ್ರಸನ್ನರು । ಚೋಳ ಲಾಳ ಮಾಳವ
> ಕಳಿಂಗ ಕಾಸ್ಮೀರ ಮಗಧ ಗು(ರ್ಜ್ಜರ)
> ಗೊಲ್ಲ ಬರ್ಬ್ಬರ ಕೊಂಕಣಾದಿ ಸಮಸ್ತ ನ್ರಿಪಲಲಾಟ
> ಸೇಂಧೂರ ಮುದ್ರಾಂಕಿತ ಹ..
> ರು ದುರ್ಜ್ಜನ ಭಯಂಕರರು ।"[೧೨೯] ಎಂದು ಉಲ್ಲೇಖವಿದೆ.

ತ್ರಿಭುವನಮಲ್ಲದೇವರು ಕಲ್ಯಾಣಪುರದ ನೆಲೆವಿಡಿನೊಳಗೆ ಸುಖಸಂತೋಷದಿಂದ, ವಿನೋದದಿಂದ ರಾಜ್ಯಗೈಯುತ್ತಿದ್ದರು ಎಂದು ವರ್ಣಿಸಲಾಗಿದೆ. ಹಾಗೆಯೇ ಮಂಕಲ್ಕೇರಿಯ ಕ್ರಿ.ಶ.೧೧೨೩ರ ಶಾಸನದಲ್ಲಿ

> "ಸ್ವಸ್ತಿ ಸಮಸ್ತ ಗುಣಸಂಪನ್ನಂ ನುಡಿದು ಮತ್ತೆನ್ನಂ ಗೋತ್ರಪವಿತ್ರಂ
> ಪರಾಂಗನಾಪುತ್ರಂ ಸುಜ
> ನೈಕಮಿತ್ರಂ ಹರಪಾದ ಪಂಕಜಭ್ರಮರಂ"[೧೩೦]

ಎಂದು ವರ್ಣಿಸಲಾಗಿದೆ. ಅಂಟೂರತಾಣದ ಕ್ರಿ.ಶ,೧೦೯೫[೧೩೧] ಮತ್ತು ಹನುಮನಾಳದ ಕ್ರಿ.ಶ. ೧೦೯೬[೧೩೨] ಶಾಸನಗಳಲ್ಲಿ ತ್ರಿಭುವನಮಲ್ಲನ ಉಲ್ಲೇಖಗಳಿವೆ. ಕಲ್ಯಾಣ ಚಾಲುಕ್ಯರ ಅರಸರಿಗೆ ಸಲ್ಲುವ ಎಲ್ಲ ಬಿರುದಾವಳಿಗಳನ್ನು ಶಾಸನಗಳಲ್ಲಿ ಅನ್ವಯಿಸಲಾಗಿದೆ. ಈತನು ಸಾಕಷ್ಟು ದಾನ ಗಳನ್ನು ನೀಡಿದ್ದರ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ.

೪.೨. ಕಲಚುರಿ ಅರಸರು

ಕಲಚೂರಿಗಳು ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಲೀಕರಾಗಿದ್ದು ನಂತರದಲ್ಲಿ ಸ್ವತಂತ್ರ ದೊರೆಗಳೆಂದು ಘೋಷಿಸಿಕೊಂಡರು. ಇವರು ಕ್ರಿ.ಶ.೧೧೬೨ ರಿಂದ ಕ್ರಿ.ಶ.೧೧೮೪ರವರೆಗೆ ಆಳ್ವಿಕೆ ನಡೆಸಿದರು. ಇವರು ೨೬ ವರ್ಷಗಳ ಕಾಲ ಕಲ್ಯಾಣವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದರು. ಇವರ ಆಡಳಿತಾವಧಿ ಅಲ್ಪವಾದರೂ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಇವರ ಕೊಡುಗೆ ಬಹುಮುಖ್ಯವೆನಿಸಿದೆ. ಈ ಮನೆತನದ ರಾಯಮುರಾರಿ ಸೋವಿದೇವ, ಸಂಕಮದೇವ ಮತ್ತು ಅಹವಮಲ್ಲದೇವ ಅರಸರ ಉಲ್ಲೇಖಗಳು ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಕಂಡುಬಂದಿವೆ.

[illegible]

ರಾಯಮುರಾರಿ ಸೋವಿದೇವ

ಇವನು ಬಿಜ್ಜಳನ ಮಗ. ತಂದೆಯ ಮರಣದ ನಂತರ ಅಧಿಕಾರಕ್ಕೆ ಬಂದನು. ಕುಷ್ಟಗಿ ತಾಲ್ಲೂಕಿನ ಎರಡು ಶಾಸನಗಳಲ್ಲಿ ಇವನ ಉಲ್ಲೇಖವಿದೆ. ಪುರದಲ್ಲಿರುವ ಕ್ರಿ.ಶ.೧೧೭೨ರ ಶಾಸನ[೧೩೩] ತೃಟಿತಗೊಂಡಿದ್ದರೂ 'ರಾಯಮುರಾರಿ ಸೋವಿದೇವ' ಎಂದು ಉಲ್ಲೇಖವಿರುವುದು ಸ್ಪಷ್ಟವಾಗಿದೆ. ಚಳಗೇರಿಯ ಕ್ರಿ.ಶ.೧೧೭೨ರ ಶಾಸನದಲ್ಲಿ

> "ಸ್ವಸ್ತಿ ಶ್ರೀಮತ್ಕಳಚುರಿರಾಯ ನಿಜಭುಜಬಳಚಕ್ರವರ್ತ್ತಿ ರಾಯಮುರಾರಿ
> ಸೋವಿದೇವರಸರು ಸುಖಸಂಕವಾಗಿ ಸುಕದಿಂ ರಾಜ್ಯಂಗೆಯುತ್ತಮಿರೆ"[೧೩೪]

ಎಂದು ಉಲ್ಲೇಖಿಸಲಾಗಿದೆ. ಈ ಶಾಸನದ ವಿಷಯದಿಂದ ಈ ಪ್ರದೇಶವು ಇವನ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

ಸಂಕಮದೇವ

ರಾಯಮುರಾರಿ ಸೋವಿದೇವನ ಮರಣದ ನಂತರ ಸಂಕಮದೇವನು ಅಧಿಕಾರಕ್ಕೆ ಬಂದನು. ಇವನು ಕ್ರಿ.ಶ.೧೧೬೭ ರಿಂದ ಕ್ರಿ.ಶ.೧೧೭೬ ರವರೆಗೆ ಆಳ್ವಿಕೆ ನಡೆಸಿದನು. ಇವನ ಉಲ್ಲೇಖವಿರುವ ಒಂದು ಶಾಸನ ಕುಷ್ಟಗಿ ತಾಲ್ಲೂಕಿನಲ್ಲಿದೆ. ಪುರದ ಕೋಟಿಲಿಂಗೇಶ್ವರ ದೇವಾಲಯದ ಬಳಿಯ ಅಗಸಿಯ ಗೋಡೆಗೆ ಸೇರಿಸಿರುವ ಕ್ರಿ.ಶ.ಸು.೧೪ನೆಯ ಶತಮಾನದ ಶಾಸನದಲ್ಲಿ

> ". . . . ಶ್ರೀಪ್ರಿಥ್ವೀವಲ್ಲಭ ಮಹಾರಾಜಾ . . . .
> . . . .ಕಮದೇವ"[೧೩೫] ಎಂದು ಉಲ್ಲೇಖವಿದೆ. ಈ ಶಾಸನದ ಬಹುಭಾಗ

ಹಾಳಾಗಿದೆ. ಈ ಶಾಸನದಿಂದ ಸಂಕಮದೇವ ರಾಜ್ಯವನ್ನಾಳುತ್ತಿದ್ದ ಎಂಬ ಅಂಶ ತಿಳಿದುಬರುತ್ತದೆ.

ಅಹವಮಲ್ಲದೇವ

ಸಂಕಮದೇವನ ನಂತರ ಅಹವಮಲ್ಲದೇವ ಅಧಿಕಾರಕ್ಕೆ ಬಂದನು. ಇವನು ಕ್ರಿ.ಶ.೧೧೮೦ ರಿಂದ ಕ್ರಿ.ಶ.೧೧೮೩ ರವರೆಗೆ ಕೇವಲ ಮೂರು ವರ್ಷಗಳ ಕಾಲ ರಾಜ್ಯಭಾರ ನಿರ್ವಹಿಸಿದನು. ಇವನ ಉಲ್ಲೇಖವಿರುವ ಒಂದು ಶಾಸನ ಹಿರೇಮನ್ನಾಪುರದಲ್ಲಿದೆ.[೧೩೬] ಕ್ರಿ.ಶ.ಸು.೧೧ನೆಯ ಶತಮಾನದ ಈ ಶಾಸನದ ಆರಂಭದಲ್ಲಿ "ಶ್ರೀಮದಾಹವಮಲ್ಲ" [ದೇವ] ಎಂದು ಉಲ್ಲೇಖವಿದೆ.

೯.೩. ವಿಜಯನಗರದ ಅರಸರು

ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ವಿಶೇಷ ಮಹತ್ವ ಪಡೆದಿದೆ. ಮುಸ್ಲಿಂರು ಉತ್ತರ ಭಾರತವನ್ನು ಕೈವಶಮಾಡಿಕೊಂಡು ನಂತರ ದಕ್ಷಿಣ ಭಾರತಕ್ಕೆ ಸಾಗಿಬಂದರು. ಆಗ ಅವರ ದಾಳಿಯ ರಭಸಕ್ಕೆ ಎದೆಕೊಟ್ಟು ನಿಲ್ಲುವಂತಹ ಸಮರ್ಥ ರಾಜಮನೆತನ ದಕ್ಷಿಣದಲ್ಲಿರಲಿಲ್ಲ. ಅಲ್ಲಿಯವರೆಗೆ ಕರ್ನಾಟಕವನ್ನು ತನ್ನ ಬಲಿಷ್ಠ ಬಾಹುಗಳಿಂದ ರಕ್ಷಿಸಿದ್ದ ಹೊಯ್ಸಳರ ಬಲ ಕ್ಷೀಣಿಸಿತ್ತು. ಅಂತಹ ದುರ್ಬಲ ಪ್ರಸಂಗದಲ್ಲಿ ತಲೆಯೆತ್ತಿನಿಂತು ಮುಸ್ಲಿಮರು ದಕ್ಷಿಣ ಭಾರತಕ್ಕೆ ನುಗ್ಗಿ ಬರದಂತೆ ತಡೆದು ನಿಲ್ಲಿಸುವುದರ ಮೂಲಕ ಹಿಂದೂ ಧರ್ಮದ ಸಂಸ್ಕೃತಿಗಳನ್ನು ಸಂರಕ್ಷಿಸಿದ ಕೀರ್ತಿ ವಿಜಯನಗರ ಸಾಮ್ರಾಜ್ಯದ ಅರಸರದ್ದಾಯಿತು. ಈ

ಕಾರಣವಾಗಿ ಮುಂದೆ ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾಯಿತು. ಇದು ಸುಮಾರು ಮೂರು ಶತಮಾನಗಳ ಕಾಲ ಅಸ್ತಿತ್ವದಲ್ಲಿತ್ತು. ಕಾಲಕ್ರಮೇಣ ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶದ ಅರಸರು ಆಡಳಿತ ನಡೆಸಿದರು. ಪ್ರತಾಪದೇವರಾಯ, ಸದಾಶಿವರಾಯ ಮತ್ತು ಆಳಿಯ ರಾಮರಾಯ ಈ ದೊರೆಗಳ ಉಲ್ಲೇಖಗಳು ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿವೆ.

ಪ್ರತಾಪದೇವರಾಯ (ಪ್ರೌಢದೇವರಾಯ)

ವಿಜಯನಗರದ ಸಂಗಮ ಮನೆತನ ಶ್ರೇಷ್ಠ ಅರಸ ಎರಡನೆಯ ದೇವರಾಯ. ಈತನನ್ನು ಫ್ರೌಡದೇವರಾಯ ಮತ್ತು ಪ್ರತಾಪದೇವರಾಯನೆಂದು ಶಾಸನಗಳು ಉಲ್ಲೇಖಿಸಿವೆ. ಇವನು ತನ್ನ ತಂದೆ ಒಂದನೆಯ ದೇವರಾಯನ ಕಾಲದಲ್ಲಿ ಯುವರಾಜನಾಗಿದ್ದು ನಂತರ ವಿಜಯನಗರದ ಅರಸನಾದನು. ಇವನು ಸುಮಾರು ೨೨ ವರ್ಷಗಳ ಕಾಲ ಆಡಳಿತ ನಿರ್ವಹಿಸಿದನು. ಇವನ ಉಲ್ಲೇಖವಿರುವ ಒಂದು ಶಾಸನ ಪುರದಲ್ಲಿದೆ. ಕ್ರಿ.ಶ.ಸು.೧೪೪೬ರ ಈ ಶಾಸನದಲ್ಲಿ[೧೩೮] 'ಮಹಾರಾಜಾಧಿರಾಜ ....ಶ್ರೀವೀರಪ್ರತಾಪದೇವರಾಯ' ಎಂದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಇವನು ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿದುಬರುತ್ತದೆ.

ಸದಾಶಿವರಾಯ

ಈತನು ತುಳುವ ಮನೆತನದವನು. ರಕ್ಕಸಗಿ ತಂಗಡಗಿ ಯುದ್ಧವಾದ ಮೇಲೆ ಸಾಮ್ರಾಜ್ಯದ ಅಧಿಪತಿಯಾದ ಶ್ರೇಷ್ಠ ದೊರೆ. ಇವನು ಕ್ರಿ.ಶ.೧೫೪೨ ರಿಂದ ಕ್ರಿ.ಶ.೧೫೭೦ ರವರೆಗೆ ಸುಮಾರು ೨೮ ವರ್ಷಗಳ ಕಾಲ ಆಳ್ವಿಕೆ ನಿರ್ವಹಿಸಿದನು. ಇವನ ಹೆಸರು ಉಲ್ಲೇಖವಿರುವ ಎರಡು ಶಾಸನಗಳು ಕುಷ್ಟಗಿ ತಾಲ್ಲೂಕಿನಲ್ಲಿವೆ. ಪುರದಲ್ಲಿರುವ ಕ್ರಿ.ಶ.೧೫೪೮ರ ಶಾಸನದಲ್ಲಿ[೧೩೯]

"ಶ್ರೀಮಂನ್ಮಹಾರಾಜಾಧಿ

ರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ಶ್ರೀವೀರಸದಾಶಿವರಾಯ" ಎಂದು ವಿಶೇಷಣದಿಂದ ಹೊಗಳಲಾಗಿದೆ. ಕ್ರಿ.ಶ.೧೫೪೮ರ ತಾವರಗೆರೆ ಶಾಸನದಲ್ಲಿ[೧೪೦] ಮೇಲಿ ನಂತೆಯೇ ಉಲ್ಲೇಖಿಸಲಾಗಿದೆ.

ಅಳಿಯ ರಾಮರಾಯ

ತುಳುವ ಅರಸರ ಕೈಕೆಳಗೆ ಸೇನಾನಿಯಾಗಿದ್ದ ಅರವೀಡು ರಂಗನ ಮಗನಾದ ರಾಮರಾಯನು ಕೃಷ್ಣದೇವರಾಯನ ಮಗಳಾದ ತಿರುಮಲಾಂಬೆಯನ್ನುವರಿಸಿ ಅಳಿಯ ರಾಮ ರಾಯನೆಂದು ಇತಿಹಾಸ ಪ್ರಸಿದ್ಧಿಯಾಗಿದ್ದಾನೆ. ಇವನು ಕ್ರಿ.ಶ.೧೫೪೩ ರಿಂದ ಕ್ರಿ.ಶ.೧೫೬೫ ರವರೆಗೆ ಆಳ್ವಿಕೆ ನಡೆಸಿದನು. ಷಾಹಿ ಸುಲ್ತಾನರ ಅಂತಃಕಲಹದ ಲಾಭಪಡೆದು ವಿಜಯನಗರದ ಗಡಿಯನ್ನು ವಿಸ್ತರಿಸಿದ ರಾಜನೀತಿಯ ಚತುರನೀತ. ಕೊನೆಗೆ ಷಾಹಿ ಸುಲ್ತಾನರೆಲ್ಲ ಒಂದಾಗಿ ಬಂದು ಕ್ರಿ.ಶ.೧೫೬೫ರಲ್ಲಿ ರಕ್ಕಸಗಿ ತಂಗಡಗಿ ಬಳಿ ನಿರ್ಣಾಯಕ ಹೋರಾಟ ನಡೆಯಿತು. ವಯೋವೃದ್ಧನಾದ ರಾಮರಾಯ ಸೈನ್ಯದ ಮುಂದಾಳತ್ವವಹಿಸಿದರೂ ಸೋಲು ತಪ್ಪಲಿಲ್ಲ. ಇದಕ್ಕೆ ಕಾರಣ ಆತನ ಮುಂಗೋಪಿತನ, ಅತಿಯಾದ ಆತ್ಮವಿಶ್ವಾಸಗಳು ಮತ್ತು ಅತಿ ನಂಬಿಕಸ್ಥ ಮುಸ್ಲಿಂ

[illegible]

[illegible]

[illegible]

[illegible]

[illegible]

[illegible]

ದಂಡನಾಯಕರ ವಂಚನೆ ಕಾರಣಗಳಾದವು. ಇವನ ಹೆಸರು ಉಲ್ಲೇಖವಿರುವ ಶಾಸನ ತಾವರಗೆರೆಯಲ್ಲಿದೆ. ಕ್ರಿ.ಶ.೧೫೪೭ರ ಈ ಶಾಸನದಲ್ಲಿ[೧೪೦] ಇವನು ಸದಾಶಿವರಾಯನು ಹೇಳಿದಂತೆ

"ಅಳಿಯ ರಾಮರಾಜಯದೇವ ಮಹಾಅರಸುಗಳು ತಾವರೆಕೆರೆಯ
ತಿಂಮ್ಮೋಜ ಕೊಂಡೋಜ ಭದ್ರೋಜ ಅವರ
ಬಿಂನ್ನಹವನು ಕೇಳಿ ಸ್ವಾಮಿಗೆ ಪುಣ್ಯವಾಗಲೆಂದು"

ದಾನ ನೀಡಿದ್ದರ ಉಲ್ಲೇಖವಿದೆ.

ಆ. ಸಾಮಂತರು

'ಸಾಮಂತ' ಎಂದರೆ ಅರಸನ ವಿಶಾಲ ಸಾಮ್ರಾಜ್ಯದ ಒಂದು ಭಾಗದ ಆಡಳಿತವನ್ನು ನೋಡಿಕೊಂಡು ಹೋಗುವ ಅರಸನ ಅದೀನ ದೊರೆ. ಇವರು ತಮ್ಮ ಪ್ರದೇಶದಲ್ಲಿ ಸಾರ್ವಭೌಮರಾಗಿದ್ದರು. ರಾಜನಿಗೆ ಸಲ್ಲಿಸಬೇಕಾದ ಕಪ್ಪುಕಾಣಿಕೆ ಸಲ್ಲಿಸಿ ತಮ್ಮ ಪ್ರದೇಶದಲ್ಲಿ ನಿಶ್ಚಿಂತೆಯಿಂದ ಆಳ್ವಿಕೆ ನಡೆಸುತ್ತಿದ್ದರು. 'ಸಾಮಂತ' ಎಂಬ ಪದಕ್ಕೆ ಗೌರವ ಸೂಚಕವಾಗಿ 'ಮಹಾ' ವಿಶೇಷಣ ಸೇರಿ 'ಮಹಾಸಾಮಂತ' ಎಂಬ ಪದವಾಗಿದೆ. ಎರಡು ಪದಗಳ ಅರ್ಥ ಒಂದೇ ಆಗಿದೆ. ಇದು ಹುದ್ದೆಯನ್ನು ಸೂಚಿಸುವ ಪದವಾಗಿದೆ. ಕುಷ್ಟಗಿ ತಾಲ್ಲೂಕಿನ ಒಂದು ಶಾಸನದಲ್ಲಿ 'ವರ್ಮದೇವ' ಎಂಬ ಸಾಮಂತನ ಉಲ್ಲೇಖವಿದೆ.

ವರ್ಮದೇವ

ಹಿರೇಮನ್ನಾಪುರದ ದುರ್ಗಮ್ಮ ದೇವಾಲಯದ ಗೋಡೆಯಲ್ಲಿರುವ ಕ್ರಿ.ಶ.ಸು.೧೧ನೆಯ ಶತಮಾನದ ಶಾಸನದಲ್ಲಿ ಈತನನ್ನು

"ಪದ್ಮೋಪಜೀವಿ ಕೀರ್ತ್ತಿವಿದ್ಯಾಧರ ಮಾರ್ಪ್ಪ. . . . .
ಮ ಗಣ್ಡರೊಳ್ಗಣ್ಡಂ ತೇಜಮಾರ್ತ್ತಾಣ್ಡಂ ಕು[ಳ]. . . .
ವರ್ಮ್ಮದೇವರ್ ಎಡೆದೊರೆಯೆಳ್ಚಾಸಿರು [ಮ]. . . . .".[೧೪೧]

ಎಂದು ವರ್ಣಿಸಲಾಗಿದೆ. ಈತನು ಅಹವಮಲ್ಲದೇವನ ಮಹಾಸಾಮಂತನಾಗಿದ್ದು ಈತ ಎಡದೊರೆ-೨೦೦೦ನ್ನು ಆಳುತ್ತಿದ್ದನೆಂದು ತಿಳಿಯುತ್ತದೆ.

ಇ. ದಂಡಾಧಿಕಾರಿಗಳು

ಅರಸನಿಂದ ನೇಮಿಸಲ್ಪಟ್ಟ ಅಧಿಕಾರಿ ವರ್ಗದವರಲ್ಲಿ ದಂಡನಾಯಕರಿಗೆ ವಿಶೇಷವಾದ ಗೌರವಸಲ್ಲುತ್ತಿತ್ತು. ದಂಡನಾಯಕರು ಅರಸ ಹಾಗೂ ಪ್ರಜೆಗಳ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಮ್ರಾಜ್ಯದಲ್ಲಿ ಗಲಭೆ ಗದ್ದಲಗಳು ಜರುಗಿದರೆ, ಈ ದಂಡ ನಾಯಕರು ದಮನ ಮಾಡುತ್ತಿದ್ದರು. ಇವರನ್ನು ಅರಸನು ನೇಮಿಸುತ್ತಿದ್ದನು. ಇವರು ತಮ್ಮ ವಿಭಾಗದಲ್ಲಿನ ಪರಿಸ್ಥಿತಿಯ ಕುರಿತು ಅರಸನಿಗೆ ವರದಿ ಒಪ್ಪಿಸುತ್ತಿದ್ದರು. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಅನೇಕ ದಂಡಾಧಿಕಾರಿಗಳ ಉಲ್ಲೇಖಗಳು ಬರುತ್ತವೆ. ಅವರ ಕುರಿತು ಈ ಕೆಳಗಿನಂತೆ ಗಮನಿಸಲಾಗಿದೆ.

ರೇಚಿಮಯ್ಯ ದಂಡನಾಯಕ

ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೧೪೨] ರೇಚಿಮಯ್ಯ ದಂಡನಾಯಕನ ಉಲ್ಲೇಖವಿದೆ. ಈ ಶಾಸನದಲ್ಲಿ ಇವನನ್ನು 'ಬಾಹತ್ತರನಿಯೋಗಾಧಿಪತಿ ರೇಚಿಮಯ್ಯ ದಂಡನಾಯಕ'ಎಂದು ಉಲ್ಲೇಖಿಸಲಾಗಿದೆ. ಅಂದರೆ ಆಡಳಿತ ಖಾತೆಯ ಮುಖ್ಯಸ್ಥನಾಗಿದ್ದನು. ಈ ಶಾಸನದಿಂದ ಅನೇಕ ಕರಣಗಳು, ಅಧಿಕಾರಿಗಳು, ಅರಸರು ಮತ್ತು ಅಗ್ರಹಾರಗಳ ಅಧಿಕಾರಿಗಳು ಮಹಾಸಭೆ ಸೇರಿದ್ದ ಸಭೆಯಲ್ಲಿ ರೇಚಿಮಯ್ಯ ದಂಡನಾಯಕನು ಪಾಲ್ಗೊಂಡು ಶ್ರೀಗವರೇಶ್ವರ ದೇವರಿಗೆ ಮತ್ತು ಬ್ರಾಹ್ಮಣರಿಗೆ ದಾನ ಕೊಡುವ ಬಗ್ಗೆ ಒಮ್ಮತದಿಂದ ತೀರ್ಮಾನಿಸಿದರೆಂದು ತಿಳಿದುಬರುತ್ತದೆ.

ಚಿಮ್ಮಯ್ಯದಂಡನಾಯಕ

ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೧೪೩] ಇವನು 'ಬಾಹತ್ತರ ನಿಯೋಗಾಧಿಪತಿ ರೇಚಿಮಯ್ಯ ದಂಡನಾಯಕನ ಅಧಿಕಾರಿ ಚಿಮ್ಮಯ್ಯದಂಡನಾಯಕ'ನೆಂದು ಉಲ್ಲೇಖವಿದೆ.

ಲಕ್ಷ್ಮೀದೇವ, ಬೊಪ್ಪ, ಚಾಮುಂಡ, ಮಾಚ, ಬೂಚ

ಕುಷ್ಟಗಿ ತಾಲ್ಲೂಕಿನ ಚಳಗೇರಿಯಲ್ಲಿನ ಕ್ರಿ.ಶ.೧೧೭೨ರ ಶಾಸನದಲ್ಲಿ[೧೪೪] ಲಕ್ಷ್ಮೀದೇವ ದಂಡಾಧೀಶ ಶ್ರೀಬೊಪ್ಪದಂಡೇಶ ಚಾಮುಂಡದಂಡೇಶ ಮಾಚದಣ್ಡನಾಯಕ ಮತ್ತು ಬೂಚದಣ್ಡನಾಯಕ ಒಂದೇ ವಂಶದ ಈ ಎಲ್ಲಾ ದಂಡನಾಯಕರನ್ನು ಉಲ್ಲೇಖಿಸಿದೆ. ಇಲ್ಲಿ ಬೂಚದಂಡನಾಥನು ಕಟ್ಟಿಸಿದ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಲಕ್ಷ್ಮೀದಂಡನಾಥನು ದಾನವನ್ನು ನೀಡಿರುವ ಜೊತೆಗೆ ಅನೇಕ ಅಧಿಕಾರಿಗಳು ದೇವಾಲಯಕ್ಕೆ ಮತ್ತು ಊರಿನ ಬ್ರಾಹ್ಮಣ ವರ್ಗಕ್ಕೆ ದಾನ ನೀಡಿದ ಬಗ್ಗೆ ತಿಳಿಯುತ್ತದೆ.

ವಿಷ್ಣುವರಸ

ಈತನು ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ಅಚ್ಚುಪನ್ನಾಯದ ಅಧಿಷ್ಠಾಯಕ ದಣ್ಡನಾಯಕನಾಗಿದ್ದನು. ಕುಷ್ಟಗಿ ತಾಲ್ಲೂಕಿನ ಅಂಟೂರಠಾಣ ಗ್ರಾಮದಲ್ಲಿನ ಕ್ರಿ.ಶ.೧೦೯೫ರ ಶಾಸನದಲ್ಲಿ[೧೪೫] ಇವನ ಹೆಸರು ಉಲ್ಲೇಖವಾಗಿದೆ. ಮಹಾಪ್ರಧಾನ ಸೋಮೇಶ್ವರ ಭಟ್ಟೋಪಾಧ್ಯಾಯರು ಮತ್ತು ಅಧಿಷ್ಠಾಯಕ ದಣ್ಡನಾಯಕ ಮಹಾವಿಷ್ಣುವರಸರು ಮತ್ತು ಇನ್ನೂ ಕೆಲವರು ಜೊತೆಗೂಡಿ ಘತ್ತರಟಾಣದ ಅಧಿಕಾರಿಗಳು ಕೂಡಿಕೊಂಡು ಪೆಂದೆಯಕೆರೆಯಲ್ಲಿ ಸತ್ರಶಾಲೆಯನ್ನು ಮಾಡಿಸಿದರೆಂದು ಈ ಶಾಸನದಿಂದ ತಿಳಿದುಬರುತ್ತದೆ.

ಸೋಭನರಸ ಬಮ್ಮೆಯನಾಯಕ

ಅಂಟೂರಠಾಣ ಗ್ರಾಮದಲ್ಲಿರುವ ಕ್ರಿ.ಶ.೧೧-೧೨ನೆಯ ಶತಮಾನಕ್ಕೆ ಸೇರಿದ ತೃಟಿತ ಶಾಸನದಲ್ಲಿ.[೧೪೬] ದಂಡನಾಯಕ ಸೋಭನರಸ ಪತ್ತರಠಾಣ ಬಮ್ಮೆಯನಾಯಕ ಕೇಶವದೇವರ ಹೆಸರು ಉಲ್ಲೇಖಗೊಂಡಿವೆ. ಈ ಶಾಸನ ಬಹುಭಾಗ ತೃಟಿತಗೊಂಡಿರುವುದರಿಂದ ಬೇರೆ ವಿಷಯಗಳು ಸ್ಪಷ್ಟವಾಗಿಲ್ಲ.

ಈ. ಗಾವುಂಡರು

ಗ್ರಾಮದ ಆಡಳಿತವನ್ನು ನೋಡಿಕೊಳ್ಳುವವನಿಗೆ 'ಗಾವುಂಡ' ಎಂದು ಕರೆಯುತ್ತಾರೆ. ಇಂದಿನ ಊರಗೌಡರೇ ಶಾಸನಗಳಲ್ಲಿ ಗೌವುಂಡರೆನಿಸಿದ್ದರು. ಕೆಲವು ಗ್ರಾಮಗಳಲ್ಲಿ ಒಬ್ಬ ಮತ್ತೆ ಕೆಲವು ಗ್ರಾಮಗಳಲ್ಲಿ ಹಲವು ಜನ ಗಾವುಂಡರು ಇರುತ್ತಿದ್ದರು ಎಂದು ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಅವರ ಈ ಅಭಿಪ್ರಾಯ ಸಮಂಜಸವಾಗಿದೆ. ಕೆಲವು ಜನ ಒಂದೇ ವಂಶಕ್ಕೆ ಸಂಬಂಧಿಸಿದ್ದು ಸಹೋದರ ಸಂಬಂಧಿಗಳಾಗಿರಬೇಕು. ಒಂದು ಊರಲ್ಲಿ ಅನೇಕ ಗಾವುಂಡರಿದ್ದರು. ಅವರೆಲ್ಲರ ಮೇಲೆ ಒಬ್ಬನೇ ಗಾವುಂಡನಿರುತ್ತಿದ್ದನು. ಗ್ರಾಮದ ಸಮಸ್ತ ಅಧಿಕಾರ ಸೂತ್ರ ಇವನ ಕೈಯಲ್ಲಿರುತ್ತಿತ್ತು.

ಈ ಗಾವುಂಡರ ಕುರಿತು ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಗಳಿವೆ. 'ಮೂಡಕೇರಿಯ ಬೊಮ್ಮಗಾವುಂಡ ಕಲ್ಕೆರೆಯ ಎಂಟುಗಾವುಂಡಗಳು'[೧೪೭] ಸಿರಿಗೊಪ್ಪದ ಸೊಪೊತ ರಾಚಮಗಾಮುಣ್ಡ, ನಿರಮೊಪ್ಪ ಆಚಗಾಮುಣ್ಡ,[೧೪೮] ಸಿಂಗಗಾವುಣ್ಡ,[೧೪೯] ಯರಗೇರಿಯ ಮೆಲಗಿರಿಗೌಡ[೧೫೦] ಇವರೆಲ್ಲರೂ ತಮ್ಮ ತಮ್ಮ ಗ್ರಾಮದ ಆಡಳಿತವನ್ನು ಸುರಕ್ಷಿತವಾಗಿ ನೋಡಿಕೊಳ್ಳುವುದರ ಜೊತೆಗೆ ಗ್ರಾಮ ರಕ್ಷಣೆ ಮಾಡುತ್ತಿದ್ದರು. ಸುಂಕ ಸಂಗ್ರಹಣೆ ಮತ್ತು ಒಮ್ಮೊಮ್ಮೆ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಗ್ರಾಮಕ್ಕೆ ಕಳ್ಳರ ಬಾಧೆ, ಗೋವು, ಸ್ತ್ರೀಯರನ್ನು ಅಪಹರಿಸುವ ಸಮಯದಲ್ಲಿ ಇವರು ತಮ್ಮ ಜೀವದ ಹಂಗು ತೊರೆದು ಹೋರಾಡಿ ಗ್ರಾಮ, ಗ್ರಾಮದ ಜನ ಮತ್ತು ಸಂಪತ್ತನ್ನು ರಕ್ಷಿಸುತ್ತಿದ್ದರು.

೩.೭. ಶಿಕ್ಷಣ ಕೇಂದ್ರಗಳು

ಪ್ರಾಚೀನ ಭಾರತದಲ್ಲಿ ವಿದ್ಯಾಪದ್ಧತಿಯು ಬಹುಮಟ್ಟಿಗೆ ಧಾರ್ಮಿಕವಾದುದು. ಧಾರ್ಮಿಕ ಶಿಕ್ಷಣವೇ ವಿದ್ಯಾಭ್ಯಾಸವಾಗಿತ್ತು. ವಿದ್ಯೆಯನ್ನು 'ಆತ್ಮಜ್ಞಾನವಿದ್ಯೆ' ಮತ್ತು 'ಮೋಕ್ಷಸಾಧನವಿದ್ಯೆ' ಎಂದು ಕರೆಯಲಾಗುತ್ತಿತ್ತು.[೧೫೧] ಹಿಂದೂ ಸಮಾಜವು ವಿದ್ಯೆಗೆ ಅತ್ಯಂತ ಉನ್ನತವಾದ ಸ್ಥಾನವನ್ನು ನೀಡಿದ್ದು ಸಮಾಜದ ಆಧಾರವಾಗಿದ್ದ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿತ್ತು. ಏಕೆಂದರೆ, ವಿದ್ಯೆ ಸರ್ವಕಾಲ ಶ್ರೇಷ್ಟತ್ವದ ಕೊಡುಗೆಯನ್ನು ನೀಡುವ ಉದ್ದೇಶ ಹೊಂದಿರುತ್ತದೆ.

ಒಂದು ನಾಡು ತುಂಬಾ ಸುಸಂಸ್ಕೃತವಾಗಿದೆ ಎಂಬುದನ್ನು ತಿಳಿಯಬೇಕಾದರೆ ಅಲ್ಲಿರುವ ವಿದ್ಯಾಕೇಂದ್ರಗಳನ್ನು ಅವಲೋಕಿಸಬೇಕಾಗುತ್ತದೆ. ಭಾರತೀಯರು ಪ್ರಾಚೀನ ಕಾಲದಿಂದಲೂ ವಿದ್ಯೆಗೆ ಅಪಾರ ಗೌರವವನ್ನು ನೀಡುತ್ತಾ ಬಂದಿದ್ದಾರೆ. 'ವಿದ್ಯೆಯ ವಿಷಯದಲ್ಲಿ ಪ್ರಾಚೀನ ಭಾರತವು ಇಟ್ಟುಕೊಂಡಿದ್ದ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು. ವಿದ್ಯೆಗಿಂತ ಶ್ರೇಷ್ಟವಾದುದು ಮತ್ತೊಂದಿಲ್ಲ. ಸರ್ವದ್ರವ್ಯಗಳಲ್ಲಿ ವಿದ್ಯೆಯೇ ನಿಜವಾದ ಧನ. ಏಕೆಂದರೆ ಅದನ್ನು ಯಾರು ಅಪಹರಿಸಲಾರರು. ಅದು ಅನರ್ಘ್ಯವಾದುದು ಮತ್ತು ಅಕ್ಷಯವಾದುದು.'[೧೫೨] ಆದ್ದರಿಂದ ವಿದ್ಯೆಯೇ ಪರಮ ಪ್ರಯೋಜನವು ಆತ್ಮಸಿದ್ಧಿ ಮತ್ತು ಆತ್ಮಜ್ಞಾನಗಳೇ ಆಗಿದ್ದವು. ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಡುವಾಗ ವಿದ್ಯಾಭ್ಯಾಸಕ್ಕೂ ಇಂತಿಷ್ಟೆಂಬಂತೆ ಮೀಸಲಾಗಿರಿಸುತ್ತಿದ್ದರು.

[illegible]

[illegible]

[illegible]

ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡುಬರುವ ಒಂದು ಪ್ರಮುಖವಾದ ಅಂಶವೆಂದರೆ, ಊರೂರುಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಸ್ಥಾನಗಳು ಮತ್ತು ಮಠಗಳು ಪ್ರಾಚೀನ ಕಾಲದಿಂದ ವಿದ್ಯಾಕೇಂದ್ರಗಳಾಗಿದ್ದು ವಿದ್ಯೆಯನ್ನು ಸಾಧ್ಯವಾದಷ್ಟು ವ್ಯಾಪಕವನ್ನಾಗಿ ಮಾಡುವ ಪ್ರಯತ್ನ ಮಾಡಿವೆ. ನಾಡಿನಾದ್ಯಂತ ದೊರಕುವ ನೂರಾರು ಶಾಸನಗಳಿಂದ ಆ ಕಾಲದ ವಿದ್ಯಾಭ್ಯಾಸದ ಪದ್ಧತಿಯ ಪರಿಚಯಕ್ಕೆ ಸಹಾಯವಾಗಿವೆ. ಕೊಪ್ಪಳ ಜಿಲ್ಲೆಯ ಪ್ರದೇಶವು ಪ್ರಾಚೀನ ಕಾಲದಿಂದ ವಿದ್ಯಾಕೇಂದ್ರವಾಗಿತ್ತೆಂದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಕುಷ್ಟಗಿ ಪರಿಸರದ ಶಾಸನಗಳಲ್ಲಿ ವಿದ್ಯಾಕೇಂದ್ರಗಳಾದ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳ ಉಲ್ಲೇಖಗಳಿದ್ದು ಅವುಗಳ ಕುರಿತು ಚರ್ಚಿಸಲಾಗಿದೆ.

ಅ. ಅಗ್ರಹಾರ

'ಅಗ್ರಹಾರ'ವೆಂದರೆ ಶ್ರೇಷ್ಠವಾದ ಸ್ಥಳ ಅಥವಾ ಶ್ರೇಷ್ಠರಿಗೆಂದು ಕೊಟ್ಟ ಸ್ಥಳ. ಅನೇಕ ರಾಜರು, ವಿದ್ಯಾಭಿಮಾನಿಗಳು ವಿದ್ಯಾಭಿವೃದ್ಧಿಗಾಗಿ ಅಗ್ರಹಾರಗಳನ್ನು ನಿರ್ಮಿಸಿ, ವಿದ್ಯಾ ಸಂಪನ್ನರಾದ ಬ್ರಾಹ್ಮಣರನ್ನು ನೇಮಿಸಿ, ವಿದ್ಯೆಯ ಪ್ರಸಾರ ಮಾಡುತ್ತಿದ್ದರು. 'ಪ್ರಾಚೀನ ಕಾಲದಲ್ಲಿ ರಾಜ್ಯವು ವಿದ್ಯಾಭ್ಯಾಸದ ಹೊಣೆಯನ್ನು ಪ್ರತ್ಯಕ್ಷವಾಗಿ ವಹಿಸಿದ್ದರೂ ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ಪರೋಕ್ಷವಾಗಿ ಸಹಾಯ ಮಾಡಿದೆ ಎನ್ನಬಹುದು. ಹೊಟ್ಟೆ ಬಟ್ಟೆಗಳ ಚಿಂತೆಯನ್ನು ರಾಜ್ಯವು ಹೋಗಲಾಡಿಸಿದುದರಿಂದ ಅಗ್ರಹಾರಗಳ ಬ್ರಾಹ್ಮಣರು ತಮ್ಮ ಗಮನವನ್ನು ವಿದ್ಯಾದಾನದ ಕಡೆಗೆ ಕೊಡಲು ಸಾಧ್ಯವಾಯಿತು."[೧೫೪] ಅಲ್ಲದೆ ಆ ಊರಿನ ಸಂಪೂರ್ಣ ಆದಾಯವು ರಾಜಬೊಕ್ಕಸಕ್ಕೆ ಸಲ್ಲದೆ ಆ ಸಂಪತ್ತನ್ನು ಬ್ರಾಹ್ಮಣರೇ ಅನುಭವಿಸುತ್ತಿದ್ದರು.

'ವಿದ್ಯಾದಾನವು ಪವಿತ್ರ ಕಾರ್ಯವಾದುದರಿಂದ ಅಗ್ರಹಾರಗಳನ್ನು ದಾನವಾಗಿ ಕೊಡುತ್ತಿದ್ದರು. ಹೀಗಾಗಿ ನಮ್ಮ ನಾಡಿನಲ್ಲಿ ಅನೇಕಾನೇಕ ಅಗ್ರಹಾರಗಳು ಉಪಸ್ಥಿತ ವಿದ್ದವು'. ಪ್ರೋ. ಡಿ.ಎಲ್.ನರಸಿಂಹಾಚಾರ್ಯರ ಪ್ರಕಾರ ಅಗ್ರ+ಆಹಾರ ಎಂಬುದು ಎರಡು ಪದಗಳ ಸಮಾಸ. 'ಅಗ್ರ' ಎಂದರೆ 'ಶ್ರೇಷ್ಠ' ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರಗಳೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಎಂದರ್ಥ.' ಅಗ್ರಹಾರಗಳು ವಿಶೇಷವಾಗಿ ಬ್ರಾಹ್ಮಣರ ಜೀವನಾಧಾರಕ್ಕಾಗಿ ಬಿಟ್ಟು ಕೊಟ್ಟ ಗ್ರಾಮಗಳು. ಅಗ್ರಹಾರಗಳನ್ನು ದತ್ತಿಯಾಗಿ ಪಡೆದ ಬ್ರಾಹ್ಮಣರನ್ನು 'ಮಹಾಜನ'ರೆಂದು ಕರೆಯುತ್ತಿದ್ದರು. ಅವರು ವೇದ, ವೇದಾಂಗ, ಉಪಾಂಗಶಾಸ್ತ್ರ, ಅಷ್ಟದಶಪುರಾಣ, ಸ್ಮೃತಿಗಳನ್ನು ಅಧ್ಯಯನ ಮಾಡಿರುತ್ತಾರೆ. ಅಲ್ಲದೆ ವಾಗ್ಭೂಷಣರು, ಷಟ್ಕರ್ಮನಿರತರು, ಪರಮ ಪರೋಪ ಕಾರಿಗಳು, ಆಶ್ರಿತರಿಗೆ ಕಲ್ಪವೃಕ್ಷದಂತೆ ಆಗಿರುತ್ತಾರೆ.[೧೫೫] ಕುಷ್ಟಗಿ ಪರಿಸರದ ಶಾಸನಗಳಲ್ಲಿ ಉಕ್ತವಾಗಿರುವ ಅಗ್ರಹಾರಗಳ ಮಾಹಿತಿಯನ್ನು ಸಂಗ್ರಹಿಸಿ ಚರ್ಚಿಸಲಾಗಿದೆ.

ಬೈಳೆನೆಗೆಯೂರು (ಬಳಗೇರಿ)

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿಗೆ ಸೇರಿದ ಬೈಳೆನೆಗೆಯೂರು ನಾಡು ಅಂದಿನ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಇಂದಿನ ಬಳಗೇರಿಯು ಹಿಂದೆ ಬೆಳಗೆರೆ, ಬಳಗೆರೆ ಯಾಗಿದ್ದಿತು. ಇದು ೩೦೦ ಮಹಾಜನರಿಂದ ಕೂಡಿದ ಅಗ್ರಹಾರವಾಗಿತ್ತು. ಪುರದಲ್ಲಿರುವ ಕ್ರಿ.ಶ.

೧೦೧೮ರ ಶಾಸನದಲ್ಲಿ[೧೫೬] ಜಗದೇಕಮಲ್ಲನ ದಂಡನಾಯಕ ಕೆಳವಡಿ-೩೦೦ನ್ನು ಆಳುತ್ತಿದ್ದಾಗ ಆಗ್ರಹಾರ ಬೈಳೆನೆಗೆಯೂರಿನ ಮುಖ್ಯಸ್ಥನಾದ ಕೊಣ್ಡಯ್ಯವಾರಿ ಅಯ್ಯಣಯ್ಯನಿರುತ್ತಾನೆ. ಜಗದೇಕ ಮಲ್ಲನ ದಂಡನಾಯಕ ಈತನಿಗೆ ಪಂಪಾತೀರ್ಥ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ೫ ಮತ್ತರು ಗದ್ದೆಯನ್ನು ದಾನವಾಗಿ ನೀಡಿದಂತೆ ಮಾಹಿತಿ ಇದೆ. ಬೈಳೆನೆಗೆಯೂರು ಅಂದಿನ ಕಾಲದಲ್ಲಿ ಅಗ್ರಹಾರವಾಗಿತ್ತಾದರೂ ಇದರ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ. ಶಾಸನಗಳಲ್ಲಿ ದೊರೆತ ಆಧಾರದಿಂದ ಇದೊಂದು ಅಗ್ರಹಾರವಾಗಿತ್ತೆಂದು ಗುರುತಿಸಬಹುದಾಗಿದೆ.

ಚಳಗೇರಾ

ಕುಷ್ಟಗಿ ತಾಲ್ಲೂಕಿನ ಚಳಗೇರಿ ಗ್ರಾಮವು ಕೆಲ್ಲಂಗೆರೆಯೆಂಬ ಅಗ್ರಹಾರವಾಗಿ ಪ್ರಸಿದ್ಧ ಹೊಂದಿತ್ತು. ಇದು ಕಿಸುಕಾಡು-೭೦ರಲ್ಲಿತ್ತು. ಚಳಗೇರಾದಲ್ಲಿರುವ ಕ್ರಿ.ಶ.೧೧೭೨ರ ಶಾಸನದಲ್ಲಿ[೧೫೭] ಕಳಚೂರಿ ಚಕ್ರವರ್ತಿ ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ ಬೂಚಮದಂಡನಾಯಕನು ಕೆಲ್ಲಂಗೆರೆಯಲ್ಲಿ ಲಕ್ಷ್ಮಿನಾರಾಯಣ ದೇವಾಲಯವನ್ನು ಕಟ್ಟಿಸಿದನು. ಹಾಗೆಯೇ ಈ ದೇವಾ ಲಯಕ್ಕೆ ಮತ್ತು ಇಲ್ಲಿನ ಮಹಾಜನರಿಗೆ ಭೂಮಿಯನ್ನು ದಾನ ನೀಡಿದರ ಮಾಹಿತಿ ಇದೆ.

ಸಿಂಧನೂರು

ರಾಯಚೂರು ಜಿಲ್ಲೆಯ ವ್ಯಾಪ್ತಿಗೆ ಸೇರಿದ ಸಿಂಧನೂರು ಇಂದು ತಾಲ್ಲೂಕು ಕೇಂದ್ರವಾಗಿದೆ. ಶಾಸನದಲ್ಲಿ ಸಿಂಧನೂರನ್ನು ಅಗ್ರಹಾರವೆಂದು ಉಲ್ಲೇಖಿಸಿದೆ. ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೧೫೮] 'ಅಗ್ರಹಾರ ಸಿಂಧನೂರು' ಎಂದು ಉಲ್ಲೇಖಿಸಿದ್ದು ಪ್ರಾಚೀನ ಕಾಲದಲ್ಲಿ ಇದೊಂದು ಅಗ್ರಹಾರವಾಗಿತ್ತೆಂದು ಖಚಿತವಾಗಿ ಹೇಳಬಹುದಾಗಿದೆ.

ಮಾದನೂರ

ಕೊಪ್ಪಳ ತಾಲ್ಲೂಕಿಗೆ ಸೇರಿದ ಮಾದಿನೂರು ಗ್ರಾಮವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇದೊಂದು ಅಗ್ರಹಾರವಾಗಿ ಪ್ರಸಿದ್ಧವಾಗಿತ್ತು. ಅಂಟೂರರತಾಣದಲ್ಲಿರುವ ಕ್ರಿ.ಶ.೧೨೬೭ರ ಶಾಸನದಲ್ಲಿ[೧೫೯] ಈ ಅಗ್ರಹಾರವು ಎಡದೊರೆ-೨೦೦೦ಕ್ಕೆ ಸೇರಿದ ಕೆಳವಡಿ-೩೦೦ರ ತಿಲಕದಂತೆ ಇದ್ದಿತೆಂದು ಉಲ್ಲೇಖವಿದೆ. ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೧೬೦] 'ಅಗ್ರಹಾರ ಮಾದನೂರು' ಎಂದು ಉಲ್ಲೇಖವಿದೆ.

ನಿಡುಗೊಳ

ಯಲಬುರ್ಗಾ ತಾಲ್ಲೂಕಿಗೆ ಸೇರಿದ ನಿಡುಗೊಳ ಪ್ರಾಚೀನ ಕಾಲದಲ್ಲಿ ಅಗ್ರಹಾರ ವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೧೬೧] ನಿಡುಗೊಳದ ಉಲ್ಲೇಖವಿದೆ. ಇದೇ ಗ್ರಾಮದಲ್ಲಿ ಕ್ರಿ.ಶ.೧೫೪೭ರ ಶಾಸನದಲ್ಲಿ[೧೬೨] ನಿಡುಗೊಳ ಅಗ್ರಹಾರದ ಉಲ್ಲೇಖವಿದೆ. ಈ ಶಾಸನಗಳಲ್ಲಿ ಅಗ್ರಹಾರಗಳ ಉಲ್ಲೇಖ ಮಾತ್ರವಿದ್ದು ಹೆಚ್ಚಿನ ವಿಷಯವಿಲ್ಲ.

ಕುಷ್ಟಗಿ ಪರಿಸರದಲ್ಲಿ ಅಗ್ರಹಾರಗಳ ಸಂಖ್ಯೆಯು ಅಧಿಕವಾಗಿದ್ದು ವಿದ್ಯೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದವು. ಶಾಸನಗಳಲ್ಲಿ ಅಗ್ರಹಾರಗಳ ಬಗ್ಗೆ ಅಲ್ಲಿ ನಡೆಯುತ್ತಿದ್ದ ಅಧ್ಯಯನ

ಕುರಿತು ಇವುಗಳಿಗೆ ದಾನ-ದತ್ತಿಗಳನ್ನು ನೀಡಿರುವುದರ ಕುರಿತು ಮಾಹಿತಿ ದೊರೆಯುತ್ತದೆ. ಈ ಅಗ್ರಹಾರಗಳಲ್ಲಿ ನೆಲೆಸಿದ ಬ್ರಾಹ್ಮಣರನ್ನೇ ಮಹಾಜನರೆಂದು ಕರೆಯಲಾಗುತ್ತಿತ್ತು. ಈ ಅಗ್ರಹಾರಗಳು ಮಹಾಜನರ ಪ್ರಭುತ್ವದಲ್ಲಿದ್ದುದರಿಂದ ಅವರೇ ಅಗ್ರಹಾರದ ಒಡೆಯರಾಗಿರುತ್ತಿದ್ದರು. ಇವರು ಸಕಲವೇದಶಾಸ್ತ್ರ, ವ್ಯಾಕರಣ, ಸ್ಮೃತಿ, ಪುರಾಣ, ನ್ಯಾಯ, ಕಾವ್ಯ, ನಾಟಕ, ವಾತ್ಸಾಯನ, ಧ್ಯಾನ, ಧಾರಣ, ಮೌನಾನುಷ್ಠಾನ ಮುಂತಾದ ಪಾಠಗಳನ್ನು ಬೋಧಿಸುತ್ತಿದ್ದರು. ಇಲ್ಲಿಯ ಮಹಾಜನಗಳು ಸಕಲ ಶಾಸ್ತ್ರವಿಶಾರದರು ಆಗಿದ್ದರು. ಈ ಅಗ್ರಹಾರಗಳಲ್ಲಿಯ ಮಹಾಜನರು ಚಾಮುಣ್ಡ ಭಟ್ಟೋಪಾಧ್ಯಾಯ[೧೬೩] ಯಜ್ಞನಾರಾಯಣ ಭಟ್ಟೋಪಾಧ್ಯಾಯ[೧೬೪] ಸೋಮೇಶ್ವರ ಭಟ್ಟೋಪಾಧ್ಯಾಯ[೧೬೫] ಮುಂತಾದವರಾಗಿದ್ದರು ಎಂಬ ಬಗ್ಗೆ ಉಲ್ಲೇಖಗಳು ಇಲ್ಲಿಯ ಶಾಸನಗಳಲ್ಲಿ ಕಂಡು ಬರುತ್ತವೆ. ಈ ಮಹಾಜನರು ಬೋಧಿಸಲು ಮಠ, ದೇವಾಲಯಗಳನ್ನು ಆಶ್ರಯಿಸಿ ಅಲ್ಲಿ ಬಂದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಹೇಳಿಕೊಡುತ್ತಿದ್ದರು.

ಆ. ಬ್ರಹ್ಮಪುರಿ

'ಬ್ರಹ್ಮಪುರಿ'ಗಳೆಂದರೆ ಹೆಚ್ಚಾಗಿ ನಗರಗಳಿಗೆ ಸೇರಿದ ವಿದ್ಯಾಸಂಸ್ಥೆಗಳೆಂದು ಹೇಳಬಹುದಾಗಿದೆ. 'ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪುರಿ.'[೧೬೬] ಪ್ರಾಚೀನ ಕಾಲದಲ್ಲಿ ನಗರಗಳಿಗಿಂತ ಹಳ್ಳಿಗಳ ಸಂಖ್ಯೆಯೇ ಹೆಚ್ಚಾಗಿತ್ತು. ಆದ್ದರಿಂದ ಬ್ರಹ್ಮಪುರಿಗಳು ಅಗ್ರಹಾರಗಳಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದವು. ಬ್ರಹ್ಮಪುರಿಗಳಲ್ಲಿ ವಾಸಿಸುತ್ತಿದ್ದವರು ಬ್ರಾಹ್ಮಣರುಗಳಾದರೂ ಅಗ್ರಹಾರಗಳ ಮುಖ್ಯಸ್ಥರಂತೆ ಅವರಿಗೆ ಸರ್ವಸ್ವಾಮ್ಯ ಇರಲಿಲ್ಲ. ಇವರ ಅಧಿಕಾರ ಸೀಮಿತವಾಗಿತ್ತು. ಅಗ್ರಹಾರಗಳಂತೆ ಬ್ರಹ್ಮಪುರಿಗಳೂ ಉನ್ನತ ಶಿಕ್ಷಣ ಕೇಂದ್ರಗಳು. ಬ್ರಹ್ಮಪುರಿಯ ಉಲ್ಲೇಖಗಳು ಕುಷ್ಟಗಿ ಪರಿಸರದ ಶಾಸನಗಳಲ್ಲಿವೆ.

ಅಗ್ರಹಾರದ ಬ್ರಾಹ್ಮಣರಿಗೆ ದಾನ ನೀಡಿದಂತೆ ಬ್ರಹ್ಮಪುರಿಯ ಬ್ರಾಹ್ಮಣರಿಗೂ ದಾನ ಕೊಡುವ ಪದ್ಧತಿಯು ಇತ್ತು. ಪುರದಲ್ಲಿರುವ ಕ್ರಿ.ಶ.೧೦೧೮ರ ಶಾಸನವು[೧೬೭] ಬೈಳೆನೆಗೆಯೂರಿನ ಮುಖ್ಯಸ್ಥನಾದ ಕೊಣ್ಡಯವಾರಿಯು ಅಲ್ಲಿ ನೆಲೆಸಿದ ೧೨ ಜನ ಬ್ರಾಹ್ಮಣರಿಗೆ ೧೫೦ ಮತ್ತರು ಗದ್ದೆಯನ್ನು ದಾನ ಬಿಟ್ಟಿದ್ದ ವಿಷಯ ತಿಳಿಸುತ್ತದೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೧೭೨ರ ಶಾಸನದಲ್ಲಿ[೧೬೮] ಬ್ರಹ್ಮಪುರಿಯ ಉಲ್ಲೇಖವಿದೆ. ಇಲ್ಲಿಯ ಕ್ರಿ.ಶ.೧೨ನೆಯ ಶತಮಾನದ ಇನ್ನೊಂದು ಶಾಸನವು[೧೬೯] ಬ್ರಹ್ಮಪುರಿಯಲ್ಲಿ ನೆಲೆಸಿದ ಬ್ರಾಹ್ಮಣರ ವೇತನಕ್ಕೆ ಹಿರಿಯ ಕೋಲಲ್ಲಿ ಒಂದು ಮತ್ತರು ದಾನ ಬಿಟ್ಟಂತೆ ಉಲ್ಲೇಖವಿದೆ.

ಘಟಿಕಾಸ್ಥಾನ

ಉನ್ನತ ಶಿಕ್ಷಣ ಕೇಂದ್ರಗಳಲ್ಲಿ 'ಘಟಿಕಾಸ್ಥಾನ' ಅತ್ಯಂತ ಪ್ರಾಚೀನವಾದುದು. ಇಲ್ಲಿ ನೀಡುತ್ತಿದ್ದ ಶಿಕ್ಷಣ ಉಳಿದ ಶಿಕ್ಷಣ ಕೇಂದ್ರಗಳಿಗೆ ಶಿಖರಪ್ರಾಯವಾಗಿತ್ತು. ಪ್ರೊ. ಎಸ್.ವಿ. ವೆಂಕಟೇಶ್ವರ ಅವರ ಪ್ರಕಾರ, 'ಉಪಾಧ್ಯಾಯರು, ವಿದ್ಯಾರ್ಥಿಗಳು ಕೂಡಿ ಚರ್ಚೆ ನಡೆಸುತ್ತಿದ್ದ ಮತ್ತು ಮಹಾವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುತ್ತಮ ಜ್ಞಾನವನ್ನು (ಪ್ರವಚನಂ ನಿಖಿಲಂ) ಪಡೆಯಲು ಸಾಧ್ಯವಾಗಿದ್ದ ಶ್ರೇಷ್ಠತಮ ಸಂಸ್ಥೆಯೇ ಘಟಿಕಾಸ್ತಾನ'

ಎಂದಿದ್ದಾರೆ. ಇದೇ ಅಭಿಪ್ರಾಯವನ್ನು ರೈಸ್ ಅವರು ಹೀಗೆ ವಿವರಿಸಿದ್ದಾರೆ, 'ಬ್ರಾಹ್ಮಣರು ಒಂದೆಡೆ ಸೇರುತ್ತಿದ್ದ ಸಾರ್ವಜನಿಕ ಮಂದಿರವಹುದು'.[೧೨೦] ಎಂದು ಘಟಿಕಾಸ್ಥಾನವನ್ನು ಕುರಿತು ವಿವರಿಸಿದ್ದಾರೆ.

'ಘಟಿಕಾಸ್ಥಾನವನ್ನು ಸಭಾಗ್ರಹ ದೇವಸ್ಥಾನ ಬ್ರಹ್ಮಪುರಿಯೆಂದೆಲ್ಲಾ ಕರೆಯುತ್ತಿದ್ದರು. ಇದಕ್ಕೆ ಕಾರಣವೆಂದರೆ ಅದು ಹಿಂದೆ ಒಂದು ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತಿತ್ತು. ಅದರಲ್ಲಿ ಒಂದು ಸಭಾಗೃಹವಿರುತ್ತಿತ್ತು. ಅಗ್ರಹಾರ ಬ್ರಹ್ಮಪುರಿಗಳಂತೆ ಅದೂ ವಿದ್ವಾಂಸರ ವಸತಿಯಿಂದ ಕೂಡಿರುತ್ತಿತ್ತು'. ಈ ಘಟಿಕಾಸ್ಥಾನಗಳಲ್ಲಿ ಚರ್ಚೆಗಳು, ವಾದ-ಪ್ರತಿವಾದಗಳಲ್ಲದೆ ಪಿದ್ವಾಂಸರುಗಳಿಂದ ಶಾಸ್ತ್ರಾರ್ಥಗಳು ನಡೆಯುತ್ತಿದ್ದವು. ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ದೊಡ್ಡದಾಗಿರುತ್ತಿತ್ತು. ಚರ್ಚಾಗೋಷ್ಠಿಗಳಲ್ಲಿ ಗೆದ್ದವರಿಗೆ ಬಿರುದುಗಳನ್ನು ನೀಡಲಾಗುತ್ತಿತ್ತು. ಶಿಕ್ಷಣದ ಕೊನೆಯಲ್ಲಿ ಪರೀಕ್ಷೆಗಳಿರುತ್ತಿದ್ದವು. ಈ ಪರೀಕ್ಷೆಗಳಲ್ಲಿ 'ಘಟ'(ಮಡಿಕೆ)ಗಳನ್ನು ಉಪಯೋಗಿಸುತ್ತಿದ್ದುದರಿಂದ ಇದಕ್ಕೆ 'ಘಟಿಕಾಸ್ಥಾನ' ಎಂದು ಹೆಸರು ಬಂದಿತು. ಆಧುನಿಕ ಕಾಲದಲ್ಲಿ ವಿಶ್ವವಿದ್ಯಾಲಯಗಳು ಪದವಿ ಪ್ರಧಾನ ಸಮಾರಂಭವನ್ನು 'ಘಟಿಕೋತ್ಸವ' ಎಂದು ಕರೆಯಲು ಈ 'ಘಟಕ' ಎಂಬ ಹೆಸರೇ ಮೂಲ ಪ್ರೇರಣೆ.[೧೨೧]

ಕುಷ್ಟಗಿ ಪರಿಸರದ ಶಾಸನಗಳಲ್ಲಿ ಘಟಿಕಾಸ್ಥಾನದ ಉಲ್ಲೇಖಗಳಿವೆ. ಹನುಮನಾಳದಲ್ಲಿರುವ ಕ್ರಿ.ಶ,೧೦೯೯ರ ಶಾಸನದಲ್ಲಿ ಘಟಿಕಾಸ್ಥಾನದ ಉಲ್ಲೇಖವಿದೆ. ಈ ಶಾಸನದಲ್ಲಿ

'ಶ್ರೀಮದಯ್ಯೂರ್ವ್ವಸ್ವಾಮಿಗಳು ಅಷ್ಟಾದಸ ಪಟ್ಟಣಮುಂ
ದ್ವಾತ್ರಿಂಸವೇಳಾವುರಮುಂ ಅರುವತ್ತನಾಲ್ಕು ಘಟಿಕಸ್ಥಾನಮುಂ
ಚವುಷಷ್ಟಿ ಯೋಗಪೀಠಮುಂ"[೧೨೨] ಎಂದಿದೆ. ಈ ನಾಡಿನಲ್ಲಿ ೬೪ ಘಟಿಕಾಸ್ಥಾನಗಳಿದ್ದವೆಂದು ಹೇಳುವಲ್ಲಿ ಆಧಾರ ಒದಗಿಸಿದೆ. ಆದರೆ ಅವುಗಳ ಯಾವವು? ಎಂಬುದರ ಬಗ್ಗೆ ಮಾಹಿತಿ ಇಲ್ಲ. ಘಟಿಕಾಸ್ಥಾನಗಳಲ್ಲಿರುವ ವಿದ್ವಾಂಸರ ಹೆಸರು ಚಳಗೇರಿಯಲ್ಲಿರುವ ಶಾಸನದಲ್ಲಿ ನಾರಾಯಣಘೈಸಾಸ, ಈಶ್ವರಿಘೈಸಾಸ, ಕೇಶವಘಳಿಸಾಸರ್ಗ್ಗೆ ಮತ್ತು ಮಂಚ್ಚಣಘಳಿಸಾಸರ್ಗ್ಗೆ[೧೨೩] ಎಂದಿದೆ.

ಈ. ದೇವಾಲಯ – ಮಠಗಳು

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ದೇವಾಲಯಗಳು ಅಂದಿನ ಜನತೆಯ ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳೆನಿಸಿವೆ. ದೇವಾಲಯವು ಭಾರತೀಯ ಸಂಸ್ಕೃತಿಯ ಸಂಪೂರ್ಣ ಅವಿಷ್ಕಾರ. ದೇವಾಲಯಗಳು ಸಾಂಸ್ಕೃತಿಕ ಮತ್ತು ಧಾರ್ಮಿಕತೆಯ ಪ್ರತೀಕಗಳೆನಿಸಿವೆ. ಪರಿಸ್ಥಿತಿಗನುಗುಣವಾಗಿ ಸಮಾಜಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾಗಿದೆ. ದೇವಾಲಯದ ನಿರ್ಮಾಣ ಉದಾತ್ತ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆಯಾಗಿತ್ತು. ದೇವಾಲಯಗಳಲ್ಲಿ ಅನ್ನ ಸತ್ರಾದಿಗಳನ್ನು ನಡೆಸುವುದು, ಬಡಬಗ್ಗರಿಗೆ ಸಹಾಯ ಮಾಡುವುದು, ಧರ್ಮದ ಮುಖ್ಯ ಕಾರ್ಯವಾಗಿತ್ತು. ಇಂಥ ಮಹದೋದ್ದೇಶವನ್ನು ಹೊಂದಿದ ದೇವಾಲಯಗಳು ಓದುವ ವಿದ್ಯಾರ್ಥಿಗಳ ವಿದ್ಯಾಭ್ಯಾಸದ

ಅನುಕೂಲ ಕಲ್ಪಿಸಿಕೊಟ್ಟಿದ್ದವು. ಸಮಾಜದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ದೇವಸ್ಥಾನವು ವಹಿಸಿದ ಪಾತ್ರ ವಿಶಿಷ್ಟವಾದುದು.

ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳು ಅಂದಿನ ಕಾಲದ ಶೈವ ಯತಿಗಳ ವಾಸಸ್ಥಾನಗಳಾಗಿದ್ದವು. ಇವರು ಮಹಾತಪಸ್ವಿಗಳಾಗಿದ್ದು ತಮ್ಮ ಆತ್ಮೋನ್ನತಿಗಾಗಿ ವಿದ್ಯಾದಾನ ವನ್ನು ಮಾಡುತ್ತಿದ್ದರು. ಹೀಗೆ ದೇವಾಲಯ ಕೇವಲ ಭಕ್ತರ ಕೇಂದ್ರವಾಗಿರದೆ, ವಿದ್ಯಾಕೇಂದ್ರವು ಆಯಿತು. ದೇವಾಲಯದ ಭಕ್ತರು ಬರೀ ದೇವರ ಸೇವೆಗೆ ಮಾತ್ರವಲ್ಲದೆ ಶಿಕ್ಷಣ ಕಾರ್ಯಗಳಿಗೂ ದತ್ತಿ ಬಿಡಲು ಆರಂಭಿಸಿದರು. ಒಟ್ಟಿನಲ್ಲಿ ದೇವಾಲಯದಲ್ಲಿ ನೆಲೆಸಿದ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ದೇವಾಲಯಗಳು ಶೈಕ್ಷಣಿಕ ರಂಗದ ಬೆಳವಣಿಗೆಗೆ ಒಂದು ತಳಹದಿಯನ್ನು ಹಾಕಿಕೊಟ್ಟಂತೆ, ಮಠಗಳು ವಿದ್ಯಾಭ್ಯಾಸದ ಔನ್ನತ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಪ್ರಾಚೀನ ಕಾಲದಿಂದಲೂ ಇಂತಹ ಮಠಗಳು ವಿಫುಲವಾಗಿ ಬೆಳೆದುದ್ದನ್ನು ಕಾಣುತ್ತೇವೆ. 'ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡುಬರುವ ಒಂದು ಪ್ರಮುಖವಾದ ಅಂಶವೆಂದರೆ ಊರೂರುಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ಅಗ್ರಹಾರ, ಮಠ, ಘಟಿಕಾಸ್ಥಾನಗಳು ನಿರ್ಮಾಣವಾಗಿ ವಿದ್ಯೆಯನ್ನು ಸಾಧ್ಯವಾದಷ್ಟು ವ್ಯಾಪಕವನ್ನಾಗಿ ಮಾಡುವ ಪ್ರಯತ್ನ ನಡೆಯಿತು'.[೧೭೪] ಒಟ್ಟಿನಲ್ಲಿ ಮಠಗಳು ವಿದ್ಯಾಕೇಂದ್ರಗಳಾಗಿದ್ದು ಜ್ಞಾನ ಪ್ರಸಾರದಲ್ಲಿ ನಿರತವಾಗಿದ್ದವು ಎಂದು ಹೇಳಿದರೆ ತಪ್ಪಾಗಲಾರದು. ಕುಷ್ಟಗಿ ಪರಿಸರದ ಶಾಸನಗಳಲ್ಲಿ ವಿದ್ಯಾಕೇಂದ್ರಗಳಾಗಿದ್ದ ದೇವಾಲಯಗಳ ಮತ್ತು ಮಠಗಳ ಬಗ್ಗೆ ಎಲ್ಲಿಯೂ ಉಲ್ಲೇಖಗಳಿಲ್ಲ.

೩.೮. ವರ್ತಕ ಸಂಘಗಳು

ಸಾಮಾನ್ಯವಾಗಿ ವೃತ್ತಿಗಳು ಹುಟ್ಟಿಬೆಳೆದ ತರುವಾಯವೇ ಸಂಘಗಳ ರಚನಾಕಾರ್ಯ ಆರಂಭಗೊಂಡಿದೆ ಎಂಬುದಕ್ಕೆ ಕನ್ನಡ ನಾಡಿನ ಶಾಸನಗಳಿಂದ ತಿಳಿದುಬರುತ್ತದೆ. ಒಂದು ವಿಶೇಷವೆಂದರೆ, ಕರ್ನಾಟಕದಲ್ಲಿ ಎಲ್ಲ ವೃತ್ತಿಗಳು ಸಂಘಗಳಾಗಿ ರೂಪಗೊಳ್ಳಲಿಲ್ಲ. ಇದರಲ್ಲಿ ಕೆಲವೊಂದು ಪ್ರಮುಖ ವೃತ್ತಿಮಾಡುವವರು ಮಾತ್ರ ಸಂಘಗಳನ್ನಾಗಿ ಸಂಯೋಜಿಸಿಕೊಂಡರು. ಹೀಗೆ ಸಮಾಜದ ವೃತ್ತಿಯವರು ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಸೇರಿಕೊಂಡು ಕಟ್ಟಿದ, ಹುಟ್ಟುಹಾಕಿದ ಶ್ರೇಣಿಗಳೇ ಸಂಘಗಳಾಗಿವೆ.

ಕನ್ನಡ ಸಾಹಿತ್ಯ ಹಾಗೂ ಶಾಸನಗಳಲ್ಲಿ 'ಸಂಘ' ಶಬ್ದ 'ಶ್ರೇಣಿ' ಎಂದೇ ಪ್ರಯೋಗಗೊಂಡಿದೆ. ಪ್ರಾಚೀನ ಮತ್ತು ಮಧ್ಯಕಾಲದ ಶಾಸನಗಳಲ್ಲಿ ಸಂಘಕ್ಕೆ ಪರ್ಯಾಯವಾಗಿ ಕೊತ್ತಳ,[೧೭೫] ಸೇಣಿ,[೧೭೬] ಸಂಖ್ಯೆ,[೧೭೭] ಸಮಯ,[೧೭೮] ಒಕ್ಕಲು,[೧೭೯] ಎಂದು ಬಳಕೆಯಾಗಿದೆ. ಸಂಘ ಸೂಚಿಯಾಗಿ ಸಂಖ್ಯೆಗಳನ್ನು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಲಾಗಿದೆ. ಸಂಘಸೂಚಿ ಪದಗಳ ಪೂರ್ವದಲ್ಲಿ ಹೆಚ್ಚಾಗಿ ವೃತ್ತಿಸೂಚಕ ಪದಗಳಿರುತ್ತವೆ. ತಂಬುಲಿಗ ಸಾಸಿರ್ವ್ವರು,[೧೮೦] ತೈಲಿಗರ್ಪೆ ವತ್ತೊಕ್ಕಲು,[೧೮೧] ಬೆಟ್ಟಿಗಗೊತ್ತಳಿ[೧೮೨] ಇತ್ಯಾದಿ. ಅಯ್ಯವೊಳೆ ಐನೂರ್ವರು ವರ್ತಕರ ಸಂಘ

ಮಾತ್ರ ವೃತ್ತಿಸೂಚಿಗೆ ಬದಲಾಗಿ ಗ್ರಾಮಸೂಚಿಯಾಗಿದೆ. ಇಂಥವುಗಳ ಉದಾಹರಣೆ ಕೇವಲ ಮಾತ್ರ.

ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ನಾನಾದೇಶಿ, ಮುಮ್ಮರಿದಂಡ, ಎಂಟುಹಿಟ್ಟು, ಐವತೊಕ್ಕಲು,[೧೮೩] ಅಯ್ಯವೊಳೆ,[೧೮೪] ತೆಲ್ಲಿಗರ ನಖರ, ಎಲೆಯ ಸಾಸಿರ್ವ್ವರು,[೧೮೫] ತಂಬುಲಿಗ, ಎಂಟುನಾಡು,[೧೮೬] ಮಾಲೆಗಾರ, ಆಯನೂರ್ವ್ವರು[೧೮೭] ಎಂಬ ವರ್ತಕ ಸಂಘಗಳ ಉಲ್ಲೇಖ ಗಳಿವೆ. ಅವುಗಳನ್ನು ಚರ್ಚಿಸಲಾಗಿದೆ.

ನಾನಾದೇಶಿ

ನಾನಾದೇಶಿ, ಉಭಯನಾನಾದೇಶಿ ವರ್ತಕ ಪ್ರಕಾರಗಳಾಗಿರದ್ದಿದ್ದರೂ ಇವು ವರ್ತಕರಿಗೆ ಸಂಬಂಧಿಸಿವೆ. ಇವರು ಹಲವು ಬಗೆಯ ಸರಕು ತೆಗೆದುಕೊಂಡು ಹಳ್ಳಿ ಪಟ್ಟಣಗಳಿಗೆ ಹೋಗಿ ವ್ಯಾಪಾರ ವಹಿವಾಟುಗಳನ್ನು ಮಾಡುತ್ತಿದ್ದರು ಮತ್ತು ಪ್ರಾದೇಶಿಕವಾಗಿ ಆಹಾರ ಪದಾರ್ಥಗಳನ್ನು ಖರೀದಿಸುತ್ತಿದ್ದರು. ಹೀಗೆ ವ್ಯಾಪಾರ ನಡೆಸುವ ಮೂಲಕ ನಾಡಿನಾದ್ಯಂತ ಸಂಚರಿಸುತ್ತಿದ್ದರು. ಈ ನಾನಾದೇಶಿಯ ಉಲ್ಲೇಖ ಕುಷ್ಟಗಿ ತಾಲ್ಲೂಕಿನ ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿದೆ.

ಅಯ್ಯಾವೊಳೆ

ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧ ವರ್ತಕ ಸಂಘವೆಂದರೆ ಅಯ್ಯಾವೊಳೆ ಐನೂರ್ವರದು. ಈ ಸಂಘದ ಕೇಂದ್ರ ಕಚೇರಿಯು ಬಹುಶ: ಕನ್ನಡ ನಾಡಿನ ಐಹೊಳೆಯಲ್ಲಿದುದ್ದರಿಂದ ಈ ಸಂಘಕ್ಕೆ ಅಯ್ಯಾವೊಳೆ ಐನೂರ್ವರು ಎಂದು ಹೆಸರು ಬಂದಿರಬೇಕು.[೧೮೮] ಕ್ರಿ.ಶ.೮ನೆಯ ಶತಮಾನದ ಈ ಹೊತ್ತಿಗೆ ಅಥವಾ ಅದರ ಮುಂದೆ ೫೦೦ ಜನ ಸದಸ್ಯರು ಈ ವರ್ತಕ ಸಂಘದಲ್ಲಿದ್ದರು. ಆ ಕಾರಣದಿಂದ ಈ ಸಂಘದಲ್ಲಿ ಎಷ್ಟೇ ಜನರಿದ್ದರು 'ಅಯ್ಯವೊಳೆ ಐನೂರ್ವರು' ಎಂದು ಕರೆಯುವುದು ರೂಢಿಯಾಗಿದೆ. ಈ ಸಂಘವು ಎಲ್ಲ ಜಾತಿಯ ವ್ಯಾಪಾರ ಸದಸ್ಯರನ್ನೊಳಗೊಂಡು ವ್ಯವಹಾರಗಳಲ್ಲಿ ಹೊಂದಿದ ಪ್ರಭುತ್ವದಿಂದ ಇದು ಪ್ರಖ್ಯಾತಿ ಹೊಂದಿತ್ತು. ಈ ಸಂಘದ ಉಲ್ಲೇಖವಿರುವ ಒಂದು ಶಾಸನ ನನ್ನ ಅಧ್ಯಯನ ವ್ಯಾಪ್ತಿಯಲ್ಲಿದೆ. ಪುರದ ಈಶ್ವರ ದೇವಸ್ಥಾನದಲ್ಲಿರುವ ಕ್ರಿ.ಶ.೧೨ನೆಯ ಶತಮಾನಕ್ಕೆ ಸೇರಬಹುದಾದ ತುಂಡು ಶಾಸನದಲ್ಲಿ[೧೮೯] 'ಅಯ್ಯಾವೊಳೆಯ' ಎಂದು ಉಲ್ಲೇಖವಿದೆ.

ತಂಬುಲಿಗ ಸಾಸಿರ್ವ್ವರು

ಎಲೆ ವ್ಯವಸಾಯ ಮಾಡುವುದರಲ್ಲಿ ಕರ್ನಾಟಕ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ಎಲೆ ಅರ್ಥದ 'ತಂಬುಲ'ದಿಂದ ಸಿದ್ಧಗೊಂಡ ನಾಮವೇ ತಂಬುಲಿಗ(ತಂಬುಲ+ಇಗ) ಗಾತ್ರಗಳಾಗಿ[೧೯೦] ಕಟ್ಟಿದ ತೋಟದ ಎಲೆಗಳನ್ನು ಒಂದು ಹಸುಬೆಯಲ್ಲಿ ತುಂಬಿ ತಲೆ ಮೇಲೆ ಹಾಗೂ ಎತ್ತುಗಳ ಗಾಡಿಯ ಮೇಲೆ ಸಾಗಿಸಿಕೊಂಡು ಪೇಟೆ ಪಟ್ಟಣಗಳಿಗೆ ಹೋಗಿ ಮಾರುವ ವರ್ತಕರಿವರು. ತಂಬುಲಿಗಸೆಟ್ಟಿ ಪದ ತಂಬುಲಿಗರು ಎಲೆ ಮಾರುವ ವರ್ತಕರೆಂಬುದನ್ನು ಸ್ಪಷ್ಟಪಡಿಸುತ್ತದೆ. ಗ್ರಾಮವಾಸಿಗಳಾದ ಇವರು ನಿರ್ಮಿಸಿಕೊಂಡ ವರ್ತಕಸಂಘ ತಂಬುಲಿಗ

ಸಾಸಿರ್ವ್ವರು. ಕೇವಲ ಸಾಸಿರ್ವ್ವರು ನಾಮದಿಂದಲೂ ಉಲ್ಲೇಖಗೊಂಡಿದೆ. ಮೂಲತ: ಸಾವಿರಜನ ತಂಬುಲಿಗರು ಯಾವುದೋ ಒಂದು ಕಾಲದಲ್ಲಿ ಕಟ್ಟಿದ ಈ ಸಂಘ ಆಮೇಲೆ ಸದಸ್ಯರ ಸಂಖ್ಯೆ ಕಡಿಮೆ ಇದ್ದರೂ ತಂಬುಲಿಗ ಸಾಸಿರ್ವ್ವರು ಎಂದೇ ಪ್ರಚಲಿತಗೊಂಡಿತು. ಈ ತಂಬುಲಿಗ ಸಾಸಿರ್ವ್ವರ ಉಲ್ಲೇಖ ಕುಷ್ಟಗಿ ತಾಲ್ಲೂಕಿನ ಹನುಮನಾಳ ಗ್ರಾಮದ ಚಾವಡಿಯಲ್ಲಿರುವ ಕ್ರಿ.ಶ.೧೦೯೯ರ ಶಾಸನದಲ್ಲಿ ಉಲ್ಲೇಖವಿದೆ.[೧೯೧]

ತೆಲ್ಲಿಗರೈವತ್ತೊಕ್ಕಲು

ಗ್ರಾಮ, ಪಟ್ಟಣಗಳಲ್ಲಿ ಎಣ್ಣೆ ಉತ್ಪಾದಿಸುವವರೇ ತೆಲ್ಲಿಗರು. ಆಧುನಿಕವಾಗಿ ಗಾಣಿಗರು ಎಂದು ಕರೆಯುವ ವಾಡಿಕೆ. ನಿತ್ಯ ಉಪಯೋಗವಾಗುವ ಎಣ್ಣೆಯ ಅವಶ್ಯಕತೆ ತುಂಬಾ ಇದ್ದ ಕಾರಣ ಆ ಬೇಡಿಕೆಯನ್ನು ಪೂರೈಸುವಲ್ಲಿ ನಿರತರಾದ ತೆಲ್ಲಿಗರು ಕಟ್ಟಿಕೊಂಡ ಸಂಘ 'ತೆಲ್ಲಿಗರೈವತ್ತೊಕ್ಕಲು'. ಧರ್ಮವೊಳಲಿನಲ್ಲಿಯೂ ಗಾಣವನ್ನಿಟ್ಟುಕೊಂಡು ಎಣ್ಣೆ ಉತ್ಪಾದಿಸುವವರ ಸಂಘವನ್ನು 'ತೆಲ್ಲಿಗರೈವತ್ತೊಕ್ಕಲು' ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಕುಷ್ಟಗಿ ತಾಲ್ಲೂಕಿನ ಚಳಗೇರಿ ಗ್ರಾಮದ ಲಕ್ಷ್ಮೀ ದೇವಾಲಯದ ಎದುರು ಇರುವ ಕ್ರಿ.ಶ.೧೧೭೨ರ ಶಾಸನದಲ್ಲಿ[೧೯೨] 'ತೆಲ್ಲಿಗರೈವತ್ತೊಕ್ಕಲು' ಎಂದು ಉಲ್ಲೇಖವಿರುವುದು ಕಂಡುಬರುತ್ತದೆ.

ಮಾಲೆಗಾರ ನಾಲ್ವತ್ತೊಕ್ಕಲು

ಸಂಸ್ಕೃತದ ಮಾಲಾಕಾರ ಶಬ್ದದ ಕನ್ನಡ ರೂಪ ಮಾಲೆಗಾರ. ಮಾಲೆಗಾರರು ದೇವರ ತೋಟ ಇಲ್ಲವೆ, ಸ್ವಂತ ಹೂವಿನಗಿಡಗಳನ್ನು ಬೆಳೆಸಿ ಬಾಸಿಂಗ, ದಂಡೆ, ಮಾಲೆಗಳನ್ನು ತಯಾರಿಸಿ ಸಂತೆಪೇಟೆಗಳಿಗೆ ಹೋಗಿ ಮಾರುತ್ತಿದ್ದರು. ಹೂಗಾರ ವೃತ್ತಿಯ ಇವರೇ ಮಾಲೆಗಾರರು ಎಂದು ಆಮೇಲೆ ಜಾತಿಸೂಚಕ ಹೂಗಾರರೆನಿಸಿಕೊಂಡರು. ಈ ಮಾಲೆಗಾರರು ಕಟ್ಟಿಕೊಂಡ ಸಂಘ 'ಮಾಲೆಗಾರ ನಾಲ್ವತ್ತೊಕ್ಕಲು'. ಆರಂಭದಲ್ಲಿ ನಾಲ್ವತ್ತು ಜನ ಸದಸ್ಯರಿದ್ದ ಈ ಸಂಘದ ಸಂಖ್ಯೆ ಕೆಲವು ಗ್ರಾಮಗಳಲ್ಲಿ ಹೆಚ್ಚು ಕಡಿಮೆಯಾಗುತ್ತಿತ್ತು. ಕುಷ್ಟಗಿ ತಾಲ್ಲೂಕಿನ ಅಂಟೂರತಾಣ ಗ್ರಾಮದಲ್ಲಿರುವ ಕ್ರಿ.ಶ.೧೦೮೨ರ ಶಾಸನದಲ್ಲಿ[೧೯೩] ಈ ಮಾಲೆಗಾರರ ಉಲ್ಲೇಖವಿದೆ.

ಮುಮ್ಮರಿದಂಡ

ಇವರಿಗೆ ವ್ಯಾಪಾರಿ ಸೈನ್ಯವೆಂದು ಶಾಸನದಲ್ಲಿ ಹೇಳಲಾಗಿದೆ. ಇವರು ಸಂತೆ-ಪೇಟೆಗಳಿಗೆ ಹೋಗಿ ಮಾರಾಟ ಮಾಡುವ ವರ್ತಕರಾಗಿದ್ದರು. ಈ ವರ್ತಕ ಸಂಘದ ಕುರಿತು ಕುಷ್ಟಗಿ ತಾಲ್ಲೂಕಿನ ಅಂಟೂರತಾಣದ ಜಂಬೂನಾಥೇಶ್ವರ ದೇವಸ್ಥಾನದಲ್ಲಿರುವ ಕ್ರಿ.ಶ.೧೦೮೨ರ ಶಾಸನದಲ್ಲಿ ಉಲ್ಲೇಖವಿದೆ.[೧೯೪] ಹಾಗೆಯೇ ಪುರದ ಈಶ್ವರ ದೇವಸ್ಥಾನದ ಬಳಿಯ ಅಗಸಿಗೆ ಸೇರಿರುವ ಕಲ್ಲಿನ ಮೇಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೇಖವಾಗಿದೆ.[೧೯೫] ಈ ಶಾಸನದಲ್ಲಿ ಮುಂಮರಿದಂಡಗಳು ಮಹಾನಾಡಾಗಿ ದೇವಸಭೆ, ಬ್ರಹ್ಮಸಭೆ, ರಾಜಸಭೆ ಸನ್ನಿಧಾನದಲ್ಲಿ ಸಭೆ ಸೇರಿದ್ದರ ಉಲ್ಲೇಖವಿದೆ.

ಎಂಟುಹಿಟ್ಟು

'ಹನ್ನೆರೆಡು ಹಿಟ್ಟು' ಎಂಟು ಹಿಟ್ಟನಂತಹ ಒಂದು ಪ್ರಕಾರವಿದೆ. ಸಂಸ್ಥೆಯ ಹೆಸರಿನ ಮೇಲಿಂದ ಅದರಲ್ಲಿ ಹನ್ನೆರೆಡು ಜನ ಸದಸ್ಯರಿರುತ್ತಿದ್ದರು. ಈ ಎಲ್ಲ ಹನ್ನೆರೆಡು ಸದಸ್ಯರ ಹೆಸರುಗಳು ಏಕಸ್ಥಳದಲ್ಲಿ ಇಲ್ಲವೆ ಒಂದೊಂದೆಯಾಗಿ ಶಾಸನಗಳಲ್ಲಿ ಕಂಡುಬರುವುದಿಲ್ಲ. ಎಂಟುಹಿಟ್ಟಿನ ಸಂಸ್ಥೆಗಳಲ್ಲಿ ಗ್ರಾಮದ ಇನ್ನು ನಾಲ್ಕು ಕಸಬುಗಾರರನ್ನು ಸೇರಿಸಿಕೊಂಡು ಹನ್ನೆರಡು ಹಿಟ್ಟು ಆಗಿರಬಹುದು ಎಂದು ಡಾ. ಆರ್.ಎನ್.ಗುರವ ಅವರು ಅಭಿಪ್ರಾಯಪಡುತ್ತಾರೆ.[೧೯೬] ಕುಷ್ಟಗಿ ತಾಲ್ಲೂಕಿನ ಪುರ ಗ್ರಾಮದ ಈಶ್ವರ ದೇವಸ್ಥಾನದ ಬಳಿಯ ಅಗಸಿಗೆ ಸೇರಿರುವ ಕಲ್ಲಿನ ಮೇಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ ಈ 'ಎಂಟುಹಿಟ್ಟು' ಎಂಬುದು ಉಲ್ಲೇಖವಾಗಿದೆ.[೧೯೭]

ನಖರರು

ಇವರು ಕನ್ನಡ ನಾಡಿನ ಪ್ರಾಚೀನ ವರ್ತಕರು. ಸಂತೆ-ಪಟ್ಟಣಗಳಲ್ಲಿ ಸ್ಥಿರವಾದ ಅಂಗಡಿ ದಿನಸಿ ವ್ಯಾಪಾರಿಗಳಾಗಿದ್ದರು. ಇವರ ವಾಸ ಪಟ್ಟಣಗಳಲ್ಲಿ ಮಾತ್ರ. ಇವರು ಒಂದು ಬಗೆಯ ಪಟ್ಟಣ ಸ್ವಾಮಿಯವರಿದ್ದಂತೆ. ಪೇಟೆಗಳಿಗೆ ಒಂದು ವಿವಿಧ ಸರಕುಗಳನ್ನು ಬಯಲು ಅಂಗಡಿ ಹಾಗೂ ಮಾರಾಟ ಮಳಿಗೆಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಇವರನ್ನು 'ನಖರರು' ಎಂದು ಶಾಸನಗಳು ಉಲ್ಲೇಖಿಸುತ್ತವೆ. ಕುಷ್ಟಗಿ ತಾಲ್ಲೂಕಿನ ಚಳಗೇರಿ ಗ್ರಾಮದ ಲಕ್ಷ್ಮೀ ದೇವಾಲಯದ ಎದುರು ಇರುವ ಕ್ರಿ.ಶ.೧೧೭೨ರ ಶಾಸನದಲ್ಲಿ ನಖರರ ಉಲ್ಲೇಖವಿದೆ.[೧೯೮]

ಸೆಟ್ಟಿಗಳು

ಪ್ರಾಚೀನ ಕಾಲದ ಶಾಸನಗಳಲ್ಲಿ ಸೆಟ್ಟಿಗಳ ಬಗ್ಗೆ ಸಾಕಷ್ಟು ಉಲ್ಲೇಖಗಳು ದೊರಕುತ್ತವೆ. ಸೆಟ್ಟಿಯರಲ್ಲಿ ವೈದಿಕ, ಜೈನ, ಬೌದ್ಧ ವರ್ತಕರಿದ್ದರೆಂದು ಶಾಸನಗಳಿಂದ ತಿಳಿದುಬರುತ್ತವೆ. ಇವರನ್ನು ಹೊರತು ಪಡಿಸಿದ ಸೆಟ್ಟಿಗಳು ಇದ್ದರು ಎಂಬುದಕ್ಕೆ ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಉಕ್ತಗೊಂಡಿವೆ. ಈ ಎಲ್ಲ ಸೆಟ್ಟಿಯರು ಯಾವ ಧರ್ಮದವರೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಬಾರದು. ತಾಲ್ಲೂಕಿನ ಶಾಸನಗಳಲ್ಲಿ 'ಮತ್ತಂ ಎಲೆ ಏರುವ ಸೆಟ್ಟಿಯರು ಊರದಾ ಹೇರುಂಗೆ ಒಂದು ವೀಸಮಂ'[೧೯೯] ಎಂದು ಉಲ್ಲೇಖವಾಗಿದೆ. ಷಟ್ಟರು,[೨೦೦] ಬಿಟ್ಟಿಸೆಟ್ಟಿ, ದಾಮಿಸೆಟ್ಟಿ,[೨೦೧] ವೀರಬಣಂಜುಧರ್ಮಕ್ಕೆ ಸೇರಿದ ಮಲೆಯರ ಸಿಂಗಿಸೆಟ್ಟಿ, ಕೇತಿಸೆಟ್ಟಿ, ರೇಯವಗೇತಿಸೆಟ್ಟಿ, ಮಂಗಲದಕಲೆಯ ಬಾಚಿಸೆಟ್ಟಿ, ಬಾದಾಮಿಯ ಬಾತಿದೇವಸೆಟ್ಟಿ, ಹಾವರಿಯ ಹೆಚಿಸೆಟ್ಟಿ, ತಿಳಿವಳ್ಳಿಯ ಕಲಿಯಮ್ಮಸೆಟ್ಟಿ, ಮೊತ್ತಕಾರ ಸಿರಿಯಸೆಟ್ಟಿ, ಕಾರಿಯ ಕೇತಿಸೆಟ್ಟಿ, ಕೆರುವೂರ ಎಡವಂಚಟ್ಟಿಸೆಟ್ಟಿ, ಸಿಗ್ಗಾವೆಯ ಭರವೆಸೆಟ್ಟಿ, ನಿಟ್ಟಸಿಂಗಿಯ ಬಬ್ಬುಳಸಿರಿಸೆಟ್ಟಿ, ಹೊರಿಸೆಟ್ಟಿ, ಹುದ್ದಮನ ಸೋವಿಸೆಟ್ಟಿ, ಗಾಂಚಿಪೂರ ಆರಿಯಪಲಸೆಟ್ಟಿ, ರಾಜಪೂರ ನಾಗುಲಸೆಟ್ಟಿ, ಚಾಮುಣ್ಡಯ್ಯಸೆಟ್ಟಿ[೨೦೨] ಈ ಎಲ್ಲಾ ಸೆಟ್ಟಿಯರು ಮತ್ತು ಕಿಸುಕಾಡು ಎಪ್ಪತ್ತರ ಆಲುಂಗೆರೆಯ ಸಿಂಗಗಾಮುಂಡನು ತಂಬುಲಿಗ ಸಾಸಿರ್ವ್ವರು ಕೂಡಿ ಸಿಂಗಗಾವುಂಡನನ್ನು ಮೆಚ್ಚಿ ದಾನ ನೀಡಿದ್ದರ ಉಲ್ಲೇಖವಿದೆ. ಗೋಣಮಾದೇವಿಯ ಸೋದರಳಿಯ ಮಾರಸೆಟ್ಟಿಯರು, ಪದುಮಸೆಟ್ಟಿ, ಮಾಯಿಸೆಟ್ಟಿ, ಕಟಕದ ಗಾತ್ರೃಗಸೋರಹ ಜಕ್ಕಿಸೆಟ್ಟಿ ಸೆಟ್ಟಿಯಣ, ಬಾದಾವಿಯ ಬಲದೇವ,

ಕೋಟೆಯಲ್ಲಮ ಕೊಡೆಯ ಬಮ್ಮಿಸೆಟ್ಟಿ, ಹೆಟ್ಟಿಯ ಮಾಳಿಸೆಟ್ಟಿ, ಕೋಣಂಗೇರಿಯೆಬ್ಬಿಸೆಟ್ಟಿ, ರೇವಗೇತಿಸೆಟ್ಟಿ, ಸಿಂಗೆಯಗೇತಿಸೆಟ್ಟಿ, ಕರಿಯ ಕೇತಿಸೆಟ್ಟಿ, ಮಣ್ಬುರ ದಾಸಿಸೆಟ್ಟಿ, ಹಗಲಕಲೆಯ ಬಾಚಿಸೆಟ್ಟಿ, ಮೇಗಣಗೇರೆಯ ಚಂಡಿಸೆಟ್ಟಿ, ಹರಿಯಪಸೆಟ್ಟಿ, ಚೌಳಯ್ಯವರ್ಯ್ಮಾಸೆಟ್ಟಿ, ಸೋವಿಸೆಟ್ಟಿ ಹಾವರಿಯ ಸೇನಬೋವಯೀಸರಸೆಟ್ಟಿ,[೨೦೩] ಮಾರಸೆಟ್ಟಿಮಯ್ಯ, ಪದುಮಿಸೆಟ್ಟಿ ಮತ್ತು ಮಾಯಿಸೆಟ್ಟಿ[೨೦೪] ಈ ಎಲ್ಲ ಸೆಟ್ಟಿಗಳ ಹೆಸರು ನನ್ನ ಅಧ್ಯಯನ ವ್ಯಾಪ್ತಿಯ ಶಾಸನಗಳಲ್ಲಿ ಉಲ್ಲೀಖಿತವಾಗಿವೆ.

ಸೆಟ್ಟಿಯರು ವಿವಿಧ ಧರ್ಮಿಯರಾಗಿದ್ದಾರೆ. ಸೆಟ್ಟಿಯವರಲ್ಲಿಯೇ ವಂಶಪಾರಂಪರ್ಯವಾಗಿ ನಡೆದು ಬಂದ ಮಹಾಪ್ರಭು, ನಾಡ್ಪ್ರಭುಮನೆತನಗಳಿದ್ದವು. ಇನ್ನೂ ಕೆಲವರು ದಂಡನಾಯಕರು, ಸರ್ವಾಧಿಕಾರಿ, ಸಾಮಂತರಾಗಿ ರಾಜ್ಯಭಾರ ನಿರ್ವಹಿಸಿದರು. ಒಟ್ಟಿನಲ್ಲಿ ಮತ, ಮನೆತನದ ಅಧಿಕಾರಿಗಳೆಂಬ ವೈವಿಧ್ಯಮಯ ಹಾಗೂ ವರ್ಣಮಯ ಬದುಕು ನಡೆಸಿ ಸೆಟ್ಟಿಯರು ವ್ಯಾಪಾರ ರಂಗದ ಸಮರ್ಥ ವಾರಸುದಾರಿಕೆವಹಿಸಿದ್ದರು.

೩.೯. ಅಳತೆ ಮತ್ತು ಮಾಪನಗಳು

ಪುರಾತನ ಕಾಲದಿಂದ ಮಾನವನು ತಮ್ಮ ದಿನನಿತ್ಯದ ವ್ಯವಹಾರಕ್ಕಾಗಿ ತಮ್ಮದೇ ಆದ ವಿಧಾನಗಳನ್ನು ಅನುಸರಿಸಿ ಅಳತೆ ಮತ್ತು ಮಾಪನಗಳನ್ನು ಮಾಡಿಕೊಂಡಿದ್ದರು. ದೇಶದ ಆಯಾ ಭಾಗಗಳಿಗೆ ಆಯಾ ಊರುಗಳಿಗೆ ಅಳತೆ ಮತ್ತು ಮಾಪನಗಳನ್ನು ರಾಜನು ನಿರ್ಧರಿಸುತ್ತಿದ್ದನು. ನಂತರ ಮೂಲ ಮಾಪನದ ಅಳತೆಯನ್ನು ಆಯಾ ಭಾಗದವರು ಅಥವಾ ಆಡಳಿತ ವ್ಯವಸ್ಥೆ ಯವರು ನಿಗದಿ ಮಾಡುತ್ತಿದ್ದರು. ಈ ಮಾಪನಗಳು ಎಲ್ಲಾ ಕಾಲದಲ್ಲಿ ಒಂದೇ ಆಗಿರಲಿಲ್ಲ. ಹೊಲಗಳ ಅಳತೆಗಾಗಿ ಬಳಸುತ್ತಿದ್ದ ಮಾಪನವು ಕೋಲು ಆಗಿರುತ್ತಿತ್ತು. ಈ ಅಳತೆಕೋಲುಗಳ ಸಹಾಯದಿಂದ ಹೊಲಗಳನ್ನು 'ಮತ್ತರು' ಮತ್ತು 'ಕಮ್'(ಕಂಬ)ಗಳೆಂಬುದಾಗಿ ಅಳೆಯುತ್ತಿದ್ದರು. ಕಮ್ಮ ಕನಿಷ್ಠ ಮಾಪನ, ಮತ್ತರು ಗರಿಷ್ಠ ಮಾಪನವಾಗಿರುತ್ತಿತ್ತು.

ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ದಾನ ಶಾಸನಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಒಂದಲ್ಲ ಒಂದು ರೀತಿಯ ಅಳತೆಯ ಮಾಪನಗಳ ಉಲ್ಲೇಖಗಳು ಕಂಡುಬರುತ್ತವೆ. ಪುರದ ಸೋಮಶೇಖರಯ್ಯನವರ ಹೊಲದಲ್ಲಿರುವ ಕ್ರಿ.ಶ.೧೦೧೮ರ ಶಾಸನದಲ್ಲಿ[೨೦೫] 'ಅಗ್ರಹಾರ ಬೈಳೆನೆಗೆಯೂರಿನ ಮುಖ್ಯಸ್ಥಾನದ ಕೊಣ್ಡಯವಾರಿ ಅಯ್ಯಣಯ್ಯನಿಗೆ ೫ ಮತ್ತರು ಗದ್ದೆ, ೧೨ ಜನ ಬ್ರಾಹ್ಮಣರಿಗೆ ಎರಡು ಹಳ್ಳದ ನಡುವೆ ಬಿಟ್ಟ ಬ್ರಹ್ಮಪುರಿಯ ಮತ್ತರು ೧೫೦, ಗದ್ದೆ ಮತ್ತರು ೩, ಕಲಿದೇವರಿಗೆ ೪೮ ಮತ್ತರು, ಬ್ರಹ್ಮದೇವರಿಗೆ ೧೨ ಮತ್ತರು, ಪಿರಿಯಕೆರೆಯ ೧೨ ಮತ್ತರು'ಗಳ ಉಲ್ಲೇಖಗಳಿವೆ.

ಗೋತಗಿಯ ನಾಗಕನ್ನಿಕಾ ದೇವಾಲಯದಲ್ಲಿರುವ ಕ್ರಿ.ಶ.೧೦೨೪ರ ಶಾಸನದಲ್ಲಿ[೨೦೬] 'ಗೋವನ್ತಿಗೆಯ ಸ್ವಯಂಭು ಕಲಿದೇವಸ್ವಾಮಿಗೆ ಕರಿಯ ನೆಲ ೫೪ ಮತ್ತರು ೪೫೦ ಕಮ್ಮ ಭೂಮಿಯನ್ನು ೪೫೦ ಕಮ್ಮ ತೋಂಟವನ್ನು ಒಟ್ಟು ೫೫ ಮತ್ತರು' ಎಂಬ ಉಲ್ಲೇಖವಿದೆ. ಇದೇ ಸ್ಥಳದಲ್ಲಿರುವ ಕ್ರಿ.ಶ.೧೦೪೫ರ ಇನ್ನೊಂದು ಶಾಸನದಲ್ಲಿ[೨೦೭] 'ಗೋವನ್ತಿಗೆಯಲ್ಲಿ ಚಾಮುಣ್ಡ

ಭಟ್ಟೋಪಾಧ್ಯಾಯನಿಗೆ ೩೦೦ ಮತ್ತರು ಕರಿಯ ಭೂಮಿ'ಯ ಉಲ್ಲೇಖ ಕಂಡುಬರುತ್ತದೆ. ಅಂಟೂರಠಾಣದ ಜಂಬೂನಾಥೇಶ್ವರ ದೇವಾಲಯದಲ್ಲಿರುವ ಕ್ರಿ.ಶ,೧೦೮೨ರ ಶಾಸನದಲ್ಲಿ[೨೦೮] 'ಮಾನ ೧, ಪಣ ೨ ಭತ್ತ ೧' ಎಂಬ ಉಲ್ಲೇಖಗಳಿವೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೯೫ರ ಇನ್ನೊಂದು ಶಾಸನದಲ್ಲಿ[೨೦೯] '೯ ಪಣಂ' ಎಂದು ಉಲ್ಲೇಖವಿದೆ. ಹೆಸರೂರಿನಲ್ಲಿರುವ ಕ್ರಿ.ಶ.೧೧೦೪ರ ಶಾಸನದಲ್ಲಿ[೨೧೦] 'ಆದಿತ್ಯದೇವರಿಗೆ ನಾಲ್ಕು ಮತ್ತರನ್ನು ದಾನ ನೀಡಿದ ವಿಷಯ ತಿಳಿಯುತ್ತದೆ. ಮಂಕಲ್ಕೇರಿಯ ಶಾಲೆಯ ಹತ್ತಿರದ ಕ್ರಿ.ಶ.೧೧೨೩ರ ಶಾಸನದಲ್ಲಿ[೨೧೧] 'ಮಲ್ಲೇಶ್ವರ ದೇವರಿಗೆ ಮೂರು ಮತ್ತರು ಮತ್ತು ಒಂದು ಮತ್ತರು ಕೆಂಪು ಮಣ್ಣಿನ ಹೊಲ' ಎಂದು ಉಲ್ಲೇಖವಿದೆ. ಚಳಗೇರಿ ಗ್ರಾಮದ ಲಕ್ಷ್ಮೀ ದೇವಾಲಯದ ಎದುರಿನಲ್ಲಿರುವ ಕ್ರಿ.ಶ.೧೧೭೨ರ ಶಾಸನದಲ್ಲಿ[೨೧೨] 'ಮತ್ತ ೨, ಮತ್ತರು ೪, ಗದ್ದೆ ಕೆಮ್ಮ ೫೦೦ ಮತ್ತಂ ಒಂದು(ಹೂದೋಟ) ಕೆಯಿಮತ್ತರು, ಹರಳುಮತ್ತರು' ಎಂಬ ಉಲ್ಲೇಖಗಳಿವೆ. ಪುರದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೨೧೩] 'ಬ್ರಹ್ಮಪುರಿಯ ಬ್ರಾಹ್ಮಣರ ವೇತನಕ್ಕೆ ಹಿರಿಯ ಕೋಲಲ್ಲಿ ಒಂದು ಮತ್ತರು, ದೇವರ ದತ್ತಿಯಾಗಿ ಕಲ್ಲುದೇವರಪುರದ ಕೇರಿಯಲ್ಲಿ ಇಪ್ಪತ್ತೆರೆಡು ಕೈ ಆರು ಕೈ ಅಗಲದ ಅಳತೆಯ ಇಪ್ಪತ್ತೈದು ಮನೆಗಳು, ನಂತರ ಅರಮನೆಯ ಸೇನುಭೋವ ಬಸವರಸನಿಗೆ ಹಿರಿಯ ಕೋಲಲ್ಲಿ ಒಂದು ಮತ್ತರು, ಬಡಗಿ ಕಾಳೋಜನಿಗೆ ಒಂದು ಮತ್ತರು, ಕಲ್ಲೋಜನಿಗೆ ಅರೆಮತ್ತರು, ದೇವರ ಅರಮನೆಯ ಸ್ಥಾನದವರಿಗೆ ಎರೆಯಲ್ಲಿ ೫ ಮತ್ತರು ಭೂಮಿ' ಎಂದು ಉಲ್ಲೇಖಗಳಿವೆ.

ಈ ರೀತಿಯಾಗಿ ಕುಷ್ಟಗಿ ತಾಲ್ಲೂಕಿನ ಪ್ರಾಚೀನ ಕಾಲದಿಂದ ಮಾನವರು ತಮಗೆ ಅನುಕೂಲವಾದ ರೀತಿಯಲ್ಲಿ ಅಳತೆ ಮಾಪನಗಳನ್ನು ರೂಢಿಯಲ್ಲಿಟ್ಟುಕೊಂಡಿದ್ದರೆಂದು ಶಾಸನ ಗಳಿಂದ ವ್ಯಕ್ತವಾಗುತ್ತದೆ.

೩.೧೦. ಸ್ಥಳನಾಮಗಳು ಮತ್ತು ವೃತ್ತಿಸೂಚಕ ನಾಮಗಳು

ಮನುಷ್ಯ ಸಮಾಜಜೀವಿ. ಆತನಿಗೆ ವ್ಯಕ್ತಿ, ವಸ್ತುಗಳ ಸಂಪರ್ಕ ಅನಿವಾರ್ಯ. ಅವುಗಳನ್ನು ಗುರುತಿಸಿಕೊಳ್ಳಬೇಕು. ಹೀಗೆ ಗುರುತಿಸಿಕೊಳ್ಳಲು ಮುಖ್ಯ ಸಾಧನವಾದುದು ನಾಮ ಅಥವಾ ಹೆಸರು. ನಾಮಾಂಕಿತವಿಲ್ಲದ ವ್ಯಕ್ತಿಯಿಲ್ಲ, ದೇಶ ವಿದೇಶವಿಲ್ಲ, ಪಟ್ಟಣವಿಲ್ಲ, ಊರಿಲ್ಲ, ನದಿ, ಪರ್ವತಗಳಿಗೂ ನಾಮಗಳಿವೆ. 'ನಾಮೋಲೇಖಸ್ತು ವ್ಯವಹಾರಹೇತು' ಅಂದರೆ, ಹೆಸರಿನ ಉಲ್ಲೇಖ ಎಲ್ಲ ವ್ಯವಹಾಗಳಿಗೂ ಮೂಲ ಕಾರಣವೆಂದು ಬೃಹಸ್ಪತಿ ಹೇಳುತ್ತಾನೆ. ಪ್ರಾಚೀನ ನಾಮಗಳ ಪಟ್ಟಿ, ರಚನೆಯ ಬಗ್ಗೆ ಮಾಹಿತಿ ಒದಗಿಸುವ ಮುಖ್ಯ ಗಣಿಗಳೆಂದರೆ ಶಾಸನಗಳು.[೨೧೪]

ಸ್ಥಳಗಳ ಹೆಸರುಗಳೇ ಸ್ಥಳನಾಮಗಳು, ವ್ಯಕ್ತಿಗಳ ಹೆಸರುಗಳೇ ವ್ಯಕ್ತಿನಾಮಗಳು. ಸ್ಥಳನಾಮ ಮತ್ತು ವ್ಯಕ್ತಿನಾಮಗಳಲ್ಲಿ ಸ್ಥಳನಾಮಗಳೇ ಅತಿ ಪುರಾತನವೆನಿಸುತ್ತವೆ. 'ಐತಿಹಾಸಿಕ ದಾಖಲೆಗಳು ಮೌನವಹಿಸಿದಾಗ ಸ್ಥಳನಾಮಗಳು ಮಾತನಾಡುತ್ತವೆ' ಎಂಬ ಪ್ರಸಿದ್ಧೋಕ್ತಿ ಇದೆ. ಕಾಲಗರ್ಭದಲ್ಲಿ ಅಡಗಿಹೋದ ಎಷ್ಟೋ ಅಪೂರ್ವ ಸಂಗತಿಗಳನ್ನು ನಿರ್ಣಯಿಸುವಲ್ಲಿ ಸಾಂಸ್ಕೃತಿಕ ವೈಶಿಷ್ಟ್ಯತೆ ಗಳನ್ನು ಗ್ರಹಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.[೨೧೫]

[illegible]

[illegible]

ಸ್ಥಳನಾಮಗಳು

ಸ್ಥಳನಾಮಗಳ ಹುಟ್ಟು ಇಂದು ನಿನ್ನೆಯದಲ್ಲ. ಮಾನವನಷ್ಟೆ ಹಳೆಯವು ಹಾಗೂ ಪುರಾತನ ಜೀವನ ಸೃಷ್ಟಿಯ ಪಳೆಯುಳಿಕೆಗಳು. ಪ್ರಾಕೃತಿಕ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಮತ್ತು ಜಾನಪದೀಯ ಅಂಶಗಳ ಮೂಲಕ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸ್ಥಳನಾಮಗಳು ಹುಟ್ಟಿಕೊಂಡವು. ಈ ಹಿನ್ನೆಲೆಯನ್ನು ಆಧರಿಸಿ ಜನ್ಮ ತಾಳಿದ ವಾಸ್ತವ್ಯಗಳೇ ಆದ ಊರು, ಕೇರಿ, ಬೀದಿ, ಕೆರೆ, ಕಟ್ಟೆ, ಕೋಟೆ, ಕೊತ್ತಲ, ನದಿ, ತಟಾಕ, ಬಾವಿ, ರಸ್ತೆ, ವೃತ್ತ, ಸಂದ್ರ, ಸಮುದ್ರ, ಸಾಗರ ಗ್ರಾಮ ಮತ್ತು ಇತ್ಯಾದಿಗಳ ಸ್ಥಳನಾಮದ ಅಂತ್ಯ ಪ್ರತ್ಯಯಗಳಾಗಿ ಶಾಶ್ವತತೆಯ ನೆಲೆಯಲ್ಲಿ ಅವು ಚಲಾವಣೆಗೆ ಬಂದವು.

ಕುಷ್ಟಗಿ ಸ್ಥಳನಾಮ ನಿಷ್ಪತ್ತಿ

ಅಧ್ಯಯನಕ್ಕೆ ಅಳವಡಿಸಿಕೊಂಡಿರುವ ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಸುಮಾರು ೩೦ಕ್ಕೂ ಹೆಚ್ಚಿನ ಸ್ಥಳನಾಮಗಳ ಉಲ್ಲೇಖಗಳು ಕಂಡುಬರುತ್ತವೆ. ಇವುಗಳಲ್ಲಿ ಚಿಕ್ಕ ಪ್ರಮಾಣದ ಬದಲಾವಣೆ ಅಥವಾ ದೊಡ್ಡ ಪ್ರಮಾಣದ ಬದಲಾವಣೆಗೊಂಡಿರಬಹುದು. ತಾಲ್ಲೂಕಿನ ಸ್ಥಳನಾಮಗಳನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ವಿಂಗಡಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಮೊದಲು ತಾಲ್ಲೂಕು ಕೇಂದ್ರವಾದ ಕುಷ್ಟಗಿ ಸ್ಥಳನಾಮ ಕುರಿತು ಇಲ್ಲಿ ಚರ್ಚಿಸುವುದು ಉಚಿತವೆನಿಸುತ್ತದೆ.

ಇತಿಹಾಸ ಸಂಶೋಧಕರಾದ ನಾ.ಶ್ರೀ ರಾಜಪುರೋಹಿತರ ಹೇಳಿಕೆಯಂತೆ ಈ ಗ್ರಾಮದಲ್ಲಿದ್ದ ವ್ಯಾಸರಾಚಾರ್ಯ ಕೃಷ್ಣಾಚಾರ್ಯ ಕಟ್ಟಿ ಇವರ ಮನೆಯಲ್ಲಿರುವ ಕೈಬರೆಹದ ಭಾಗವತಪುರಾಣದ ತೃತೀಯಸ್ಕಂದದ ಕೊನೆಯಲ್ಲಿ ಹೀಗೆ ಬರೆದಿದೆ. "ಶಕವರ್ಷದ ೧೭೮೧ನೆಯ ಸಿದ್ಧಾರ್ಥ ಸಂವತ್ಸರದ ಮಾಘಮಾಸದ ತೃತೀಯಾ ತಿಥಿಯಲ್ಲಿ ಕೃಷ್ಣಗಿರಿ ಗ್ರಾಮಸ್ಥ ಕೃಷ್ಣಾಚಾರ್ಯರು ಬರೆದದ್ದು" ಎಂದು ಇದೆ. ಈ ಗ್ರಾಮದ ಮಾರುತಿದೇವರಿಗೆ 'ಕೃಷ್ಣಗಿರಿರಾಯ' ಎಂಬ ಬಿರುದೂ ಇದೆ. ಈ ಕೃಷ್ಣಗಿರಿ ಎಂಬ ನಾಮವು ಕಾಲಾಂತರದಿಂದ ಕುಷ್ಟಗಿ ಎಂದು ಅಪಭ್ರಂಶವಾಗಿದೆ. ಕೃಷ್ಣಗಿರಿ > ಕುಷ್ಟಗಿರಿ > ಕೃಷ್ಟಗಿರಿ > ಕುಷ್ಟಗಿ[೨೧೫.ಅ] ಎಂಬುದು ಅವರ ಅಭಿಪ್ರಾಯವಾಗಿದೆ. ಎಸ್.ರಾಜೇಂದ್ರಪ್ಪ ಅವರ ಪ್ರಕಾರ 'ಕುಷ್ಟಗಿ ಪದವು ಪ್ರಾಯಶಃ ಪ್ರಕೃತಿವಾಚಿಯಾಗಿದ್ದು ಕೃಷ್ಣಗಯಿ ಪದದ ಅಪಭ್ರಂಶವಾಗಿದ್ದು, ಕಪ್ಪು ಮಣ್ಣಿನ ಭೂಮಿ ಎಂಬ ಅರ್ಥವನ್ನು ನೀಡುತ್ತದೆ. ಕುಷ್ಟಗಿಯ ಬಹುಪಾಲು ಭೂಮಿ ಎರೆ ಭೂಮಿಯಾಗಿರುವುದರಿಂದ ಇದು ಅನ್ವರ್ಥನಾಮವಾಗಿದ್ದು ಸ್ವೀಕಾರಾರ್ಹವಾಗಿದೆ.'[೨೧೫.ಆ] ಶಾಸನಗಳಲ್ಲಿ ಕುಷ್ಟಗಿಯನ್ನು 'ಕುಸ್ಟಿಗೆ' ಮತ್ತು 'ಕುಷ್ಟಗೆ' ಎಂದು ಉಲ್ಲೇಖವಿರುವುದು ಕಂಡುಬರುತ್ತದೆ. ಕನಕಗಿರಿಯ (ಗಂಗಾವತಿ.ತಾ) ಲಕ್ಷ್ಮಿನರಸಿಂಹ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ.೧೫೩೪ರ ಶಾಸನದಲ್ಲಿ

'ಕುಸ್ಟಿಗೆಯ ಸೀಮೆಯ ವಳಗಣ

ಸಮರ್ಪಿಸಿದ ಯಿಂಗಳದ ಗ್ರಾ ೧'[೨೧೬] ಎಂದು ಉಲ್ಲೇಖವಿದೆ. ಇನ್ನೊಂದು ಶಾಸನ ಕಲ್ಲೂರಿನ(ಯಲಬುರ್ಗಾ.ತಾ) ಕಲ್ಲಿನಾಥ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೫೩೦ರ ಐದನೆಯ ಶಾಸನದಲ್ಲಿ

[illegible]

'ಶ್ರೀಮನ್ಮ ಹಾ
ನಾಯಕಾಚಾರ್ಯ್ಯ ಗುಜಲು ಚಿಕಹ
ನುಮಂತನಾಯಕರ ಮಕ್ಕಳು ಯಿಂಮ
ಡಿ ಹನುಮಂತನಾಯಕರು ಕುಷ್ಟ
ಗೆಯ ಗುಜಲ ಯಿಂಮಡಿ ಮರಸದಿನಾ
ಯಕರ ಮಕ್ಕಳು'[೨೧೭] ಎಂದಿದೆ.

ಐತಿಹ್ಯದ ಪ್ರಕಾರ 'ಈ ಪ್ರದೇಶವನ್ನು ಒಬ್ಬ ರಾಣಿಯು ಆಳುತ್ತಿದ್ದು, ಅವಳ ಗಂಡನಿಗೆ ಕುಷ್ಟರೋಗ ತಗುಲಿತು. ಆಗ ಆತನನ್ನು ಕುಷ್ಟರೋಗ ನಿವಾರಣಾ ಹವಾಗುಣವಿರುವ ಈ ಪ್ರದೇಶಕ್ಕೆ ಕರೆತಂದಳು. ಕೆಲವು ತಿಂಗಳಲ್ಲಿ ರೋಗ ಮಾಯವಾಯಿತು. ಸಂತೋಷದಿಂದ ರಾಣಿಯು ಊರ ಹೊರಗೆ ನಾಲ್ಕು ದಿಕ್ಕುಗಳಲ್ಲಿ ಒಂದೊಂದು ಸ್ಮಾರಕಗಳನ್ನು ಕಟ್ಟಿಸಿ ಊರು ಬೆಳದು ಈ ಸ್ಮಾರಕಗಳನ್ನು ದಾಟಿದರೆ ರೋಗ ವಾಸಿಯಾಗುವ ಹವಾಗುಣ ಕಳೆದುಕೊಳ್ಳುತ್ತದೆ ಎಂದಳಂತೆ. ಹೀಗೆ ಕುಷ್ಟರೋಗ ನಿವಾರಣಾ ಹವಾಗುಣ ಹೊಂದಿದ ಸ್ಥಳವೇ ಕುಷ್ಟಗಿ ಎಂದು ಕರೆಯಲ್ಪಟ್ಟಿದೆ.' ಕುಷ್ಟಗಿ ಸಮೀಪದ ತಾವರಗೆರೆಯಲ್ಲಿಯ ಐತಿಹ್ಯ ಹೀಗಿದೆ, 'ವಿಜಯನಗರದ ಅರಸನಾದ ಪ್ರೌಢದೇವರಾಯನ ಪತ್ನಿ ಪದ್ಮಲಾದೇವಿಯು ಕುಷ್ಠರೋಗ ಪೀಡಿತಳಾದಾಗ ಅವಳಿಗೆ ಹಿತಕರವಾದ ವಾತಾವರಣವಿರುವ ಕುಷ್ಟಗಿ ಗ್ರಾಮದಲ್ಲಿ ನೆಲೆಸಲು ವ್ಯವಸ್ಥೆ ಮಾಡಿದ್ದನೆಂದು ಹೇಳಲಾಗುತ್ತದೆ'. ಈ ಐತಿಹ್ಯಗಳನ್ನು ಗಮನಿಸಿದಾಗ ಕುಷ್ಟಗಿಯು ಹಿತಕರವಾದ ರೋಗ ನಿವಾರಕ ವಾತಾವರಣ ಹೊಂದಿತ್ತೆಂದು ತಿಳಿದುಬರುತ್ತದೆ.

ಸಂಶೋಧಕರಾದ ನಾ. ಶ್ರೀರಾಜಪುರೋಹಿತ, ಎಸ್.ರಾಜೇಂದ್ರಪ್ಪ ಅವರುಗಳ ಅಭಿಪ್ರಾಯಗಳನ್ನು, ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವುದನ್ನು ಮತ್ತು ಐತಿಹ್ಯಗಳನ್ನು ಗಮನಿಸಿದಾಗ ಕೃಷ್ಣಗಿರಿ > ಕೃಷ್ಣಗಯಿ > ಕೃಷ್ಟಗಯಿ > ಕುಷ್ಟಗಿ ಎಂದಾಗಿರಬಹುದೆಂದು ತರ್ಕಿಸಬಹುದಾಗಿದೆ.

ಶಾಸನ ಉಲ್ಲೇಖಿತ ಸ್ಥಳನಾಮಗಳು

ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚು ಸ್ಥಳನಾಮಗಳ ಉಲ್ಲೇಖ ಕಂಡುಬಂದಿವೆ. ಅವುಗಳು ಪ್ರಾದೇಶಿಕತೆಯಲ್ಲಿ ಸುತ್ತಲಿನ ನೈಸರ್ಗಿಕ ಲಕ್ಷಣಗಳಲ್ಲಿ ನಿರ್ಮಾಣವಾದ ಸ್ಥಳನಾಮಗಳು. ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ.

ಶಾಸನೋಕ್ತ ಸ್ಥಳನಾಮಗಳು	ಆಧುನಿಕ ನಾಮ	ತಾಲ್ಲೂಕು	ಶಾಸನಸಂಖ್ಯೆ
ಮೂಡಕೇರಿ	ಮಂಕಲ್ಕೇರಿ	ಕುಷ್ಟಗಿ	ಕವಿವಿಶಾಸಂ೭.೦೧
ಕಲ್ಕೆರೆ	ಕಲಕೇರಿ	ಕುಷ್ಟಗಿ	ಅದೇ ೦೧
ಕಲ್ಯಾಣಪುರ	ಬಸವಕಲ್ಯಾಣ	ಬಸವಕಲ್ಯಾಣ	ಅದೇ ೦೩
ಗೋವನ್ತಿ	ಗೋತಗಿ	ಕುಷ್ಟಗಿ	ಅದೇ ೦೪
ಸಿರಿಗೋಪ್ಪ	ಸಿರಗುಪ್ಪ	ಕುಷ್ಟಗಿ	ಅದೇ ೦೫

ಮುದಿಯನೂರ	ಮುದೇನೂರ	ಕುಷ್ಟಗಿ	ಅದೇ ೦೬
ತಾವರಕೆರೆ	ತಾವರಗೆರೆ	ಕುಷ್ಟಗಿ	ಅದೇ ೧೦
ಅಯ್ಯಾವೊಳೆ	ಐಹೊಳೆ	ಬಾದಾಮಿ	ಅದೇ ೧೬
ಶ್ರೀಪುರ	ಪುರ	ಕುಷ್ಟಗಿ	ಅದೇ ೧೭
ವೊಹಿಲಾಪುರ	ಪುರ	ಕುಷ್ಟಗಿ	ಅದೇ ೧೨
ಮುದಗಲ	ಮುದಗಲ್ಲ	ಲಿಂಗಸೂಗುರು	ಅದೇ ೧೨
ಸಿಂದನೂರ	ಸಿಂಧನೂರ	ಸಿಂಧನೂರು	ಅದೇ ೧೩
ಮಾದನೂರ	ಮಾದಿನೂರು	ಕೊಪ್ಪಳ	ಅದೇ ೧೩
ನಿಡುಗೋಳ	ನೀಡಗೋಳ	ಯಲಬುರ್ಗಾ	ಅದೇ ೧೩
ಕಂಪಲಿ	ಕಂಪ್ಲಿ	ಹೋಸಪೇಟೆ	ಅದೇ ೧೩
ನರೆಯಂಗಲ್ಲ	ನರೇಗಲ್ಲ	ರೋಣ	ಅದೇ ೧೩
ಕೆಲ್ಲಂಗೆರೆ	ಚಳಗೇರೆ	ಕುಷ್ಟಗಿ	ಅದೇ ೨೧
ಗೊಬ್ಬೂರ	ಗಬ್ಬೂರ	ದೇವದುರ್ಗ	ಅದೇ ೨೧
ಬಾದಾವಿ	ಬಾದಾಮಿ	ಬಾದಾಮಿ	ಅದೇ ೨೨
ಹಾವರಿ	ಹಾವೇರಿ	ಹಾವೇರಿ	ಅದೇ ೨೨
ಸಿಗ್ಗಾವೆ	ಸಿಗ್ಗಾಂವ	ಸಿಗ್ಗಾಂವ	ಅದೇ ೨೨
ಕೆರುವೂರ	ಕೆರೂರ	ಹುನಗುಂದ	ಅದೇ ೨೨
ಯರಗೇರಿ	ಯರಗೇರಿ	ಕುಷ್ಟಗಿ	ಅದೇ ೨೪
ಯಿಂಗಳೇಶ್ವರ	ಇಂಗಳೇಶ್ವರ	ಬಾಗೇವಾಡಿ	ಅದೇ ೨೬
ಹತ್ತರತಾಣ	ಅಂಟೂರತಾಣ	ಕುಷ್ಟಗಿ	ಅದೇ ೨೭
ಘತ್ತರತಾಣ	ಅಂಟೂರತಾಣ	ಕುಷ್ಟಗಿ	ಅದೇ ೨೮
ಮಾಲಗೆರೆ	ಮಾಲಗಿತ್ತಿ	ಕುಷ್ಟಗಿ	ಅದೇ ೩೦
ಮಾಲೆಂಗೆರೆ	ಮಾಲಗಿತ್ತಿ	ಕುಷ್ಟಗಿ	ಅದೇ ೩೦
ಮೇಗಣಗೇರೆ	ಮೆಣಸಗೇರೆ	ಕುಷ್ಟಗಿ	ಅದೇ ೨೮

ಈ ಗ್ರಾಮನಾಮಗಳನ್ನು ಗುಂಪುಗುಂಪಾಗಿ ವಿಂಗಡಿಸಿ ವಿವರಿಸುವ ಪ್ರಯತ್ನ ಮಾಡಿದ್ದೇನೆ. ಪ್ರಾದೇಶಿಕತೆಯಲ್ಲಿ ಸುತ್ತಲಿನ ನೈಸರ್ಗಿಕ ಲಕ್ಷಣಗಳಲ್ಲಿ ನಿರ್ಮಾಣವಾದ ಸ್ಥಳನಾಮಗಳು.

೦೧. ಗೆರೆ–ಕೆರೆ : ಮೂಡಕೇರಿ, ಕಲ್ಕೆರೆ, ತಾವರಕೆರೆ, ಕೆಲ್ಲಂಗೆರೆ, ಅಯ್ಯಾವೊಳೆ, ಯರಗೇರಿ, ಮೂಲಗೆರೆ, ಮಾಲಂಗೆರೆ, ಮೇಗಣಗೆರೆ.

೦೨. ಕಲ್ಲು–ಗಲ್ಲು : ಮುದಗಲ್, ನರೆಯಂಗಲ್.

೦೩. ಪ್ರಾಣಿಗಳ ಹೆಸರು : ಗೋವನ್ತಿ

೦೪. ಪುರ : ಜಂಯತಿಪುರ, ಶ್ರೀಪುರ, ವೂಹಿಲಾಪುರ, ಕಲ್ಲುದೇವರಪುರ

೦೫. ಊರು : ಸಿಂಧನೂರ, ಮಾದನೂರ, ಮುದಿಯನೂರು ಕೆರುವೂರು, ಗಬ್ಬೂರ.

ಈ ರೀತಿಯಾಗಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಿತ ಗ್ರಾಮನಾಮಗಳನ್ನು ಅವುಗಳಲ್ಲಿ ಅಡಗಿರುವ ವಿಷಯ ವಸ್ತುಗಳ ಆಧಾರದಲ್ಲಿ ವಿಂಗಡಿಸಲಾಗಿದೆ.

ವೃತ್ತಿಸೂಚಕ ನಾಮಗಳು

ನಾಮಗಳು ಸಾಮಾನ್ಯವಾಗಿ ಸ್ಥಳವಾಚಕ ಇಲ್ಲವೆ ವೃತ್ತಿಸೂಚಕವಾದವು. ಪ್ರಾಚೀನ ಕಾಲದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋದಾಗ ಹಿಂದಿದ್ದ ಸ್ಥಳದ ಹೆಸರನ್ನು ಆ ವ್ಯಕ್ತಿಗಳಿಗೆ ಸೇರಿಸುವ ಕ್ರಮ ರೂಢಿಯಲ್ಲಿತ್ತು. ಇನ್ನೂ ಕೆಲವು ವ್ಯಕ್ತಿಗಳಿಗೆ ತಾವು ಮಾಡುವ ವೃತ್ತಿಗಳ ಹೆಸರುಗಳು ವೃತ್ತಿಸೂಚಕಗಳಾಗಿ ವೃತ್ತಿನಾಮಗಳಾಗಿವೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ವೃತ್ತಿಸೂಚಕ ನಾಮಗಳ ಉಲ್ಲೇಖ ಕಂಡುಬಂದಿವೆ. ಅವುಗಳೆಂದರೆ, ನಾಯಿಂದ,[೨೨೦] ಬಡಗಿ,[೨೨೧] ಗಾಣಿಗರು,[೨೨೨] ಕುಂಬಾರ,[೨೨೩] ಗವರೆ, ಗಾತ್ರಿಗ, ತಂಬುಲಿಗ ಸಾಸಿರ್ವ್ವರು,[೨೨೪] ಎಲೆಯ ಸಾಸಿರ್ವ್ವರು,[೨೨೫] ಅಕ್ಕಸಾಲಿ ಮತ್ತು ಕಮ್ಮಾರ.[೨೨೬] ಹೀಗೆ ವೃತ್ತಿಸೂಚಕ ನಾಮಗಳು ಶಾಸನಗಳಿಂದ ತಿಳಿದುಬರುತ್ತವೆ.

೩.೧೦. ಜನಸಾಮಾನ್ಯರ ಚಿತ್ರಣ

ಶಾಸನಗಳು ಒಂದು ದೇಶದ ರಾಜಕೀಯ ಇತಿಹಾಸವನ್ನು ರೂಪಿಸುವ ಪ್ರಮುಖ ಆಕರಗಳು. ರಾಜನ ಬಿರುದು, ಹೆಸರು, ವಂಶಾವಳಿ, ದಾನನೀಡಿದ ಕಾಲ, ದಾನ ಸ್ವೀಕರಿಸಿದ ವ್ಯಕ್ತಿಗಳ ಪ್ರಸ್ತಾಪ, ದಾನ ಕಾಪಾಡಿದವರಿಗೆ ಸಿಗುವ ಶ್ರೇಯಸ್ಸು, ಹಾಳು ಮಾಡಿದರೆ ಒದಗುವ ಆಪತ್ತುಗಳು ಶಾಸನಗಳಲ್ಲಿ ಉಲ್ಲೇಖಗೊಂಡಿರುತ್ತವೆ. ಶಾಸನಗಳಲ್ಲಿ ಹೆಚ್ಚಾಗಿ ರಾಜರ ವಿಚಾರಗಳೇ ಪ್ರಸ್ತಾಪವಾಗಿರುತ್ತವೆ. ಆದರೆ ಜನಸಾಮಾನ್ಯರನ್ನು ಕುರಿತಾದ ಮಾತುಗಳು ತುಂಬಾ ಕಡಿಮೆಯೇ ಎಂದು ಹೇಳಬಹುದು.

ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಸಾಮಂತರು, ದಂಡನಾಯಕರು, ಗೌಡ, ಗೌವುಂಡ, ಮಹಾಪ್ರಧಾನರು, ಭಂಡಾರಿ, ಮುಂತಾದ ವರ್ಗದವರನ್ನು ಉಲ್ಲೇಖಿಸಲಾಗಿದೆ. ಇವುಗಳ ಜೊತೆಗೆ ಕ್ಷೌರಿಕ, ತಳವಾರ, ಕುಂಬಾರರ ಹೆಸರುಗಳು ಉಲ್ಲೇಖಗೊಂಡಿರುವುದನ್ನು ಗಮನಿಸಿದರೆ ಜನಸಾಮಾನ್ಯರಿಗೂ ವಿಶೇಷ ಗೌರವ ನೀಡಲಾಗಿತ್ತೆಂಬುದನ್ನು ಊಹಿಸಬಹುದಾಗಿದೆ.

ಸಿರಗುಪ್ಪದಲ್ಲಿರುವ ಕ್ರಿ.ಶ.೧೧೧೦ರ ಶಾಸನದಲ್ಲಿ[೨೨೭] ತುರುಗಳ್ಳರೊಡನೆ ಹೋರಾಡಿ ತಳಾರಿ ಕಾಳಬೋವನು ಮಡಿಯುತ್ತಾನೆ. ಇವನ ಮಗ ಬಮ್ಮಪನಿಗೆ ಹೊಲ ಹಾಗೂ ಮನೆಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ತಾವರಗೆರೆಯಲ್ಲಿರುವ ಕ್ರಿ.ಶ.೧೫೪೭ರ ಶಾಸನದಲ್ಲಿ[೨೨೮] 'ತಾವರಕೆರೆ ತಿಂಮೋಜ, ಕೊಂಡೋಜ, ಭದ್ರೋಜ ಅವರ ಬಿನ್ನಹವನ್ನು ಕೇಳಿ ಅಳಿಯ ರಾಮರಾಜದೇವನು ತಾವರಕೆರೆಯ ಸೀಮೆಯ ೧೩೦ ಕ್ಷೌರಿಕರಿಗೆ ಎಲ್ಲ ತೆರಿಗೆಯನ್ನು ಮನ್ನಾ ಮಾಡಿರುವದರ ಬಗ್ಗೆ ತಿಳಿಸುತ್ತದೆ. ಪುರದಲ್ಲಿರುವ ಕ್ರಿ.ಶ.೧೫೪೭ರ ಶಾಸನದಲ್ಲಿ[೨೨೯]

ತಳವಾರಿಕೆ, ವೋಜರು, ಕುಂಬಾರ ಎಂದು ಉಲ್ಲೇಖಗಳಿದ್ದು, ತಂಮಣನಾಯಕ ವಿರುಪಣ ನಾಯಕ, ಕೃಷ್ಣಪ್ಪನಾಯಕ ಮತ್ತು ಬಮ್ಮನಾಯಕರ ಹೆಸರುಗಳು ಕಂಡುಬರುತ್ತವೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ[೨೩೦] ಸೇನಭೋವ, ಬಸವರಸ, ಬಡಗಿ ಕಾಳೋಜ, ಕಲ್ಲೋಜ ಮತ್ತು ಗಾಣಿಗ ಎಂದು ಊಲ್ಲೇಖಗಳಿವೆ. ಯರಗೇರಿಯಲ್ಲಿರುವ ಕ್ರಿ.ಶ.ಸು.೧೭ನೆಯ ಶತಮಾನದ ತೃಟಿತ ಶಾಸನದಲ್ಲಿ[೨೩೧] ಮಲಗಿರಿಗೌಡ ಮತ್ತು ಮಾಚಕ ಎಂದು ಉಲ್ಲೇಖಗಳಿವೆ. ಬಲ್ಲುಟಗಿಯಲ್ಲಿರುವ ಶಾಸನದಲ್ಲಿ[೨೩೨] ಕೆಂಚಯ್ಯ ಮತ್ತು ರಾಮಯ್ಯರ ಹೆಸರುಗಳಿವೆ. ಶಾಸನಗಳಲ್ಲಿ ಊಲ್ಲೇಖಿತ ಹೆಸರುಗಳು ಇಂದಿಗೂ ಸಮಾಜದಲ್ಲಿ ಇರುವುದನ್ನು ಕಾಣುತ್ತವೆ. ಇವುಗಳಿಂದ ಜನಸಾಮಾನ್ಯರು ಕೂಡ ಶತ್ರುಗಳೊಡನೆ ಹೋರಾಡಿರುವುದು ತಿಳಿದುಬರುತ್ತದೆ.

೩.೧೧. ಶಾಸನ ಕವಿಗಳು

ಶಾಸನ ಸಾಹಿತ್ಯವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಶಾಸನಗಳಿಗೆ ಸಾಹಿತ್ಯ ಮೌಲ್ಯವನ್ನು ತಂದು ಕೊಟ್ಟವರು ಶಾಸನ ಕವಿಗಳು. ಕೇವಲ ಸಾಮಾಜಿಕ ಹಾಗೂ ರಾಜಕೀಯ ದಾಖಲೆಗಳಾಗುತ್ತಿದ್ದ ಶಾಸನಗಳಲ್ಲಿ ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಸಾಹಿತ್ಯವನ್ನಾಗಿಸಿದರು. ಗದ್ಯ ರೂಪದಲ್ಲಿದ್ದಂತಹ ಚರಿತ್ರೆಯ ವಿಷಯವನ್ನು ಕೂಡ ಇವರು ಕಾವ್ಯಾತ್ಮಕವಾಗಿ ರಚಿಸಿದ್ದಾರೆ. ಶಾಸನ ಕಾವ್ಯರಚನೆಯಲ್ಲಿ ಅತಿರಂಜನೆಯ, ವರ್ಣನಾತ್ಮಕ ಅಂಶಗಳನ್ನು ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಹಾಗೂ ಹೊಯ್ಸಳರ ಕಾಲದ ಶಾಸನಗಳಲ್ಲಿ ಕಾಣಬಹುದಾಗಿದೆ. ಶಾಸನ ಕವಿಗಳು ತಮ್ಮನ್ನು ಹಾಗೂ ದೊರೆಗಳನ್ನು ಕುರಿತು ವರ್ಣನಾತ್ಮಕವಾಗಿ ಉಲ್ಲೇಖಿಸಿದ್ದಾರೆ. ಶಾಸನಗಳಲ್ಲಿನ ಉತ್ತಮ ಕಾವ್ಯ, ಪಠ್ಯವನ್ನು ಗಮನಿಸಿದರೆ ಅವುಗಳನ್ನು ನುರಿತ ಶ್ರೇಷ್ಠ ಕವಿಗಳೇ ರಚಿಸುತ್ತಿದ್ದರೆಂದು ತಿಳಿಯಬಹುದಾಗಿದೆ. ಎಷ್ಟೋ ಜನ ಪ್ರಸಿದ್ಧ ಕವಿಗಳು ಶಾಸನ ರಚಿಸಿದ್ದಾರೆ.

ಶಾಸನಗಳಲ್ಲಿ ಸ್ಥಳದ ಮಿತಿ ಇರುತ್ತದೆ. ಅಷ್ಟರಲ್ಲಿಯೇ ಹೇಳಬೇಕಾದ ವಿಷಯದಲ್ಲಿಯೇ ಕಾವ್ಯಾತ್ಮಕ ಅಂಶಗಳನ್ನು ಸೇರಿಸಿ ಹೇಳಬೇಕು. ಒಂದರ್ಥದಲ್ಲಿ ಶಾಸನ ಕವಿಗಳು ಅಲ್ಪದರಲ್ಲಿಯೇ ಕಲ್ಪವನ್ನು ಕಟ್ಟಿಕೊಂಡವರು. ಇಂಥ ಕವಿಗಳು ತಮ್ಮ ಹೆಸರುಗಳನ್ನು ಸಾಮಾನ್ಯವಾಗಿ ಶಾಸನದ ಕೊನೆಯ ಭಾಗದಲ್ಲಿ ಹೇಳಿಕೊಳ್ಳುತ್ತಿದ್ದರು. ಶಾಸನಗಳು ಕವಿ, ಲಿಪಿಕಾರ ಮತ್ತು ರೂವಾರಿ ಈ ಮೂವರ ಸಂಯುಕ್ತದಿಂದ ರಚನೆಯಾಗುತ್ತಿದ್ದವು. ಕೆಲವು ಸಂದರ್ಭದಲ್ಲಿ ಒಬ್ಬನೇ ಎಲ್ಲಾ ಆಗಿರುವ ಸಾಧ್ಯತೆ ಇರುತ್ತದೆ. ಶಾಸನಗಳಲ್ಲಿ 'ಲಿಖಿತಂ,' 'ಬರೆದಂ,' 'ಬರೆಪಂ' ಎಂದು ಬಳಸಿದ್ದರೆ ಅಲ್ಲಿ ಒಬ್ಬರಿಂದ ಮತ್ತೊಬ್ಬರನ್ನು ಬೇರ್ಪಡಿಸುವುದು ಕಷ್ಟದ ಕಾರ್ಯವಾಗಿದೆ. ಕವಿಯ ಹೆಸರಿನ ಹಿಂದೆ ವಿದ್ವತ್‌ಸೂಚಕ ವಿಶೇಷಣಗಳಿದ್ದರೆ ಅವರನ್ನು ಶಾಸನಕವಿಗಳೆಂದು ತಿಳಿಯ ಬಹುದಾಗಿದೆ.[೨೩೩]

ಕುಷ್ಟಗಿ ಪರಿಸರದ ಬಹುಪಾಲು ಶಾಸನಗಳಲ್ಲಿ ಶಾಸನ ಕವಿಗಳ ಹೆಸರು ಕಂಡುಬಂದಿಲ್ಲ. ಒಂದೇ ಒಂದು ಶಾಸನದಲ್ಲಿ ಮಾತ್ರ ಉಲ್ಲೇಖವಿದೆ. ಪುರ ಗ್ರಾಮದಲ್ಲಿನ ಕ್ರಿ.ಶ.೧೨ನೆಯ ಶತಮಾನದ ಶಾಸನವನ್ನು ಸೇನಭೋವ ಬಂಮರಸನು ಬರೆದಿದ್ದಾನೆ.

"ಇಂತೀ ಧರ್ಮ್ಮಶಾಸನಂ ಭೂಮ್ಮಂಡಳ ಧರೆ ದಿವಂ
ಚಂದ್ರಾರ್ಕ್ಕರುಳ್ಳಿನಂ ಸ್ಥಿ
ರಾಯು ಧರ್ಮ್ಮವೆಂದು ಬರೆದಂ ॥ ಸೇನಬೋವ ಬಂಮರಸ ॥
ನರಸಿಂಹ(ಹ)ಯ ।

ದೇವರರಮನೆಯ ಸೇನುಬೋವ ಬಸವರಸಗೆ ಹಿರಿಯಕೋಲ ವಿದರ ಮತ್ತರೊಂದು ॥"[೨೩೪] ಈ ಶಾಸನವನ್ನು ಬರೆದ ಸೇನಬೋವ ಬಂಮರಸನಿಗೆ ಹಿರಿಯ ಕೋಲಲ್ಲಿ ಒಂದು ಮತ್ತರನ್ನು ನೀಡುತ್ತಾರೆ ಎಂದು ಉಲ್ಲೇಖಿಸಲಾಗಿದೆ.

೩.೧೨. ಶಾಪಾಶಯಗಳು

ದಾನಧರ್ಮಗಳೇ ಶಾಸನಗಳ ಉಗಮಕ್ಕೆ ಪ್ರೇರಕ ಶಕ್ತಿ. ಶಾಸನಗಳು ಸಮಾಜದ ಆಸ್ತಿಗಳಾಗಿದ್ದು ಅವುಗಳನ್ನು ರಕ್ಷಿಸಿ ಕಾಪಾಡುವುದು ಸಮಾಜದ ಪ್ರತಿಯೊಬ್ಬನ ಕರ್ತವ್ಯವಾಗಿತ್ತು. ಈವರೆಗೆ ದೊರೆತ ಕನ್ನಡ ಶಾಸನಗಳಲ್ಲಿ ದಾನ ಶಾಸನಗಳ ಸಂಖ್ಯೆಯೇ ಹೆಚ್ಚು. ದಾನ ನೀಡಿದವನು ತಾನು ನೀಡಿದ ದಾನ ಮತ್ತು ದಾನದ ವಿಷಯ ಮುಂದಿನ ತಲೆಮಾರಿನವರು ಸೂರ್ಯ ಚಂದ್ರರಿರುವವರೆಗೂ ಶಾಶ್ವತವಾಗಿರಬೇಕೆಂದು ಶಾಸನಗಳನ್ನು ಕೆತ್ತಿಸಿದರು. ಇಂಥ ದಾನ ಶಾಸನಗಳಲ್ಲಿ ದಾನವನ್ನು ಅಪಹರಿಸಿದವರಿಗೆ ಒದಗುವ ಪಾಪಗಳನ್ನು ಹೇಳುವ ಶ್ಲೋಕಗಳೇ 'ಶಾಪಾಶಯ'ಗಳು. ಇಂಥ ಶ್ಲೋಕಗಳು ಶಾಸನಗಳಲ್ಲಿ ಸಾಮಾನ್ಯವಾಗಿ ಅಂತ್ಯಭಾಗದಲ್ಲಿ ಕಂಡು ಬರುತ್ತವೆ. ಅಪರೂಪವೆಂಬಂತೆ ಶಾಸನದ ಪ್ರಾರಂಭದಲ್ಲಿ ಅಥವಾ ಮಧ್ಯಭಾಗದಲ್ಲಿ ಬಂದಿರುವುದುಂಟು. ಆದರೆ ಕುಷ್ಟಗಿ ಪರಿಸರದ ಶಾಸನಗಳ ಅಂತ್ಯ ಭಾಗದಲ್ಲಿಯೇ ಕಂಡು ಬಂದಿವೆ. ಶಾಸನಗಳಲ್ಲಿ ಈ ರೀತಿಯ ಶ್ಲೋಕಗಳನ್ನು ಹೇಳುವ ಭಾಗವನ್ನು 'ದಾನಚ್ಛೇದೋಪವರ್ಣನ್' ಎಂದು ಕರೆಯುತ್ತಾರೆ.[೨೩೫]

ಶಾಸನಗಳನ್ನು ನಾಶಮಾಡದಂತೆ ಸಾಮಾನ್ಯ ಜನರ ಮನಸ್ಸಿನಲ್ಲಿ ಪಾಪದ ಭಯವನ್ನು ತುಂಬುವ ಹಾಗೂ ಶಾಸನ ರಕ್ಷಿಸಿದರೆ ಪ್ರತಿಫಲವಾಗಿ ಪುಣ್ಯ ಲಭಿಸುವಂಥ ಶಾಪಾಶಯಗಳ ಶ್ಲೋಕಗಳನ್ನು ಶಾಸನಗಳಲ್ಲಿ ಬರೆಸುವ ಪದ್ಧತಿ ಪ್ರಾರಂಭದಲ್ಲೇ ಬೆಳೆದಿರಬಹುದು. ಡಾ. ಎಸ್.ಕೆ. ದೀಕ್ಷಿತ ಅವರು ಕ್ರಿ.ಶ.೬ನೆಯ ಶತಮಾನದಿಂದ ಆರಂಭವಾಯಿತೆಂದು ಅಭಿಪ್ರಾಯ ಪಡುತ್ತಾರೆ. ಪ್ರಾಚೀನ ಶಾಸನಗಳಲ್ಲಿ 'ಕಳ್ದೋನ್ ಮಹಾಪಾತಕನ್' ಎಂದು, 'ವಿತ್ತದಲ್ಲಿ ಬೆಳೆಯಾದ ಕೆಡುಗೆ' ಎಂದು ಸಂಕ್ಷಿಪ್ತವಾಗಿರುತ್ತವೆ. ಕ್ರಿ.ಶ.೧೫ನೆಯ ಶತಮಾನದ ನಂತರ ಅನೇಕ ಶಾಸನಗಳ ಕನ್ನಡ ಶಾಪಾಶಯಗಳು ಅಶ್ಲೀಲ ಎನ್ನುವಷ್ಟರ ಮಟ್ಟಿಗೆ ವಿವರಣೆಯನ್ನು ಒಳಗೊಂಡಿವೆ. ಶಾಸನಗಳಲ್ಲಿ ಒಂದೇ ರೀತಿಯ ಶಾಪಾಶಯಗಳು ಕಂಡುಬಂದರೂ ಕೆಲವು ಶಾಸನಗಳಲ್ಲಿ ವಿಶೇಷವಾದ ಶಾಪಾಶಯಗಳಿವೆ. ಕುಷ್ಟಗಿ ಪರಿಸರದ ಶಾಸನಗಳಲ್ಲಿ ಕಂಡುಬರುವ ಶಾಪಾಶಯಗಳನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

"ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುಂಧರಾಂ
ಷಷ್ಟಿರ್ವ್ವರಿಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ"

ಅಂದರೆ 'ತಾನು ಕೊಟ್ಟ ಅಥವಾ ಬೇರೆಯವರೇ ಕೊಟ್ಟ ದತ್ತಿ ದಾನಗಳನ್ನು ಯಾವನು ಅಪಹರಿಸುತ್ತಾನೋ ಅವನು ಅರವತ್ತು ಸಾವಿರ ವರ್ಷಗಳ ಕಾಲ ಕ್ರಿಮಿಯಾಗಿ ಜೀವಿಸುತ್ತಾನೆ'. ಇಂಥ ಶಾಪಾಶಯಗಳಿರುವ ಶಾಸನಗಳು ಗೋತಗಿಯಲ್ಲಿ ಎರಡು,[೨೩೬] ಚಳಗೇರಿಯಲ್ಲಿ ಒಂದು,[೨೩೭] ಪುರದಲ್ಲಿ ಎರಡು,[೨೩೮] ಹಿರೇಮನ್ನಾಪುರದಲ್ಲಿ ಒಂದು[೨೩೯] ಕಂಡುಬಂದಿವೆ. ಈ ಮೇಲಿನ ಶಾಪಾಶಯಕ್ಕಿಂತ ಉಗ್ರವಾದ ಶಾಪಾಶಯಗಳೂ ಸಹ ಶಾಸನಗಳಲ್ಲಿ ಉಲ್ಲೇಖ ಗೊಂಡಿವೆ.

"ವಿಷಂ ನವಿಷಮಿತ್ಯಾಹು: ಬ್ರಹ್ಮಸ್ವಂ ವಿಷಮುಚ್ಚತೇ
ವಿಷಂ ಏಕಾಕಿನಂ ಹಂತಿ ಬ್ರಹ್ಮಸ್ವಂ ಪುತ್ರಪೌತ್ರ ಕಂ"

ಅಂದರೆ, ವಿಷವು ವಿಷವೇ ಅಲ್ಲ. ಏಕೆಂದರೆ, ಅದನ್ನು ಸೇವಿಸಿದವನು ಮಾತ್ರ ಸಾಯುತ್ತಾನೆ. ದೇವರಿಗೆ ಬಿಟ್ಟ ದತ್ತಿಯು ವಿಷಕ್ಕಿಂತಲೂ ಹೆಚ್ಚು ಅಪಾಯಕಾರಿಯಾದುದು. ದೇವರ ಸ್ವತ್ತು ಎಂಬುದು ವಿಷ. ಎಂತಹ ವಿಷ ಎಂದರೆ ಅದನ್ನು ಅಪಹರಿಸಿದವನನ್ನು ಮಾತ್ರವಲ್ಲದೇ ಅವನ ಸಂತತಿಯವರನ್ನೇ ಹಾಳು ಮಾಡುತ್ತದೆ. ಇಂಥ ಶಾಪಾಶಯದ ಶ್ಲೋಕವಿರುವ ಶಾಸನ ಈ ವರೆಗೆ ಕುಷ್ಟಗಿ ತಾಲ್ಲೂಕಿನಲ್ಲಿ ಕಂಡುಬಂದಿಲ್ಲ. ತಾವರಗೆರೆ ಗ್ರಾಮದ ವೀರಭದ್ರ ದೇವಾಲಯದ ಬಳಿ ಇರುವ ಶಾಸನದಲ್ಲಿ

"ಯಿದಕೆ ಆರು ತಪ್ಪಿದರು ತಂಮ ತಂದೆ ತಾಯಿಗಳನು
ಗೋಉ ಬ್ರಾಹ್ಮಣರನು ವಾರಣಾಸಿಯಲಿ ಕೊಂದ ಪಾಪದಲಿ
ಹೋಹರು"[೨೪೦]

ಅಂದರೆ, ಇದಕ್ಕೆ ಯಾರಾದರೂ ತಪ್ಪಿ ನಡೆದರೆ ಅವರು ತಮ್ಮ ತಂದೆ–ತಾಯಿಗಳನ್ನು, ಗೋವುಗಳನ್ನು ಬ್ರಾಹ್ಮಣರನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಗುರಿಯಾಗುವಿರಿ. ಇಂಥ ಶಾಪಾಶಯದ ಉಲ್ಲೇಖವಿರುಪ ಶಾಸನಗಳು ಪುರದಲ್ಲಿರುವ ಎರಡು[೨೪೧] ಶಾಸನಗಳಲ್ಲಿ ಕಂಡುಬಂದಿವೆ. ಬ್ರಾಹ್ಮಣರ ಹತ್ಯೆ, ಗೋಹತ್ಯೆ, ಸ್ತ್ರೀ ಹತ್ಯೆ, ಹಸುಗಳ ಹತ್ಯೆ, ಯಕ್ಷಿಗಳ ಹತ್ಯೆಗಳು ಪಂಚಮಹಾಪಾತಕಗಳೆಂದು ಜೈನ ಕಥಾವಳಿ ವಡ್ಡಾರಾಧನೆ ತಿಳಿಸುತ್ತದೆ. ನೀಡಿದ ದಾನವನ್ನು ಹಾಳು ಮಾಡಿದವರಿಗೆ ಪುಣ್ಯ ಕ್ಷೇತ್ರಗಳಲ್ಲಿ ಬ್ರಾಹ್ಮಣ, ಹಸು, ತಂದೆ, ತಾಯಿ, ಸ್ತ್ರೀಯರನ್ನು ಕೊಂದ ಮಹಾಪಾಪ ಲಭಿಸುತ್ತದೆ ಎಂಬ ಅರ್ಥಗಳಿರುವ ಶಾಪಾಶಯಗಳು ಅನೇಕ ಶಾಸನಗಳಲ್ಲಿ ಕಂಡುಬರುತ್ತವೆ. ಶಾಸನಗಳನ್ನು ರಕ್ಷಿಸುವವರಿಗೆ ಒಳ್ಳೆಯ ಪ್ರತಿಫಲ ದೊರಕುತ್ತದೆ. ಎಂದು ಕೆಲವು ಶಾಸನಗಳಲ್ಲಿ ಉಲ್ಲೇಖವಿದೆ. ಅಂಟೂರಠಾಣದಲ್ಲಿರುವ ಕ್ರಿ.ಶ.೧೦೯೫ರ ಶಾಸನದಲ್ಲಿ

"ವಾರಣಾಸಿ ಕುರುಕ್ಷೇತ್ರವರ್ಘ್ಯ ತೀರ್ಥ
ಪ್ರಯಾಗೆಯಲು ನಿತ್ಯ ನಿಕಂ ಸಾಯಿರ ಕವಿಲೆಯಂ ಕೋಡು
ಕೋಳಗುಮಂ ಪೊನ್ನಲು ಕಟ್ಟಿಸಿ ಚತುರ್ವೇದ
ಪಾರಗರಪ್ಪ ಬ್ರಾಹ್ಮಣರಿಗೆ ದಾನಂ ಕೊಟ್ಟ ಫಲ"[೨೪೨]

ಅಂದರೆ, ಈ ಶಾಸನವನ್ನು ರಕ್ಷಿಸಿದವರಿಗೆ 'ವಾರಣಾಸಿ, ಕುರುಕ್ಷೇತ್ರ ಪ್ರಯಾಗಗಳಲ್ಲಿ ಸಾವಿರ ಆಕಳುಗಳನ್ನು ಬಂಗಾರದಲ್ಲಿ ಮಾಡಿಸಿ ಬ್ರಾಹ್ಮಣರಿಗೆ ದಾನ ನೀಡಿದ ಫಲ ಲಭಿಸುತ್ತದೆ'. ಇಂತಹದೇ ಶಾಪಾಶಯವಿರುವ ಇನ್ನೆರಡು ಶಾಸನಗಳು ಮಂಕಲ್ಕೇರಿ[೨೪೩] ಮತ್ತು ಪುರಗಳಲ್ಲಿ[೨೪೪] ತಲಾ ಒಂದೊಂದರಂತೆ ಇವೆ. ಪುರದಲ್ಲಿರುವ ಕ್ರಿ.ಶ.೧೪೪೬ರ ಶಾಸನದಲ್ಲಿ

"ದಾನ ಪಾಲನಯೋರ್ಮಧ್ಯೇ ಧಾನಶ್ರೇಯೋನು ಪಾಲನಂ
ದಾನತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ"[೨೪೫]

ಅಂದರೆ, ದಾನ-ದತ್ತಿಯನ್ನು ನೀಡುವುದಕ್ಕಿಂತಲೂ ಬೇರೆಯವರು ಕೊಟ್ಟಿರುವ ದಾನ-ದತ್ತಿಗಳನ್ನು ಕಾಪಾಡಿಕೊಂಡುಬರುವುದು ಶ್ರೇಯಸ್ಕರವಾದುದು. ದಾನದಿಂದ ಸ್ವರ್ಗ ಲಭಿಸಿದರೆ, ದಾನದ ಪಾಲನೆಯಿಂದ ಚ್ಯುತಿಬಾರದ ಪದವಿಯೂ ಲಭಿಸುತ್ತದೆ. ಇಂಥ ಶಾಪಾಶಯದ ಉಲ್ಲೇಖವಿರುವ ಇನ್ನೊಂದು ಶಾಸನ ಪುರದಲ್ಲಿದೆ.[೨೪೬]

ಹೀಗೆ ಶಾಪಾಶಯಗಳು ರಚನೆಯಾಗಿ ಅವು ಶಾಸನಗಳ ರಕ್ಷಣೆಯ ಜವಾಬ್ದಾರಿಯನ್ನೂ ಹೊತ್ತಂತೆ ತೋರುತ್ತವೆ. ಈ ರೀತಿಯ ಶಾಪಾಶಯ ಶ್ಲೋಕಗಳು ಶೈವ, ವೈಷ್ಣವ, ಜೈನ ಶಾಸನಗಳಲ್ಲಿ ಸಾರ್ವತ್ರಿಕವಾಗಿ ಕಂಡುಬರುತ್ತವೆ. ಈ ಮಾತುಗಳ ಆಂತರ್ಯ ದಾನ ಕೊಟ್ಟವರು ತಾನು ದೊಡ್ಡವನೆಂದು ಭಾವಿಸಿಕೊಳ್ಳುವದಕ್ಕಿಂತ, ತಾನು ಕೊಟ್ಟ ದಾನ ಶಾಶ್ವತವಾಗಿರಲಿ ಎಂಬ ಧೃಡ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಹಾಗೇ ಈ ಶಾಪಾಶಯಗಳು ನಮ್ಮ ಸಂಸ್ಕೃತಿಯ ಕುರುಹುಗಳಾದ ಶಾಸನಗಳನ್ನು ರಕ್ಷಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

೩.೧೩. ದಾನ ಶಾಸನಗಳು

ಕನ್ನಡ ಶಾಸನಗಳಲ್ಲಿ ದಾನ ಶಾಸನಗಳ ಸಂಖ್ಯೆಯೇ ಅತ್ಯಧಿಕ. ಮಾನವನ ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಬಿಂಬಿತವಾಗಿವೆ. 'ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿ ಎಂದು ಹೇಳಬಹುದು'.[೨೪೭] 'ಒಬ್ಬ ವ್ಯಕ್ತಿ ಯಾವುದಾದರೂ ಒಂದು ಸಾರ್ಥಕವಾದ ಉದ್ದೇಶದಿಂದ ವ್ಯಕ್ತಿಗಾಗಲಿ, ಸಂಸ್ಥೆಗಾಗಲಿ ನೀಡುವ ಆರ್ಥಿಕ ಮೂಲವಾದ ನೆರವನ್ನು ದಾಖಲು ಮಾಡುವುದು ಈ ದಾನ ಶಾಸನಗಳ ಮುಖ್ಯ ಉದ್ದೇಶ.[೨೪೮] ದೇವಾಲಯಗಳನ್ನು ಕಟ್ಟಿಸುವುದು ಅವುಗಳ ವ್ಯವಸ್ಥೆಗಾಗಿ, ಪ್ರತಿನಿತ್ಯ ಪೂಜೆ ಪುನಸ್ಕಾರಗಳಿಗಾಗಿ, ಪೂಜೆ ಮಾಡುವ ಪೂಜಾರಿಗಳಿಗಾಗಿ, ಮಠಗಳಲ್ಲಿ ನಡೆಯುವ ವಿದ್ಯಾದಾನಕ್ಕಾಗಿ, ವಿದ್ಯಾದಾನ ಮಾಡುವ ಗುರುಗಳ ಹಾಗೂ ವಿದ್ಯಾರ್ಥಿಗಳಿಗಾಗಿ, ಅನ್ನಸತ್ರಾದಿ ಧರ್ಮಕಾರ್ಯಗಳಿಗಾಗಿ, ನರ್ತನ ಮಾಡುವ ನರ್ತಕಿಯರಿಗಾಗಿ, ವಾದ್ಯಗಾರರಿಗೆ, ಸಾಂಸ್ಕೃತಿಕ ವಿಷಯಗಳಿಗೆ, ಅರವಟ್ಟಿಗೆ, ಕೆರೆ, ಬಾವಿ ಇನ್ನು ಮುಂತಾದ ಜನೋಪಯೋಗಿ ಕಾರ್ಯಗಳಿಗೆ, ವ್ಯಕ್ತಿಯೊಬ್ಬನ ಸೇವೆ ಪರಾಕ್ರಮವನ್ನು ಮನ್ನಿಸುವುದಕ್ಕಾಗಿ ದಾನಗಳನ್ನು ಕೊಡುವುದು ಲೌಕಿಕ ಸಂಪತ್ತಿನ ಗಳಿಕೆಯ ಸಾರ್ಥಕತೆ ಎಂದು ಜನ ಭಾವಿಸಿದ್ದರು.

[illegible]

ದಾನವಾಗಿ ನೀಡುವ ಆರ್ಥಿಕ ಮೂಲವು ಭೂಮಿಯಾಗಿರಬಹುದು, ನಗದು ರೂಪದ ಹಣವಾಗಿರಬಹುದು ಅಥವಾ ಅಗತ್ಯ ವಸ್ತುಗಳ ಪೂರೈಕೆಯಾಗಿರಬಹುದು. ಈ ಮೌಲ್ಯವು ರಾಜಾಧಿರಾಜರಿಂದ ಹಿಡಿದು ಜನಸಾಮಾನ್ಯರವರೆಗೂ ಈ ಧಾರ್ಮಿಕ ಭಾವನೆ ಜೀವನದ ಸಹಜಗುಣವಾಗಿ ಹರಡಿತ್ತು. ಅದರ ಫಲವಾಗಿ ಊರುಗಳಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ರಾಜರು ಮತ್ತು ಮಂತ್ರಿಗಳು ತಮ್ಮ ಮತ್ತು ಪ್ರಜೆಗಳ ಕ್ಷೇಮಕ್ಕಾಗಿ ದೇವಾಲಯಗಳಿಗೆ ಭೇಟಿ ನೀಡಿ ಅಲ್ಲಿನ ದೇವರುಗಳಿಗೆ ಸೇವೆಗಾಗಿ ಭೂಮಿಯನ್ನು, ಚಿನ್ನದ ನಾಣ್ಯಗಳನ್ನು ದಾನವಾಗಿ ಕೊಡುತ್ತಿದ್ದರು. ಅದೇ ರೀತಿಯಲ್ಲಿ ರಾಜರು ತಮ್ಮ ದಿಗ್ವಿಜಯ ಮಾರ್ಗದಲ್ಲಿ ದೇವಾಲಯಗಳಿಗೆ ಬೇಟಿ ಕೊಟ್ಟು ತಮ್ಮ ಕಾರ್ಯಸಾಧನೆಗೋಸ್ಕರ ದೇವರನ್ನು ಪೂಜಿಸಿ ದತ್ತಿಗಳನ್ನು ಕೊಟ್ಟು ಮುಂದುವರೆಯುತ್ತಿದ್ದರು. ಈ ದಾನ ದತ್ತಿಗಳಿಲ್ಲದೇ ಹೋಗಿದ್ದರೆ ಅನೇಕ ದೇವಾಲಯಗಳು ಸೊರಗಿ ಅವನತಿ ಹೊಂದುತ್ತಿದ್ದವು. ಈ ರೀತಿಯ ದಾನ ದತ್ತಿಗಳನ್ನು ಪ್ರಜೆಗಳ ಮತ್ತು ಇತರರ ತಿಳುವಳಿಗೋಸ್ಕರ ಶಾಸನ ರೂಪದಲ್ಲಿ ಕೆತ್ತಿಸಿ ನೆಡಿಸುತ್ತಿದ್ದರು.[೨೪೮]

ಪ್ರಾರಂಭದ ಶಾಸನಗಳು ಚಿಕ್ಕದಾಗಿದ್ದು ನೇರವಾದ ವಿಷಯದ ವಿವರಣೆಯನ್ನು ಹೊಂದಿವೆ. ಆದರೆ ಹತ್ತು–ಹನ್ನೊಂದನೆಯ ಶತಮಾನದ ನಂತರದ ದಾನ ಶಾಸನಗಳು ಕ್ರಮಬದ್ಧದಲ್ಲಿದ್ದು, ನಿರ್ದಿಷ್ಟವಾದ ಸ್ವರೂಪ ಪಡೆದಿರುವುದನ್ನು ಗಮನಿಸಬಹುದಾಗಿದೆ. ದಾನದ ವಿಷಯ ನಿರೂಪಣೆಯಲ್ಲಿ ದಾನವನ್ನು ಕೊಡುವ ವಸ್ತುಗಳಲ್ಲಿ ಮತ್ತು ಉದ್ದೇಶಗಳಲ್ಲಿ ವ್ಯತ್ಯಾಸ ಮತ್ತು ವೈವಿಧ್ಯವಿದ್ದರೂ ಶಾಸನಗಳಲ್ಲಿ ಪ್ರಾರಂಭದ ಬೆಳವಣಿಗೆ ಮತ್ತು ಮುಕ್ತಾಯಗಳಲ್ಲಿ ಒಂದು ವ್ಯವಸ್ಥಿತವಾದ ಕ್ರಮ ಕಂಡುಬರುತ್ತದೆ. ಅಂದಿನ ಜನಜೀವನದ ಅನುಭವ ಅವರ ಮನೋಧರ್ಮ ಮತ್ತು ಧಾರ್ಮಿಕ ಭಾವನೆಯ ವಿಕಾಸದ ಚಿತ್ರವನ್ನು ಈ ಶಾಸನಗಳ ಬೆಳವಣಿಗೆಯಲ್ಲಿ ಕಂಡುಕೊಳ್ಳಬಹುದು.[೨೪೯]

ದಾನ–ದತ್ತಿ ಕೊಟ್ಟ ವ್ಯಕ್ತಿಯು ತಾನು ಕೊಟ್ಟ ದಾನ–ದತ್ತಿಯು ಶಾಶ್ವತವಾಗಿ ಸದುಪಯೋಗವಾಗಬೇಕೆಂಬ ಉದ್ದೇಶದಿಂದ ಶಾಸನಗಳನ್ನು ಬರೆಯಿಸಿದನು. ಇಂಥ ಶಾಸನಗಳಲ್ಲಿ ದಾನ ನೀಡಿದ ವ್ಯಕ್ತಿಯ ಮತ್ತು ದಾನ ಸ್ವೀಕರಿಸಿದ ವ್ಯಕ್ತಿಯ ವಿವರಗಳಿರುತ್ತವೆ. ಭೂಮಿಯನ್ನು ದಾನವಾಗಿ ಕೊಟ್ಟಿದ್ದರೆ ಅದರ ಅಳತೆ, ಮೇರೆಗಳನ್ನು ಸಾಕ್ಷಿಗಳ ಸಹಿತವಾಗಿ ವಿವರಿಸಲಾಗುತ್ತದೆ. ದಾನದ ವಿಷಯವು ವ್ಯಾಪಾರದ ವಸ್ತುಗಳಿಗೆ ಸಂಬಂಧಪಟ್ಟಿದ್ದರೆ, ಆ ಕಾಲದ ಆರ್ಥಿಕ ಪರಿಸ್ಥಿತಿ, ಅಂದಿನ ವ್ಯಾಪಾರಗಳು, ವ್ಯಾಪಾರ ಸ್ಥಿತಿಗಳು, ಸುಂಕಗಳು, ಸುಂಕದ ವಸ್ತುಗಳು, ಸುಂಕದ ಅಧಿಕಾರಿಗಳು ಇತ್ಯಾದಿ ವಿವರಗಳು ಬರುತ್ತವೆ. ನಮ್ಮ ಪ್ರಾಚೀನ ಕರ್ನಾಟಕದ ಸಾಮಾಜಿಕ ಜೀವನವನ್ನು, ಸಂಸ್ಕೃತಿಯನ್ನು ತಿಳಿಯಲು ಶಾಸನದ ಈ ಭಾಗಗಳು ಮಹತ್ವದ ಮಾಹಿತಿಯನ್ನೊದಗಿಸುತ್ತವೆ. ಅಗ್ರಹಾರಗಳು ಅವುಗಳ ಆಡಳಿತ ವಿಧಾನ, ಯುದ್ಧ, ವೀರಮನೋಭಾವ, ಆ ಕಾಲದ ಸಾಮಾಜಿಕ ಮೌಲ್ಯಗಳು ಇತ್ಯಾದಿಗಳ ವಿವರಗಳನ್ನು ನೀಡಿ, ತನ್ನ ಉದ್ದೇಶವನ್ನು ಸಾರ್ಥಕಪಡಿಸಬೇಕೆಂದು ಶಾಸನಗಳಲ್ಲಿ ದಾನಿಯು ನಿವೇದನೆ ಮಾಡಿರುವುದನ್ನು ಗಮನಿಸಬಹುದು. ಈ ದಾನ ಶಾಸನಗಳು ಶಿಲಾಶಾಸನಗಳಾಗಿರಬಹುದು ಅಥವಾ ತಾಮ್ರ ಶಾಸನಗಳಾಗಿರಬಹುದು.

[illegible]

ಶಾಸನಗಳ ಮೇಲೆ ಇರುವ ಶಿಲ್ಪಗಳಿಂದ ಅದು ಯಾವ ಧರ್ಮ, ಪಂಥಕ್ಕೆ ಸೇರುತ್ತದೆ ಎಂಬುದು ತಿಳಿಯುತ್ತದೆ. ಪ್ರಾಚೀನ ಶಿಲಾಶಾಸನಗಳ ಮೇಲೆ ಯಾವುದೇ ಶಿಲ್ಪಗಳು ಕಂಡುಬರುವದಿಲ್ಲ. ಆದರೆ ನಂತರದ ಶಿಲಾಶಾಸನಗಳ ಮೇಲೆ ಶಿವ, ನಂದಿ, ಗರುಡ, ವಿಷ್ಣು ಮೊದಲಾದ ಶಿಲ್ಪಗಳು ಕಂಡುಬರುತ್ತವೆ. ಈ ಶಿಲ್ಪಗಳಿಂದ ಶೈವ ಶಾಸನವೋ, ವೈಷ್ಣವ ಶಾಸನವೋ, ಜೈನ ಶಾಸನವೋ ಎಂಬುದನ್ನು ಗುರುತಿಸಬಹುದಾಗಿದೆ. ಶಾಸನಗಳ ಮೇಲಿರುವ ಪ್ರಾರಂಭದ ಶ್ಲೋಕಗಳಿಂದ ಈ ಅಂಶ ಇನ್ನಷ್ಟು ಸ್ಪಷ್ಟವಾಗಿ ಅರ್ಥವಾಗುತ್ತದೆ. ಶೈವರು ಶಿವನನ್ನು, ವೈಷ್ಣವರು ವಿಷ್ಣುನನ್ನು ಮತ್ತು ಜೈನರು ಜಿನನನ್ನು ಕುರಿತು ಸ್ತುತಿ ರೂಪವಾದ ಸಂಸ್ಕೃತ ಶ್ಲೋಕಗಳಿಂದ ಶಾಸನಗಳು ಪ್ರಾರಂಭವಾಗುತ್ತವೆ. ಎಲ್ಲಾ ಶಾಸನಗಳು ಶ್ಲೋಕಗಳಿಂದಲೇ ಪ್ರಾರಂಭವಾಗುತ್ತವೆ ಎಂದು ಎನ್ನಲಾಗುವುದು. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕುಷ್ಟಗಿ ಪರಿಸರದ ದಾನ ಶಾಸನಗಳನ್ನು ಅಧ್ಯಯನ ಮಾಡಲಾಗಿದೆ.

ಶೈವ ದಾನಶಾಸನಗಳು

ಕುಷ್ಟಗಿ ಪರಿಸರದ ಶೈವ ದಾನಶಾಸನಗಳನ್ನು ವಿವೇಚಿಸುವ ಮೊದಲು ಶಾಸನಗಳಲ್ಲಿ ಶೈವಧರ್ಮ ಮತ್ತು ಅದರ ಪ್ರಾಚೀನತೆಯನ್ನು ಅವಲೋಕಿಸುವದು ಸೂಕ್ತವಾಗಿದೆ. ಸಿಂಧೂ ನಾಗರಿಕತೆಯ ನೆಲೆಗಳ ಉತ್ಖನನದಲ್ಲಿ ದೊರೆತ ಮೂರ್ತಿಗಳ ಆಧಾರದಿಂದ ಶೈವ ಧರ್ಮದ ಅಸ್ತಿತ್ವವು ಅಲ್ಲಿ ಕಂಡುಬರುತ್ತದೆ. ವೇದಗಳ ಸಾಹಿತ್ಯದಲ್ಲಿ ಶಿವ, ರುದ್ರ, ವೃಷಭ ದೇವರುಗಳ ಉಲ್ಲೇಖ ಹಾಗೆಯೇ ಶಿವನ ವಿವಿಧ ರೂಪಗಳಾದ ಪಶುಪತಿ, ತಾಂಡವಶಿವ, ನಟರಾಜ ಮತ್ತು ರುದ್ರನ ವರ್ಣನೆಗಳು ಸ್ಪಷ್ಟವಾಗಿವೆ.

ಮೌರ್ಯರ ಕಾಲದಿಂದ ಕದಂಬರ ಆರಂಭದ ಕಾಲದವರೆಗೆ ಶೈವಧರ್ಮ ಅಷ್ಟೊಂದು ಪ್ರಸಿದ್ಧಿಯಾಗಿರಲಿಲ್ಲ. ಆ ಕಾಲದಲ್ಲಿ ರಾಜಾಶ್ರಯ ಪಡೆದಿದ್ದ ಬೌದ್ಧಧರ್ಮ ಮಾತ್ರ ಪ್ರಭಾವಶಾಲಿ ಧರ್ಮವಾಗಿತ್ತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವಧರ್ಮ ರಾಜಾಶ್ರಯವನ್ನು ಪಡೆದುಕೊಂಡು ಪ್ರಮುಖ ರಾಜಧರ್ಮವಾಗಿ ಬೆಳೆಯಿತು. ಆ ಕಾಲದ ದೊರೆಗಳು, ಮಾಂಡಲೀಕರು, ಸಾಮಂತರು ಹಾಗೂ ಜನಸಾಮಾನ್ಯರು ಕೂಡ ಶೈವ ಧರ್ಮದ ದೇವಾಲಯಗಳನ್ನು ನಿರ್ಮಿಸಿ ದಾನ ದತ್ತಿಗಳನ್ನು ನೀಡಿರುವುದನ್ನು ಶಾಸನಗಳಿಂದ ತಿಳಿದುಬರುತ್ತವೆ. ಸಾಮಾನ್ಯವಾಗಿ ಶೈವ ಶಾಸನಗಳು

"ಶ್ರೀ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೇ
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ"

ಎಂಬ ಶ್ಲೋಕದೊಂದಿಗೆ ಆರಂಭವಾಗುತ್ತವೆ.

ಕುಷ್ಟಗಿ ಪರಿಸರದ ಆರು ಶಾಸನಗಳಲ್ಲಿ ಈ ಶ್ಲೋಕದ ಉಲ್ಲೇಖವಿದೆ. ಅವುಗಳು ತಾವರಗೆರೆ,[೨೫೦] ಮಾಲಗಿತ್ತಿ,[೨೫೧] ಚಳಗೇರಿ,[೨೫೨] ಗ್ರಾಮಗಳಲ್ಲಿ ತಲಾ ಒಂದೊಂದು, ಮತ್ತು ಪುರದಲ್ಲಿರುವ[೨೫೩] ಮೂರು ಶಾಸನಗಳಲ್ಲಿ ಕಂಡುಬರುತ್ತದೆ. ಇವುಗಳಲ್ಲಿ ಚಳಗೇರಿಯ ಲಕ್ಷ್ಮೀ ದೇವಾಲಯದ ಎದುರು ವೈಷ್ಣವ ಶಾಸನವಿದೆ. ಈ ಶಾಸನದ ಮೇಲ್ಭಾಗದಲ್ಲಿ ವಿಷ್ಣುವಿನ ಶಿಲ್ಪ ಸ್ಪಷ್ಟವಾಗಿದೆ. ಆದರೆ ಈ ಶಾಸನ ಶೈವ ಶ್ಲೋಕದೊಂದಿಗೆ ಆರಂಭವಾಗಿದೆ. ಕುಷ್ಟಗಿ ಪರಿಸರದಲ್ಲಿ

[illegible]

[illegible]

[illegible]

[illegible]

ಶೈವ ಧರ್ಮಕ್ಕೆ ಸಂಬಂಧಿಸಿದ ದಾನ ಶಾಸನಗಳು ಹೇರಳವಾಗಿ ಕಂಡುಬಂದಿವೆ. ಇದರಿಂದ ಈ ಭಾಗದಲ್ಲಿ ಶೈವಧರ್ಮ ಪ್ರಮುಖ ಧರ್ಮವಾಗಿತ್ತೆಂದು ತಿಳಿದುಬರುತ್ತದೆ. ಇಲ್ಲಿಯ ದಾನ ಶಾಸನಗಳು ದೇವಾಲಯ ನಿರ್ಮಾಣ, ನಿರ್ವಹಣೆ, ಕೆರೆ ನಿರ್ಮಾಣ, ವ್ಯಕ್ತಿದಾನಗಳು ಮುಂತಾಗಿ ಹಲವು ರೀತಿಯ ದಾನಗಳ ವಿಷಯವನ್ನು ಒಳಗೊಂಡಿವೆ. ಅವುಗಳನ್ನು ಧಾರ್ಮಿಕವಾಗಿ ವಿಂಗಡಿಸಿ ಈ ಕೆಳಗಿನಂತೆ ಚರ್ಚಿಸಲಾಗಿದೆ.

ಕ್ರಿ.ಶ.೧೦೨೪ರ ಗೋತಗಿ ಶಾಸನವು[೨೫೪] ಚಾಲುಕ್ಯ ಜಗದೇಕಮಲ್ಲದೇವನ(ಇಮ್ಮಡಿ ಜಯಸಿಂಹ) ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲದೇವನು ಕಲ್ಯಾಣಪುರದ ನೆಲೆವೀಡಿನಲ್ಲಿ ಆಳುತ್ತಿದ್ದಾಗ, ಅವನ ಪತ್ನಿಯಾದ ಪದ್ಮಲದೇವಿಯು 'ಕರಡಿಕಲ್ಲ-೩೦೦ರ ಬಳಿಯ ಗೋವನ್ತಿಗೆಯ ಸ್ವಯಂಭು ಕಲಿದೇವಸ್ವಾಮಿಗೆ ಕರಿಯನೆಲ ೫೪ ಮತ್ತರು ೪೫೦ ಕಮ್ಮ ಭೂಮಿಯನ್ನು, ೪೫೦ ಕಮ್ಮ ತೋಂಟವನ್ನು ಒಟ್ಟು ೫೫ ಮತ್ತರು ಭೂಮಿಯನ್ನು ದೇವರ ನೈವೇದ್ಯಕ್ಕೆ ಬಿಡುತ್ತಾಳೆ'. ಕ್ರಿ.ಶ.೧೦೮೨ರ ಅಂಟೂರತಾಣ ಶಾಸನವು[೨೫೫] ಚಾಲುಕ್ಯ ಜಗದೇಕಮಲ್ಲದೇವನ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದಲ್ಲಿ 'ಜಗದೇಕಮಲ್ಲನ ಮಹಾಮಣ್ಡಳೇಶ್ವರ ಜಗದೇಕಮಲ್ಲ ಪೆರ್ಮ್ಮಾಡಿದೇವರಸನು ಹತ್ತರತಾಣದ ಶ್ರೀಸ್ವಯಂಭುದೇವರ ಅಂಗಭೋಗ, ನೈವೇದ್ಯಕ್ಕೆ ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ಕೊಟ್ಟ ದಾನಗಳ' ಉಲ್ಲೇಖವಿದೆ. ಕ್ರಿ.ಶ.೧೧೦೪ರ ಹೆಸರೂರು ಶಾಸನವು[೨೫೬] ತ್ರಿಭುವನಮಲ್ಲನ ಕಾಲದ್ದಾಗಿದೆ. ಈ ಶಾಸನವು 'ಚಾಳುಕ್ಯರಾಯರ ಕುಲದೈವದ ಒಕ್ಕಲುಗಳು ಮಣ್ಣಕೆರೆಯ ೫೦೦ ತಂತ್ರರು, ಊರೊಡೆಯ ಪನ್ನಿರ್ವ್ವರು ಆದಿತ್ಯದೇವರ ಅಂಗಭೋಗಕ್ಕೆ, ಜೀರ್ಣೋದ್ಧಾರಕ್ಕೆ ಚಾಮೋಜನ ಮಗ ಬೊಪ್ಪಣ್ಣನಿಗೆ ಹೆಗ್ಗೆರೆಯ ಪೂರ್ವಕ್ಕೆ ನಾಲ್ಕು ಮತ್ತರು' ನೀಡಿರುವುದನ್ನು ತಿಳಿಸುತ್ತದೆ.

ಕ್ರಿ.ಶ,೧೨೨೩ರ ಮಂಕಲ್ಕೇರಿಯ ಶಾಸನವು[೨೫೭] ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲನ ಕಾಲದ್ದಾಗಿದೆ. ಈ ಶಾಸನವು 'ಉಚ್ಚಂಗಿಯ ಮಾಚಗಾವುಂಡನು ಊರ ಮುಂದಿನ ಮಲ್ಲೇಶ್ವರದೇವರ ಧೂಪದೀಪ, ನೈವೇದ್ಯಕ್ಕೆಂದು ಮೂಡಕೇರಿಯ ಬೊಮ್ಮಗಾವುಂಡನ ಎರೆಯ ಹೊಲದಲ್ಲಿ ಮೂರು ಮತ್ತರನ್ನು ಕ್ರಯಕ್ಕೆ ಪಡೆದು, ಈ ದಾನವನ್ನು ಸಂಕರಾಶಿ ಪಂಡಿತರಿಗೆ ನೀಡುತ್ತಾನೆ, ಹಾಗೇ ನಾಮಗಾವುಂಡನು ಕಬ್ಬಳ್ಳಿಯ ಗುಂಡಿನ ದಕ್ಷಿಣಕ್ಕೆ ೧ ಮತ್ತರು ಕೆಂಪು ಮಣ್ಣಿನ ಹೊಲವನ್ನು ದೇವರ ನೈವೇದ್ಯಕ್ಕಾಗಿ ಬಿಟ್ಟಿರುವ ವಿಷಯ ತಿಳಿದುಬರುತ್ತದೆ'. ಕ್ರಿ.ಶ.೧೪೪೬ರ ಪುರದ ಶಾಸನವು[೨೫೮] ಶ್ರೀವೀರಪ್ರತಾಪದೇವರಾಯನ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದಿಂದ 'ವೊಹಿಲಾಪುರದ ಆಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿ ಪ್ರತಾಪದೇವ ರಾಯನಿಗೆ ಪುಣ್ಯವಾಗಬೇಕೆಂದು ದೇವರ ನೈವೇದ್ಯಕ್ಕೆ ತ್ರಿಸಂಧ್ಯಾ ಕಾಲದಲ್ಲಿ ಶ್ರೀಸಜ್ಜನ ಶುದ್ಧ ಶಿವಾಚಾರ ಸಂಪನ್ನ ಸೋಮಯದೇವಅಯ್ಯನವರಿಗೆ ದೇವರ ನೈವೇದ್ಯಕ್ಕೆ ನೆಲ್ಲುಯಿಲ್ಲವೆಂದು ವೊಹಿಲಾಪುರದ ಹೊಲದ ಒಳಗೆ ಬನದಾಯವೆಗಳೂ ಕೆರೆಯನ್ನು ಕಟ್ಟಿಸಿರುವ ವಿಷಯ ತಿಳಿಯುತ್ತದೆ'.

ಕ್ರಿ.ಶ.೧೫೪೭ರ ಪುರದ ಶಾಸನವು[೨೫೯] ಸದಾಶಿವರಾಯನ ಕಾಲದ್ದಾಗಿದೆ. ಈ ಶಾಸನದಿಂದ 'ವೀರಸದಾಶಿವದೇವರಾಯನು ಕೃಷ್ಣಪ್ಪನಾಯಕನಿಗೆ ಅಮರ ಮಾಗಣೆಯಾಗಿ

ನೀಡಿದ ತಾವರಗೆರೆ ಸೀಮೆಯ ಪುರ ಗ್ರಾಮದಲ್ಲಿ ಸೋಮೇಶ್ವರಮಹಾಲಿಂಗಕ್ಕ ಊರಿನ ಪಶ್ಚಿಮಕ್ಕೆ ಮಡೆಹೊಲ, ಗದ್ದೆ, ಹುಣಸೆಮರಗಳು, ಸೆಟರ ಕಾಣಿಕೆ, ನಾಡ ತಳವಾರಿಕೆ, ಗವುಡ ಮಾನ್ಯದ ಹಣ, ಅಂಗಡಿ ಗಾಣ, ಮಗ್ಗ, ಸಿದ್ದಾಯ, ಕಡ್ಡಾಯ, ವೋಜರು ತರುವ ಹಣ, ಕುಂಬಾರ ತರುವ ಹಣ, ಉಪ್ಪಿನಮೋಳೆ ಮುಂತಾದ ಸಕಲ ಸುವರ್ಣಾದಾಯ ಭತ್ತದ ಆದಾಯವನ್ನು ಸಂಕ್ರಾಂತಿ ಪುಣ್ಯಕಾಲದಲ್ಲಿ ದತ್ತಿಯಾಗಿ ಬಿಟ್ಟರು. ಸದಾಶಿವರಾಯನ ಆಯುಷ್ಯಾಭಿವೃದ್ಧಿಯಾಗಬೇಕೆಂದು ಕೃಷ್ಣಪ್ಪನಾಯಕನಿಗೆ ಪುಣ್ಯವಾಗಬೇಕೆಂದು ವಿರುಪಣನಾಯಕನು ಹಸ್ತಿನಾವತಿ ವಳಿತಕ್ಕೆ ಸೇರುವ ಕೆಳವಡಿನಾಡೊಳಗೆ ಕೆಲವು ದಾನಗಳನ್ನು ನೀಡಿರುವುದು ತಿಳಿಯುತ್ತದೆ. ಪುರ ಗ್ರಾಮದ ಈಶ್ವರ ದೇವಸ್ಥಾನದ ಬಳಿಯ ಅಗಸಿಗೆ ಸೇರಿಸಿರುವ ಶಾಸನವು ಕ್ರಿ.ಶ.೧೨ನೆಯ ಶತಮಾನದ್ದಾಗಿದೆ.[೨೬೦] ಈ ಶಾಸನದಿಂದ 'ಶ್ರೀಗವರೇಶ್ವರದೇವರ ಅಂಗಭೋಗ, ರಂಗಭೋಗ, ಪಾತ್ರಪಾವುಳ, ಚೈತ್ರ ಪವಿತ್ರ ಪಂಚಪರ್ಬ್ಬ, ಮಹಾನೈವೇದ್ಯ, ಭೋಜನ ಮತ್ತು ಅತಿಥಿ, ಬ್ರಾಹ್ಮಣ ತಪೋಧನರ ನಿತ್ಯ ಆಹಾರದಾನಕ್ಕೆ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಸುಣ್ಣಕ್ಕೆ ದೇವರ ಬ್ರಹ್ಮಪುರಿಯ ಬ್ರಾಹ್ಮಣ ವೇತನಕ್ಕೆ ಹಿರಿಯಕೋಲಲ್ಲಿ ಒಂದು ಮತ್ತರು' ದಾನ ನೀಡುತ್ತಾರೆ. ಉಮ್ಮಲಗುರುಕೆ ಎಂಬ ಗ್ರಾಮವನ್ನು ತ್ರಿಭೋಗಾಭ್ಯಂತರವಾಗಿ ಅಷ್ಟಭೋಗ, ತೇಜ, ಸಾಮ್ಯಸಹಿತ ಸರ್ವ್ವನಮಸ್ಯವಾಗಿ ಶ್ರೀಗವರೇಶ್ವರದೇವರಿಗೆ ದೇವರ ಸನ್ನಿಧಾನದಲ್ಲಿ ದೇವರಾಸಿ ಪಂಡಿತರ ಕೈಯಲ್ಲಿ ಧಾರಾಪೂರ್ವಕವಾಗಿ ಧಾರೆಯನೆರೆದು ಕೊಟ್ಟರು. ಬಿಟ್ಟಿಸೆಟ್ಟಿ, ದಾಮಿಸೆಟ್ಟಿ, ಐವತ್ತೊಕ್ಕಲು ದೇವರ ದತ್ತಿಯಾಗಿ ಕಲ್ಲುದೇವರಪುರದ ಕೇರಿಯಲ್ಲಿ ಇಪ್ಪತ್ತೆರೆಡು ಕೈ, ಆರು ಕೈ ಅಗಲವ ಅಳತೆಯ ಇಪ್ಪತ್ತೈದು ಮನೆಗಳನ್ನು ಕೊಟ್ಟರು. ಈ ಶಾಸನವನ್ನು ಬರೆದವನು ಸೇನಬೋವ ಬಂಮರಸ ನರಸಿಂಹದೇವರ ಅರಮನೆಯ ಸೇನುಬೋವ ಬಸವರಸನಿಗೆ ಹಿರಿಯಕೋಲಲ್ಲಿ ಒಂದು ಮತ್ತರು, ದೇವರ ಅರಮನೆಯ ಬಡಗಿ ಕಾಳೋಜನಿಗೆ ಒಂದು ಮತ್ತರು, ಇನ್ನೊಬ್ಬ ಬಡಗಿ ಕಲ್ಲೋಜನಿಗೆ ಅರೆಮತ್ತರು, ದೇವರ ಅರಮನೆಯ ಸ್ಥಾನದವರಿಗೆ ಬಾಚಿದೇವನ ಎರೆಯಲ್ಲಿ ೫ ಮತ್ತರು ಭೂಮಿ ನೀಡುತ್ತಾರೆ. ಕೆಳವಡಿನಾಡ ಹಿರಿಯ ಬೀರವಣಿಗೆ ಕವಡಿಯ ಕೇತಿಸೆಟ್ಟಿ ಮುಂಪಾಳತ್ವವಲ್ಲಿ ಬೀರವಣಿಗರು ಬೀರವಣದಲ್ಲಿ ಒಂದು ಗದ್ಯಾಣ ಕೊಟ್ಟಿರುವ ವಿಷಯಗಳು ತಿಳಿದುಬರುತ್ತವೆ.

ಪುರ ಗ್ರಾಮದ ಸೋಮೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ.ಸು.೧೩-೧೪ನೆಯ ಶತಮಾನದ ಶಾಸನದಿಂದ[೨೬೧] 'ಸೌರಾಷ್ಟ್ರ ಸೋಮನಾಥದೇವರು ಓಹಿಲನಿಗೆ ಹಳ್ಳಿಗೆ ಹೋಗಿ ದೇಗುಲವ ಮಾಡುವುದು ಮತ್ತು ಸರಿಗೆಯ ಹೆಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ತಿಳಿಸುತ್ತಾನೆ' ಎಂದು ತಿಳಿಯುತ್ತದೆ. ಇದೇ ಗ್ರಾಮದಲ್ಲಿರುವ ಕೋಟಿಲಿಂಗೇಶ್ವರ ದೇವಾಲಯದ ಬಳಿಯ ಅಗಸಿಯ ಗೋಡೆಗೆ ಸೇರಿಸಿರುವ ಕ್ರಿ.ಶ.ಸು.೧೨-೧೩ನೆಯ ಶತಮಾನದ ಶಾಸನವು[೨೬೨] 'ಗವರೇಶ್ವರದೇವರ ಪೂಜೆ ಪುನಸ್ಕಾರಕ್ಕೆ ನೈವೇದ್ಯಕ್ಕೆ ೧ ಗಾಣವನ್ನೂ ಗಾಣಿಗರು ನಂದಾ ದೀಪಕ್ಕೆಂದು ಸೊಳಸಿಗೆ ಎಣ್ಣೆಯನ್ನು, ದವಸ, ಅಡಿಕೆ, ಅರಶಿನ, ಮೆಣಸಿನ ಮೇಲಿನ ತೆರಿಗೆಯನ್ನೂ ಕೊಟ್ಟರು. ಬಸವರಸ, ಅಯ್ಯಪರಸ, ಕೇಶವದೇವ, ಹದಿನೈದು ಸಮಯದವರು, ಮುಂಮರಿದಂಡಗಳು ಮತ್ತು ಪ್ರಜೆಗಳು ಸಂಕ್ರಮಣದಲ್ಲಿ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಈ

ಮೇಲೆ ವಿವರಿಸಿದ ಎಲ್ಲ ದಾನ ಶಾಸನಗಳು ದೇವಾಲಯಗಳಿಗೆ ಮತ್ತು ದೇವಾಲಯಕ್ಕೆ ಸಂಬಂಧಪಟ್ಟವರಿಗೆ ನೀಡಿದ ಬಗ್ಗೆ ಕುಷ್ಟಗಿ ತಾಲ್ಲೂಕಿನ ಶೈವ ಶಾಸನಗಳಲ್ಲಿ ಉಲ್ಲೇಖಗಳಿವೆ.

ಕ್ರಿ.ಶ.೧೧೧೮ರ ಪುರ ಗ್ರಾಮದ ಸೋಮಶೇಖರಯ್ಯನವರ ಹೊಲದಲ್ಲಿನ ಶಾಸನವು[೨೬೩] ಚಾಳುಕ್ಯ ಜಗದೇಕಮಲ್ಲನ ಕಾಲದ್ದಾಗಿದೆ. 'ಅಗ್ರಹಾರ ಬೈಳನೆಗೆಯೂರಿನ ಮುಖ್ಯಸ್ಥನಾದ ಕೊಣ್ಡ ಯವಾರಿ ಅಯ್ಯಣಯ್ಯನಿಗೆ ಪಂಪಾತೀರ್ಥದ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ೫ ಮತ್ತರು ಗದ್ದೆಯನ್ನು ಮತ್ತು ಅಲ್ಲಿನ ೧೨ ಜನ ಬ್ರಾಹ್ಮಣರಿಗೆ, ಮೂಲಸ್ಥಾನ ದೇವರಿಗೆ ದಾನವನ್ನು ನೀಡಿದ ಬಗ್ಗೆ ತಿಳಿಸುತ್ತದೆ'. ಕ್ರಿ.ಶ.೧೦೪೫ರ ಗೋತಗಿ ಗ್ರಾಮದ ನಾಗಕನ್ನಿಕಾ ದೇವಾಲಯದಲ್ಲಿನ ಶಾಸನವು[೨೬೪] ಕಲ್ಯಾಣದ ಚಾಳುಕ್ಯರಾಜ ತ್ರೈಳೋಕ್ಯಮಲ್ಲನ ಕಾಲದ್ದಾಗಿದೆ. ಈ ಶಾಸನದಿಂದ 'ತ್ರೈಳೋಕ್ಯಮಲ್ಲನು ಮೊರಗನೂರ ಬೀಡಿನಲ್ಲಿದ್ದಾಗ ಎಡದೊರೆ-೨೦೦೦ದ ಕಂಪಣ ಕರಡಿಕಲ್ಲು-೩೦೦ರ ಬಳಿಯ ಗೋವನ್ತಿಗೆಯಲ್ಲಿ ಚಾಮುಣ್ಡಭಟ್ಟೋಪಾಧ್ಯಾಯನಿಗೆ ೩೦೦ ಮತ್ತರು ಕರಿಯ ಭೂಮಿಯನ್ನು ಮಾನ್ಯ'ವಾಗಿ ನೀಡಿರುವ ಸಂಗತಿ ತಿಳಿಯುತ್ತದೆ.

ಕ್ರಿ.ಶ.೧೧೯೯ರ ಹನುಮನಾಳ ಗ್ರಾಮದ ಚಾವಡಿಯಲ್ಲಿರುವ ಶಾಸನವು[೨೬೫] ತ್ರಿಭುವನ ಮಲ್ಲನ ಕಾಲದ್ದಾಗಿದೆ. ಈ ಶಾಸನವು 'ವೀರಬಣಂಜು ಧರ್ಮಕ್ಕೆ ಸೇರಿದ ಮಲೆಯರ ಸಿಂಗಿಸೆಟ್ಟಿ, ಕೇತಿಸೆಟ್ಟಿ, ರೇವಯಗೇತಿಸೆಟ್ಟಿ, ಮಂಗಲದ ಕಲೆಯ ಬಾಚಿಸೆಟ್ಟಿ, ಬಾದಾಮಿಯ ಬಾತಿದೇವಸೆಟ್ಟಿ, ಹಾವರಿಯ ಹೆಚಿಸೆಟ್ಟಿ, ತಿಳಿವಳ್ಳಿಯ ಕಲಿಯಮ್ಮಸೆಟ್ಟಿ, ಮೊತ್ತಕಾರ ಸಿರಿಯಸೆಟ್ಟಿ, ಕಾರಿಯ ಕೇತಿಸೆಟ್ಟಿ, ಕೆರುವೂರು ಎಡವಂಚಟ್ಟಿಸೆಟ್ಟಿ, ಸಿಗ್ಗಾವೆಯ ಭರವೆಸೆಟ್ಟಿ, ನಿಟ್ಟಸಿಂಗಿಯ ಬಬ್ಬುಳಸಿರಿಸೆಟ್ಟಿ, ಹೊರಿಸೆಟ್ಟಿ, ಹುದ್ದಮನ ಸೊವಿಸೆಟ್ಟಿ, ಗಾಂಚಿವೂರ ಆರಿಯಪಲಸೆಟ್ಟಿ, ರಾಜವೂರ ನಾಗುಲಸೆಟ್ಟಿ, ಚಾಮುಣ್ಡಯ್ಯಸೆಟ್ಟಿ ಮುಂತಾದವರಲ್ಲದೆ ತಂಬುಲಿಗ ಸಾಸಿರ್ವ್ವರು, ಗವರಿಯರು, ಗಾತ್ರಿಗರು, ಅಶೇಷ ಸೆಟ್ಟಿಗಳು ಸೇರಿ ಕಿಸುಕಾಡೆಪ್ಪತ್ತರ ಬಳಿಯ ಬಾಡದ ಆಲುಂಗೆರೆಯ ಸಿಂಗಗಾಮುಂಡನು ಬಹುಶಃ ತಂಬುಲಿಗ ಸಾಸಿರ್ವ್ವರ ಎತ್ತು ಮುಂತಾದವನ್ನು ಕಳ್ಳರಿಂದ ಬಿಡಿಸಿ ತಂದಾಗ ಅವನಿಗೆ ದಾನ ನೀಡಿದಂತೆ ತಿಳಿಯುತ್ತದೆ'.

ಕ್ರಿ.ಶ.೧೧೧೦ರ ಸಿರಗುಪ್ಪ ಗ್ರಾಮದ ಹನುಮಂತ ದೇವರ ಗುಡಿಯ ಬಲಕ್ಕೆ ನೆಟ್ಟಿರುವ ವೀರಗಲ್ಲಿನ ಮೇಲಿರುವ ಶಾಸನವು[೨೬೬] 'ಸಿರಿಗೊಪ್ಪದ ರಾಚಮಗಾವುಣ್ಡ, ನಿರಮೊಪ್ಪ ಆಚಗಾವುಣ್ಡನು ಇದ್ದಾಗ ತುರುಗಳ್ಳರೊಡನೆ ಹೋರಾಡಿ ತಳಾರಿ ಕಾಳಬೋವನು ಮಡಿಯುತ್ತಾನೆ. ಇವನ ಮಗ ಬಮ್ಮಪನಿಗೆ ಹೊಲ ಹಾಗೂ ಮನೆಯನ್ನು ಮಾನ್ಯ'ವಾಗಿ ನೀಡಿರುವುದನ್ನು ತಿಳಿಸುತ್ತದೆ. ಕ್ರಿ.ಶ.೧೫೪೭ರ ತಾವರಗೆರೆಯ ವೀರಭದ್ರ ದೇವಾಲಯದ ಬಳಿ ಇರುವ ಶಾಸನವು[೨೬೭] ಸದಾಶಿವದೇವರಾಯನ ಕಾಲದ್ದಾಗಿದೆ. 'ಸದಾಶಿವದೇವರಾಯನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಜದೇವನು ತಾವರಕೆರೆಯ ತಿಂಮೋಜ, ಕೊಂಡೋಜ, ಭದ್ರೋಜ ಇವರ ಬಿನ್ನಹವನ್ನು ಕೇಳಿ ತಾವರಕೆರೆಯ ಸೀಮೆಯ ೧೩೦ ಗ್ರಾಮಗಳ ಕ್ಷೌರಿಕರಿಗೆ ಅಂಗು ಪನ್ನು ಬಿಟ್ಟ ಬಿರಾಡ ಎಲ್ಲವನ್ನು ಮನ್ನಾ' ಮಾಡಿದ ಉಲ್ಲೇಖವಿದೆ.

ವೈಷ್ಣವ ದಾನಶಾಸನಗಳು

ಕುಷ್ಟಗಿ ಪರಿಸರದ ವೈಷ್ಣವ ದಾನಶಾಸನಗಳನ್ನು ವಿವೇಚಿಸುವ ಮೊದಲು ವೈಷ್ಣವ ಧರ್ಮದ ಪ್ರಾಚೀನತೆಯನ್ನು ಅವಲೋಕಿಸುವದು ಸೂಕ್ತವೆನಿಸುತ್ತದೆ. ಪ್ರಾಚೀನ ಭಾರತದಲ್ಲಿ ಹಿಂದೂ ಧರ್ಮ ಹುಟ್ಟಿಬೆಳೆದುದರ ಜೊತೆಯಲ್ಲೇ ವೈಷ್ಣವ ಧರ್ಮ(ಭಾಗವತ)ದ ಉಗಮವನ್ನು ಕಾಣುತ್ತೇವೆ. ವೈದಿಕಯುಗದಲ್ಲಿ ಆರ್ಯರು ವಿಷ್ಣುವಿಗೆ ನೀಡಿದ ಮಹತ್ವ ಇವನನ್ನು ಪ್ರಧಾನ ದೇವತೆಗಳ ಸಾಲಿನಲ್ಲಿ ನಿಲ್ಲಿಸಿತು. ಈ ಯುಗದಲ್ಲಿ ವಿಷ್ಣು ಮೂರು ಹೆಜ್ಜೆಗಳಿಂದ ಆಕಾಶವನ್ನು ಆಕ್ರಮಿಸಿ ತ್ರಿವಿಕ್ರಮನಾಗಿರುವನು. ಪೌರಾಣಿಕ ಯುಗದಲ್ಲಿ ವಿಷ್ಣು ವಾಮನನಾಗಿ ಬಂದು ಬಲಿಯಿಂದ ಮೂರುಪಾದ ಭೂಮಿಯನ್ನು ಬೇಡಿ ಅವನನ್ನು ಪಾತಾಳಕ್ಕೆ ಮೆಟ್ಟಿದನೆಂಬ ಕಥೆ ರೂಢಿಯಲ್ಲಿ ಬಂದಿತು.[೨೬೮] ಬ್ರಾಹ್ಮಣ ಉಪನಿಷತ್ತುಗಳ ಕಾಲದಲ್ಲಿ ವೈಷ್ಣವ ಧರ್ಮ ಹೆಚ್ಚಾಗಿ ಬೆಳೆಯಿತು.

ಭಾರತದಲ್ಲಿ ಮೊಟ್ಟಮೊದಲು ವೈಷ್ಣವ ಧರ್ಮದ ಉಗಮದ ಅವಶೇಷವನ್ನು ಮಧ್ಯಪ್ರದೇಶದ ವಿದಿಷಾದಲ್ಲಿ ಕ್ರಿ.ಪೂ.೨ನೆಯ ಶತಮಾನದ ಹೆಲಿಯೋಡೊರಸ್ ಎಂಬ ಗ್ರೀಕ್ ರಾಯಭಾರಿಯು ವಿಷ್ಣುವಿನ ಪ್ರತ್ಯರ್ಥವಾಗಿ ಒಂದು ಸ್ತಂಭವನ್ನು ಸ್ಥಾಪಿಸಿದನು.[೨೬೯] ಕುಶಾನರ ಕಾಲದಲ್ಲಿ ಕೆಲವು ಅರಸರು ವಿಷ್ಣುವಿನ ಆರಾಧಕರಾಗಿದ್ದರು. ಮೌರ್ಯರ ನಂತರ ಪ್ರಮುಖ ಅರಸುಮನೆತನ ಶಾತವಾಹನರದು. ಇವರು ವೈಷ್ಣವ ದೇವರುಗಳನ್ನು ಪೂಜಿಸುತ್ತಿದ್ದರು. ನಂತರ ಗುಪ್ತರ ಕಾಲದಲ್ಲಿಯೂ ವಿಷ್ಣು ಪ್ರಮುಖ ದೇವತೆಯಾದನು. ಕ್ರಿ.ಶ.೬ನೆಯ ಶತಮಾನದ ವೇಳೆಗೆ ವಿಷ್ಣು ತ್ರಿಮೂರ್ತಿಗಳಲ್ಲಿ ಒಬ್ಬನಾದನು. ವಿಷ್ಣು ಪೂಜೆಯು ಪ್ರಚಾರಗೊಳ್ಳಲು ಹಲವು ಗ್ರಂಥಗಳು ಬರೆಯಲ್ಪಟ್ಟವು. ಅವುಗಳಲ್ಲಿ 'ಭಾಗವತ ಪುರಾಣವು' ಶ್ರೇಷ್ಠ ಗ್ರಂಥವಾಗಿದೆ.[೨೭೦]

ಕನ್ನಡದ ಮೊಟ್ಟಮೊದಲ ಅರಸು ಮನೆತನವಾದ ಕದಂಬ ಮನೆತನದವರು ಕ್ರಿ.ಶ. ೪ನೆಯ ಶತಮಾನದಲ್ಲಿ ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿದರು. ಕನ್ನಡದ ಅತ್ಯಂತ ಪ್ರಾಚೀನ ಶಾಸನವೆಂದು ಪರಿಗಣಿತವಾದ ಹಲ್ಮಿಡಿ ಶಾಸನವು ಇವರ ಕಾಲದ್ದಾಗಿದೆ. ಈ ಹಲ್ಮಿಡಿ ಶಾಸನಪಾಠವು 'ಲಕ್ಷ್ಮೀಸಹಿತ ಧನುರ್ಧಾರಿ ಅಚ್ಯುತನು ದುಷ್ಟರಿಗೆ ಯುಗಾಂತದ ಅಗ್ನಿಯಂತೆಯು ಶಿಷ್ಟರಿಗೆ ಆಹ್ಲಾದಕರವಾಗಿಯೂ ಇರುವನೆಂದು' ಸ್ತುತಿಸಿದೆ. ಈ ಹೊತ್ತಿಗಾಗಲೇ ಕರ್ನಾಟಕದಲ್ಲಿ ವೈಷ್ಣವ ಧರ್ಮ ವ್ಯಾಪಕವಾಗಿ ಹರಡಿತ್ತೆಂದು ಹೇಳಬಹುದು. ನಂತರ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಕಾಲಗಳಲ್ಲಿ ಪ್ರಮುಖ ಧರ್ಮಗಳಲ್ಲಿ ಒಂದಾಗಿತ್ತು.

ಕರ್ನಾಟಕದ ದಕ್ಷಿಣ ಭಾಗದಲ್ಲಿ ರಾಮಾನುಜರ ಆಗಮನದಿಂದ ಹಾಗೂ ಅವರ ಬೆಂಬಲದಿಂದ ವೈಷ್ಣವ ಧರ್ಮ ವೃದ್ಧಿಸುತ್ತಾ ಬಂದಿತು. ಕ್ರಿ.ಶ.೧೨ನೆಯ ಶತಮಾನದಲ್ಲಿ ರಾಮಾನುಜರು ಕರ್ನಾಟಕಕ್ಕೆ ಬಂದಾಗ ಮತ್ತು ಕ್ರಿ.ಶ.೧೩ನೆಯ ಶತಮಾನದಲ್ಲಿ ಮಧ್ವಾಚಾರ್ಯರು ತಮ್ಮ ಮತ ಪ್ರಚಾರ ಕೈಗೊಂಡು ವೈಷ್ಣವ ಧರ್ಮ ಕನ್ನಡ ನಾಡಿನ ಸಮಾಜ, ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಯ ಮೇಲೆ ಕ್ರಮೇಣ ತನ್ನ ಮುದ್ರೆಯನ್ನೊತ್ತಿತು.[೨೭೧]

ಸಾಮಾನ್ಯವಾಗಿ ವೈಷ್ಣವ ಶಾಸನಗಳು

"ಜಯತ್ಯಾ ವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ"

ಎಂಬ ಶ್ಲೋಕದೊಂದಿಗೆ ಆರಂಭವಾಗುತ್ತವೆ. ಕುಷ್ಟಗಿ ಪರಿಸರದಲ್ಲಿ ಈವರೆಗೆ ದೊರೆತಿರುವ ಶಾಸನಗಳಲ್ಲಿ ಈ ಶ್ಲೋಕದ ಉಲ್ಲೇಖ ಕಂಡುಬಂದಿಲ್ಲ. ಈ ಪರಿಸರದಲ್ಲಿ ಎರಡು ವೈಷ್ಣವ ಶಾಸನಗಳು ಇವೆ. ಚಳಗೇರಿ ಮತ್ತು ಪುರ್ತಗೇರಿಯಲ್ಲಿ ತಲಾ ಒಂದೊಂದರಂತೆ ಕಂಡುಬಂದಿವೆ. ಇವುಗಳಲ್ಲಿ ಚಳಗೇರಿಯಲ್ಲಿರುವುದು ಪ್ರಕಟಿತ ಶಾಸನ[೨೨೨] ಪುರ್ತಗೇರಿಯ ಸೋಮನಾಥ ದೇವಾಲಯದ ಎಡಭಾಗದಲ್ಲಿ ಅಪ್ರಕಟಿತ ಶಾಸನವಿದೆ.[೨೨೩] ಈ ಶಾಸನದ ಅಕ್ಷರಗಳು ಸಂಪೂರ್ಣವಾಗಿ ಸವೆದಿವೆ. ಶಾಸನಶಿಲ್ಪ ಮಾತ್ರ ಸ್ಪಷ್ಟವಾಗಿದೆ. ಕ್ರಿ.ಶ.೧೧೭೨ರ ಚಳಗೇರಿ ಶಾಸನವು[೨೨೪] ಕಲಚುರಿಚಕ್ರವರ್ತಿ ರಾಯಮುರಾರಿ ಸೋವಿದೇವನ ಕಾಲದ್ದಾಗಿದೆ. ಈ ಶಾಸನದಲ್ಲಿ 'ಬೂಚಮದಂಡನಾಯಕನು ಕಲ್ಲಂಗೆರೆಯಲ್ಲಿ ಲಕ್ಷ್ಮೀನಾರಾಯಣ ದೇವಾಲಯ ವನ್ನು ಕಟ್ಟಿಸುತ್ತಾನೆ. ಈ ದೇವಾಲಯಕ್ಕೆ ಲಕ್ಷ್ಮೀದೇವ ದಂಡನಾಯಕನ ಅನುಮತಿ ಪಡೆದು ಭೂಮಿಯನ್ನು ಕ್ರಯವಾಗಿ ಪಡೆದು ದಾನ ನೀಡುತ್ತಾನೆ. ಈ ದೇವಾಲಯದ ಚೈತ್ರಪವಿತ್ರಕ್ಕೆ, ಪೂಜಾರಿಗೆ, ನಂದಾದೀವಿಗೆ ಮುಂತಾದವಕ್ಕೆ ನಖರಗಳು, ಸಮಸ್ತ ಪ್ರಜೆಗಳು, ಸುಂಕದಧಿಕಾರಿ ಸೋಮಸಿವಭಟ್ಟ, ಎಲೆಯ ಸಾಸಿರ್ವರು ಮುಂತಾದವರು ವಿವಿಧ ದಾನ ನೀಡಿರುತ್ತಾರೆ ಭೂಮಿಯನ್ನು ಅನೇಕ ಬ್ರಾಹ್ಮಣರಿಗೆ ಹಂಚಿರುವ ವಿವರ ತಿಳಿಯುತ್ತದೆ'.

ಜೈನ ದಾನಶಾಸನಗಳು

ಭಾರತದಲ್ಲಿ ಜೈನ ಪರಂಪರೆಯು ಅತಿ ಪ್ರಾಚೀನವಾದುದು. ಆರ್ಯರು ಭಾರತಕ್ಕೆ ಬರುವ ಮೊದಲೆ ಜೈನಧರ್ಮ ಆಸ್ತಿತ್ವದಲ್ಲಿತ್ತೆಂದು ಹರಪ್ಪ ಮತ್ತು ಮಹೆಂಜೋದರೊಗಳಲ್ಲಿ ದೊರೆತ ಅವಶೇಷಗಳಿಂದ ಸಿದ್ಧವಾಗಿದೆ.[೨೨೫] ಯಜುರ್ವೇದದಲ್ಲಿ ವೃಷಭ, ಸುಪಾರ್ಶ್ವ ಮತ್ತು ನೇಮಿನಾಥ ತೀರ್ಥಂಕರರ ಉಲ್ಲೇಖವಿದೆ. ಹಾಗೆಯೇ ಋಗ್ವೇದದಲ್ಲಿ "ಅರಿಷ್ಟನೇಮಿಃ ಸ್ವಸ್ತಿನೋಬ್ರಹ ಸ್ಪತಿರ್ದಧಾತು" ಎಂದು ಹೇಳಿದೆ. ಭಾಗವತದಲ್ಲಿ ವೃಷಭ ತೀರ್ಥಂಕರರ ವರ್ಣನೆಯು ಜೈನ ಪರಂಪರೆಗೆ ಅನುಗುಣವಾಗಿದೆ.

ಈ ಧರ್ಮವು ಕ್ರಿ.ಪೂ.೩ನೆಯ ಶತಮಾನದ ಸುಮಾರಿಗೆ ಪ್ರಾಚೀನ ಕರ್ನಾಟಕದಲ್ಲಿ ಒಂದು ಪ್ರಬಲವಾದ ಧರ್ಮವಾಗಿತ್ತು. ಕರ್ನಾಟಕವು ಪ್ರಾಚೀನ ಕಾಲದಿಂದ ಜೈನಧರ್ಮದ ವಾಸಸ್ಥಾನವಾಗಿದ್ದು ಕರ್ನಾಟಕದ ಪ್ರಸಿದ್ಧ ಅರಸು ಮನೆತನಗಳಾದ ಕದಂಬರ, ಗಂಗರ, ಬಾದಾಮಿ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಆಡಳಿತ ಅವಧಿಯಲ್ಲಿ ಜೈನ ಧರ್ಮವು ಮೇಲುಗೈಯನ್ನು ಸಾಧಿಸಿ ಇಲ್ಲಿ ಭದ್ರಬುನಾದಿಯನ್ನು ಹಾಕಿತು. ನಂತರ ಬಂದ ಕಲ್ಯಾಣ ಚಾಳುಕ್ಯ ಅರಸರು ಹಾಗೂ ಹಳೇಬೀಡಿನ ಹೊಯ್ಸಳರು ಜೈನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಕ್ರಿ.ಶ.೧೪ನೆಯ ಶತಮಾನದ ಅವಧಿಯಲ್ಲಿ ಆಡಳಿತ ನಡೆಸಿದ ವಿಜಯನಗರದ ಅರಸರು ಪರಮತ ಸಹಿಷ್ಣುತೆ ತೋರಿ ಜೈನ ಧರ್ಮಕ್ಕೆ ಆಶ್ರಯ ನೀಡಿದರು.

ಕರ್ನಾಟಕದ ಜೈನ ಧರ್ಮದ ಪ್ರಮುಖ ಸ್ಥಳಗಳಲ್ಲಿ ಕೊಪ್ಪಳದ ಪ್ರದೇಶವು ಒಂದಾಗಿತ್ತು. ಜಿಲ್ಲೆಯಾದ್ಯಂತ ಜೈನಧರ್ಮದ ಕುರಿತು ಅನೇಕ ಶಾಸನಗಳು ದೊರೆತಿವೆ. ಸಾಮಾನ್ಯವಾಗಿ ಜೈನ ಧರ್ಮದ ಶಾಸನಗಳು,

"ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ
ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ"

ಎಂಬ ಶ್ಲೋಕದೊಂದಿಗೆ ಆರಂಭವಾಗಿರುತ್ತವೆ. ಕುಷ್ಟಗಿ ತಾಲ್ಲೂಕಿನ ಚಳಗೇರಿ[೨೭೬] ಮತ್ತು ಅಂಟೂರತಾಣ[೨೭೭]ದಲ್ಲಿ ತಲಾ ಒಂದೊಂದರಂತೆ ಒಟ್ಟು ಎರಡು ಶಾಸನಗಳು ಕಂಡುಬಂದಿವೆ. ಕ್ರಿ.ಶ.೧೨೬೭ರ ಅಂಟೂರತಾಣ ಗ್ರಾಮದ ಶಾಸನವು ಮಹಾದೇವ ಚಕ್ರವರ್ತಿಯ ಕಾಲದ್ದಾಗಿದೆ. ಇಂಗಳೇಶ್ವರದ ಬಳಿಯ ಮಹಾಪ್ರಧಾನಿ ತಿಪ್ಪರಸನ ಹೆಂಡತಿ ಗೋಣಮದೇವಿಯ ಸೋದರಳಿಯ ಮಾರಸೆಟ್ಟಿಮಯ್ಯ ದಾನ ನೀಡಿದ ಬಗ್ಗೆ, ಪದುಮಿಸೆಟ್ಟಿಯರು ಮಾಯಿಸೆಟ್ಟಿಯರಿಗೆ, ಬಸದಿಯ ೨೪ ತೀರ್ಥಂಕರರ ಪ್ರತಿಮೆಗಳ ಮಂಗಳಕ್ಕಾಗಿ ದಾನ ನೀಡಿದ ಬಗ್ಗೆ ಉಲ್ಲೇಖವಿದೆ. ದಾನದ ವಿವರ ಸ್ಪಷ್ಟವಾಗಿಲ್ಲ. ಕ್ರಿ.ಶ.೧೨ನೆಯ ಶತಮಾನದ ಚಳಗೇರಿಯಲ್ಲಿರುವ ಶಾಸನವು ತ್ರುಟಿತಗೊಂಡಿದೆ.

೩.೧೫. ಶಾಸನ ಸಾಹಿತ್ಯ

ಶಾಸನಗಳನ್ನು ವಿದ್ಯಾವಂತರು ಹಾಗೂ ಕವಿಗಳು ಬರೆದಿರುವುದರಿಂದ ಈ ಶಾಸನಗಳನ್ನು ಶುದ್ಧ ಸಾಹಿತ್ಯ ಕೃತಿಗಳಂತೆಯೇ ಸಾಹಿತ್ಯ ಅಂಶಗಳಿಂದ ಕೂಡಿವೆ. ಕರ್ನಾಟಕದ ಎಷ್ಟೋ ಶಾಸನಗಳು ಗದ್ಯ ಮತ್ತು ಪದ್ಯರೂಪದಲ್ಲಿವೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿರುವ ಗದ್ಯರೂಪ, ಪದ್ಯರೂಪದ ವರ್ಣನೆ, ವೃತ್ತಗಳು ಮತ್ತು ಕಂದಪದ್ಯ ರೂಪಗಳನ್ನು ವಿವರಿಸಲಾಗಿದೆ.

ವರ್ಣನೆಗಳು

ಶಾಸನಗಳಲ್ಲಿ ನಾಡಿನ ಪ್ರಕೃತಿ ವರ್ಣನೆಗಳು ಕಂಡುಬರುತ್ತವೆ. ಶಾಸನಗಳು ನಿಸರ್ಗದ ಚಲುವನ್ನು ತನ್ನದೇ ಆದ ಶೈಲಿಯಲ್ಲಿ ವರ್ಣಿಸುತ್ತವೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಪ್ರಕೃತಿ ಸೌಂದರ್ಯದ ಸೊಬಗು ಕಂಡುಬರುತ್ತದೆ. ಹೆಸರೂರಿನಲ್ಲಿರುವ ಕ್ರಿ.ಶ.೧೧೦೪ರ ಶಾಸನದಲ್ಲಿ

"ಸಮಸ್ತ ಗುಣಗಣಾಳಂಕ್ರಿತ ಚಾರುಚಾರಿತ್ರ ನಯವಿನಯ ಗುಣಸೀಳ (ಸಂ)
ಪನ್ನರು ಸುಜನಪ್ರಸನ್ನರು ಚೋಳ ಲಾಳ ಮಾಳವ
ಕಳಿಂಗ ಕಾಸ್ಮೀರ ಮಗಧ ಗು(ರ್ಜ್ಜರ)
ಗೊಲ್ಲ ಬರ್ಬ್ಬರ ಕೊಂಕಣಾದಿ ಸಮಸ್ತ ನಿಪ್ರಲಲಾಟ ಸೇಂಧೂರ ಮುದ್ರಾಂಕಿತ ಹ. .
ರು ದುರ್ಜ್ಜನ ಭಯಂಕರರು ಚಾಳುಕ್ಯ ಕಂಣ್ಠೀರವಂಗೆ ಮಲಪಕಂಣ್ಠೀಕರಂ ಲೋಕಾ. .
ಮಾತ್ರದೋಳ್ ನಿಂಕಮಾರ್ಪ್ಪ ಬಲ್ಲಾಳುಗಳು"[೨೭೮]

ಎಂದು ವರ್ಣಿಸಲಾಗಿದೆ. ಮಾಲಗಿತ್ತಿಯಲ್ಲಿರುವ ಕ್ರಿ.ಶ.ಸು.೧೩ನೆಯ ಶತಮಾನದ ಶಾಸನದಲ್ಲಿ

"ಆ ನಾಡೊಳು ಮಾಲಗೆರೆ ದಾನಿಗಳಿದ್ದಿ. . . . .

ದ ನನ್ದನ ವನದಿಂ ಬೆಳದೊರಗಿದ ಗನ್ಧಶಾಳಿಯಿಂ ಪೂಗೊಳದಿ ಗಿಳಿಯ ಮ. . .

ರ್ಣ್ಣ ಚಂದ್ರ ಬಲದಿಂ ಪದಿನರ. . ವಭೂತಳದೊಳಗತ್ಯ. . . "[೨೭೯] ಎಂದು ಉಲ್ಲೇಖವಿದೆ. ಮಾಲಗೆರೆ ನಂದನವನವಿತ್ತು. ಅದ್ಭುತವಾಗಿ ಬೆಳೆದ ಗಂಧಶಾಳಿ ಎಂಬ ಬೆಳೆ ಇತ್ತು. ಹೂವಿನ ಕೊಳಗಳಿದ್ದವು. ಅಲ್ಲಿ ಗಿಳಿವಿಂಡವಿತ್ತು. ಇಂಥ ಪುಣ್ಯದ ನಾಡೇ ನಾಡು. ಮುಂದಿನ ಪದ್ಯಭಾಗ ಅಸ್ಪಷ್ಟವಾಗಿದೆ. ಈ ಪದ್ಯದಿಂದ ಪಂಪ ಮಹಾಕವಿ ಬನವಾಸಿ ನಾಡಿನ ವರ್ಣನೆಯನ್ನು ನೆನಪಿಸುತ್ತದೆ. ಈ ಭಾಗದಲ್ಲಿ ವಿಶೇಷವಾಗಿ ಗಂಧಶಾಳಿ ಎಂಬ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.

ಶಾಸನಗಳಲ್ಲಿ ಸಾಮಾನ್ಯವಾಗಿ ಅರಸ, ದಂಡನಾಯಕ, ಸಾಮಂತ ಹಾಗೂ ರಾಣಿಯರ ವರ್ಣನೆಗಳಿರುತ್ತವೆ. ಶಾಸನಗಳ ರಚನೆಕಾರ ತಮಗೆ ಆಶ್ರಯ ನೀಡಿದ ವ್ಯಕ್ತಿಗಳ ಗುಣಗಾನವನ್ನು ಶಾಸನಗಳಲ್ಲಿ ಉಲ್ಲೇಖಿಸಿರುತ್ತಾನೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ವರ್ಣನೆಗಳು, ಶಾಸನಗಳ ಆರಂಭದಲ್ಲಿ ಆಯಾಕಾಲದ ಅರಸರ ಹೆಸರನ್ನು ಬಿರುದುಗಳೊಂದಿಗೆ ಉಲ್ಲೇಖಿಸಿರುವುದು ಕಂಡುಬರುತ್ತವೆ.

ಗದ್ಯರೂಪ

ಕುಷ್ಟಗಿ ತಾಲ್ಲೂಕಿನಲ್ಲಿರುವ ಎಲ್ಲ ಶಾಸನಗಳು ಗದ್ಯರೂಪದಲ್ಲಿವೆ. ಅಂಟೂರಠಾಣ ದಲ್ಲಿರುವ ಕ್ರಿ.ಶ.೧೦೯೫ರ ಶಾಸನದಲ್ಲಿ

"ಸ್ವಸ್ತಿ ಸಮಸ್ತ ಜನತ್ತ್ರ ಸೂತೇ ಭಗವತೋ ಬ್ರಹ್ಮಣ: ಪುತ್ರಸ್ಸಾತ್ರೇಣ್ಯಾತ್ರ ಸ
ಮುತ್ಪನ್ನಸ್ಯ ಯಾಮಿನಿ ಕಾಮಿನಿ ಲಲಾಮ ಭೂತಸ್ಯ ಸೋಮಮ
ಸ್ಯಾನ್ವಯ ತ್ಯಾಗ ಶೌರ್ಯ್ಯಾದಿ ಗುಣನಿಳಯಂ ಕೇವಳನದೇಧ್ವಜನಿ ಜ ಪಕ್ಷ
ಪಿತ ಪ್ರತಿಪಕ್ಷ ಕ್ಷೀತಿಶವಂಶ ಶೃಮಾನಸ್ತಿ ಚಾಳುಕ್ಯ ವಂಶ:"[೨೮೦] ಎಂದು ಉಲ್ಲೇಖವಿದೆ.

ಪುರದಲ್ಲಿರುವ ಕ್ರಿ.ಶ.ಸು.೧೪-೧೫ನೆಯ ಶತಮಾನದ ಶಾಸನದಲ್ಲಿ

"ತ್ರೈಳೋಕ್ಯವಿಜಯ ಭೂಶಣನಪ್ಪ ಸೌರಾಷ್ಟ್ರ ಸೋಮನಾಥದೇವ ಓಹಿಲಂಗೆ
ಕೊ(ಟ್ಟ) ಕೆಲಸ ಹಲಿಯ ಹೆಕ್ಕು ದೇಗುಲವ ಮಾಡುವದು ಸರಿಗೆಯ
ಹೆಕು ಕೆರೆಯನಗಳುವು (ದು) ಬಾಗಿಲಿಲ್ಲದ ಕೋಟೆ ಸಂಸಾರಕೆ ತೆರಹುಗಡೆವೇಡೆ
ಓಹಿಲ ಮಾಡಿಸಿದ ಕೊಟಲಿಂಗಕ್ಕೆ ತ್ರಿಕಾಲ ಮಜ್ಜನಕ್ಕೆ ಎರದಾತನೆ ಮೂರುಕಾಲ
ಮಂಚದ ಮೇಲೆ ಒರಗಲವ ಪೇಳಿದವನೊರಗಿದ(ಡೆ). ಪ್ರತ್ಯಾಯ ಯೀಳೆ ಬಾಳೆ
ತೆಂಗು ಪಲಸು ಮಾವು ನಿಂಬೆ ಹೆಜೇಳು ಅರನೇರಲು ಸಾರಂಗಯಿವನಿಕ್ಕಿದಂಗೆ
ಪಾಪ ಸಂಪಗೆ ಸೇವನ್ತಿಯಿರುವನ್ತಿಮಲ್ಲಿಗೆ ಜಾಜಿ ಯಿವನಿಕ್ಕಿದಡಂ ಪಾಪ ಕಣಗಿಲೆ
ಕೊಂಚಿವಾಳ ಜೆಲ್ಲವತ್ತ ಹಾದರಿ ಯಿವನಕ್ಕಿದಂಗೆ ಪುಣ್ಯ"[೨೮೧] ಎಂದು ಉಲ್ಲೇಖವಿದೆ.

ತ್ರೈಲೋಕ್ಯವಿಜಯಭೂಶಣನಾದ ಸೌರಾಷ್ಟ್ರ ಸೋಮನಾಥದೇವರು ಓಹಿಲನಿಗೆ ಪಳ್ಳಿಗೆ ಹೋಗಿ ದೇಗುಲವ ಮಾಡುವುದು ಮತ್ತು ಸರಿಗೆಯ ಹೆಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ತಿಳಿಸುತ್ತಾನೆ. ದೇವರಿಗೆ ಅರ್ಪಿಸಬಾರದ, ಅರ್ಪಿಸಬೇಕಾದ ಫಲಪುಷ್ಪಗಳನ್ನು ಈ ಶಾಸನದಲ್ಲಿ

ಹೇಳಿದೆ. ಅದು ಬಾಳೆ, ತೆಂಗು, ಹಲಸು, ಮಾವು, ನಿಂಬೆ, ಹೆಜೇಳು, ಅರನೇರಲು, ಕಿತ್ತಳೆಯನಿಕ್ಕಿದರೆ ಪಾಪ. ಸಂಪಿಗೆ, ಸೇವಂತಿಗೆ, ಇರುವಂತಿಗೆ, ಮಲ್ಲಿಗೆ, ಜಾಜಿ ಇವನ್ನಿಟ್ಟರೂ ಪಾಪ. ಕಣಗಿಲೆ, ಕೊಂಚಿವಾಳ, ಬೆಲ್ಲವತ್ತ, ಹಾದರಿಯಿವನಿಕ್ಕಿದವರಿಗೆ ಪುಣ್ಯವೆಂದು ತಿಳಿದುಬರುತ್ತದೆ.

ಪದ್ಯರೂಪ

ಕುಷ್ಟಗಿ ತಾಲ್ಲೂಕಿನಲ್ಲಿರುವ ಶಾಸನಗಳು ಸಾಮಾನ್ಯವಾಗಿ ಗದ್ಯರೂಪದಲ್ಲಿವೆ. ಇವುಗಳಲ್ಲಿಯೇ ಪದ್ಯರೂಪದ ಶ್ಲೋಕಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಇಂಥ ಶ್ಲೋಕಗಳು ಶಾಸನದ ಮಧ್ಯಭಾಗದಲ್ಲಿವೆ. ಗೋತಗಿಯಲ್ಲಿರುವ ಕ್ರಿ.ಶ.೧೦೨೪ರ ಶಾಸನದಲ್ಲಿ

"ಸಾಮಾನ್ಯೋಯಂ ಧರ್ಮ್ಮಸೇತುನ್ರಿ
ಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿ: ಸರ್ವ್ವಾನೇತಾಂ ಭಾಗಿನರ್ಪ್ಪಾರ್ತ್ಥಿವೇ
ನ್ದ್ರಾ ಭೂಯೋ ಭೂಯೋ ಯಾಚತೇ ರಾಮಭದ್ರ ಬಹುಭಿರ್ವ್ವಸು
ಧಾ ದತ್ತಾರಾಜಾಭಿಸ್ಸಗರಾದಿಭಿ: ಯಸ್ಯ ಯಸ್ಯ ಯದಾ ಭೂಮಿ
ತಸ್ಯ ತಸ್ಯ ತದಾಫಲಂ" "[೨೮೨]

ಎಂದು ಉಲ್ಲೇಖವಿರುವುದು ಕಂಡುಬರುತ್ತದೆ. ಇದೇ ಶ್ಲೋಕ ಗೋತಗಿ, ಹಿರೇಮನ್ನಾಪುರ ಮತ್ತು ಪುರಗಳಲ್ಲಿರುವ ಶಾಸನಗಳಲ್ಲಿ ಕಂಡುಬಂದಿವೆ. ಅಂಟೂರತಾಣದಲ್ಲಿರುವ ಕ್ರಿ.ಶ.೧೮೯೫ರ ಶಾಸನದಲ್ಲಿ

"ಓಂ ನಮ: ಶಿವಾಯ ಶ್ರೀರಮಾವಲ್ಲಭ ಶ್ರೀದೇವೋದೆ. .
ದ್ರವಕ್ಷಸಾಶ್ರೀಯಂ ಶ್ರೀವತ್ಸಾಂಕೋ ನಮಸ್ತಮ್ಮೆ ಶ್ರೀ. . .
ಧರಾಯಾ ಮಿತಾಜಸೇ"[೨೮೩]

ಎಂದು ಉಲ್ಲೇಖವಿದೆ. ಇದು ಪದ್ಯರೂಪದಲ್ಲಿರುವ ಪ್ರಾರ್ಥನಾ ಶ್ಲೋಕವಾಗಿದೆ.

ವೃತ್ತಗಳು

ಕುಷ್ಟಗಿ ತಾಲ್ಲೂಕಿನ ಚಳಗೇರಿಯಲ್ಲಿರುವ ಕ್ರಿ.ಶ.೧೧೭೨ರ ಶಾಸನದಲ್ಲಿ ಮಹಾಸ್ರಗ್ಧರಾ ವೃತ್ತ ಬಳಕೆಯಾಗಿದೆ.

"ಸರದಿಂದುಸ್ಪರ್ಧ್ಯ ಲೀಲಾವನದ ಮದ್ದನೊರಂಡಗ್ಗಿ . . ತಾದಲಿ . . . .
ವಿಭೂಷಣಂ ಮಾ . ದಿವಿಜ್ಯಾ
ಧರನಂಕೀಳ್ಮಾಡಿಶಿಷ್ಟ ಪ್ರತತಿಗೆ . . ಮತ್ತಾ ನೀಕಮಂ ಕೊ . ಲೋಕೋತ್ತರ. . .
ದಾನಾಥಾಗ್ರಣಿ ವಿಶದಯಶೋವಂ. . . ಬೂಚರಾಜ" [೨೮೩೪]

ಈ ಪದ್ಯದಲ್ಲಿ ಮಹಾಸ್ರಗ್ಧರಾವೃತ್ತದ ಲಕ್ಷಣಗಳನ್ನು ಗುರುತಿಸಬಹುದಾಗಿದೆ.

ಕಂದಪದ್ಯ

ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪುರದಲ್ಲಿರುವ ಕಿ.ಶ.ಸು.೧೪-೧೫ನೆಯ ಶತಮಾನದ ಶಾಸನದಲ್ಲಿ ಕಂದಪದ್ಯವಿದೆ.

"ಪರಿರಕ್ಷೀಸದೀ ಧರ್ಮ್ಮಕ್ಕೆರಡಂ ಬಗೆದಳಿದವಂಗದೆ ಸಾರ್ಗ್ಗ
..ವಾರಾಣಾಸಿಯೊಳ್ಪಾರ್ವರುಮಂ . ಕವಿಲೆಯುಮನಳಿದ ಪಾಪಂ ಸಾರ್ಗ್ಗ"[೨೮೩೮]

ಶಾಸನದ ಮಧ್ಯದಲ್ಲಿ ಅಕ್ಷರಗಳು ಅಸ್ಪಷ್ಟವಾಗಿದ್ದರು ಈ ಪದ್ಯದಲ್ಲಿ ಕಂದಪದ್ಯದ ಲಕ್ಷಣಗಳು ಕಂಡುಬರುತ್ತವೆ.

೩.೧೪. ಸ್ಮಾರಕ ಶಾಸನಗಳು

ವೀರಪುರಷರ, ವೀರಮಹಿಳೆಯರ, ರಾಜಮಹಾರಾಜರ ಮತ್ತು ಅಧಿಕಾರಿಗಳ ಯಾವುದಾದರೊಂದು ಪರಾಕ್ರಮದ, ವಿಜಯದ ಅಥವಾ ಮರಣಹೊಂದಿದ ನೆನಪಾಗಿ ನಿಗದಿಯಾದ ಸಾಧನಗಳನ್ನು 'ಸ್ಮಾರಕ'ಗಳೆಂದು ಕರೆಯಲಾಗಿದೆ. 'ಸ್ಮಾರಕ' ಎಂಬ ಪದವು ವಿಶಾಲಾರ್ಥವನ್ನು ಹೊಂದಿದೆ. ವೀರರು ತಮ್ಮ ತಾಯ್ನಾಡಿನ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ನೆನಪಿಗಾಗಿ ವೀರಗಲ್ಲುಗಳನ್ನು ನೆಡುತ್ತಿದ್ದರು. ಸ್ತ್ರೀಯರು ಸ್ವಸಂತೋಷದಿಂದ ತಮ್ಮ ಪ್ರೀತಿ ಪಾತ್ರರಾದ ಪತಿಯ ಜೊತೆಯಲ್ಲಿ ಸಹಗಮನ ಮಾಡಿದುದನ್ನು ಸಾರಲು ಮಾಸ್ತಿಕಲ್ಲುಗಳನ್ನು ಸ್ಥಾಪಿಸುತ್ತಿದ್ದರು. ಹೀಗೆ ಮರಣದ ನಂತರ ನಿರ್ಮಿಸುವ ಸ್ಮಾರಕದ ವ್ಯವಸ್ಥೆಯು ಕಾಲಕ್ರಮದಲ್ಲಿ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗೂ ಪಸರಿಸಿ ವಿಶಾಲವಾದ ವ್ಯಾಪ್ತಿಯನ್ನು ಪಡೆದುಕೊಂಡಿತು. ಸ್ಮಾರಕಗಳು ಕೇವಲ ಮನುಷ್ಯ ಮಾತ್ರರಿಗಷ್ಟೇ ಮೀಸಲಾಗದೆ ಪ್ರಾಣಿ, ಗಿಡ, ಮರ ಮುಂತಾದ ವಸ್ತುಗಳಿಗೂ ಸಂಬಂಧಿಸಿದವುಗಳಾಗಿವೆ. ವ್ಯಕ್ತಿಯ ಮರಣದ ನಂತರ ನಿಲ್ಲಿಸಿದ ಶಿಲೆಯೊಂದೇ ಸ್ಮಾರಕವಾಗದೇ ಅವನು ವಾಸಿಸುವ ಮನೆ, ಉಪಯೋಗಿಸುವ ವಸ್ತುಗಳು ಕೂಡ ಸ್ಮಾರಕವಾಗಬಲ್ಲವು. ಇಂಥ ಸ್ಮಾರಕಗಳನ್ನು ಶಿಲೆಗಳಿಂದ ನಿರ್ಮಿಸಲಾಗುತ್ತಿತ್ತು.

ವೀರಗಲ್ಲುಗಳು

ಆಂಗ್ಲ ಭಾಷೆಯ 'Hero Stone' ಎಂಬ ಪದಕ್ಕೆ ಸಮಾನಾರ್ಥಕವಾಗಿ 'ವೀರಗಲ್ಲು' ಎಂಬ ಪದವನ್ನು ಬಳಸಲಾಗುತ್ತದೆ. ಇಲ್ಲಿ ವೀರ ಮತ್ತು ಕಲ್ಲು ಎಂಬ ಎರಡು ಪದಗಳು ಬಳಕೆಯಲ್ಲಿವೆ. ವೀರ ಇದು ಗುಣವಾಚಕವಾಗಿದ್ದು ವ್ಯಕ್ತಿಯ ವಿಶಿಷ್ಟ ಸಾಧನೆ, ಶೌರ್ಯ, ಸಾಹಸ ಮುಂತಾದ ಗುಣಗಳನ್ನು ಸೂಚಿಸುತ್ತದೆ. ಕಲ್ಲು ವಸ್ತು ಸೂಚಕದಂತೆ ಬಳಕೆಯಾಗಿದೆ. ಈ ವೀರ ಪದವು ಸಂಸ್ಕೃತದ 'ಬೀರ' ಪದದಿಂದ ಉಗಮಗೊಂಡಿದೆ. ಪುರಾತನ ಕಾಲದಿಂದ ಕನ್ನಡನಾಡಿನ ಜನರು ಶೂರರಾಗಿದ್ದರೆಂಬುದಕ್ಕೆ ಸ್ಮಾರಕ ಶಾಸನಗಳೇ ಸಾಕ್ಷಿಗಳಾಗಿವೆ. ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ ದಾನಧರ್ಮ ತ್ಯಾಗದಷ್ಟೇ ಮುಖ್ಯವಾದುದು ವೀರತನ. ದುರ್ಗಸಿಂಹನ ಪಂಚತಂತ್ರದಲ್ಲಿ ಉಲ್ಲೇಖವಿರುವ ಬಹಳಷ್ಟು ಪ್ರಸಿದ್ಧ ಪಡೆದ ಶ್ಲೋಕ

"ಜೀತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇರಣೇ"

ಅಂದರೆ, 'ಹೋರಾಟದಲ್ಲಿ ಗೆದ್ದರೆ ಸಂಪತ್ತು ಲಭಿಸುತ್ತದೆ. ಮೃತಪಟ್ಟರೆ ದೇವಲೋಕದ ಅಪ್ಸರೆಯರು ಲಭಿಸುತ್ತಾರೆ. ಕ್ಷಣಮಾತ್ರದಲ್ಲಿ ನಾಶವಾಗುವ ಈ ದೇಹದ ಬಗ್ಗೆ ಏಕೆ ಮೋಹ. ಈ ಅಶಾಶ್ವತ ದೇಹದ ಮೇಲಿನ ವ್ಯಾಮೋಹವನ್ನು ತೊರೆದು ಹೋರಾಡು ಇಲ್ಲ ಮರಣಹೊಂದು'

ಎಂಬ ಈ ಶ್ಲೋಕವು ವೀರಧರ್ಮ ಹಾಗೂ ವೀರಮೌಲ್ಯಗಳನ್ನು ವಿವರಿಸುತ್ತದೆ. ಆದಿಕವಿ ಪಂಪನು ರಚಿಸಿದ ವಿಕ್ರಮಾರ್ಜುನ ವಿಜಯದಲ್ಲಿ ವೀರಸಿದ್ಧಾಂತವನ್ನೇ ನಿರೂಪಿಸಿದ್ದಾನೆ.

"ಒತ್ತಿ ತುರುಬಿನಿಂದ ರಿಪುಭೂಜ ಸಮಾಜದ ಭೇರ್ಗಳಂನಭ
ಕ್ಕೆತ್ತದೆ ಬಂದ ತನ್ನ ಒಂದು ಮರೆವೊಕ್ಕೊಡೆ ಕಾಯದೆ ಚಾಗದೊಳ್ಪನ
ಚ್ಚೊತ್ತದೆ ಮಾಣ್ದು ಬಾಳ್ವಪುರುವಾನಸವೆಂಬ ಅಜಾಂಡ ಮೆಂಬುದೋಂ
ದತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೇ ಮುರಾಂತಕಾ"

ಅಂದರೆ, ಬಲವಾಗಿ ನಿಂತ ವೈರಿಗಳ ಬೇರುಗಳನ್ನು ಕಿತ್ತು ಆಕಾಶಕ್ಕೆ ಒಗೆಯದೆ, ವೈರಿ ಬಂದು ಮೊರೆ ಹೋದಾಗ ಕಾಯದೆ, ತ್ಯಾಗದ ಒಳ್ಳೆಯತನದ ಅಚ್ಚು ಒತ್ತದೆ ಬಾಳುವ ಮನುಷ್ಯನು ಅತ್ತಿಯ ಹಣ್ಣಿನಲ್ಲಿದ್ದ ಹುಳುವಿನಂತೆ ಬ್ರಹ್ಮಾಂಡದಲ್ಲಿದ್ದಾನೆ. ಹೀಗೆ ವೈರಿಯನ್ನು ಕೊಲ್ಲುವ ಕಾಯುವ ಹಾಗೂ ಒಳ್ಳೆಯತನದ ಮತ್ತು ತ್ಯಾಗದ ಮೌಲ್ಯಗಳನ್ನು ಹೊಂದಿರಬೇಕೆಂದು ಉಲ್ಲೇಖಿಸಲಾಗಿದೆ. ಮಹಾಕವಿ ರನ್ನನು ಸಾಮಾಜಿಕ ವೀರತನದ ಹೋರಾಟದ ಐದು ಮುಖ್ಯ ನೆಲೆಗಳನ್ನು ಗುರುತಿಸಿದ್ದಾನೆ.

"ತುರುಗೊಳೊಳ್ ಪೆಣ್ಬುಯ್ಯಲೊ
ಳೆರೆವೆಸದೊಳ್ ನೆಂಟನೆಡರೊಳೂರಳಿವಿನೊಳಂ
ತರಿಸಂದು ಗಂಡುತನಮನೆ
ನೆರಪದವಂ ಗಂಡನಲ್ಲನೆಂತುಂ ಷಂಡಂ"

ಹೀಗೆ, ವೀರನ ಸ್ವಯಂಪ್ರೇರಣೆಗೆ ಯಾವ ಮನೋಧರ್ಮ ಕಾರಣ ಎಂಬುದನ್ನು ರನ್ನ ಮಹಾಕವಿ ತನ್ನ ಗದಾಯುದ್ಧದಲ್ಲಿ ಮೇಲಿನಂತೆ ಹೇಳಿದ್ದಾನೆ. ಈ ಮಾತುಗಳು ಅಂದಿನ ವೀರತ್ವದ ಮೌಲ್ಯಗಳನ್ನು ಎತ್ತಿಹಿಡಿದಿವೆ.

"ಒಡಲೊಡಮೆಯೆಂಬಿವೆರಡುಂ
ಕೆಡಲಿರ್ಪುವು ಕೆಡದ ಕಸವರಂ ಜಸಮದರುಂ
ಕೆಡುವೊಡಲೊಡಮೆಯನೆಂದುಂ
ಕೆಡದೊಡಮೆಗೆ ಮಾರುಗುಡುವುದಿರೆವಬೆಡಂಗಾ"

ಮಹಾಕವಿ ರನ್ನನ ಈ ಶ್ಲೋಕ ದೇಹವೆನ್ನುವುದು ಅಶಾಶ್ವತವಾದುದು. ಆದರೆ ಕೀರ್ತಿಯು ಚಿರಸ್ಥಾಯಿಯಾದುದು. ಈ ಅಶಾಶ್ವತವಾದ ದೇಹವು ಹೋದರೂ ಶಾಶ್ವತವಾದ, ಚಿರಂತನವಾದ ಕೀರ್ತಿಯನ್ನು ಸಂಪಾದಿಸಬೇಕೆಂಬುದು ಜನರ ಬಯಕೆ ಆಗಿತ್ತು. ಯುದ್ಧದಲ್ಲಿ ಪ್ರಾಣತ್ಯಾಗವನ್ನು ಮಾಡಿದ ವೀರ ಈ ಲೋಕದಲ್ಲಿ ಅಷ್ಟೇ ಅಲ್ಲ ಪರಲೋಕದಲ್ಲೂ ಕೀರ್ತಿಗೆ ಪಾತ್ರನಾಗುತ್ತಾನೆ. ಅಲ್ಲದೆ ಸಮಾಜದಲ್ಲಿನ ಜನರ ಪ್ರಶಂಸೆಗೂ ಅರ್ಹನಾಗುತ್ತಾನೆ. ಬಹುಶಃ ಈ ಭಾವನೆಗಳೇ ಯುದ್ಧೋತ್ಸಾಹಕ್ಕೆ ಮೂಲ ಪ್ರಚೋದನೆ ಇರಬೇಕು.

ಈ ಪರಲೋಕ ಕಲ್ಪನೆಗಳು ವೀರರ ಉತ್ಸಾಹವನ್ನು ಮತ್ತಷ್ಟು ಉದ್ದೀಪನ ಗೊಳಿಸುವಂತಹುದು. ಯುದ್ಧದಲ್ಲಿ ಸತ್ತರೆ ದೇವಲೋಕಕ್ಕೆ ಹೋಗುತ್ತಾನೆ. ಎಂಬ ಭಾವನೆ

ಪ್ರಾಚೀನ ಕಾಲದಲ್ಲಿ ಪ್ರಚಲಿತವಿತ್ತು. ವಿವೇಕ ಚಿಂತಾಮಣಿಯಲ್ಲಿ ವೀರರು ಹೋಗುವ ವೀರಸ್ವರ್ಗದ ಕಲ್ಪನೆಯು

> "ವೈದುತಮೆಂಬ ನಾಲ್ಕನೆಯ ಪವನಾಧಾರದ ಮೇಘಾಶ್ರಯದ
> ಪಟ್ಟಣದಲ್ಲಿ ಸುರಪನಾಣತಿಯ ಅಪ್ಸರೆರೆನಿಸುವ ವೀರದೇತೆ
> ಗಳಿಹರಲ್ಲಿಗೀ ನರಲೋಕದ ಕಮರಿ, ಅಗ್ನಿ, ಜಲ, ಸಂಗ್ರಾಮ,
> ಗೋಗ್ರಹಾದಿಗಳಲ್ಲಿ ಪರಾಕ್ರಮದಿಂದಳಿದ ವರನಲ್ಲಿಯ ದೇವಕನ್ನಿಕೆ
> ಯರನಂತ ಸಂಭ್ರಮದಿಂ ಮಣಿಖಚಿತ ವಿಮಾನದಿಂದೂ
> ಯ್ವರದೇ ವೀರಸ್ವರ್ಗಕ್ಕುಂ"

ಎಂಬುದಾಗಿ ಉಲ್ಲೇಖಿಸುತ್ತದೆ. ಅರಸನಿಗಾಗಿ, ಸಾಮ್ರಾಜ್ಯದ ರಕ್ಷಣೆಗಾಗಿ, ಇಲ್ಲವೇ ಊರಿನ ಹಿತಕ್ಕಾಗಿ, ವೈರಿಗಳ ವಿರುದ್ಧ ಹೋರಾಡಿ ಮರಣ ಹೊಂದಿದ ವೀರನ ಸ್ಮರಣೆಗಾಗಿ ನೆಟ್ಟ ಶಿಲ್ಪಶಿಲಾಫಲಕಗಳೇ ವೀರಗಲ್ಲುಗಳು. ಇಂಥ ವೀರಗಲ್ಲುಗಳನ್ನು ಇಂಥವರೇ ಹಾಕಿಸಬೇಕೆಂಬ ನಿಯಮವಿರಲಿಲ್ಲ. ಸಾಮಾನ್ಯವಾಗಿ ಮರಣ ಹೊಂದಿದ ವೀರನ ಊರಿನವರೆಲ್ಲಾ ಸೇರಿ ಅವನ ಸ್ಮರಣೆಗಾಗಿ ವೀರಗಲ್ಲುಗಳನ್ನು ನೆಡುತ್ತಾರೆ. ಈ ವೀರಗಲ್ಲುಗಳು ವೀರರ ಶೌರ್ಯ ಸಾಹಸವನ್ನು ಬಿಂಬಿಸುತ್ತವೆ.[೨೭೯]

ವೀರಗಲ್ಲುಗಳ ಪರಿಚಯವನ್ನು, ಹೋರಾಟದ ಸ್ವರೂಪವನ್ನು, ಹೋರಾಟದ ದೃಷ್ಟಿಯಿಂದ ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

- ಯುದ್ಧದ ವೀರಗಲ್ಲುಗಳು
- ತುಱುಗೊಳ್ ವೀರಗಲ್ಲುಗಳು
- ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು
- ಪೆಣ್ಬುಯ್ಯಲ್ ವೀರಗಲ್ಲುಗಳು
- ಊರಳಿವು ವೀರಗಲ್ಲುಗಳು
- ಕಳ್ಳರೊಡನೆ ಹೋರಾಡಿ ಮಡಿದ ವೀರರ ಸ್ಮಾರಕಗಳು
- ಸೀಮಾ ಸಂಬಂಧ, ಊರು ಜಗಳಗಳಲ್ಲಿ ಮಡಿದವರ ಸ್ಮಾರಕಗಳು

ಇಂಥಹ ವೀರಗಲ್ಲುಗಳು ಕರ್ನಾಟಕದಾದ್ಯಂತ ಹೇರಳವಾಗಿ ಕಾಣಬಹುದಾಗಿದೆ. ಈ ಮೇಲಿನ ವಿಂಗಡನಾ ಕ್ರಮದಲ್ಲಿನ ಎಲ್ಲ ವೀರಗಲ್ಲುಗಳು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿಲ್ಲ. ಅವುಗಳಲ್ಲಿ ವೀರಗಲ್ಲುಗಳು, ತುರುಗೋಳ ವೀರಗಲ್ಲುಗಳು, ವೀರಮಾಸ್ತಿ ಕಲ್ಲುಗಳು, ಆನೆಬೇಟೆ ವೀರಗಲ್ಲುಗಳು ಮಾತ್ರ ದೊರೆತಿವೆ. ಅವುಗಳು ಅಂಟೂರಠಾಣ, ಗಂಗನಾಳ, ಚಂದಾಲಿಂಗ, ಗೋತಗಿ, ಜಾಲಿಹಾಳ, ತಾವರಗೆರೆ, ನಾರಿನಾಳ, ಪುರ, ಬಲ್ಲುಟಗಿ, ಸಿರಗುಪ್ಪ, ಹಿರೇಮನ್ನಾಪುರ ಶ್ಯಾಡಲಗೇರಿ ಮತ್ತು ಯರಗೇರಿಗಳಲ್ಲಿವೆ. ದೊರೆತಿರುವ ಸ್ಮಾರಕ ಶಿಲೆಗಳಲ್ಲಿ ವೀರಗಲ್ಲುಗಳೇ ಹೆಚ್ಚಿನ ಸಂಖ್ಯೆಯನ್ನು ಹೊಂದಿವೆ.

ಯುದ್ಧದ ವೀರಗಲ್ಲುಗಳು

ಅರಸು ಮನೆತನಗಳ ಆಳ್ವಿಕೆ ಕಾಲದಲ್ಲಿ ಸಾಮ್ರಾಜ್ಯದ ವಿಸ್ತರಣೆಗಾಗಿ ಯುದ್ಧಗಳು ಸಾಮಾನ್ಯವಾಗಿದ್ದವು. ಅಶಕ್ತ ದೊರೆಗಳ ಮೇಲೆ ಬಲಿಷ್ಠ ದೊರೆಗಳು ದಾಳಿ ನಡೆಸುತ್ತಿದ್ದರು. ಇದನ್ನು ಹೊರತು ಪಡಿಸಿ ಸಾಮ್ರಾಜ್ಯ ಸಾಮ್ರಾಜ್ಯಗಳ ಮಧ್ಯದಲ್ಲಿನ ದ್ವೇಷ, ಉತ್ತರಾಧಿಕಾರತ್ವಕ್ಕಾಗಿ ತಂದೆ ಮಕ್ಕಳ ಮಧ್ಯದ ವೈರತ್ವ, ಸಹೋದರರ ಮಧ್ಯದಲ್ಲಿನ ವೈರತ್ವ, ಅರಸ ಮತ್ತು ಸಾಮಂತರ ನಡುವಿನ ದ್ವೇಷ ಹಾಗೂ ಸಾರ್ವಜನಿಕರು ಅರಸ ಹಾಗೂ ಆತನ ಆಡಳಿತಾಧಿಕಾರಿಗಳ ವಿರುದ್ಧ ಸಿಡಿದೆದ್ದ ಪ್ರತಿಭಟನೆ. ಇವೆಲ್ಲವು ಯುದ್ಧಕ್ಕೆ ಕಾರಣಗಳಾಗಿದ್ದವು. ಇಂಥ ಯುದ್ಧಗಳಲ್ಲಿ ಸೈನಿಕರದೇ ಮಹತ್ವದ ಪಾತ್ರವಾಗಿತ್ತು. ಯುದ್ಧದಲ್ಲಿ ಹೋರಾಡಿ ವೀರಮರಣ ಹೊಂದಿದ ವೀರರ ಸ್ಮಾರಕಗಳೇ ಈ ಯುದ್ಧದ ವೀರಗಲ್ಲುಗಳು. ಈ ವೀರಗಲ್ಲುಗಳಲ್ಲಿ ಪಠ್ಯ ಹಾಗೂ ಶಿಲ್ಪಗಳೆರಡು ಕಂಡುಬರುತ್ತವೆ. ಸಾಮಾನ್ಯವಾಗಿ ಪಠ್ಯ ಇಲ್ಲದ ವೀರಗಲ್ಲುಗಳು ಲಭ್ಯವಾದರೂ ಶಿಲ್ಪ ಇಲ್ಲದ ವೀರಗಲ್ಲುಗಳು ಮಾತ್ರ ಬಹಳ ವಿರಳ.

ನನ್ನ ಅಧ್ಯಯನದ ವ್ಯಾಪ್ತಿಯ ಗಂಗನಾಳ, ತಾವರಗೆರೆ, ಚಂದಾಲಿಂಗ, ಹಿರೇಮನ್ನಾಪುರ, ನಾರಿನಾಳ, ಜಾಲಿಹಾಳ, ಯರಗೇರಿ, ನಿಲೊಗಲ್, ಗೋತಗಿ, ಅಂಟೂರಠಾಣಗಳಲ್ಲಿ ಇಂಥ ವೀರಗಲ್ಲುಗಳು ಕಂಡುಬಂದಿವೆ. ಇವುಗಳಲ್ಲಿ ಅತ್ಯಂತ ಪುರಾತನ ವೀರಗಲ್ಲು ಅಂಟೂರಠಾಣ ಗ್ರಾಮದಲ್ಲಿದೆ.[೨೮೪] ಕ್ರಿ.ಶ.೭ನೆಯ ಶತಮಾನದ ಈ ವೀರಗಲ್ಲು ಎರಡು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ಶಿಲ್ಪ ಅಸ್ಪಷ್ಟವಾಗಿದೆ. ಮೇಲಿನ ಹಂತದಲ್ಲಿ ವೀರನನ್ನು ಅಪ್ಸರೆಯರು ಕರೆದುಕೊಂಡು ಹೋಗುತ್ತಿರುವ ಶಿಲ್ಪ ಸ್ಪಷ್ಟವಾಗಿದೆ. ಕ್ರಿ.ಶ.೧೦ನೆಯ ಶತಮಾನದ ಒಂದು ವೀರಗಲ್ಲು ಚಂದಾಲಿಂಗದಲ್ಲಿದೆ.[೨೮೫] ಈ ವೀರಗಲ್ಲನ್ನು ನೆಲದ ಮೇಲೆ ನಿಲ್ಲಿಸಲಾಗಿದೆ. ಕೆಳಪಂತ ನೆಲದಲ್ಲಿ ಮುಚ್ಚಿದೆ. ಮೇಲಿನ ಎರಡು ಹಂತಗಳು ಮಾತ್ರ ಕಾಣುತ್ತವೆ. ವೀರನನ್ನು ದೇವಕನ್ಯೆಯರು ಕರೆದುಕೊಂಡು ಹೋಗುತ್ತಿದ್ದು ಮೇಲೆ ಶಿವನ ಧ್ಯಾನದಲ್ಲಿ ಮಗ್ನನಾಗಿರುವ ವೀರನನ್ನು ಚಿತ್ರಿಸಲಾಗಿದೆ.

ಕ್ರಿ.ಶ.೧೧ನೆಯ ಶತಮಾನದ ಮೂರು ವೀರಗಲ್ಲುಗಳಿದ್ದು ಅವುಗಳು ಶ್ಯಾಡಲಗೇರಿಯಲ್ಲಿ ಒಂದು, ಚಂದಾಲಿಂಗದಲ್ಲಿ ಎರಡು ಇವೆ. ಶ್ಯಾಡಲಗೇರಿಯಲ್ಲಿರುವ ವೀರಗಲ್ಲು[೨೮೬] ಮೂರು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ವೀರಯೋಧ ಸೈನಿಕರೊಡನೆ ಹೋರಾಡುತ್ತಿದ್ದು, ಮಧ್ಯ ಹಂತದಲ್ಲಿ ವೀರನನ್ನು ಅಪ್ಸರೆಯರು ಕರೆದುಕೊಂಡು ಹೋಗುತ್ತಿರುವಂತೆ, ಮೇಲಿನ ಹಂತದಲ್ಲಿ ಶಿವನ ಆರಾಧನೆಯಲ್ಲಿ ತಲ್ಲೀನನಾಗಿರುವ ವೀರನನ್ನು ಬಿಡಿಸಲಾಗಿದೆ. ಚಂದಾಲಿಂಗದಲ್ಲಿರುವ ಎರಡು ವೀರಗಲ್ಲುಗಳು[೨೮೭] ಒಂದೇ ಹೋಲಿಕೆಯಲ್ಲಿವೆ. ಇವುಗಳನ್ನು ನೆಲದ ಮೇಲೆ ನಿಲ್ಲಿಸಿರುವದರಿಂದ ಕೆಳ ಹಂತಗಳು ನೆಲದಲ್ಲಿ ಮುಚ್ಚಿಕೊಂಡಿವೆ. ಮೇಲಿನ ಎರಡು ಹಂತಗಳು ಸ್ಪಷ್ಟವಾಗಿವೆ. ಮಧ್ಯದ ಹಂತದಲ್ಲಿ ದೇವಕನ್ಯೆಯರು ವೀರಯೋಧನನ್ನು ಕರೆದುಕೊಂಡು ಹೋಗುತ್ತಿದ್ದು, ಈ ದೃಶ್ಯವನ್ನು ಮಂಟಪದೊಂದಿಗೆ ಅಲಂಕರಿಸಲಾಗಿದೆ. ಮೇಲಿನ ಹಂತದಲ್ಲಿ ವೀರನು ಶಿವಲಿಂಗದ ಆರಾಧನೆಯಲ್ಲಿ ಮಗ್ನನಾಗಿರುವಂತೆ ಚಿತ್ರಿಸಲಾಗಿದೆ.

ಕ್ರಿ.ಶ.೧೨ನೆಯ ಶತಮಾನದ ಒಂದು ಯುದ್ಧದ ವೀರಗಲ್ಲು ಅಂಟೂರತಾಣದಲ್ಲಿದೆ.[೨೮೮] ಇದು ಮೂರು ಹಂತದ ವೀರಗಲ್ಲು. ಇದು ಸಾಮಾನ್ಯವಾದ ದೃಶ್ಯಗಳನ್ನೆ ಹೊಂದಿದೆ. ಕೆಳಹಂತದಲ್ಲಿ ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ವೈರಿಗಳೊಂದಿಗೆ ಹೋರಾಡುತ್ತಿರುವ ದೃಶ್ಯ, ಮಧ್ಯಹಂತದಲ್ಲಿ ಮಂಟಪದ ಮಧ್ಯದಲ್ಲಿ ವೀರಯೋಧ ಮಂಟಪದಲ್ಲಿರುವ ಶಿವಲಿಂಗ ಪೂಜೆಯಲ್ಲಿ ಮಗ್ನನಾಗಿರುವಂತೆ ಬಿಡಿಸಲಾಗಿದೆ. ಕ್ರಿ.ಶ.೧೫ನೆಯ ಶತಮಾನದ ಒಂದು ವೀರಗಲ್ಲು ತಾವರಗೆರೆಯಲ್ಲಿದೆ.[೨೮೯] ವೀರಯೋಧ ಕುದುರೆಯ ಮೇಲೆ ಕುಳಿತು ಯುದ್ಧಕ್ಕೆ ಹೋರಾಡುತ್ತಿರುವಂತೆ ಕಾಣುತ್ತದೆ. ಕ್ರಿ.ಶ.೧೬ನೆಯ ಶತಮಾನದ ಮೂರು ವೀರಗಲ್ಲುಗಳು ಕಂಡುಬಂದಿದ್ದು. ಅವುಗಳು ಚಂದಾಲಿಂಗದಲ್ಲಿ[೨೯೦] ಒಂದು, ಗೋತಗಿಯಲ್ಲಿ[೨೯೧] ಎರಡು ಇವೆ. ಚಂದಾಲಿಂಗದಲ್ಲಿರುವ ವೀರಗಲ್ಲಿಗೆ ಸುಣ್ಣ ಹಚ್ಚಲಾಗಿದೆ. ಇದು ಮೂರು ಹಂತಗಳನ್ನು ಹೊಂದಿದೆ. ಕೆಳಪಂತ ಅಸ್ಪಷ್ಟವಾಗಿದ್ದು, ಮಧ್ಯದಲ್ಲಿ ವೀರನನ್ನು ಕರೆದುಕೊಂಡು ಹೋಗುತ್ತಿರುವ ಅಪ್ಸರೆಯರು ಮತ್ತು ಲಲಾಟಭಾಗದಲ್ಲಿ ಶಿವಲಿಂಗದ ಆರಾಧನೆಯಲ್ಲಿ ತಲ್ಲೀನನಾಗಿರುವ ವೀರನನ್ನು ಕೆತ್ತಲಾಗಿದೆ. ಗೋತಗಿಯಲ್ಲಿರುವ ಎರಡು ವೀರಗಲ್ಲುಗಳು ಒಂದೇ ಮಾದರಿಯಲ್ಲಿವೆ. ಕೆಳಹಂತದಲ್ಲಿ ಬಿಲ್ಲುಬಾಣಗಳೊಂದಿಗೆ ವೈರಿಯೊಂದಿಗೆ ಹೊರಾಡುತ್ತಿದ್ದು, ಮಧ್ಯದಲ್ಲಿ ಮರಣ ಹೊಂದಿದ ವೀರನನ್ನು ಕರೆದುಕೊಂಡು ಹೋಗುತ್ತಿರುವ ಅಪ್ಸರೆಯರು. ಮೇಲಿನ ಹಂತದಲ್ಲಿ ಶಿವಲಿಂಗದ ಆರಾಧನೆಯಲ್ಲಿ ತೊಡಗಿರುವಂತೆ ಚಿತ್ರ ಬಿಡಿಸಲಾಗಿದೆ. ಕ್ರಿ.ಶ.೧೭ನೆಯ ಶತಮಾನದೆನ್ನಬಹುದಾದ ೭ ವೀರಗಲ್ಲುಗಳು ಕಂಡುಬಂದಿವೆ. ಅವುಗಳು ಗಂಗನಾಳದಲ್ಲಿ ಎರಡು, ನಿಲೊಗಲ್‌ದಲ್ಲಿ ಎರಡು, ಯರಗೇರಿ, ತಾವರಗೇರಿ ಮತ್ತು ಜಾಲಿಹಾಳಗಳಲ್ಲಿ ತಲಾ ಒಂದೊಂದರಂತೆ ಇವೆ.

ಯರಗೇರಿಯಲ್ಲಿರುವ ವೀರಗಲ್ಲಿನ ಮೇಲೆ ಪ್ರಕಟಿತ ಶಾಸನವಿದೆ.[೨೯೨] ಈ ಶಾಸನದಲ್ಲಿ "ಯರಗೇರಿಯ ಮೆಲಗಿರಗೌಡ ಮಗ ಮಾಚಕ? ಗೌಡ .... ಕಟಸಿದ" ಮುಂದೆ ಅಸ್ಪಷ್ಟವಾಗಿದೆ. ಈ ವೀರಗಲ್ಲಿನ ಮೇಲಿರುವ ವೀರನು ಕುದುರೆಯ ಮೇಲೆ ಕುಳಿತಿದ್ದು, ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಯುದ್ಧಕ್ಕೆ ಸನ್ನದ್ಧನಾಗಿ ಹೋಗುತ್ತಿರುವಂತೆ ಕಾಣುತ್ತದೆ. ತಾವರಗೇರೆಯಿಂದ ನಾರಿನಾಳ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ, ತಾವರಗೆರೆಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ಮಲ್ಲಪ್ಪ ಜಾಮಲಾಪುರ ಎಂಬುವವರ ಹೊಲದ ಪಕ್ಕದಲ್ಲಿ ಒಂದ ವೀರಗಲ್ಲು ಇದೆ.[೨೯೩] ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈಯಲ್ಲಿ ಬಾಣವನ್ನು ಹಿಡಿದುಕೊಂಡು ಹೋಗುತ್ತಿರುವಂತೆ ಚಿತ್ರಿಸಲಾಗಿದೆ. ಜಾಲಿಹಾಳದಲ್ಲಿರುವ ವೀರಗಲ್ಲಿನ[೨೯೪] ಮೇಲೆ ವೀರನು ಎಡಗೈಯಿಂದ ಕುದುರೆಯನ್ನು ಹಿಡಿದು ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಗಂಗನಾಳದಲ್ಲಿರುವ ವೀರಗಲ್ಲಿನ[೨೯೫] ಮೇಲೆ ಇಬ್ಬರೂ ವೀರಯೋಧರಿದ್ದಾರೆ. ವೀರರು ತಮ್ಮ ಎರಡು ಕೈಗಳಲ್ಲಿ ಕಠಾರಿಗಳನ್ನು ಹಿಡಿದುಕೊಂಡು ಯುದ್ಧಕ್ಕೆ ಸನ್ನದ್ಧರಾಗಿ ಹೊರಟಿರುವಂತೆ ಕಾಣಿಸುತ್ತದೆ. ಇದೇ ಗ್ರಾಮದಲ್ಲಿರುವ ಇನ್ನೊಂದು ವೀರಗಲ್ಲಿನ[೨೯೬] ಮೇಲೆ ವೀರಯೋಧ ಕುದುರೆಯ ಮೇಲೆ ಕುಳಿತಿದ್ದಾನೆ.

[illegible]

[illegible]

ನಿಲೊಗಲ್‌ದಲ್ಲಿರುವ ಎರಡು ವೀರಗಲ್ಲುಗಳು[೨೯೭] ಒಂದೇ ಮಾದರಿಯಲ್ಲಿವೆ. ವೀರ ಯೋಧ ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಬಲಗೈಯಲ್ಲಿ ಬಾಣವನ್ನು ಹಿಡಿದುಕೊಂಡು ಹೋರಾಟಕ್ಕೆ ಹೊರಟಿರುವಂತೆ ಚಿತ್ರಿಸಲಾಗಿದೆ. ಕ್ರಿ.ಶ.೧೮ನೆಯ ಶತಮಾನದ ಒಂದು ವೀರಗಲ್ಲು ಶ್ಯಾಡಲಗೇರಿಯಲ್ಲಿದೆ.[೨೯೮] ವೀರಯೋಧ ಎಡಗೈಯಲ್ಲಿ ರಕ್ಷಣೆಗೋಸ್ಕರ ಗುರಾಣಿ, ಬಲಗೈಯಲ್ಲಿ ಕಠಾರಿಯನ್ನು ಹಿಡಿದು ಯುದ್ಧಕ್ಕೆ ಹೊರಟಿರುವಂತೆ ಕೆತ್ತಲಾಗಿದೆ.

ತುಱುಗೊಳ್ ವೀರಗಲ್ಲುಗಳು

ಪ್ರಾಚೀನ ಕಾಲದ ಸಮಾಜವು ಕೃಷಿ ಪ್ರಧಾನ ಸಮಾಜವಾಗಿತ್ತು. ಕೃಷಿ ಕಾರ್ಯದಲ್ಲಿ ರೈತನಿಗೆ ಗೋವುಗಳಿಗೆ ಪೂಜ್ಯನೀಯ ಸ್ಥಾನವನ್ನು ನೀಡಲಾಗಿದೆ. ವೇದಗಳ ಕಾಲದ ಸಂಸ್ಕೃತಿಯಲ್ಲಿ ಗೋವುಗಳನ್ನು ಸಂಪತ್ತಿನ ಸಾಧನಗಳೆಂದು, ವಿನಿಮಯದ ಪ್ರಧಾನ ವಸ್ತು ಎಂದು ಪರಿಗಣಿಸಲಾಗಿತ್ತು. ಹಿಂದೂ ಧರ್ಮದ ತತ್ವಗಳಲ್ಲಿ ಗೋವುಗಳಿಗೆ ಪೂಜ್ಯನೀಯ ಸ್ಥಾನವನ್ನು ನೀಡಲಾಗಿದೆ. ಪಶುಪಾಲನ ಸಂಸ್ಕೃತಿಯು ನಮ್ಮ ನೆಲದ ಮೂಲ ಸಂಸ್ಕೃತಿಯಾಗಿದೆ. ಗ್ರಾಮೀಣ ಪರಿಸರ ಪಶುಕೇಂದ್ರಿತ ಪರಿಸರವಾಗಿದ್ದು ನಮ್ಮ ಪೂರ್ವಜರು ಪಶುಗಳನ್ನು ಸಾಕಿ ಸಲಹುತ್ತಿದ್ದರು.

ಗೋವುಗಳು ಪೌಷ್ಟಿಕ ಆಹಾರವಾದ ಹಾಲು, ತುಪ್ಪ, ಮೊಸರು ಮುಂತಾದವುಗಳನ್ನೂ, ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರವನ್ನು ನೀಡುವ ಇವು ವ್ಯವಸಾಯ ಮಾಡಲು ಒಂದು ಶಕ್ತಿಯಾಗಿ ಮಾನವನ ನೆರವಿಗೆ ನಿಂತವು. ಹೀಗೆ ಆರ್ಥಿಕ ವ್ಯವಸ್ಥೆಯ ಒಂದು ಪ್ರಮುಖ ಅಂಗವಾಗಿದ್ದ ಗೋವುಗಳನ್ನು ಕಳ್ಳರು ಹಣದ ಆಸೆಯಿಂದ ಅಪಹರಣ ಮಾಡಲು ಆರಂಭಿಸಿದರು. ಗೋವುಗಳ ಅಪಹರಣದ ಸಂದರ್ಭದಲ್ಲಿ ಹೋರಾಡುವುದು ವ್ಯಕ್ತಿ ಜೀವನದ, ಅದರಲ್ಲಿಯೂ ವೀರವ್ಯಕ್ತಿಯ ಜೀವನದ ಕರ್ತವ್ಯವಾಗಿತ್ತು. ಈ ಹೋರಾಟದಲ್ಲಿ ತಮ್ಮ ಜೀವನದ ಹಂಗುತೊರೆದು ಹೋರಾಡಿ ಮರಣ ಹೊಂದಿದ ವೀರನ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲುಗಳೇ 'ತುಱುಗೊಳ್ ವೀರಗಲ್ಲುಗಳು'.

ಪಂಪನ 'ವಿಕ್ರಮಾರ್ಜುನ ವಿಜಯ' ಮತ್ತು ರನ್ನನ 'ಗದಾಯುದ್ಧ' ಈ ಎರಡು ಕಾವ್ಯಗಳಲ್ಲಿ ತುಱುಗಾಳಗ ಮತ್ತು ವೀರರ ನಿಲುವು ಯಾವ ರೀತಿಯಾಗಿತ್ತು ಎಂಬುದು ಸುವ್ಯಕ್ತವಾಗಿದೆ. ಪಂಪಭಾರತದಲ್ಲಿ ವಿರಾಟನ ಕಡೆಯವರು ಹೇಳುವ 'ನಾವು ಬದುಕಿರುವವರೆಗೆ ದನಗಳನ್ನು ಅಪಹರಿಸಲು ಬಿಡುವುದಿಲ್ಲ. ನಾವು ಸತ್ತ ಮೇಲೆ ಅವು ನಮ್ಮ ಹೆಣಗಳನ್ನು ತುಳಿದು ಹೋಗಬೇಕು. ತುಱುಗಾಳದಲ್ಲಿಯೇ ನಮ್ಮ ಅಳಿವು ಉಳಿವುಗಳು ಇರುವುದು' ಎಂಬ ಮಾತುಗಳು ಪಂಪನ ಕಾಲದ ವೀರರ ಉದ್ದೇಶವಾಗಿತ್ತು.

ರನ್ನನು 'ತುಱುಗಾಳಗದಲ್ಲಿ ಹೋರಾಡದೇ ಇರುವವನು ಗಂಡಸು ಅಲ್ಲ, ಅವನು ಷಂಡನೇ ಸರಿ' ಎಂದು ಘೋಷಿಸುತ್ತಾನೆ. ತುಱುಗಾಳಗದಲ್ಲಿ ಭಾಗವಹಿಸಿ ಮಡಿದವರ ಬಗ್ಗೆ ಸಮಾಜದಲ್ಲಿ ಒಂದು ರೀತಿಯ ಗೌರವ ಭಾವನೆಯಿತ್ತು. ತುಱುಗಾಳಗದಲ್ಲಿ ಮಡಿದ ವೀರರ ರಕ್ತದಿಂದ ತಿಲಕವನ್ನು ಇಟ್ಟುಕೊಂಡು ಅವರಿಗೆ ಕೈಮುಗಿಯುತ್ತಿದ್ದರು. ಎಂಬ ವಿಷಯವು ಬ್ರಹ್ಮ ಶಿವನ ಸಮಯ ಪರೀಕ್ಷೆ ಎಂಬ ಕೃತಿಯಿಂದ ತಿಳಿದುಬರುತ್ತದೆ. ತುಱುಗಾಳಗದಲ್ಲಿ ಶೌರ್ಯವನ್ನು

ಮೆರೆಯದವನನ್ನು ಹೇಡಿಯೆಂದು ಜನ ಭಾವಿಸುತ್ತಿದ್ದರು. ಹೀಗೆ ಗೋವುಗಳ ರಕ್ಷಣೆಯು ಆ ಊರಿನ ಪ್ರತಿಷ್ಠೆ ಹಾಗೂ ಅಲ್ಲಿನ ಜನರ ಮಾನದ ವಿಷಯವಾಗಿತ್ತು. ಇನ್ನೂ ಕೆಲವು ಸಂದರ್ಭಗಳಲ್ಲಿ ಶತ್ರು ಪಡೆಗಳ ತುರುಗಳ್ಳರನ್ನು ಅಪಹರಿಸುವದರ ಮೂಲಕ ಯುದ್ಧಕ್ಕೆ ಆಹ್ವಾನ ನೀಡುವ ಪದ್ಧತಿ ರೂಢಿಯಲ್ಲಿತ್ತು. ಒಟ್ಟಿನಲ್ಲಿ ಕಳ್ಳರಾಗಲಿ, ಶತ್ರುಪಡೆಯವರಾಗಲಿ ಬಂದು ಗೋವುಗಳನ್ನು ಕಳ್ಳತನ ಮಾಡಿದಾಗ. ಅವುಗಳ ರಕ್ಷಣೆಯಲ್ಲಿ ನಡೆದ ಯುದ್ಧಗಳಲ್ಲಿ ಮರಣ ಹೊಂದಿದ ವೀರನ ಸ್ಮಾರಕಗಳೇ ಈ ತುಱುಗೊಳ್ ವೀರಗಲ್ಲುಗಳು.[೨೯೯]

ನನ್ನ ಅಧ್ಯಯನ ವ್ಯಾಪ್ತಿಯ ತಾವರಗೆರೆ, ಬಲ್ಲುಟಗಿ, ಸಿರಗುಪ್ಪಿ ಮತ್ತು ಹೀರೆಮನ್ನಾಪುರ ಗ್ರಾಮಗಳಲ್ಲಿ ಈ ತುಱುಗೊಳ ವೀರಗಲ್ಲುಗಳು ಕಂಡುಬಂದಿವೆ. ಇವುಗಳಲ್ಲಿ ಅತ್ಯಂತ ಪುರಾತನವಾದ ವೀರಗಲ್ಲು ಸಿರಗುಪ್ಪಿಯಲ್ಲಿದೆ.[೩೦೦] ಈ ವೀರಗಲ್ಲಿನ ಮೇಲೆ ಕ್ರಿ.ಶ.ಸು.೧೧೧೦ರ ಪ್ರಕಟಿತ ಶಾಸನವಿದೆ. 'ಸಿರಿಗೊಪ್ಪದ ನಿರಮೊಪ್ಪ ಆಚಗಾವುಣ್ಡನು ಇದ್ದಾಗ ತುಱುಗಳ್ಳರೊಡನೆ ಹೋರಾಡಿ ತಳಾರಿ ಕಾಳಭೋವನು ಮಡಿಯುತ್ತಾನೆ. ಇವನ ಮಗ ಬಮ್ಮಪನಿಗೆ ಹೊಲ ಹಾಗೂ ಮನೆಯನ್ನು ಮಾನ್ಯವಾಗಿ ನೀಡುತ್ತಾರೆ' ಎಂದು ಉಲ್ಲೇಖವಿದೆ. ಹಿರೇಮನ್ನಾಪುರದಲ್ಲಿರುವ ಕ್ರಿ.ಶ.೧೧ನೆಯ ಶತಮಾನದ ವೀರಗಲ್ಲು[೩೦೧] ಮೂರು ಹಂತಗಳ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ವೀರ ಹೋರಾಡುತ್ತಿದ್ದು, ಅವನ ಹಿಂಭಾಗದಲ್ಲಿ ಗೋವುಗಳನ್ನು ಕೆತ್ತಲಾಗಿದೆ. ಮಧ್ಯ ಹಂತದಲ್ಲಿ ದೇವಕನ್ಯೆಯರು ವೀರನನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದು, ಮೇಲಿನ ಹಂತದಲ್ಲಿ ಶಿವಲಿಂಗ ಆರಾಧನೆಯಲ್ಲಿರುವ ವೀರನ ಶಿಲ್ಪಗಳನ್ನು ಬಿಡಿಸಲಾಗಿದೆ. ತಾವರಗೆರೆಯಲ್ಲಿರುವ ಕ್ರಿ.ಶ.೧೫ನೆಯ ಶತಮಾನದ ವೀರಗಲ್ಲು[೩೦೨] ಮೂರು ಹಂತದ ಶಿಲ್ಪಗಳನ್ನು ಹೊಂದಿದೆ. ಈ ವೀರಗಲ್ಲಿನ ಕೆಳಹಂತದಲ್ಲಿ ವೀರನೊಬ್ಬ ಹೋರಾಡುತ್ತಿರುವಂತೆ ಮತ್ತು ಗೋವುಗಳನ್ನು ಚಿತ್ರಿಸಲಾಗಿದೆ. ಮಧ್ಯಹಂತದಲ್ಲಿ ದೇವಕನ್ಯೆಯರು ವೀರನನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿರುವಂತೆ ಮತ್ತು ಮೇಲೀನ ಹಂತದಲ್ಲಿ ವೀರನು ಶಿವಲಿಂಗದ ಆರಾಧನೆಯಲ್ಲಿ ಮಗ್ನನಾಗಿರುವಂತೆ ಬಿಡಿಸಲಾಗಿದೆ. ಬಲ್ಲುಟಗಿಯಲ್ಲಿ ಕ್ರಿ.ಶ.೧೬ನೆಯ ಶತಮಾನದ ವೀರಗಲ್ಲು[೩೦೩] ಇದೆ. ಒಂದೇ ಹಂತದಲ್ಲಿರುವ ಈ ವೀರಗಲ್ಲಿನ ಮೇಲೆ ವೀರನೊಬ್ಬ ಹೋರಾಡುತ್ತಿದ್ದು, ಅವನ ಹಿಂಭಾಗದಲ್ಲಿ ಗೋವುಗಳನ್ನು ಕೆತ್ತಿರುವುದು ಕಾಣಬಹುದಾಗಿದೆ.

ಪ್ರಾಣಿಬೇಟೆ ವೀರಗಲ್ಲು

ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತವಿದ್ದ ಬೇಟೆಯ ವಿವರಗಳನ್ನು ತಿಳಿಯಲು ಇರುವ ಆಕರಗಳೆಂದರೆ ವೀರಗಲ್ಲುಗಳು. ಮಾನವನು ಬೇಟೆಯಾಡುವದು ಬಹಳ ಪುರಾತನ ಕಾಲದಿಂದ ಬಂದ ಪದ್ಧತಿಯಾಗಿದೆ. ಪ್ರಾಣಿಗಳ ಮಾಂಸಕ್ಕಾಗಿ ಕೆಲವರು ಬೇಟೆಯಾಡಿದರೆ, ಮತ್ತೆ ಕೆಲವರು ಮೋಜಿಗಾಗಿ ಅಥವಾ ತಮ್ಮ ಕಾರ್ಯಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದರು. ಕೆಲವು ಪ್ರಾಣಿಗಳು ಊರಿಗೆ ನುಗ್ಗಿ ಜನರಿಗೆ, ದನಗಳಿಗೆ ತೊಂದರೆ ಕೊಡುವುದಲ್ಲದೆ, ಬೆಳೆದ ಬೆಳೆಗಳನ್ನು ನಾಶಪಡಿಸುತ್ತಿದ್ದವು. ಇಂಥಹ ಪ್ರಾಣಿಗಳ ಕಾಟವನ್ನು ತಡೆಯಲಾರದೆ ಅದನ್ನು ಬೇಟೆಯಾಡಿ ಕೊಂದುಹಾಕಲು ಹೋಗಿ ತಾವೇ ಮರಣವನ್ನಪ್ಪಿದ ಘಟನೆಗಳನ್ನು ತಿಳಸುವುದೇ ವೀರಗಲ್ಲುಗಳು. ಇಂಥ ವೀರಗಲ್ಲುಗಳು ಹಂದಿಬೇಟೆ, ಆನೆಬೇಟೆ, ಹುಲಿಬೇಟೆ, ಹಾವುಬೇಟೆ, ಮೊಸಳೆಬೇಟೆ,

[illegible]

ಜಿಂಕೆಬೇಟೆ, ಇತರೆ ಹಲವು ಪ್ರಾಣಿಗಳ ಜೊತೆ ಬೇಟೆಯಾಡಿದ ಶಿಲ್ಪಗಳನ್ನು ಒಳಗೊಂಡಿರುತ್ತವೆ. ಈ ರೀತಿಯ ವೀರಗಲ್ಲುಗಳು ಬರೆಹ ರಹಿತವಾಗಿರುತ್ತವೆ. ಬರೆಹವಿದ್ದರೂ ಬಹಳ ಸಂಕ್ಷಿಪ್ತವಾಗಿರುತ್ತವೆ. ಇಂಥಹ ಪ್ರಾಣಿಬೇಟೆ ವೀರಗಲ್ಲುಗಳಲ್ಲಿ ಒಂದು ಆನೆಬೇಟೆ ವೀರಗಲ್ಲು ಮಾತ್ರ ಕುಷ್ಟಗಿ ಪರಿಸರದಲ್ಲಿ ದೊರೆತಿದೆ.

ಆನೆಬೇಟೆ ವೀರಗಲ್ಲು

ಆನೆ ಪ್ರಾಣಿಗಳಲ್ಲೆಲ್ಲ ಪ್ರತಿಷ್ಠಿತ ಪ್ರಾಣಿ. ಪ್ರಾಣಿಬೇಟೆಗಳಲ್ಲಿ ಆನೆಬೇಟೆ ಪ್ರಮುಖವಾಗಿದೆ. ಇಲ್ಲಿ ಆನೆಯನ್ನು ನೇರವಾಗಿ ಕೊಲ್ಲುವುದೇ ಪ್ರಮುಖ ಉದ್ದೇಶವಾಗಿರುತ್ತದೆ. ಈ ರೀತಿಯ ವೀರಗಲ್ಲುಗಳು ಬಹಳ ವಿರಳ. ಇಂಥ ಒಂದು ವೀರಗಲ್ಲು ನನ್ನ ಅಧ್ಯಯನದ ವ್ಯಾಪ್ತಿಯ ಪುರದ ಸೋಮಶೇಖರಯ್ಯನವರ ಹೊಲದಲ್ಲಿದೆ. ಕ್ರಿ.ಶ.ಸು.೧೩ನೆಯ ಶತಮಾನದ ಈ ವೀರಗಲ್ಲಿನ[೩೦೪] ಮೇಲೆ ವೀರನೊಬ್ಬ ಆನೆಯನ್ನು ಇರಿಯುತ್ತಿರುವ ಶಿಲ್ಪವಿದೆ. ಈ ಶಿಲ್ಪದಿಂದ ಇದು ಆನೆಬೇಟೆ ವೀರಗಲ್ಲು ಎಂದು ಗುರುತಿಸಲಾಗಿದೆ.

ಮಹಾಸತಿ ಕಲ್ಲುಗಳು

ಪ್ರಾಚೀನ ಭಾರತೀಯ ಜನರಲ್ಲಿ ನಂಬಿಕೆ ಅಪಾರ ಪ್ರಮಾಣದಲ್ಲಿ ಬೇರೂರಿತ್ತು. ಪರಲೋಕದ ಕಲ್ಪನೆಯಲ್ಲಿ ನಂಬಿಕೆ ಇಟ್ಟ ಜನರು ಮರಣ ಹೊಂದಿದ ವ್ಯಕ್ತಿಯ ಜೊತೆಯಲ್ಲಿ ಅವನಿಗಿಷ್ಟವಾದ ಕೆಲವು ವಸ್ತುಗಳನ್ನು ಕಳುಹಿಸಿಕೊಡುವ ಸಂಪ್ರದಾಯವನ್ನು ರೂಢಿಸಿಕೊಂಡರು.[೩೦೫] ನಮ್ಮ ಪುರಾತನ ಸಮಾಧಿಗಳನ್ನು ತೆರೆದಾಗ ಅಲ್ಲಿ ಹೂಳಿದ್ದ ವ್ಯಕ್ತಿಯ ಅಸ್ಥಿ ಪಂಜರದ ಜೊತೆಯಲ್ಲಿ ಅನೇಕ ಕುಡಿಕೆ, ಆಭರಣಗಳು ದೊರೆತಿವೆ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ವ್ಯಕ್ತಿ ಸತ್ತಾಗ ಅವನಿಗಿಷ್ಟವಾದ ವಸ್ತುಗಳನ್ನು ಸಮಾಧಿಯ ಮುಂದಿಟ್ಟು ಪೂಜಿಸುವುದನ್ನು ಕಾಣುತ್ತೇವೆ. ಈ ಭಾವನೆಯೇ ಮಾಸ್ತಿ ಪರಂಪರೆಗೆ ದಾರಿ ಮಾಡಿಕೊಟ್ಟಿತೆನ್ನಬಹುದು. ಪುರುಷನ ಅತ್ಯಂತ ಪ್ರಿಯವಾದ ವಸ್ತುಗಳಲ್ಲಿ ಆತನ ಪತ್ನಿಯೂ ಒಬ್ಬಳು. ತಾನು ಮರಣ ಹೊಂದಿದ ನಂತರ ತನ್ನ ಪತ್ನಿ ತನ್ನಿಂದ ಅಗಲಿರಬಾರದೆಂಬ ಭ್ರಮೆಯಿಂದಲೋ ಅಥವಾ ಅವಳು ಮತ್ತೊಬ್ಬನ ವಶವರ್ತಿಯಾಗಿರಬಾರದೆಂಬ ಕಲ್ಪನೆಯಿಂದಲೋ ತಾನೂ ಹೋದಾಗ ತನ್ನೊಡನೆ ಅವಳನ್ನು ಕರೆದೊಯ್ಯುವಂತೆ ಮಾಡಿದ ವ್ಯವಸ್ಥೆ ಎಂದು ಹೇಳಬಹುದು.[೩೦೬]

ಈ ಪದ್ಧತಿಯ ಆರಂಭದ ಕಾಲವನ್ನು ನಿರ್ದಿಷ್ಟವಾಗಿ ಹೇಳುವದು ಕಷ್ಟಸಾಧ್ಯದ ಮಾತೇ ಸರಿ. ವಿದ್ವಾಂಸರಲ್ಲಿ ನಿಖರವಾದ ಅಭಿಪ್ರಾಯಗಳಿಲ್ಲ. ಇಂಥಹ ಪದ್ಧತಿಯು ಕೇವಲ ಭಾರತದಲ್ಲಿ ಅಷ್ಟೇ ಅಲ್ಲದೇ ಪ್ರಪಂಚದ ನಾಗರಿಕತೆಗಳಾದ ಈಜಿಪ್ಟ, ಸುಮೇರಿಯಾ, ಗ್ರೀಕ, ಚೀನಿಯರಲ್ಲಿಯೂ ಆಚರಣೆಯಲ್ಲಿತ್ತು. ಮಹಾಭಾರತದಲ್ಲಿ ಸತಿ ಪದ್ಧತಿಯ ಉಲ್ಲೇಖವಿದೆ. ಪಾಂಡು ರಾಜನ ಮರಣದ ನಂತರ ಆತನ ಕಿರಿಯ ರಾಣಿ ಮಾದ್ರಿ ಅಕ್ಕ ಕುಂತಿಗೆ ಈ ರೀತಿ ಹೇಳುತ್ತಾಳೆ. 'ಅಕ್ಕ ನಾನು ಪತಿಯೊಡನೆ ಚಿತೆಯೇರುತ್ತೇನೆ. ಐವರು ಮಕ್ಕಳ ಭಾರವು ನಿನ್ನದೇ' ಎಂದು ಹೇಳಿದಾಗ, ಕುಂತಿಯು ಕರುಳು ಕಿತ್ತಿಬರುವಂತೆ ರೋಧಿಸುತ್ತಾಳೆ. ವೈಧವ್ಯದ ಬಾಳು ಬಾಳೆ? ಏಕೆ ಈ ಬಾಳು

[illegible]

[illegible]

[illegible]

[illegible]

ಎಂದು ಕುಂತಿ ಚಿಂತಿಸಿದರೂ ಮಕ್ಕಳ ಉಳುವಿಗಾಗಿ ಕಷ್ಟ, ನಿಷ್ಠುರಗಳನ್ನು ಸಹಿಸಿ ಮಕ್ಕಳ ಪೋಷಣೆಗೆ ನಿಂತರೆ, ಮಾದ್ರಿ ಚಿತೆಯೇರಿ ಸತಿಸಾಧ್ವಿಯಾಗುತ್ತಾಳೆ.

ಅಗ್ನಿಪುರಾಣದಲ್ಲಿ 'ಮಡಿದ ಗಂಡನ ಜೊತೆ ಬೆಂಕಿಯಲ್ಲಿ ಬಿದ್ದು ಮರಣ ಹೊಂದಿದ ಸತಿ, ಪತಿ ಸಹಿತ ಸ್ವರ್ಗ ಸೇರುತ್ತಾಳೆ' ಎಂದು ತಿಳಿದುಬರುತ್ತದೆ. ಬ್ರಹಸ್ಪತಿಯು 'ಪತಿಯ ಸುಖ ದು:ಖದಲ್ಲಿ ಪತ್ನಿಯು ಸಹ ಭಾಗಿಯಾಗಿದ್ದಲ್ಲಿ ಅವನ ಮರಣನಂತರ ತಾನು ಮೃತ್ಯು ವನ್ನಪ್ಪುತ್ತಾಳೆ. ಆಗಲೇ ನಿಜವಾಗಿ ಆಕೆ ಅವನಲ್ಲಿ ಅನುರಕ್ತಳು' ಎಂದು ಹೇಳಿದ್ದಾನೆ. ಈ ಪದ್ಧತಿಗೆ ಬಳಸುವ ಪದ ಬಹುಶ: ಶಿವನ ಪತ್ನಿ ದಾಕ್ಷಾಯಿಣಿ ಅಥವಾ ಸತಿದೇವಿ ಪತಿಯ ಪರವಾಗಿ ನಿಂತು, ದಕ್ಷಬ್ರಹ್ಮನ ಯಜ್ಞನದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಗಂಡನಿಗಾಗಿ ಹೆಂಡತಿ ಚಿತಾ ಪ್ರವೇಶ ಮಾಡುವ ಈ 'ಸತಿ'ಪದ್ಧತಿಗೆ ಮೂಲವಾಗಿರಬೇಕು.[೨೦೭] ಪುರಾತನ ಕಾಲದಲ್ಲಿ ಈ ಸತಿಪದ್ಧತಿ ಬ್ರಾಹ್ಮಣರಲ್ಲಿ ಆರಂಭವಾಗಿ ಕಾಲಾನಂತರ ನಿಷೇಧಕ್ಕೊಳಪಟ್ಟು, ಕ್ಷತ್ರಿಯರಲ್ಲಿ ಅದು ಮುಂದುವರೆಯಿತು. ಸತಿಯಾಗಬಯಸುವವಳು ಬೇರೊಂದು ಲೋಕ ದಲ್ಲಿರುವ ತನ್ನ ಪತಿಯ ಸಂಗವನ್ನು, ಸಾನಿಧ್ಯವನ್ನು ಬಯಸಿ ಸಹಗಮನ ಕೈಗೊಳ್ಳುತ್ತಿದ್ದಳು. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಪತಿಯೊಡನೆ ಸಪ್ತಪದಿ ತುಳಿದ ಅವಳು ಸಹಗಮನದ ಮೂಲಕ ಅಗಲಿದ ಪತಿಯನ್ನು ಪಡೆಯುವ ಕಲ್ಪನೆಯಿತ್ತು.

ಸತಿ ಆಚರಿಸುವವಳು ಮೊದಲು ಎಣ್ಣೆ, ಅರಿಶಿಣ ಹಚ್ಚಿಕೊಂಡು ಪುಷ್ಪಾಲಂಕಾರಳಾಗಿ ಹಳದಿ ಸೀರೆಯನ್ನುಟ್ಟು, ಕೈಯಲ್ಲಿ ನಿಂಬೆಯ ಹಣ್ಣನ್ನು ಹಿಡಿದು, ಊರ ಮಹಾಜನರ ಸಮ್ಮುಖದಲ್ಲಿ ಮನೆಮನೆಗೆ ಕಾಲು ನಡಿಗೆಯಿಂದ ಹೋಗಿ ಕೋರೂಟ ಮಾಡಿ, ಅಗ್ನಿ ಪ್ರವೇಶಿಸುವ ಮೊದಲು ತನ್ನ ಬಲಗೈಯನ್ನು ಕಲ್ಲಿನ ಮೇಲೆ ಒತ್ತಿ, ಮೈಮೇಲಿನ ಆಭರಣಗಳನ್ನು ದಾನ ಮಾಡಿ, ಎಣ್ಣೆಯಲ್ಲಿ ಮುಖನೋಡಿ, ನೋಡುಗರತ್ತ ಕೈಬಿಸುತ್ತ ಮಂಗಳವಾದ್ಯಗಳು ಮೊಳಗುತ್ತಿದ್ದಂತೆ ಕರ್ಪೂರ ಕಟ್ಟಿಗೆಗಳಿಂದ ಬೆಂಕಿಯಲ್ಲಿ ಚಿತೆ ಏರುತ್ತಿದ್ದಳು. ಹೀಗೆ ಬೆಂಕಿಯಲ್ಲಿ ಬಿದ್ದು ಸಾಯುವ ಕ್ರಿಯೆ ಸತಿ ಆಚರಣೆಯಾಗಿತ್ತು.

ತುಱುಗೊಳ್, ಉರಳಿವು ಮತ್ತು ಪೆಣ್ಬುಯ್ಯಲ್‌ಗಳಂತಹ ಸಂಧರ್ಭಗಳಲ್ಲಿ ವೀರಮರಣ ಹೊಂದಿದ ವೀರರ ಪತ್ನಿಯರು ತಮ್ಮ ಮುಂದಿನ ಜೀವನದ ಭಯದಿಂದಲೋ, ಇಲ್ಲವೇ ಸ್ವರ್ಗ ಪ್ರಾಪ್ತಿಯಾಗುವದೆಂಬ ಭಾವನೆಯಿಂದಲೋ ಸತಿ ಆಚರಿಸುತ್ತಿದ್ದರು. ಇದರಲ್ಲಿ ಅರಸ, ಸಾಮಂತ, ಗಾವುಂಡ ಅಲ್ಲದೆ ಜನ ಸಾಮಾನ್ಯರಿಗೆ ಸಂಬಂಧಿಸಿದ ಮಹಿಳೆಯರೂ ಭಾಗಿಗಳಾಗುತ್ತಿದ್ದರು.

ಒಟ್ಟಿನಲ್ಲಿ ಗಂಡ ಸತ್ತ ಮೇಲೆ ಆತನ ಜೊತೆ ಪ್ರಾಣ ತ್ಯಾಗ ಮಾಡುವ ಸ್ತ್ರೀಯರನ್ನು 'ಮಹಾಸತಿ' ಅಥವಾ 'ಮಾಸ್ತಿ' ಎಂದು ಕರೆಯುತ್ತಿದ್ದರು. 'ಮಾಸ್ತಿ' ಎಂಬುದು ಸಂಸ್ಕೃತ ಭಾಷೆಯ ಮಹಾಸತಿ ಎಂಬ ಪದದ ಸಂಕ್ಷಿಪ್ತರೂಪ. ಸಹಗಮನವನ್ನು ಮಾಡಿ 'ಮಹಾಸತಿ'ಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ 'ಮಾಸ್ತಿಕಲ್ಲು'ಗಳು. ಮಾಸ್ತಿಕಲ್ಲುಗಳಲ್ಲಿ ಸಹಗಮನ ಮತ್ತು ಅನುಗಮನ ಶಾಸನಗಳೆಂದು ಗುರುತಿಸಲಾಗುತ್ತದೆ. ಸಹಗಮನ ಪದವೇ ಸೂಚಿಸುವಂತೆ ಗಂಡ ಸತ್ತಾಗ ಅವನ ಜೊತೆಗೆ ಚಿತೆಗೆ ಹಾರಿ ಪ್ರಾಣ ಬಿಡುವುದಾಗಿತ್ತು. ಅನುಗಮನ ಎಂದರೆ, ಪತಿಯು

ದೂರದ ನಾಡಿನಲ್ಲಿ ಹೋರಾಟದ ಸಂದರ್ಭದಲ್ಲಿ ವೀರಮರಣ ಹೊಂದಿದಾಗ ಅಸುದ್ದಿಯನ್ನು ಕೇಳಿ ಆತನ ಪತ್ನಿ ಅವನಿಗೆ ಸೇರಿದ ಯಾವುದಾದರೊಂದು ವಸ್ತುವನ್ನು ಜೊತೆಯಲ್ಲಿರಿಸಿಕೊಂಡು ಚಿತೆ ಏರುವುದಾಗಿತ್ತು.

ಮಾಸ್ತಿಕಲ್ಲುಗಳನ್ನು ಸುಲಭವಾಗಿ ಗುರುತಿಸಬಹುದು. ಇವುಗಳ ಮೇಲೆ ಬರಹ ಕಂಡುಬರುವುದಿಲ್ಲ. ಆದರೆ ಬಹಳಷ್ಟು ಅರ್ಥವತ್ತಾದ ಶಿಲ್ಪದಿಂದ ಕೂಡಿದ ಒಂದು ಶಿಲಾಫಲಕ. ಆ ಶಿಲಾಫಲಕಗಳ ಮೇಲೆ ಒಂದು ಸ್ತಂಭದ ಮಧ್ಯಭಾಗದಿಂದ ಹೊರಚಾಚಿ ಮೇಲಕ್ಕೆ ಎತ್ತಿದಂತೆ ಇರುವ ಒಂದು ದೊಡ್ಡ ತೋಳಿನ ಚಿತ್ರವಿರುತ್ತದೆ. ಇವುಗಳನ್ನು 'ಒಂಟಿಕೈ ಮಾಸ್ತಿಕಲ್ಲು', 'ಒಕ್ಕೈ ಮಾಸ್ತಿಕಲ್ಲು' ಎಂದು ಗ್ರಾಮೀಣ ಪ್ರದೇಶಗಳಲ್ಲಿ 'ವ್ಯಾಸನ ತೋಳು' ಎಂದು ಕರೆಯುವದುಂಟು. ಇಂಥ ತೋಳಿನ ಕೈಯ ಹೆಬ್ಬೆರಳು ಮತ್ತು ತೋರುಬೇರಳುಗಳ ಮಧ್ಯದಲ್ಲಿ ಒಂದು ನಿಂಬೆಯ ಹಣ್ಣು, ಪುರುಷ ಸ್ತ್ರೀ ಶಿಲ್ಪ, ಅವರ ಪಕ್ಕದಲ್ಲಿ ಅಥವಾ ಮೇಲ್ಭಾಗದಲ್ಲಿ ಒಂದು ಶಿವಲಿಂಗವನ್ನು ಸಾಮಾನ್ಯವಾಗಿ ಮಾಸ್ತಿಕಲ್ಲುಗಳ ಮೇಲೆ ಬಿಡಿಸಿರುವ ಶಿಲ್ಪಗಳಾಗಿರುತ್ತವೆ. ಅಂದರೆ ಸತಿ ಆಚರಣೆಯೊಂದರ ಸ್ಮಾರಕಕ್ಕಾಗಿ ನಿಲ್ಲಿಸಿರುವ ಕಲ್ಲುಗಳೇ ಈ ಮಾಸ್ತಿಕಲ್ಲುಗಳು. ಪ್ರಸ್ತುತ ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಒಂದು ಒಕ್ಕೈಮಾಸ್ತಿಕಲ್ಲು ಮತ್ತು ಮೂರು ವೀರಮಾಸ್ತಿಕಲ್ಲುಗಳು ಕಂಡುಬಂದಿವೆ.

ಗೋತಗಿಯಲ್ಲಿ[೨೦೮] ಮಹಾಸತಿಯ ಘಟನೆಯನ್ನು ತಿಳಿಸಲು ಸಾಂಕೇತಿಕವಾಗಿ ಕಂಬದಿಂದ ಹೊರಟ ಕೈಯನ್ನು ಚಿತ್ರಿಸಲಾಗಿದೆ. ಇದನ್ನು ಒಕ್ಕೈಮಾಸ್ತಿ, ತೋಳುಗೈ, ವ್ಯಾಸನತೊಳು ಎಂದೆಲ್ಲಾ ಕರೆಯುತ್ತಾರೆ. ಮಹಾಸತಿಯು ಬೆಂಕಿಯ ಹೊಂಡಕ್ಕೆ ಬೀಳುವಾಗ ಎಲ್ಲರಿಗೂ ತನ್ನ ಬಲಗೈಯನ್ನು ಎತ್ತಿ ಹರಸುತ್ತಿದ್ದಳು. ಅವಳ ಸಾವಿನ ನಂತರ ಅವಳು ಹರಸಿದ ಕೈಯ ರೂಪವನ್ನು ಶಿಲೆಗಳ ಮೇಲೆ ಕೆತ್ತಿ ಅವಳ ಸ್ಮಾರಕವಾಗಿ ನಿಲ್ಲಿಸಿರುತ್ತಾರೆ.

ಕೆಲವು ಮಹಾಸತಿ ಕಲ್ಲುಗಳಲ್ಲಿ ವೀರನಿಗೂ ಪ್ರಧಾನವಿದ್ದು, ಇಬ್ಬರನ್ನೂ ಸರಿಸಮನಾಗಿ ಚಿತ್ರಿಸಲಾಗಿರುತ್ತದೆ. ಇಂಥವುಗಳನ್ನು ವೀರಮಾಸ್ತಿಕಲ್ಲುಗಳೆಂದು ಗುರುತಿಸಲಾಗುತ್ತದೆ. ತಾವರಗೆರೆ, ಮಾಲಗಿತ್ತಿ ಮತ್ತು ಕುಷ್ಟಗಿಯಲ್ಲಿ ಇಂಥ ವೀರಮಾಸ್ತಿಕಲ್ಲುಗಳು ಕಂಡುಬಂದಿವೆ.

ತಾವರಗೆರೆಯಲ್ಲಿ ಕ್ರಿ.ಶ.೧೫ನೆಯ ಶತಮಾನದ ವೀರಮಾಸ್ತಿಕಲ್ಲು[೨೦೯] ಇದೆ. ವೀರನು ಕುದುರೆಯ ಮೇಲೆ ಕುಳಿತಿದ್ದು, ಮಹಾಸತಿಯು ತನ್ನೆರೆಡು ಕೈಗಳನ್ನು ಮೇಲಕ್ಕೆ ಎತ್ತಿ ನಿಂತಿರುವಂತೆ ಚಿತ್ರಿಸಲಾಗಿದೆ. ಮಾಲಗಿತ್ತಿಯಲ್ಲಿ ಕ್ರಿ.ಶ.೧೬ನೆಯ ಶತಮಾನದ ವೀರ ಮಾಸ್ತಿಕಲ್ಲು[೨೧೦] ಇದೆ. ಇದರಲ್ಲಿ ವೀರನು ತನ್ನ ಪತ್ನಿಯ ಹೆಗಲ ಮೇಲೆ ಕೈ ಹಾಕಿ ನಿಂತಿದ್ದು, ಪತ್ನಿಯು ತನ್ನ ಕೈಯನ್ನು ಮೇಲಕ್ಕೇತ್ತಿ ನಿಂತಿರುವಂತೆ ತೊರಿಸಲಾಗಿದೆ. ಇದೇ ಶತಮಾನದ ಇನ್ನೊಂದು ಇಂಥ ಕಲ್ಲು ಕುಷ್ಟಗಿಯಲ್ಲಿದೆ.[೨೧೧] ಈ ಕಲ್ಲಿನ ಮೇಲೆ ವೀರನು ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಅವನ ಹಿಂಭಾಗದಲ್ಲಿ ಅವನ ಸತಿಯು ತನ್ನೆರಡು ಕೈಗಳನ್ನು ಮೇಲಕ್ಕೆ ಎತ್ತಿ ನಿಂತಿರುವಂತೆ ಚಿತ್ರಿಸಲಾಗಿದೆ.

ಆತ್ಮಬಲಿ ಕಲ್ಲುಗಳು

ಪ್ರಾಚೀನ ಕಾಲದಲ್ಲಿ 'ಆತ್ಮಬಲಿ' ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯವಾಗಿತ್ತು. ಆತ್ಮಬಲಿದಾನಗಳು ಸಹಜ ಮರಣವಲ್ಲವಾದರೂ ಆತ್ಮಹತ್ಯೆ ಎಂದು ಪರಿಗಣಿಸಲಾಗುವುದಿಲ್ಲ. ಆತ್ಮಹತ್ಯೆಗೆ ಅಶಕ್ತ ಮನಸ್ಸು ಕಾರಣ. ಆತ್ಮಬಲಿದಾನಕ್ಕೆ ಸಧೃಢ ಗಟ್ಟಿ ಮನಸ್ಸು ಇರಬೇಕು. ಆತ್ಮಬಲಿದಾನದಿಂದ ಸ್ವರ್ಗಪ್ರಾಪ್ತಿಯಾಗುತ್ತದೆ. ಎಂದು ನಮ್ಮ ಪ್ರಾಚೀನರ ನಂಬಿಕೆ. ನಮ್ಮ ಪೂರ್ವಜರು ಆತ್ಮಬಲಿದಾನಕ್ಕೆ ಧಾರ್ಮಿಕ ಲೇಪನವನ್ನು ಕೊಟ್ಟು ಅದನ್ನು ಸಮರ್ಥಿಸಿಕೊಂಡಿದ್ದಾರೆ. ಒಡೆಯನ ಅನ್ನದ ಋಣಕ್ಕಾಗಿ, ದೇವರ ಹರಕೆಗಾಗಿ, ಸ್ವರ್ಗ ಪ್ರಾಪ್ತಿಯಾಗುವುದೆಂಬ ಕಲ್ಪನೆಯಿಂದ 'ಆತ್ಮಬಲಿ' ಎನ್ನುವ ಪದ್ಧತಿ ರೂಢಿಯಲ್ಲಿತ್ತು. ಇಂಥ ಪದ್ಧತಿಯನ್ನು ಅನುಸರಿಸಿದವರ ಸ್ಮರಣಾರ್ಥವಾಗಿ ನಿರ್ಮಿಸಿದ ಕಲ್ಲುಗಳೇ 'ಆತ್ಮಬಲಿ ಕಲ್ಲುಗಳು'.

ಈ ಆತ್ಮಬಲಿದಾನ ಕಲ್ಲುಗಳನ್ನು 'ಧಾರ್ಮಿಕ ಆತ್ಮಬಲಿದಾನ' ಮತ್ತು 'ಲೌಕಿಕ ಆತ್ಮಬಲಿದಾನ' ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಮುಕ್ತಿಯನ್ನು ಪಡೆಯುವುದಕ್ಕಾಗಿ ದೇವರ ಹೆಸರಿನಲ್ಲಿ ಅಗ್ನಿ ಪ್ರವೇಶ, ಜಲಪ್ರವೇಶಗಳ ಮೂಲಕ ಪ್ರಾಣಾರ್ಪಣೆ ಮಾಡಿಕೊಳ್ಳುವುದೇ ಧಾರ್ಮಿಕ ಆತ್ಮಬಲಿದಾನ ಎಂದು ಕರೆಯಲಾಗಿದೆ. ತನ್ನನ್ನು ಪೋಷಿಸಿದ ಮತ್ತು ದೇವ ಸಮಾನರಾದ ವ್ಯಕ್ತಿಗಳ ಮರಣದ ಸಂದರ್ಭದಲ್ಲಿ ಪ್ರಾಣತ್ಯಾಗ ಮಾಡುವುದು ಲೌಕಿಕ ಆತ್ಮಬಲಿದಾನ ಎಂದು ಕರೆಯಲಾಗಿದೆ.

ವ್ಯಕ್ತಿಯು ತನಗೆ ಪ್ರಿಯಾವಾದ ವಸ್ತು, ಪ್ರಾಣಿ ಅಥವಾ ವ್ಯಕ್ತಿಯಿಂದ ಅಗಲಿಕೆ ತಡೆಯಲಾರದೆ ಪ್ರಾಣ ಕಳೆದುಕೊಳ್ಳುತ್ತಿದ್ದನು. ಇದರಲ್ಲಿ ಆತ್ಮತೃಪ್ತಿ ಹಾಗೂ ನಿಷ್ಠೆ ಬಲವಾಗಿ ಅಡಗಿರುತ್ತಿತ್ತು. ಈ ರೀತಿ ಆತ್ಮಬಲಿದಾನವನ್ನು ಮಾಡಿಕೊಳ್ಳುವುದು ಪರಮಪುಣ್ಯದ ಕೆಲಸವೆಂದು ನಂಬಲಾಗಿತ್ತು.

ನಿಸಿಧಿ ಕಲ್ಲುಗಳು

ವ್ರತಾಚರಣೆ ಮೂಲಕ ಮಡಿದವರ ಸ್ಮಾರಕವಾಗಿ ನಿಲ್ಲಿಸುವ ಕಲ್ಲುಗಳೇ 'ನಿಸಿಧಿ ಕಲ್ಲುಗಳು'. ಇಂಥ ಕಲ್ಲುಗಳನ್ನು ವ್ರತಹಿಡಿದು ತೀರಿಕೊಂಡವರ ಗುರು, ಶಿಷ್ಯ, ಕೌಟುಂಬಿಕ ಸಂಬಂಧದವರು ನಿಲ್ಲಿಸಿರುತ್ತಾರೆ. 'ನಿಸಿಧಿ' ಪದದ ಅರ್ಥದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. 'ವ್ರತಧಾರಿ ಕುಳಿತ ಸ್ಥಳದಲ್ಲಿ ಮಾಡಿದ ಗುರುತು' ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು 'ನಿಷಿಧಿಯಂ ನೀರೆಸಿ, ನಿಸಿಧಿಯಂ, ಮಾಡಿಸಿ' ಇತ್ಯಾದಿ ಹೇಳಿಕೆಗಳ ಬಲದಿಂದ 'ದಹನ ಸ್ಥಳದಲ್ಲಿ ರಚಿಸಿದ ಸ್ಮಾರಕ' ಎಂದು ಹೇಳುತ್ತಾರೆ.[೩೧೨] ದೇಹದಂಡನೆ ಮತ್ತು ದೇಹ ತ್ಯಾಗಗಳು ಜೈನಧರ್ಮದಲ್ಲಿ ವಿಶೇಷವಾಗಿ ಕಂಡುಬರುವ ತತ್ವಗಳಾಗಿದ್ದು, ಇವುಗಳನ್ನು 'ಸಲ್ಲೇಖನ ವ್ರತ', 'ಸಮಾಧಿ ಮರಣ'ಗಳೆಂದು ಕರೆಯಲಾಗುತ್ತದೆ. ಇಂಥ ಮರಣವನ್ನು ಮುನಿವರ್ಗದವರು, ರಾಜಪರಿವಾರದವರು ಮತ್ತು ಸಾಮಾನ್ಯ ಪ್ರಜೆಗಳು ಸಹ ಬಯಸುತ್ತಿದ್ದರು. ಈ ರೀತಿ ಪ್ರಾಣಾರ್ಪಣೆ ಮಾಡಿಕೊಳ್ಳುವುದು ಪರಮಪುಣ್ಯದ ಸನ್ನಿವೇಶವಾಗುತ್ತಿತ್ತು. ಹೀಗೆ ಪ್ರಾಣಾರ್ಪಣೆ ಮಾಡಿಕೊಂಡವರ ಸ್ಮರಣಾರ್ಥವಾಗಿ ನಿರ್ಮಿಸಿದ ಕಲ್ಲುಗಳೇ 'ನಿಸಿಧಿ ಕಲ್ಲುಗಳು'.

[illegible]

ಈ ನಿಸಿಧಿಕಲ್ಲುಗಳನ್ನು ಜೈನರು ಪರಮ ಪವಿತ್ರವೆಂದು ಇಂದಿಗೂ ಪೂಜಿಸುತ್ತಿರುತ್ತಾರೆ. ಕರ್ನಾಟಕದಲ್ಲಿ ಇಂಥ ಕಲ್ಲುಗಳು ಹೇರಳವಾಗಿ ದೊರೆತಿವೆ. ಈ ನಿಸಿಧಿ ಕಲ್ಲುಗಳನ್ನು ಎರಡು ಭಾಗಗಳಾಗಿ ವಿಭಜಿಸಬಹುದು. ಒಂದು ಶಾಸನ ರಹಿತ ನಿಸಿಧಿಕಲ್ಲು ಮತ್ತೊಂದು ಶಾಸನ ಸಹಿತ ನಿಸಿಧಿಕಲ್ಲು. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಒಂದು ಶಾಸನ ರಹಿತ ನಿಸಿಧಿಕಲ್ಲು ಬಲ್ಲುಟಗಿಯಲ್ಲಿ ಕಂಡುಬಂದಿದೆ.[೩೧೩] ಕ್ರಿ.ಶ.ಸು.೧೬ನೆಯ ಶತಮಾನದೆನ್ನಬಹುದಾದ ಈ ನಿಸಿಧಿಕಲ್ಲು ಎರಡು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ಮೋಕ್ಷ ಪಡೆದವನನ್ನು ಮೇಲಿನ ಹಂತದಲ್ಲಿ ಜಿನ ಹಾಗೂ ಅಕ್ಕಪಕ್ಕ ಮುನಿ ಮತ್ತು ಭಕ್ತನನ್ನು ಕೆತ್ತಲಾಗಿದೆ.

ಅಡಿಟಿಪ್ಪಣಿಗಳು

೧. ದೇಸಾಯಿ.ಪಿ.ಬಿ, ಕನ್ನಡ ನಾಡಿನ ಶಾಸನಗಳು ಪು.೨೧

೨. Arthasastara-II. ೧೦

೩. Upadhyaya India in Kalidas Page No.೧೦೯-೧೧೦

೪. ಯಾಜ್ಞವಲ್ಕ್ಯ ಸಂಹಿತೆ – । ಪುಟ. ೩೧೮.೩೨೦

೫. ತಿಪ್ಪೆರುದ್ರಸ್ವಾಮಿ.ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೨೩೫

೬. ನರಸಿಂಹಮೂರ್ತಿ.ಎ.ವಿ, ಕರ್ನಾಟಕ ಶಾಸನ ಸಂಪತ್ತು, ಪು.೫-೬

೭. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೭ ಹಿರೇಮನ್ನಾಪುರ ಕ್ರಿ.ಶ.೯೯೭

೮. ನರಸಿಂಹಮೂರ್ತಿ.ಎ.ವಿ, ಕರ್ನಾಟಕ ಶಾಸನ ಸಂಪತ್ತು. ಪು.೨೩

೯. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೫ ಸಿರುಗುಪ್ಪ ಕ್ರಿ.ಶ.ಸು.೧೧೧೦

೧೦. ಅದೇ. ಶಾ.ಸಂ. ೨೩ ಆಚನೂರು

೧೧. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೧೨. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೧೩. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೦೨೪
ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೧೪. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೧೧೮

೧೫. ಅದೇ. ಶಾ.ಸಂ. ೨೦ ಚಳಗೇರಿ ಕ್ರಿ.ಶ.೧೨ನೆಯ ಶತಮಾನ

೧೬. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯

೧೭. ಅದೇ. ಶಾ.ಸಂ. ೨೬ ಅಂಟೂರಠಾಣ ಕ್ರಿ.ಶ.೧೨೬೭

೧೮. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೧೯. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

೨೦. ಅದೇ. ಶಾ.ಸಂ. ೧೬ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೧. ಅದೇ. ಶಾ.ಸಂ. ೨೮ ಅಂಟೂರಠಾಣ ಕ್ರಿ.ಶ.೧೧೯೫

೨೨. ಅದೇ. ಶಾ.ಸಂ. ೩೦ ಮಾಲಗಿತ್ತಿ ಕ್ರಿ.ಶ.೧೩ನೆಯ ಶತಮಾನ

೨೩. ಅದೇ. ಶಾ.ಸಂ. ೧೧ ತಾವರಗೆರೆ ಕ್ರಿ.ಶ.೧೨ನೆಯ ಶತಮಾನ

೨೪. ಅದೇ. ಶಾ.ಸಂ. ೧೪ ಪುರ ಕ್ರಿ.ಶ.ಸು.೧೫ನೆಯ ಶತಮಾನ
ಅದೇ. ಶಾ.ಸಂ. ೧೬ ಪುರ ಕ್ರಿ.ಶ.೧೨ನೆಯ ಶತಮಾನ
ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

೨೫. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೨೬. ಅದೇ. ಶಾ.ಸಂ. ೩೦ ಮಾಲಗಿತ್ತಿ ಕ್ರಿ.ಶ.೧೩ನೆಯ ಶತಮಾನ

೨೭. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೨೮. ಶ್ರೀಕಂಠಶಾಸ್ತ್ರಿ.ಎಸ್, ಪುರಾತತ್ವ ಶೋಧನೆ, ಪು.೨೫೯

೨೯. ಸಿ.ಪಿ.ಕೆ. 'ಶಾಸನ ಪ್ರವೇಶ' ಪುಟ. ೮೧

೩೦. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.೧೦೨೪

೩೧. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ,೧೦೪೫

೩೨. ಅದೇ. ಶಾ.ಸಂ. ೧೨ ಪುರ. ಕ್ರಿ.ಶ.ಸು.೧೪೪೬

೩೩. ಅದೇ. ಶಾ.ಸಂ. ೧೮ ಪುರ ಕ್ರಿ.ಶ. ೧೧೧೮

೩೪. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭
೩೫. ಶೇಷಶಾಸ್ತ್ರಿ.ಆರ್, ಶಾಸನ ಪರಿಚಯ, ಪು.೭೮
೩೬. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩
೩೭. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪
೩೮. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦
೩೯. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯
೪೦. ಅದೇ. ಶಾ.ಸಂ. ೨೭ ಅಂಟೂರತಾಣ ಕ್ರಿ.ಶ.೧೦೮೨
೪೧. ಅದೇ. ಶಾ.ಸಂ. ೨೮ ಅಂಟೂರತಾಣ ಕ್ರಿ.ಶ.೧೧೯೫
೪೨. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩
೪೩. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪
೪೪. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.೧೦೨೪
೪೫. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫
೪೬. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.೧೧೧೦
೪೭. ಅದೇ. ಶಾ.ಸಂ. ೭ ಹಿರೇಮನ್ನಾಪುರ ಕ್ರಿ.ಶ.೯೯೭
೪೮. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭
೪೯. ಅದೇ. ಶಾ.ಸಂ. ೧೨ ಪುರ ಕ್ರಿ.ಶ.೧೪೪೬
೫೦. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ
೫೧. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭
೫೨. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮
೫೩. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೮೨
೫೪. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯
೫೫. ಅದೇ. ಶಾ.ಸಂ. ೨೫ ಚಂದಾಲಿಂಗ ಕ್ರಿ.ಶ.೧೩೪೫
೫೬. ಅದೇ. ಶಾ.ಸಂ. ೨೬ ಅಂಟೂರತಾಣ ಕ್ರಿ.ಶ.೧೨೬೭
೫೭. ಅದೇ. ಶಾ.ಸಂ. ೨೭ ಅಂಟೂರತಾಣ ಕ್ರಿ.ಶ.೧೦೮೨
೫೮. ಅದೇ. ಶಾ.ಸಂ. ೨೮ ಅಂಟೂರತಾಣ ಕ್ರಿ.ಶ.೧೧೯೫
೫೯. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩
೬೦. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪
೬೧. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦
೬೨. ಅದೇ. ಶಾ.ಸಂ. ೭ ಹಿರೇಮನ್ನಾಪುರ ಕ್ರಿ.ಶ.೯೯೭
೬೩. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭
೬೪. ಅದೇ. ಶಾ.ಸಂ. ೧೧ ತಾವರಗೆರೆ ಕ್ರಿ.ಶ.೧೨ನೆಯ ಶತಮಾನ
೬೫. ಅದೇ. ಶಾ.ಸಂ. ೧೩ ಪುರ ಕ್ರಿ.ಶ.೧೨ನೆಯ ಶತಮಾನ
೬೬. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯
೬೭. ಅದೇ. ಶಾ.ಸಂ. ೨೬ ಅಂಟೂರತಾಣ ಕ್ರಿ.ಶ.೧೨೬೭
೬೮. ಅದೇ. ಶಾ.ಸಂ. ೨೭ ಅಂಟೂರತಾಣ ಕ್ರಿ.ಶ.೧೦೮೨
೬೯. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭
೭೦. ಅದೇ. ಶಾ.ಸಂ. ೨೮ ಅಂಟೂರತಾಣ ಕ್ರಿ.ಶ.೧೧೯೫
೭೧. ಅದೇ. ಶಾ.ಸಂ. ೨೬ ಅಂಟೂರತಾಣ ಕ್ರಿ.ಶ.೧೨೬೭

೭೨. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

೭೩. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೭೪. ಅದೇ. ಶಾ.ಸಂ. ೨ ಹೆಸರೂರು. ಕ್ರಿ.ಶ.೧೧೦೪

೭೫. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦

೭೬. ಅದೇ. ಶಾ.ಸಂ. ೭ ಹಿರೇಮನ್ನಾಪುರ ಕ್ರಿ.ಶ.೯೯೭

೭೭. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೭೮. ಅದೇ. ಶಾ.ಸಂ. ೧೧ ತಾವರಗೆರೆ ಕ್ರಿ.ಶ.೧೨ನೆಯ ಶತಮಾನ

೭೯. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೦೯೯

೮೦. ಅದೇ. ಶಾ.ಸಂ. ೨೭ ಅಂಟೂರಠಾಣ ಕ್ರಿ.ಶ.೧೦೮೨

೮೧. ಅದೇ. ಶಾ.ಸಂ. ೨೮ ಅಂಟೂರಠಾಣ ಕ್ರಿ.ಶ.೧೦೯೫

೮೨. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೮೩. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೮೪. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೮೫. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦

೮೬. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೮೭. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೮೮. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೦೯೯

೮೯. ಅದೇ. ಶಾ.ಸಂ. ೨೫ ಚಂದಾಲಿಂಗ ಕ್ರಿ.ಶ.೧೩೪೫

೯೦. ಅದೇ. ಶಾ.ಸಂ. ೨೬ ಅಂಟೂರಠಾಣ ಕ್ರಿ.ಶ.೧೨೬೭

ಅದೇ. ಶಾ.ಸಂ. ೨೭ ಅಂಟೂರಠಾಣ ಕ್ರಿ.ಶ.೧೦೮೨

ಅದೇ. ಶಾ.ಸಂ. ೨೮ ಅಂಟೂರಠಾಣ ಕ್ರಿ.ಶ.೧೦೯೫

೯೧. ಶ್ರೀಕಂಠಶಾಸ್ತ್ರಿ.ಎಸ್, ಪುರಾತತ್ವ ಶೋಧನೆ ಪು.೨೪೫

೯೨. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೯೩. ಅದೇ. ಶಾ.ಸಂ. ೨೭ ಅಂಟೂರಠಾಣ ಕ್ರಿ.ಶ.೧೦೮೨

೯೪. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೯೫. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೯೬. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೯೭. ಶ್ರೀಕಂಠಶಾಸ್ತ್ರಿ.ಎಸ್, ಪುರಾತತ್ವ ಶೋಧನೆ, ಪು.೨೪೫

೯೮. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೯೯. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೧೦೦. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೧೦೧. ಅದೇ. ಶಾ.ಸಂ. ೨೫ ಚಂದಾಲಿಂಗ ಕ್ರಿ.ಶ.೧೩೪೫

೧೦೨. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೧೦೩. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦

೧೦೪. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೧೦೫. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೦೯೯

೧೦೬. ಅದೇ. ಶಾ.ಸಂ. ೨೭.೨೮ ಅಂಟೂರಠಾಣ ಕ್ರಿ.ಶ.೧೦೮೨,೧೦೯೫

೧೦೭. Dixit.G.S.Local and self Government in Medival Karnataka. P. ೨೪.೨೮

೧೦೮. ಚನ್ನಬಸವ ಹಿರೇಮಠ, ಎಡದೊರೆ ನಾಡು, ಪು.೧

೧೦೯. EI 12.No.32 Notes by Fleet P.೨೯೬

೧೧೦. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ.೪ ಗೋತಗಿ ಕ್ರಿ.ಶ.೧೦೪೫

೧೧೧. ಅದೇ. ಶಾ.ಸಂ. ೮ ಹೀರೆಮನ್ನಾಪುರ ಕ್ರಿ.ಶ.ಸು.೧೧ನೆಯ ಶತಮಾನ

೧೧೨. ಚನ್ನಬಸವ ಹಿರೇಮಠ, ಎಡದೊರೆ ನಾಡು, ಪು.೪

೧೧೩. ಅದೇ. ಶಾ.ಸಂ. ೮ ಹೀರೆಮನ್ನಾಪುರ ಕ್ರಿ.ಶ.ಸು.೧೧ನೆಯ ಶತಮಾನ

೧೧೪. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೧೨೪

೧೧೫. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೧೧೬. ಚನ್ನಬಸವ ಹಿರೇಮಠ, ಎಡದೊರೆ ನಾಡು, ಪು.೫

೧೧೭. ARIE.B.No.೧೦೦/೮೫-೮೬

೧೧೮. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೧೧೯. ಅದೇ. ಶಾ.ಸಂ. ೧೨ ಹನುಮನಾಳ ಕ್ರಿ.ಶ.ಸು.೧೪೪೬

೧೨೦. ಅದೇ. ಶಾ.ಸಂ. ೧ ಮಂಕಲ್ಕೇರಿ. ಕ್ರಿ.ಶ.ಸು.೧೧೨೩

೧೨೧. ಅದೇ. ಶಾ.ಸಂ. ೧೫ ಪುರ ಕ್ರಿ.ಶ.ಸು.೧೫ನೆಯ ಶತಮಾನ

೧೨೨. ಅದೇ. ಶಾ.ಸಂ. ೨೩ ಆಚನೂರ ಕ್ರಿ.ಶ.ಸು.೧೨ನೆಯ ಶತಮಾನ

೧೨೩. ಅದೇ. ಶಾ.ಸಂ. ೮ ಹೀರೆಮನ್ನಾಪುರ ಕ್ರಿ.ಶ.ಸು.೧೧ನೆಯ ಶತಮಾನ

೧೨೪. ಅದೇ. ಶಾ.ಸಂ. ೭ ಹೀರೆಮನ್ನಾಪುರ ಕ್ರಿ.ಶ.೯೭

೧೨೫. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೧೨೬. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೧೨೭. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೦೨೪

೧೨೮. ಅದೇ. ಶಾ.ಸಂ. ೨೭ ಅಂಟೂರಠಾಣ ಕ್ರಿ.ಶ.೧೦೮೨

೧೨೯. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೧೩೦. ಅದೇ. ಶಾ.ಸಂ. ೧ ಮಂಕಲ್ಕೇರಿ. ಕ್ರಿ.ಶ.ಸು.೧೧೨೩

೧೩೧. ಅದೇ. ಶಾ.ಸಂ. ೨೮ ಅಂಟೂರಠಾಣ ಕ್ರಿ.ಶ.೧೧೯೫

೧೩೨. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯

೧೩೩. ಅದೇ. ಶಾ.ಸಂ. ೧೬ ಪುರ ಕ್ರಿ.ಶ.೧೨ನೆಯ ಶತಮಾನ

೧೩೪. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೧೩೫. ಅದೇ. ಶಾ.ಸಂ. ೧೫ ಪುರ ಕ್ರಿ.ಶ.ಸು.೧೫ನೆಯ ಶತಮಾನ

೧೩೬. ಅದೇ. ಶಾ.ಸಂ. ೮ ಹೀರೆಮನ್ನಾಪುರ ಕ್ರಿ.ಶ.ಸು.೧೧ನೆಯ ಶತಮಾನ

೧೩೭. ಅದೇ. ಶಾ.ಸಂ. ೧೨ ಪುರ ಕ್ರಿ.ಶ.೧೪೪೬

೧೩೮. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

೧೩೯. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೧೪೦. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೧೫೪೭

೧೪೧. ಅದೇ. ಶಾ.ಸಂ. ೮ ಹೀರೆಮನ್ನಾಪುರ ಕ್ರಿ.ಶ.ಸು.೧೧ನೆಯ ಶತಮಾನ

೧೪೨. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೧೪೩. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೧೪೪. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨
೧೪೫. ಅದೇ. ಶಾ.ಸಂ. ೨೮ ಅಂಟೂರತಾಣ ಕ್ರಿ.ಶ.೧೧೯೫
೧೪೬. ಅದೇ. ಶಾ.ಸಂ. ೨೯ ಅಂಟೂರತಾಣ ಕ್ರಿ.ಶ.೧೧-೧೨ನೆಯ ಶತಮಾನ
೧೪೭. ಅದೇ. ಶಾ.ಸಂ. ೧ ಮಂಕಲ್ಕೇರಿ. ಕ್ರಿ.ಶ.ಸು.೧೧೨೩
೧೪೮. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦
೧೪೯. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯
೧೫೦. ಅದೇ. ಶಾ.ಸಂ. ೨೪ ಯರಗೇರಿ ಕ್ರಿ.ಶ.೧೬ನೆಯ ಶತಮಾನ
೧೫೧. ನಾಗರಾಜ.ಮೈ.ನ. ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು, ಪು.೧
೧೫೨. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೨೬
೧೫೩. ತಿಪ್ಪೇರುದ್ರಸ್ವಾಮಿ.ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪು.೨೨೪
೧೫೪. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೩೮
೧೫೫. ನಾಗರಾಜ.ಮೈ.ಸ, ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು ಪು.೧೨
೧೫೬. ಕ.ವಿ.ವಿ. ಶಾ.ಸಂ.೨. ಕೊಜಿ. ಕು.ತಾ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮
೧೫೭. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨
೧೫೮. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ
೧೫೯. ಅದೇ. ಶಾ.ಸಂ. ೨೬ ಅಂಟೂರತಾಣ ಕ್ರಿ.ಶ.೧೨೬೭
೧೬೦. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ
೧೬೧. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ
೧೬೨. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭
೧೬೩. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫
೧೬೪. ಅದೇ. ಶಾ.ಸಂ. ೨೮ ಅಂಟೂರತಾಣ ಕ್ರಿ.ಶ.೧೧೯೫
೧೬೫. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨
೧೬೬. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೩೮
೧೬೭. ಕ.ವಿ.ವಿ. ಶಾ.ಸಂ.೨. ಕೊಜಿ. ಕು.ತಾ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮
೧೬೮. ಅದೇ. ಶಾ.ಸಂ. ೧೬ ಪುರ ಕ್ರಿ.ಶ.೧೨ನೆಯ ಶತಮಾನ
೧೬೯. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ
೧೭೦. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೪೦
೧೭೧. ನಾಗರಾಜ.ಮೈ.ನ, ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು ಪು.೨೪-೨೫
೧೭೨. ಕ.ವಿ.ವಿ. ಶಾ.ಸಂ.೨. ಕೊಜಿ. ಕು.ತಾ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯
೧೭೩. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨
೧೭೪. ತಿಪ್ಪೇರುದ್ರಸ್ವಾಮಿ.ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪು.೨೧೮
೧೭೫. SII XV ಲಕ್ಕುಂಡಿ ಶಾಸನ, ಗದಗ. ೧೧೮೫ ಪು.೬೭
೧೭೬. AE XIII ಲಕ್ಷೇಶ್ವರ ಶಾಸನ, ಕ್ರಿ.ಶ.೭೨೫ ಪು.೧೮೯ – ೧೯೧
೧೭೭. KEV ೭೦ ಮನಗುಂಡಿ, ಧಾರವಾಡ ಕ್ರಿ.ಶ. ೧೨೨೧
೧೭೮. AE V ಮನಗೂಳಿ ಶಾಸನ ೧೧೬೦ ಪುಟ.೧೯ – ೨೦
೧೭೯. SII XI ಚಿಕ್ಕಲಗಿ ಶಾಸನ. ೧೧೫೭ ಪುಟ.೧೩೫
೧೮೦. SII XV ಕಂದಗಲ್ಲು ತಾ. ಹುನಗುಂದ ೧೧೨೦ ಪು.೧೬೪

೧೮೧. AK XI ದಾವಣಗೆರ ೧೧೭೨ ಪು.೬೧

೧೮೨. AE V ಮನಗೂಳಿ ಶಾಸನ ೧೧೬೦ ಪು.೧೯–೨೦

೧೮೩. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೧೮೩.ಅ ಅದೇ. ಶಾ.ಸಂ.೨೧ ಚಳಗೇರಿ ಕ್ರಿ.ಶ.೧೧೭೨

೧೮೩.ಆ ಅದೇ. ಶಾ.ಸಂ.೯ ಹಿರೇಮನ್ನಾಪುರ ಕ್ರಿ.ಶ.ಸು.೧೪–೧೫ನೆಯ ಶತಮಾನ

೧೮೪. ಅದೇ. ಶಾ.ಸಂ. ೧೬ ಪುರ ಕ್ರಿ.ಶ.ಸು.೧೨ನೆಯ ಶತಮಾನ

೧೮೫. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೧೮೬. ಅದೇ. ಶಾ.ಸಂ. ೨೭ ಅಂಟೂರರತಾಣ ಕ್ರಿ.ಶ.೧೦೮೨

೧೮೭. ಅದೇ. ಶಾ.ಸಂ. ೨೭ ಅಂಟೂರರತಾಣ ಕ್ರಿ.ಶ.೧೦೮೨

೧೮೮. ಹನುಮಾಕ್ಷಿ ಗೂಗಿ. ಪಿ.ಕೆ.ರಾಠೋಡ. ಡಂಬಳ ಸಾಂಸ್ಕೃತಿಕ ಅಧ್ಯಯನ ಪು.೫೭

೧೮೯. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧೬ ಪುರ ಕ್ರಿ.ಶ.೧೨ನೆಯ ಶತಮಾನ

೧೯೦. ಒಂದು ಸಾವಿರ ವಿಳ್ಯದೆಲೆಗಳ ಕಟ್ಟು ಸಂಕ್ಷಿಪ್ತ ಕನ್ನಡ ನಿಘಂಟು ಪು.೨೮೬

೧೯೧. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯

೧೯೨. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೧೯೩. ಅದೇ. ಶಾ.ಸಂ. ೨೭ ಅಂಟೂರರತಾಣ ಕ್ರಿ.ಶ.೧೦೮೨

೧೯೪. ಅದೇ. ಶಾ.ಸಂ. ೨೭ ಅಂಟೂರರತಾಣ ಕ್ರಿ.ಶ.೧೦೮೨

೧೯೫. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೧೯೬. ಆರ್.ಎನ್.ಗುರವ, ಎಂಟುಹಿಟ್ಟು ಬರಬರೂತೆ ಜನಪದ ಸಾಹಿತ್ಯ

೧೯೭. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೧೯೮. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೧೯೯. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೨೦೦. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೦೧. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೪ನೆಯ ಶತಮಾನ

೨೦೨. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯

೨೦೩. ಅದೇ. ಶಾ.ಸಂ. ೨೮ ಅಂಟೂರರತಾಣ ಕ್ರಿ.ಶ.೧೧೯೫

೨೦೪. ಅದೇ. ಶಾ.ಸಂ. ೨೬ ಅಂಟೂರರತಾಣ ಕ್ರಿ.ಶ.೧೨೬೭

೨೦೫. ಅದೇ. ಶಾ.ಸಂ. ೧೮ ಪುರ ಕ್ರಿ.ಶ.೧೦೧೮

೨೦೬. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೦೨೪

೨೦೭. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೦೪೫

೨೦೮. ಅದೇ. ಶಾ.ಸಂ. ೨೭ ಅಂಟೂರರತಾಣ ಕ್ರಿ.ಶ.೧೦೮೨

೨೦೯. ಅದೇ. ಶಾ.ಸಂ. ೨೮ ಅಂಟೂರರತಾಣ ಕ್ರಿ.ಶ.೧೧೯೫

೨೧೦. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೨೧೧. ಅದೇ. ಶಾ.ಸಂ. ೧ ಮಂಕಲ್ಕೇರಿ ಕ್ರಿ.ಶ.ಸು.೧೧೨೩

೨೧೨. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೨೧೩. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೧೪. ಕಲಬುರ್ಗಿ.ಎಂ.ಎಂ, ಕನ್ನಡ ನಾಮ ವಿಜ್ಞಾನ ಪು.೨

೨೧೫. ಅಂಗಡಿ.ಎಸ್.ಎಸ್,'ಕರ್ನಾಟಕದಲ್ಲಿ ಸ್ಥಳನಾಮ ಅಧ್ಯಯನ'. ಸ್ಥಳನಾಮಗಳು ಪರಿವರ್ತನೆ

ಮತ್ತು ಪ್ರಭಾವ – ನಾರಾಯಣ.ಕೆ.ವಿ(ಸಂ) ಪು.೫೧

೨೧೫.ಅ ಕೃಷ್ಣಕೋಲ್ಹಾರ ಕುಲಕರ್ಣಿ(ಸಂ), ೨೦೦೮, ನಾ.ಶ್ರೀರಾಜಪುರೋಹಿತರ ಸಂಶೋಧನ ಲೇಖನಗಳು ೧೮೮೭-೧೯೫೩ ಪು.೪೨೨-೪೨೩

೨೧೫.ಆ ರಾಜೇಂದ್ರಪ್ಪ.ಎಸ್. ಕುಷ್ಟಗಿ ತಾಲೂಕು ದರ್ಶನ, 'ಭಗೀರಥ ಸಂಕಲ್ಪ' ಪು.೨೩೭

೨೧೬. ಕ.ವಿ.ವಿ. ಶಾ.ಸಂ.೨ ಕೊ.ಜಿ. ಗಂ.ತಾ. ಶಾ.ಸಂ.೨೪ ಕನಕಗಿರಿ ಕ್ರಿ.ಶ.೧೫೩೪

೨೧೭. ಅದೇ ಶಾ.ಸಂ.೧೪ ಕಲ್ಲೂರು ಕ್ರಿ.ಶ.೧೫೩೭

೨೧೮. ಶಿವರಾಮ ಕಾರಂತ, ಸಿರಿಗನ್ನಡ ಅರ್ಥಕೋಶ, ಪು.೧೨೪

೨೧೯. ಕಲಬುರ್ಗಿ.ಎಂ.ಎಂ, ಕನ್ನಡ ನಾಮ ವಿಜ್ಞಾನ, ಪು.೭೪-೭೫

೨೨೦. ಕ.ವಿ.ವಿ. ಶಾ.ಸಂ.೨ ಕೊ.ಜಿ. ಕು.ತಾ. ಶಾ.ಸಂ.೧೦

೨೨೧. ಅದೇ ಶಾ.ಸಂ.೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ
ಅದೇ ಶಾ.ಸಂ.೨೭ ಅಂಟೂರತಾಣ ಕ್ರಿ.ಶ.೧೦೮೨

೨೨೨. ಅದೇ ಶಾ.ಸಂ.೧೫ ಪುರ ಕ್ರಿ.ಶ.ಸು.೧೫ನೆಯ ಶತಮಾನ

೨೨೩. ಅದೇ ಶಾ.ಸಂ.೧೭ ಪುರ ಕ್ರಿ.ಶ.೧೫೪೭

೨೨೪. ಅದೇ ಶಾ.ಸಂ.೨೧ ಚಳಗೇರಿ ಕ್ರಿ.ಶ.೧೧೭೨
ಅದೇ ಶಾ.ಸಂ.೨೨ ಹನುಮನಾಳ ಕ್ರಿ.ಶ.೧೧೯೯
ಅದೇ ಶಾ.ಸಂ.೨೭ ಅಂಟೂರತಾಣ ಕ್ರಿ.ಶ.೧೦೮೨

೨೨೫. ಅದೇ ಶಾ.ಸಂ.೨೧ ಚಳಗೇರಿ ಕ್ರಿ.ಶ.೧೧೭೨

೨೨೬. ಅದೇ ಶಾ.ಸಂ.೨೭ ಅಂಟೂರತಾಣ ಕ್ರಿ.ಶ.೧೦೮೨

೨೨೭. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦

೨೨೮. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೨೨೯. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

೨೩೦. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೩೧. ಅದೇ. ಶಾ.ಸಂ. ೨೪ ಯರಗೇರಿ ಕ್ರಿ.ಶ.ಸು.೧೭ನೆಯ ಶತಮಾನ

೨೩೨. ಅದೇ. ಶಾ.ಸಂ. ೧೯ ಬಲ್ಲುಟಗಿ

೨೩೩. ಚಿದಾನಂದಮೂರ್ತಿ.ಎಂ, ಪೂರ್ವೋಕ್ತ ಪು.೫೩

೨೩೪. ಅದೇ. ಶಾ.ಸಂ. ೧೩ ಕ್ರಿ.ಶ.ಸು.೧೨ನೆಯ ಶತಮಾನ

೨೩೫. ಸಿ.ಪಿ.ಕೆ. ಶಾಸನಶಾಸ್ತ್ರ ಪ್ರವೇಶ ಪು.೭೧

೨೩೬. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೩ ಗೋತಗಿ ಕ್ರಿ.ಶ.೧೦೨೪
ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೨೩೭. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೭೨

೨೩೮. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭
ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೩೯. ಅದೇ. ಶಾ.ಸಂ. ೯ ಹಿರೇಮನ್ನಾಪುರ ಕ್ರಿ.ಶ.೧೨ನೆಯ ಶತಮಾನ

೨೪೦. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೨೪೧. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭
ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೪೨. ಅದೇ. ಶಾ.ಸಂ. ೨೮ ಅಂಟೂರತಾಣ ಕ್ರಿ.ಶ.೧೧೯೫

೨೪೩. ಅದೇ. ಶಾ.ಸಂ. ೧ ಮಂಕಲ್ಕೇರಿ. ಕ್ರಿ.ಶ.ಸು.೧೧೨೩

೨೪೪. ಅದೇ. ಶಾ.ಸಂ. ೧೨ ಪುರ ಕ್ರಿ.ಶ.ಸು.೧೪೪೬

೨೪೫. ಅದೇ. ಶಾ.ಸಂ. ೧೭ ಪುರ ಕ್ರಿ.ಶ.೧೫೪೭

೨೪೬. ತಿಪ್ಪೇರುದ್ರಸ್ವಾಮಿ.ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೨೫೨

೨೪೭. ಶೇಷಶಾಸ್ತ್ರಿ.ಆರ್, ಶಾಸನ ಪರಿಚಯ, ಪು.೬-೭

೨೪೮. ತಿಪ್ಪೇರುದ್ರಸ್ವಾಮಿ.ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪು.೨೫೨

೨೪೯. ನರಸಿಂಹಮೂರ್ತಿ.ಎ.ಪಿ, ಕರ್ನಾಟಕ ಶಾಸನ ಸಂಪತ್ತು ಪು.೧೯-೨೦

೨೫೦. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೧೧ ತಾವರಗೆರೆ ಕ್ರಿ.ಶ.೧೨ನೆಯ ಶತಮಾನ

೨೫೧. ಅದೇ. ಶಾ.ಸಂ. ೩೦ ಮಾಲಗಿತ್ತಿ ಕ್ರಿ.ಶ.೧೩ನೆಯ ಶತಮಾನ

೨೫೨. ಅದೇ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೮೨

೨೫೩. ಅದೇ. ಶಾ.ಸಂ. ೧೪.೧೬.೧೭ ಪುರ -

೨೫೪. ಅದೇ. ಶಾ.ಸಂ. ೩ ಗೋತಗಿ ಕ್ರಿ.ಶ.ಸು.೧೦೨೪

೨೫೫. ಅದೇ. ಶಾ.ಸಂ. ೨೭ ಅಂಟೂರಠಾಣ ಕ್ರಿ.ಶ.೧೦೮೨

೨೫೬. ಅದೇ. ಶಾ.ಸಂ. ೨ ಹೆಸರೂರು ಕ್ರಿ.ಶ.೧೧೦೪

೨೫೭. ಅದೇ. ಶಾ.ಸಂ. ೧ ಮಂಕಲ್ಕೇರಿ. ಕ್ರಿ.ಶ.ಸು.೧೧೨೩

೨೫೮. ಅದೇ. ಶಾ.ಸಂ. ೧೨ ಪುರ ಕ್ರಿ.ಶ.ಸು.೧೪೪೬

೨೫೯. ಅದೇ. ಶಾ.ಸಂ. ೧೭ ಪುರ ಕ್ರಿ.ಶ.ಸು.೧೫೪೭

೨೬೦. ಅದೇ. ಶಾ.ಸಂ. ೧೩ ಪುರ ಕ್ರಿ.ಶ.ಸು.೧೨ನೆಯ ಶತಮಾನ

೨೬೧. ಅದೇ. ಶಾ.ಸಂ. ೧೪ ಪುರ ಕ್ರಿ.ಶ.ಸು.೧೩-೧೪ನೆಯ ಶತಮಾನ

೨೬೨. ಅದೇ. ಶಾ.ಸಂ. ೧೫ ಪುರ ಕ್ರಿ.ಶ.ಸು.೧೪ನೆಯ ಶತಮಾನ

೨೬೩. ಅದೇ. ಶಾ.ಸಂ. ೧೮ ಪುರ ಕ್ರಿ.ಶ.ಸು.೧೨-೧೩ನೆಯ ಶತಮಾನ

೨೬೪. ಅದೇ. ಶಾ.ಸಂ. ೪ ಗೋತಗಿ ಕ್ರಿ.ಶ.೧೦೪೫

೨೬೫. ಅದೇ. ಶಾ.ಸಂ. ೨೨ ಹನುಮನಾಳ ಕ್ರಿ.ಶ.೧೧೯೯

೨೬೬. ಅದೇ. ಶಾ.ಸಂ. ೫ ಸಿರಗುಪ್ಪ ಕ್ರಿ.ಶ.ಸು.೧೧೧೦

೨೬೭. ಅದೇ. ಶಾ.ಸಂ. ೧೦ ತಾವರಗೆರೆ ಕ್ರಿ.ಶ.೧೫೪೭

೨೬೮. A.A.Macdonnel. Vedic Mythology p.39

೨೬೯. ನಂದೀಮಠ.ಎಸ್.ಸಿ, ಕನ್ನಡ ನಾಡಿನ ಚರಿತ್ರೆ ಭಾಗ-೨. ಪು.೬೪

೨೭೦. ಆರ್.ಎಸ್.ಶರ್ಮ, ಪೂರ್ವೋಕ್ತ ಪುಟ. ೧೫೮-೧೫೯

೨೭೧. ಮಹೇಶ.ಕೆ, ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು ಪು.೩೬

೨೭೨. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೮೨

೨೭೩. ಅಪ್ರಕಟಿತ, ಪುರ್ತಗೇರಿ, ಸೋಮನಾಥ ದೇವಾಲಯ ಪಕ್ಕದಲ್ಲಿ

೨೭೪. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೨೧ ಚಳಗೇರಿ ಕ್ರಿ.ಶ.೧೧೮೨

೨೭೫. ತುಕೋಳ್.ಟಿ.ಕೆ, ಕರ್ನಾಟಕದಲ್ಲಿ ಜೈನ ಪರಂಪರೆ, ಪುಟ. ೧

೨೭೬. ಕ.ವಿ.ವಿ. ಶಾ.ಸಂ.೨. ಕೊ.ಜಿ. ಕು.ತಾ. ಶಾ.ಸಂ. ೨೦ ಚಳಗೇರಿ ಕ್ರಿ.ಶ.೧೨ನೆಯ ಶತಮಾನ

೨೭೭. ಅದೇ. ಶಾ.ಸಂ.೨೬ ಅಂಟೂರಠಾಣ ಕ್ರಿ.ಶ.೧೨೬೭

೨೭೮. ಅದೇ. ಶಾ.ಸಂ.೨ ಹೆಸರೂರು ಕ್ರಿ.ಶ.೧೨೬೭

೨೭೯. ಅದೇ. ಶಾ.ಸಂ.೩೦ ಮಾಲಗಿತ್ತಿ ಕ್ರಿ.ಶ.೧೩ನೆಯ ಶತಮಾನ

೨೮೦. ಅದೇ. ಶಾ.ಸಂ.೨೮ ಅಂಟೂರಠಾಣ ಕ್ರಿ.ಶ.೧೧೯೫

೨೮೧. ಅದೇ. ಶಾ.ಸಂ.೧೪ ಪುರ ಕ್ರಿ.ಶ.ಸು.೧೪-೧೫ನೆಯ ಶತಮಾನ

೨೮೨. ಅದೇ. ಶಾ.ಸಂ.೩ ಗೋತಗಿ ಕ್ರಿ.ಶ.೧೧೨೪
೨೮೩. ಅದೇ. ಶಾ.ಸಂ.೨೮ ಅಂಟೂರತಾಣ ಕ್ರಿ.ಶ.೧೯೫
೨೮೪. ಅಂಟೂರತಾಣ. ಚಾವಡಿ ಕಟ್ಟೆಯ ಬಳಿ ಕ್ರಿ.ಶ.ಸು.
೨೮೫. ಚಂದಾಲಿಂಗ.ಚಂದಾಲಿಂಗೇಶ್ವರ ದೇವಾಲಯದ ಆವರಣದಲ್ಲಿ
೨೮೬. ಶ್ಯಾಡಲಗೇರಿ. ಆಂಜನೇಯ ದೇವಾಲಯ ಎದುರು
೨೮೭. ಚಂದಾಲಿಂಗ. ಚಂದಾಲಿಂಗೇಶ್ವರ ದೇವಾಲಯದ ಆವರಣ
೨೮೮. ಅಂಟೂರತಾಣ. ಜಂಜುನಾಥೇಶ್ವರ ದೇವಾಲಯದಲ್ಲಿ
೨೮೯. ತಾವರಗೆರೆ. ಶಶಿಧರಸ್ವಾಮಿ ಪಿ.ಯು ಕಾಲೇಜ್ ಆವರಣದಲ್ಲಿ
೨೯೦. ಚಂದಾಲಿಂಗ. ಚಂದಾಲಿಂಗೇಶ್ವರ ದೇವಾಲಯದ ಆವರಣದಲ್ಲಿ
೨೯೧. ಗೋತಗಿ. ಹನುಮಂತ ದೇವಾಲಯದ ಆವರಣ
೨೯೨. ಯರಗೇರಿ. ಹನುಮಂತ ದೇವಾಲಯದಲ್ಲಿ
೨೯೩. ತಾವರಗೇರಿ. ಮಲ್ಲಪ್ಪ ಜಾಮಲಾಪುರ ಅವರ ಹೊಲದ ಪಕ್ಕದಲ್ಲಿ
೨೯೪. ಜಾಲಿಹಾಳ. ಶಿವಲಿಂಗಪ್ಪ ಬಾಗಾವಿ ಅವರ ಮನೆಯ ಹಿಂದೆ
೨೯೫. ಗಂಗನಾಳ. ಹನುಮಂತ ಕುರಿ ಅವರ ಮನೆಯ ಎದುರು
೨೯೬. ಗಂಗನಾಳ. ಸರಕಾರಿ ಶಾಲೆಯ ಪಕ್ಕದಲ್ಲಿ
೨೯೭. ನಿಲೊಗಲ್. ಗುಡ್ಡದ ದ್ಯಾಮವ್ವ ದೇವಾಲಯದ ಎದುರು
೨೯೮. ಶ್ಯಾಡಲಿಗೇರಿ. ಮಲ್ಲಿಕಾರ್ಜುನ ಗೋನಾಳ ಅವರ ಮನೆ ಎದುರು
೨೯೯. ಚಿದಾನಂದಮೂರ್ತಿ.ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೩೨
೩೦೦. ಸಿರಗುಪ್ಪಿ. ಹನುಮಂತ ದೇವಾಲಯದ ಎದುರು
೩೦೧. ಹೀರೆಮನ್ನಾಪುರ. ಶಿವನಗೌಡ ಕಲ್ಲನಗೌಡರ ಹೊಲದಲ್ಲಿ
೩೦೨. ತಾವರಗೆರೆ. ಶಶಿಧರಸ್ವಾಮಿ ಪಿ.ಯು. ಕಾಲೇಜ್ ಆವರಣದಲ್ಲಿ
೩೦೩. ಬಲ್ಲುಟಗಿ. ದುರ್ಗಮ್ಮ ದೇವಾಲಯದ ಎದುರು
೩೦೪. ಪುರ, ಸೋಮಶೇಖರಯ್ಯನವರ ಹೊಲದಲ್ಲಿ
೩೦೫. ಚನ್ನಕ್ಕ ಎಲಿಗಾರ, ಮಾಸ್ತಿಕಲ್ಲು ಪು.೧೫-೧೬
೩೦೬. ಕಲಬುರ್ಗಿ.ಎಂ.ಎಂ, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು ಪು.೨೬-೨೭
೩೦೭. ಚನ್ನಕ್ಕ ಎಲಿಗಾರ, ಮಾಸ್ತಿಕಲ್ಲು ಪು.೧೨
೩೦೮. ಗೋತಗಿ. ಹನುಮಂತ ದೇವಾಲಯದ ಆವರಣ
೩೦೯. ತಾವರಗೆರೆ. ತಿಪ್ಪಣ್ಣ ಹೂಗಾರ ಅವರ ಹೋಲದಲ್ಲಿ
೩೧೦. ಮಾಲಗಿತ್ತಿ. ಸೋಸೈಟಿ ಕಛೇರಿಯಲ್ಲಿ
೩೧೧. ಕುಷ್ಟಗಿ. ನಗರೇಶ್ವರ ಸರ್ಕನಲ್ಲಿ
೩೧೨. A.N.Upadhya. 'A note on nisidhi' XIV P.265
೩೧೩. ಬಲ್ಲುಟಗಿ. ಆಂಜನೇಯ ದೇವಾಲಯದ ಎದುರು

ಅಧ್ಯಾಯ–೪

ಶಾಸನಶಿಲ್ಪ

೪.೧ ದಾನ ಶಾಸನಶಿಲ್ಪ

ಶೈವ, ವೈಷ್ಣವ ಮತ್ತು ಜೈನ

೪.೨ ಸ್ಮಾರಕ ಶಾಸನಶಿಲ್ಪ

ವೀರಗಲ್ಲುಗಳು, ಮಾಸ್ತಿ ಕಲ್ಲುಗಳು ಮತ್ತು
ಆತ್ಮಬಲಿ ಕಲ್ಲುಗಳು

೪.೩ ಇತರೆ ಶಾಸನಶಿಲ್ಪ

ಯಂತ್ರಕಲ್ಲುಗಳು, ಲಿಂಗಮುದ್ರೆಕಲ್ಲುಗಳು ಮತ್ತು
ವಾಮನಮೂರ್ತಿಕಲ್ಲುಗಳು

ಅಧ್ಯಾಯ – ೪

ಶಾಸನಶಿಲ್ಪ

ಭಾರತೀಯ ಶಿಲ್ಪವು ಧಾರ್ಮಿಕ ಪ್ರೇರಣೆ ಮತ್ತು ಪ್ರಭಾವಗಳಿಂದ ಮೂಡಿಬಂದದ್ದಾಗಿದೆ. 'ಯಾವುದೇ ಒಂದು ವಾಸ್ತವಿಕ ಇಲ್ಲವೆ, ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಯನ್ನು ಶಿಲ್ಪ' ಎಂದು ಕರೆಯಲಾಗುತ್ತದೆ.[೧] 'ಶಿಲ್ಪ' ಎಂಬುದು ಕೇವಲ ದೇವರ ವಿಗ್ರಹಗಳನ್ನು ಕೆತ್ತುವ ಕಲೆಯಾಗಿದೆ. ಜೀವಜಡವಸ್ತುಗಳ ಬಾಹ್ಯರೂಪವನ್ನು ಕೆತ್ತುವ ಕಲೆಯಾಗಿದೆ. ಪ್ರಾಚೀನ ಕಾಲದಲ್ಲಿ ಶಿಲ್ಪವು ಸಾಮಾಜಿಕ, ಧಾರ್ಮಿಕ ಜೀವನವನ್ನು ಬಿಂಬಿಸುವ ಮತ್ತು ಸಾಮಾನ್ಯ ಜನರಿಗೆ ತಿಳಿಸುವ ಒಂದು ಮಾಧ್ಯಮವಾಗಿತ್ತು. ಶಿಲ್ಪ ಮತ್ತು ಶಾಸನಶಿಲ್ಪಗಳು ಒಂದೆಯಾದರೂ ಸೂಕ್ಷ್ಮತೆಯಲ್ಲಿ ಎರಡೂ ಬೇರೆ ಬೇರೆಯಾಗಿ ಕಂಡುಬರುತ್ತವೆ. ಶಿಲ್ಪ ವಿಶಾಲವಾದ ಸ್ವರೂಪವನ್ನು ಪಡೆದಿದ್ದು, ಶಾಸನಶಿಲ್ಪವು ಕೇವಲ ಶಾಸನಗಳಿಗೆ ಮಾತ್ರ ಸೀಮಿತವಾಗಿದೆ. 'ಶಾಸನಶಿಲ್ಪದ ಅಧ್ಯಯನವೆಂದರೆ ಶಾಸನಗಳ ಮೇಲಿರುವ ಉಬ್ಬುಶಿಲ್ಪಗಳ ಅಧ್ಯಯನವೆಂದೇ ಅರ್ಥ'.[೨]

ಚಪ್ಪಟೆಯಾದ ಹಿನ್ನೆಲೆಯಿಂದ ಮುಂದಕ್ಕೆ ಉಬ್ಬಿದಂತೆ ಕಾಣುವ ಶಿಲ್ಪಗಳನ್ನು ಉಬ್ಬು ಶಿಲ್ಪಗಳು ಎಂದು ಅರ್ಥೈಸಬಹುದಾಗಿದೆ. ವಸ್ತುವಿನಿಂದ ಮುಂದಕ್ಕೆ ಉಬ್ಬಿದಂತೆ ಕಾಣುವ ಎಲ್ಲ ಶಿಲ್ಪಗಳು ಉಬ್ಬುಶಿಲ್ಪಗಳೇ ಎಂದು ಹೇಳಬಹುದು. ಶಾಸನಶಿಲ್ಪವು ಉಬ್ಬುಶಿಲ್ಪದ ಒಂದು ಪ್ರಕಾರವಾಗಿದೆ. ಶಾಸನಗಳು ಸಂಪೂರ್ಣವಾಗಿ ಉಬ್ಬುಶಿಲ್ಪದ ಮಾದರಿಗಳೇ ಆಗಿವೆ. ನಮ್ಮ ಪ್ರಾಚೀನ ಶಿಲ್ಪಶಾಸ್ತ್ರ ಗ್ರಂಥಗಳಾದ ಮಾಯಮತ, ಮಾನಸಾರ, ಶಿಲ್ಪಸಂಗ್ರಹ ಮೊದಲಾದವುಗಳಲ್ಲಿ ಉಬ್ಬುಶಿಲ್ಪದ ಬಗ್ಗೆ ಏನನ್ನು ಹೇಳಿಲ್ಲ. ಏಕೆಂದರೆ ಆ ಕಾಲದಲ್ಲಿ ಶಿಲ್ಪ–ಉಬ್ಬುಶಿಲ್ಪಗಳ ಮಧ್ಯೆ ಯಾವುದೇ ವ್ಯತ್ಯಾಸಗಳಿಲ್ಲದೆ ಒಂದೇ ಆಗಿದ್ದವು.

ಶಾಸನಶಿಲ್ಪವು ಶಿಲ್ಪಶಾಸ್ತ್ರದ ಬೆಳವಣಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಭಾರತಿಯ ಶಿಲ್ಪ ಇತಿಹಾಸ ಅಧ್ಯಯನದ ಮೊದಲ ಕೃತಿಗಳು 'ಉಬ್ಬುಶಿಲ್ಪಗಳೇ' ಎಂಬುದು ಗಮನಾರ್ಹ. ಕ್ರಿ.ಪೂ.೩೦೦೦ದಷ್ಟು ಹಳೆಯದಾದ ಸಿಂಧೂ ಚಿಹ್ನೆಗಳೆಂದೂ ಹಲವು ವಿದ್ವಾಂಸರ ಅಭಿಮತ. ಇವು ಉಬ್ಬು ತಂತ್ರದಿಂದಲೇ ರಚನೆಯಾದವುಗಳು.[೩]

ಡಾ. ಕೆ.ಶಿವರಾಮ ಕಾರಂತರು ಕನ್ನಡದಲ್ಲಿ ಉಬ್ಬುಶಿಲ್ಪದ ಬಗ್ಗೆ ಬರೆದ ಮೊದಲ ವಿದ್ವಾಂಸರು. ಇವರು 'ಚಿತ್ರಶಿಲ್ಪ ವಾಸ್ತುಕಲೆಗಳು', 'ಭಾರತೀಯ ಶಿಲ್ಪ' ಮತ್ತು 'ಕಲಾ ಪ್ರಪಂಚ'ದಲ್ಲಿ ಉಬ್ಬುಶಿಲ್ಪದ ಬಗ್ಗೆ ಪ್ರಸ್ತಾಪಿಸಲಾಗಿದೆ. 'ಜ್ಞಾನಗಂಗೋತ್ರಿ' ಸಂಪುಟದ 'ಕಲಾಕೋಶ' ಗ್ರಂಥದಲ್ಲಿ ಉಬ್ಬುಶಿಲ್ಪದ ಬಗ್ಗೆ ಉಲ್ಲೇಖಗಳಿವೆ. ಸಾಮಾನ್ಯವಾಗಿ ಮುಂದಕ್ಕೆ ಉಬ್ಬಿದಂತೆ ಕಾಣುವ ಎಲ್ಲ ಶಿಲ್ಪಗಳೂ ಉಬ್ಬುಶಿಲ್ಪಗಳೇ. ಉಬ್ಬುಶಿಲ್ಪಗಳಿಗೆ ಸ್ವತಂತ್ರವಾದ ಮೈ ಇರುವುದಿಲ್ಲ. ಇವುಗಳು ಹಿಂದಿನಿಂದ ಅಂಟಿಕೊಂಡಿರಲೇಬೇಕು. ಇದನ್ನು ಎದುರಿನಲ್ಲಿ ನಿಂತು ನೋಡಬೇಕಾಗುತ್ತದೆ.

ಉಬ್ಬುಶಿಲ್ಪವನ್ನು ಕೆತ್ತುವ ಶಿಲ್ಪಿಯು 'ದಪ್ಪ' ಎಂಬ ಮಾನದಂಡವನ್ನು ಇಟ್ಟುಕೊಂಡು, ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ನಮ್ಮ ನಾಡಿನಲ್ಲಿ ಉಬ್ಬುಶಿಲ್ಪದ ರಚನೆಗೆ ಪ್ರಮುಖವಾಗಿ ಶಿಲೆ ಮತ್ತು ಮರವನ್ನು ಬಳಸಲಾಗಿದೆ. ಇಲ್ಲಿ ಶಿಲ್ಪಿಯ ಮನೋಧರ್ಮವೇ ಪ್ರಧಾನ ಭೂಮಿಕೆ ಎಂದು ಹೇಳಬಹುದು. ಉಬ್ಬುಶಿಲ್ಪ ಕೆತ್ತುವಾಗ ಶಿಲ್ಪಿಯು ಬೇಡವಾದುದನ್ನು ಕೆತ್ತಿ ತೆಗೆಯುತ್ತಾನೆ. ಯಾವ ಪ್ರಧಾನ ವಿಷಯವನ್ನು ಕೆತ್ತಬೇಕು ಎಂದು ಶಿಲ್ಪಿಯು ನಿರ್ಧರಿಸುತ್ತಾನೋ ಅದಕ್ಕೆ ಬೇಕಾಗುವಷ್ಟು ಸ್ಥಳದಲ್ಲಿ ಶಿಲೆಯನ್ನು ಹಾಗೆಯೇ ಇರಿಸಿಕೊಂಡು ಇನ್ನುಳಿದ ಶಿಲೆಯನ್ನು ಕೆತ್ತಿ ತೆಗೆಯುತ್ತಾನೆ. 'ಈ ಕೆಲಸದಲ್ಲಿ ಹಾಗೆ ಕೆತ್ತಿ ತೆಗೆಯುವ ಕೆಲಸ ಶ್ರಮದ್ದು ಮಾತ್ರವಲ್ಲ, ಕೆತ್ತಿ ಹೋದ ಭಾಗವನ್ನು ತಿರುಗಿ ಸೇರಿಸುವಂತಿಲ್ಲ. ಹೀಗಾಗಿ ಆತನ ಈ ಕೆಲಸ ಎಷ್ಟು ದಿವಸಗಳು ಹಿಡಿದರೂ ಸರಿ, ಮುಂದೆ ಕಾಣಿಸಿಕೊಳ್ಳಬೇಕಾದ ಆಕೃತಿಯ ಆಯ, ಅಳತೆ, ರೂಪಗಳು ಹೇಗೆ ಇರಬೇಕು ಎಂಬ ವಿಚಾರದಲ್ಲಿ ಆತ ದೀರ್ಘಕಾಲ ನೆನಪನ್ನು ಉಳಿಸಿಕೊಂಡಿರಬೇಕು".[೪]

ಲೋಹ ಮಾಧ್ಯಮವಾಗಲಿ ಅಥವಾ ಮರದ ಮಾಧ್ಯಮವಾಗಲಿ, ಉಬ್ಬುಶಿಲ್ಪವನ್ನು ನಿರ್ಮಿಸಲು ಕಲ್ಪನೆ, ಕಲ್ಪನೆಗುಣವಾಗಿ ಚಿತ್ರಗಾರಿಕೆ ಅವಶ್ಯ. ಹಾಗಾಗಿ ಶಿಲ್ಪಿಗೆ ತಾನು ಕೆತ್ತುತ್ತಿರುವ ಶಿಲ್ಪದ ಸ್ಪಷ್ಟವಾದ ಕಲ್ಪನೆ, ಜ್ಞಾನವಿರಬೇಕು. ಶಿಲ್ಪ ಕೆತ್ತನೆಗಾಗಿ ತಾಮ್ರವನ್ನು ಹೆಚ್ಚಾಗಿ, ಹಿತ್ತಾಳೆಯನ್ನು ಸಾಧಾರಣವಾಗಿ, ಬೆಳ್ಳಿಬಂಗಾರವನ್ನು ಅಪರೂಪವಾಗಿ ಬಳಸುತ್ತಾರೆ. ನನ್ನ ಅಧ್ಯಯನದ ಪರಿಸರದಲ್ಲಿ ದೊರೆತಿರುವ ಶಿಲ್ಪಗಳನ್ನು ಗಮನಿಸಿದಾಗ, ಶಿಲ್ಪ ನಿರ್ಮಾಣದಲ್ಲಿ ಶಿಲೆಯನ್ನು ಪ್ರಧಾನವಾದ ಮಾಧ್ಯಮವನ್ನಾಗಿ ಬಳಸಿರುವುದು ಕಂಡುಬರುತ್ತದೆ.

ಪುರಾತನ ಕಾಲದಿಂದ ಶಿಲ್ಪಕಲೆಗೆ ಪ್ರಧಾನವಾದದ್ದು ಶಿಲೆ. ಈ ಶಿಲೆಯಲ್ಲಿ ಹಲವಾರು ಶಿಲೆಗಳಿದ್ದು, ಅವುಗಳನ್ನು ಸಾಮಾನ್ಯ ಶಿಲೆ, ಮರಳುಶಿಲೆ, ಬಳಪಶಿಲೆ, ಅಮೃತಶಿಲೆ ಮತ್ತು ಕಪ್ಪುಶಿಲೆ ಎಂದು ವಿಂಗಡಣೆಗಳನ್ನು ಮಾಡಿಕೊಳ್ಳಬಹುದು. 'ಮರಳುಗಲ್ಲ'ನ್ನು ಬಾದಾಮಿ ಚಾಲುಕ್ಯರು ದೇವಾಲಯಗಳ ನಿರ್ಮಾಣಕ್ಕೆ ಬಳಸಿದ್ದಾರೆ. 'ಬಳಪಕಲ್ಲ'ನ್ನು ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು ಬಳಸಿದ್ದಾರೆ. ಈ ಕಲ್ಲು ಮೃದುವಾಗಿದ್ದು, ಕೆತ್ತಲು ಸುಲಭವಾಗಿರುತ್ತದೆ. ಹೀಗಾಗಿ ಈ ಕಲ್ಲನ್ನೇ ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ವಿಜಯನಗರ ಕಾಲದಲ್ಲಿ ಶಿಲ್ಪ ಮತ್ತು ದೇವಾಲಯಗಳ ನಿರ್ಮಾಣಕ್ಕೆ 'ಕಠಿಣಕಲ್ಲು' ಬಳಸಿದರು. ಈ ರೀತಿಯ ಶಿಲೆಗಳಲ್ಲಿನ ವಿಂಗಡಣೆ ಅಥವಾ ಪ್ರಕಾರ ನಮ್ಮ ನಾಡಿನ ಕಲಾ ಸಮೃದ್ಧಿ, ಶ್ರೀಮಂತಿಕೆಯನ್ನು ನಿರ್ಧರಿಸುತ್ತದೆ. ಶಿಲೆಗಿಂತ ಮೃದುವಾದ ಇನ್ನೊಂದು ಮಾಧ್ಯಮ ಮರ. ಶಿಲೆಯ ನಂತರದ ಸ್ಥಾನವನ್ನು ಇದಕ್ಕೆ ನೀಡಲಾಗಿದೆ. ಇದಕ್ಕೆ ಶಿಲೆಗಿಂತ ಬಾಳಿಕೆ ತುಂಬಾ ಕಡಿಮೆ. ನಮಗೆ ಕಂಡು ಬರುವ ಮರದ ಶಿಲ್ಪಗಳು ತೀರ ಇತ್ತೀಚಿನವು. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಯಾವುದೇ ಮರದ ಶಿಲ್ಪಗಳು ಕಂಡುಬಂದಿಲ್ಲ.

ಶಿಲ್ಪ ಮತ್ತು ಶಾಸನಶಿಲ್ಪಗಳನ್ನು ನಿರ್ಮಿಸುವ ತಂತ್ರ ಒಂದೇ ರೀತಿಯಾಗಿಲ್ಲ. ಶಿಲ್ಪವನ್ನು ಅಥವಾ ಮೂರ್ತಿಯನ್ನು ನಾಲ್ಕು ಕಡೆಗಳಲ್ಲಿ ಕೆತ್ತಬೇಕು. ಆದರೆ ಶಾಸನಶಿಲ್ಪವನ್ನು ಅದರ ಮುಂದೆ ನಿಂತು ನೋಡುವಂತೆ ನಿರ್ಮಿಸಬೇಕು. ಶಿಲ್ಪ ಮೂಲತಃ ಒಂದು ಆಕೃತಿ, ಆದರೆ ಶಾಸನಶಿಲ್ಪ ಒಂದು ಮೂಲಾರ್ಥವನ್ನು ಒಳಗೊಂಡ ಘಟನೆಗೆ ಭಾವನೆಗಳನ್ನು ನಿರೂಪಿಸಲು ಪ್ರಯತ್ನಿಸುತ್ತದೆ.

'ಶಿಲ್ಪಗಳಲ್ಲಿ ಒಂದು ಘಟನೆಯ ಒಂದು ಭಂಗಿಯನ್ನು ಕೆತ್ತಿದರೆ, ಶಾಸನಶಿಲ್ಪದಲ್ಲಿ ಏಕ ಕಾಲದಲ್ಲಿ ಹಲವು ಘಟನೆಗಳನ್ನು ಚಿತ್ರಿಸಬಹುದು. ವೀರಗಲ್ಲು ಮತ್ತು ಮಾಸ್ತಿಗಲ್ಲುಗಳ ಶಿಲ್ಪಗಳಲ್ಲಿ ಈ ತಂತ್ರವನ್ನೇ ನಾವು ಪ್ರಧಾನವಾಗಿ ಕಾಣುವುದು'.[೩] ಕಲೆಯ ಮನಸ್ಸಿನಿಂದ ಹುಟ್ಟಿ, ಧಾರ್ಮಿಕ ಚೌಕಟ್ಟಿನಲ್ಲಿ ಬೆಳೆದು ಭಕ್ತಿಯನ್ನು ಉದ್ದೀಪನಗೊಳಿಸುವ ಕಲೆಗಾರಿಕೆ ಶಿಲ್ಪದ್ದಾಗಿದೆ. ಶಾಸನಶಿಲ್ಪವು ಸಾಮಾಜಿಕ ಜೀವನ ರಂಗದ ಕಳಕಳಿಯಿಂದ ಹುಟ್ಟಿದಂತಹುದು. ಆದುದರಿಂದ ಇದು ಮೊದಲು ಸಾಂಸ್ಕೃತಿಕ ಆಕರವಾಗಿದ್ದು ನಂತರ ಕಲಾಮಾಧ್ಯಮವಾಗಿದೆ.

ಶಾಸನಶಿಲ್ಪಗಳು ಜನ್ಮತಾಳಿದ್ದು ಯಾವುದಾದರೂ ಒಂದು ಘಟನೆ, ಜನರ ರೀತಿ ನೀತಿಗಳನ್ನು ತಿಳಿಸಲು ನೆರವಾಗುತ್ತವೆ. ಇವು ನಮ್ಮ ನಾಡಿನ ಅನೇಕ ಕಡೆ ಪೂಜಾ ಮೂರ್ತಿಗಳಾಗಿಯೂ ಕಂಡುಬರುತ್ತವೆ. ಅಲ್ಲಿನ ಜನಪದೀಯ ನಂಬಿಕೆಗಳು, ಆಚರಣೆಗಳು, ಸಂಕೇತಗಳಂತೆ ತೋರಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿವೆ. ಮಹಾಸತಿಕಲ್ಲುಗಳಲ್ಲಿ ಸತಿಯು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿರುವುದು, ವೀರಗಲ್ಲುಗಳಲ್ಲಿ ವೀರ ಆಯುಧಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವುದು, ನಿಷಧಿಕಲ್ಲುಗಳಲ್ಲಿ ಸಾಧಕರು ಪುಸ್ತಕದ ಮುಂದೆ ಕುಳಿತಿರುವುದು ಇವುಗಳ ಸಂಕೇತಗಳಾಗಿವೆ.

ಪ್ರಸ್ತುತ ಅಧ್ಯಾಯದಲ್ಲಿ ನನ್ನ ಅಧ್ಯಯನ ವ್ಯಾಪ್ತಿಯ ದಾನಶಾಸನ ಶಿಲ್ಪ, ಸ್ಮಾರಕ ಶಾಸನ ಶಿಲ್ಪ, ಲಿಂಗಮುದ್ರೆ ಕಲ್ಲಿನ ಶಿಲ್ಪ ಮತ್ತು ವಾಮನಮೂರ್ತಿ ಶಿಲ್ಪಗಳನ್ನು ಕುರಿತು ವಿವೇಚಿಸಲಾಗಿದೆ.

೪.೧ ದಾನ ಶಾಸನಶಿಲ್ಪಗಳು

ಶಾಸನಗಳಲ್ಲಿ ದಾನಕ್ಕೆ ವಿಶೇಷ ಮಹತ್ವ ನೀಡಲಾಗಿದೆ. ದಾನ ಶಾಸನಗಳ ಮೇಲ್ಭಾಗದ ಶಿಲಾಫಲಕಗಳಲ್ಲಿ ದೇವರುಗಳ ಶಿಲ್ಪಗಳು ಇರುತ್ತವೆ. ಇಂಥ ದಾನ ಶಾಸನಗಳ ಶಿಲ್ಪವನ್ನು ಶೈವ ದಾನ ಶಾಸನಶಿಲ್ಪ, ವೈಷ್ಣವ ದಾನ ಶಾಸನಶಿಲ್ಪ, ಜೈನ ದಾನ ಶಾಸನಶಿಲ್ಪಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

ಶೈವ ದಾನ ಶಾಸನಶಿಲ್ಪಗಳು

ಪ್ರಪಂಚದ ಅತ್ಯಂತ ಪುರಾತನ ಧರ್ಮವೆಂದರೆ ಶೈವಧರ್ಮ. ಈ ಶೈವ ಧರ್ಮದಲ್ಲಿ ಶಿವನನ್ನು ಲಿಂಗದರೂಪದಲ್ಲಿ ಪೂಜಿಸಲಾಗುತ್ತದೆ. ಶೈವ ದಾನ ಶಾಸನಶಿಲ್ಪವು ಹತ್ತು ಮತ್ತು ಹನ್ನೊಂದನೆಯ ಶತಮಾನದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಕರ್ನಾಟಕದ ಅರಸು ಮನೆತನಗಳಾದ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ ಮುಂತಾದ ಅರಸು ಮನೆತನಗಳು ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದವು. ದಕ್ಷಿಣದಲ್ಲಿ ಚೋಳ, ಚೇರ, ಪಾಂಡ್ಯ, ಪಲ್ಲವ ದೊರೆಗಳು ಶೈವ ಧರ್ಮಾವಲಂಬಿಗಳಾಗಿ ಶೈವ ಧರ್ಮಕ್ಕೆ ಭದ್ರಬುನಾದಿ ಹಾಕಿದರು.

ದಾನ ಶಾಸನಗಳಲ್ಲಿ ಶೈವ ದಾನ ಶಾಸನಗಳದ್ದೇ ಸಿಂಹಪಾಲು. ಸಾಮಾನ್ಯವಾಗಿ ಶಾಸನಗಳ ಮೇಲ್ಭಾಗದಲ್ಲಿ ಶಿಲ್ಪಗಳನ್ನು ಬಿಡಿಸಿರುತ್ತಾರೆ. ಶೈವ ದಾನ ಶಾಸನಗಳಲ್ಲಿ ಶಿವಲಿಂಗ ಪ್ರಧಾನವಾಗಿರುತ್ತದೆ. ಶಿವಲಿಂಗದ ಯಾವುದಾದರೂ ಒಂದು ಭಾಗದಲ್ಲಿ ಅದನ್ನು ಪೂಜಿಸುವ ಅರ್ಚಕನ ಶಿಲ್ಪವಿದ್ದು, ಅವನು ತನ್ನ ಒಂದು ಕೈಯಲ್ಲಿ ಧೂಪಾರತಿ, ಇನ್ನೊಂದು ಕೈಯಲ್ಲಿ

[illegible]

ಗಂಟೆಯನ್ನು ಹಿಡಿದುಕೊಂಡು ಪೂಜೆ ಮಾಡುವ ಭಂಗಿಯಲ್ಲಿ ನಿಂತಿರುತ್ತಾನೆ. ಇವನು ಜಡೆಯನ್ನು ಹೊಂದಿರುತ್ತಾನೆ. ಶಿವಲಿಂಗದ ಇನ್ನೊಂದು ಬದಿಯಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ ಶಿಲ್ಪವಿರುತ್ತದೆ.

ಕುಷ್ಟಗಿ ಪರಿಸರದಲ್ಲಿ ಶೈವ ದಾನ ಶಾಸನಶಿಲ್ಪದ ಅಂಶಗಳನ್ನೊಳಗೊಂಡ ಹಲವಾರು ಶಾಸನಗಳು ಕಂಡುಬಂದಿವೆ. ಮಂಕಲ್ಕೇರಿ, ಹೆಸರೂರು, ಸಿರಗುಪ್ಪ, ಹಿರೇಮನ್ನಾಪುರ, ಕುಷ್ಟಗಿ, ತಾವರಗೆರೆ, ಪುರ, ಅಂಟೂರತಾಣ, ಗೋತಗಿ, ಮಾಲಗಿತ್ತಿ, ಆಚನೂರು, ಹನುಮಸಾಗರ ಪ್ರದೇಶಗಳಲ್ಲಿ ಶಿಲ್ಪಸಹಿತ ಶೈವ ಶಾಸನಗಳು ಇವೆ. ಈ ಶಾಸನಗಳಲ್ಲಿ ಸಾಮಾನ್ಯವಾಗಿ ಶಿವಲಿಂಗ, ಸೂರ್ಯ, ಚಂದ್ರ, ಕರುವಿಗೆ ಹಾಲುಣಿಸುತ್ತಿರುವ ಆಕಳುಗಳ ಉಬ್ಬುಶಿಲ್ಪಗಳು ಕಂಡುಬರುತ್ತವೆ.

ತಾವರಗೆರೆಯಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದ[೬] ಲಲಾಟಭಾಗದಲ್ಲಿ ಮಂಟಪವಿದ್ದು, ಅದರಲ್ಲಿ ಶಿವಲಿಂಗವಿದೆ. ಶಿವಲಿಂಗದ ಒಂದು ಬದಿಯಲ್ಲಿ ಪೂಜೆ ಮಾಡುತ್ತಿರುವ ಭಕ್ತನ ಶಿಲ್ಪ, ಇನ್ನೊಂದು ಬದಿಯಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಶಿಲ್ಪ ಮತ್ತು ಸೂರ್ಯ ಚಂದ್ರರ ಉಬ್ಬುಶಿಲ್ಪಗಳಿವೆ. ಇದೇ ಗ್ರಾಮದಲ್ಲಿರುವ ಕ್ರಿ.ಶ.೧೫೪೭ರ ಇನ್ನೊಂದು ಶಾಸನದ[೭] ಮೇಲ್ಭಾಗದಲ್ಲಿ ಶಿವಲಿಂಗವಿದ್ದು, ಅದರ ಮೇಲೆ ತೋರಣವಿದೆ. ಶಿವಲಿಂಗದ ಪಕ್ಕದಲ್ಲಿ ನಂದಿಯ ಶಿಲ್ಪ ಹಾಗೂ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ. ಶಿವಲಿಂಗದ ಮೇಲೆ ಹೂವಿನ ದಂಡೆಯ ಚಿತ್ರಣವಿದೆ. ಮಂಕಲ್ಕೇರಿಯಲ್ಲಿರುವ ಕ್ರಿ.ಶ.ಸು.೧೧೨೩ನೆಯ ಶಾಸನದ[೮] ಮೇಲ್ಭಾಗದಲ್ಲಿ ಶಿವಲಿಂಗವಿದೆ. ಇದರ ಪಕ್ಕದಲ್ಲಿ ಪೀಠದ ಮೇಲೆ ಕುಳಿತ ನಂದಿ, ಹಸು ಮತ್ತು ಕರುವಿನ ಶಿಲ್ಪವಿದೆ. ಶಿವಲಿಂಗದ ಇನ್ನೊಂದು ಬದಿಯಲ್ಲಿ ಕೈಮುಗಿದು ನಿಂತಿರುವ ಭಕ್ತನನ್ನು ಬಿಡಿಸಲಾಗಿದೆ. ಶಿವಲಿಂಗದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ. ಇವೆಲ್ಲವುಗಳು ಉಬ್ಬುಶಿಲ್ಪಗಳಾಗಿವೆ. ಶಿವಲಿಂಗದ ಮೇಲೆ ಸ್ವಲ್ಪ ಪಕ್ಕದಲ್ಲಿ ಕತ್ತಿಯನ್ನು ಕೊರೆಯಲಾಗಿದೆ. ನಿಂತಿರುವ ಯತಿಯ ಪಕ್ಕದಲ್ಲಿ ದೊಡ್ಡದಾದ ದಂಡವನ್ನು ಚಿತ್ರಿಸಲಾಗಿದೆ.

ಪುರದಲ್ಲಿರುವ ಕ್ರಿ.ಶ.ಸು.೧೩ನೆಯ ಶತಮಾನದ ಶಾಸನದ[೯] ಮೇಲ್ಭಾಗದಲ್ಲಿ ಶಿವಲಿಂಗ ಅದರ ಬಳಿ ಪೂಜೆ ಮಾಡುತ್ತಿರುವ ಭಕ್ತ ಮತ್ತು ಹಸುವಿನ ಶಿಲ್ಪ ಕಂಡುಬರುತ್ತವೆ. ಶಿವಲಿಂಗದ ಮೇಲೆ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ. ಇವೆಲ್ಲವುಗಳು ಉಬ್ಬುಶಿಲ್ಪಗಳಾಗಿವೆ. ಈ ರೀತಿಯ ಶಿಲ್ಪಗಳಿರುವ ಎರಡು ಶಾಸನಗಳು ಅಂಟೂರತಾಣದಲ್ಲಿವೆ.[೧೦] ಇವುಗಳು ಕ್ರಿ.ಶ.೧೦೮೨ ಮತ್ತು ಕ್ರಿ.ಶ.೧೯೯೩ರ ಕಾಲದ್ದಾಗಿವೆ. ಪುರದಲ್ಲಿರುವ ಮೂರು ಶಾಸನಗಳ[೧೧] ಮೇಲ್ಭಾಗದಲ್ಲಿ ಶಿವಲಿಂಗ, ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ ಶಿಲ್ಪಗಳಿವೆ. ಶಿವಲಿಂಗದ ಮೇಲೆ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ. ಈ ರೀತಿಯ ಶಿಲ್ಪವಿರುವ ಶಾಸನಗಳು ಕುಷ್ಟಗಿ[೧೨] ಮತ್ತು ಆಚನೂರು[೧೩] ಗಳಲ್ಲಿವೆ.

ಹಿರೇಮನ್ನಾಪುರದಲ್ಲಿರುವ ಕ್ರಿ.ಶ.೯೭೭ರ ಶಾಸನದ[೧೪] ಶಾಸನದ ಮೇಲೆ ಶಿವಲಿಂಗವಿದೆ. ಇದರ ಒಂದು ಬದಿಯಲ್ಲಿ ಧ್ಯಾನದಲ್ಲಿ ತಲ್ಲೀನನಾಗಿರುವ ಭಕ್ತನ ಶಿಲ್ಪ, ಇನ್ನೊಂದು ಬದಿಯಲ್ಲಿ ಹಸುವಿನ ಶಿಲ್ಪವನ್ನು ಬಿಡಿಸಲಾಗಿದೆ. ಗೋತಗಿಯಲ್ಲಿರುವ ಒಂದು ಅಪ್ರಕಟಿತ ದೇವನಾಗರಿ

[illegible]

ಲಿಪಿಯಲ್ಲಿರುವ ಶಾಸನದ[೧೫] ಮೇಲ್ಭಾಗದಲ್ಲಿ ಶಿವಲಿಂಗ ಸೂರ್ಯ ಚಂದ್ರರನ್ನು ಕೊರೆದು ಚಿತ್ರಿಸಲಾಗಿದೆ. ಇದೇ ಗ್ರಾಮದಲ್ಲಿರುವ ಇನ್ನೆರಡು ಶಾಸನಗಳ[೧೬] ಮೇಲೆ ಹಸು,ಕರು ಮತ್ತು ಸೂರ್ಯ ಚಂದ್ರರ ಶಿಲ್ಪಗಳನ್ನು ಬಿಡಿಸಲಾಗಿದೆ. ಇವುಗಳು ಕ್ರಿ.ಶ.೧೦೨೪ ಮತ್ತು ಕ್ರಿ.ಶ.ಸು.೧೦೪೫ರ ಕಾಲದ್ದಾಗಿವೆ. ಈ ರೀತಿಯ ಶಿಲ್ಪಗಳಿರುವ ಶಾಸನಗಳು ಹೆಸರೂರು[೧೭] ಮತ್ತು ಅಂಟೂರತಾಣಗಳಲ್ಲಿವೆ.[೧೮] ಅಂಟೂರತಾಣದಲ್ಲಿರುವ ಶಾಸನದ ಶಿಲ್ಪ ಸ್ವಲ್ಪ ಅಸ್ಪಷ್ಟವಾಗಿದ್ದರೂ ಹಸು ಕರುವನ್ನು ಗುರುತಿಸಬಹುದಾಗಿದೆ. ಹನುಮನಾಳದಲ್ಲಿರುವ ಶಾಸನದ[೧೯] ಮೇಲ್ಭಾಗದ ಶಿಲ್ಪದಲ್ಲಿ ಹಸು, ಕರು, ಕತ್ತಿ, ಸೂರ್ಯ–ಚಂದ್ರರ ಶಿಲ್ಪಗಳನ್ನು ಬಿಡಿಸಲಾಗಿದೆ. ಮಧ್ಯದಲ್ಲಿ ಅಪೂರ್ಣವಾದ ಶಿವಲಿಂಗದ ಕೆತ್ತನೆ ಇದೆ. ಇದರಿಂದ ಶಿಲ್ಪದ ಕೆತ್ತನೆ ಪೂರ್ಣಗೊಂಡಿಲ್ಲವೆಂದು ಗೊತ್ತಾಗುತ್ತದೆ.

ಶೈವ ಬ್ರಾಹ್ಮಣ ದಾನ ಶಾಸನಶಿಲ್ಪ

ಪುರದ ಕೋಟಿಲಿಂಗೇಶ್ವರ ದೇವಾಲಯದಲ್ಲಿ ಕ್ರಿ.ಶ.ಸು.೧೬ನೆಯ ಶತಮಾನದ ಶೈವ ಬ್ರಾಹ್ಮಣ ದಾನ ಶಾಸನವಿದೆ.[೨೦] ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಇದೊಂದು ವಿಶೇಷ ಶಾಸನ ಎಂದು ಹೇಳಬಹುದಾಗಿದೆ. ಈ ಶಾಸನವು ಎರಡು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸು, ಅದರ ಎದುರಿಗೆ ಬ್ರಾಹ್ಮಣನೊಬ್ಬನು ತನ್ನ ಬಲಗೈಯಲ್ಲಿ ಕಮಂಡಲ ಮತ್ತು ಎಡಗೈಯಿಂದ ಭುಜಕ್ಕೆ ಆಸರೆಯಾಗಿ ಛತ್ರಿಯನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಮೇಲಿನ ಹಂತದಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸು, ಅದರ ಎದುರಿಗೆ ಶಿವಲಿಂಗವಿದೆ. ಹಸುವಿನ ಮೇಲ್ಭಾಗದಲ್ಲಿ ಸೂರ್ಯ ಶಿವಲಿಂಗದ ಮೇಲ್ಭಾಗದಲ್ಲಿ ಚಂದ್ರನನ್ನು ಬಿಡಿಸಲಾಗಿದೆ.

ಶೈವ ಏತ ಶಾಸನಶಿಲ್ಪ

ಕುಷ್ಟಗಿ ಪರಿಸರದ ಸಿರಗುಪ್ಪದಲ್ಲಿ ಕ್ರಿ.ಶ.ಸು.೧೩ನೆಯ ಶತಮಾನದ ಏತ ಶಿಲ್ಪವಿರುವ ಶೈವ ಶಾಸನವಿದೆ.[೨೧] ಇದು ಅಪ್ರಕಟಿತ ಶಾಸನ. ಇದರ ಮೇಲಿರುವ ಅಕ್ಷರಗಳು ಓದಲು ಸಾಧ್ಯವಾಗದಷ್ಟು ಅಸ್ಪಷ್ಟವಾಗಿವೆ. ಈ ಶಾಸನವನ್ನು ನೆಲದಲ್ಲಿ ನಿಲ್ಲಿಸಲಾಗಿದೆ. ಶಾಸನದ ಲಲಾಟದಲ್ಲಿ ಶಿಲ್ಪ ಸ್ಪಷ್ಟವಾಗಿದೆ. ಏತ, ಶಿವಲಿಂಗ, ಕರು ಹಸು ಮತ್ತು ಸೂರ್ಯ ಶಿಲ್ಪಗಳನ್ನು ಬಿಡಿಸಲಾಗಿದೆ. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಏತದ ಶಿಲ್ಪವಿರುವ ಏಕೈಕ ಶಾಸನವಿದು. ಇದೊಂದು ವಿಶೇಷ ಶಾಸನಶಿಲ್ಪ ಎಂದು ಹೇಳಿದರೆ ತಪ್ಪಾಗಲಾರದು.

ಈ ಶಾಸನದ ಎಡಬದಿಗೆ ಒಂದು ಏತವನ್ನು ಚಿತ್ರಿಸಲಾಗಿದ್ದು, ಏತದ ಕಾಲುಗಳ ಕೆಳಗೆ ಒಂದು ನೀರಿನ ತೊಟ್ಟಿಯನ್ನು ಚಿತ್ರಿಸಲಾಗಿದೆ. ಆ ತೊಟ್ಟಿಯನ್ನು ಇಳಿಜಾರಾಗಿ ಬಿಡಿಸಲಾಗಿದೆ. ಇದು ಸುರಿದ ನೀರು ಮುಂದೆ ಹರಿಯಲು ಅನುಕೂಲವಾಗುವ ತಂತ್ರವಿದು. ಏತದ ಎರಡು ಕಾಲುಗಳು ಉತ್ತಮ ಗಾತ್ರದಲ್ಲಿವೆ. ಏತದ ತುದಿ ಸಣ್ಣದಾಗಿದ್ದು, ಬುಡವು ದಪ್ಪಗಿದೆ. ಇದು ಏತವನ್ನು ಎತ್ತಲು ಮತ್ತು ಇಳಿಸಲು ಸಮತೋಲನವನ್ನು ಕಾಪಾಡುತ್ತದೆ. ಈ ಶಾಸನದ ಶಿಲ್ಪ ಏತವನ್ನು ಪ್ರತ್ಯಕ್ಷವಾಗಿ ಕಂಡಿದ್ದನೆಂದು ಇದರಿಂದ ತಿಳಿಯಬಹುದಾಗಿದೆ. ಏತದ ತುದಿಯಲ್ಲಿ

[illegible]

ನೀರೆತ್ತಲು ಅನುಕೂಲವಾಗುವಂತೆ ಹಗ್ಗವನ್ನು ಅದರ ಕೆಳ ತುದಿಗೆ ದಪ್ಪವಾದ ಬಾನಿಯನ್ನು ಚಿತ್ರಿಸಲಾಗಿದೆ. ಈ ಏತದ ಚಿತ್ರಣವು ನೈಜವಾದ ಏತದಂತಿದ್ದು, ಶಿಲ್ಪಿಗೆ ನಿಖರವಾದ ಜ್ಞಾನವಿತ್ತೆಂದು ಇದರಿಂದ ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಏತದ ಶಿಲ್ಪಗಳು ಸಿಗುವುದೇ ವಿರಳ. ಅದರ ಸಾಲಿಗೆ ಈ ಸಿರಗುಪ್ಪ ಗ್ರಾಮದ ಏತದಾನ ಶಿಲ್ಪವು ಸೇರುತ್ತದೆ. ಬಹುಶಃ ಈ ಚಿತ್ರದ ಆಧಾರದಿಂದ ಇದು ದೇವಾಲಯದ ತೋಟಕ್ಕೂ ಅಥವಾ ಯಾತ್ರಿಕರಿಗೂ ಅಥವಾ ಪ್ರಾಣಿಗಳ ಅನುಕೂಲತೆಗಾಗಿ ಏತವನ್ನು ದಾನವಾಗಿ ನೀಡಿರುವ ವಿಚಾರ ತಿಳಿದುಬರುತ್ತದೆ.

ವೈಷ್ಣವ ದಾನ ಶಾಸನಶಿಲ್ಪ

ಕರ್ನಾಟಕದ ಪುರಾತನ ಧರ್ಮಗಳಲ್ಲಿ ವೈಷ್ಣವ ಧರ್ಮವು ಒಂದು. ಪ್ರಾಚೀನ ಕಾಲದ ಅರಸರು ಸರ್ವಧರ್ಮ ಸಮನ್ವಯ ನೀತಿಯನ್ನು ಅಳವಡಿಸಿಕೊಂಡಿದ್ದರು. ಶೈವ ಧರ್ಮದ ದೊರೆಗಳು ಸಹ ವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಈ ಧರ್ಮದ ದಾನ ಶಾಸನಗಳ ಮೇಲೆ ಸಾಮಾನ್ಯವಾಗಿ ಶಂಖ, ವೈಷ್ಣವ ದೇವತೆಗಳ ಗರುಡ ಮೊದಲಾದ ಶಿಲ್ಪಗಳಿರುತ್ತವೆ. ಕುಷ್ಟಗಿ ಪರಿಸರದಲ್ಲಿ ಈವರೆಗೆ ಚಳಗೇರಿ ಮತ್ತು ಪುರ್ತಗೇರಿಯಲ್ಲಿ ತಲಾ ಒಂದೊಂದರಂತೆ ಒಟ್ಟು ಎರಡು ವೈಷ್ಣವ ದಾನ ಶಾಸನಗಳು ಕಂಡುಬಂದಿದೆ.

ಚಳಗೇರಿಯಲ್ಲಿರುವ ಕ್ರಿ.ಶ.೧೧೭೨ರ ಶಾಸನದ[೨೨] ಮೇಲ್ಭಾಗದಲ್ಲಿ ನಿಂತಿರುವ ವಿಷ್ಣುವಿನ ಶಿಲ್ಪವಿದೆ. ವಿಷ್ಣುವು ತನ್ನ ಕೈಗಳಲ್ಲಿ ಶಂಖ, ಚಕ್ರ ಮತ್ತು ಗದೆಯನ್ನು ಹಿಡಿದುಕೊಂಡಿದ್ದಾನೆ. ವಿಷ್ಣುವಿನ ಒಂದು ಬದಿಯಲಿ ಸೂರ್ಯ ಚಂದ್ರ ಇನ್ನೊಂದು ಬದಿಯಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ ಶಿಲ್ಪವಿದೆ. ಹಸುವಿನ ಮೇಲ್ಭಾಗದಲ್ಲಿ ಕತ್ತಿಯನ್ನು ಕೆತ್ತವಾಗಿದೆ. ಇದೇ ರೀತಿಯ ಅಂಶಗಳಿರುವ ಇನ್ನೊಂದು ಶಾಸನ ಪುರ್ತಗೇರಿ[೨೩] ಯಲ್ಲಿದೆ.

ಜೈನ ದಾನ ಶಾಸನಶಿಲ್ಪ

ಕರ್ನಾಟಕದ ಪ್ರಾಚೀನ ಮತ್ತು ಜನಪ್ರಿಯವಾದ ಧರ್ಮಗಳಲ್ಲಿ ಜೈನ ಧರ್ಮವು ಒಂದು. ಈ ಧರ್ಮದ ದಾನ ಶಾಸನಶಿಲ್ಪಗಳಲ್ಲಿ ಸಾಮಾನ್ಯವಾಗಿ ತೀರ್ಥಂಕರನು ನಿಂತ ಅಥವಾ ಕುಳಿತ ಭಂಗಿಯಲ್ಲಿರುತ್ತವೆ. ಕುಷ್ಟಗಿ ತಾಲ್ಲೂಕಿನ ಚಳಗೇರಿ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಎದುರು ಕ್ರಿ.ಶ.೧೨ನೆಯ ಶತಮಾನದ ಶಾಸನವಿದೆ.[೨೪] ಇದು ಪ್ರಕಟಿತ ಶಾಸನ. ಇದರ ಮೇಲೆ ಕೆತ್ತಿರುವ ಮೊದಲನೆಯ ಸಾಲನ್ನು ಮಾತ್ರ ಓದಲಿಕ್ಕೆ ಸಾಧ್ಯವಾಗಿದ್ದು, ಮುಂದಿನ ಅಕ್ಷರಗಳು ಸವೆದುಹೋಗಿವೆ. ಈ ಶಾಸನದ ಲಲಾಟದ ಮಧ್ಯದಲ್ಲಿ ಎತ್ತರವಾದ ಪೀಠದ ಮೇಲೆ ಶಾಂತಮುದ್ರೆಯಲ್ಲಿ ಕುಳಿತ ಜಿನನನ್ನು ಕೆತ್ತಲಾಗಿದೆ. ಶಾಸನದ ಎಡಭಾಗದಲ್ಲಿ ಆನೆ, ಬಲಭಾಗದಲ್ಲಿ ಆಕಳ ಮತ್ತು ಕರುವಿನ ಶಿಲ್ಪಗಳಿವೆ. ಆಕಳಿನ ಮೇಲ್ಭಾಗದಲ್ಲಿ ಸೂರ್ಯನನ್ನು ಮತ್ತು ಶಾಪಾಶಯವನ್ನು ಸೂಚಿಸುವ ಕತ್ತಿಯನ್ನು ಕೆತ್ತಲಾಗಿದೆ. ಶಾಸನದ ಮೇಲ್ತುದಿ ಒಡೆದಿದ್ದು ಶಿಲ್ಪಗಳು ಸವೆದು ಅಸ್ಪಷ್ಟವಾಗಿದೆ.

ಅಂಟೂರತಾಣ ಗ್ರಾಮದಲ್ಲಿ ಕ್ರಿ.ಶ.೧೨೬೭ರ ತೀರ್ಥಂಕರ ಮತ್ತು ಪ್ರಭಾವಳಿ ಇರುವ ಮೂರ್ತಿಶಿಲ್ಪವಿದೆ.[೨೫] ಪ್ರಭಾವಳಿಯಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರನ್ನು ಬಿಡಿಸಲಾಗಿದೆ. ಈ ಮೂರ್ತಿಶಿಲ್ಪದ ಪೀಠದ ಮೇಲೆ ಶಾಸನವಿದೆ.

ಧರ್ಮ ಸಮನ್ವಯ ಶಾಸನಶಿಲ್ಪ

ಶೈವ-ವೈಷ್ಣವ ಧರ್ಮಗಳೆರಡೂ ಅನ್ಯೋನ್ಯವಾಗಿ ಬೆಳೆಯಬೇಕೆಂಬ ದೃಷ್ಟಿಯಿಂದ ಎರಡೂ ಧರ್ಮದ ಅಂಶಗಳನ್ನು ಒಂದೇ ಶಾಸನದಲ್ಲಿ ಚಿತ್ರಿಸಿದ ಶಿಲ್ಪಗಳು ಬಹಳಷ್ಟು ದೊರೆಯುತ್ತವೆ. ಇಂಥ ಒಂದು ಶಾಸನಶಿಲ್ಪ ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿದೆ.

ಪುರ್ತಗೇರಿಯಲ್ಲಿರುವ ಕ್ರಿ.ಶ.ಸು.೧೨ನೆಯ ಶತಮಾನದ ಅಪ್ರಕಟಿತ ಶಾಸನದ[೨೬] ಮೇಲ್ಭಾಗದ ಮಧ್ಯದಲ್ಲಿ ಶಿವಲಿಂಗವಿದೆ. ಶಿವಲಿಂಗದ ಪಕ್ಕದಲ್ಲಿ ನಿಂತಿರುವ ವಿಷ್ಣುವಿನ ಶಿಲ್ಪವಿದೆ. ವಿಷ್ಣುವು ಕೈಯಲ್ಲಿ ಶಂಖ, ಚಕ್ರ ಮತ್ತು ಗದೆಯನ್ನು ಹಿಡಿದಿದ್ದಾನೆ. ಶಿವಲಿಂಗದ ಇನ್ನೊಂದು ಬದಿಯಲ್ಲಿ ಕತ್ತಿ ಮತ್ತು ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಶಿವಲಿಂಗದ ಮೇಲ್ಭಾಗದ ಶಾಸನ ಭಾಗ ಹಾಳಾಗಿದೆ. ಈ ಶಿಲ್ಪಗಳು ಶೈವ, ವೈಷ್ಣವ ಧರ್ಮಗಳ ಸಮ್ಮಿಳನದ ಪ್ರತೀಕವಾಗಿವೆ.

೪.೨ ಸ್ಮಾರಕ ಶಾಸನಶಿಲ್ಪ

ಪ್ರಾಚೀನ ಕಾಲದಲ್ಲಿ ಎಲ್ಲರೂ ಅಕ್ಷರ ಕಲಿಗಳಾಗಿರಲಿಲ್ಲ. ಹಾಗಾಗಿ ಶಾಸನ ಶಿಲೆಗಳಲ್ಲಿ ಶಾಸನಶಿಲ್ಪ ಒಂದು ರೂಪ ಪಡೆಯಲು ಪ್ರಮುಖ ಕಾರಣವಾಗಿರಬಹುದು. ಸಾಮಾನ್ಯ ಜನತೆ ಕೂಡಾ ಶಾಸನಶಿಲ್ಪದ ಪ್ರಮುಖ ಉದ್ದೇಶವನ್ನು ತಿಳಿಯಲಿ ಎಂಬ ಕಾರಣದಿಂದ ಶಾಸನ ಹಾಕಿಸಿರುವರು ಅಥವಾ ಶಿಲ್ಪಿಗಳು ವಿಷಯದ ಜೊತೆಯಲ್ಲಿ ಶಿಲ್ಪವನ್ನು ನಿರ್ಮಿಸುವ ಅಭ್ಯಾಸ ಬೆಳೆಸಿದರು. ಅನಕ್ಷರಸ್ಥರಿಗೂ ಇದು ತಿಳಿಯಲಿ ಎಂಬುದು ಇಲ್ಲಿ ನಮಗೆ ಅರ್ಥವಾಗುತ್ತದೆ. ಇವುಗಳಲ್ಲಿ ಶಿಲ್ಪಿಗಳು ನಿರಕ್ಷರಿಗೆ, ಶಾಸನಗಳು ಸಾಕ್ಷರರಿಗೆ ಆಯಾ ಜನಾಂಗಗಳ ಮೌಲ್ಯವನ್ನು ಬೋಧಿಸುವ ಪ್ರಸಾರ ಫಲಕಗಳಾಗಿ ನಿಂತಿವೆ.[೨೬ಅ] ವೀರಪುರುಷ, ಮಹಿಳೆಯರ, ರಾಜರ, ಅಧಿಕಾರಿಗಳ ಯಾವುದಾದರೊಂದು ಪರಾಕ್ರಮದ ಸ್ಮರಣಾರ್ಥವಾಗಿ ನಿರ್ಮಿಸಿದ ಸಾಧನಗಳನ್ನು ಸ್ಮಾರಕಗಳೆನ್ನುತ್ತಾರೆ. ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಕಂಡುಬಂದ ಸ್ಮಾರಕಗಳ ಶಿಲ್ಪಗಳನ್ನು ವೀರಗಲ್ಲು, ಯುದ್ಧದ ವೀರಗಲ್ಲು, ತುಱುಗೊಳ್ ವೀರಗಲ್ಲು, ಆನೆಬೇಟೆ ಶಾಸನ, ಮಹಾಸತಿಕಲ್ಲು, ಲಿಂಗಮುದ್ರೆಕಲ್ಲು, ವಾಮನ ಮುದ್ರೆಕಲ್ಲು ಮತ್ತು ಯಂತ್ರಕಲ್ಲುಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ವೀರಗಲ್ಲುಗಳು

ಪ್ರಾಚೀನ ಕರ್ನಾಟಕದಲ್ಲಿ ದೇವರ ಪ್ರೀತ್ಯರ್ಥವಾಗಿ ವ್ಯಕ್ತಿಯು ಬಲಿಯಾಗುವ 'ಧಾರ್ಮಿಕ ಬಲಿದಾನ'ವನ್ನು ಒಂದು ಮೌಲ್ಯವೆಂದು ಭಾವಿಸುತ್ತಿದ್ದರು. ಆಮೇಲೆ ವ್ಯಕ್ತಿಗಳ ಪ್ರೀತ್ಯರ್ಥವಾಗಿ ಪ್ರಾಣವನ್ನು ಬಲಿಯಾಗಿ ಅರ್ಪಿಸುವ 'ಲೌಕಿಕ ಬಲಿದಾನ' ಒಂದು ಮೌಲ್ಯವೆನಿಸಿಕೊಂಡಿತು.

ಜೊತೆಗೆ ರಣರಂಗದಲ್ಲಿ ಹೋರಾಡಿ ಮಡಿಯುವುದೂ ಮೌಲ್ಯವಾಯಿತು. ಹೀಗೆ ಧಾರ್ಮಿಕ ಆತ್ಮಬಲಿದಾನದಿಂದ ವೀರಮರಣಕ್ಕೆ ಪ್ರಸಾರವಾಗುತ್ತ ಬಂದಿತು ಪ್ರಾಣಸಮರ್ಪಣೆ.[೨೭]

ಕರ್ನಾಟಕದಾದ್ಯಂತ ಅನೇಕ ಅರಸರ ಆಳ್ವಿಕೆಗೆ ಸೇರಿದ ವೀರಗಲ್ಲುಗಳು ಕಂಡುಬರುತ್ತವೆ. ವೀರಪುರುಷರ, ವೀರಮಹಿಳೆಯರ, ರಾಜಮಹಾರಾಜರ ಮತ್ತು ಅಧಿಕಾರಿಗಳ ಅಥವಾ ಯಾವುದಾದರೊಂದು ಪರಾಕ್ರಮದ ಅಥವಾ ವಿಜಯದ ನೆನಪಾಗಿ ನೆಡಿಸುವ ಕಲ್ಲುಗಳೇ ವೀರಗಲ್ಲುಗಳು. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ಶಿಲ್ಪ ಪ್ರಧಾನವಾಗಿರುತ್ತದೆ. ಇವುಗಳು ಸಾಮಾನ್ಯವಾಗಿ ಮೂರು ಹಂತಗಳಲ್ಲಿರುತ್ತವೆ. ಕೆಲವೊಮ್ಮೆ ಎರಡು, ನಾಲ್ಕು, ಆರು, ಏಳು ಹಂತಗಳಿರುವುದು ಉಂಟು. ಈ ವೀರಗಲ್ಲುಗಳ ಮೂರು ಹಂತಗಳನ್ನು ಮೂರು ಕ್ರಿಯೆಯ ಹಂತಗಳನ್ನಾಗಿ ಶಿಲ್ಪ ವಿಂಗಡಿಸಿರುತ್ತಾನೆ. ಸಾಮಾನ್ಯವಾಗಿ ಈ ಕ್ರಿಯೆ ಭೂಮಟ್ಟದಿಂದ ಆರಂಭವಾಗಿ ಮೇಲ್ಮುಖವಾಗಿರುತ್ತದೆ. ಇಲ್ಲಿನ ಶಿಲ್ಪ ವಿವರಗಳೇ ಅಧ್ಯಯನಕ್ಕೆ ಪ್ರಮುಖ ಆಧಾರಗಳಾಗಿವೆ. ಕೆಳಪಟ್ಟಿಯಲ್ಲಿ ಯುದ್ಧದ ಚಿತ್ರಣ, ಎರಡನೆಯ ಪಟ್ಟಿಯಲ್ಲಿ ಸತ್ತ ವೀರನ ಸ್ವರ್ಗಾರೋಹಣ, ಮೂರನೆಯ ಪಟ್ಟಿಯಲ್ಲಿ ವೀರನು ಸ್ವರ್ಗದಲ್ಲಿ ಅಥವಾ ದೇವರ ಸನ್ನಿಧಿಯಲ್ಲಿ ಕುಳಿತಿರುವಂತೆ ಶಿಲ್ಪಗಳಿರುತ್ತವೆ.

ವೀರಗಲ್ಲುಗಳ ಶಿಲ್ಪವನ್ನು ಶಾಸನ ಸಹಿತ ಮತ್ತು ಶಾಸನ ರಹಿತ ಶಿಲ್ಪವೆಂದು ವಿಭಾಗಿಸಬಹುದು. ಶಾಸನವಿರಲಿ, ಇಲ್ಲದಿರಲಿ ಆ ವೀರಗಲ್ಲಿನ ಉದ್ದೇಶ ಒಂದೇ ಆಗಿರುತ್ತದೆ. ಕುಷ್ಟಗಿ ಪರಿಸರದಲ್ಲಿ ಕಂಡುಬಂದಿರುವ ವೀರಗಲ್ಲುಗಳ ಮೇಲಿನ ಶಿಲ್ಪದ ಆಧಾರದಿಂದ ಯುದ್ಧದ ವೀರಗಲ್ಲುಗಳ ಶಿಲ್ಪ, ತುರುಗೋಳ ವೀರಗಲ್ಲುಗಳ ಶಿಲ್ಪ, ವೀರಮಾಸ್ತಿಕಲ್ಲುಗಳ ಶಿಲ್ಪ, ಒಕ್ಕೈಮಾಸ್ತಿಕಲ್ಲುಗಳ ಶಿಲ್ಪ, ಆನೆಬೇಟೆ ಶಾಸನಶಿಲ್ಪ, ನಿಷಧಿ ಶಾಸನಶಿಲ್ಪಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಯುದ್ಧದ ವೀರಗಲ್ಲುಗಳ ಶಿಲ್ಪ

ಕುಷ್ಟಗಿ ಪರಿಸರದಲ್ಲಿ ಕಂಡುಬಂದಿರುವ ಯುದ್ಧದ ವೀರಗಲ್ಲುಗಳ ಪರಂಪರೆ ಕ್ರಿ.ಶ.೭ನೆಯ ಶತಮಾನದಿಂದ ಕ್ರಿ.ಶ.೧೮ನೆಯ ಶತಮಾನದವರೆಗೆ ಕಂಡುಬರುತ್ತವೆ. ಅಂಟೂರಠಾಣದಲ್ಲಿರುವ ಕ್ರಿ.ಶ.೭ನೆಯ ಶತಮಾನದ ವೀರಗಲ್ಲು[೨೮] ಈ ತಾಲ್ಲೂಕಿನ ಅತ್ಯಂತ ಪುರಾತನವಾದ ವೀರಗಲ್ಲು. ಇದು ಎರಡು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದ ಶಿಲ್ಪ ಅಸ್ಪಷ್ಟವಾಗಿದ್ದು ಮೇಲಿನ ಹಂತದಲ್ಲಿ ಅಪ್ಸರೆಯರು ಕೈಯಲ್ಲಿ ಚಾಮರಗಳನ್ನು ಹಿಡಿದುಕೊಂಡು ನಿಂತಿದ್ದು, ವೀರನು ಕುಳಿತಿರುವಂತೆ ಚಿತ್ರಿಸಲಾಗಿದೆ. ಚಂದಾಲಿಂಗದಲ್ಲಿ ಕ್ರಿ.ಶ.೧೧ನೆಯ ಶತಮಾನದ ಶಾಸನ ಸಹಿತ ಒಂದು ವೀರಗಲ್ಲು[೨೯] ಇದೆ. ಈ ಶಾಸನ ಅಸ್ಪಷ್ಟವಾಗಿದೆ. ಈ ವೀರಗಲ್ಲನ್ನು ನೆಲದಲ್ಲಿ ನಿಲ್ಲಿಸಿರುವುದರಿಂದ ಕೆಳಹಂತ ಕಾಣುವುದಿಲ್ಲ. ಮೇಲಿನ ಎರಡು ಹಂತಗಳು ಮಾತ್ರ ಕಾಣುತ್ತವೆ. ಇಬ್ಬರು ಅಪ್ಸರೆಯರು ವೀರನ ಕೈಗಳನ್ನು ಹೆಗಲ ಮೇಲೆ ಹಾಕಿಕೊಂಡು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ಶಿಲ್ಪವಿದ್ದು, ಈ ಭಾಗವನ್ನು ಸುಂದರವಾಗಿ ಮಂಟಪದಿಂದ ಅಲಂಕರಿಸಲಾಗಿದೆ.

[illegible]

[illegible]

[illegible]

[illegible]

ಮೇಲಿನ ಹಂತದಲ್ಲಿ ಶಿವಲಿಂಗ ಮತ್ತು ಧ್ಯಾನದಲ್ಲಿ ಮಗ್ನನಾಗಿರುವ ವೀರನ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಈ ವೀರಗಲ್ಲಿನ ಪಕ್ಕದಲ್ಲಿ ಇದೇ ಮಾದರಿಯ ಎರಡು ವೀರಗಲ್ಲುಗಳು ಇವೆ.

ಶ್ಯಾಡಲಗೇರಿಯಲ್ಲಿರುವ ಕ್ರಿ.ಶ.೧೧ನೆಯ ಶತಮಾನದ ವೀರಗಲ್ಲು[೩೦] ಮೂರು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ವೀರಯೋಧ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಬಲಗೈಯನ್ನು ಸೊಂಟದಲ್ಲಿರುವ ಖಡ್ಗದ ಮೇಲೆ ಇಟ್ಟಿರುವಂತೆ ಚಿತ್ರಿಸಲಾಗಿದೆ. ವೀರಯೋಧನ ಕಾಲಕೆಳಗೆ ಎರಡು ಮೃತದೇಹಗಳಿದ್ದು, ಹಿಂಭಾಗದಲ್ಲಿ ಸೈನಿಕರಿದ್ದಾರೆ. ಮುಂಭಾಗದಲ್ಲಿ ಕೆಳಗೆ ಇಬ್ಬರು ಸೈನಿಕರು ಕೈಯಲ್ಲಿ ಖಡ್ಗವನ್ನು ಹಿಡಿದು ಮೇಲಕ್ಕೆ ಎತ್ತಿದ್ದಾರೆ. ಅವರ ಮೇಲೆ ಗಜಸೈನ್ಯ, ಇದರ ಮೇಲೆ ಅಶ್ವಸೈನಿಕರನ್ನು ಬಿಡಿಸಲಾಗಿದೆ. ಮಧ್ಯದ ಹಂತದಲ್ಲಿ ಇಬ್ಬರು ಅಪ್ಸರೆಯರು ವೀರಯೋಧನನ್ನು ಕರೆದುಕೊಂಡು ಹೋಗುತ್ತಿದ್ದು ಈ ಶಿಲ್ಪ ಭಾಗಕ್ಕೆ ಮಂಟಪದಿಂದ ಅಲಂಕರಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗ, ನಂದಿ, ಯತಿ ಮತ್ತು ಧ್ಯಾನದಲ್ಲಿರುವ ವೀರಯೋಧನನ್ನು ಬಿಡಿಸಲಾಗಿದೆ. ಚಂದಾಲಿಂಗದಲ್ಲಿರುವ ಕ್ರಿ.ಶ.ಸು.೧೧ನೆಯ ಶತಮಾನದ ವೀರಗಲ್ಲನ್ನು[೩೧] ನೆಲದಲ್ಲಿ ನಿಲ್ಲಿಸಲಾಗಿದೆ. ಹೀಗಾಗಿ ಕೆಳಹಂತದ ಶಿಲ್ಪ ನೆಲದಲ್ಲಿ ಮುಚ್ಚಿಕೊಂಡಿದೆ. ಮಧ್ಯದ ಹಂತದಲ್ಲಿ ವೀರನು ಅಪ್ಸರೆಯರ ಹೆಗಲ ಮೇಲೆ ಕೈ ಹಾಕಿಕೊಂಡು ಹೋಗುತ್ತಿರುವಂತೆ ತೋರಿಸಲಾಗಿದೆ. ಮೇಲ್ಭಾಗದ ಮಧ್ಯದಲ್ಲಿ ಶಿವಲಿಂಗ, ನಂದಿ ಮತ್ತು ಧ್ಯಾನದಲ್ಲಿ ಮಗ್ನನಾಗಿರುವ ವೀರನ ಶಿಲ್ಪಗಳನ್ನು ಬಿಡಿಸಲಾಗಿದೆ.

ಅಂಟೂರಠಾಣದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ವೀರಗಲ್ಲು[೩೨] ಮೂರು ಹಂತಗಳನ್ನು ಹೊಂದಿದೆ. ಕೆಳಹಂತದಲ್ಲಿ ವೀರನು ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಎದುರಿಗೆ ವೈರಿಯನ್ನು, ಮಧ್ಯಹಂತದಲ್ಲಿ ಸಣ್ಣದಾದ ಮಂಟಪದಲ್ಲಿ ವೀರಯೋಧ ಕುಳಿತಿದ್ದು ಮಂಟಪದ ಅಕ್ಕಪಕ್ಕದಲ್ಲಿ ಅಪ್ಸರೆಯರನ್ನು ತೋರಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗ, ನಂದಿ ಮತ್ತು ಪೂಜಿಸುತ್ತಿರುವ ವೀರನನ್ನು ಬಿಡಿಸಲಾಗಿದೆ.

ತಾವರಗೆರೆಯಲ್ಲಿರುವ ಕ್ರಿ.ಶ.೧೫ನೆಯ ಶತಮಾನದ ವೀರಗಲ್ಲು[೩೩] ಒಂದು ಪಂತದ್ದಾಗಿದೆ. ವೀರಯೋಧ ಕುದುರೆಯ ಮೇಲೆ ಕುಳಿತಿದ್ದು ಎಡಗೈಯಿಂದ ಕುದುರೆಯ ಜೀನನ್ನು, ಬಲಗೈಯಲ್ಲಿ ಕಠಾರಿಯನ್ನು ಹಿಡಿದಿದ್ದಾನೆ. ಕುದುರೆಯ ಹಿಂಭಾಗದಲ್ಲಿ ಒಬ್ಬ ಸೈನಿಕ ವೀರನಿಗೆ ನೆರಳಿನ ಛತ್ರಿಯನ್ನು ಹಿಡಿದ್ದಾನೆ. ಅಲಂಕೃತವಾದ ಕುದುರೆಯು ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆ ಎತ್ತಿದೆ. ವೀರನು ಕೊರಳಲ್ಲಿ ಹಾರ, ತೋಳುಗಳಿಗೆ ತೋಳಬಂದಿ, ಕೈಗೆ ಬಳೆಯಾಕಾರದ ರಿಂಗನ್ನು ಹಾಕಿಕೊಂಡಿದ್ದಾನೆ. ಇವುಗಳಿಂದ ಇವನೊಬ್ಬ ಪ್ರಮುಖ ವೀರನಾಗಿರಬಹುದೆಂದು ತಿಳಿಯುತ್ತದೆ. ಇವನ ಪಕ್ಕದಲ್ಲಿ ನಾಡ ಬಂದೂಕಿನ ಚಿತ್ರವಿದೆ.

ಗೋತಗಿಯಲ್ಲಿ ಕ್ರಿ.ಶ.೧೬ನೆಯ ಶತಮಾನದ ಒಂದೇ ಶೈಲಿಯ ಎರಡು ವೀರಗಲ್ಲು[೩೪] ಒಂದೇ ಸ್ಥಳದಲ್ಲಿವೆ. ಇವು ಮೂರು ಪಂತದ ಶಿಲ್ಪವನ್ನು ಹೊಂದಿವೆ. ಕೆಳಹಂತದಲ್ಲಿ ವೀರಯೋಧ ಮತ್ತು ವೈರಿ ಇಬ್ಬರೂ ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾರೆ. ವೀರಯೋಧನ ಕಾಲಕೆಳಗೆ ಒಂದು ಮೃತದೇಹ ತೋರಿಸಲಾಗಿದೆ. ಮಧ್ಯಹಂತದಲ್ಲಿ ವೀರನನ್ನು ಇಬ್ಬರೂ

[illegible]

ದೇವಕನ್ಯೆಯರು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದು ಮೇಲಿನ ಹಂತದಲ್ಲಿ ಶಿವಲಿಂಗ ಮತ್ತು ನಮಸ್ಕರಿಸುತ್ತಿರುವ ವೀರನನ್ನು ಚಿತ್ರಿಸಲಾಗಿದೆ.

ಚಂದಾಲಿಂಗದಲ್ಲಿರುವ ಕ್ರಿ.ಶ.೧೬ನೆಯ ಶತಮಾನದ ವೀರಗಲ್ಲು[೩೫] ಮೂರು ಹಂತದ ಶಿಲ್ಪವನ್ನು ಹೊಂದಿದೆ. ಈ ವೀರಗಲ್ಲಿಗೆ ಸುಣ್ಣ ಹಚ್ಚಲಾಗಿದ್ದು ಅಸ್ಪಷ್ಟವಾಗಿದೆ. ಕೆಳಹಂತ ಸ್ಪಷ್ಟವಾಗಿಲ್ಲ. ಮಧ್ಯದಲ್ಲಿ ವೀರನನ್ನು ಅಪ್ಸರೆಯರು ಕರೆದುಕೊಂಡು ಹೋಗುತ್ತಿರುವ ಹಾಗೆ ಮೇಲ್ಭಾಗದಲ್ಲಿ ಶಿವಲಿಂಗ, ನಂದಿ, ಮತ್ತು ಧ್ಯಾನಾಸಕ್ತನಾಗಿರುವ ವೀರಯೋಧನನ್ನು ತೋರಿಸಲಾಗಿದೆ.

ಯರಗೇರಿಯಲ್ಲಿರುವ ಕ್ರಿ.ಶ.೧೭ನೆಯ ಶತಮಾನದ ವೀರಗಲ್ಲು[೩೬] ಒಂದು ಹಂತದ್ದಾಗಿದೆ. ಇದು ಶಾಸನ ಸಹಿತ ವೀರಗಲ್ಲು. ಈ ವೀರಗಲ್ಲಿನ ಮೇಲಿರುವ ಶಾಸನ ಸ್ಪಷ್ಟವಿಲ್ಲ. 'ಯೆರಗೇರಿ ಮಲಗಿರಿಗೌಡನ ಮಗನು......' ಎಂದು ಮಾತ್ರ ತಿಳಿಯುತ್ತದೆ. ವೀರಯೋಧನು ಕುದುರೆಯ ಮೇಲೆ ಕುಳಿತಿದ್ದು, ಬಲಗೈಯಲ್ಲಿ ಖಡ್ಗವನ್ನು, ಎಡಗೈಯಿಂದ ಕುದುರೆಗೆ ಕಟ್ಟಿದ ಜೀನನ್ನು ಹಿಡಿದಿದ್ದಾನೆ. ಇಬ್ಬರು ಸೇವಕರಿದ್ದು ಒಬ್ಬನು ಚಾಮರ, ಇನ್ನೊಬ್ಬನು ಛತ್ರಿಯನ್ನು ಹಿಡಿದ್ದಾನೆ. ಈ ವೀರನೊಬ್ಬ ಪ್ರಮುಖ ನಾಯಕನಾಗಿರಬಹುದೆಂದು ಊಹಿಸಬಹುದಾಗಿದೆ. ಗಂಗನಾಳದಲ್ಲಿ ಕ್ರಿ.ಶ.೧೭ನೆಯ ಶತಮಾನದ ಎರಡು ವೀರಗಲ್ಲುಗಳಿವೆ.[೩೭] ಒಂದು ವೀರಗಲ್ಲಿನ ಮೇಲೆ ಇಬ್ಬರೂ ವೀರರಿದ್ದು, ವೀರರ ಎರಡು ಕೈಗಳಲ್ಲಿ ಖಡ್ಗಗಳನ್ನು ಹಿಡಿದಿರುವಂತೆ ತೋರಿಸಲಾಗಿದೆ. ಇನ್ನೊಂದು ವೀರಗಲ್ಲಿನ ಮೇಲೆ ವೀರನು ಕುದುರೆಯ ಮೇಲೆ ಕುಳಿತಿದ್ದು, ಕುದುರೆಯನ್ನು ಸೇವಕನೊಬ್ಬನು ಹಿಡಿದ್ದಾನೆ. ಸೂರ್ಯ ಚಂದ್ರರನ್ನು ಕೆತ್ತಲಾಗಿದೆ.

ತಾವರಗೆರೆಯಲ್ಲಿರುವ ಕ್ರಿ.ಶ.೧೭ನೆಯ ಶತಮಾನದ ವೀರಗಲ್ಲಿನ[೩೮] ಮೇಲೆ ವೀರನು ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಬಾಣವನ್ನು ಹಿಡಿದುಕೊಂಡು ಹೋಗುತ್ತಿರುವಂತೆ ಚಿತ್ರಿಸಲಾಗಿದೆ. ಜಾಲಿಹಾಳದಲ್ಲಿರುವ ಕ್ರಿ.ಶ.೧೭ನೆಯ ಶತಮಾನದ ವೀರಗಲ್ಲಿನ[೩೯] ಮೇಲೆ ವೀರನೊಬ್ಬನು ಬಲಗೈಯಲ್ಲಿ ಕುದುರೆಯನ್ನು ಹಿಡಿದುಕೊಂಡು, ಎಡಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡಿರುವಂತೆ ಬಿಡಿಸಲಾಗಿದೆ. ನಿಲೊಗಲ್‌ನಲ್ಲಿ ಕ್ರಿ.ಶ.೧೭ನೆಯ ಶತಮಾನದ ಎರಡು ವೀರಗಲ್ಲುಗಳಿವೆ.[೪೦] ಇವುಗಳು ಒಂದೇ ಸ್ಥಳದಲ್ಲಿದ್ದು ಈ ವೀರಗಲ್ಲುಗಳ ಮೇಲೆ ಬಿಡಿಸಿರುವ ವೀರನು ಎಡಗೈಯಲ್ಲಿ ಬಿಲ್ಲು, ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಬೆನ್ನಿಗೆ ಬಾಣಗಳಿರುವ ಬತ್ತಳಿಕೆಯನ್ನು ಹೊಂದಿದ್ದಾನೆ. ಹೋರಾಟಕ್ಕೆ ಸನ್ನದ್ಧನಾಗಿ ಹೋಗುತ್ತಿರುವಂತೆ ತೋರಿಸಲಾಗಿದೆ. ಶ್ಯಾಡಲಗೇರಿಯಲ್ಲಿ ಕ್ರಿ.ಶ.೧೮ನೆಯ ಶತಮಾನದ ಒಂದು ವೀರಗಲ್ಲು[೪೧] ಇದೆ. ವೀರನು ತನ್ನ ಎಡಗೈಯಲ್ಲಿ ಕಠಾರಿಯನ್ನು ಹಿಡಿದಿದ್ದು, ಬಲಗೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಹೋರಾಡುತ್ತಿರುವಂತೆ ಕೆತ್ತಲಾಗಿದೆ.

ತುರುಗೊಳ್ ವೀರಗಲ್ಲು

ಮಾನವನು ತನ್ನ ಜೀವನ ನಿರ್ವಹಣೆಗಾಗಿ ವ್ಯವಸಾಯವನ್ನು ಅವಲಂಬಿಸಿದಾಗ ಅವನಿಗೆ ಹಲವಾರು ರೀತಿಗಳಲ್ಲಿ ನೆರವಾದ ಪ್ರಾಣಿ ಎಂದರೆ ಗೋವುಗಳು. ಪ್ರಾಚೀನ

[illegible]

ಕರ್ನಾಟಕದಲ್ಲಿ ಗೋವು ಸಂಪತ್ತೆಂದು, ಪೂಜ್ಯವೆಂದು ಜನರು ಭಾವಿಸಿದ್ದರು. ದಾಳಿಕಾರರು ಊರುಗಳಲ್ಲಿ ನುಗ್ಗಿ ಗೋವುಗಳನ್ನು ಕದ್ದು ಒಯ್ಯುತ್ತಿದ್ದರು. ಹೀಗೆ ಗೋವುಗಳನ್ನು ಕದ್ದು ಒಯ್ಯುವದಕ್ಕೆ 'ತುಱುಗೊಳ್' ಅಥವಾ 'ಗೋಗ್ರಹಣ' ಎಂದು ಕರೆಯುತ್ತಿದ್ದರು. ಗೋವುಗಳನ್ನು ರಕ್ಷಿಸುವುದು, ಸ್ತ್ರೀಯರ ಮಾನ ಕಾಪಾಡುವುದು. ಊರುಗಳನ್ನು ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ತಿಳಿದುಬರುತ್ತದೆ. ಯಾವುದೇ ಕಾರಣದಿಂದ ಶತ್ರುಗಳು ಗೋವುಗಳನ್ನು ಅಪಹರಿಸಿದಾಗ, ಆ ಗೋವುಗಳನ್ನು ರಕ್ಷಿಸಲು ಪ್ರಾಣವನ್ನು ಲೆಕ್ಕಿಸದೆ ಹೋರಾಡುತ್ತಿದ್ದರು. ಆ ಹೋರಾಟದಲ್ಲಿ ಕೆಲವರು ಗೆದ್ದು ಬಂದರೆ ಮತ್ತೆ ಕೆಲವರು ಮರಣ ಹೊಂದುತ್ತಿದ್ದರು. ಇಂತಹ ವೀರರ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲುಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ. ವೀರಗಲ್ಲುಗಳ ಹೋರಾಟದ ಹಂತದ ಶಿಲ್ಪದಲ್ಲಿ ಯಾವುದಾದರೂ ಒಂದು ಕಡೆ ಕೆಲವು ದನಗಳು ನಿಂತಿರುವಂತೆ ಚಿತ್ರಿಸಿರುತ್ತಾರೆ.

ಸಿರಗುಪ್ಪದಲ್ಲಿರುವ ಕ್ರಿ.ಶ.೧೧ನೆಯ ಶತಮಾನದ ವೀರಗಲ್ಲಿನ[೪೨] ಮೇಲೆ "ಸಿರಿಗೊಪ್ಪದ ರಾಚಮಗಾವುಣ್ಡನ ನಿರಮೊಪ್ಪ ಆಚಗಾವುಣ್ಡನು ಇದ್ದಾಗ ತುಱುಗಳ್ಳರೊಡನೆ ಹೋರಾಡಿ ತಳಾರಿ ಕಾಳಬೋವನು ಮಡಿಯುತ್ತಾನೆ. ಇವನ ಮಗ ಬಮ್ಮಪನಿಗೆ ಹೊಲ ಹಾಗೂ ಮನೆಯನ್ನು ಮಾನ್ಯವಾಗಿ ನೀಡಿರುವ" ವಿಷಯವಿದೆ. ಈ ವೀರಗಲ್ಲು ನಾಲ್ಕು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ಸತ್ತವರ ಶವಗಳಿವೆ. ಮೇಲಿನ ಹಂತದಲ್ಲಿ ವೀರನು ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದು ತುಱುಗಳ್ಳರೊಡನೆ ಹೋರಾಡುತ್ತಿದ್ದು ವೀರನ ಹಿಂದೆ ಐದು ಗೋವುಗಳನ್ನು ಚಿತ್ರಿಸಲಾಗಿದೆ. ಇದರ ಮೇಲಿನ ಹಂತದಲ್ಲಿ ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ಇಬ್ಬರೂ ಅಪ್ಸರೆಯರು ಮೇಲೆ ಶಿವಲಿಂಗ, ಧ್ಯಾನದಲ್ಲಿ ಮಗ್ನನಾಗಿರುವ ವೀರನ ಶಿಲ್ಪವನ್ನು ಬಿಡಿಸಲಾಗಿದೆ.

ಹಿರೇಮನ್ನಾಪುರದಲ್ಲಿರುವ ಕ್ರಿ.ಶ.೧೧ನೆಯ ಶತಮಾನದ ವೀರಗಲ್ಲು[೪೩] ಮೂರು ಹಂತದ ಶಿಲ್ಪವನ್ನು ಹೊಂದಿದೆ. ಕೆಳ ಹಂತದಲ್ಲಿ ಐದು ಗೋವುಗಳನ್ನು, ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ಹೋರಾಡುತ್ತಿರುವ ವೀರನನ್ನು ತೋರಿಸಲಾಗಿದೆ. ಮಧ್ಯದ ಹಂತದಲ್ಲಿ ಇಬ್ಬರು ಅಪ್ಸರೆಯರು ವೀರನನ್ನು ದೇವ ಲೋಕಕ್ಕೆ ಕರೆದುಕೊಂಡು ಹೋಗುತ್ತಿರುವ ಶಿಲ್ಪ, ಮೇಲಿನ ಹಂತದಲ್ಲಿ ಶಿವಲಿಂಗ ಪಕ್ಕದಲ್ಲಿ ಎರಡು ಕೈಗಳನ್ನು ಜೋಡಿಸಿ ಕುಳಿತ ವೀರನು ಧ್ಯಾನದಲ್ಲಿ ಮಗ್ನನಾಗಿರುವ ವೀರನ ಶಿಲ್ಪವನ್ನು ಬಿಡಿಸಲಾಗಿದೆ.

ತಾವರಗೆರೆಯಲ್ಲಿರುವ ಕ್ರಿ.ಶ. ೧೫ನೆಯ ಶತಮಾನದ ವೀರಗಲ್ಲು[೪೪] ಮೂರು ಹಂತದ ಶಿಲ್ಪವನ್ನು ಹೊಂದಿದೆ. ಕೆಳಹಂತದಲ್ಲಿ ನಾಲ್ಕು ಗೋವುಗಳು ಮತ್ತು ವೈರಿಯೊಂದಿಗೆ ಹೋರಾಡುತ್ತಿರುವ ವೀರನನ್ನು ತೋರಿಸಲಾಗಿದೆ. ಮಧ್ಯದ ಹಂತದಲ್ಲಿ ವೀರನು ಕುಳಿತಿದ್ದು, ವೀರನ ಅಕ್ಕಪಕ್ಕದಲ್ಲಿ ಇಬ್ಬರೂ ದೇವಕನ್ಯೆಯರು ಅವನನ್ನು ಕರೆದುಕೊಂಡು ಹೋಗುತ್ತಿರುವಂತೆ ಕೆತ್ತಲಾಗಿದೆ. ಮೇಲಿನ ಹಂತದ ಮಧ್ಯದಲ್ಲಿ ವೀರನು ಕೈಮುಗಿದು ಕುಳಿತಿದ್ದು, ಎಡಭಾಗದ ಮೇಲ್ಭಾಗದಲ್ಲಿ ಶಿವಲಿಂಗ ಬಲಭಾಗದಲ್ಲಿ ಚಾಮರ ಬೀಸುತ್ತಿರುವ ಯತಿಯನ್ನು ಬಿಡಿಸಲಾಗಿದೆ. ಬಲ್ಲುಟಗಿಯಲ್ಲಿರುವ ಕ್ರಿ.ಶ.೧೬ನೆಯ ಶತಮಾನದ ವೀರಗಲ್ಲು[೪೫] ಒಂದು ಹಂತದ್ದಾಗಿದೆ. ಮೂರು

ಗೋವುಗಳು ಮತ್ತು ಹೋರಾಡುತ್ತಿರುವ ವೀರನನ್ನು ಚಿತ್ರಿಸಲಾಗಿದೆ. ಈ ವೀರಗಲ್ಲು ಅಸ್ಪಷ್ಟವಾಗಿದೆ.

ಈ ಮೇಲಿನ ನಾಲ್ಕು ತುರುಗೋಳ ವೀರಗಲ್ಲುಗಳು ಕುಷ್ಟಗಿ ಪರಿಸರದಲ್ಲಿ ಕಂಡುಬಂದಿವೆ. ಇವುಗಳಿಂದ ಈ ಪ್ರದೇಶದಲ್ಲಿ ತುರುಗಳ್ಳರಿದ್ದರೆಂದು ಸ್ಪಷ್ಟವಾಗುತ್ತದೆ. ಹಾಗೆಯೇ ಅವುಗಳ ರಕ್ಷಣೆಗಾಗಿ ವೀರರು ಹೋರಾಡಿ ಮಡಿದ ಬಗ್ಗೆ ತಿಳಿದುಬರುತ್ತದೆ.

ಆನೆಬೇಟೆ ಶಿಲ್ಪ

ಶಾಸನಗಳಲ್ಲಿ ಆನೆಯೊಡನೆ ಯುದ್ಧ ಮಾಡುವ ವಿವರಗಳಿದ್ದರೂ ಆನೆಬೇಟೆ ಶಾಸನ ವಾಗುವುದಿಲ್ಲ. ಅಲ್ಲಿ ಆನೆ ಹೋರಾಟದ ಒಂದು ಮಾಧ್ಯಮವಾಗಿರುತ್ತದೆ. ಆನೆಬೇಟೆಯಲ್ಲಿ ವೀರನು ನೇರವಾಗಿ ಆನೆಯನ್ನು ಕೊಲ್ಲುವ ಉದ್ದೇಶವನ್ನು ಹೊಂದಿ ಅದರೊಂದಿಗೆ ಹೋರಾಡಿ ಮರಣ ಹೊಂದಿದ ವೀರನ ಸ್ಮಾರಕಶಿಲೆಗಳೇ ಆನೆಬೇಟೆ ಶಿಲ್ಪಗಳು. ಕನ್ನಡ ನಾಡಿನಾದ್ಯಂತ ಇಂಥ ಶಿಲ್ಪದ ವೀರಗಲ್ಲುಗಳ ಸಂಖ್ಯೆ ಬೆರಳೆಣಿಕೆಯಷ್ಟು ಕಂಡುಬರುತ್ತವೆ.

ಕುಷ್ಟಗಿ ಪರಿಸರದಲ್ಲಿ ಒಂದೇ ಒಂದು ಆನೆಬೇಟೆ ವೀರಗಲ್ಲು ಕಂಡುಬಂದಿದೆ. ಅದು ಪುರ ಗ್ರಾಮದಲ್ಲಿದೆ.[೪೭] ಕ್ರಿ.ಶ.೧೩ನೆಯ ಶತಮಾನದ ಈ ಆನೆಬೇಟೆ ವೀರಗಲ್ಲು ಎರಡು ಹಂತದ್ದಾಗಿದೆ. ಕೆಳಗಿನ ಭಾಗ ಮಣ್ಣಲ್ಲಿ ಮುಚ್ಚಿದೆ. ಸ್ವಲ್ಪ ಮೇಲ್ಭಾಗದಲ್ಲಿ ಕುದುರೆಯ ಹಾಗೇ ಕಾಣುವ ರೇಖಾ ಚಿತ್ರವಿದೆ. ಮಧ್ಯಭಾಗದಲ್ಲಿ ವೀರನೊಬ್ಬ ಆನೆಯನ್ನು ಬೇಟೆಯಾಡುತ್ತಿರುವಂತೆ ಬಿಡಿಸಲಾಗಿದೆ. ವೀರನು ತನ್ನ ಬಲಗೈಯಲ್ಲಿ ಆಯುಧವನ್ನು ಹಿಡಿದು ಆನೆಯನ್ನು ತಿವಿಯುತ್ತಿರುವಂತೆ ಕೆತ್ತಲಾಗಿದೆ. ವೀರನ ಹಿಂಭಾಗದಲ್ಲಿ ಅವನ ಪತ್ನಿ ನಿಂತಿದ್ದಾಳೆ. ಇದರಿಂದ ಆನೆಬೇಟೆಯ ಸಂದರ್ಭದಲ್ಲಿ ವೀರನು ಮರಣ ಹೊಂದಿದ್ದು ಅವನ ಪತ್ನಿ ಸಹಗಮನ ಅನುಸರಿಸಿರುವಳೆಂದು ಸ್ಪಷ್ಟವಾಗುತ್ತದೆ. ಮೇಲ್ಭಾಗದಲ್ಲಿ ಶಿವಲಿಂಗ, ನಂದಿ ಮತ್ತು ಸೂರ್ಯ-ಚಂದ್ರರ ಶಿಲ್ಪಗಳನ್ನು ಬಿಡಿಸಲಾಗಿದೆ.

ಮಹಾಸತಿ ಶಿಲ್ಪಗಳು

ಗಂಡ ಸತ್ತ ನಂತರ ಆತನ ಚಿತೆಯಲ್ಲಿ ಹಾರಿ ಪ್ರಾಣ ತ್ಯಾಗ ಮಾಡುವ ಸ್ತ್ರೀಯನ್ನು ಮಹಾಸತಿ, ಅಥವಾ ಮಾಸ್ತಿ ಎಂದು ಕರೆಯುತ್ತಾರೆ. ಹೀಗೆ ಪ್ರಾಣ ತ್ಯಾಗ ಮಾಡಿದವರ ಸ್ಮರಣಾರ್ಥವಾಗಿ ನಿಲ್ಲಿಸಿರುವ ಕಲ್ಲುಗಳೇ ಮಹಾಸತಿ ಅಥವಾ ಮಾಸ್ತಿಕಲ್ಲುಗಳು ಕರ್ನಾಟಕ ದಾದ್ಯಂತ ಮಹಾಸತಿಕಲ್ಲುಗಳ ಸಂಖ್ಯೆ ದೊಡ್ಡದಾಗಿದ್ದರೂ ಉತ್ತರ ಕರ್ನಾಟಕದಲ್ಲಿ ಇವುಗಳ ಸಂಖ್ಯೆ ಕಡಿಮೆ ಎನ್ನಬಹುದು. ಕುಷ್ಟಗಿ ಪರಿಸರದಲ್ಲಿ ಇಂಥ ಕಲ್ಲುಗಳ ಸಂಖ್ಯೆ ತುಂಬಾ ಕಡಿಮೆ. ಪ್ರಸ್ತುತ ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಒಂದು ಒಕ್ಕೈಮಾಸ್ತಿಕಲ್ಲು ಮತ್ತು ಮೂರು ವೀರ ಮಾಸ್ತಿಕಲ್ಲುಗಳು ಕಂಡುಬಂದಿವೆ. ಅವುಗಳ ಶಿಲ್ಪಗಳನ್ನು ಕೆಳಗಿನಂತೆ ಅಧ್ಯಯನ ಮಾಡಲಾಗಿದೆ.

ಗೋತಗಿಯಲ್ಲಿ ಕ್ರಿ.ಶ.೧೬ನೆಯ ಶತಮಾನದ ಒಕ್ಕೈಮಾಸ್ತಿಕಲ್ಲು ಇದೆ.[೪೮] ಮಹಾಸತಿಯ ಘಟನೆಯನ್ನು ತಿಳಿಸಲು ಸಂಕೇತಕವಾಗಿ ಕಂಬದಿಂದ ಹೋರಾಟ ಕೈಯನ್ನು ಕೆತ್ತಲಾಗಿದೆ. ಕೆಲವು ಮಹಾಸತಿಕಲ್ಲುಗಳಲ್ಲಿ ವೀರನಿಗೂ ಸ್ಥಾನವಿದ್ದು, ಇಬ್ಬರನ್ನು ಸರಿಸಮಾನಾಗಿ ತೋರಿಸಲಾಗಿರುತ್ತದೆ.

ತಾವರಗೆರೆಯಲ್ಲಿ ಒಂದು ವೀರಮಾಸ್ತಿಕಲ್ಲು ಇದೆ[೨೮]. ವೀರನು ಕುದುರೆಯ ಮೇಲೆ ಕುಳಿತಿದ್ದು ಎದುರಿಗೆ ಅವನ ಸತಿಯು ತನ್ನೆರಡು ಕೈಗಳನ್ನು ಮೇಲಕ್ಕೆ ಎತ್ತಿ ನಿಂತಿದ್ದಾಳೆ. ಕುಷ್ಟಗಿಯಲ್ಲಿರುವ ವೀರಮಾಸ್ತಿಕಲ್ಲು[೨೯] ಅಸ್ಪಷ್ಟವಾಗಿದೆ. ಇದರಲ್ಲಿ ವೀರನು ತನ್ನ ಕೈಗಳಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿದ್ದಾನೆ ಅವನ ಹಿಂಭಾಗದಲ್ಲಿ ಸತಿಯು ತನ್ನೆರಡು ಕೈಗಳನ್ನು ಮೇಲಕ್ಕೆ ಎತ್ತಿ ನಿಂತಿರುವಂತೆ ಚಿತ್ರಿಸಲಾಗಿದೆ.

ಲಿಂಗಮುದ್ರೆ ಕಲ್ಲುಗಳು

ಲಿಂಗಮುದ್ರೆ ಕಲ್ಲುಗಳು ದಾನ ಶಾಸನಗಳಲ್ಲಿ ಬರುವ ಒಂದು ಪ್ರಕಾರ. ಪ್ರಾಚೀನ ಕಾಲದಲ್ಲಿ ಶೈವ, ವೀರಶೈವ ದೇವಾಲಯಗಳಿಗೆ ಇಲ್ಲವೇ ಮಠಗಳಿಗೆ ದಾನ ನೀಡಿದ ಭೂಮಿಯ ಮೇರೆಗಳನ್ನು ಗುರುತಿಸಲು ಹಾಕಿದ ಕಲ್ಲುಗಳೇ 'ಲಿಂಗಮುದ್ರೆ' ಕಲ್ಲುಗಳು. ಇವು ಎರಡು ಅಥವಾ ಮೂರು ಅಡಿಗಳಷ್ಟು ಎತ್ತರವಾಗಿರುತ್ತವೆ. ಶಾಸನದ ಮಧ್ಯಭಾಗ ಅಥವಾ ಮೇಲಿನ ಭಾಗದಲ್ಲಿ ಶಿವಲಿಂಗ ಅದರ ಅಕ್ಕಪಕ್ಕದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿರುತ್ತದೆ. ಬಹುತೇಕ ಲಿಂಗಮುದ್ರೆ ಕಲ್ಲುಗಳು ರೇಖೆಯಲ್ಲಿಯೇ ಚಿತ್ರಿತವಾಗಿರುತ್ತವೆ.

ಕುಷ್ಟಗಿಯಲ್ಲಿ ಎರಡು ಲಿಂಗಮುದ್ರೆ ಕಲ್ಲುಗಳು[೩೦] ದೊರೆತಿವೆ. ಇವುಗಳಲ್ಲಿ ಒಂದು ಲಿಪಿ ಸಹಿತ, ಇನ್ನೊಂದು ಲಿಪಿ ರಹಿತವಾಗಿದೆ. ಲಿಪಿ ಹೊಂದಿರುವ ಲಿಂಗಮುದ್ರೆಕಲ್ಲು ಕ್ರಿ.ಶ.ಸು.೧೫–೧೬ನೆಯ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ. ಇದರ ಮೇಲೆ ಮೂರು ಸಾಲುಗಳಲ್ಲಿ ಲಿಪಿಗಳಿವೆ. ಅವುಗಳಲ್ಲಿ ಒಂದನೇ ಸಾಲಿನಲ್ಲಿ 'ಕುಷ್ಟಗಿಯ ಹಿರೇಮಠ' ಎಂದು ಉಲ್ಲೇಖವಿದ್ದು, ಇನ್ನುಳಿದ ಸಾಲುಗಳು ಅಸ್ಪಷ್ಟವಾಗಿವೆ. ಈ ಶಾಸನದ ಮೇಲ್ಭಾಗದಲ್ಲಿ ಶಿವಲಿಂಗ, ಅದರ ಅಕ್ಕಪಕ್ಕದಲ್ಲಿ ಸೂರ್ಯ ಚಂದ್ರರನ್ನು ಕೊರೆಯಲಾಗಿದೆ. ಅಲ್ಲಿಯೇ ಇನ್ನೊಂದು ಲಿಪಿರಹಿತ ಲಿಂಗಮುದ್ರೆ ಕಲ್ಲು ಇದೆ. ಈ ಶಾಸನದ ಮಧ್ಯದಲ್ಲಿ ಶಿವಲಿಂಗ ಅದರ ಅಕ್ಕಪಕ್ಕದಲ್ಲಿ ಸೂರ್ಯ ಚಂದ್ರರನ್ನು ರೇಖೆಯಲ್ಲಿ ಚಿತ್ರಿಸಲಾಗಿದೆ.

ವಾಮನಮುದ್ರೆ ಕಲ್ಲು

ವೈಷ್ಣವ ದೇವಾಲಯಗಳಿಗೆ ದಾನ ನೀಡಿದ ಭೂಮಿಯ ಮೇರೆಗಳನ್ನು ಗುರುತಿಸಲು ನೆಡುತ್ತಿದ್ದ ಕಲ್ಲುಗಳೇ 'ವಾಮನಮುದ್ರೆ ಕಲ್ಲು'ಗಳು. ಬಹುತೇಕ ವಾಮನಮುದ್ರೆ ಕಲ್ಲುಗಳಲ್ಲಿ ಛತ್ರಿ ಹಿಡಿದ ಬ್ರಾಹ್ಮಣನ ವೇಷದಿಂದ ಬಲಿಚಕ್ರವರ್ತಿಯ ಬಳಿ ದಾನ ಬೇಡಿದುದರ ಸಂಕೇತವಾಗಿದೆ. ಇಂಥ ವಾಮನಮುದ್ರೆ ಕಲ್ಲುಗಳು ಹೆಚ್ಚಾಗಿ ರೇಖಾ ಚಿತ್ರದಲ್ಲೇ ಬಿಡಿಸಲಾಗಿರುತ್ತವೆ.

ಕುಷ್ಟಗಿ ಪರಿಸರದ ಗಂಗನಾಳದಲ್ಲಿ ಒಂದು ವಾಮನಮುದ್ರೆಕಲ್ಲು ಇದೆ.[೩೧] ಈ ವಾಮನಮುದ್ರೆ ಕಲ್ಲಿನ ಮೇಲೆ ಬ್ರಾಹ್ಮಣನೊಬ್ಬ ತನ್ನ ಬಲಗೈಯಲ್ಲಿ ಕಮಂಡಲ ಎಡಗೈಯಿಂದ ಹೆಗಲಿಗೆ ಆಸರೆಯಾಗಿ ಛತ್ರಿಯನ್ನು ಹಿಡಿದಿರುವಂತೆ ಕೊರೆಯಲಾಗಿದೆ. ಈ ಬ್ರಾಹ್ಮಣನ ತಲೆಯ ಮೇಲ್ಭಾಗದಲ್ಲಿ "ತಿರುಮಲ ತಾತಚಾರ್ಯಗೆ ಸರ್ವಮಾನ್ಯಉ" ಎಂದು ಕೊರೆಯಲಾಗಿದೆ. ಸೂರ್ಯ–ಚಂದ್ರರನ್ನು ಚಿತ್ರಿಸಲಾಗಿದೆ. ತಿರುಮಲ ತಾತಾಚಾರ್ಯರು ಕ್ರಿ.ಶ.೧೪ನೆಯ ಶತಮಾನದ ವೈಷ್ಣವ ಧರ್ಮದ ಗುರು. ಶ್ರವಣಬೆಳಗೊಳದ ಶಾಸನದಲ್ಲಿ ಇವರ ಉಲ್ಲೇಖವಿದೆ.[೩೨]

ಯಂತ್ರಕಲ್ಲು

ಸಾಮಾನ್ಯವಾಗಿ ಯಂತ್ರಕಲ್ಲುಗಳು ಹಳ್ಳಿಗಳ ಮುಂದೆ ಇರುತ್ತವೆ. ಪೀಡಾ ಪರಿಹಾರಕ್ಕಾಗಿ ಯಂತ್ರವನ್ನು ಕಲ್ಲಿನ ಮೇಲೆ ಬರೆದು ನಿಲ್ಲಿಸಿರುತ್ತಾರೆ. ಇವುಗಳನ್ನೇ 'ಯಂತ್ರಕಲ್ಲು' ಎಂದು ಕರೆಯಲಾಗುತ್ತದೆ. ಈ ಯಂತ್ರಕಲ್ಲುಗಳನ್ನು ಇಂದಿಗೂ ಹಳ್ಳಿಯ ಜನ ಪೂಜಿಸುತ್ತಾರೆ. ಈ ರೀತಿ ಯಂತ್ರಕಲ್ಲುಗಳಿಗೆ ಪೂಜಿಸುವುದರಿಂದ ದನಕರುಗಳಿಗೆ ಒದಗಿರುವ ಪೀಡೆ ಪರಿಹಾರವಾಗುತ್ತದೆಂಬ ನಂಬಿಕೆ ಇಂದಿಗೂ ಹಳ್ಳಿಗರಲ್ಲಿ ಇದೆ. ಇಂಥಹ ಎರಡು ಯಂತ್ರಕಲ್ಲುಗಳು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿವೆ. ಅವುಗಳು ಸಿರಗುಪ್ಪ ಮತ್ತು ಹನುಮನಾಳಗಳಲ್ಲಿವೆ.

ಸಿರಗುಪ್ಪದಲ್ಲಿರುವ ಕ್ರಿ.ಶ.೧೧–೧೨ನೆಯ ಶತಮಾನದ ಯಂತ್ರಕಲ್ಲಿಗೆ[೨೩] ಇಲ್ಲಿಯ ಜನ ದನಕರುಗಳಿಗೆ ಪೀಡೆಗಳು ಬಂದರೆ, ಒಂದು ತಂಬಿಗೆ ನೀರನ್ನು ತೆಗೆದುಕೊಂಡು, ಯಂತ್ರಕಲ್ಲಿಗೆ ಎಣ್ಣೆ ಹಾಕಿ, ಊದಿನಕಡ್ಡಿ ಹಚ್ಚಿ, ಪೂಜಿಸಿ, ತಂಬಿಗೆ ನೀರಿನೊಂದಿಗೆ ಅದಕ್ಕೆ ಐದು ಸುತ್ತು ಹಾಕುತ್ತಾರೆ. ನಂತರ ತಂಬಿಗೆಯಲ್ಲಿರುವ ನೀರನ್ನು ಪೀಡೆಯಿಂದ ಬಳಲುತ್ತಿರುವ ದನಕರುಗಳ ಮೇಲೆ ಹಾಕಲಾಗುತ್ತದೆ. ಐದು ದಿನಗಳ ಕಾಲ ಹೀಗೆ ಮಾಡಿದರೆ ದನಕರಗಳಿಗೆ ತಗಲಿರುವ ಪೀಡೆ ತೊಲಗುತ್ತದೆ. ಈ ಆಚರಣೆ, ನಂಬಿಕೆ ಇಂದಿಗೂ ಇಲ್ಲಿಯ ಜನರಲ್ಲಿದೆ. ಹನುಮನಾಳದಲ್ಲಿ ಕ್ರಿ.ಶ.೧೨–೧೩ನೆಯ ಶತಮಾನದ ಯಂತ್ರಕಲ್ಲು[೨೪] ಇದೆ. ಇದನ್ನು ಪೂರ್ವಾಭಿಮುಖವಾಗಿ ಪಾದಕಟ್ಟೆಯ ಮೇಲೆ ನಿಲ್ಲಿಸಲಾಗಿದೆ. ಇಲ್ಲಿಯ ಜನರಿಗೆ ಈ ಕಲ್ಲಿನ ಬಗ್ಗೆ ಮಾಹಿತಿ ಇಲ್ಲ. ಯಾವುದೋ ಪುರಾತನ ಕಲ್ಲು ಎಂದು ತಿಳಿದಿದ್ದಾರೆ. ಹೀಗಾಗಿ ಈ ಕಲ್ಲಿಗೆ ಯಾವುದೇ ರೀತಿಯ ಪೂಜೆ ಮಾಡುವುದಿಲ್ಲ.

ಮೇಲಿನ ಎರಡು ಗ್ರಾಮಗಳಲ್ಲಿಯ ಯಂತ್ರಕಲ್ಲುಗಳ ಮೇಲೆ ಮಂತ್ರಗಳನ್ನು ಕೊರೆಯಲಾಗಿದೆ. ಇವುಗಳಿಂದ ಯಂತ್ರ–ಮಂತ್ರಗಳ ಚಿಕಿತ್ಸಾ ವಿಧಾನಗಳು ಈ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದವು ಎಂದು ತಿಳಿಯುತ್ತದೆ.

ಅಡಿಟಿಪ್ಪಣಿಗಳು

೧. ಶಿವರಾಮ ಕಾರಂತ, ಭಾರತೀಯ ಶಿಲ್ಪ. ಪು.೧
೨. ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ಕ್ರಿ.ಶ.೧೯೯೯. ಪು.೭
೩. ಅದೇ ಪು.೧೭
೪. ಶಿವರಾಮ ಕಾರಂತ, ಚಿತ್ರಶಿಲ್ಪ ವಾಸ್ತುಕಲೆಗಳು, ಕ್ರಿ.ಶ.೧೯೭೫. ಪು.೧೫
೫. ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಕ್ರಿ.ಶ.೧೯೯೯. ಪು.೧೮
೬. ತಾವರಗೆರೆ, ವೈಜನಾಥ ದೇವಾಲಯದ ಎದುರು, ಕ್ರಿ.ಶ.೧೨ನೆಯ ಶತಮಾನ
೭. ತಾವರಗೆರೆ, ವೀರಭದ್ರ ದೇವಾಲಯದ ಎದುರು, ಕ್ರಿ.ಶ.ಸು.೧೫೪೭
೮. ಮಂಕಲ್ಕೇರಿ, ಶಾಲೆಯ ಬಳಿ ಇರುವ ಶಾಸನ, ಕ್ರಿ.ಶ.ಸು.೧೧೨೩
೯. ಪುರ, ಸೋಮೇಶ್ವರ ದೇವಸ್ಥಾನದ ಗೋಡೆ ಕ್ರಿ.ಶ.ಸು.೧೩ನೆಯ ಶತಮಾನ
೧೦. ಅಂಟೂರತಾಣ, ಜಂಬುನಾಥ ದೇವಾಲಯದಲ್ಲಿ, ಕ್ರಿ.ಶ.೧೦೮೨
ಕೆರೆ ಹತ್ತಿರ ಕ್ರಿ.ಶ.೧೧೯೫
೧೧. ಪುರ, ಸೋಮೇಶ್ವರ ಕ್ರಿ.ಶ.೧೨ನೆಯ ಶತಮಾನ,
ಈಶ್ವರ ದೇವಾಲಯ ಕ್ರಿ.ಶ.೧೨ನೆಯ ಶತಮಾನ
ಸೋಮಶೇಖರಯ್ಯನವರ ಹೊಲದಲ್ಲಿ ಕ್ರಿ.ಶ.೧೦೧೮
೧೨. ಕುಷ್ಟಗಿ, ನಗರೇಶ್ವರ ದೇವಾಲಯದ ಎದುರು
೧೩. ಆಚನೂರು, ಮಲ್ಲಿಕಾರ್ಜುನ ದೇವಾಲಯದ ಹತ್ತಿರ
೧೪. ಹಿರೇಮನ್ನಾಪುರ, ಶಿವನಗೌಡ ಕಲ್ಲನಗೌಡರ ಹೊಲದಲ್ಲಿ, ಕ್ರಿ.ಶ.೯೯೭
೧೫. ಗೋತಗಿ, ಸ್ಮಶಾನದಲ್ಲಿರುವ ಅಪ್ರಕಟಿತ ಶಾಸನ
೧೬. ಗೋತಗಿ, ನಾಗಕನ್ನಿಕಾ ದೇವಾಲಯದ ಎದುರು, ಕ್ರಿ.ಶ.ಸು.೧೦೨೪. ಕ್ರಿ.ಶ.೧೦೪೫
೧೭. ಹೆಸರೂರು, ಕುಂಬಾರ ಅವರ ಮನೆಯ ಹಿಂದೆ, ಕ್ರಿ.ಶ.೧೧೦೪
೧೮. ಅಂಟೂರತಾಣ, ಚಾವಡಿ ಹತ್ತಿರ ಕಟ್ಟೆಗೆ ಸೇರಿಸಿರುವ, ಕ್ರಿ.ಶ.೧೧-೧೨ನೆ ಶತಮಾನ
೧೯. ಹನುಮನಾಳ, ಚಾವಡಿ ಕಟ್ಟೆ, ಕ್ರಿ.ಶ.೧೧೯೭
೨೦. ಪುರ, ಕೋಟಿಲಿಂಗೇಶ್ವರ ದೇವಾಲಯದಲ್ಲಿ ಕ್ರಿ.ಶ.ಸು.೧೬ನೆಯ ಶತಮಾನ
೨೧. ಸಿರಗುಪ್ಪ, ಕಲ್ಲೇಶ್ವರ ದೇವಾಲಯದ ಎದುರು ಕ್ರಿ.ಶ.ಸು.೧೩ನೆಯ ಶತಮಾನ
೨೨. ಚಳಗೇರಿ, ಲಕ್ಷ್ಮೀ ದೇವಾಲಯದ ಎದುರು, ಕ್ರಿ.ಶ.೧೧೭೨
೨೩. ಪುರ್ತಗೇರಿ, ಸೋಮನಾಥ ದೇವಾಲಯದ ಹತ್ತಿರ ಅಪ್ರಕಟಿತ ಶಾಸನ ಕ್ರಿ.ಶ.೧೨ನೆಯ ಶತಮಾನ
೨೪. ಚಳಗೇರಿ, ರಾಮಲಿಂಗೇಶ್ವರ ದೇವಾಲಯದ ಎದುರು,ಕ್ರಿ.ಶ.೧೨ನೆಯ ಶತಮಾನ
೨೫. ಅಂಟೂರತಾಣ, ದುರ್ಗಮ್ಮನ ಗುಡಿಯಲ್ಲಿ, ಕ್ರಿ.ಶ.೧೨೬೭
೨೬. ಪುರ್ತಗೇರಿ, ಸೋಮನಾಥ ದೇವಾಲಯದ ಪಕ್ಕದಲ್ಲಿ ಅಪ್ರಕಟಿತ ಶಾಸನ ಕ್ರಿ.ಶ.೧೨ನೆಯ ಶತಮಾನ
೨೬.ಅ ಕಲಬುರ್ಗಿ.ಎಂ.ಎಂ, ಸಮಾಧಿ,ಬಲಿದಾನ,ವೀರಮರಣ ಸ್ಮಾರಕಗಳು ಪು.೩
೨೭. ಹಿರೇಮಠ. ಬಿ.ಅರ್. ವೀರಗಲ್ಲುಗಳು, ಕ್ರಿ.ಶ.೧೯೭೬. ಪು.೮
೨೮. ಅಂಟೂರತಾಣ, ಚಾವಡಿ ಕಟ್ಟೆಯ ಹತ್ತಿರ, ಕ್ರಿ.ಶ.೭ನೆಯ ಶತಮಾನ
೨೯. ಚಂದಾಲಿಂಗ, ಚಂದಾಲಿಂಗೇಶ್ವರ ದೇವಾಲಯದ ಆವರಣ, ಕ್ರಿ.ಶ.೧೦ನೆಯ ಶತಮಾನ
ಅದೇ ಕ್ರಿ.ಶ.೧೧ನೆಯ ಶತಮಾನ

೩೦. ಶ್ಯಾಡಲಗೇರಿ, ಆಂಜನೇಯ ದೇವಾಲಯದ ಎದುರು, ಕ್ರಿ.ಶ.೧೧ನೆಯ ಶತಮಾನ

೩೧. ಚಂದಾಲಿಂಗ, ಚಂದಾಲಿಂಗೇಶ್ವರ ದೇವಾಲಯದ ಆವರಣ, ಕ್ರಿ.ಶ.೧೧ನೆಯ ಶತಮಾನ

೩೨. ಅಂಟೂರಠಾಣ, ಜಂಬುನಾಥೇಶ್ವರ ದೇವಾಲಯದಲ್ಲಿ, ಕ್ರಿ.ಶ.೧೨ನೆಯ ಶತಮಾನ

೩೩. ತಾವರಗೆರೆ, ಶಶಿಧರಸ್ವಾಮಿ ಪ.ಪೂ ಕಾಲೇಜ ಆವರಣ, ಕ್ರಿ.ಶ.೧೫ನೆಯ ಶತಮಾನ

೩೪. ಗೋತಗಿ, ಹನುಮಂತ ದೇವಾಲಯದ ಎದುರು, ಕ್ರಿ.ಶ.೧೬ನೆಯ ಶತಮಾನ

೩೫. ಚಂದಾಲಿಂಗ, ಚಂದಾಲಿಂಶ್ವರ ದೇವಾಲಯದ ಆವರಣ, ಕ್ರಿ.ಶ.೧೬ನೆಯ ಶತಮಾನ

೩೬. ಯರಗೇರಿ, ಹನುಮಂತ ದೇವಾಲಯದಲ್ಲಿ, ಕ್ರಿ.ಶ.೧೭ನೆಯ ಶತಮಾನ

೩೭. ಗಂಗನಾಳ, ಹನುಮಂತ ಕುರಿ ಅವರ ಮನೆಯ ಎದುರು, ಕ್ರಿ.ಶ.೧೭ನೆಯ ಶತಮಾನ
ಸರಕಾರಿ ಶಾಲೆಯ ಎದುರು ಕ್ರಿ.ಶ.೧೭ನೆಯ ಶತಮಾನ

೩೮. ತಾವರಗೆರೆ, ಜಾಮಲಾಪುರ ಅವರ ಹೊಲದಲ್ಲಿ, ಕ್ರಿ.ಶ.೧೭ನೆಯ ಶತಮಾನ

೩೯. ಜಾಲಿಹಾಳ, ಶಿವಸಂಗಪ್ಪ ಭಾಗಾವಿ ಅವರ ಮನೆಯ ಹತ್ತಿರ, ಕ್ರಿ.ಶ.೧೭ನೆಯ ಶತಮಾನ

೪೦. ನಿಲೊಗಲ್, ಗುಡ್ಡದ ದ್ಯಾಮವ್ವ ದೇವಾಲಯದ ಎದುರು, ಕ್ರಿ.ಶ.೧೭ ನೆಯ ಶತಮಾನ

೪೧. ಶ್ಯಾಡಲಗೇರಿ, ಮಲ್ಲಿಕಾರ್ಜುನ ಗೋನಾಳ ಅವರ ಮನೆ ಹತ್ತಿರ, ಕ್ರಿ.ಶ.೧೮ನೆಯ ಶತಮಾನ

೪೨. ಸಿರಗುಪ್ಪ, ಆಂಜನೇಯ ದೇವಾಲಯದ ಎದುರು, ಕ್ರಿ.ಶ.೧೧ನೆಯ ಶತಮಾನ

೪೩. ಹಿರೇಮನ್ನಾಪುರ, ಶಿವನಗೌಡರ ಹೊಲದಲ್ಲಿ, ಕ್ರಿ.ಶ.೧೧ನೆಯ ಶತಮಾನ

೪೪. ತಾವರಗೆರೆ, ಶಶಿಧರಸ್ವಾಮಿ ಪ.ಪೂ ಕಾಲೇಜ ಆವರಣ, ಕ್ರಿ.ಶ.೧೫ನೆಯ ಶತಮಾನ

೪೫. ಬಲ್ಲುಟಗಿ, ದುರಗಮ್ಮ ದೇವಾಲಯದ ಎದುರು, ಕ್ರಿ.ಶ.೧೬ನೆಯ ಶತಮಾನ

೪೬. ಪುರ, ಸೋಮಶೇಖರಯ್ಯನವರ ಹೊಲದಲ್ಲಿ, ಕ್ರಿ.ಶ.ಸು.೧೩ನೆಯ ಶತಮಾನ

೪೭. ಗೋತಗಿ, ಆಂಜನೇಯ ದೇವಾಲಯದ ಎದುರು, ಕ್ರಿ.ಶ.೧೬ನೆಯ ಶತಮಾನ

೪೮. ತಾವರಗೆರೆ, ತಿಪ್ಪಣ್ಣ ಹೂಗಾರ ಅವರ ಹೊಲದಲ್ಲಿ, ಕ್ರಿ.ಶ.ಸು.೧೫ನೆಯ ಶತಮಾನ

೪೯. ಕುಷ್ಟಗಿ, ನಗರೇಶ್ವರ ಸರ್ಕಲ್‌ನಲ್ಲಿ, ಕ್ರಿ.ಶ.ಸು.೧೫ನೆಯ ಶತಮಾನ

೫೦. ಕುಷ್ಟಗಿ, ನಗರೇಶ್ವರ ದೇವಾಲಯದ ಎದುರು, ಕ್ರಿ.ಶ.ಸು.೧೫ನೆಯ ಶತಮಾನ

೫೧. ಗಂಗನಾಳ, ಪಂಚಪಕ್ಷಿ ದೇವಾಲಯದ ಎದುರಿನ ಬಂಡೆಯ ಮೇಲೆ, ಕ್ರಿ.ಶ.೧೪ನೆಯ ಶತಮಾನ

೫೨. EC-2, ಶ್ರವಣಬೆಳಗೋಳ ಭಂಡಾರ ಬಸದಿ ಶಾಸನ

೫೩. ಸಿರಗುಪ್ಪ, ಶಾಲೆಯ ಪಕ್ಕದ ಮುಖ್ಯ ರಸ್ತೆಯಲ್ಲಿ, ಕ್ರಿ.ಶ.ಸು೧೧–೧೨ನೆಯ ಶತಮಾನ

೫೪. ಹನುಮನಾಳ, ಪಾದಕಟ್ಟೆಯ ಮೇಲೆ, ಕ್ರಿ.ಶ.ಸು೧೨–೧೩ನೆಯ ಶತಮಾನ

ಅಧ್ಯಾಯ – ೫

ಸ್ಮಾರಕಗಳ ಅಧ್ಯಯನ

೫.೧ ದೇವಾಲಯಗಳು

ಶೈವ ದೇವಾಲಯಗಳು,

ವೈಷ್ಣವ ದೇವಾಲಯಗಳು ಮತ್ತು ಇತರೆ

೫.೨ ಮೂರ್ತಿಶಿಲ್ಪಗಳು

೫.೩ ಕೋಟೆಗಳು

೫.೪ ಜಲಮೂಲಗಳು

ಕೆರೆಗಳು

ಬಾವಿಗಳು

ಅಧ್ಯಾಯ – ೫

ಸ್ಮಾರಕಗಳ ಅಧ್ಯಯನ

೫.೧ ದೇವಾಲಯಗಳು

'ದೇವಾಲಯಗಳು' ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕಗಳಾಗಿ ಬೆಳೆದುಬಂದಿವೆ. ಮಳೆ, ಗಾಳಿ, ಗುಡುಗು, ಸಿಡಿಲು ಮೊದಲಾದವುಗಳು ಮಾನವನಲ್ಲಿ ಭಯ, ಭೀತಿ ಹುಟ್ಟಿಸಿದವು. ಇದು ನಿಸರ್ಗದ ಅದ್ಭುತ ಶಕ್ತಿಯಾಗಿದೆ ಎಂಬುದನ್ನರಿತ ಮಾನವ ಆ ಶಕ್ತಿಯನ್ನೇ ದೇವರೆಂದು ನಂಬಿದ. ನಿಸರ್ಗದ ಎಲ್ಲ ವಸ್ತುಗಳು ಅವನಿಗೆ ಪೂಜಾರ್ಹವಾದವು. ಈ ಅದ್ಭುತ ಶಕ್ತಿಗೆ ಪ್ರತಿಮೆ ರೂಪ ನೀಡಿ ಪೂಜಿಸಲು ಆರಂಭಿಸಿದ. ನಂತರ ಈ ಪ್ರತಿಮೆಯ ರಕ್ಷಣಾರ್ಥವಾಗಿ ಆಲಯವನ್ನು ಕಟ್ಟಲು ಆರಂಭಿಸಿದ. ಈ ಆಲಯವೇ ದೇವಾಲಯ ನಿರ್ಮಾಣವಾಗಲು ಕಾರಣವಾಯಿತು. ಮಾನವ ತನಗಾಗಿ ವಾಸಿಸಲು ಕಟ್ಟಿಕೊಂಡ ಮನೆ 'ಗೃಹವಾಸ್ತು' ಶಿಲ್ಪವಾಗಿದೆ. ದೇವರಿಗಾಗಿ ಕಟ್ಟಿದ್ದು 'ದೇವಾಲಯ ವಾಸ್ತುಶಿಲ್ಪ' ಎನಿಸಿತು. ಗುಡಿ, ದೇಗುಲ, ದೇವಾಲಯ, ದೇವಮಂದಿರ, ದೇವಸ್ಥಾನ ಎಂಬ ಇತ್ಯಾದಿ ಹೆಸರುಗಳು. ದೇವಾಲಯದ ವಿಕಾಸದ ವಿವಿಧ ಮಜಲುಗಳನ್ನು ಗುರುತಿಸುವುದು ಸಾಧ್ಯವಾದರೂ ದೇವಾಲಯ ನಿರ್ಮಾಣ ಎಂದು ಆರಂಭವಾಯಿತೆಂದು ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ.

ದೇವಾಲಯವು ದೇವರ ಆಲಯವಾಗಿದ್ದರೂ, ಇದು ಭಾರತೀಯರ ಸಮಾಧಿಯ ಕಲ್ಪನೆಗೆ ಬಹು ಹತ್ತಿರವಾಗಿದೆ. ಆದಕಾರಣ ದೇವಾಲಯದ ವಿವಿಧ ಭಾಗಗಳನ್ನು ಮಾನವನ ದೇಹಕ್ಕೆ ಹೋಲಿಸಿರುವುದು. ದೇವಾಲಯದ ಕಲ್ಪನೆಯು ಮುಂದೆ ಕಲೆಯ ಪ್ರತಿರೂಪವಾಗಿ ಪ್ರವಹಿಸಿತು. ದೇವರು ಶಾಶ್ವತವೆಂಬ ಕಲ್ಪನೆ ಇದ್ದುದರಿಂದ ದೇವರಿಗಾಗಿ ಕಟ್ಟುವ ಕಟ್ಟಡ ಕೂಡ ಶಾಶ್ವತವಾಗಿರಬೇಕೆಂದು ಪ್ರಾಚೀನ ಕಾಲದಿಂದ ಬೆಳೆದುಬಂದಿದೆ. ಈ ಹಿನ್ನಲೆಯಲ್ಲಿಯೇ ದೇವಾಲಯಗಳನ್ನು ಬಹುಕಾಲ ಬಾಳಿಕೆ ಬರುವ ಶಿಲೆಯನ್ನು ಬಳಸಿ ಕಟ್ಟುತ್ತಿದ್ದರು. ದೇವಾಲಯ ಶಾಶ್ವತವಾಗಿ ಉಳಿಯಬೇಕೆನ್ನುವುದು ಒಂದೆಡೆಯಾದರೆ ಅದನ್ನು ಕಲಾತ್ಮಕವಾಗಿ ನಿರ್ಮಿಸುವುದು ಕೂಡ ಮಹತ್ವದ ಅಂಶವಾಗಿದೆ.[೧]

ಭಾರತದ ಪ್ರಾಚೀನ ನಾಗರಿಕತೆಯಾದ ಹರಪ್ಪ ಸಂಸ್ಕೃತಿಯ ಜನರು ಪ್ರಕೃತಿಯ ಆರಾಧಕರಾಗಿದ್ದರು. ಪಶುಪತಿ ಮೊದಲಾದ ಮೂರ್ತಿಗಳನ್ನು ಪೂಜಿಸುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ. ಆದರೆ ಮೂರ್ತಿಗೆಂದು ಕಟ್ಟಿದ ದೇಗುಲದ ವಾಸ್ತು ಬಗ್ಗೆ ಇದುವರೆಗೆ ತಿಳಿದುಬಂದಿಲ್ಲ. ದೇಗುಲವಾಸ್ತು ರಚನೆಗಿಂತ ಪೂರ್ವದಲ್ಲಿ ಮೂರ್ತಿಶಿಲ್ಪದ ಆರಾಧನೆ ಇರುವುದು ತಿಳಿಯುತ್ತದೆ. ವೇದ, ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ದೇಗುಲಗಳಿದ್ದ ಬಗ್ಗೆ ಉಲ್ಲೇಖಗಳಿವೆ. ಭಾರತದ ಚರಿತ್ರೆಯಲ್ಲಿ ದೇವಾಲಯದ ವಾಸ್ತುರೂಪಗಳು ದೊರೆಯವುದು ಬೌದ್ಧ ಮತ್ತು ಜೈನಧರ್ಮಗಳು ಆಸ್ತಿತ್ವಕ್ಕೆ ಬಂದನಂತರ. ಆರಂಭದಲ್ಲಿ ದೇವಾಲಯಗಳು

[illegible]

[illegible]

[illegible]

ಚಿಕ್ಕದಾಗಿದ್ದು ಕಾಲಕಳೆದಂತೆ ಪೂಜಾ ವಿಧಿವಿಧಾನಗಳು, ಆಚರಣೆಗಳು ಹೆಚ್ಚಿದಂತೆ ಅದಕ್ಕೆ ತಕ್ಕಂತೆ ದೇವಾಲಯವು ವಿಸ್ತೃತಗೊಳ್ಳಲಾರಂಭಿಸಿತು. ಮಾನವನ ವಿಚಾರಗಳು ಬೆಳೆದಂತೆಲ್ಲ ದೇವಾಲಯಗಳು ಬೆಳವಣಿಗೆಯನ್ನು ಪಡೆದು, ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾದವು. ಸಂಗೀತ, ನೃತ್ಯ, ವಿದ್ಯಾಕೇಂದ್ರಗಳಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಪಾತ್ರವಹಿಸಿದವು. ದೇವಾಲಯಗಳು ಸಮಾಜದ ವಿವಿಧ ಉದ್ದೇಶಗಳಿಗೆ ನೇರವಾಗಿ ನಿಂತು, ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಎಲ್ಲ ಸ್ತರದ ವ್ಯಕ್ತಿಗಳ ಮನ್ನಣೆ ಪಡೆದುದರಿಂದ ಅವು ಅವರ ಜೀವನದೊಂದಿಗೆ ಹಾಸು ಹೊಕ್ಕಾಗಿ ಬೆಳೆದು ಸಮಾಜದ ಕೇಂದ್ರ ಸ್ಥಾನವೆನಿಸಿತು. ಅಂತೆಯೇ ದೇವಾಲಯ ನಿರ್ಮಾಣವು ಇಡೀ ಸಮಾಜದ ಧಾರ್ಮಿಕ ಶ್ರದ್ಧೆಯ ಹಾಗೂ ಭಕ್ತಿಯ ಪ್ರತೀಕವೆನಿಸಿತು. ಆಯಾ ಧಾರ್ಮಿಕ ಮತಗಳಿಗೆ ಅನುಗುಣವಾಗಿ ಈ ಪೂಜಾಸ್ಥಾನಗಳು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟವು ಅಂದರೆ, ಹಿಂದೂಗಳು 'ದೇವಾಲಯ' ಎಂದು ಕರೆದರೆ, ಜೈನರು 'ಬಸದಿ' ಎಂದು, ಬೌದ್ಧರು 'ಚೈತ್ಯ' ಎಂದು ಕರೆದರು.[೨]

ಕುಷ್ಟಗಿ ತಾಲ್ಲೂಕಿನ ಪರಿಸರದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚುರಿ, ವಿಜಯನಗರ, ವಿಜಯನಗರೋತ್ತರ, ಪಾಳೆಯಗಾರ, ಹಿಂದೂ-ಮುಸ್ಲಿಂ ಶೈಲಿ ಮತ್ತು ಆಧುನಿಕ ಶೈಲಿಯ ದೇವಾಲಯಗಳಿವೆ. ಕ್ರಿ.ಶ.೨೦೦೧ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ 'ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ' ಎಂಬ ಪುಸ್ತಕ ಪ್ರಕಟಗೊಂಡಿದೆ. ಈ ಪುಸ್ತಕದಲ್ಲಿ ಕುಷ್ಟಗಿ ತಾಲ್ಲೂಕಿನ ದೇವಾಲಯಗಳ ಸಂಕ್ಷಿಪ್ತ ಮಾಹಿತಿ ಇದೆ. ಇದರ ಪ್ರಕಾರ ಈ ತಾಲ್ಲೂಕಿನಾದ್ಯಂತ ಶೈವ ದೇವಾಲಯಗಳು-೨೦, ವೈಷ್ಣವ ದೇವಾಲಯಗಳು-೦೬ ಮತ್ತು ಇತರೆ ೦೪ ಹೀಗೆ ಒಟ್ಟು ೩೦ ದೇವಾಲಯಗಳಿವೆ. ನಾನು ಅಧ್ಯಯನ ನಿಮಿತ್ಯ ಕ್ಷೇತ್ರಕಾರ್ಯಕ್ಕೆ ಹೋದಾಗ ಮೇಲಿನ ಪುಸ್ತಕದಲ್ಲಿ ಪ್ರಕಟಗೊಳ್ಳದಿರುವ ಐದು ದೇವಾಲಯಗಳನ್ನು ಗುರುತಿಸಿದ್ದೇನೆ. ಇವುಗಳು ಶೈವ ದೇವಾಲಯಗಳಾಗಿದ್ದು, ಅವುಗಳು ಗೋತಗಿಯಲ್ಲಿ ಎರಡು, ಶ್ಯಾಡಲಗೇರಿಯಲ್ಲಿ ಎರಡು, ಮಾಟೂರಿನಲ್ಲಿ ಒಂದು ಕಂಡುಬಂದಿವೆ. ನನ್ನ ಅಧ್ಯಯನದ ಪ್ರಕಾರ ಈ ತಾಲ್ಲೂಕಿನ ಪರಿಸರದಲ್ಲಿ ಶೈವ ದೇವಾಲಯಗಳು-೨೭, ವೈಷ್ಣವ ದೇವಾಲಯಗಳು-೦೭, ಇತರೆ ದೇವಾಲಯ-೦೧. ಹೀಗೆ ಒಟ್ಟು ೩೫ ಪುರಾತನ ದೇವಾಲಯಗಳಿದ್ದು ಇವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶೈವ ದೇವಾಲಯಗಳು

ಪುರಾತನ ಕಾಲದಿಂದಲೂ ಶೈವಧರ್ಮ ಪ್ರಬಲ ಧರ್ಮವಾಗಿದೆ. ಶಿವನ ಆರಾಧಕರೇ ಶೈವರು. ಶಿವನೆಂದರೆ ಕಲ್ಯಾಣಕಾರನು. ಶಿವನು ಆರ್ಯರ ದೇವರಲ್ಲ. ಮೂಲನಿವಾಸಿಗಳ ದೇವರು. ಸಿಂಧೂ ಸಂಸ್ಕೃತಿಯ ಶೋಧನೆಯಲ್ಲಿ ಕಂಡುಬಂದ ಅವಶೇಷಗಳಿಂದ ಶಿವನ ಉಪಾಸನೆ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಯಜುರ್ವೇದದ ಶತರುದ್ರೀಯಲ್ಲಿ ಶಿವನ ಪ್ರಾರ್ಥನೆಯ ವರ್ಣನೆ ಇದೆ. ಅಲ್ಲಿ ಈತನು ಶಂಕರ ಮತ್ತು ನೀಲಕಂಠನೂ ಆಗಿದ್ದನು.[೩] ಶಿವನು ಸಾಮಾನ್ಯರ ದೇವರು. ಇವನು ದೊಡ್ಡಯೋಗಿ. ವಿಶ್ವದ ಶಕ್ತಿಸ್ವರೂಪನು, ಮಾಂತ್ರಿಕನು, ಭೂತನಾಯಕನು, ಮಹಾಕಾಲನು, ಮೃತ್ಯಂಜಯನು, ಪ್ರಾಣಿಕೋಟಿಯನ್ನೆಲ್ಲ ತನ್ನಲ್ಲಿ ಇಟ್ಟುಕೊಂಡಿರುವವನು. ಉತ್ಪತ್ತಿಯ ಅಧಿದೇವತೆಯಾದುದರಿಂದ ಅರ್ಧನಾರೀಶ್ವರನಾದನು.

ಶಿವನ ವಾಸಸ್ಥಳ ಸರ್ವತ್ರವಿದ್ದರೂ ಕೈಲಾಸ ಮುಖ್ಯವಾದುದು. ಶಿವನನ್ನು ಅನೇಕ ರೂಪಗಳಿಂದ ಪೂಜಿಸುವ ಪದ್ಧತಿ ಇದೆ. ಹಾಗೇ ಇತನನ್ನು ಮಹಾದೇವ, ಹರ, ಭೈರವ, ಪಶುಪತಿ ಎಂಬೆಲ್ಲ ಅನೇಕ ಹೆಸರುಗಳಿಂದ ಕರೆಯುವ ವಾಡಿಕೆ ಇದೆ.

ಶಿವನು ನಿರಾಕಾರ ರೂಪದವನು. ಅಂತೆಯೇ ಪ್ರಾಚೀನ ಕಾಲದಿಂದ ಲಿಂಗರೂಪದಿಂದ ಪೂಜಿಸುವುದು ರೂಢಿಯಾಯಿತು. ಆದರೆ ಕಾಲಕಳೆದಂತೆ ಈ ಧರ್ಮ ಹೆಚ್ಚು ಪ್ರಚಲಿತಗೊಂಡು ಪ್ರಬಲ ಧರ್ಮವಾಯಿತು. ಕರ್ನಾಟಕದ ಎಲ್ಲ ಅರಸು ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಈ ಧರ್ಮಕ್ಕೆ ರಾಜಾಶ್ರಯ ನೀಡಿದ್ದುಂಟು. ಅಲ್ಲದೇ ಅನೇಕ ಅರಸು ಮನೆತನದವರು ಸಹ ಅನುಸರಿಸಿದ್ದಾರೆ. ಕುಷ್ಟಗಿ ತಾಲ್ಲೂಕಿನ ಪರಿಸರದಲ್ಲಿ ಶೈವಧರ್ಮ ಹೆಚ್ಚು ಪ್ರಸರಣಗೊಂಡಿತ್ತು ಎಂಬುದನ್ನು ಇಲ್ಲಿಯ ಪುರಾತನ ದೇವಾಲಯಗಳಿಂದ ಧೃಡಪಡುತ್ತದೆ. ಅವುಗಳು ಅಂಟೂರಠಾಣ, ಕಡೂರ, ಕಾಟಾಪುರ, ಕುಷ್ಟಗಿ, ಚಂದ್ರಗಿರಿ, ಚಳಗೇರಾ, ತಾವರಗೆರೆ, ಪುರ್ತಗೇರಿ, ಪುರ, ಹನುಮಸಾಗರ, ಹಿರೇಮನ್ನಾಪುರ, ಶ್ಯಾಡಲಗೇರಿ, ಹೂಲಗೇರಿ, ಗೋತಗಿ ಮತ್ತು ಮಾಟೂರು ಗ್ರಾಮಗಳಲ್ಲಿವೆ. ಈ ದೇವಾಲಯಗಳಲ್ಲಿ ರಾಷ್ಟ್ರಕೂಟರ ಕಾಲದ ಒಂದು, ಕಲ್ಯಾಣ ಚಾಲುಕ್ಯರ ಕಾಲದ ಹತ್ತೊಂಬತ್ತು, ವಿಜಯನಗರ ಕಾಲದ ಎರಡು, ವಿಜಯನಗರೋತ್ತರ ಎರಡು, ಪಾಳೆಯಗಾರರ ಕಾಲದ ಒಂದು, ಹಿಂದೂ-ಮುಸ್ಲಿಂ ಶೈಲಿಯಲ್ಲಿ ಎರಡು, ಹೀಗೆ ಒಟ್ಟು ಇಪ್ಪತ್ತೇಳು ಶೈವ ದೇವಾಲಯಗಳಿವೆ. ಇವುಗಳ ವಾಸ್ತುಶೈಲಿಯನ್ನು ಕಾಲಾನುಕ್ರಮದಲ್ಲಿ ಅಧ್ಯಯನ ಮಾಡಲಾಗಿದೆ.

ಊರು	–	**ಕಡೂರು**
ಸ್ಮಾರಕ	–	ಕಲ್ಲೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಈಶಾನ್ಯಕ್ಕೆ
ಶೈಲಿ	–	ರಾಷ್ಟ್ರಕೂಟ
ಪಂಥ	–	ಶೈವ
ಕಾಲ	–	ಕ್ರಿ.ಶ.ಸು.೯-೧೦ನೆಯ ಶತಮಾನ

ಕುಷ್ಟಗಿ ತಾಲ್ಲೂಕಿನಲ್ಲಿರುವ ಪುರಾತನ ದೇವಾಲಯಗಳಲ್ಲಿ ಕಡೂರಿನಲ್ಲಿರುವ ಕಲ್ಲೇಶ್ವರ ದೇವಾಲಯವು ಅತ್ಯಂತ ಪುರಾತನವಾದದ್ದು. ಈ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡಿದೆ. ಇದು ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಮಾತ್ರ ಇದೆ. ಇನ್ನುಳಿದ ಭಾಗಗಳೆಲ್ಲ ಹಾಳಾಗಿವೆ. ಈಗ ಉಳಿದಿರುವ ಗರ್ಭಗೃಹ ಎತ್ತರದ ಅಧಿಷ್ಠಾನದ ಮೇಲಿದೆ. ಈ ದೇವಾಲಯ ಕಟ್ಟಲಿಕ್ಕೆ ಮರಳು ಮಿಶ್ರಿತ ಕೆಂಪು ಬಿಳಿ ಛಾಯೆಯ ಕಲ್ಲುಗಳನ್ನು ಬಳಸಲಾಗಿದೆ. ಈ ದೇವಾಲಯದ ಕಟ್ಟಡ ಶೈಲಿಯು ತುಂಬಾ ಸರಳವಾಗಿದೆ.

ಗರ್ಭಗೃಹದಲ್ಲಿ ಯಾವುದೇ ಮೂರ್ತಿಯಿಲ್ಲ. ಗರ್ಭಗೃಹದ ಒಳಗೋಡೆ ಮತ್ತು ಹೊರಗೋಡೆಗಳು ಸರಳವಾಗಿವೆ. ಎತ್ತರವಾದ ವೇದಿಕೆಯ ಮೇಲೆ ಸುಮಾರು ನಾಲ್ಕು ಅಡಿ

[illegible]

ಎತ್ತರದ ಸಮತಟ್ಟಾದ ಯಾವುದೇ ಭಾಗಗಳಿಲ್ಲದ ಅಧಿಷ್ಠಾನವಿದೆ. ಗರ್ಭಗೃಹದ ಮೇಲಿನ ಶಿಖರ ಸಂಪೂರ್ಣ ಹಾಳಾಗಿದೆ ಆದರೆ ಅವಶೇಷಗಳನ್ನು ಕಾಣಬಹುದಾಗಿದೆ.

ಊರು	–	**ಗೋತಗಿ**
ಸ್ಮಾರಕ	–	ನಾಗಕನ್ನಿಕಾ ದೇವಾಲಯ
ಸ್ಥಳ	–	ಬಡಿಕಟ್ಟಿ ಹತ್ತಿರ (ಬಸವಣ್ಣ ಗುಡಿ ಹತ್ತಿರ)
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.ಸು.೧೧–೧೨ನೆಯ ಶತಮಾನ

ಈ ದೇವಾಲಯವು ಸಂಪೂರ್ಣವಾಗಿ ನೆಲಮಟ್ಟದಲ್ಲಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಮಂಟಪವನ್ನು ಒಳಗೊಂಡಿದೆ. ಗರ್ಭಗೃಹವು ಐದುವರೆ ಅಡಿ ಅಗಲ, ಎಂಟುವರೆ ಅಡಿ ಉದ್ದವಾದ ಅಳತೆಯನ್ನು ಹೊಂದಿದೆ. ಗರ್ಭಗೃಹದ ಮಧ್ಯದಲ್ಲಿ ಎರಡುವರೆ ಅಡಿ ಎತ್ತರದ ನಾಗಕನ್ನಿಕೆಯ ಉಬ್ಬುಶಿಲ್ಪವಿದೆ. ಈ ನಾಗಕನ್ಯೆಯ ದೇಹ, ತಲೆಯಿಂದ ಸೊಂಟದವರೆಗೆ ಕನ್ಯೆಯದಾಗಿದ್ದು, ಕೆಳಭಾಗ ಹಾವಿನಾಕಾರದಲ್ಲಿದೆ. ನಾಗಕನ್ಯೆಯ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಗುರಾಣಿ ಇದೆ. ಈ ನಾಗಕನ್ನೆಯ ತಲೆಯ ಮೇಲೆ ಹಾವಿನ ಏಳು ಹೆಡೆಗಳಿವೆ. ಬಲಭಾಗದಲ್ಲಿ ಎರಡು ನಾಗಶಿಲ್ಪ, ಎಡಭಾಗದಲ್ಲಿ ಮೂರು ನಾಗ ಶಿಲ್ಪಗಳಿವೆ. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಇದೊಂದು ವಿಶೇಷ ಶಿಲ್ಪವಾಗಿದೆ. ಈ ನಾಗಕನ್ನಿಕಾ ಶಿಲ್ಪದ ಕೆಳಗೆ ಶಿವಲಿಂಗ ಪೀಠದಂತೆ ನಿರ್ಮಿಸಲಾಗಿದೆ. ಈ ಪೀಠವನ್ನು ಇಲ್ಲಿಯ ಭಕ್ತರು ನಾಗಕನ್ನಿಕಾ ಶಿಲ್ಪವನ್ನು ತೊಳೆದಾಗ ನೀರು ಹೋಗಲಿಕ್ಕೆ ಹಾಗೆ ಮಾಡಿರುವದಾಗಿ ಸ್ಥಳೀಯರ ಹೇಳಿಕೆಯಾಗಿದೆ. ಗರ್ಭಗೃಹದ ಭುವನೇಶ್ವರಿಯಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡದಲ್ಲಿ ಯಾವುದೇ ಕೆತ್ತನೆ ಇಲ್ಲದೆ, ಪಟ್ಟಿಕೆ ಮತ್ತು ಅರ್ಧಗಂಬಗಳಿವೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅಂತರಾಳವು ಐದುವರೆ ಅಡಿ ಅಗಲ, ಐದುವರೆ ಅಡಿ ಉದ್ದವಾದ ಅಳತೆಯನ್ನು ಹೊಂದಿದೆ. ಅಂತರಾಳದ ಗೋಡೆಗಳು ಸಮತಟ್ಟಾಗಿವೆ.

ಅಂತರಾಳದ ಮುಂಭಾಗವೇ ಸಭಾಮಂಟಪ. ಈ ಮಂಟಪವು ಹದಿನಾರು ಅಡಿ ಅಗಲ, ಹದಿನೈದು ಅಡಿ ಉದ್ದವಾಗಿದೆ. ಈ ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ಕೆಳಗೆ ಚೌಕಾಕಾರ, ಹದಿನಾರು ಅಷ್ಟಮುಖ ಮತ್ತು ಹದಿನಾರು ಮುಖಗಳಿವೆ. ಮೇಲೆ ಚೌಕಾಕಾರವಾಗಿದ್ದು ಇದರ ಮೇಲೆ ವೃತ್ತಾಕಾರದ ಫಲಕ ಮತ್ತು ಬೋಧಿಗೆಗಳಿವೆ. ಮಂಟಪದ ಗೋಡೆಯಲ್ಲಿ ಆರು ಅರ್ಧಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳ ಮಧ್ಯದ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲದ ಕೆತ್ತನೆ ಇದೆ. ಮಂಟಪದ ಬಲಭಾಗದಲ್ಲಿ ಒಂದು ದೇವಕೋಷ್ಠವಿದೆ. ಇದರಲ್ಲಿ ಭಗ್ನ ಶಿವಲಿಂಗವಿದೆ. ಈ ದೇವಾಲಯದ ಮೇಲ್ಛಾವಣಿಯನ್ನು

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

ಕಲ್ಲುಗಳಿಂದ ಮುಚ್ಚಲಾಗಿದ್ದು ಇದು ನೆಲಕ್ಕೆ ಸಮಾನಾಂತರವಾಗಿದೆ. ಗರ್ಭಗೃಹದ ಮೇಲೆ ಶಿಖರ ಭಾಗ ಸಂಪೂರ್ಣ ಹಾಳಾಗಿದ್ದು ಅವಶೇಷಗಳನ್ನು ಗುರುತಿಸಬಹುದಾಗಿದೆ.

ಊರು	–	**ಗೋತಗಿ**
ಸ್ಮಾರಕ	–	ರಾಮಲಿಂಗೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಪಶ್ಚಿಮಕ್ಕೆ (ಗೌಡರ ಓಣಿ)
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.ಸು.೧೧–೧೨ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಹತ್ತುವರೆ ಅಡಿ ಉದ್ದ, ಎಂಟುವರೆ ಅಡಿ ಅಗಲವಾಗಿದೆ. ಮಧ್ಯದಲ್ಲಿ ಸುಮಾರು ಒಂದು ಅಡಿ ಎತ್ತರದ ಪೀಠದ ಮೇಲೆ ಶಿವಲಿಂಗವಿದೆ. ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವಿದೆ. ಗರ್ಭಗೃಹದ ಬಾಗಿಲಬಾಡವು ಸರಳವಾದ ಪಟ್ಟಿಕೆಯನ್ನು ಹೊಂದಿದೆ. ಲಲಾಟಭಾಗದಲ್ಲಿ ಯಾವುದೇ ಕೆತ್ತನೆ ಇಲ್ಲ. ಅಂತರಾಳವು ಎಂಟು ಅಡಿ ಉದ್ದ, ಆರು ಅಡಿ ಅಗಲವಾಗಿದೆ. ಅಂತರಾಳದಲ್ಲಿರುವ ಗೋಡೆಗಳು ಸಮತಟ್ಟಾಗಿವೆ. ಇದರ ಭುವನೇಶ್ವರಿಯಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಅಂತರಾಳಕ್ಕೆ ಪ್ರವೇಶದ್ವಾರವಿದೆ. ಈ ಪ್ರದೇಶದ್ವಾರದ ಬಾಗಿಲವಾಡವು ಪದ್ಮಗಳ ಸಾಲು, ಪಟ್ಟಿಕೆ ಮತ್ತು ಅರ್ಧಗಂಬಗಳಿಂದ ಕೂಡಿದೆ. ಲಲಾಟಭಾಗದಲ್ಲಿ ಅರಳಿದ ಪದ್ಮವಿದೆ. ಕೈಯಲ್ಲಿ ಚಾಮರ ಹಿಡಿದಿರುವ ಇಬ್ಬರು ಶೈವ ದ್ವಾರಪಾಲಕರಿದ್ದಾರೆ.

ಸಭಾಮಂಟಪವು ವಿಶಾಲವಾಗಿದ್ದು ಇಪ್ಪತ್ತೇಳುವರೆ ಅಡಿ ಉದ್ದ, ಇಪ್ಪತ್ತೈದುವರೆ ಅಡಿ ಅಗಲವಾಗಿದೆ. ಈ ಮಂಟಪದ ಪ್ರವೇಶದ್ವಾರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ಕೆಳಗೆ ಚೌಕಾಕಾರ, ವೃತ್ತಾಕಾರ, ಮಧ್ಯದಲ್ಲಿ ಅಷ್ಟಮುಖದ ಮೇಲೆ ಚೌಕಾಕಾರ, ಬಳೆಗಳ ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ಈ ಮಧ್ಯದ ಭುವನೇಶ್ವರಿ ಸರಳವಾಗಿದೆ. ಈ ಮಂಟಪದಲ್ಲಿ ಎರಡು ದೇವಕೋಷ್ಠಗಳಿವೆ. ಬಲಭಾಗದ ದೇವಕೋಷ್ಠ ಖಾಲಿ ಇದೆ. ಎಡಭಾಗದ ದೇವಕೋಷ್ಠದಲ್ಲಿ ಇತ್ತೀಚೆಗೆ ನಾಗಶಿಲ್ಪವನ್ನು ಇಡಲಾಗಿದೆ. ಈ ಮಂಟಪದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಈ ದೇವಾಲಯವು ಸುಮಾರು ಎರಡೂವರೆ ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಅಧಿಷ್ಠಾನವು ಉಪಾನ, ಜಗತಿ, ಪದ್ಮ, ತ್ರಿಪಟ್ಟ, ಕುಮುದ ಹಾಗೂ ಪದ್ಮ ಭಾಗಗಳಿಂದ ಕೂಡಿದೆ. ಹೊರಗೋಡೆ ಯಾವುದೇ ಕೆತ್ತನೆ ಇಲ್ಲದೆ ಸರಳವಾಗಿದೆ. ಗರ್ಭಗೃಹದ ಹೊರಗೋಡೆಯು ಸಮತಟ್ಟವಾಗಿದೆ. ಇದರ ಮೇಲೆ ಆಧುನಿಕ ಶಿಖರವಿದೆ. ಈ ದೇವಾಲಯದಲ್ಲಿ ಪ್ರತಿದಿನವು ಪೂಜಾಕಾರ್ಯ ನಡೆಯುತ್ತವೆ.

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

[illegible]

[illegible]

[illegible]

ಊರು	–	**ಮಾಟೂರು**
ಸ್ಮಾರಕ	–	ಈಶ್ವರ ದೇವಾಲಯ
ಸ್ಥಳ	–	ಗ್ರಾಮದ ದಕ್ಷಿಣಕ್ಕೆ
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.ಸು.೧೧–೧೨ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮಾತ್ರ ಇದೆ. ಗರ್ಭಗೃಹದ ಮಧ್ಯದಲ್ಲಿ ಸುಮಾರು ಅರ್ಧ ಅಡಿ ಎತ್ತರದ ಪಾಣಿವಟ್ಟಲು ಇದ್ದು, ಇದರ ಮಧ್ಯದಲ್ಲಿ ಒಂದೂವರೆ ಅಡಿ ಎತ್ತರದ ಕಪ್ಪು ಶಿಲೆಯಲ್ಲಿ ನಿರ್ಮಿಸಿದ ಶಿವಲಿಂಗವಿದೆ. ಶಿವಲಿಂಗಕ್ಕೆ ಇಂದಿಗೂ ಪ್ರತಿನಿತ್ಯ ಪೂಜೆ ನಡೆಯುತ್ತಿದೆ. ಗರ್ಭಗೃಹದ ಪ್ರವೇಶದ್ವಾರ ಸಂಪೂರ್ಣ ಹಾಳಾಗಿದೆ. ಹಾಗೇ ಈ ದೇಗುಲದ ಪೂರ್ವ ಮತ್ತು ಉತ್ತರಭಾಗದ ಕಟ್ಟಡವು ಸಹ ಹಾಳಾಗಿದೆ. ಇತ್ತೀಚೆಗೆ ಸ್ಥಳೀಯರು ಇದನ್ನು ಮತ್ತೆ ಕಟ್ಟುತ್ತಿದ್ದಾರೆ. ಈ ದೇವಾಲಯದ ದಕ್ಷಿಣ ಮತ್ತು ಪಶ್ಚಿಮ ಭಾಗದ ಕಟ್ಟಡ ತುಂಬಾ ಸುಂದರವಾಗಿದೆ. ಸುಮಾರು ಎರಡು ಅಡಿ ಎತ್ತರದ ಅಧಿಷ್ಠಾನದ ಮೇಲೆ ಈ ದೇವಾಲಯವನ್ನು ಕಟ್ಟಲಾಗಿದೆ. ಅಧಿಷ್ಠಾನದ ಭಾಗದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟ, ಕುಮುದ ಹಾಗೂ ಕಪೋತಗಳಿವೆ.

ದೇವಾಲಯದ ಭಿತ್ತಿ ಭಾಗವು ಹಿಂದು ಮುಂದಾದ ಕಂಬಗಳಿಂದ ಜೋಡಿಸಿ ನಿರ್ಮಿಸಿದಂತಿದೆ. ಸಲಿಲಾಂತರ ಕಲ್ಲುಗಳನ್ನು ಕಂಬಗಳಂತೆ ಮತ್ತು ಅವುಗಳಲ್ಲಿ ಅರ್ಧಗಂಭ ಗಳನ್ನು ಕೆತ್ತಿದ್ದಾರೆ. ಒಳಸರಿದ ಭಾಗದಲ್ಲಿ ಆಕರ್ಷಕವಾದ ಮಕರಸ್ತಂಭತೋರಣವಿದೆ. ದೇವಾಲಯದ ಮೇಲ್ಛಾವಣಿ ಸಂಪೂರ್ಣವಾಗಿ ಕುಸಿದಿದೆ.

ಊರು	–	**ಶ್ಯಾಡಲಗೇರಿ**
ಸ್ಮಾರಕ	–	ಹುಡೆವ್ವ ದೇವಾಲಯ (ಶಾಲೆಯ ಪಕ್ಕದಲ್ಲಿ)
ಸ್ಥಳ	–	ಪಶ್ಚಿಮಕ್ಕೆ
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.ಸು.೧೧–೧೨ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಮತ್ತು ಅಂತರಾಳವನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಗರ್ಭಗೃಹದ ದ್ವಾರಬಂಧವು ಸರಳವಾದ ಪಟ್ಟಿಕೆ ಮತ್ತು ಅರ್ಧಗಂಬಗಳಿದ ಕೂಡಿದೆ. ಲಲಾಟಭಾಗದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವಿದೆ. ಈ ಅಂತರಾಳದ ಮೇಲ್ಛಾವಣಿ ಸಂಪೂರ್ಣವಾಗಿ ಕುಸಿದಿದೆ. ಈ ಭಾಗದ ಗೋಡೆಗಳು ಸರಳವಾಗಿವೆ.

ಈ ದೇವಾಲಯವು ಸುಮಾರು ಮೂರು ಅಡಿ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಿದ್ದಾರೆ. ಈ ಅಧಿಷ್ಠಾನವನ್ನು ಸರಳವಾಗಿ ಕಟ್ಟೆಯ ಹಾಗೇ ಸಮತಟ್ಟವಾಗಿ ಕಟ್ಟಲಾಗಿದೆ. ಹೊರಗೋಡೆಯನ್ನು ಸಾಮಾನ್ಯವಾಗಿ ಒಂದೇ ಅಳತೆಯ ಕಲ್ಲುಗಳನ್ನು ಬಳಸಿ ಒಂದರ ಮೇಲೊಂದರಂತೆ ಇಟ್ಟು ನಿರ್ಮಿಸಿದ್ದಾರೆ. ಗರ್ಭಗೃಹದ ಮೇಲಿರುವ ಶಿಖರವು ಸಹ ಕಲ್ಲುಗಳನ್ನು ಜೋಡಿಸಿ ನಿರ್ಮಿಸಿದ್ದಾರೆ. ದೇವಾಲಯ ಜೀರ್ಣಾವಸ್ಥೆಯಲ್ಲಿದೆ. ಹೊರಗೋಡೆಗಳ ಮತ್ತು ಶಿಖರದ ಕಲ್ಲುಗಳು ಸಡಿಲಗೊಂಡಿವೆ. ಶಿಖರದ ಭಾಗದಲ್ಲಿ ಕಂಟಿಗಳು ಬೆಳೆದಿದ್ದು ಸರಿಯಾದ ಸಂರಕ್ಷಣೆ ಇಲ್ಲದಿರುವದು ಕಂಡುಬರುತ್ತದೆ.

ಊರು	–	**ಅಂಟೂರಠಾಣ**
ಸ್ಮಾರಕ	–	ಜಂಬೂನಾಥ ದೇವಾಲಯ
ಸ್ಥಳ	–	ಗ್ರಾಮದ ಪೂರ್ವಕ್ಕೆ
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.೧೨ನೆಯ ಶತಮಾನ

ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ತೆರೆದ ಸಭಾ ಮಂಟಪಗಳಿಂದ ಕೂಡಿದೆ. ಗರ್ಭಗೃಹವು ಎಂಟು ಅಡಿ ಉದ್ದ, ಎಂಟು ಅಡಿ ಅಗಲ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಕಪ್ಪು ಶಿಲೆಯಲ್ಲಿ ಕಡೆಯಲಾದ ಎರಡು ಅಡಿ ಎತ್ತರದ ಶಿವಲಿಂಗವಿದೆ. ಈ ಗರ್ಭಗೃಹದ ಭುವನೇಶ್ವರಿ ಸಮತಟ್ಟಾಗಿದೆ. ಗರ್ಭಗೃಹದ ಬಾಗಿಲವಾಡವು ವೃತ್ತಾಕಾರದ ಅರೆಗಂಬಗಳು, ಹೂಬಳ್ಳಿಯಿಂದ ಕೂಡಿದ ಸುಂದರವಾಗಿ ಕಾಣುವಂತೆ ಪಟ್ಟಿಕೆಗಳನ್ನು ನಿರ್ಮಿಸಲಾಗಿದೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಉಬ್ಬು ಕೆತ್ತನೆಯಿಂದ ಅಲಂಕೃತಗೊಂಡಿದೆ.

ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಈ ಅಂತರಾಳದ ಗೋಡೆಗಳ ಮೇಲೆ ಯಾವುದೇ ಶಿಲ್ಪಗಳು ಇಲ್ಲ. ಇದು ಏಳು ಅಡಿ ಉದ್ದ, ಏಳು ಅಡಿ ಅಗಲ ಅಳತೆಯನ್ನು ಹೊಂದಿದೆ. ಇಲ್ಲಿ ಅಂತರಾಳಕ್ಕೆ ಪ್ರವೇಶದ್ವಾರವನ್ನು ನಿರ್ಮಿಸಲಾಗಿದೆ. ಈ ದ್ವಾರದ ಸುತ್ತಲೂ ಪದ್ಮಗಳುಳ್ಳ ಜಾಲಂದರಗಳನ್ನು ನಿರ್ಮಿಸಿದ್ದಾರೆ. ಈ ಜಾಲಂದರಗಳನ್ನು ಗರ್ಭಗೃಹದವರೆಗೆ ಗಾಳಿ, ಬೆಳಕಿನ ಅನೂಕೂಲತೆಗಾಗಿ ನಿರ್ಮಿಸಿದ್ದಾರೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಉಬ್ಬು ಕೆತ್ತನೆ ಇದೆ.

ತೆರೆದ ಸಭಾಮಂಟಪವು ಹದಿನೆಂಟುವರೆ ಅಡಿ ಉದ್ದ, ಇಪ್ಪತ್ನಾಲ್ಕುವರೆ ಅಡಿ ಅಗಲವಾದ ವಿಸ್ತೀರ್ಣವನ್ನು ಹೊಂದಿದೆ. ಈ ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳ ಮಧ್ಯದಲ್ಲಿ ನಾಟ್ಯ ಮಂಟಪವಿದೆ. ಈ ನಾಲ್ಕು ಕಂಬಗಳು ಕೆಳಗಿನಿಂದ ಚಚ್ಚೌಕ, ಪೀಠ ಮೇಲೆ ವೃತ್ತಾಕಾರದ ಬಳೆಗಳು, ಘಂಟೆಯಾಕಾರ ಮೇಲೆ ವೃತ್ತಾಕಾರದ ಬಳೆಗಳ ಫಲಕ ಮತ್ತು ಬೋದಿಗೆಗಳನ್ನು ಒಳಗೊಂಡಿವೆ. ಈ ನಾಟ್ಯಮಂಟಪದ ಭುವನೇಶ್ವರಿಯಲ್ಲಿ ಪದ್ಮವಿದೆ. ಮಧ್ಯದ ನಾಲ್ಕು ಕಂಬಗಳಲ್ಲದೆ ಇನ್ನುಳಿದ ಕಂಬಗಳ ಮೇಲೆ ಕೆಲವು ರೇಖಾ ಚಿತ್ರಗಳನ್ನು ಕೊರೆಯಲಾಗಿದೆ.

ಆದರೆ ದೇವಾಲಯದ ಕಟ್ಟಡಕ್ಕೆ ಸಂಪೂರ್ಣವಾಗಿ ಸುಣ್ಣ ಹಚ್ಚಿರುವದರಿಂದ ಕೊರೆದ ಚಿತ್ರಗಳೆಲ್ಲವು ಮುಚ್ಚಿಕೊಂಡು ಸ್ಪಷ್ಟವಾಗಿ ಕಾಣುವುದಿಲ್ಲ. ಈ ತೆರೆದ ಸಭಾಮಂಟಪದಲ್ಲಿ ಒಟ್ಟು ಇಪ್ಪತ್ತೆರೆಡು ಕಂಬಗಳಿವೆ. ಇವುಗಳೆಲ್ಲ ಸಭಾಮಂಟಪದ ಸುತ್ತಲೂ ನಿರ್ಮಿಸಿರುವ ಕಕ್ಷಾಸನದ ಮೇಲಿನಿಂದ ಮೇಲ್ಛಾವಣಿಗೆ ಆಧಾರವಾಗಿರುವಂತೆ ನಿಲ್ಲಿಸಿದ್ದಾರೆ. ಎಲ್ಲಾ ಕಂಬಗಳು ಕೆಳಭಾಗದಲ್ಲಿ ಚೌಕಾಕಾರ ಮಧ್ಯದಲ್ಲಿ ಅಷ್ಟಮುಖ ಹಾಗೂ ಮೇಲೆ ಕುಂಭಾಕಾರದಲ್ಲಿದ್ದು ಬೋದಿಗೆಗಳನ್ನು ಒಳಗೊಂಡಿವೆ. ಈ ಮಂಟಪದ ಸುತ್ತಲೂ ನಿರ್ಮಿಸಿರುವ ಕಕ್ಷಾಸನವು ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಕುಳಿತುಕೊಳ್ಳಲು ಅನುಕೂಲವಾಗುತ್ತದೆ.

ಈ ದೇವಾಲಯವು ಭೂಮಟ್ಟದಿಂದ ಸ್ವಲ್ಪ ಕೆಳಗೆ ಇದೆ. ಕಾರಣ ದೇವಾಲಯದ ತೆರೆದ ಸಭಾಮಂಟಪದಲ್ಲಿ ಮಳೆನೀರು, ಗಾಳಿ, ಬಿಸಿಲಿನಿಂದ ರಕ್ಷಿಸುವ ಸಲುವಾಗಿ ಉದ್ದವಾದ ಇಳಿಜಾರು ಬಂಡೆಗಳಿಂದ ಮುಂಚಾಚು ನಿರ್ಮಿಸಲಾಗಿದೆ. ಗರ್ಭಗೃಹದ ಹೊರಗೋಡೆ ಕಂಬಗಳಿಂದ ನಿರ್ಮಿಸಿದಂತೆ ಕಾಣುತ್ತದೆ. ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ಈ ಗರ್ಭಗೃಹದ ಮೇಲೆ ಶಿಖರವಿದೆ. ಆದರೆ ಈಗ ಬಹುಭಾಗ ಹಾಳಾಗಿದೆ. ಈ ದೇವಾಲಯದ ಮಂಟಪದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ.

ಊರು	–	**ಚಂದ್ರಗಿರಿ**
ಸ್ಮಾರಕ	–	ಈಶ್ವರ ದೇವಾಲಯ
ಸ್ಥಳ	–	ಚಂದಾಲಿಂಗೇಶ್ವರ ದೇವಾಲಯ ಪಕ್ಕ
ಪಂಥ	–	ಶೈವ
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೨ನೆಯ ಶತಮಾನ

ಚಂದಾಲಿಂಗೇಶ್ವರ ದೇವಾಲಯದ ಬಲಬದಿಗೆ ಈ ದೇವಾಲಯವಿದೆ. ಇದು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಆರು ಅಡಿ ಉದ್ದ, ಆರು ಅಡಿ ಅಗಲ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಶಿವಲಿಂಗವಿದೆ. ಮೇಲೆ ಭುವನೇಶ್ವರಿಯಲ್ಲಿ ಅರಳಿದ ಕಮಲವಿದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಸರಳವಾದ ಪಟ್ಟಿಕೆ ಮತ್ತು ಸ್ತಂಭಗಳಿಂದ ಕೂಡಿದೆ. ಮೇಲೆ ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮೇಲ್ಭಾಗದಲ್ಲಿ ಶಿಖರ ಪಟ್ಟಿಕೆ ಇದೆ. ಸರಳವಾದ ಅಂತರಾಳವಿದ್ದು ಇದರ ಪ್ರವೇಶದ್ವಾರದ ದ್ವಾರಬಂಧದಲ್ಲಿ ಸರಳವಾದ ಪಟ್ಟಿಕೆ ಮತ್ತು ಎರಡೂ ಬದಿಗೆ ಅರ್ಧಗಂಬಗಳಿವೆ.

ವಿಶಾಲವಾದ ತೆರೆದ ಸಭಾಮಂಟಪವು ಹದಿನೈದು ಅಡಿ ಉದ್ದ ಹದಿನೈದು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಇಲ್ಲಿ ಹದಿನಾರು ಕಂಬಗಳಿವೆ. ಇವುಗಳು ಕೆಳಗೆ ಚೌಕಾಕಾರ, ಮಧ್ಯೆ ಎಂಟು, ಹದಿನಾರು, ಎಂಟು ಮುಖಗಳ ಪಟ್ಟಿಕೆಗಳು ಮೇಲೆ ಫಲಕ ಬೋದಿಗೆಗಳನ್ನು ಹೊಂದಿವೆ. ಈ ಸಭಾಮಂಟಪವು ಒಂಬತ್ತು ಅಂಕಣಗಳಿಂದ ಕೂಡಿದ್ದು, ಮಧ್ಯ

[illegible]

[illegible]	[illegible]

[illegible]

ಅಂಕಣದ ಭುವನೇಶ್ವರಿಯಲ್ಲಿ ಅರಳಿದ ಕಮಲವಿದೆ. ಈ ತೆರೆದ ಸಭಾಮಂಟಪದ ಸುತ್ತಲೂ ಕುಳಿತುಕೊಳ್ಳಲು ಕಕ್ಷಾಸನವಿದೆ. ಈ ಸಭಾಮಂಟಪದ ಮಧ್ಯದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿ ವಿಗ್ರಹ ಇದೆ. ಮಂಟಪದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ.

ಈ ದೇವಾಲಯದ ಅಧಿಷ್ಠಾನ ಭಾಗವು ನೆಲದಲ್ಲಿ ಮುಚ್ಚಿಕೊಂಡಿದೆ. ಅಂತರಾಳ ಮತ್ತು ಗರ್ಭಗೃಹದ ಹೊರಗೋಡೆಯು ಸರಳವಾಗಿದ್ದು ಮಧ್ಯದಲ್ಲಿ ಅರ್ಧಗಂಬಗಳಿವೆ. ಗರ್ಭಗೃಹದ ಮೇಲೆ ಶಿಖರವಿದೆ. ಇದು ದ್ವಿತಲ ವಿಮಾನ ಮಾದರಿಯ ದ್ರಾವಿಡ ಶೈಲಿಯಲ್ಲಿದೆ. ಹಾಗೇ ಸ್ತೂಪ ಮತ್ತು ಕಳಸಗಳನ್ನು ಒಳಗೊಂಡಿದೆ. ಶಿಖರ ಭಾಗದ ಕಟ್ಟಡವನ್ನು ಕಲ್ಲುಗಳಿಂದಲೇ ನಿರ್ಮಿಸಲಾಗಿದೆ. ಸಂಪೂರ್ಣ ದೇವಾಲಯದ ಕಟ್ಟಡಕ್ಕೆ ಸುಣ್ಣ ಹಚ್ಚಲಾಗಿದೆ. ಇಂದಿಗೂ ಪೂಜಾಕಾರ್ಯಗಳು ಜರಗುತ್ತವೆ.

ಊರು	–	**ಪುರ**
ಸ್ಮಾರಕ	–	ಸೋಮೇಶ್ವರ ದೇವಾಲಯ
ಸ್ಥಳ	–	ಕಲ್ಯಾಣ ಚಾಳುಕ್ಯ
ಪಂಥ	–	ಶೈವ
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೨ನೆಯ ಶತಮಾನ

ಈ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ ತ್ರೈಲೋಕ್ಯವಿಜಯಭೂಷಣನಾದ ಸೋಮನಾಥ ದೇವರು ಓಹಿಲನಿಗೆ ಹಳ್ಳಿಗೆ ಹೋಗಿ ದೇಗುಲವ ಮಾಡುವುದು ಮತ್ತು ಸರಿಗೆಯ ಹಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ಹೇಳಿರುವ ಉಲ್ಲೇಖವಿದೆ. ವಿಜಯನಗರದ ಅರಸ ಸದಾಶಿವರಾಯನ ಕಾಲದ ಇನ್ನೊಂದು ಶಾಸನದಲ್ಲಿ ಈ ದೇವಾಲಯದ ಉಲ್ಲೇಖಬರುತ್ತದೆ. ಇದರಲ್ಲಿ ಅರಸನು ಕೃಷ್ಣಪ್ಪನಾಯಕನಿಗೆ ಅಮರ ಮಾಗಣಿಯಾಗಿ ನೀಡಿದ ತಾವರಗೆರೆ ಸೀಮೆಯ ಪುರ ಗ್ರಾಮದಲ್ಲಿಯ ಸೋಮೇಶ್ವರಲಿಂಗಕ್ಕೆ ಗದ್ದೆ, ಹುಣಸೆ, ಗಾಣ, ಅಂಗಡಿ ಮುಂತಾದವುಗಳನ್ನು ದಾನ ನೀಡಿದ ಉಲ್ಲೇಖಗಳಿವೆ. ಈಗ ಈ ದೇವಾಲಯವನ್ನು ಕೋಟಿಲಿಂಗೇಶ್ವರವೆಂದು ಕರೆಯುತ್ತಾರೆ.

ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಗರ್ಭಗೃಹ, ಸಭಾಮಂಟಪ, ಅರ್ಧಮಂಟಪ, ಮುಖಮಂಟಪ ಮತ್ತು ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಈ ದೇವಾಲಯದ ದ್ವಾರಗಳು ಚಿಕ್ಕದಾಗಿವೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲವಾಗಿದೆ. ಮಧ್ಯದಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಮೇಲಿನ ಭುವನೇಶ್ವರಿ ಸರಳವಾಗಿದೆ. ಈ ಗರ್ಭಗೃಹದ ಪ್ರವೇಶದ್ವಾರವು ಚಿಕ್ಕದಾಗಿದೆ. ದ್ವಾರಶಾಖೆಗಳು ಸರಳವಾಗಿವೆ.

ಸಭಾಮಂಟಪವು ವಿಶಾಲವಾಗಿದ್ದು ಒಂಬತ್ತು ಅಂಕಣಗಳಿಂದ ಕೂಡಿದೆ. ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಮೂಲೆಗಳಲ್ಲಿ ನಾಲ್ಕು ಅರೆಗಂಬಗಳಿವೆ. ಮಧ್ಯದ ನಾಲ್ಕು ಕಂಬಗಳ

ಮಧ್ಯದಲ್ಲಿ ಒಂದು ಬಾವಿ ಇದೆ. ಅದರಲ್ಲಿಯ ನೀರನ್ನು ಸೋಮೇಶ್ವರ ದೇವರಿಗೆ ನಿತ್ಯ ಪೂಜೆಗಾಗಿ ಬಳಸುತ್ತಾರೆ. ಇಲ್ಲಿರುವ ಕಂಬಗಳು ಚಚ್ಚೌಕ, ಅಷ್ಟಮುಖಿ, ಮತ್ತೆ ಚಚ್ಚೌಕ, ವೃತ್ತಾಕಾರದ ಮೇಲೆ ಬೋದಿಗೆಗಳನ್ನು ಹೊಂದಿವೆ. ನಾಲ್ಕು ಕಂಬಗಳ ಮಧ್ಯದ ಮೇಲ್ಛಾವಣಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವನ್ನು ಕೊರೆಯಲಾಗಿದೆ. ಇಲ್ಲಿರುವ ಬಾವಿಯ ಹಿಂಭಾಗದಲ್ಲಿ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಸಭಾಮಂಟಪ ಮತ್ತು ಮುಖಮಂಟಪದ ನಡುವೆ ಚಿಕ್ಕದಾದ ಅರ್ಧಮಂಟಪವಿದೆ. ಚಿಕ್ಕ ಪ್ರವೇಶ ದ್ವಾರವನ್ನು ಹೊಂದಿರುವ ಇದರ ಇಕ್ಕೆಲಗಳಲ್ಲಿ ಚಿಕ್ಕ ಮಂಟಪವಿದೆ. ಇದರ ಮೇಲೆ ಎತ್ತರವಾದ ದ್ರಾವಿಡ ಮಾದರಿಯ ಶಿಖರವಿದೆ. ಈ ದೇವಾಲಯದ ಬಲಭಾಗದ ಕೋಣೆಯಲ್ಲಿ ಮೂರು ಕಾಲುಗಳ ಮೇಲೆ ವಿಶಾಲವಾದ ಹಲಗೆಯನ್ನು ನಿರ್ಮಿಸಿದ ಅಪರೂಪದ ಶಿಲಾಮಂಟಪವಿದೆ. ದೇವಾಲಯದ ಗರ್ಭಗೃಹ ಮತ್ತು ಅರ್ಧಮಂಟಪಗಳ ಮೇಲೆ ಎತ್ತರದ ದ್ರಾವಿಡ ಮಾದರಿಯ ಶಿಖರಗಳಿವೆ. ಗರ್ಭಗೃಹದ ಮೇಲಿರುವ ಶಿಖರ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಂತೆ ತೋರುತ್ತದೆ. ಈ ಶಿಖರವು ಮೂರು ಹಂತಗಳದ್ದಾಗಿದ್ದು, ಮೊದಲನೆಯ ಹಂತದಲ್ಲಿ ಅರೆಗಂಭಗಳನ್ನು ಹೊತ್ತ ಶಾಲಾಕೂಟಗಳ ಅಲಂಕಾರವಿದೆ. ಎರಡನೆಯ ಹಂತದಲ್ಲಿ ಕಪೋತದ ಕೆಳಭಾಗದಲ್ಲಿ ಮುಂಚಾಚಿದ ಪಟ್ಟಿಕೆಗಳಿವೆ. ಮೂರನೆಯ ಹಂತದಲ್ಲಿ ಮುಂಚಾಚಿದ ವೃತ್ತಪಟ್ಟಿಕೆಗಳಿವೆ. ಅರ್ಧಮಂಟಪದ ಮೇಲಿನ ಶಿಖರ ಇತ್ತೀಚೆಗೆ ನಿರ್ಮಾಣಗೊಂಡಿವೆ.

ದೇವಾಲಯದ ಭಿತ್ತಿ ಭಾಗದಲ್ಲಿ ಪದ್ಮಗಳ ಕೆತ್ತನೆಗಳಿವೆ. ದೇವಾಲಯದ ಸುತ್ತಲೂ ಪ್ರದಕ್ಷಿಣಪಥವಿದ್ದು ಮುಂಭಾಗದಲ್ಲಿ ಸರಳವಾದ ಆವರಣ ಗೋಡೆಯನ್ನು ಕಟ್ಟಲಾಗಿದೆ. ಇದಕ್ಕೆ ಪ್ರವೇಶದ್ವಾರ ಪೂರ್ವಭಾಗದಲ್ಲಿದೆ. ಪ್ರವೇಶದ ಇಕ್ಕೆಲಗಳಲ್ಲಿ ಚೌಕಾಕಾರದ ಕಂಬಗಳನ್ನು ಹೊಂದಿದ ಜಗತಿ ಇದೆ. ಕೈಪಿಡಿ ಗೋಡೆಯಲ್ಲಿ ಇಟ್ಟಿಗೆ ಗಾರೆಯಿಂದ ನಿರ್ಮಿಸಿದ ನಾಲ್ಕು ಮೂಲೆಗಳಲ್ಲಿ ನಂದಿ ಶಿಲ್ಪಗಳು, ಮಧ್ಯ ಗೋಪುರ ಮತ್ತು ಅದರ ಸುತ್ತಲೂ ಪದ್ಮಗಳಿವೆ.

ಈ ದೇವಾಲಯದ ಆವರಣದಲ್ಲಿ ಗರ್ಭಗೃಹದ ಸುತ್ತಲೂ ಚಿಕ್ಕಚಿಕ್ಕ ಮಂಟಪಗಳನ್ನು ನಿರ್ಮಿಸಲಾಗಿದೆ. ಈ ಮಂಟಪಗಳಲ್ಲಿ ಸಹಸ್ರ ಲಿಂಗಗಳು ಮತ್ತು ಬಿಡಿ ಶಿಲ್ಪಗಳಿವೆ. ಇಂದಿಗೂ ಈ ಸೋಮೇಶ್ವರ ದೇವಾಲಯಲ್ಲಿ ನಿತ್ಯ ಪೂಜೆ ನಡೆಯುತ್ತದೆ. ಪ್ರತಿವರ್ಷ ಶ್ರಾವಣ ಮಾಸದ ಕೊನೆಯ ಸೋಮವಾರದಂದು ಜಾತ್ರೆ, ಉತ್ಸವ ಅದ್ದೂರಿಯಾಗಿ ನೆರವೇರುತ್ತದೆ.

ಊರು	–	**ಪುರ**
ಸ್ಮಾರಕ	–	ಈಶ್ವರ ದೇವಾಲಯ
ಸ್ಥಳ	–	ಕಲ್ಯಾಣ ಚಾಳುಕ್ಯ
ಪಂಥ	–	ಶೈವ
ಶೈಲಿ	–	ಕಲ್ಯಾಣ ಚಾಳುಕ್ಯ
ಕಾಲ	–	ಕ್ರಿ.ಶ.ಸು.೧೨ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಮತ್ತು ತೆರೆದ ಅಂತರಾಳವನ್ನು ಹೊಂದಿವೆ. ಮುಂಭಾಗದಲ್ಲಿರುವ ಸಭಾಮಂಟಪವ ಕಟ್ಟಡ ಭಾಗವು ಸಂಪೂರ್ಣ ಹಾಳಾಗಿದೆ. ಗರ್ಭಗೃಹವು ಆರು ಅಡಿ ಉದ್ದ, ಐದು ಅಡಿ ಅಗಲವಾದ ಅಳತೆಯನ್ನು ಹೊಂದಿದ್ದು ಮಧ್ಯದಲ್ಲಿ ಎರಡು ಅಡಿ ಎತ್ತರದ ಶಿವಲಿಂಗವಿದೆ. ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವನ್ನು ಕೊರೆಯಲಾಗಿದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಪಂಚಶಾಖೆಗಳಿಂದ ಕೂಡಿದೆ. ಇದರಲ್ಲಿ ಹೂಬಳ್ಳಿ, ವಜ್ರಾಕಾರ ಮತ್ತು ಅರ್ಧ ಗಂಬಗಳನ್ನು ಕೆತ್ತಲಾಗಿದೆ. ಕೆಳಭಾಗದಲ್ಲಿ ದ್ವಾರದ ಎರಡು ಬದಿಗೆ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಮೇಲೆ ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪ ಹಾಗೂ ಶಿಖರ ಪಟ್ಟಿಕೆಯ ಅಲಂಕಾರಗಳಿಂದ ಕೂಡಿದೆ. ದ್ವಾರಬಂಧದ ಮೇಲ್ಭಾಗದಲ್ಲಿ ಕದಂಬ ನಾಗರ ಶೈಲಿಯ ಐದು ಶಿಖರ ಪಟ್ಟಿಕೆಗಳು ಮತ್ತು ಇಳಿಬಿದ್ದ ಕಮಲಗಳಿವೆ.

ಸಭಾಮಂಟಪ ಸಂಪೂರ್ಣ ಹಾಳಾದ ಕಾರಣ ಅಂತರಾಳವು ತೆರೆದ ಅಂತರಾಳವಾಗಿದೆ. ಇದು ನಾಲ್ಕು ಅಡಿ ಉದ್ದ ಐದು ಅಡಿ ಅಗಲವಾಗಿದೆ. ಇದರ ಮೇಲ್ಚಾವಣಿಯು ಹಾಳಾಗಿದೆ. ಇಲ್ಲಿರುವ ಗೋಡೆಗಳು ಯಾವುದೇ ಕೆತ್ತನೆ ಇಲ್ಲದೇ ಸಮತಟ್ಟಾಗಿವೆ. ಇಲ್ಲಿ ಎರಡು ಮೂಲೆ ಗಂಬಗಳು, ನಂದಿ, ಗಣೇಶ, ಗಜಲಕ್ಷ್ಮಿ ಬಿಡಿ ಶಿಲ್ಪಗಳಿವೆ. ಈ ದೇವಾಲಯವು ನಾಲ್ಕು ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನ ಭಾಗವು ಸರಳವಾಗಿದೆ. ದೇವಾಲಯದ ಭಿತ್ತಿ ಭಾಗವು ಅತ್ಯಂತ ಸರಳವಾಗಿದೆ. ಶಿಖರಭಾಗ ಸಂಪೂರ್ಣ ಹಾಳಾಗಿದೆ.

ಊರು	–	**ಅಂಟೂರಶಾಣ**
ಸ್ಮಾರಕ	–	ಮೌನೇಶ್ವರ ದೇವಾಲಯ
ಸ್ಥಳ	–	ಗ್ರಾಮದ ವಾಯುವ್ಯಕ್ಕೆ
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.ಸು.೧೨–೧೩ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದೆ. ಇದರ ತಲವಿನ್ಯಾಸವನ್ನು ನೋಡಿದರೆ ಇದೊಂದು ಮೂರು ಗರ್ಭಗೃಹಗಳಿರುವ ತ್ರಿಕೂಟಾಚಾಲ ದೇವಾಲಯವಾಗಿತ್ತೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಈಗ ಮುಖ್ಯ ಗರ್ಭಗೃಹ ಮಾತ್ರ ಇದ್ದು, ಉಳಿದೆರಡು ಗರ್ಭಗೃಹಗಳ ಕಟ್ಟಡ ಸಂಪೂರ್ಣ ಹಾಳಾಗಿದೆ. ಅವುಗಳ ತಲವಿನ್ಯಾಸ ಮಾತ್ರ ಉಳಿದಿವೆ.

ಗರ್ಭಗೃಹವು ಆಯತಾಕಾರದಲ್ಲಿದ್ದು ಎಂಟು ಅಡಿ ಉದ್ದ, ಎಂಟು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಎರಡೂವರೆ ಅಡಿ ಎತ್ತರದ ಪುರಾತನ ಪೀಠವಿದೆ. ಪೀಠದ ಮೇಲಿದ್ದ ಶಿವಲಿಂಗ ಭಗ್ನಗೊಂಡ ನಂತರ ಕಪ್ಪು ಶಿಲೆಯಲ್ಲಿ ಕೆತ್ತಿದ ಮೌನೇಶ್ವರನ ಮೂರ್ತಿಯನ್ನು ಇಡಲಾಗಿದೆ. ಈ ಮೌನೇಶ್ವರನಿಗೆ ಎರಡು ಕೈಗಳಿವೆ. ಒಂದು ಕೈ ಅಭಯ ಹಸ್ತವಾಗಿದ್ದು

[illegible]

ಇನ್ನೊಂದು ಕೈಯಲ್ಲಿ ಕೊಡಲಿ ಇದೆ. ಈ ಗರ್ಭಗೃಹದ ಒಳಗೋಡೆಗಳ ಮೇಲೆ ಯಾವುದೇ ಕೆತ್ತನೆ ಇಲ್ಲ. ಮೇಲಿನ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಹೂವನ್ನು ಕೆತ್ತಲಾಗಿದೆ. ಗರ್ಭಗೃಹದ ಬಾಗಿಲವಾಡವು ಹೂಬಳ್ಳಿಗಳನ್ನೊಳಗೊಂಡ ಪದ್ಮ ಪಟ್ಟಿಕೆಗಳು ಮತ್ತು ಅರೆಗಂಬಗಳಿಂದ ಕೂಡಿದೆ. ದ್ವಾರದ ಎರಡು ಬದಿಯಲ್ಲಿ ಚಾಮರ ಹಿಡಿದಿರುವ ದ್ವಾರಪಾಲಕರಿದ್ದಾರೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅಂತರಾಳವು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಈ ಭಾಗದ ಗೋಡೆಗಳ ಮೇಲೆ ಯಾವುದೇ ಅಲಂಕರಣೆ ಇಲ್ಲ. ಮೂಲ ರೂಪದಲ್ಲಿಯೇ ಇದೆ. ಇದರ ಭುವನೇಶ್ವರಿಯಲ್ಲಿ ಅರಳಿದ ಕಮಲವಿದೆ.

ದೇವಾಲಯದ ಅಂತರಾಳದ ಮುಂದಿನ ಭಾಗವೇ ಸಭಾಮಂಟಪ. ಇದು ಇಪ್ಪತ್ನಾಲ್ಕು ಅಡಿ ಉದ್ದ, ಇಪ್ಪತ್ತೊಂಬತ್ತು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಇದು ಹದಿನಾಲ್ಕು ಕಂಬಗಳಿಂದ ವಿಸ್ತಾರಗೊಂಡಿದೆ. ಮಧ್ಯದಲ್ಲಿ ನಾಲ್ಕು ಕಂಬಗಳನ್ನೊಳಗೊಂಡ ನಾಟ್ಯಮಂಟಪವು ಚಚ್ಚೌಕ ಮಾದರಿಯಲ್ಲಿದೆ. ಈ ನಾಲ್ಕು ಕಂಬಗಳು ಚಚ್ಚೌಕ, ಅಷ್ಟಮುಖ ಹಾಗೂ ಹದಿನಾರು ಮತ್ತೇ ಅಷ್ಟಮುಖಗಳ ಚಿಕ್ಕ-ಚಿಕ್ಕ ಪಟ್ಟಿಕೆಗಳಿಂದ ಅಲಂಕೃತಗೊಂಡಿವೆ. ಮೇಲೆ ವೃತ್ತಾಕಾರದ ಫಲಕ ಮತ್ತು ಬೋದಿಗೆಗಳಿವೆ. ಇನ್ನುಳಿದ ಕಂಬಗಳು ಚಚ್ಚೌಕ ಅಷ್ಠಮುಖ ಮತ್ತು ಮೇಲೆ ಬೋದಿಗೆಗಳನ್ನು ಹೊಂದಿವೆ. ಈ ಸಭಾಮಂಟಪದ ಸುತ್ತಲೂ ಕಕ್ಷಾಸನದ ವ್ಯವಸ್ಥೆ ಇದೆ. ದೇವಾಲಯದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಲು ಅನುಕೂಲ ವಾಗುವಂತೆ ನಿರ್ಮಿಸಿದ್ದಾರೆ. ಈ ಸಭಾಮಂಟಪವು ಒಂಬತ್ತು ಅಂಕಣಗಳನ್ನು ಹೊಂದಿದೆ. ಮಧ್ಯದ ನಾಟ್ಯ ಮಂಟಪದ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವಿದೆ.

ಈ ದೇವಾಲಯವು ಎರಡೂವರೆ ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲ್ಪಟ್ಟಿದೆ. ಈ ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟ, ಕಮುದ ಹಾಗೂ ಪದ್ಮ ಭಾಗಗಳಿಂದ ಕೂಡಿದೆ. ಹೊರಗೋಡೆಯು ಹಿಂದು-ಮುಂದಾದ ಅರೆಕಂಬಗಳಿಂದ ನಿರ್ಮಿಸಿದಂತಿದೆ. ಗರ್ಭಗೃಹದ ಮೇಲಿರುವ ಶಿಖರವು ಮೂರು ತಲಗಳನ್ನು ಹೊಂದಿದೆ. ಶಿಖರಗಳಲ್ಲಿ ಅರೆಗಂಬಗಳು, ಕೀರ್ತಿಮುಖ ಮತ್ತು ಪದ್ಮಾಕೃತಿಯ ಶಿಖರ, ಚೈತ್ಯಾಕಾರದ ಅಲಂಕರಣೆಗಳಿಂದ ಕೂಡಿದೆ. ಶಿಖರದ ಮೇಲ್ಭಾಗ ಇಲ್ಲ. ಈ ದೇವಾಲಯದ ಮೇಲ್ಛಾವಣಿಯು ಕಲ್ಲಿನಿಂದ ಮುಚ್ಚಲ್ಪಟ್ಟಿದೆ.

ಈ ದೇವಾಲಯದ ಗೋಡೆಗೆಭಕ್ತರು ಸುಣ್ಣವನ್ನು ಹಚ್ಚಿದ್ದಾರೆ. ಪ್ರತಿದಿನ ಮೌನೇಶ್ವರನಿಗೆ ಪೂಜೆ ನಡೆಯುತ್ತದೆ. ಗೌರಿಹುಣ್ಣಿಮೆಗೆ ಜಾತ್ರಾ ಉತ್ಸವವು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಪಲ್ಲಕ್ಕಿ ಉತ್ಸವವು ವಿಜೃಂಭಣೆಯಿಂದ ನಡೆಯುತ್ತದೆ. ಎರಡು ದಿನಗಳವರೆಗೆ ಈ ಜಾತ್ರೆ ನಡೆಯುತ್ತದೆ. ಜಾತ್ರೆಯ ಮೊದಲ ರಾತ್ರಿಯಿಡಿ ಭಕ್ತರು ಭಜನೆ ಮಾಡುತ್ತಾರೆ. ಮರುದಿನ 'ಪುರವಂತರ' ಆಟವಿರುತ್ತದೆ.

ಊರು	–	**ಆಚನೂರು**
ಸ್ಮಾರಕ	–	ಮಲ್ಲೇಶ್ವರ ದೇವಾಲಯ

[illegible]

ಸ್ಥಳ – ಗ್ರಾಮದ ನೈರುತ್ಯ ದಿಕ್ಕಿನಲ್ಲಿ
ಶೈಲಿ – ಕಲ್ಯಾಣ ಚಾಲುಕ್ಯ
ಪಂಥ – ಶೈವ
ಕಾಲ – ಕ್ರಿ.ಶ.ಸು.೧೨–೧೩ನೆಯ ಶತಮಾನ

ಆಚನೂರ ಗ್ರಾಮವು ನಿಲೊಗಲ್ ಗ್ರಾಮಕ್ಕೆ ಸ್ಥಳಾಂತರಗೊಂಡಿದೆ. ಈ ದೇವಾಲಯವು ನಿಲೊಗಲ್‌ದಿಂದ ಸುಮಾರು ಎರಡು ಕಿ.ಮೀ ದೂರದಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ತೆರೆದ ಮುಖಮಂಟಪವನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ತೆರೆದಮಂಟಪದ ಗೋಡೆಗೆ ಟೈಲ್ಸಗಳನ್ನು ಹಚ್ಚಲಾಗಿದೆ.

ಗರ್ಭಗೃಹವು ಆರು ಅಡಿ ಉದ್ದ, ಆರು ಅಡಿ ಅಗಲವಾಗಿದೆ. ಮಧ್ಯದಲ್ಲಿ ಸುಮಾರು ಎರಡು ಅಡಿ ಎತ್ತರದ ಕಪ್ಪು ಶಿಲೆಯ ಶಿವಲಿಂಗವಿದೆ. ಮೇಲ್ಭಾಗದ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವಿದೆ. ಗರ್ಭಗೃಹದ ಪ್ರವೇಶದ್ವಾರದ ಶಾಖೆಗಳಲ್ಲಿ ಎರಡು ಅರ್ಧಗಂಭಗಳಿರುವುದನ್ನು ಗುರುತಿಸಬಹುದಾಗಿದೆ. ಲಲಾಟಭಾಗದ ಮಧ್ಯದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪ ಸ್ಪಷ್ಟವಾಗಿ ಕಾಣುತ್ತದೆ. ಇದರ ಮೇಲ್ಬಾಗದ ಮುಂಚಾಚುವಿನಲ್ಲಿ ಕೆಳಮುಖವಾಗಿ ವಜ್ರಾಕಾರದ ಕೆತ್ತನೆಗಳನ್ನು ಕಾಣಬಹುದಾಗಿದೆ.

ಅಂತರಾಳದ ಪ್ರವೇಶದ್ವಾರ ಸಂಪೂರ್ಣವಾಗಿ ಟೈಲ್ಸಗಳಿಂದ ಮುಚ್ಚಲ್ಪಟ್ಟಿದೆ. ಲಲಾಟ ಭಾಗದಲ್ಲಿ ಮಾತ್ರ ಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಇಲ್ಲಿ ನಾಲ್ಕು ಮೂಲೆಗಂಬಗಳಿವೆ. ತೆರೆದ ಮಂಟಪದಲ್ಲಿ ಎರಡು ಕಂಬಗಳಿದ್ದು ಇವುಗಳಿಗೆ ಆಧರವಾಗಿ ಎರಡು ಶೈವದ್ವಾರಪಾಲಕರ ಮೂರ್ತಿಗಳನ್ನು ನಿಲ್ಲಿಸಲಾಗಿದೆ. ಈ ಕಂಬಗಳು ಕೆಳಗೆ ಚೌಕಾಕಾರ, ಅಷ್ಟಕೋನ ಮತ್ತೆ ಚೌಕಾಕಾರ, ಮೇಲೆ ವೃತ್ತಾಕಾರ ಅದರ ಮೇಲೆ ಮೇಲ್ಛಾವಣಿಗೆ ಆಧಾರವಾಗಿ ಬೋದಿಗೆಗಳನ್ನು ಹಾಕಲಾಗಿದೆ. ದೇವಾಲಯದ ಗರ್ಭಗೃಹದ ಮೇಲೆ ಶಿಖರವಿದೆ. ಆದರೆ ಬಹುಭಾಗ ಹಾಳಾಗಿದೆ. ಭಿತ್ತಿ ಮತ್ತು ಅಧಿಷ್ಠಾನ ಭಾಗಗಳೆಲ್ಲವು ಸರಳವಾಗಿವೆ. ಈ ದೇವಾಲಯದ ಪಶ್ಚಿಮ ಮತ್ತು ಉತ್ತರಭಾಗದಲ್ಲಿ ಚಿಕ್ಕದಾದ ನಾಲ್ಕು ದೇವಾಲಯಗಳಿದ್ದು ಅವುಗಳು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿವೆ.

ಊರು – ಕಾಟಾಪುರ
ಸ್ಮಾರಕ – ಮಹಾಬಲೇಶ್ವರ ದೇವಾಲಯ
ಸ್ಥಳ – ಗ್ರಾಮದ ಪಶ್ಚಿಮಕ್ಕೆ
ಶೈಲಿ – ಕಲ್ಯಾಣ ಚಾಲುಕ್ಯ
ಪಂಥ – ಶೈವ
ಕಾಲ – ಕ್ರಿ.ಶ.ಸು.೧೨–೧೩ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ಮತ್ತು ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಸುಮಾರು ಒಂದೂವರೆ ಅಡಿ ಎತ್ತರವಾದ ಶಿವಲಿಂಗವಿದೆ. ಇಂದಿಗೂ ಪ್ರತಿದಿನ ಪೂಜಾ ಕಾರ್ಯಗಳು ನಡೆಯುತ್ತವೆ. ಗರ್ಭಗೃಹದ ಬಾಗಿಲವಾಡದಲ್ಲಿ ಹೂಬಳ್ಳಿಯ ಸಾಲು, ವೃತ್ತಾಕಾರದ ಅರೆಗಂಬಗಳು ಮತ್ತು ಲಲಾಟಭಾಗದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಇದರ ಮೇಲೆ ಮುಂಚಾಚಿದ ಪಟ್ಟಿಕೆಗಳಿವೆ.

ಗರ್ಭಗೃಹದ ಮುಂಭಾಗವೇ ಅಂತರಾಳ. ಈ ಅಂತರಾಳವು ನಾಲ್ಕುವರೆ ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಅಂತರಾಳದ ಗೋಡೆಗಳು ಸರಳವಾಗಿವೆ. ಇದರ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಪಟ್ಟಿಕೆ ಮತ್ತು ಪದ್ಮದ ಅಲಂಕರಣೆಯುಳ್ಳ ಜಾಲಂದರಗಳಿವೆ. ಈ ದ್ವಾರದ ಲಲಾಟಭಾಗದಲ್ಲಿ ಪದ್ಮಗಳಿವೆ. ಭುವನೇಶ್ವರಿ ಸರಳವಾಗಿದೆ.

ಅಂತರಾಳದ ಮುಂದಿನ ಭಾಗವೇ ತೆರೆದ ಸಭಾಮಂಟಪ. ಇದು ಹನ್ನೊಂದುವರೆ ಅಡಿ ಉದ್ದ, ಹತ್ತುವರೆ ಅಡಿ ಅಗಲವಾಗಿದೆ. ಈ ಮಂಟಪದಲ್ಲಿ ಒಟ್ಟು ಹನ್ನೆರೆಡು ಕಂಬಗಳಿವೆ. ಇವುಗಳಲ್ಲಿ ನಾಲ್ಕು ಮಂಟಪದ ಮಧ್ಯದಲ್ಲಿದ್ದು ಇನ್ನುಳಿದ ಎಂಟು ಕಂಬಗಳು ಕಕ್ಷಾಸನಕ್ಕೆ ಹೊಂದಿಕೊಂಡಿವೆ. ಮಧ್ಯದ ನಾಲ್ಕು ಕಂಬಗಳು ಅಲಂಕಾರಯುತವಾಗಿ ಕೆತ್ತಲಾಗಿದೆ. ಈ ಕಂಬಗಳು ಕೆಳಭಾಗದಲ್ಲಿ ಚೌಕಾಕಾರ ಮೇಲೆ ವೃತ್ತಾಕಾರದ ಬಳೆಗಳು, ಘಂಟೆಯಾಕಾರ ಮೇಲೆ ಕುಂಭಾಕಾರ ಮೇಲೆ ವೃತ್ತಾಕಾರದ ಫಲಕ, ಚೌಕಾಕಾರದ ಬೋಧಿಗೆಗಳಿಂದ ಕೂಡಿದೆ. ಈ ಭುವನೇಶ್ವರಿಯಲ್ಲಿ ಸುತ್ತಲೂ ಇಳಿಬಿದ್ದ ಪದ್ಮಗಳು, ಮೇಲೆ ತಟ್ಟೆಯಾಕಾರದಲ್ಲಿದ್ದು ಅದಕ್ಕೆ ಕೊಂಡಿಗಳಿವೆ. ಈ ತೆರೆದ ಸಭಾಮಂಟಪದ ಸುತ್ತಲೂ ಭಕ್ತಾಧಿಗಳಿಗೆ ಕುಳಿತುಕೊಳ್ಳಲು ಕಕ್ಷಾಸನವನ್ನು ನಿರ್ಮಿಸಲಾಗಿದೆ. ಈ ಕಕ್ಷಾಸನಕ್ಕೆ ಹೊಂದಿಕೊಂಡಿರುವ ಎಂಟು ಕಂಬಗಳು ಒಂದೇ ಮಾದರಿಯಲ್ಲಿವೆ. ಇವುಗಳನ್ನು ಅಷ್ಟಮುಖಗಳಲ್ಲಿ ಕೊರೆದಿದ್ದು ಮೇಲೆ ಚೌಕಾಕಾರದ ಬೋದಿಗೆಗಳನ್ನು ಹಾಕಲಾಗಿದೆ.

ತೆರೆದ ಸಭಾಮಂಟಪ ಪ್ರವೇಶಿಸಲು ಮೆಟ್ಟಿಲುಗಳ ಸೋಪಾನವಿದೆ. ಮೆಟ್ಟಿಲುಗಳ ಪಕ್ಕದಲ್ಲಿ ಸುರಳಿಯಾಕಾರದ ಸೋಪಾನ ಮತ್ತು ಅದೇ ಕಲ್ಲುಗಳ ಮೇಲೆ ಆನೆಗಳನ್ನು ಕೆತ್ತಲಾಗಿದೆ. ಈ ಸಭಾಮಂಟಪದ ಮೇಲ್ಛಾವಣೆಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಈ ದೇವಾಲಯ ಸಣ್ಣದಾಗಿದ್ದರೂ ಅಷ್ಟೇ ಸುಂದರವಾಗಿದೆ. ದೇವಾಲಯದ ಹೊರಗೋಡೆಯ ಅಧಿಷ್ಠಾನ ಭಾಗವು ಉಪಾನ, ಜಗತಿ, ಪದ್ಮ, ತ್ರಿಪಟ್ಟ, ಕುಮುದ ಹಾಗೂ ಪದ್ಮಗಳಿಂದ ಕೂಡಿದೆ. ಗರ್ಭಗೃಹದ ಹೊರಗೋಡೆಯು ಸರಳವಾಗಿದ್ದು ಅಲ್ಲಲ್ಲಿ ಕೋತಿ, ಹೂ, ಮೀನು, ಬಾತುಕೋಳಿ, ಆನೆಗಳ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಕದಂಬನಾಗರ ಶೈಲಿಯ ಶಿಖರವಿದೆ. ಮೇಲ್ಭಾಗದಲ್ಲಿ ಅಮಲಕವಿದೆ. ಈ ಶಿಖರಕ್ಕೆ ಹೊಂದಿಕೊಂಡೆ ಅಂತರಾಳವು ಮುಂಚಾಚಿದೆ. ಅಂತರಾಳದ ಭಾಗದಲ್ಲಿ ಕೀರ್ತಿಮುಖವಿದೆ. ತೆರೆದ ಸಭಾಮಂಟಪದ ವಿಮಾನ ಭಾಗದಲ್ಲಿ ಮಳೆ ಬಿಸಿಲಿನಿಂದ ರಕ್ಷಣೆಗಾಗಿ ಮುಂಚಾಚಿದ ಪಟ್ಟಿಕೆಗಳನ್ನು ಹೊಂದಿಸಲಾಗಿದೆ. ಇಲ್ಲಿ ಪ್ರತಿದಿನ ಪೂಜೆ ನಡೆಯುತ್ತದೆ.

[illegible]

ಊರು – **ಕುಷ್ಟಗಿ**

ಸ್ಮಾರಕ – ರಾಮಲಿಂಗೇಶ್ವರ ದೇವಾಲಯ

ಸ್ಥಳ – ಗ್ರಾಮದ ಮಧ್ಯ

ಪಂಥ – ಶೈವ

ಶೈಲಿ – ಕಲ್ಯಾಣ ಚಾಲುಕ್ಯ

ಕಾಲ – ಕ್ರಿ.ಶ.ಸು.೧೨–೧೩ನೆಯ ಶತಮಾನ

ಕುಷ್ಟಗಿ ಗ್ರಾಮದ ಮಧ್ಯದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಕಪ್ಪು ಶಿಲೆಯ ಮೂರು ಅಡಿ ಎತ್ತರದ ಶಿವಲಿಂಗವಿದೆ. ನಿತ್ಯವು ಇಲ್ಲಿ ಪೂಜೆ ನಡೆಯುತ್ತಿದೆ. ಈ ಗರ್ಭಗೃಹದಲ್ಲಿ ಸಪ್ತಮಾತೃಕೆಯರ ಶಿಲ್ಪಪಟ್ಟಿಕೆ ಇದೆ. ಇದರ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವಿದೆ. ಗರ್ಭಗ್ರಹದ ಪ್ರವೇಶದ್ವಾರದ ಬಾಗಿಲವಾಡದಲ್ಲಿ ಹೂಬಳ್ಳಿಗಳ ಸಾಲು, ಅರ್ಧಗಂಬ ಮತ್ತು ಚಾಮರಧಾರಿಯರ ಕೆತ್ತನೆಗಳಿವೆ. ಈ ಚಾಮರಧಾರಿಗಳು ತಮ್ಮ ಕೈಗಳಲ್ಲಿ ನಾಗ, ತ್ರಿಶೂಲ ಮತ್ತು ಗದೆಗಳನ್ನು ಹಿಡಿದ್ದಾರೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪದ ಕೆತ್ತನೆ ಇದೆ. ಮೇಲೆ ಮುಂಚಾಚಿದ ಪಟ್ಟಿಕೆಗಳಿವೆ.

ಗರ್ಭಗೃಹದ ಮುಂದೆ ಅಂತರಾಳವಿದೆ. ಅಂತರಾಳಕ್ಕೆ ಹೊಂದಿಕೊಂಡು ಸಭಾ ಮಂಟಪವಿದೆ. ಈ ಸಭಾಮಂಟಪದಲ್ಲಿ ಆರು ಕಂಬಗಳಿವೆ. ಇವುಗಳು ಕೆಳಗೆ ಚಚ್ಚೌಕ, ಅಷ್ಟ ಹಾಗೂ ಮೇಲೆ ವೃತ್ತಾಕಾರವಾಗಿದ್ದು, ಬೋದಿಗೆಗಳನ್ನು ಹಾಕಲಾಗಿದೆ. ಈ ಕಂಬಗಳ ಮೇಲೆ ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳ ಕೆತ್ತನೆ ಇದೆ. ಈ ಸಭಾಮಂಟಪದ ಮಧ್ಯದಲ್ಲಿ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

ಈ ದೇವಾಲಯವು ಐದು ಅಡಿಗಳಷ್ಟು ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಈ ಅಧಿಷ್ಠಾನ ಭಾಗವು ತ್ರಿಪಟ್ಟ ಕುಮುದ ಮತ್ತು ಪದ್ಮಗಳನ್ನು ಒಳಗೊಂಡಿದೆ. ದೇವಾಲಯದ ಭಿತ್ತಿಭಾಗವು ಸರಳವಾಗಿದ್ದು ಯಾವುದೇ ಕೆತ್ತನೆಗಳಿಲ್ಲ. ಸಭಾಮಂಟಪದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಮಧ್ಯದ ಭುವನೇಶ್ವರಿಯಲ್ಲಿ ಅರಳಿದ ಕಮಲವಿದೆ. ಗರ್ಭಗೃಹದ ಮೇಲೆ ಶಿಖರವಿದೆ. ಇದು ಏಕತಲ ಶಿಖರವಾಗಿದ್ದು ದ್ರಾವಿಡ ಮಾದರಿಯಲ್ಲಿ ಅರೆಗಂಬಗಳು, ಗೂಡುಗಳು ಮತ್ತಿತರ ಗುಚ್ಚಶಿಲ್ಪಗಳಿವೆ. ಈ ದೇವಾಲಯದಲ್ಲಿರುವ ಶಿವಲಿಂಗಕ್ಕೆ ಪ್ರತಿನಿತ್ಯ ಪೂಜಾಕಾರ್ಯ ನಡೆಯುತ್ತದೆ. ಈ ದೇವಾಲಯದ ಒಂದು ವಿಶೇಷವೆಂದರೆ, ಯುಗಾದಿ ಪಾಡ್ಯಮಿಯ ದಿನದಂದು ಮಾತ್ರ ಸುರ್ಯೋದಯದ ಬಿಸಿಲು ರಾಮಲಿಂಗೇಶ್ವರ ಪಾದಕ್ಕೆರಗುತ್ತದೆ ಎಂದು ಹೇಳುತ್ತಾರೆ.

ಊರು – **ಚಳಗೇರಾ**

ಸ್ಮಾರಕ – ರಾಮಲಿಂಗೇಶ್ವರ ದೇವಾಲಯ

ಸ್ಥಳ – ಗ್ರಾಮದ ದಕ್ಷಿಣಕ್ಕೆ
ಪಂಥ – ಶೈವ
ಶೈಲಿ – ಕಲ್ಯಾಣ ಚಾಲುಕ್ಯ
ಕಾಲ – ಕ್ರಿ.ಶ.ಸು.೧೨-೧೩ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಮತ್ತು ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹ ಮಾತ್ರ ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದು, ಸಭಾಮಂಟಪದ ಭಾಗ ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲ ಅಳತೆಯನ್ನು ಹೊಂದಿದ್ದು. ಗೋಡೆಗೆ ಇತ್ತೀಚೆಗೆ ಟೈಲ್ಸಗಳನ್ನು ಹಚ್ಚಲಾಗಿದೆ. ಈ ಗರ್ಭಗೃಹದ ಮಧ್ಯದಲ್ಲಿ ಕಪ್ಪು ಶಿಲೆಯಲ್ಲಿ ಕೆತ್ತಿದ ಎರಡು ಅಡಿ ಎತ್ತರದ ಶಿವಲಿಂಗವಿದೆ. ಈ ಶಿವಲಿಂಗಕ್ಕೆ ಇಂದಿಗೂ ಪ್ರತಿದಿನ ಪೂಜೆ ಸಲ್ಲುತ್ತದೆ.

ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಸುಂದರವಾಗಿ ಕೆತ್ತಲಾಗಿದೆ. ಬಾಗಿಲವಾಡದಲ್ಲಿ ಹೂಬಳ್ಳಿಗಳ ಪಟ್ಟಿಕೆ, ಅರ್ಧಗಂಬಗಳನ್ನು ಕೊರೆಯಲಾಗಿದೆ. ಈ ಅರ್ಧಗಂಬಗಳ ಕೆಳಗೆ ಪದ್ಮಗಳ ಉಬ್ಬುಶಿಲ್ಪವಿದ್ದು ಇತ್ತೀಚೆಗೆ ಅವುಗಳ ಮೇಲೆ ಸಿಮೆಂಟ ಹಚ್ಚಲಾಗಿದೆ. ಲಲಾಟಭಾಗದಲ್ಲಿ ಜೀರ್ಣೋದ್ಧಾರದ ಸಂದರ್ಭದಲ್ಲಿ ಲಕ್ಷ್ಮಿ, ಗಣೇಶ, ಸರಸ್ವತಿಗಳ ಚಿತ್ರವಿರುವ ಟೈಲ್ಸನ್ನು ಹಚ್ಚಿದ್ದಾರೆ. ಹೀಗಾಗಿ ಮೂಲ ಲಲಾಟಭಾಗ ಮುಚ್ಚಿಕೊಂಡಿದೆ. ಮೇಲೆ ಮುಂಚಾಚುವಿನ ಭಾಗವಿದೆ. ವಿಶಾಲವಾದ ತೆರೆದ ಸಮಂಟಪವಿದೆ. ಇಲ್ಲಿ ನಾಲ್ಕು ಕಂಬಗಳಿದ್ದು ಅವುಗಳನ್ನು ಚಚ್ಚೌಕವಾಗಿ ಕಡೆದು ಬೋದಿಗೆಗಳಿಗೆ ಹೊಂದಿಸಿದ್ದಾರೆ. ಈ ಸಭಾಮಂಟಪದ ಮಧ್ಯದಲ್ಲಿ ಇತ್ತೀಚೆಗೆ ನಂದಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಮೇಲ್ಛಾವಣಿಯನ್ನು ಸಹ ಇತ್ತೀಚೆಗೆ ಹಾಕಲಾಗಿದೆ. ಈ ದೇವಾಲಯದ ಹೊರಗೋಡೆಯು ಸರಳವಾಗಿದ್ದು, ಗರ್ಭಗೃಹದ ಗೋಡೆ ಮಾತ್ರ ಹಳೆಯದಾಗಿದೆ. ಇದು ಸಹ ಸರಳವಾಗಿದೆ. ಗರ್ಭಗೃಹದ ಮೇಲೆ ಜೀರ್ಣೋದ್ಧಾರದ ಸಂದರ್ಭದಲ್ಲಿ ಸುಂದರವಾದ ಶಿಖರವನ್ನು ನಿರ್ಮಿಸಿದ್ದಾರೆ.

ಊರು – ಪುರ್ತಗೇರಾ
ಸ್ಮಾರಕ – ಸೋಮನಾಥ ದೇವಾಲಯ
ಸ್ಥಳ – ಗ್ರಾಮದ ವಾಯುವ್ಯಕ್ಕೆ
ಶೈಲಿ – ಕಲ್ಯಾಣ ಚಾಲುಕ್ಯ
ಪಂಥ – ಶೈವ
ಕಾಲ – ಕ್ರಿ.ಶ.ಸು.೧೨-೧೩ನೆಯ ಶತಮಾನ

ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹವು ಹತ್ತು ಅಡಿ ಉದ್ದ, ಹತ್ತು ಅಡಿ ಅಗಲ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಕಪ್ಪು ಶಿಲೆಯಲ್ಲಿ ಮೂರು ಅಡಿ ಎತ್ತರದ ಶಿವಲಿಂಗವಿದೆ.

ಈ ಗರ್ಭಗೃಹದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಗರ್ಭಗೃಹದ ಮುಂಭಾಗದಲ್ಲಿ ಎರಡು ಕಂಬಗಳಿದ್ದು, ಅವುಗಳು ಕೆಳಭಾಗದಲ್ಲಿ ಚೌಕಾಕಾರ ಮೇಲೆ ಗೋಲಾಕಾರ ನಂತರ ಅಷ್ಟಕೋನಗಳ ಪಟ್ಟಿಕೆ ಮತ್ತು ಬೋದಿಗೆಗಳಿಂದ ಕೂಡಿದೆ. ಗರ್ಭಗೃಹದ ಬಾಗಿಲವಾಡ ಸರಳವಾದ ಪಟ್ಟಿಕೆ ಮತ್ತು ಅರ್ಧಗಂಬಗಳಿಂದ ಕೂಡಿದೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ.

ಅಂತರಾಳವು ಒಂಬತ್ತುವರೆ ಅಡಿ ಉದ್ದ, ಒಂಬತ್ತುವರೆ ಅಡಿ ಅಗಲ ಅಳತೆಯನ್ನು ಹೊಂದಿದೆ. ಈ ಅಂತರಾಳದಲ್ಲಿ ನಾಲ್ಕು ಮೂಲೆಕಂಬಗಳಿವೆ. ಈ ಕಂಬಗಳು ಕೆತ್ತನೆಯಿಂದ ಅಲಂಕೃತವಾಗಿವೆ. ಆದರೆ ಸುಣ್ಣ ಹಚ್ಚಿರುವುದರಿಂದ ಕೆತ್ತನೆ ಅಸ್ಪಷ್ಟವಾಗಿ ಕಾಣುತ್ತದೆ. ಈ ಅಂತರಾಳದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲ್ಪಟ್ಟಿದೆ. ಮಧ್ಯದಲ್ಲಿ ಕೆಳಮುಖವಾಗಿ ಅರಳಿದ ಕಮಲವನ್ನು ಕೆತ್ತಲಾಗಿದೆ. ಅಂತರಾಳದ ಬಾಗಿಲವಾಡವು ಸರಳವಾಗಿದ್ದು ಸುತ್ತಲೂ ಗಾಳಿ ಬೆಳಕಿಗಾಗಿ ಜಾಲಂಧ್ರಗಳನ್ನು ಜೋಡಿಸಲಾಗಿದೆ. ಜಾಲಂದರ ಪಕ್ಕದಲ್ಲಿ ಎರಡು ಕಂಬಗಳಿವೆ. ಅಂತರಾಳದ ಮುಂಭಾಗದಲ್ಲಿ ಯಾವುದೇ ಕಟ್ಟಡವಿಲ್ಲ. ಆದರೆ ತಲವಿನ್ಯಾಸವನ್ನು ಗಮನಿಸಿದಾಗ ಇಲ್ಲಿ ಸಭಾಮಂಟಪವಿರುವುದು ಗುರುತಿಸಬಹುದಾಗಿದೆ. ಮಂಟಪದ ಸಂಪೂರ್ಣ ಭಾಗ ನಶಿಸಿದೆ.

ಈ ದೇವಾಲಯದ ಕಟ್ಟಡಕ್ಕೆ ಮರಳು ಮಿಶ್ರಿತ ಕೆಂಪು ಕಲ್ಲುಗಳನ್ನು ಬಳಸಲಾಗಿದೆ. ದೇವಾಲಯವನ್ನು ನಕ್ಷತ್ರಾಕಾರದಲ್ಲಿ ಕಟ್ಟಲಾಗಿದೆ. ಹೊರಗೋಡೆಗೆ ಹೊಂದಿಕೊಂಡಿರುವ ಕಂಬಗಳನ್ನು ಅಡ್ಡ ಹಾಗೂ ಉದ್ದ ಪಟ್ಟಿಕೆಗಳಿಂದ ಜೋಡಿಸಿ ನಿರ್ಮಿಸಿದಂತಿದೆ. ಅಲ್ಲಲ್ಲಿ ಅಲಂಕೃತವಾದ ದೇವಕೂಟಗಳನ್ನು ಮಾಡಲಾಗಿದೆ. ಆದರೆ ಅವುಗಳಲ್ಲಿ ಯಾವುದೇ ಶಿಲ್ಪಗಳಿಲ್ಲ. ಗರ್ಭಗೃಹದ ಮೇಲೆ ಬಹುಸುಂದರವಾದ ವೇಸರಶೈಲಿಯ ಶಿಖರವಿದೆ. ಶಿಖರವನ್ನು ಮರಳುಮಿಶ್ರಿತ ಕಪ್ಪು ಕಲ್ಲುಗಳಿಂದ ತಲವಿನ್ಯಾಸಕ್ಕೆ ಪೂರಕವಾಗಿ ನಿರ್ಮಿಸಲಾಗಿದೆ. ದ್ರಾವಿಡ ವಿಮಾನದಲ್ಲಿ ಕಂಡುಬರುವ ಕೂಟಪಂಜರ, ತಲಗಳ ರಚನೆಯು ಇಲ್ಲಿ ಭದ್ರ, ಪ್ರತಿಭದ್ರಗಳ ಹೊರ ಮತ್ತು ಒಳಚಾಚುಗಳಿಗೆ ಹೊಂದಿಕೊಂಡು ರಚನೆಯಾಗಿವೆ. ಅಲಂಕಾರಕ್ಕಾಗಿ ಕೂಟಗಳ ಮೇಲೆ ಶಿಲಾಕೃತಿಗಳು ಕೂಡ ರಚನೆಯಾಗಿವೆ. ಶಿಖರದ ತಲಗಳನ್ನು ಕಪೋತ, ವ್ಯಾಳಪಟ್ಟಿಗಳ ರಚನೆಗಳಿಂದ ವಿಭಾಗಿಸುತ್ತ ಪಿರಮಿಡ್ಡಿನಾಕೃತಿಗೆ ಪೂರಕವಾಗಿ ಶಿಖರದ ವಿನ್ಯಾಸವಾಗಿದೆ. ಶಿಖರದ ಮೇಲ್ಭಾಗದ ಕಂಠ ಮತ್ತು ಕಳಸದ ಭಾಗ ನಾಶವಾಗಿದೆ.

ಈ ದೇವಾಲಯದ ಸರಿಯಾದ ಸಂರಕ್ಷಣೆ ಇಲ್ಲದ ಕಾರಣ ಗೋಡೆ ಶಿಖರಗಳಲ್ಲಿ ಕಂಟಿಗಳು ಬೆಳೆದಿವೆ. ಈ ಸೋಮನಾಥ ದೇವರಿಗೆ ಇಂದಿಗೂ ಪ್ರತಿನಿತ್ಯ ಪೂಜೆ ನಡೆಯುತ್ತದೆ. ಬಸವಜಯಂತಿಯ ಅಕ್ಷಯ ತೃತೀಯ ದಿನದಂದು ಜಾತ್ರೆ ನೆರವೆರುತ್ತದೆ.

ಊರು – **ಹೂಲಗೇರಿ**

ಸ್ಮಾರಕ – ಸೋಮೇಶ್ವರ ದೇವಾಲಯ

ಸ್ಥಳ – ಗ್ರಾಮದ ಮಧ್ಯ

[illegible]

ಶೈಲಿ – ಕಲ್ಯಾಣ ಚಾಲುಕ್ಯ

ಪಂಥ – ಶೈವ

ಕಾಲ – ಕ್ರಿ.ಶ.ಸು.೧೨–೧೩ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ತೆರೆದ ಸಭಾಮಂಟಪದಿಂದ ಕೂಡಿದೆ. ಗರ್ಭಗೃಹವು ಎಂಟು ಅಡಿ ಉದ್ದ, ಆರು ಅಡಿ ಅಗಲವಾಗಿದೆ. ಮಧ್ಯದಲ್ಲಿ ಸುಮಾರು ಎರಡು ಅಡಿ ಎತ್ತರದ ಕಪ್ಪು ಶಿಲೆಯ ಶಿವಲಿಂಗವಿದೆ. ಗರ್ಭಗೃಹದ ಒಳಭಾಗದ ಗೋಡೆಗೆ ಇತ್ತೀಚೆಗೆ ಟೈಲ್ಸಗಳನ್ನು ಹಚ್ಚಲಾಗಿದೆ. ಹೀಗಾಗಿ ಗೋಡೆಯ ಭಾಗ ಕಾಣುವದಿಲ್ಲ. ಗರ್ಭಗೃಹದ ಭುವನೇಶ್ವರಿಯಲ್ಲಿ ಅರಳಿದ ಕಮಲವಿದೆ.

ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಪದ್ಮ, ಅರೆಗಂಬ, ಹೂಬಳ್ಳಿಯ ಸಾಲುಗಳಿಂದ ಅಲಂಕೃತಗೊಳಿಸಲಾಗಿದೆ. ಮೇಲೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ಅದರ ಮೇಲ್ಭಾಗದಲ್ಲಿ ಮುಂಚಾಚಿದ ಪಟ್ಟಿಕೆಯಿದೆ. ಗರ್ಭಗೃಹದ ಮುಂಭಾಗದಲ್ಲಿರುವ ಅಂತರಾಳವು ಐದು ಅಡಿ ಉದ್ದ, ಆರು ಅಡಿ ಅಗಲವಾಗಿದೆ. ಈ ಅಂತರಾಳದ ಗೋಡೆಗಳು ಸರಳವಾಗಿವೆ. ಮೇಲೆ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವಿದೆ. ಈ ಅಂತರಾಳದ ಪ್ರವೇಶದ್ವಾರದ ಬಾಗಿಲುವಾಡವು ಸರಳವಾಗಿದ್ದು, ಇದರ ಸುತ್ತಲೂ ಪದ್ಮ ಅಲಂಕರಣೆಯ ಮೂರು ಸಾಲುಗಳಿರುವ ಜಾಲಂಧರಗಳಿವೆ. ಲಲಾಟಭಾಗದಲ್ಲಿ ಯಾವುದೇ ಕೆತ್ತನೆ ಇಲ್ಲದೆ ಸರಳವಾಗಿದೆ. ಬಾಗಿಲವಾಡದ ಪಾರ್ಶ್ವಗಳಲ್ಲಿ ಅಡ್ಡಪಟ್ಟಿಕೆಗಳಿಂದ ಕೂಡಿದ ಕಂಬಗಳಿದ್ದು ಗೋಡೆಯಲ್ಲಿ ಸೇರಿವೆ. ಅಂತರಾಳದ ಮುಂಭಾಗವೇ ಸಭಾಮಂಟಪ. ಈ ಸಭಾಮಂಟಪವು ವಿಶಾಲವಾಗಿದ್ದು ಇಪ್ಪತ್ತೂರು ಅಡಿ ಉದ್ದ, ಇಪ್ಪತ್ತೂರು ಅಡಿ ಅಗಲ ಅಳತೆಯನ್ನು ಹೊಂದಿದೆ. ಇಲ್ಲಿ ಎಂಟು ಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳು ಕೆಳಗೆ ಚೌಕಾಕಾರವಾಗಿದ್ದು, ಮೇಲೆ ವೃತ್ತಾಕಾರದ ಬಳೆಗಳು ಅದರ ಮೇಲೆ ಘಂಟೆಯಾಕಾರ ಹಾಗೂ ವೃತ್ತಾಕಾರದ ಫಲಕ ಮೇಲ್ಛಾವಣಿಗೆ ಆಧಾರವಾಗಿ ಬೋದಿಗೆಗಳನ್ನು ಒಳಗೊಂಡಿವೆ. ಈ ಕಂಬಗಳ ಮಧ್ಯದ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವನ್ನು ಕೊರೆಯಲಾಗಿದೆ. ಇನ್ನುಳಿದ ನಾಲ್ಕು ಕಂಬಗಳು ಬೇರೆ ಆಕಾರದಲ್ಲಿವೆ. ಇವುಗಳು ಕೆಳಭಾಗದಲ್ಲಿ ಚೌಕಾಕಾರ ಮೇಲೆ ಅಷ್ಟಮುಖ, ವೃತ್ತಾಕಾರ, ಅಷ್ಟಮುಖ ಹಾಗೂ ಚೌಕಾಕಾರವಾಗಿ ಕಡೆಯಲಾಗಿದೆ. ಈ ಸಭಾಮಂಟಪದ ಇಕ್ಕೆಲಗಳಲ್ಲಿ ನಾಲ್ಕು ದೇವಕೋಷ್ಠಗಳಿವೆ. ಇವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಈ ದೇವಕೋಷ್ಠಗಳ ಬಾಗಿಲವಾಡಗಳನ್ನು ಅರೆಗಂಬ, ಮುಂಚಾಚಿದ ಪಟ್ಟಿಕೆ ಹಾಗೂ ದ್ರಾವಿಡ ಮತ್ತು ವೇಸರ ಮಾದರಿಯ ಶಿಖರ ಭಾಗಗಳಿಂದ ಅಲಂಕರಿಸಲಾಗಿದೆ. ಸಭಾಮಂಟಪದ ಸುತ್ತಲೂ ಕಕ್ಷಾಸನವಿದೆ. ದೇವಾಲಯಕ್ಕೆ ಬರುವ ಭಕ್ತರ ವಿಶ್ರಾಂತಿಗಾಗಿ ಈ ಕಕ್ಷಾಸನದ ವ್ಯವಸ್ಥೆ ಮಾಡಲಾಗಿದೆ. ಈ ಕಕ್ಷಾಸನದ ಮೇಲಿಂದ ಮೇಲ್ಛಾವಣಿವರೆಗೆ ಆರು ಕಂಬಗಳಿವೆ. ಈ ಕಂಬಗಳು ಕೆಳಗೆ ಚೌಕಾಕಾರ ,ಅಷ್ಟಕೋನ, ಚೌಕಾಕಾರವಾಗಿದ್ದು ಮೇಲೆ ಬೋದಿಗೆಯನ್ನು ಹೊಂದಿದೆ.

ಈ ದೇವಾಲಯವನ್ನು ಸುಮಾರು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಈ ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ ಹಾಗೂ ಪದ್ಮಗಳ

ಅಲಂಕರಣಗಳಿವೆ. ಕಕ್ಷಾಸನದ ಹೊರಭಾಗದಲ್ಲಿ ಪದ್ಮಗಳ ಸಾಲುಗಳಿವೆ. ಈ ಸಭಾಮಂಟಪವ ಮೇಲ್ಛಾವಣಿಯನ್ನು ಅಗಲವಾದ ಕಲ್ಲುಗಳಿಂದ ಮುಚ್ಚಲಾಗಿದೆ. ತೆರೆದ ಸಭಾಮಂಟಪವನ್ನು ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸುವ ಸಲುವಾಗಿ ಮುಂಚಾಚನ್ನು ನಿರ್ಮಿಸಲಾಗಿದೆ. ಈ ಮಂಟಪದ ಮೇಲೆ ಇತ್ತೀಚೆಗೆ ಗೋಡೆಯನ್ನು ಕಟ್ಟಲಾಗಿದೆ.

ಈ ದೇವಾಲಯದ ಅಂತರಾಳ ಮತ್ತು ಗರ್ಭಗೃಹದ ಹೊರಭಾಗದ ಗೋಡೆಗಳಿಗೆ ಹೊಂದಿಕೊಂಡೆ ಇತ್ತೀಚೆಗೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಗರ್ಭಗೃಹದ ಮೇಲೆ ಶಿಖರವಿದೆ. ಈ ಶಿಖರವು ಕದಂಬನಾಗರ ಶೈಲಿಯಲ್ಲಿದೆ. ಈ ಸೋಮೇಶ್ವರ ದೇವರಿಗೆ ಪ್ರತಿದಿನ ಪೂಜೆ ನಡೆಯುತ್ತದೆ.

ಊರು	–	**ಹೂಲಗೇರಿ**
ಸ್ಮಾರಕ	–	ಸಂಗಮೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಮಧ್ಯ
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ಶೈವ
ಕಾಲ	–	ಕ್ರಿ.ಶ.೧೨–೧೩ನೆಯ ಶತಮಾನ

ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಗರ್ಭಗೃಹ ಮತ್ತು ಅಂತರಾಳಗಳಿಂದ ಕೂಡಿದೆ. ಇದರ ಸಭಾಮಂಟಪದ ಭಾಗ ಸಂಪೂರ್ಣ ಭಗ್ನಗೊಂಡಿದೆ. ಕಲ್ಯಾಣ ಚಾಲುಕ್ಯ ಕಾಲದಲ್ಲಿ ಕಟ್ಟಲಾಗಿದ್ದ ಈ ದೇವಾಲಯವನ್ನು ಕಾಲಾನಂತರದಲ್ಲಿ ಜೀರ್ಣೋದ್ಧಾರ ಮಾಡ ಲಾಗಿದೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಗರ್ಭಗೃಹದ ಮಧ್ಯದಲ್ಲಿ ಒಂದುವರೆ ಅಡಿ ಎತ್ತರದ ಕಪ್ಪು ಶಿಲೆಯ ಶಿವಲಿಂಗವಿದೆ. ಇದರ ಎದುರಿಗೆ ಸಣ್ಣದಾದ ನಂದಿಯ ಶಿಲ್ಪವನ್ನು ಇಡಲಾಗಿದೆ.

ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಸರಳವಾದ ಪಟ್ಟಿಕೆ ಮತ್ತು ಅರ್ಧಗಂಬಗಳಿಂದ ಕೂಡಿದೆ. ಅಂತರಾಳವು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಈ ಅಂತರಾಳದ ಗೋಡೆಗಳು ಯಾವುದೇ ಕೆತ್ತನೆ ಇಲ್ಲದೆ ಸರಳ ವಾಗಿವೆ. ಇದರ ಪ್ರವೇಶದ್ವಾರದ ದ್ವಾರಬಂಧದಲ್ಲಿ ಸರಳವಾದ ಪಟ್ಟಿಕೆ ಮತ್ತು ಅರ್ಧಗಂಬಗಳಿವೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ಈ ದೇವಾಲಯದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಇದರ ಹೊರಗೋಡೆಯು ಸಮತಟ್ಟಾಗಿದೆ. ಗರ್ಭಗೃಹದ ಮೇಲಿರುವ ಶಿಖರವು ಜೀರ್ಣೋದ್ಧಾರ ಗೊಂಡಿದ್ದು ಇಟ್ಟಿಗೆ, ಸಿಮೆಂಟು ಬಳಸಿ ಕಟ್ಟಲಾಗಿದೆ. ಇದು ಪಿರಾಮಿಡ್ಡಿನಾಕಾರದಲ್ಲಿ ಮೇಲಕ್ಕೆ ಕಿರಿದಾಗುತ್ತ ಹೋಗಿ ಅದರ ಮೇಲೆ ಒಂದು ಗುಮ್ಮಟಾಕಾರದ ಹಾಗೂ ಕಮಲದ ಅಲಂಕರಣೆ ಹೊಂದಿದ ಶಿಖರವಿದೆ. ಆದರೆ ಶಿಖರದ ಮೇಲೆ ಕಳಶವಿಲ್ಲ. ಇಂಥ ಪುರಾತನ

[illegible]

ದೇವಾಲಯವನ್ನು ಇತ್ತೀಚೆಗೆ ದಿನಾಂಕ:೧೩-೧೨-೨೦೧೦ ರಂದು ರಸ್ತೆ ಅಗಲೀಕರಣದ ಸಂದರ್ಭದಲ್ಲಿ ಸಂಪೂರ್ಣವಾಗಿ ನಾಶಪಡಿಸಿದರು.

ಊರು	–	**ಚಂದ್ರಗಿರಿ**
ಸ್ಮಾರಕ	–	ಚಂದಾಲಿಂಗೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಈಶಾನ್ಯಕ್ಕೆ
ಪಂಥ	–	ಶೈವ
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೩ನೆಯ ಶತಮಾನ

ಈ ದೇವಾಲಯವು ಪಶ್ಚಿಮಾಭಿಮುಖವಾಗಿದೆ. ಇದು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಮತ್ತು ನಂದಿಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಈ ಗರ್ಭಗೃಹದ ಒಳಗೋಡೆ ಆಧುನೀಕರಣಗೊಂಡಿದೆ. ಇದರ ಬಾಗಿಲವಾಡದಲ್ಲಿ ಅರ್ಧಗಂಬಗಳಿವೆ.

ಅಂತರಾಳವು ಸುಮಾರು ಏಳು ಅಡಿ ಉದ್ದ, ಏಳು ಅಡಿ ಅಗಲವಾಗಿದೆ. ಇಲ್ಲಿ ಎರಡು ದೇವಕೋಷ್ಠಗಳಿವೆ. ಅವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಈ ಭಾಗದ ಗೋಡೆಗಳಿಗೆ ಟೈಲ್ಸಗಳನ್ನು ಹಚ್ಚಲಾಗಿದೆ. ನೆಲಕ್ಕೆ ಕೆಂಪು ಗ್ರಾನೈಟ್ ಕಲ್ಲುಗಳನ್ನು ಹಾಕಿಸಿದ್ದಾರೆ. ಭುವನೇಶ್ವರಿಯಲ್ಲಿ ಪದ್ಮವನ್ನು ಕೆತ್ತಲಾಗಿದೆ. ಅಂತರಾಳಕ್ಕೆ ಪ್ರವೇಶದ್ವಾರವಿದ್ದು ದ್ವಾರದ ಎರಡೂ ಬದಿಗೆ ಜಾಲಂದ್ರಗಳಿವೆ.

ಸಭಾಮಂಟಪವು ಒಂಬತ್ತು ಅಡಿ ಉದ್ದ ,ಹನ್ನೆರಡು ಅಡಿ ಅಗಲವಾಗಿದೆ. ಈ ಮಂಟಪದಲ್ಲಿ ಹನ್ನೆರಡು ಕಂಬಗಳಿದ್ದು, ಒಂಬತ್ತು ಅಂಕಣಗಳಿಂದ ಕೂಡಿದೆ. ಮಧ್ಯದ ಅಂಕಣದ ಭುವನೇಶ್ವರಿಯಲ್ಲಿ ಅರಳಿದ ಕಮಲದ ಶಿಲ್ಪವಿದೆ. ಇಲ್ಲಿರುವ ಕಂಬಗಳು ಚೌಕಾಕಾರ, ವೃತ್ತಾಕಾರ, ಘಂಟಸಾಲ ಮತ್ತು ಬೋದಿಗೆಗಳನ್ನು ಹೊಂದಿದೆ ಈ ಸಭಾಮಂಟಪದ ಪ್ರವೇಶದ್ವಾರದ ಲಲಾಟಭಾಗದಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ದ್ವಾರದ ಎರಡು ಬದಿಗೆ ಶೈವ ದ್ವಾರಪಾಲಕರನ್ನು ಕೊರೆಯಲಾಗಿದೆ.

ಈ ದೇವಾಲಯದ ಮುಖಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಇದು ಮೂರು ಅಂಕಣಗಳಿಂದ ಕೂಡಿದೆ. ಇಲ್ಲಿ ವಿಜಯದ ಮಾದರಿಯ ಎರಡು ಮೂಲೆಕಂಬಗಳು, ನಾಲ್ಕು ಅರ್ಧಕಂಬಗಳು ಹಾಗೂ ಮಧ್ಯದಲ್ಲಿ ಎರಡು ಕಂಬಗಳಿವೆ. ಈ ಮಂಟಪದ ಸುತ್ತಲೂ ಮಳೆಯಿಂದ ರಕ್ಷಣೆಗಾಗಿ ಮುಂಚಾಚಿನ ಕೈಪಿಡಿಗೋಡೆಯನ್ನು ನಿರ್ಮಿಸಲಾಗಿದೆ. ಇದರಲ್ಲಿ ಅಸ್ಪಷ್ಟವಾದ ಗಾರೆಶಿಲ್ಪಗಳಿವೆ.

ದೇವಾಲಯದ ಹೊರಗೋಡೆಯು ಸಮತಟ್ಟಾಗಿದೆ. ಗರ್ಭಗೃಹದ ಮೇಲೆ ಶಿಖರವಿದೆ.

ಇದು ದ್ರಾವಿಡ ಮಾದರಿಯಲ್ಲಿದ್ದು, ಮೂರು ತಲಗಳಿಂದ ಕೂಡಿದೆ. ಸ್ತೂಪಿ ಮತ್ತು ಕಳಸ ಭಾಗಗಳನ್ನು ಹೊಂದಿದೆ. ಇದರ ನಾಲ್ಕು ಮೂಲೆಗೂ ಸಿಂಹದ ಗಾರೆಶಿಲ್ಪಗಳಿವೆ. ಇತ್ತೀಚೆಗೆ ಶಿಖರದ ಕಳಸಭಾಗದಲ್ಲಿ ನಿಧಿ ಇದೆ ಎಂದು ನಿಧಿಗಳ್ಳರು ಶಿಖರದ ಮೇಲ್ಭಾಗವನ್ನು ಒಡೆದಿದ್ದರು. ನಂತರ ಭಕ್ತರು ಮತ್ತೆ ನಿರ್ಮಿಸಿ ಸಂಪೂರ್ಣ ದೇವಾಲಯದ ಗೋಡೆಗೆ ಕೇಸರಿ ಮತ್ತು ಹಳದಿ ಬಣ್ಣಗಳನ್ನು ಹಚ್ಚಿದ್ದಾರೆ. ದೇವಾಲಯದ ಕಟ್ಟಡಕ್ಕೆ ಕಪ್ಪು ಮಿಶ್ರಿತ ನೀಲಿಛಾಯೆಯ ಬಳಪದ ಕಲ್ಲನ್ನು ಬಳಸಿದ್ದು ನಂತರ ಕಣಶಿಲೆಯಿಂದ ಜೀರ್ಣೋದ್ಧಾರಗೊಳಿಸಲಾಗಿದೆ.

ಈ ದೇವಾಲಯದ ಎದುರಿಗೆ ಪ್ರತ್ಯೇಕವಾದ ನಂದಿಮಂಟಪವಿದೆ. ಈ ಮಂಟಪದ ಮಧ್ಯದಲ್ಲಿ ಮೂರು ಅಡಿ ಎತ್ತರದ ಕಪ್ಪುಶಿಲೆಯಲ್ಲಿ ಕೆತ್ತಿದ ನಂದಿಶಿಲ್ಪವಿದೆ. ಇಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಹನ್ನೆರಡು ಕಂಬಗಳಿವೆ. ಮಧ್ಯದ ನಾಲ್ಕುಕಂಬಗಳು ಚೌಕಾಕಾರ, ವೃತ್ತಾಕಾರ, ಘಂಟಫಲಕ, ಬೋದಿಗೆಗಳನ್ನು ಹೊಂದಿವೆ. ಇನ್ನುಳಿದ ಏಂಟುಕಂಬಗಳು ಚೌಕಾಕಾರ, ಅಷ್ಟಕೋನಾಕೃತಿ, ಚೌಕಾಕಾರ, ಘಂಟಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ.

ದೇವಾಲಯದ ದ್ವಾರಮಂಟಪವು ಕಮಾನಿನಾಕೃತಿಯಲ್ಲಿದ್ದು ಮೇಲ್ಭಾಗದಲ್ಲಿ ಮಕರ ತೋರಣವನ್ನು ಕೆತ್ತಲಾಗಿದೆ. ಈ ಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇವುಗಳು ಕೆಳಗೆ ಚೌಕಾಕಾರ, ಅಷ್ಟಕೋನಾಕೃತಿ ಮತ್ತೆ ಚೌಕಾಕಾರ ಮತ್ತು ಬೋದಿಗೆಗಳನ್ನು ಹೊಂದಿವೆ. ಈ ಚಂದಾಲಿಂಗೇಶ್ವರನಿಗೆ ನಿತ್ಯ ಪೂಜೆಸಲ್ಲುತ್ತದೆ.

ಊರು	–	**ಚಂದ್ರಗಿರಿ**
ಸ್ಮಾರಕ	–	ಗಂಗಮಾಳಮ್ಮ ದೇವಾಲಯ
ಸ್ಥಳ	–	ಚಂದಾಲಿಂಗೇಶ್ವರ ದೇವಾಲಯದ ಆವರಣದಲ್ಲಿ
ಪಂಥ	–	ಶೈವ
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೩ನೆಯ ಶತಮಾನ

ಚಂದಾಲಿಂಗೇಶ್ವರ ದೇವಾಲಯದ ಆವರಣದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಆರು ಅಡಿ ಉದ್ದ, ಆರು ಅಡಿ ಅಗಲ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ನಾಲ್ಕು ಅಡಿ ಎತ್ತರದ ಕಪ್ಪು ಶಿಲೆಯ ಗಂಗಮಾಳಮ್ಮನ ಶಿಲ್ಪವಿದೆ. ಇದರ ಹಿಂಬದಿ ಗೋಡೆಯಲ್ಲಿ ಎರಡು ಮೂಲೆಗಂಬಗಳಿವೆ. ಇನ್ನುಳಿದಂತೆ ಗೋಡೆ ಸರಳವಾಗಿದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡ ತುಂಬೆಲ್ಲ ಇತ್ತೀಚೆಗೆ ಟೈಲ್ಸ ಹಚ್ಚಿದ್ದಾರೆ. ಕರ್ನಾಟಕ ದೇವಾಲಯಗಳ ಕೋಶ, ಕೊಪ್ಪಳ ಜಿಲ್ಲೆ. ಈ ಪುಸ್ತಕದಲ್ಲಿ ಉಲ್ಲೇಖವಿರುವಂತೆ, ಗರ್ಭಗೃಹದ ಪ್ರವೇಶ ದ್ವಾರಬಂಧವಲ್ಲಿ ಸರಳವಾದ ಪಟ್ಟಿಕೆಗಳಿದ್ದು, ಇವುಗಳಲ್ಲಿ ಕುಂಬಗಳು ಇವುಗಳ ಮೇಲೆ ಸ್ತಂಭಶಾಖಾಗಳಿವೆ. ಮೇಲೆ ಲಲಾಟಭಾಗದಲ್ಲಿ ಕುಂಭದ ಉಬ್ಬು ಕೆತ್ತನೆ ಇದೆ.

ಗರ್ಭಗೃಹದ ಮುಂಭಾಗದಲ್ಲಿರುವ ಅಂತರಾಳವು ಸರಳವಾದ ಕಟ್ಟಡವನ್ನು ಹೊಂದಿದೆ. ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಲಾಗಿದೆ. ಅಂತರಾಳದ ಪ್ರವೇಶದ್ವಾರದ ಬಾಗಿಲವಾಡವು ಹೂಬಳ್ಳಿಗಳ ಸಾಲುಗಳಿಂದ ಅಲಂಕೃತಗೊಂಡಿದೆ. ಮೇಲೆ ಲಲಾಟಭಾಗದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಈ ಶಿಲ್ಪದಿಂದ ಇದೊಂದು ಶೈವ ದೇವಾಲಯವಾಗಿತ್ತೆಂದು ತಿಳಿದುಬರುತ್ತದೆ. ಕೆಳಗೆ ದ್ವಾರಪಾಲಕರಿದ್ದಾರೆ. ಈ ದೇವಾಲಯದ ಹೊರಗೋಡೆಯನ್ನು ಅಧಿಷ್ಠಾನ, ಭಿತ್ತಿ ಮತ್ತು ಶಿಖರ ಭಾಗಗಳೆಲ್ಲ ಸುಣ್ಣ ಬಣ್ಣಗಳಿಂದ ಮುಚ್ಚಿಕೊಂಡಿದೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಮೂರು ತಲಗಳಿಂದ ಕೂಡಿದ ಶಿಖರವಿದೆ. ಇದನ್ನು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಇಂದಿಗೂ ನಿತ್ಯ ಪೂಜೆ ನಡೆಯುತ್ತದೆ.

ಊರು	–	**ತಾವರಗೆರೆ**
ಸ್ಮಾರಕ	–	ವೈಜನಾಥ ದೇವಾಲಯ
ಸ್ಥಳ	–	ಗ್ರಾಮದ ಮಧ್ಯ
ಪಂಥ	–	ಶೈವ
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೩ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಇದು ತ್ರಿಕೂಟಾಚಲ ದೇವಾಲಯವಾಗಿದೆ. ಮೂರು ಗರ್ಭಗೃಹಗಳು ಒಂದೇ ಸಭಾಮಂಟಪಕ್ಕೆ ಹೊಂದಿಕೊಂಡಿವೆ. ಮೂರೂ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಗರ್ಭಗೃಹ ಪ್ರವೇಶದ್ವಾರಗಳು ಸರಳವಾಗಿದ್ದು ಮೇಲೆ ಭುವನೇಶ್ವರಿಯಲ್ಲಿ ಅರಳಿದ ಪದ್ಮದ ಕೆತ್ತನೆಗಳಿವೆ. ಗರ್ಭಗೃಹದ ಮುಂಭಾಗದಲ್ಲಿ ತೆರೆದ ಅಂತರಾಳಗಳಿಗೆ ಹೊಂದಿಕೊಂಡು ವಿಶಾಲವಾದ ಸಭಾಮಂಟಪವಿದೆ. ಇಲ್ಲಿ ಒಂಬತ್ತು ಅಂಕಣಗಳಿದ್ದು ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಈ ಸ್ತಂಭಗಳು ಕೆಳಗೆ ಚೌಕಾಕಾರ, ಅಷ್ಟಕೋನ ಮತ್ತೆ ಚೌಕಾಕಾರವಾಗಿದ್ದು ಮೇಲೆ ವೃತ್ತಾಕಾರ ಹಾಗೂ ಬೋದಿಗೆಯನ್ನು ಹೊಂದಿದೆ. ಈ ನಾಲ್ಕು ಸ್ತಂಭಗಳ ಮಧ್ಯದಲ್ಲಿ ಪೂರ್ವಾಭಿಮುಖವಾದ ಗರ್ಭಗೃಹದ ಎದುರಿಗೆ ಎರಡು ನಂದಿ ವಿಗ್ರಹಗಳಿವೆ. ಮಧ್ಯದ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲವಿದೆ. ಈ ಸಭಾಮಂಟಪದಲ್ಲಿ ಆರು ದೇವಕೋಷ್ಠಗಳಿದ್ದು ಅವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ.

ಈ ದೇವಾಲಯದ ಸಭಾಮಂಟಪದ ಪ್ರವೇಶದ್ವಾರದ ಬಾಗಿಲವಾಡವು ಸರಳವಾದ ಪಟ್ಟಿಕೆ ಮತ್ತು ಅರ್ಧಗಂಬಗಳನ್ನು ಹೊಂದಿದೆ. ಈ ಅರ್ಧಗಂಬಗಳ ಕೆಳಗೆ ಕುಂಬಗಳಿವೆ. ಮೇಲೆ ಲಲಾಟಭಾಗದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಸಭಾಮಂಟಪದ ಮೇಲ್ಚಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಈ ದೇವಾಲಯದ ಅಧಿಷ್ಠಾನ ಭಾಗವು ನೆಲದಲ್ಲಿ ಮುಚ್ಚಿದೆ. ಭಿತ್ತಿ ಭಾಗ ಸರಳವಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವಿದೆ. ಈ ಶಿಖರದ ಶೈಲಿ ವಿಜಯನಗರ ಕಾಲದ ಶೈಲಿಗೆ ಹೋಲುತ್ತದೆ. ಈ ದೇವಾಲಯದ ಶಿಖರ ಭಾಗ ಮಾತ್ರ ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರಬಹುದಾಗಿದೆ. ಈ ಶಿಖರ ಭಾಗವು ಗೂಡು

ಅರ್ಧಗಂಬ, ಚೈತ್ಯಾಕಾರದ ಕೆತ್ತನೆಯನ್ನು ಹೊಂದಿದೆ. ಅಲ್ಲದೇ ಈ ಕಟ್ಟಡಕ್ಕೆ ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಲಾಗಿದೆ. ಈ ದೇವಾಲಯದಲ್ಲಿರುವ ಶಿವಲಿಂಗಗಳಿಗೆ ಇಂದಿಗೂ ದಿನನಿತ್ಯ ಪೂಜೆ ನಡೆಯುತ್ತದೆ.

ಊರು	–	**ತಾವರಗೆರೆ**
ಸ್ಮಾರಕ	–	ವೀರಭದ್ರ ದೇವಾಲಯ
ಸ್ಥಳ	–	ಗ್ರಾಮದ ದಕ್ಷಿಣಕ್ಕೆ
ಪಂಥ	–	ಶೈವ
ಶೈಲಿ	–	ವಿಜಯನಗರ
ಕಾಲ	–	ಕ್ರಿ.ಶ.ಸು.೧೬ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಇಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಕಪ್ಪು ಮಿಶ್ರಿತ ಶಿಲೆಯಲ್ಲಿ ಸಮಭಂಗಿಯಲ್ಲಿ ನಿಂತ ವೀರಭದ್ರ ಶಿಲ್ಪವಿದೆ. ಗರ್ಭಗೃಹದ ಪ್ರವೇಶದ್ವಾರದ ದ್ವಾರಬಂಧವು ಸರಳವಾಗಿದೆ. ಸಭಾಮಂಟಪದ ಕಟ್ಟಡವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಇಲ್ಲಿ ಇತ್ತೀಚಿನ ಎರಡು ಚೌಕಾಕಾರದ ಕಂಬಗಳು ಶಿವಲಿಂಗ ಮತ್ತು ನಂದಿಶಿಲ್ಪಗಳಿವೆ. ಈ ಮಂಟಪವು ಸರಳವಾದ ಪ್ರವೇಶದ್ವಾರವನ್ನು ಹೊಂದಿದೆ. ಈ ದೇವಾಲಯದ ಹೊರಗೋಡೆಯ ಅತ್ಯಂತ ಸರಳವಾಗಿದೆ. ಗರ್ಭಗೃಹದ ಮೇಲೆ ಸಣ್ಣದಾದ ಶಿಖರವಿದೆ. ಇಂದಿಗೂ ದಿನನಿತ್ಯ ಪೂಜೆ ನಡೆಯುತ್ತದೆ.

ಊರು	–	**ಹನುಮಸಾಗರ**
ಸ್ಮಾರಕ	–	ಈಶ್ವರ ದೇವಾಲಯ
ಸ್ಥಳ	–	ಗ್ರಾಮದ ನೈರುತ್ಯಕ್ಕೆ
ಪಂಥ	–	ಶೈವ
ಶೈಲಿ	–	ವಿಜಯನಗರ
ಕಾಲ	–	ಕ್ರಿ.ಶ.ಸು.೧೭ನೆಯ ಶತಮಾನ

ವಿಜಯನಗರ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪಗಳನ್ನು ಒಳಗೊಂಡಿದೆ. ಇದು ಪೂರ್ವಾಭಿಮುಖವಾಗಿದೆ. ಗ್ರಾಮದ ನೈರುತ್ಯ ದಿಕ್ಕಿನಲ್ಲಿರುವ ತಂಗಮ್ಮನ ಬಾವಿಯಲ್ಲಿ ಇಳಿಯುವಾಗ ಈ ದೇವಾಲಯ ಕಂಡುಬರುತ್ತದೆ. ಚಿಕ್ಕದಾದ ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಕಪ್ಪು ಶಿಲೆಯಲ್ಲಿ ಕೆತ್ತಿದ ಶಿವಲಿಂಗವಿದೆ. ಇದರ ಎದುರಿಗೆ ನಂದಿ ವಿಗ್ರಹವು ಇದೆ. ಈ ಗರ್ಭಗೃಹದ ಗೋಡೆಗಳು

ಸಮತಟ್ಟಾಗಿದ್ದು, ಇದರ ಪ್ರವೇಶದ್ವಾರದ ಬಾಗಿಲವಾಡವು ಯಾವುದೇ ಅಲಂಕರಣ ಕೆತ್ತನೆ ಇಲ್ಲದೆ ಸರಳವಾಗಿದೆ.

ಗರ್ಭಗೃಹದ ಮುಂದಿರುವ ತೆರೆದ ಮಂಟಪವು ಎರಡು ಕಂಬಗಳನ್ನು ಒಳಗೊಂಡಿದ್ದು, ಮೂರು ಅಂಕಣಗಳಿಂದ ಕೂಡಿದೆ. ಈ ಕಂಬಗಳು ಕೆಳಭಾಗದಲ್ಲಿ ಚೌಕಾಕಾರ ಮಧ್ಯದಲ್ಲಿ ವೃತ್ತಾಕಾರ ಮೇಲೆ ಬೋದಿಗೆಗಳನ್ನು ಹೊಂದಿವೆ. ಇದರ ಮೇಲ್ಛಾವಣಿಯನ್ನು ಅಗಲವಾದ ಸಮತಟ್ಟಾಗಿ ಕಟೆದ ಕಲ್ಲುಗಳಿಂದ ಮುಚ್ಚಲಾಗಿದೆ. ಗರ್ಭಗೃಹದ ಮೇಲೆ ಸಣ್ಣದಾದ ಮೂರು ಹಂತದ ಶಿಖರವಿದೆ. ಈ ದೇಗುಲವನ್ನು ನೆಲದಲ್ಲಿ ಕೊರೆದು ನಿರ್ಮಿಸಲಾಗಿದೆ. ಇಂದಿಗೂ ಈ ಶಿವಲಿಂಗಕ್ಕೆ ಪೂಜೆ ನಡೆಯುತ್ತದೆ.

ಊರು	–	**ಹೂಲಗೇರಿ**
ಸ್ಮಾರಕ	–	ಗುಂಡುಮಲ್ಲೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಪಶ್ಚಿಮಕ್ಕೆ
ಪಂಥ	–	ಶೈವ
ಶೈಲಿ	–	ವಿಜಯನಗರೋತ್ತರ
ಕಾಲ	–	ಕ್ರಿ.ಶ.ಸು.೧೭ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಸಭಾಮಂಟಪ ಪಕ್ಕದಲ್ಲಿ ಇನ್ನೊಂದು ವಿಶಾಲ ಮಂಟಪವನ್ನು ಹೊಂದಿದೆ. ಈ ದೇವಾಲಯದ ಮುಂದೆ ಒಂದು ಬೃಹತ್ ಬಂಡೆಗಲ್ಲು ಇರುವದರಿಂದ ಇದಕ್ಕೆ ಗುಂಡು ಮಲ್ಲೇಶ್ವರ ದೇವಾಲಯ ಕರೆಯಲಾಗುತ್ತದೆ. ಗರ್ಭಗೃಹದ ಮಧ್ಯದಲ್ಲಿ ನೆಲಮಟ್ಟದಲ್ಲಿ ಶಿವಲಿಂಗ ಇದೆ. ಇದರ ಹಿಂದೆ ನಾಗಶಿಲ್ಪವಿದೆ. ಇದರ ಮೇಲೆ ಒಂದು ಚಿಕ್ಕ ಮಂಟಪವನ್ನು ಕಟ್ಟಲಾಗಿದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಸರಳವಾದ ಪಟ್ಟಿಕೆ ಮತ್ತು ಹೂಬಳ್ಳಿಗಳ ಅಲಂಕರಣೆಯಿಂದ ಕೂಡಿದೆ. ಮೇಲೆ ಲಲಾಟಬಿಂಬದಲ್ಲಿ ಅರಳಿದ ಪದ್ಮವಿದೆ. ಇಬ್ಬರು ಶೈವ ದ್ವಾರಪಾಲಕರ ಶಿಲ್ಪಗಳಿವೆ.

ಗರ್ಭಗೃಹದ ಮುಂದೆ ಇರುವ ತೆರೆದ ಸಭಾಮಂಟಪವು ಜೀರ್ಣೋದ್ಧಾರಗೊಂಡಿದೆ. ಈ ಮಂಟಪದಲ್ಲಿ ಹತ್ತು ಕಂಬಗಳಿದ್ದು ಇವುಗಳು ಚೌಕಾಕಾರವಾಗಿವೆ. ಮಂಟಪದ ನೆಲಭಾಗಕ್ಕೆ ಕೆಂಪು ಗ್ರಾನೈಟ್ ಕಲ್ಲುಗಳನ್ನು ಹಾಕಲಾಗಿದೆ. ಮೇಲ್ಛಾವಣಿಯನ್ನು ಇತ್ತೀಚೆಗೆ ಹಾಕಲಾಗಿದ್ದು, ಗರ್ಭಗೃಹದ ಮೇಲೆ ಇತ್ತೀಚೆಗೆ ಕಟ್ಟಲಾದ ವೃತ್ತಾಕಾರದ ಹಾಗೂ ಗುಮ್ಮಟ ಮಾದರಿಯ ಶಿಖರವಿದೆ. ಶಿಖರದ ಮೇಲೆ ಲೋಹದ ಕಳಸವನ್ನು ಪ್ರತಿಷ್ಠಾಪಿಸಲಾಗಿದೆ.

ದೇವಾಲಯದ ಹೊರಗೋಡೆಗಳು ಸರಳವಾಗಿವೆ. ಈ ದೇವಾಲಯವು ಎತ್ತರವಾದ ಸ್ಥಳದಲ್ಲಿದೆ. ದೇವಾಲಯದ ಆವರಣ ಪ್ರವೇಶಿಸಲಿಕ್ಕೆ ಹದಿನೇಳು ಮೆಟ್ಟಿಲುಗಳಿವೆ. ಈ ದ್ವಾರದ ದ್ವಾರಬಂಧದಲ್ಲಿ ಹೂಬಳ್ಳಿಯಾಕಾರಾದ ಕೆತ್ತನೆ ಇದೆ. ಗ್ರಾಮದ ಪ್ರಮುಖ ದೇವಾಲಯಗಳಲ್ಲಿ

ಇದು ಒಂದು. ಪ್ರತಿನಿತ್ಯ ಇಲ್ಲಿ ಪೂಜಾ ಕಾರ್ಯಗಳು ನಡೆಯುತ್ತವೆ. ಜಾತ್ರಾ ಉತ್ಸವವು ಜರಗುತ್ತದೆ.

ಊರು	–	**ಹಿರೇಮನ್ನಾಪುರ**
ಸ್ಮಾರಕ	–	ಈಶ್ವರ ದೇವಾಲಯ
ಸ್ಥಳ	–	ಗ್ರಾಮದ ಮಧ್ಯ
ಪಂಥ	–	ಶೈವ
ಶೈಲಿ	–	ಪಾಳೆಯಗಾರ
ಕಾಲ	–	ಕ್ರಿ.ಶ.ಸು ೧೭ನೆಯ ಶತಮಾನ

ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಗರ್ಭಗೃಹ ಮತ್ತು ತೆರೆದ ಸಭಾ ಮಂಟಪಗಳನ್ನು ಹೊಂದಿದೆ. ಸ್ಥಳಿಯರು ಇದಕ್ಕೆ ಕಾಶಿವಿಶ್ವನಾಥ ದೇವಾಲಯ ಎಂದು ಕೆರೆಯುತ್ತಾರೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ಸುಮಾರು ಮೂರು ಅಡಿ ಎತ್ತರದ ಪಾಣಿಪೀಠದ ಮೇಲೆ ಕಪ್ಪು ಶಿಲೆಯ ಶಿವಲಿಂಗವಿದೆ.

ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಸರಳವಾಗಿದೆ. ಕೆಳಭಾಗದಲ್ಲಿ ಬಳ್ಳಿ, ಮೇಲೆ ಲಲಾಟಭಾಗದಲ್ಲಿ ಪದ್ಮದ ಕೆತ್ತನೆ ಇದೆ. ಇನ್ನುಳಿದ ಭಾಗ ಸುಣ್ಣ ಹಚ್ಚಿರುವುದರಿಂದ ಅಸ್ಪಷ್ಟವಾಗಿದೆ. ಸಭಾಮಂಟಪವು ವಿಶಾಲವಾಗಿದ್ದು, ನಾಲ್ಕು ಕಂಬಗಳಿಂದ ಕೂಡಿದೆ. ಇವುಗಳು ಅಷ್ಟಕೋನಾಕೃತಿಯಲ್ಲಿದ್ದು ಮೇಲೆ ಬೋದಿಗೆಯನ್ನು ಹೊಂದಿವೆ. ಮಂಟಪದ ಭಾಗವು ಜೀರ್ಣೋದ್ಧಾರಗೊಂಡಿದೆ. ಮಂಟಪದಲ್ಲಿ ಎರಡು ಅಡಿ ಎತ್ತರದ ಪೀಠದ ಮೇಲೆ ನಂದಿ ವಿಗ್ರಹವನ್ನು ಇಡಲಾಗಿದೆ.

ಈ ದೇವಾಲಯವು ಸುಮಾರು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಅಧಿಷ್ಠಾನ ಭಾಗವು ಸರಳವಾಗಿದೆ. ಭಿತ್ತಿಯ ಭಾಗವು ಸಮತಟ್ಟಾದ ಗೋಡೆಯನ್ನು ಹೊಂದಿದೆ. ಗರ್ಭಗೃಹದ ಮೇಲೆ ಇತ್ತೀಚೆಗೆ ನಿರ್ಮಿಸಿದ ಶಿಖರವಿದೆ. ಪ್ರತಿನಿತ್ಯ ಪೂಜೆ ನಡೆಯುತ್ತದೆ.

ಊರು	–	**ಕುಷ್ಟಗಿ**
ಸ್ಮಾರಕ	–	ಕೋರಿಗುಡಿ
ಸ್ಥಳ	–	ಗ್ರಾಮದ ನೈರುತ್ಯಕ್ಕೆ
ಪಂಥ	–	ಶೈವ
ಶೈಲಿ	–	ಹಿಂದೂ-ಮುಸ್ಲಿಂ ಶೈಲಿ
ಕಾಲ	–	ಕ್ರಿ.ಶ.ಸು.೧೭ನೆಯ ಶತಮಾನ

ಇದೊಂದು ಶೈವ ದೇವಾಲಯವಾಗಿದ್ದು ಸ್ಥಳೀಯವಾಗಿ ಇದನ್ನು ಕೋಟಿಗುಡಿ ಎಂದು ಕರೆಯಲಾಗುತ್ತದೆ. ಇದು ಹುಚ್ಚರಾಯನ ಗುಡಿಯನ್ನೇ ಹೋಲುತ್ತದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ವಿಗ್ರಹವಿಲ್ಲ. ಆದರೆ ಇಲ್ಲಿರುವ ಒಂದು ದೇವಕೋಷ್ಠದಲ್ಲಿ ಗಣೇಶನ ವಿಗ್ರಹವಿದೆ. ಗರ್ಭಗೃಹದ ಒಳಗೋಡೆಯು ಸರಳವಾಗಿದ್ದು ಪ್ರವೇಶದ್ವಾರದ ದ್ವಾರಬಾಗಿಲಲ್ಲಿ ಅರೆಗಂಬಗಳು, ಹೂವುಗಳ ಸಾಲು, ಪದ್ಮಗಳಿವೆ. ಲಲಾಟಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಬಾಗಿಲವಾಡದ ಇಕ್ಕೆಲಗಳಲ್ಲಿ ಪದ್ಮಗಳನ್ನು ಹಿಡಿದು ನಿಂತ ದ್ವಾರಪಾಲಕರಿದ್ದಾರೆ.

ಈ ದೇವಾಲಯವು ಎತ್ತರವಾದ ಸರಳವಾದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ತಲವಿನ್ಯಾಸವು ಚೌಕಾಕಾರವಾಗಿದೆ. ಈ ತಲವಿನ್ಯಾಸವು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಈ ದೇವಾಲಯವನ್ನು ಪ್ರವೇಶಿಸಲಿಕ್ಕೆ ಮೆಟ್ಟಲುಗಳಿವೆ. ಗರ್ಭಗೃಹದ ಪ್ರದಕ್ಷಣೆಗೆ ಅನುವಾಗಲು ತೆರೆದ ಪ್ರದಕ್ಷಣಾಪಥವಿದೆ. ದೇಗುಲದ ಮೇಲಿನ ಕೈಪಿಡಿ ಗೋಡೆಯಲ್ಲಿ ಚೈತ್ಯಾಕಾರದ ಕೆತ್ತನೆ ಮತ್ತು ಅವುಗಳಲ್ಲಿ ಸರಪಳಿಯಿಂದ ಇಳಿಬಿದ್ದ ಪದ್ಮದ ಗೊಂಚಲುಗಳಿವೆ.

ದೇವಾಲಯದ ಭಿತ್ತಿಯಲ್ಲಿ ಉಬ್ಬು ಕೆತ್ತನೆಗಳಿವೆ. ಪೂರ್ವಭಾಗದಲ್ಲಿ ಕೆದರಿದ ಜಡೆಯಿರುವ ಹಾಗೂ ಪದ್ಮಾಸನದಲ್ಲಿ ಕುಳಿತ ವ್ಯಕ್ತಿಯೊಬ್ಬನ ಶಿಲ್ಪವಿದೆ. ಇನ್ನುಳಿದ ಮೂರು ಭಾಗಗಳಲ್ಲಿ ಸಂಗೀತ ಮತ್ತು ನೃತ್ಯಗಾರರ ಉಬ್ಬು ಶಿಲ್ಪಗಳನು ಬಿಡಿಸಲಾಗಿದೆ. ಗರ್ಭಗೃಹದ ಮೇಲೆ ಗಾರೆ, ಗಚ್ಚು, ಕಲ್ಲುಗಳಿಂದ ನಿರ್ಮಿಸಿದ ಗುಮ್ಮಟವಿದೆ. ಈ ಗುಮ್ಮಟದ ಭಾಗ ಶಿಥಿಲಾವಸ್ಥೆಯಲ್ಲಿದೆ.

ಊರು	–	**ಕುಷ್ಟಗಿ**
ಸ್ಮಾರಕ	–	ಹುಚ್ಚರಾಯನ ಗುಡಿ
ಸ್ಥಳ	–	ಗ್ರಾಮದ ಈಶಾನ್ಯಕ್ಕೆ
ಪಂಥ	–	ಶೈವ
ಶೈಲಿ	–	ಹಿಂದೂ–ಮುಸ್ಲಿಂ ಶೈಲಿ
ಕಾಲ	–	ಕ್ರಿ.ಶ.ಸು.೧೭ನೆಯ ಶತಮಾನ

ಕುಷ್ಟಗಿಯ ಈಶಾನ್ಯ ದಿಕ್ಕಿನಲ್ಲಿರುವ ಈ ಹುಚ್ಚರಾಯನ ಗುಡಿಯು ಪೂರ್ವಾಭಿಮುಖ ವಾಗಿದ್ದು, ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹವು ಏಳು ಅಡಿ ಉದ್ದ, ಏಳು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಪ್ರವೇಶದ್ವಾರದ ಬಾಗಿಲವಾಡವು ಅರೆಗಂಬ ಮತ್ತು ಪದ್ಮಗಳ ಸಾಲುಗಳಿಂದ ಕೂಡಿದೆ. ಮೇಲೆ ಲಲಾಟಭಾಗದಲ್ಲಿ ಅರಳಿದ ಪದ್ಮವಿದೆ. ಬಾಗಿಲವಾಡದ ಇಕ್ಕೆಲಗಳಲ್ಲಿ ತ್ರಿಶೂಲ, ಡಮರು, ಗದೆಗಳನ್ನು ಹಿಡಿದಿರುವ ಶೈವ ದ್ವಾರಪಾಲಕರಿದ್ದಾರೆ. ಇವರ ಆಧಾರದ ಮೇಲೆ ಇದೊಂದು ಶೈವ ಸ್ಮಾರಕ ಎಂದು ಗುರುತಿಸಬಹುದಾಗಿದೆ.

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

ಈ ಗುಡಿಯನ್ನು ನಾಲ್ಕು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಅಧಿಷ್ಠಾನವು ಉಪಾನ, ಜಗತಿ, ಪಟ್ಟಿಕೆಯ ಭಾಗಗಳನ್ನು ಹೊಂದಿದೆ. ಪ್ರವೇಶಕ್ಕೆ ಅನುಕೂಲವಾಗಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಭಿತ್ತಿ ಭಾಗವನ್ನು ಸಮವಾಗಿ ಕೆತ್ತಿದ ಕಲ್ಲುಗಳಿಂದ ಕಟ್ಟಲಾಗಿದ್ದು ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಪೂರ್ವದ ಗೋಡೆಯ ಮೇಲೆ ನೃತ್ಯ ಸಂಗೀತಗಾರರು, ಯಾಳಿ, ಗಂಡಬೇರುಂಡಗಳ ಉಬ್ಬುಶಿಲ್ಪಗಳಿವೆ. ಗಂಡಬೇರುಂಡವು ತನ್ನ ಎರಡು ಬಾಯಿಗಳಲ್ಲಿ ಆನೆಗಳನ್ನು ಹಿಡಿದಿದೆ. ದಕ್ಷಿಣದ ಗೋಡೆಯ ಮೇಲೆ ಕುದುರೆ ಸವಾರನಾದ ವೀರನು ತನ್ನ ಕೈಯಲ್ಲಿ ಖಡ್ಗ ಹಿಡಿದಿದ್ದಾನೆ. ಇವನು ಕುಳಿತ ಕುದುರೆಯನ್ನು ಸೇವಕನೊಬ್ಬನು ಹಿಡಿದ್ದಾನೆ. ಇವನ ಹಿಂದೆ ಸೇವಕನೊಬ್ಬ ಛತ್ರಿಯನ್ನು ಹಿಡಿದುಕೊಂಡು ನಡೆಯುತ್ತಿದ್ದು, ಇವನ ಹಿಂಭಾಗದಲ್ಲಿ ಲಿಂಗವನ್ನು ಹಿಡಿದುಕೊಂಡು ನಿಂತಿರುವ ಗಡ್ಡಧಾರಿ ವ್ಯಕ್ತಿಯ ಚಿತ್ರವಿದೆ. ಅಲ್ಲದೆ ಹಂಸ, ಭಕ್ತ, ಆನೆ, ಸಿಂಹಗಳ ಕಾಳಗ, ಜಿಂಕೆ, ಕೋತಿ, ಆಂಜನೇಯ, ಪದ್ಮಗಳ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಪಶ್ಚಿಮದ ಗೋಡೆಯ ಮೇಲ ಶಿವಲಿಂಗ, ನಂದಿ, ಯತಿ, ಒಂಟೆ, ನವಿಲು, ಮಿಥುನ ಶಿಲ್ಪಗಳು, ಮರದ ಮೇಲೆ ಹಣ್ಣು ಕೀಳುತ್ತಿರುವ ಕಪಿಗಳು, ಆನೆ, ಗಿಳಿ, ಅರಳಿದ ಪದ್ಮದ ಉಬ್ಬು ಶಿಲ್ಪಗಳಿವೆ. ಉತ್ತರದ ಗೋಡೆಯ ಮೇಲೆ ಮಿಥುನ ಶಿಲ್ಪಗಳು, ರತಿಯ ಶಿಲ್ಪ, ರತಿ ಅಕ್ಕಪಕ್ಕದಲ್ಲಿ ಗಿಳಿಗಳು, ಪದ್ಮ, ಹಾವಾಡಿಗ, ಆಂಜನೇಯ ಮುಂತಾದವುಗಳ ಉಬ್ಬು ಕೆತ್ತನೆಗಳಿವೆ.

ಗರ್ಭಗೃಹದ ಮೇಲೆ ಶಿಖರವಿದೆ. ಇದು ಹಿಂದೂ ಮುಸ್ಲಿಂ ಶೈಲಿಯಲ್ಲಿದ್ದು ಇದನ್ನು ಇಟ್ಟಿಗೆಗಳಿಂದ ನಿರ್ಮಿಸಲಾಗಿದ್ದು ಇದು ಜೀರ್ಣಾವಸ್ಥೆಯಲ್ಲಿದೆ. ಶಿಖರ ಭಾಗದಲ್ಲಿ ಗೋಳಾಕಾರದ ಗುಮ್ಮಟವಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿರುವ ದ್ವಾರಪಾಲಕರನ್ನು ಭಿತ್ತಿಯ ಭಾಗದಲ್ಲಿ ಉಬ್ಬು ಶಿಲ್ಪಗಳನ್ನು ಗಮನಿಸಿದರೆ ಇದೊಂದು ಶೈವ ದೇವಾಲಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಊರು	–	**ಚಳಗೇರಾ**
ಸ್ಮಾರಕ	–	ವೀರಭದ್ರೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಮಧ್ಯ
ಪಂಥ	–	ಶೈವ
ಶೈಲಿ	–	ವಿಜಯನಗರೋತ್ತರ
ಕಾಲ	–	ಕ್ರಿ.ಶ.ಸು.೧೭–೧೮ನೆಯ ಶತಮಾನ

ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಮೂರು ಗರ್ಭಗೃಹಗಳನ್ನು ಮತ್ತು ಸಭಾ ಮಂಟಪವನ್ನು ಹೊಂದಿದೆ. ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳನ್ನು ನಿರ್ಮಿಸಲಾಗಿದೆ. ಇದು ತ್ರಿಕೂಟಾಚಲ ದೇವಾಲಯವಾಗಿದೆ. ಈ ಗರ್ಭಗೃಹಗಳು ಸುಮಾರು ಐದು ಅಡಿ ಉದ್ದ, ಐದು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದ ಗರ್ಭಗೃಹದಲ್ಲಿ ಶಿವಲಿಂಗ ಅದರ ಎದುರಿಗೆ ನಂದಿಯ ಶಿಲ್ಪಗಳಿವೆ. ಬಲಬದಿಯ ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರದ ವೀರಭದ್ರ ಶಿಲ್ಪವಿದೆ. ಕಪ್ಪು ಶಿಲೆಯಲ್ಲಿ ಇದನ್ನು ಕಡೆಯಲಾಗಿದೆ. ವೀರಭದ್ರನು ನಾಲ್ಕು ಕೈಗಳನ್ನು ಹೊಂದಿದ್ದು ಕತ್ತಿ, ಗುರಾಣಿ, ಬಿಲ್ಲು, ಬಾಣಗಳನ್ನು ಹಿಡಿದಿದ್ದಾನೆ. ಕೆಳಗೆ ದಕ್ಷಬ್ರಹ್ಮನು ಕೈಮುಗಿದು

[illegible]

ನಿಂತಿದ್ದಾನೆ. ಎಡಬದಿಯ ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರದ ಆಂಜನೇಯನ ಶಿಲ್ಪವಿದೆ. ಹೀಗೆ ಮೂರು ಗರ್ಭಗೃಹಗಳಿರುವ ಈ ದೇಗುಲಕ್ಕೆ ಸ್ಥಳೀಯರು ವೀರಭದ್ರ ದೇವಾಲಯವೆಂದು ಕರೆಯುತ್ತಾರೆ.

ಈ ದೇವಾಲಯವು ವಿಶಾಲವಾದ ಸಭಾಮಂಟಪವನ್ನು ಹೊಂದಿದ್ದು ಇದರಲ್ಲಿ ಎಂಟು ಕಂಬಗಳಿವೆ. ಈ ಕಂಬಗಳನ್ನು ಚಚ್ಚೌಕವಾಗಿ ಕಡೆಯಲಾಗಿದೆ. ಈ ಸಭಾಮಂಟಪದಲ್ಲಿಯೇ ಸುಮಾರು ಐದು ಅಡಿ ಎತ್ತರದ ಗಣೇಶನ ಶಿಲ್ಪವಿದೆ. ಈ ದೇವಾಲಯವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹಗಳು ಮಾತ್ರ ಪುರಾತನದಾಗಿವೆ. ಆದರೆ ವೀರಭದ್ರೇಶ್ವರ ದೇವರ ಗರ್ಭಗೃಹದ ಗೋಡೆಗೆ ಟೈಲ್ಸ ಹಚ್ಚಲಾಗಿದೆ. ಉಳಿದ ಗರ್ಭಗೃಹಗಳ ಗೋಡೆಗಳು ಸರಳವಾಗಿವೆ.

ಈ ದೇವಾಲಯದ ಮೇಲ್ಛಾವಣಿಯನ್ನು ಇತ್ತೀಚೆಗೆ ಹಾಕಲಾಗಿದೆ. ಪುರಾತನದ ಯಾವ ಅವಶೇಷಗಳು ಈ ಭಾಗದಲ್ಲಿ ಈಗಿಲ್ಲ. ಹೊರಗೋಡೆಗಳೆಲ್ಲ ಜೀರ್ಣೋದ್ಧಾರಗೊಂಡಿದ್ದು ಸರಳವಾಗಿವೆ. ಮೂರು ಗರ್ಭಗೃಹಗಳ ಮೇಲೆ ಇತ್ತೀಚೆಗೆ ಕಟ್ಟಲಾದ ಮೆಟ್ಟಿಲಾಕಾರದ ಶಿಖರಗಳಿವೆ. ಈ ಶಿಖರಗಳ ಮೇಲೆ ಕಳಸಗಳೂ ಇವೆ. ಈ ದೇವಾಲಯದಲ್ಲಿರುವ ಶಿವಲಿಂಗ, ವೀರಭದ್ರ ಮತ್ತು ಆಂಜನೇಯ ದೇವರುಗಳಿಗೆ ಪ್ರತಿದಿನ ಪೂಜೆ ಸಲ್ಲುತ್ತದೆ.

ವೈಷ್ಣವ ದೇವಾಲಯಗಳು

ಪ್ರಾಚೀನ ಭಾರತದಲ್ಲಿ ಹಿಂದೂ ಧರ್ಮವು ಹುಟ್ಟಿ ಬೆಳೆದುದರ ಜೊತೆಯಲ್ಲೇ ನಾವು ವೈಷ್ಣವ ಧರ್ಮ(ಭಾಗವತ)ದ ಉಗಮವನ್ನು ಕಾಣುತ್ತೇವೆ. ಪೌರಾಣಿಕ ಯುಗದಲ್ಲಿ ವಿಷ್ಣು ವಾಮನನಾಗಿ ಬಂದು ಬಲಿಯಿಂದ ಮೂರು ಪಾದ ಭೂಮಿಯನ್ನು ಬೇಡಿ ಅವನನ್ನು ಪಾತಾಳಕ್ಕೆ ಮೆಟ್ಟಿದನೆಂಬ ಕಥೆ ರೂಢಿಯಲ್ಲಿ ಬಂದಿತು. ವೈದಿಕ ಯುಗದಲ್ಲಿ ಆರ್ಯರು ವಿಷ್ಣುವಿಗೆ ನೀಡಿದ ಮಹತ್ವ ಇವನನ್ನು ಪ್ರಧಾನ ದೇವತೆಗಳ ಸಾಲಿನಲ್ಲಿ ನಿಲ್ಲಿಸಿತು. ಇವನು ಜನರನ್ನು ಕಾಪಾಡುವ, ರಕ್ಷಿಸುವ ದೇವತೆಯೆಂದು ನಂಬಲಾಯಿತು. ಬ್ರಾಹ್ಮಣಗಳ ಕಾಲದಲ್ಲಿ ವಿಷ್ಣುವಿನ ಮಹತ್ವ ಇದಕ್ಕಿಂತ ಹೆಚ್ಚಾಗಿ ಬೆಳೆಯಿತು. ಆಗ ಈತನು ದೇವೋತ್ತಮನಾದನು. ಉಪನಿಷತ್ತುಗಳ ಕಾಲದಲ್ಲಿ ಈತನ ಮಹತ್ವ ಇನ್ನೂ ಹೆಚ್ಚಾಗಿ ಬೆಳೆಯಿತು. ಆಧ್ಯಾತ್ಮಿಕೋನ್ನತಿಯ ಪ್ರವಾಸದಲ್ಲಿ ಆತ್ಮನು ಮುಟ್ಟತಕ್ಕ ಕಡೆಯ ಸ್ಥಾನಕ್ಕೆ ವಿಷ್ಣುವಿನ ಪರಮಪದ ಎಂದು ಕಠೋಪನಿಷತ್ತಿನಲ್ಲಿ ಹೇಳಿದೆ.[೪] ಮಹಾಭಾರತದಲ್ಲಿ ವೈಷ್ಣವಮತದ ಬಗ್ಗೆ ಅನೇಕ ಆಧಾರಗಳು ದೊರೆಯುತ್ತವೆ. ಭಾಗವತ ಧರ್ಮ ಮುಂದೆ ಪರಿಪೂರ್ಣ ಸ್ಥಿತಿಯನ್ನು ತಲುಪಿತು.

ಪುರಾತನ ಕಾಲದಲ್ಲಿ ವೈದಿಕಮತವನ್ನು ಸಮುದಾಯಗಳು ಸೃಷ್ಟಿಸಿಕೊಂಡು, ಮುಂದೆ ಮತ ಧರ್ಮದಲ್ಲಾದ ಮಾರ್ಪಾಡಿನಿಂದ ಅರಸರು ವೈಷ್ಣವ ಮತಕ್ಕೆ ಪರಿವರ್ತನೆಗೊಂಡರು. ಸುಮಾರು ಕ್ರಿ.ಶ.ದ ವೇಳೆಗೆ ಭಾಗವತ ತತ್ವ ಅಥವಾ ವೈಷ್ಣವ ಧರ್ಮ ರೂಪಗೊಂಡಿತೆಂದು ಹೇಳಬಹುದು. ಭಕ್ತಿ ಮತ್ತು ಅಹಿಂಸೆಗಳು ಭಾಗವತ ಧರ್ಮದ ಪ್ರಮುಖ ಲಕ್ಷಣಗಳು. ಕೃಷ್ಣನು ಬೋಧಿಸಿದ ಭಗವದ್ಗೀತೆ, ವಿಷ್ಣುಪುರಾಣ ಹಾಗೂ ವಿಷ್ಣುಸ್ಮೃತಿಗಳು ವೈಷ್ಣವ ತತ್ವದ

ಬೋಧನೆಗಳನ್ನು ವಿವರಿಸುವ ಗ್ರಂಥಗಳಾಗಿವೆ. ಕ್ರಿ.ಶ.ಆರನೆಯ ಶತಮಾನದವರೆಗೆ ವಿಷ್ಣು ತ್ರಿಮೂರ್ತಿಗಳಲ್ಲಿ ಒಬ್ಬನಾದನು. ವಿಷ್ಣು ಪೂಜೆಯು ಪ್ರಚಾರಗೊಳ್ಳಲು ಹಲವು ಗ್ರಂಥಗಳು ಬರೆಯಲ್ಪಟ್ಟವು. ಅವುಗಳಲ್ಲಿ ಭಾಗವತ ಪುರಾಣವು ಶ್ರೇಷ್ಠ ಗ್ರಂಥವಾಗಿದೆ.

ವಿಷ್ಣುವಿನ ವಿವಿಧ ಅವತಾರಗಳ ಪರಿಕಲ್ಪನೆ ಆಗಲೇ ಸಮಾಜದಲ್ಲಿ ರೂಪಗೊಂಡಿದ್ದವು. ಹರಿ, ಕೃಷ್ಣ, ಮುರಾರಿ, ವಿಷ್ಣು, ವಾಸುದೇವ, ನಾರಾಯಣ ಎನ್ನುವ ನಾಮಗಳು ವಿಷ್ಣುವಿನ ಆರಾಧನೆಯ ಅನೇಕ ದೇವಾಲಯಗಳು ಸಾಮಾನ್ಯವಾಗಿ ಎಲ್ಲ ಅರಸು ಮನೆತನಗಳ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡಿವೆ. ಇವುಗಳು ಅನೇಕ ಪ್ರದೇಶಗಳಲ್ಲಿವೆ. ಕುಷ್ಟಗಿ ತಾಲ್ಲೂಕಿನ ಪರಿಸರದಲ್ಲಿಯೂ ವೈಷ್ಣವ ಧರ್ಮದ ಪುರಾತನ ದೇವಾಲಯಗಳಿವೆ. ಅವುಗಳು ಕುಷ್ಟಗಿ, ಚಳಗೇರಾ, ತಾವರಗೆರೆ, ಸಿರಗುಪ್ಪಿ, ಶ್ಯಾಡಲಗೇರಿ ಮತ್ತು ಹನುಮಸಾಗರಗಳಲ್ಲಿ ಇವೆ. ಇವುಗಳು ಕಲ್ಯಾಣ ಚಾಲುಕ್ಯರ ಎರಡು, ಕಲಚುರಿಗಳ ಒಂದು, ವಿಜಯನಗರದ ಮೂರು ಮತ್ತು ಆಧುನಿಕ ಶೈಲಿಯಲ್ಲಿ ಒಂದು ಹೀಗೆ ಒಟ್ಟು ಏಳು ದೇವಾಲಯಗಳಿವೆ. ಈ ದೇವಾಲಯಗಳ ವಾಸ್ತುಶೈಲಿಯನ್ನು ಇಲ್ಲಿ ಅಧ್ಯಯನ ವಿವರಿಸಲಾಗಿದೆ.

ಊರು	–	**ಚಳಗೇರಾ**
ಸ್ಮಾರಕ	–	ಲಕ್ಷ್ಮೀ ದೇವಾಲಯ
ಸ್ಥಳ	–	ಗ್ರಾಮದ ಮಧ್ಯ
ಪಂಥ	–	ವೈಷ್ಣವ
ಶೈಲಿ	–	ಕಲ್ಯಾಣದ ಕಲಚುರಿಗಳು
ಕಾಲ	–	ಕ್ರಿ.ಶ.ಸು.೧೧೭೨

ಈ ದೇವಾಲಯದ ಎದುರಿಗೆ ಇರುವ ಕ್ರಿ.ಶ.೧೧೭೨ರ ಶಾಸನದಿಂದ ಕಲಚುರಿ ಸೋವಿದೇವನು ರಾಜ್ಯಭಾರ ಮಾಡುತ್ತಿರುವಾಗ, ಬೂಚಮದಂಡನಾಯಕನು ಕಲ್ಲಂಗೇರಿಯಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಶಾಸನದಲ್ಲಿ ಚಳಗೇರಾ ಗ್ರಾಮವನ್ನು ಕಲ್ಲಂಗೇರಿ ಎಂದು ಉಲ್ಲೇಖಿತವಾಗಿದೆ. ಈ ದೇವಾಲಯ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಶಾಸನದಲ್ಲಿ ಈ ದೇವಾಲಯವನ್ನು ಲಕ್ಷ್ಮಿನಾರಾಯಣ ದೇವಾಲಯ ಎಂದು ಕರೆಯಲಾಗಿದೆ. ಈಗ ಲಕ್ಷ್ಮೀ ದೇವಾಲಯ ಎಂದು ಕರೆಯಲಾಗುತ್ತದೆ. ಪೂರ್ವಾಭಿ ಮುಖವಾಗಿರುವ ಈ ದೇವಾಲಯವು ಗರ್ಭಗೃಹ ಪ್ರದಕ್ಷಣಪಥ, ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದ ಒಳಗೋಡೆ ತುಂಬಾ ಟೈಲ್ಸ ಹಚ್ಚಲಾಗಿದೆ. ಮೂಲ ಲಕ್ಷ್ಮಿನಾರಾಯಣ ವಿಗ್ರಹವು ಭಗ್ನಗೊಂಡ ನಂತರ ಲಕ್ಷ್ಮೀ ವಿಗ್ರಹವನ್ನು ಪುನರ್ ಪ್ರತಿಷ್ಠಾಪಿಸಲಾಗಿದೆ. ಸುಖಾಸೀನವಾಗಿ ಕುಳಿತಿರುವ ಲಕ್ಷ್ಮಿಯು ನಾಲ್ಕು ಕೈಗಳನ್ನು ಹೊಂದಿದ್ದು ಎರಡೂ ಕೈಗಳಲ್ಲಿ ಶಂಖ, ಚಕ್ರವಿದೆ. ಇನ್ನೆರೆಡು ಕೈಗಳು ಅಭಯ, ವರದ ಮುದ್ರೆಯಲ್ಲಿವೆ. ಈ ವಿಗ್ರಹವು ಸುಮಾರು ನಾಲ್ಕು ಅಡಿ ಎತ್ತರವಾಗಿದೆ. ಲಕ್ಷ್ಮೀ ಹಿಂಭಾಗದಲ್ಲಿ ಪ್ರಭಾವಳಿ ಇದ್ದು, ಹೂಬಳ್ಳಿಯಿಂದ ಅಲಂಕೃತವಾಗಿದೆ. ಮೇಲ್ಭಾಗದ ಮಧ್ಯದಲ್ಲಿ ಮಕರ ಮುಖವಿದೆ.

ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಅತ್ಯಂತ ಸರಳವಾದ ಪಟ್ಟಿಕೆಯಿಂದ ಕೂಡಿದೆ. ಲಲಾಟಭಾಗವು ಸರಳವಾಗಿದೆ. ಗರ್ಭಗೃಹದ ಮುಂದಿರುವ ವಿಶಾಲವಾದ ಸಭಾ ಮಂಟಪ ಒಂಬತ್ತು ಅಂಕಣಗಳಿಂದ ಕೂಡಿದೆ. ಇಲ್ಲಿ ಆರು ಕಂಬಗಳಿವೆ. ಇವುಗಳು ಕೆಳಗಿನಿಂದ ಅರ್ಧಭಾಗದವರೆಗೆ ಚೌಕಾಕಾರ, ಅಷ್ಟಕೋನ. ವೃತ್ತಾಕಾರದ ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ಈ ದೇವಾಲಯವು ಸುಮಾರು ಮೂರು ಅಡಿಗಳಷ್ಟು ಎತ್ತರವಾದ ಸರಳ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಭಿತ್ತಿ ಭಾಗವು ಸಮತಟ್ಟಾದ ಕಟ್ಟಡವನ್ನು ಹೊಂದಿದೆ. ಈ ದೇಗುಲದ ಮುಂದಿರುವ ಶಾಸನದಲ್ಲಿ ಬೂಚಮದಂಡನಾಯಕನು, ಲಕ್ಷ್ಮೀದೇವದಂಡ ನಾಯಕನ ಅನುಮತಿಯ ಮೇರೆಗೆ ಈ ದೇವಾಲಯಕ್ಕೆ ಭೂಮಿಯನ್ನು ದತ್ತಿ ನೀಡಿರುವ, ಗ್ರಾಮದ ವಿವಿಧ ಜನವರ್ಗವು ದಾನಗಳನ್ನು ನೀಡಿದ ಬಗ್ಗೆ ಉಲ್ಲೇಖಗಳಿವೆ.

ಈಗಲೂ ಪ್ರತಿನಿತ್ಯ ಇಲ್ಲಿ ಪೂಜೆ ನಡೆಯುತ್ತದೆ. ವಿಜಯದಶಮಿಯಲ್ಲಿ ಪದ್ಮ ವೆಂಕಟರಮಣ ಕಲ್ಯಾಣೋತ್ಸವ ವಿಜೃಂಭಣೆಯಿಂದ ಜರಗುತ್ತದೆ. ದಸರಾ ದಿನಗಳಲ್ಲಿ ಒಂಬತ್ತು ದಿನ ವಿಶೇಷ ಪೂಜೆ ಜರಗುತ್ತದೆ.

ಊರು	–	**ಶ್ಯಾಡಲಗೇರಿ**
ಸ್ಮಾರಕ	–	ನಾರಾಯಣ ದೇವಾಲಯ
ಸ್ಥಳ	–	ಗ್ರಾಮದ ಪಶ್ಚಿಮಕ್ಕೆ
ಶೈಲಿ	–	ಕಲ್ಯಾಣ ಚಾಲುಕ್ಯ
ಪಂಥ	–	ವೈಷ್ಣವ
ಕಾಲ	–	ಕ್ರಿ.ಶ.ಸು.೧೧–೧೨ನೆಯ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮಾತ್ರ ಇದೆ. ಸಭಾಮಂಟಪದ ಸಂಪೂರ್ಣ ಭಾಗ ಹಾಳಾಗಿದೆ. ತಲವಿನ್ಯಾಸದಿಂದ ಇದನ್ನು ಗುರುತಿಸ ಬಹುದಾಗಿದೆ. ಗರ್ಭಗೃಹವು ಸುಮಾರು ಎಂಟು ಅಡಿ ಉದ್ದ, ಆರು ಅಡಿ ಅಗಲವಾಗಿದೆ. ಇದರ ಮಧ್ಯದಲ್ಲಿ ಸುಮಾರು ಮೂರುವರೆ ಅಡಿ ಎತ್ತರದ ಸೂರ್ಯದೇವರ ಶಿಲ್ಪವಿದೆ. ಆದರೆ ಸ್ಥಳೀಯರು ಇದಕ್ಕೆ ನಾರಾಯಣ ದೇವರೆಂದು ಹೇಳುತ್ತಾರೆ. ಈ ಸೂರ್ಯದೇವರ ತಲೆಯ ಭಾಗ ಸಂಪೂರ್ಣ ಹಾಳಾಗಿದೆ. ನಿಂತ ಭಂಗಿಯಲ್ಲಿರುವ ಸೂರ್ಯದೇವರು ತನ್ನೆರಡು ಕೈಗಳಲ್ಲಿ ಹೂವುಗಳ ದಂಟನ್ನು ಹಿಡಿದಿದ್ದು, ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಕಾಲುಗಳಲ್ಲಿ ಕಾಲ್ಗಡಗಳನ್ನು ಕೆತ್ತಲಾಗಿದೆ. ಪ್ರಭಾವಳಿಯಲ್ಲಿ ಹೂಬಳ್ಳಿಯಿಂದ ಅಲಂಕಾರ ಮತ್ತು ಸ್ತಂಭಗಳನ್ನು ಕೆತ್ತಲಾಗಿದೆ. ಸ್ತಂಭಗಳಿಗೆ ಹೊಂದಿಕೊಂಡು ಕೆಳಭಾಗದಲ್ಲಿ ದಂಡ–ಪಿಂಗಳರ ಶಿಲ್ಪಗಳಿವೆ.

ಗರ್ಭಗೃಹದ ಭುವನೇಶ್ವರಿಯಲ್ಲಿ ಅರಳಿದ ಪದ್ಮವಿದ್ದು, ಇದಕ್ಕೆ ಚಾಕಾಕಾರವಾಗಿ ಪಟ್ಟಿಕೆಯಿಂದ ಅಲಂಕಾರಗೊಳಿಸಿದ್ದಾರೆ. ಉದ್ದವಾದ, ದಪ್ಪವಾದ ಕಲ್ಲುಗಳಿಂದ ಮೇಲ್ಛಾವಣಿ ಯನ್ನು ಮುಚ್ಚಲಾಗಿದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡದಲ್ಲಿ ಪದ್ಮಪಟ್ಟಿಗಳಿಂದ ಅಲಂಕೃತ ಪಟ್ಟಿಕೆ, ಅರ್ಧಗಂಭಗಳಿವೆ. ಮೇಲೆ ಲಲಾಟಭಾಗದಲ್ಲಿ ಯಾವುದೇ ಕೆತ್ತನೆ ಇಲ್ಲ. ಈ

[illegible]

[illegible]

[illegible]

ದೇವಾಲಯವು ಒಂದು ಅಡಿ ಎತ್ತರದ ಸರಳವಾದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ದೇವಾಲಯದ ಹೋರಗೋಡೆಯನ್ನು ದೊಡ್ಡ-ದೊಡ್ಡದಾದ ಕಲ್ಲುಗಳನ್ನು ಕೊರೆದು ಸಮನಾಗಿ ಜೋಡಿಸಿ ಕಟ್ಟಲಾಗಿದೆ. ಯಾವುದೇ ಅಲಂಕಾರಣ ಕೆತ್ತನೆಗಳಿಲ್ಲ.

ಊರು	–	**ತಾವರಗೆರೆ**
ಸ್ಮಾರಕ	–	ಲಕ್ಷ್ಮಿ ವೆಂಕಟೇಶ್ವರ ದೇವಾಲಯ
ಸ್ಥಳ	–	ಗ್ರಾಮದ ಮಧ್ಯ
ಪಂಥ	–	ವೈಷ್ಣವ
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೨ನೆಯ ಶತಮಾನ

ಈ ದೇವಾಲಯವು ಪೂರ್ವಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದ ಗೋಡೆಗೆ ಟೈಲ್ಸ ಹಚ್ಚಲಾಗಿದ್ದು ಮಧ್ಯದಲ್ಲಿ ಸುಮಾರು ಮೂರು ಅಡಿ ಎತ್ತರದ ಲಕ್ಷ್ಮಿವೆಂಕಟೇಶ್ವರ ಶಿಲ್ಪವಿದೆ. ಈ ಶಿಲ್ಪದ ಹಿಂದೆ ಬಳ್ಳಿಯಿಂದ ಅಲಂಕೃತವಾದ ಪ್ರಭಾವಳಿ ಇದ್ದು ಮೇಲ್ಭಾಗದಲ್ಲಿ ಮಕರ ತೋರಣವಿದೆ. ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡದಲ್ಲಿ ಬಳ್ಳಿ ಕೆತ್ತನೆಯಿರುವ ಮತ್ತು ಸರಳವಾದ ಪಟ್ಟಿಕೆ ಅರ್ಧಗಂಬಗಳಿವೆ. ಈ ಅರ್ಧಗಂಬಗಳ ಕೆಳಗೆ ಪೂರ್ಣ ಕಂಬಗಳಿವೆ. ಲಲಾಟಭಾಗದಲ್ಲಿ ಗಜಲಕ್ಷ್ಮಿ ಇದ್ದು ಮೇಲೆ ಮುಂಚಾಚು ಇದೆ.

ಸರಳವಾದ ಅಂತರಾಳವಿದೆ. ಇದರ ಮುಂಭಾಗದಲ್ಲಿ ಸಭಾಮಂಟಪವಿದೆ. ಮಧ್ಯದ ನಾಲ್ಕು ಕಂಬಗಳು ಕಲ್ಯಾಣ ಚಾಲುಕ್ಯ ಮಾದರಿಯ ಪ್ರತೀಕವಾಗಿದ್ದು, ಸುಂದರವಾದ ಕೆತ್ತನೆಯಿಂದ ಕಂಗೊಳಿಸುತ್ತವೆ. ಈ ಕಂಬಗಳು ಕೆಳಭಾಗದಿಂದ ಚೌಕಾಕಾರ, ಅಷ್ಟಕೋನ, ವೃತ್ತ, ಚೌಕಾಕಾರ ವೃತ್ತಾಕಾರವಾಗಿವೆ. ಮಧ್ಯದ ಭುವನೇಶ್ವರಿಯಲ್ಲಿ ಕೆಳಮುಖವಾಗಿ ಅರಳಿದ ಕಮಲದ ಕೆತ್ತನೆ ಇದೆ. ಮುಖಮಂಟಪವು ಇತ್ತೀಚೆಗೆ ನಿರ್ಮಿಸಲಾಗಿದೆ. ಗರ್ಭಗೃಹ ಮತ್ತು ಅಂತರಾಳದ ಹೊರ ಗೊಡೆಯನ್ನು ಹೊರತು ಪಡಿಸಿ ಇನ್ನುಳಿದೆಲ್ಲ ಭಾಗದ ಕಟ್ಟಡ ಜೀರ್ಣೋದ್ಧಾರಗೊಂಡಿದೆ.

ಈ ದೇವಾಲಯವು ಸುಮಾರು ಎರಡು ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಈ ಅಧಿಷ್ಠಾನವು ತ್ರಿಪಟ್ಟಕುಮುದ ಹಾಗೂ ಕಂಠಭಾಗಗಳಿಂದ ಕೂಡಿದೆ. ಹೋರಗೋಡೆಯು ಸರಳವಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವಿದೆ. ಈ ಶಿಖರದ ಭಾಗದಲ್ಲಿ ಸ್ತೂಪಿ ಹಾಗೂ ಸುತ್ತಲೂ ಕೀರ್ತಿಮುಖಗಳಿವೆ. ಶಿಖರದ ಭಾಗದಲ್ಲಿರುವ ಶಿಲ್ಪಗಳು ಗುರುತಿಸಲಾಗದ ಸ್ಥಿತಿಯಲ್ಲಿವೆ. ಈ ದೇವಾಲಯವು ವಿಶಾಲವಾದ ಆವರಣದಲ್ಲಿದೆ. ದೇವಾಲಯದ ಎದುರಿಗೆ ಗರುಡ ಆಂಜನೇಯ ಮತ್ತು ವೆಂಕಟೇಶನ ಉಬ್ಬು ಕೆತ್ತನೆ ಇದೆ. ಇಂದಿಗೂ ಪ್ರತಿನಿತ್ಯ ಇಲ್ಲಿ ಪೂಜೆ ನಡೆಯುತ್ತದೆ. ವಿಜಯದಶಮಿ ಸಂದರ್ಭದಲ್ಲಿ ವಿಶೇಷವಾಗಿ ಎಣ್ಣೆಗಂಬ ಏರುವ ಸ್ಪರ್ಧೆ ಮತ್ತು ವಿವಿಧ ಕಾರ್ಯಕ್ರಮಗಳು ಜರಗುವವು.

[illegible]

ಊರು	–	**ತಾವರಗೆರೆ**
ಸ್ಮಾರಕ	–	ಆಂಜನೇಯ ದೇವಾಲಯ
ಸ್ಥಳ	–	ವೈಜನಾಥ ದೇವಾಲಯದ ಬಳಿ
ಶೈಲಿ	–	ವಿಜಯನಗರ
ಪಂಥ	–	ವೈಷ್ಣವ
ಕಾಲ	–	ಕ್ರಿ.ಶ.ಸು.೧೬ನೆಯ ಶತಮಾನ

ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ ಮತ್ತು ಸಭಾಮಂಟಪಗಳಿಂದ ಕೂಡಿದೆ. ಸುಮಾರು ಏಳು ಅಡಿ ಉದ್ದ, ಏಳು ಅಡಿ ಅಗಲವಾದ ಅಳತೆಯ ಗರ್ಭಗೃಹದ ಮಧ್ಯದಲ್ಲಿ ಸುಮಾರು ಐದು ಅಡಿ ಎತ್ತರದ ಆಂಜನೇಯ ಉಬ್ಬುಶಿಲ್ಪವಿದೆ. ಮೇಲೆ ಭುವನೇಶ್ವರಿ ಯಲ್ಲಿ ಯಾವುದೇ ಕೆತ್ತನೆ ಇಲ್ಲ. ಗರ್ಭಗೃಹದ ಪ್ರವೇಶದ್ವಾರವು ಅತ್ಯಂತ ಸರಳವಾಗಿದೆ. ಎರಡು ಅರ್ಧಗಂಬಗಳಿವೆ. ಬಾಗಿಲುವಾಡದ ಪಕ್ಕದಲ್ಲಿ ಎರಡು ಅರ್ಧಗಂಬಗಳಿವೆ. ಈ ಕಂಬಗಳ ಕೆಳ ಭಾಗದಲ್ಲಿ ಪದ್ಮಗಳನ್ನು ಕೆತ್ತಲಾಗಿದೆ.

ಸಭಾಮಂಟಪವು ಸುಮಾರು ಹತ್ತು ಅಡಿ ಉದ್ದ, ಹತ್ತು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಇಲ್ಲಿ ಎರಡು ಚೌಕಾಕಾರವಾದ ಸರಳ ಕೆತ್ತನೆಯ ಕಂಬಗಳಿದ್ದು, ಇವುಗಳಿಗೆ ಮೇಲೆ ಬೋದಿಗೆಯನ್ನು ಅಳವಡಿಸಲಾಗಿದೆ. ಈ ಸಭಾಮಂಟಪದ ಮೇಲ್ಛಾವಣಿಯನ್ನು ಕಲ್ಲುಗಳಿಂದ ಮುಚ್ಚಲಾಗಿದೆ. ಈ ಮಂಟಪಕ್ಕೆ ಮುಂಚಾಚು ಕಲ್ಲುಗಳನ್ನು ಹಾಕಲಾಗಿದೆ. ಈ ಮುಂಚಾಚುವಿನ ಕಲ್ಲುಗಳ ಒಳಭಾಗದಲ್ಲಿ ಕೈಮುಗಿದು ನಿಂತಿರುವ ಭಕ್ತ, ಸೊಂಡಿಯಲ್ಲಿ ಸರಪಳಿ ಹಿಡಿದ ಆನೆ, ಓಡುತ್ತಿರುವ ಜಿಂಕೆಗಳ ಶಿಲ್ಪಗಳಿವೆ.

ಈ ದೇವಾಲಯವನ್ನು ಸುಮಾರು ಎರಡು ಅಡಿ ಎತ್ತರದ ಸರಳವಾದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ದೇವಾಲಯದ ಹೋರಗೋಡೆಯ ಮೇಲೆ ಯಾವುದೇ ಕೆತ್ತನೆ ಇಲ್ಲ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವಿದೆ. ಇದರಲ್ಲಿ ಅರೆಗಂಬಗಳಿಂದ ಬಂಧಿತವಾದ ದೇವಕೋಷ್ಠಕ ಮತ್ತು ಕೀರ್ತಿಮುಖಗಳಿವೆ. ಶಿಖರದ ಕಟ್ಟಡಕ್ಕೆ ಕಣಶಿಲೆ, ಗಾರೆ, ಗಚ್ಚುಗಳನ್ನು ಬಳಸಲಾಗಿದೆ. ದೇವಾಲಯದ ಗೋಡೆಗೆ ಬಣ್ಣ ಹಚ್ಚಲಾಗಿದೆ.

ಊರು	–	**ಶಿರಗುಪ್ಪಿ**
ಸ್ಮಾರಕ	–	ಆಂಜನೇಯ ದೇವಾಲಯ
ಸ್ಥಳ	–	ಗ್ರಾಮದ ಪೂರ್ವಕ್ಕೆ
ಪಂಥ	–	ವೈಷ್ಣವ
ಶೈಲಿ	–	ವಿಜಯನಗರ
ಕಾಲ	–	ಕ್ರಿ.ಶ.ಸು.೧೭ನೆಯ ಶತಮಾನ

ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ ಮತ್ತು ತೆರೆದ ಸಭಾ ಮಂಟಪವನ್ನು ಹೊಂದಿದೆ. ಗರ್ಭಗೃಹವು ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಒಳಗೆ ಐದು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಮೇಲೆ ಭುವನೇಶ್ವರಿಯಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಗರ್ಭಗೃಹದ ಪ್ರವೇಶದ್ವಾರದ ದ್ವಾರಬಂಧದಲ್ಲಿ ಹೂವಿನ ಮತ್ತು ಸರಳವಾದ ಪಟ್ಟಿಕೆಯಿದೆ. ಲಲಾಟಭಾಗದಲ್ಲಿ ಗಣೇಶ ಮತ್ತು ಪದ್ಮಗಳಿವೆ. ಮೇಲೆ ಮುಂಚಾಚು ಇದೆ. ಗರ್ಭಗೃಹದ ಪ್ರವೇಶದ್ವಾರದ ಎರಡು ಬದಿಯಲ್ಲಿ ಒಂದೊಂದು ಶಿಲ್ಪಗಳಿವೆ. ಆದರೆ ಅವುಗಳ ಮೇಲೆ ಬಣ್ಣ ಹಚ್ಚಿರುವುದರಿಂದ ಅಸ್ಪಷ್ಟವಾಗಿವೆ.

ಈ ದೇವಾಲಯದ ಸಭಾಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಇದರಲ್ಲಿ ಎರಡು ಕಂಬಗಳಿವೆ. ದೇವಾಲಯವು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನ ಭಾಗವು ಸರಳವಾದ ಕಟ್ಟಡವನ್ನು ಹೊಂದಿದೆ. ಭಿತ್ತಿ ಭಾಗದಲ್ಲಿ ಗೋಡೆಯ ಮೇಲೆ ಹಾವು ಮತ್ತು ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ. ಮೇಲ್ಭಾಗದಲ್ಲಿ ಪದ್ಮಗಳ ಪಟ್ಟಿ ಇದೆ. ಇದರ ಮೇಲ್ಭಾಗದಲ್ಲಿ ದ್ವಿತಲ ಮಾದರಿಯ ಶಿಖರವಿದೆ.

ಗರ್ಭಗೃಹದ ಮೇಲಿರುವ ಶಿಖರವು ದೇವಕೋಷ್ಠಕ, ಸ್ತೂಪಿ, ಕಳಸ ಭಾಗಗಳನ್ನು ಒಳಗೊಂಡಿದೆ. ಈ ದೇವಾಲಯದ ಎದುರಿಗೆ ಪುಷ್ಕರಣಿ ಮತ್ತು ಗರುಡ ಕಂಬವಿದೆ. ಇದರ ಕೆಳಗೆ ಗಜಲಕ್ಷ್ಮಿ ವಿಶಾಲವಾದ ಶಿಲ್ಪಗಳಿವೆ. ಈ ದೇಗುಲದ ಮುಂದೆ ವಿಶಾಲವಾದ ಆವರಣವಿದೆ. ಈ ಆವರಣದ ಪಶ್ಚಿಮ ದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಈ ಪ್ರವೇಶದ್ವಾರದ ಹತ್ತಿರ ಶಾಸನೋಕ್ತ (ಪ್ರಕಟಿತ) ತುಜುಗೋಳ ವೀರಗಲ್ಲಿದೆ. ಈ ದೇವಾಲಯದಲ್ಲಿ ಪ್ರತಿದಿನ ಪೂಜಾ ಕಾರ್ಯಗಳು ನೆರವೇರುತ್ತವೆ. ಯುಗಾದಿ ಅಮವಾಸ್ಯೆ ಮತ್ತು ಪಾಡ್ಯ ದಿನಗಳಂದು ಎರಡು ದಿನ ಅದ್ಧೂರಿಯಾಗಿ ಜಾತ್ರೆ ನೆರವೆರುತ್ತದೆ. ದೀಪಾವಳಿಯಿಂದ ಛಟ್ಟಿ ಅಮವಾಸ್ಯೆಯವರೆಗೆ ಒಂದು ತಿಂಗಳ ಕಾಲ ಕಾರ್ತೀಕದ ವಿಶೇಷ ಪೂಜೆ ನಡೆಯುತ್ತದೆ.

ಊರು	–	**ಹನುಮಸಾಗರ**
ಸ್ಮಾರಕ	–	ಆಂಜನೇಯ ದೇವಾಲಯ
ಸ್ಥಳ	–	ಗ್ರಾಮದ ನೈರುತ್ಯಕ್ಕೆ
ಪಂಥ	–	ವೈಷ್ಣವ
ಶೈಲಿ	–	ವಿಜಯನಗರ
ಕಾಲ	–	ಕ್ರಿ.ಶ.ಸು.೧೭ನೆಯ ಶತಮಾನ

ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ದಕ್ಷಿಣಾಮುಖವಾಗಿದ್ದು ಗರ್ಭಗೃಹ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಗ್ರಾಮದ ನೈರುತ್ಯದಲ್ಲಿ ಒಂದು ಹಳೆಯ ಬಾವಿ ಇದೆ. ಇದನ್ನು ಸ್ಥಳಿಯವಾಗಿ ತಂಗಮ್ಮನ ಬಾವಿ ಎಂದು ಕರೆಯಲಾಗುತ್ತದೆ.

ಈ ಬಾವಿಗೆ ಇಳಿಯಲು ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳಿವೆ. ಮುಂದೆ ಬಾವಿಯನ್ನು ಪ್ರವೇಶಿಸಲು ದೊಡ್ಡ ಕಮಾನು ಇದೆ. ಈ ಕಮಾನಿನ ಎದುರಾಗಿ ದಕ್ಷಿಣಾಭಿಮುಖವಾಗಿ ಈ ದೇವಾಲಯವಿದೆ. ಸಭಾಮಂಟಪಕ್ಕಿಂತ ಗರ್ಭಗೃಹ ಎತ್ತರದಲ್ಲಿದೆ. ಈ ಗರ್ಭಗೃಹದ ಪ್ರವೇಶ ದ್ವಾರದ ಬಾಗಿಲವಾಡವು ಯಾವುದೇ ಕೆತ್ತನೆ ಇಲ್ಲದೆ ಅತ್ಯಂತ ಸರಳವಾಗಿದೆ. ಒಳಗೆ ಸುಮಾರು ನಾಲ್ಕು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಎರಡು ಕಂಬಗಳಿವೆ. ಇವುಗಳು ಕೆಳಗೆ ಚೌಕಾಕಾರ ಮಧ್ಯೆ ವೃತ್ತಾಕಾರ ಮೇಲೆ ಫಲಕ ಬೋದಿಗೆಗಳನ್ನು ಒಳಗೊಂಡಿವೆ. ಇಲ್ಲಿ ಮೂರು ಅಂಕಣಗಳಿವೆ. ಮೇಲ್ಛಾವಣಿಯನ್ನು ಲಂಬವಿಸ್ತೃತ ಆಕಾರದಲ್ಲಿ ಕಲ್ಲುಗಳನ್ನು ಹಾಸಲ್ಪಟ್ಟಿದೆ. ಭುವನೇಶ್ವರಿಯಲ್ಲಿ ಯಾವುದೇ ಶಿಲ್ಪವಿಲ್ಲ.

ಈ ದೇವಾಲಯದ ಗರ್ಭಗೃಹದ ಮೇಲೆ ಮೂರು ಹಂತದ ಚಿಕ್ಕ ಶಿಖರವಿದೆ. ಈ ಶಿಖರ ಭಾಗ ಮಾತ್ರ ನೆಲದ ಮೇಲೆ ಕಾಣುತ್ತದೆ. ಇನ್ನುಳಿದಂತೆ ಈ ದೇವಾ ಮಾತ್ರ ನೆಲದ ಮೇಲೆ ಕಾಣುತ್ತದೆ. ಈ ದೇವಾಲಯವನ್ನು ನೆಲದಲ್ಲಿ ಕೊರೆದು ನಿರ್ಮಿಸಿರುವುದರಿಂದ ಇದರ ಹೊರಗೋಡೆ ಕಂಡು ಬರುವುದಿಲ್ಲ. ಇದರ ಎದುರಿಗೆ ಸುಂದರ ಕೆತ್ತನೆಯಿಂದ ಕೂಡಿದ ಅಲಂಕೃತವಾದ ಬಾವಿ ಇದೆ.

ಊರು	–	**ಕುಷ್ಟಗಿ**
ಸ್ಮಾರಕ	–	ಆಂಜನೇಯ ದೇವಾಲಯ
ಸ್ಥಳ	–	ಗ್ರಾಮದ ನೈರುತ್ಯಕ್ಕೆ
ಪಂಥ	–	ವೈಷ್ಣವ
ಶೈಲಿ	–	ಆಧುನಿಕ ಶೈಲಿ
ಕಾಲ	–	ಕ್ರಿ.ಶ.ಸು.೧೯ನೆಯ ಶತಮಾನ

ಕುಷ್ಟಗಿಯ ನೈರುತ್ಯ ಭಾಗದಲ್ಲಿರುವ ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಇದು ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಆರು ಅಡಿ ಉದ್ದ, ಆರು ಅಡಿ ಅಗಲವಾದ ಅಳತೆಯ ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಗರ್ಭಗೃಹದ ಪ್ರವೇಶದ್ವಾರವು ಅತ್ಯಂತ ಸರಳವಾಗಿದೆ. ಸಭಾಮಂಟಪವು ಎಂಟು ಅಡಿ ಉದ್ದ ಎಂಟು ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳನ್ನು ಚೌಕಾಕಾರವಾಗಿ ಕಡೆಯಲಾಗಿದೆ. ಮಧ್ಯದ ಭುವೇಶ್ವರಿಯಲ್ಲಿ ಅರಳಿದ ಕಮಲ ಬಿಡಿಸಲಾಗಿದೆ.

ಈ ದೇವಾಲಯವು ಸುಮಾರು ಎರಡು ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಅಧಿಷ್ಠಾನ ಭಾಗವು ಸರಳವಾಗಿದೆ. ದೇವಾಲಯದ ಭಿತ್ತಿ ಭಾಗವು ಸರಳವಾಗಿದೆ. ಗರ್ಭಗೃಹದ ಮೇಲೆ ಇತ್ತೀಚೆಗೆ ನಿರ್ಮಿಸಲಾದ ಶಿಖರವಿದೆ. ದೇವಾಲಯದ ಕಟ್ಟಡವನ್ನು ಕಲ್ಲು ಸಿಮೆಂಟ್‌ಗಳನ್ನು ಬಳಸಿ ಕಟ್ಟಲಾಗಿದ್ದು, ದೇವಾಲಯ ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ.

ಇತರೆ ದೇವಾಲಯ

ಕುಷ್ಟಗಿ ಪ್ರದೇಶದಲ್ಲಿರುವ ದೇವಾಲಯಗಳನ್ನು ಶೈವ, ವೈಷ್ಣವ ಮತ್ತು ಇತರೆ ದೇವಾಲಯಗಳೆಂದು ವರ್ಗೀಕರಿಸಿಕೊಂಡು ಅವುಗಳ ವಾಸ್ತುಶೈಲಿಯನ್ನು ವಿವರಿಸಲಾಗಿದೆ. ಕೆಲವು ದೇವಾಲಯಗಳು ಯಾವ ಧರ್ಮದ್ದೆಂದು ಗುರುತಿಸಲಿಕ್ಕೆ ಆಗುವುದಿಲ್ಲ. ಯಾವುದೇ ಕೆತ್ತನೆ, ಶಿಲ್ಪಗಳಿಲ್ಲದಿರುವುದೇ ಕಾರಣವಾಗಿದೆ. ಇಂಥ ಒಂದು ದೇವಾಲಯ ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿದೆ.

ಊರು	–	**ಅಂಟೂರಠಾಣ**
ಸ್ಮಾರಕ	–	ದ್ಯಾಮವ್ವ ದೇವಾಲಯ
ಸ್ಥಳ	–	ಗ್ರಾಮದ ಮಧ್ಯದಲ್ಲಿ
ಪಂಥ	–	
ಶೈಲಿ	–	ಕಲ್ಯಾಣ ಚಾಲುಕ್ಯ
ಕಾಲ	–	ಕ್ರಿ.ಶ.ಸು.೧೧–೧೨ನೆಯ ಶತಮಾನ

ಈ ದೇವಾಲಯವು ಗ್ರಾಮದ ಮಧ್ಯಭಾಗದಲ್ಲಿದ್ದು ಗರ್ಭಗೃಹ ಮತ್ತು ತೆರೆದ ಮಂಟಪಗಳಿಂದ ಕೂಡಿದೆ. ಗರ್ಭಗೃಹವು ಸುಮಾರು ಆರು ಅಡಿ ಉದ್ದ, ಒಂಬತ್ತು ಅಡಿ ಅಗಲವಾಗಿದೆ. ಗರ್ಭಗೃಹದಲ್ಲಿ ಎರಡು ಮೂರ್ತಿಶಿಲ್ಪಗಳಿವೆ. ಅವುಗಳು ಅನಂತನಾಥ್ ಹಾಗೂ ಮಹಿಷಮರ್ದನಿಯದು. ಇವೆರೆಡು ಶಿಲ್ಪಗಳು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದು ಕಪ್ಪುಶಿಲೆಯಲ್ಲಿ ಕೆತ್ತಲಾಗಿದೆ. ಈ ಶಿಲ್ಪಗಳು ಗರ್ಭಗೃಹದಲ್ಲಿದ್ದ ಮೂಲ ಶಿಲ್ಪಗಳಿಲ್ಲ. ಅಲ್ಲಿದ್ದ ಮೂಲ ಶಿಲ್ಪ ಭಗ್ನಗೊಂಡ ನಂತರ ಗ್ರಾಮದ ಪ್ರದೇಶದಲ್ಲಿ ದೊರೆತ ಮಹಿಷಮರ್ದಿನಿಯ ಶಿಲ್ಪವನ್ನು ಈ ದೇವಾಲಯದಲ್ಲಿಟ್ಟು ಪೂಜಿಸುತ್ತಿದ್ದಾರೆ. ಸ್ಥಳೀಯರು ಈ ಶಿಲ್ಪವನ್ನು ದ್ಯಾಮವ್ವ ಎಂದು ಕರೆಯುತ್ತಾರೆ. ಈ ಶಿಲ್ಪದ ಪಕ್ಕದಲ್ಲಿ ಅನಂತನಾಥನ ಶಿಲ್ಪವಿದೆ. ಇದು ಗ್ರಾಮದ ಪಕ್ಕದಲ್ಲಿರುವ ಕೆರೆಯಲ್ಲಿ ದೊರೆತಿದ್ದು ಅದನ್ನು ತಂದು ಈ ದೇವಾಲಯದ ಗರ್ಭಗೃಹದಲ್ಲಿಡಲಾಗಿದೆ.

ಗರ್ಭಗೃಹದ ದ್ವಾರಬಂಧ ಸರಳವಾಗಿದ್ದು ಲಲಾಟಬಾಗದಲ್ಲಿಯು ಯಾವುದೇ ಕೆತ್ತನೆ ಇಲ್ಲ. ಈ ದೇವಾಲಯದ ಸಭಾಮಂಟಪವು ಸುಮಾರು ಹನ್ನೆರಡು ಅಡಿ ಉದ್ದ, ಒಂಬತ್ತು ಅಡಿ ಅಗಲವಾಗಿದೆ. ಇಲ್ಲಿ ಕಟ್ಟಿಗೆಯ ಎರಡು ಕಂಬಗಳಿವೆ. ಈ ಮಂಟಪದ ಗೋಡೆಗಳು ಅತ್ಯಂತ ಸರಳವಾಗಿದೆ. ಗರ್ಭಗೃಹ ಮತ್ತು ಸಭಾಮಂಟಪದ ಮೇಲ್ಛಾವಣಿಯನ್ನು ಮರದ ತೊಲೆ ಹಾಗೂ ಹಲಗೆಗಳನ್ನು ಬಳಸಿ ಅದರ ಮೇಲೆ ಮಣ್ಣನ್ನು ಹಾಕಲಾಗಿದೆ. ಈ ಮೇಲ್ಛಾವಣಿಯನ್ನು ಕ್ರಿ.ಶ.ಸು ೧೮–೧೯ನೆಯ ಶತಮಾನದಲ್ಲಿ ಹಾಕಲಾಗಿದೆ.

೫.೨. ಮೂರ್ತಿಶಿಲ್ಪಗಳು

'ಶಿಲ್ಪ' ಎಂದರೆ ಕೌಶಲ್ಯದಿಂದ ಕೂಡಿದ ಕೆಲಸ. 'ಯಾವುದೇ ಒಂದು ವಾಸ್ತವಿಕ ಇಲ್ಲವೆ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಯನ್ನು ಶಿಲ್ಪ ಎಂದು

ಕರೆಯಲಾಗುತ್ತದೆ[೫]. ಮೂರ್ತಿಶಿಲ್ಪ ವಾಸ್ತುಶಿಲ್ಪಕ್ಕೆ ಪೂರಕವಾಗಿ ಅದರ ಜೊತೆಜೊತೆಯಲ್ಲಿಯೇ ಬೆಳೆದುಬಂದಿತು. ವಾಸ್ತುಶಿಲ್ಪ ದೇವರುಗಳಿಗೆ ಆಲಯವನ್ನು ಕಟ್ಟಿದರೆ, ಮೂರ್ತಿಶಿಲ್ಪ ಆ ದೇವರುಗಳ ಕಲ್ಪನೆಗೆ ಸಾಂಕೇತಿಕವಾದ ವ್ಯಕ್ತಸ್ವರೂಪವನ್ನು ಕೊಡಲು ಪ್ರಯತ್ನಿಸಿತು. ಆದರೆ ಮುಖ್ಯವಾಗಿ ಧಾರ್ಮಿಕ ಶ್ರದ್ಧೆಯೇ ಶಿಲ್ಪಕ್ಕೆ ಮೂಲಭೂತ ಪ್ರಚೋದನೆಯಾಗಿ ಪರಿಣಮಿಸಿತು[೬]. ಮೂರ್ತಿಶಿಲ್ಪಗಳ ನಿರ್ಮಾಣ ವೇದಕಾಲದಷ್ಟು ಹಳೆಯದು. ವಿಶ್ವಕರ್ಮ, ಮಯ, ನಗ್ನಜಿತ, ನಾರದ, ಪುರಂದರ, ಗರ್ಗ, ಶುಕ್ರ, ಬೃಹಸ್ಪತಿ ಮೊದಲಾದ ಹದಿನೆಂಟು ಋಷಿಗಳು ವಾಸ್ತುವಿದ್ಯೆಯ ಮೂಲಪುರುಷರೆಂದು ನಂಬಲಾಗಿದೆ. ಋಗ್ವೇದವು ಸೃಷ್ಟಿಯೊಂದು ಶಿಲ್ಪ, ವಿಶ್ವಕರ್ಮನು ಶಿಲ್ಪಿ ಎಂದು ವರ್ಣಿಸಿದೆ.

ಕುಷ್ಟಗಿ ಪರಿಸರದಲ್ಲಿರುವ ಮೂರ್ತಿಶಿಲ್ಪಗಳ ಬಗ್ಗೆ ಬರೆಯುತ್ತ ಹೋದರೆ ಅದೇ ಒಂದು ಅಧ್ಯಯನವಾದೀತು. ಹೀಗಾಗಿ ಇಲ್ಲಿಯ ಪ್ರಮುಖ ಶಿಲ್ಪಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳೆಂದರೆ ಮಹಿಷಮರ್ದಿನಿ, ಸಪ್ತಮಾತೃಕೆ, ವೀರಭದ್ರ, ಗಜಲಕ್ಷ್ಮಿ, ಸೂರ್ಯ, ಗಣಪತಿ, ಶಿವಲಿಂಗ, ನಂದಿ ಮತ್ತು ಜೈನಮೂರ್ತಿಗಳು. ಇವುಗಳ ಅಧ್ಯಯನವನ್ನು ಈ ಕೆಳಗಿನಂತೆ ಮಾಡಲಾಗಿದೆ.

ಮಹಿಷಮರ್ದಿನಿ ಶಿಲ್ಪಗಳು

ಮಹಿಷಮರ್ದಿನಿ ದುರ್ಗೆ, ಸಮರದೇವತೆ. ಮಹಿಷಾಸುರನು ಬ್ರಹ್ಮನನ್ನು ಕುರಿತು ನೂರು ವರುಷ ತಪಸ್ಸು ಮಾಡಿ ತ್ರಿಮೂರ್ತಿಗಳಾದ ತನಗೆ ಸಾವು ಬರದಂತೆ ವರವನ್ನು ಪಡೆದು, ಲೋಕಕಂಟಕನಾಗಲು ತ್ರಿಮೂರ್ತಿಗಳ ಸಮ್ಮಿಳಿತ ಶಕ್ತಿರೂಪಿಣಿಯಾಗಿ ದುರ್ಗೆ ಮಹಿಷಾಸುರನನ್ನು ಸೆಣಸಿ ಕೊಂದಳೆಂಬುದು ಪೌರಾಣಿಕ ವಿವರಣೆ. ಈ ಸನ್ನಿವೇಶದ ದುರ್ಗಿಯ ರೂಪವೇ ಮಹಿಷಮರ್ದಿನಿ. ಈ ಮಹಿಷಮರ್ದಿನಿಯ ಆರು ಶಿಲ್ಪಗಳು ಕುಷ್ಟಗಿ ಪರಿಸರದಲ್ಲಿವೆ. ಅವುಗಳು ಅಂಟೂರಠಾಣ, ಪುರಗಳಲ್ಲಿ ತಲಾ ಎರಡರಂತೆ, ಚಂದಾಲಿಂಗ ಮತ್ತು ಕಾಟಾಪುರಗಳಲ್ಲಿ ತಲಾ ಒಂದೊಂದರಂತೆ ಒಟ್ಟು ಆರು ಶಿಲ್ಪಗಳು ಕಂಡುಬಂದಿವೆ. ಈ ಎಲ್ಲ ಶಿಲ್ಪಗಳ ಲಕ್ಷಣಗಳು ಒಂದೇ ಆಗಿವೆ.

ಪುರದಲ್ಲಿರುವ[೭] ಶಿಲ್ಪದಲ್ಲಿ ಮಹಿಷಮರ್ದಿನಿಯು ಅಷ್ಟಭುಜಧಾರಿಯಾಗಿದ್ದಾಳೆ. ತನ್ನೆರಡು ಕೈಗಳಿಂದ ಕೋಣನ ಕುತ್ತಿಗೆಯಿಂದ ಹೋರಬರುತ್ತಿರುವ ಸುರನ ಎದೆಗೆ ಈಟಿಯನ್ನು ತಿವಿಯುತ್ತಿರುವಳು. ಎಡಗಾಲನ್ನು ಕೋಣದ ಮೇಲೆ ಮೆಟ್ಟಿದ್ದಾಳೆ. ಸುರನು ಕೈಗಳಲ್ಲಿ ಕೆತ್ತಿ ಮತ್ತು ಗುರಾಣಿಯನ್ನು ಹಿಡಿದಿರುವನು. ಬಲಗಾಲಿನ ಪಕ್ಕದಲ್ಲಿ ಕತ್ತರಿಸಿದ ಕೋಣನ ಮುಖವಿದೆ. ತನ್ನ ಉಳಿದ ಕೈಗಳಲ್ಲಿ ಗಂಟೆ, ಕಠೋರಿ, ಬಾಣ, ಶಂಖ, ಬಿಲ್ಲು ಮತ್ತು ಗುರಾಣಿಗಳನ್ನು ಹಿಡಿದು ನಿಂತಿದ್ದಾಳೆ. ಕುಂಡಲ, ಕೀರಿಟ, ಮುಕುಟ, ಕರ್ಣಾಭರಣ, ಕಂಠಾಭರಣ, ರತ್ನಪಟ್ಟಿಕೆ, ಬಳೆ, ವಸ್ತ್ರ ಧರಿಸಿದ್ದು ಭಯಂಕರ ರೂಪದಲ್ಲಿದ್ದಾಳೆ. ಇನ್ನೊಂದು ಶಿಲ್ಪವು ಇದೇ ದೇವಾಲಯದಲ್ಲಿದ್ದು ಇದರ ಬಹುಭಾಗ ಒಡೆದಿದೆ. ಕೋಣವನ್ನು ಕೊಲ್ಲುತ್ತಿರುವುದು ಮಾತ್ರ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇನ್ನುಳಿದೆಲ್ಲ ಭಾಗ ಅಸ್ಪಷ್ಟವಾಗಿದೆ. ಅಂಟೂರಠಾಣ[೮], ಕಾಟಾಪುರ[೯] ಮತ್ತು ಚಂದಾಲಿಂಗ

[illegible]

ಗಳಲ್ಲಿರುವ[೧೦] ಶಿಲ್ಪಗಳು ಮೇಲೆ ವಿವರಿಸಿದ ಲಕ್ಷಣಗಳನ್ನೇ ಹೊಂದಿವೆ. ಈ ಎಲ್ಲ ಶಿಲ್ಪಗಳು ಕ್ರಿ.ಶ.ಸು.೧೩–೧೪ನೆಯ ಶತಮಾನದ್ದಾಗಿವೆ.

ಸಪ್ತಮಾತೃಕೆಯರ ಶಿಲ್ಪಗಳು

ಗಂಡು ದೇವತೆಗಳೊಂದಿಗೆ ಹೆಣ್ಣು ದೇವತೆಯನ್ನು ಶಕ್ತಿಯರೆಂದು ಒಪ್ಪಿಕೊಂಡು ಪೂಜಿಸಲಾಗುತ್ತದೆ. ಶಿವನಿಗೆ ಶಿವೆ, ವಿಷ್ಣುವಿಗೆ ಲಕ್ಷ್ಮೀ, ಬ್ರಹ್ಮನಿಗೆ ಸರಸ್ವತಿ, ಗಣಪತಿಗೆ ಸೃಷ್ಠಿ, ಅನಂತನಿಗೆ ತುಷ್ಠಿ, ಕಾಲನಿಗೆ ರಾತ್ರಿ, ಸೂರ್ಯನಿಗೆ ಸಂಜ್ಞೆ, ಇಂದ್ರನಿಗೆ ಶಚಿ, ಅಗ್ನಿಗೆ ಸ್ವಾಹಾ, ದಕ್ಷನಿಗೆ ದಕ್ಷಿಣಾ, ಸ್ಕಂದನಿಗೆ ದೇವಸೇನೆ ಮುಂತಾದವರು ಇದಕ್ಕೆ ಉದಾಹರಣೆಯಾಗಿರುತ್ತಾರೆ.

ಬೃಹತ್‌ಸಂಹಿತೆಯಲ್ಲಿ ಸಪ್ತಮಾತೃಕೆಯರ ಹೆಸರುಗಳ ಉಲ್ಲೇಖಬರುತ್ತದೆ. ಬ್ರಾಹ್ಮಿ, ವೈಷ್ಣವಿ, ಮಹೇಶ್ವರಿ, ಕೌಮಾರಿ, ಐಂದ್ರೀ, ವಾರುಣಿ ಮತ್ತು ಕೌಬೇರಿ ಇವರು ಕ್ರಮವಾಗಿ ಬ್ರಹ್ಮ, ವಿಷ್ಣು, ಶಿವ, ಸ್ಕಂದ, ಇಂದ್ರ, ವರುಣ ಮತ್ತು ಕುಬೇರ ದೇವತೆಗಳ ಶಕ್ತಿಯರು. ಸಾಮಾನ್ಯವಾಗಿ ಸಪ್ತಮಾತೃಕೆಯರನ್ನು ಒಂದೇ ಫಲಕದಲ್ಲಿ ಸಾಲಾಗಿ ಕೆತ್ತಲಾಗಿರುತ್ತವೆ. ಶಿಲ್ಪ ಫಲಕದಲ್ಲಿ ಅವರ ಕ್ರಮ ಸಾಮಾನ್ಯವಾಗಿ ಬ್ರಾಹ್ಮೀ, ಮಹೇಶ್ವರಿ, ಕೌಮರೀ, ವೈಷ್ಣವೀ, ವರಾಹೀ, ಇಂದ್ರಾಣಿ ಮತ್ತು ಚಾಮುಂಡಿಯರಿದ್ದು ಬ್ರಾಹ್ಮೀಯ ಬಲಭಾಗದಲ್ಲಿ ಗಣೇಶನನ್ನು ಇರಿಸಿ ನಡುವೆ ಸಪ್ತ ಮಾತ್ರಗಣಗಳನ್ನಿರಿಸಿದ್ದು ಕಂಡುಬರುತ್ತದೆ. ಕುಷ್ಟಗಿ ಪರಿಸರದ ಪುರ[೧೧], ಗೋತಗಿ[೧೨], ಆಚನೂರ[೧೩], ಚಂದ್ರಗಿರಿ[೧೪] ಮತ್ತು ಕುಷ್ಟಗಿಗಳಲ್ಲಿ[೧೫] ಸಪ್ತಮಾತೃಕೆಯರ ಶಿಲ್ಪಗಳು ಕಂಡುಬರುತ್ತವೆ.

ಇವುಗಳಲ್ಲಿ ಕುಷ್ಟಗಿಯ ರಾಮಲಿಂಗೇಶ್ವರ ದೇವಾಲಯದ ಸಭಾಮಂಟಪದಲ್ಲಿ ಪೂರ್ವಾಭಿಮುಖವಾಗಿ ಸಪ್ತಮಾತೃಕೆಯರ ಶಿಲ್ಪವನ್ನು ಇಡಲಾಗಿದೆ. ಈ ದೇವಾಲಯಕ್ಕೆ ಬರುವ ಭಕ್ತಾದಿಗಳು ಈ ಶಿಲ್ಪವನ್ನು ಪೂಜಿಸುತ್ತಾರೆ. ಪುರದ ಕೋಟಿಲಿಂಗೇಶ್ವರ ದೇವಾಲಯದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ಗೋತಗಿಯಲ್ಲಿರುವ ಈ ಶಿಲ್ಪವು ಎರಡು ತುಂಡಾಗಿದ್ದು ಗ್ರಾಮದ ಮಧ್ಯದಲ್ಲಿರುವ ಆಂಜನೇಯ ದೇವಾಲಯದ ಎದುರಿನ ರಸ್ತೆಯ ಪಕ್ಕದಲ್ಲಿದೆ. ಚಂದ್ರಗಿರಿಯ ಈಶ್ವರ ದೇವಾಲಯದ ಸಭಾಮಂಟಪದಲ್ಲಿ ಈ ಶಿಲ್ಪದ ಎರಡು ತುಂಡುಗಳಿವೆ. ಆಚನೂರಿನಲ್ಲಿರುವ ಶಿಲ್ಪವು ಒಡೆದಿದ್ದು ಮಲ್ಲಿಕಾರ್ಜುನ ದೇವಾಲಯದ ಪಕ್ಕದಲ್ಲಿ ಇಡಲಾಗಿದೆ. ಕುಷ್ಟಗಿ ಪ್ರದೇಶದಲ್ಲಿ ಕಂಡುಬಂದಿರುವ ಸಪ್ತಮಾತೃಕೆರಯರ ಶಿಲ್ಪಗಳು ಕ್ರಿ.ಶ.ಸು.೧೨–೧೩ನೆಯ ಶತಮಾನದ್ದಾಗಿವೆ.

ವೀರಭದ್ರ ಶಿಲ್ಪಗಳು

ದಕ್ಷಪ್ರಜಾಪತಿಯ ಮಗಳು ದಾಕ್ಷಾಯಣಿ. ಶಿವನ ಹೆಂಡತಿಯಾದ ಮೇಲೆ ಒಮ್ಮೆ ದಕ್ಷನು ಯಜ್ಞ ಮಾಡಲು ಹವಣಿಸಿ ಶಿವ ದಾಕ್ಷಾಯಣಿಯರಿಬ್ಬರನ್ನು ಮಾತ್ರ ಕರೆಯದೆ ಉಳಿದ ಎಲ್ಲರನ್ನೂ ಕರೆದ. ದಾಕ್ಷಾಯಣಿಯು ತಾನು ಯಜ್ಞಮಂಟಪಕ್ಕೆ ಹೋಗಿ, ಅಲ್ಲಿ ತನ್ನ ತಂದೆ ತನ್ನನ್ನು ಅಪಮಾನಗೊಳಿಸಲು ಯಜ್ಞಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಸಿಟ್ಟಿಗೆದ್ದ ಶಿವನು ತನ್ನ ಜಡೆಯನ್ನು ನೆಲಕ್ಕೆ ಅಪ್ಪಳಿಸಲು ವೀರಭದ್ರನು ಹುಟ್ಟಿಕೊಂಡು ದಕ್ಷನ ತಲೆಯನ್ನು ಕಡಿದು ಅವನ ಯಾಗವನ್ನು ಧ್ವಂಸಪಡಿಸಿದ ಇದು ಪುರಾಣ ಕಥೆ.

ಭೈರವ ಉಗ್ರರೂಪಗಳ ಗುಂಪಿಗೆ ಸೇರಿದ ಇನ್ನೊಂದು ಪ್ರಚಲಿತ ಮೂರ್ತಿ ಎಂದರೆ ವೀರಭದ್ರನದು. ಇವನ ಶಿಲ್ಪಗಳು ಕುಷ್ಟಗಿ ಪರಿಸರದ ಗಂಗನಾಳ, ಚಳಗೇರಿ, ಪುರ, ತಾವರಗೆರೆ ಮತ್ತು ಚಂದ್ರಗಿರಿಗಳಲ್ಲಿವೆ. ಈ ಎಲ್ಲ ಶಿಲ್ಪಗಳಲ್ಲಿ ಒಂದೇ ಮಾದರಿಯ ಲಕ್ಷಣಗಳು ಕಂಡುಬರುತ್ತವೆ. ಪುರ[೧೬] ಮತ್ತು ಚಂದ್ರಗಿರಿಯಲ್ಲಿರುವ[೧೭] ಶಿಲ್ಪಗಳನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇವು ಸುಮಾರು ಮೂರು ಅಡಿ ಎತ್ತರವಾಗಿವೆ. ವೀರಭದ್ರನು ತ್ರಿಭಂಗಿಯಲ್ಲಿ ನಿಂತಿದ್ದು ಚತುರ್ಭುಜಧಾರಿಯಾಗಿದ್ದಾನೆ. ಕೈಗಳಲ್ಲಿ ಖಡ್ಗ, ಬಾಣ, ಬಿಲ್ಲು ಮತ್ತು ಗುರಾಣಿಗಳನ್ನು ಹಿಡಿದಿದ್ದಾನೆ. ತಲೆಯ ಮೇಲೆ ಕಿರೀಟ ಮುಕುಟ, ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಮಣಿಸರಗಳು, ಭುಜಹಾರ, ತೋಳ್ಬಂದಿ ಮತ್ತು ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಚಳಗೇರಿ[೧೮] ಮತ್ತು ತಾವರಗೆರೆಗಳಲ್ಲಿರುವ[೧೯] ವೀರಭದ್ರನ ಶಿಲ್ಪಗಳು ಮೇಲಿನ ಲಕ್ಷಣಗಳೇ ಹೊಂದಿವೆ. ಆದರೆ ತಾವರಗೆರೆಯಲ್ಲಿರುವ ವೀರಭದ್ರನ ಶಿಲ್ಪದ ಪ್ರಭಾವಳಿಯ ಮೇಲ್ಭಾಗದಲ್ಲಿ ಮಕರತೋರಣವಿದೆ. ಈ ಶಿಲ್ಪಗಳು ಸಹ ಸುಮಾರು ಮೂರು ಅಡಿ ಎತ್ತರವಾಗಿದ್ದು ಕಪ್ಪು ಶಿಲೆಯಲ್ಲಿ ಕೆತ್ತಲಾಗಿವೆ. ಗಂಗನಾಳದಲ್ಲಿ[೨೦] ದ್ವಿಭುಜಧಾರಿಯಾದ ವೀರಭದ್ರನ ಶಿಲ್ಪವಿದೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಕೊರಳಲ್ಲಿ ಮಣಿಸರಗಳನ್ನು ಧರಿಸಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಕೆತ್ತಲಾಗಿದೆ.

ಗಜಲಕ್ಷ್ಮಿ ಶಿಲ್ಪಗಳು

ಕಮಲದ ಮೇಲೆ ಪದ್ಮಾಸನದಲ್ಲಿ ಕುಳಿತ ದ್ವಿಭುಜ ಅಥವಾ ಚತುರ್ಭುಜ ಲಕ್ಷ್ಮಿ ಪ್ರಾಚೀನ ಶಿಲ್ಪಗಳಲ್ಲಿ ಕಂಡುಬರುವ ದೇವತೆ. ಕಮಲ, ಶ್ರೀಫಲ, ಶಂಖ, ಅಮೃತಘಟ, ಮಾತುಲಿಂಗ, ಖೇಟಕ ಮತ್ತು ಗದೆ ಈಕೆಯ ಆಯುಧಗಳು. ಈಕೆಯ ತಲೆಯ ಮೇಲೆ ಕುಂಭಗಳಿಂದ ಅಭಿಷೇಕ ಮಾಡುತ್ತಿರುವ ಎರಡು ಆನೆಗಳಿರುತ್ತವೆ. ಈ ಆನೆಗಳೆರಡು ಶಂಖ ಮತ್ತು ಪದ್ಮ ಎಂಬ ನಿಧಿಗಳನ್ನು ಸೂಚಿಸುತ್ತವೆ. ಲಕ್ಷ್ಮಿಯ ಹಿಂದಿನ ಕೈಗಳಲ್ಲಿರುವ ಶಂಖ ಮತ್ತು ಪದ್ಮಗಳೆರಡೂ ಇವನ್ನೇ ಸೂಚಿಸುತ್ತವೆ. ಸಾಮಾನ್ಯವಾಗಿ ಎಲ್ಲ ಗಜಲಕ್ಷ್ಮಿ ಶಿಲ್ಪಗಳು ಮೇಲಿನ ಲಕ್ಷಣಗಳನ್ನೇ ಹೊಂದಿರುತ್ತವೆ.

ಕುಷ್ಟಗಿ ಪರಿಸರದಲ್ಲಿ ಇಂಥ ಶಿಲ್ಪಗಳು ಹೆಚ್ಚಾಗಿ ದೇವಾಲಯದ ಲಲಾಟಭಾಗದಲ್ಲಿ ಕಂಡುಬಂದಿವೆ. ಬಿಡಿಶಿಲ್ಪಗಳಾಗಿಯು ಇವೆ. ಸಿರಗುಪ್ಪದ ಅಗಸೆಗೋಡೆಯಲ್ಲಿ, ಬಳ್ಳೂಟಗಿಯ ಆಂಜನೇಯ ದೇವಾಲಯ ಆವರಣ ಗೋಡೆಯಲ್ಲಿ ಬಿಡಿಯಾಗಿ ಗಜಲಕ್ಷ್ಮಿ ಶಿಲ್ಪಗಳು ಕಂಡುಬಂದಿವೆ. ತಾವರಗೆರೆಯ ಲಕ್ಷ್ಮೀವೇಕಟೇಶ್ವರ ದೇವಾಲಯ, ಚಂದ್ರಗಿರಿಯ ಈಶ್ವರ ದೇವಾಲಯ, ಹೂಲಗೇರಿಯ ಸಂಗಮೇಶ್ವರ ದೇವಾಲಯ, ಸೋಮೇಶ್ವರ ದೇವಾಲಯ, ಪುರ್ತಗೇರಿಯ ಸೋಮನಾಥ ದೇವಾಲಯ, ಅಂಟೂರಠಾಣದ ಮೌನೇಶ್ವರ ದೇವಾಲಯ, ಗೋತಗಿಯ ನಾಗಕನ್ನಿಕಾ ದೇವಾಲಯ, ಕುಷ್ಟಗಿಯ ರಾಮಲಿಂಗೇಶ್ವರ ದೇವಾಲಯ, ಕೋರಿಗುಡಿ, ಪುರದ ಈಶ್ವರ ದೇವಾಲಯ. ಈ ದೇವಾಲಯಗಳ ಗರ್ಭಗೃಹ ದ್ವಾರದ ಲಲಾಟಭಾಗದಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ.

ಸೂರ್ಯ ಶಿಲ್ಪಗಳು

ಶಿವನೊಂದಿಗೆ ಸೂರ್ಯದೇವನು ಪೂಜೆಗೊಳ್ಳುತ್ತಾನೆ. ಪುರಾತನ ಕಾಲದಿಂದಲೂ ಸೂರ್ಯದೇವರ ಆರಾಧನೆ ಪ್ರಚಲಿತವಾಗಿದ್ದಿತು. ಕುಷ್ಟಗಿ ಪರಿಸದಲ್ಲಿಯೂ ಸೂರ್ಯರಾಧನೆ ಪ್ರಾಮುಖ್ಯತೆ ಪಡೆದಿತ್ತೆಂಬುದಕ್ಕೆ ಇಲ್ಲಿ ದೊರೆತ ಎರಡು ಸೂರ್ಯಶಿಲ್ಪಗಳೇ ಸಾಕ್ಷಿಯಾಗಿವೆ. ಇವುಗಳು ಪುರ ಮತ್ತು ಶ್ಯಾಡಲಗೇರಿಗಳಲ್ಲಿವೆ.

ಪುರದಲ್ಲಿರುವ[೨೧] ಸೂರ್ಯನ ಶಿಲ್ಪದಲ್ಲಿ ಸೂರ್ಯದೇವನು ಸಮಭಂಗಿಯಲ್ಲಿ ನಿಂತಿದ್ದಾನೆ. ತನ್ನೆರೆಡು ಕೈಗಳಲ್ಲಿ ಪದ್ಮಗಳನ್ನು ಹಿಡಿದ್ದಾನೆ. ಬದಿಗಳಲ್ಲಿ ಉಷಾ ಮತ್ತು ಪ್ರತ್ಯುಷಾರಿದ್ದಾರೆ. ಪೀಠದಲ್ಲಿ ಏಳು ಕುದುರೆಗಳನ್ನು ಓಡಿಸುತ್ತ ಅರುಣನು ಕುಳಿತಿದ್ದಾನೆ. ಈತನು ಕಿರೀಟ, ಮುಕುಟ, ತಲೆಯ ಹಿಂಭಾಗದಲ್ಲಿ ದಂಡಾದ ಪ್ರಭಾವಳಿ, ಕರ್ಣಮಂಡಲ, ಕಂಠಹಾರ, ಮುತ್ತಿನಹಾರ, ಪದಕಹಾರ, ಯಜ್ಞೋಪವಿತ, ಭುಜಹಾರ, ಭುಜಕೀರ್ತಿಗಳು, ಮಣಿಕಟ್ಟು, ಬೆರೆಳುಂಗುರ, ನಡುಕಟ್ಟು ಮತ್ತು ವೈಜಯಂತೆಮಾಲೆಗಳನ್ನು ಧರಿಸಿದ್ದಾನೆ.

ಶ್ಯಾಡಲಗೇರಿಯಲ್ಲಿರುವ[೨೨] ಸೂರ್ಯನ ಶಿಲ್ಪದಲ್ಲಿ ಸೂರ್ಯನು ಸಮಭಂಗಿಯಲ್ಲಿ ನಿಂತಿದ್ದಾನೆ. ಎರಡು ಕೈಗಳಲ್ಲಿ ಕಮಲಗಳಿವೆ. ತಲೆಯ ಭಾಗ ಹಾಳಾಗಿವೆ. ಕೊರಳಲ್ಲಿ ಮಣಿಸರ, ಭುಜಹಾರ ಮುಂಗೈಯಲ್ಲಿ ಕಡಗಗಳು ಮೈ ಮೇಲೆ ಯಜ್ಞೋಪವೀತ ಕಟಿಬಂಧಗಳಿವೆ. ಸೂರ್ಯನ ಎರಡೂ ಕಾಲಗಳ ಬದಿಯಲ್ಲಿ ಉಷಾ, ಪ್ರತ್ಯುಷಾರ ಶಿಲ್ಪಗಳಿವೆ. ಸೂರ್ಯನ ಹಿಂಭಾಗದ ಪ್ರಭಾವಳಿಯಲ್ಲಿ ಹೂವುಗಳ ಸಾಲು ಮತ್ತು ಅರ್ಧಗಂಭಗಳನ್ನು ಬಿಡಿಸಲಾಗಿದೆ.

ಗಣಪತಿ ಶಿಲ್ಪಗಳು

ಹಿಂದೂ ಧರ್ಮದ ದೇವತೆಗಳಲ್ಲಿ ಗಣಪತಿಗೆ ಪ್ರಥಮ ಸ್ಥಾನ. ವೇದಕಾಲದ ಸಾಹಿತ್ಯದಲ್ಲಿ ಗಣೇಶನ ಉಲ್ಲೇಖವಿಲ್ಲದಿದ್ದರೂ ಪುರಾಣಗಳಲ್ಲಿ ಇವನ ವರ್ಣನೆ ಇದೆ. ಭಾರತೀಯ ಸಂಸ್ಕೃತಿಯ ಯಾವುದೇ ಕಾರ್ಯದಲ್ಲಿ ಗಣಪತಿಯನ್ನು ಮಂಗಳ ಸೂಚಕ ಚಿಹ್ನೆಯಂತೆ ಪರಿಗಣಿಸಲಾಗುತ್ತದೆ. ಗಣಪತಿ ಶಿಲ್ಪದ ಲಕ್ಷಣಗಳನ್ನು ಹೇಳುವ ಪ್ರಾಚೀನ ಗ್ರಂಥವೆಂದರೆ ವರಾಹಮಿಹಿರನ 'ಬೃಹತಸಂಹಿತೆ'.[೨೩] ಆರಂಭದಲ್ಲಿ ಗಣಪತಿಯನ್ನು ಎರಡು ಭುಜಗಳಲ್ಲಿ ಚಿತ್ರಿಸುತ್ತಿದ್ದರು. ಕಾಲಕ್ರಮೇಣ ಹಲವಾರು ಗಣೇಶನ ಮೂರ್ತಿಗಳು ರೂಪತಾಳಿದ್ದು ದ್ವಿಭುಜದ ಗಣಪತಿ ಮೂರ್ತಿಗಳಿಂದ ನಾಲ್ಕು ಕೈಗಳುಳ್ಳ ಪ್ರತಿಮೆಗಳು ಪ್ರಚಲಿತಕ್ಕೆ ಬಂದವು. ಕುಷ್ಟಗಿ ಪರಿಸರದಲ್ಲಿಯು ಇಂಥ ಮೂರ್ತಿಶಿಲ್ಪಗಳು ಕಂಡುಬಂದಿವೆ. ಕುಷ್ಟಗಿಯ ಕೋರಿಗುಡಿಯ ದೇವಕೋಷ್ಠದಲ್ಲಿ, ಚಳಗೇರಾದ ವೀರಭದ್ರೇಶ್ವರ ದೇವಾಯದಲ್ಲಿ ಎರಡು ಶಿಲ್ಪಗಳಿವೆ. ಇವುಗಳಲ್ಲಿ ಗಣಪತಿಯು ಕುಳಿತಭಂಗಿಯಲ್ಲಿದ್ದಾನೆ. ಚತುರ್ಭಜಧಾರಿಯಾಗಿ, ಕೈಗಳಲ್ಲಿ ದಂತಪರಶು, ಕಮಲ, ಮೋದಕಗಳಿವೆ. ಕಿರೀಟಮುಕುಟ, ಕೊರಳಹಾರಗಳನ್ನು ಧರಿಸಿದ್ದಾನೆ. ಗಣಪತಿಯ ಪೀಠಭಾಗದಲ್ಲಿ ಮೂಷಿಕನನ್ನು ಕೆತ್ತಲಾಗಿದೆ.

ದೇವಾಲಯದ ಲಲಾಟಭಾಗದಲ್ಲಿ ಚಿಕ್ಕದಾಗಿ ಗಣಪತಿಯ ಶಿಲ್ಪವನ್ನು ಬಿಡಿಸಿರುತ್ತಾರೆ. ಕುಷ್ಟಗಿ ಪರಿಸರದಲ್ಲಿ ಐದು ದೇವಾಲಯಗಳಲ್ಲಿ ಇಂಥ ಶಿಲ್ಪಗಳು ಕಂಡುಬಂದಿವೆ. ಅವುಗಳು

[illegible]

ಶಿರಗುಪ್ಪಿಯ ಆಂಜನೇಯ ದೇವಾಲಯ, ಕಾಟಾಪುರದ ಮಹಾಬಲೇಶ್ವರ, ಚಂದ್ರಗಿರಿಯ ಚಂದಾಲಿಂಗೇಶ್ವರ, ಗಂಗಮಾಳಮ್ಮ ಮತ್ತು ಶ್ಯಾಡಲಗೇರಿಯ ಹುಡೆವ್ವ ದೇವಾಲಯಗಳ ಲಲಾಟಭಾಗದಲ್ಲಿ ಇವೆ.

ಶಿವಲಿಂಗಗಳು

ಭಾರತೀಯರು ಸಾಮಾನ್ಯವಾಗಿ ಲಿಂಗದ ಆಕೃತಿಯಲ್ಲಿ ಇರುವ ಶಿವನನ್ನು ಆರಾಧಿಸುತ್ತ ಬಂದಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ಶಿವಲಿಂಗಗಳು ನಾಳದ ರೂಪದಲ್ಲಿದ್ದವು. ಕಾಲಾನಂತರದಲ್ಲಿ ಯೋನಿ ಅಥವಾ ಪಾಣಿವಾಟವನ್ನು ಸೇರಿಸಲಾಯಿತು. ಕಾರಣ ನಾಳವನ್ನು ಸ್ಥಿರವಾಗಿ ನಿಲ್ಲಲು ಅನುಕೂಲವಾಗುವಂತೆ ಪೀಠವನ್ನು ರೂಪಿಸಲಾಯಿತು. ಅಲ್ಲದೆ ಲಿಂಗಕ್ಕೆ ಅಭಿಷೇಕ ಮಾಡಿದಾಗ ನೀರು ತಡೆದು ನಿಲ್ಲುವಂತೆ ಲಿಂಗದ ತಲೆಯ ಮೇಲೆ ನೀರು ಬಿಟ್ಟಾಗ ಕೆಳಗೆ ಬಿದ್ದ ನೀರನ್ನು ಹಿಡಿದಿಟ್ಟುಕೊಳ್ಳಲು ಅನುಕೂಲವಾಗುವಂತೆ ಪೀಠ ರಚಿಸಿದಂತೆ ತೋರುತ್ತದೆ.

ಕುಷ್ಟಗಿ ಪರಿಸರದಲ್ಲಿ ಅನೇಕ ಶಿವಲಿಂಗಗಳಿರುವ ಶೈವ ದೇವಾಲಯಗಳಿವೆ. ಅವುಗಳಲ್ಲಿ ಕುಷ್ಟಗಿಯ ರಾಮಲಿಂಗೇಶ್ವರ, ಪುರ್ತಗೇರಿಯ ಸೋಮನಾಥ ಮತ್ತು ಹಿರೇಮನ್ನಾಪುರದ ಈಶ್ವರ ದೇವಾಲಯಗಳಲ್ಲಿ ಸುಮಾರು ಮೂರು ಅಡಿ ಎತ್ತರದ ಶಿವಲಿಂಗಗಳಿವೆ. ಚಳಗೇರಾದ ರಾಮ ಲಿಂಗೇಶ್ವರ, ಹನುಮಸಾಗರದ ಈಶ್ವರ, ಪುರ್ತಗೇರಿಯ ಸೋಮನಾಥ ದೇವಾಲಯಗಳಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗಗಳಿವೆ. ಅಂಟೂರಠಾಣದ ಜಂಬುನಾಥ, ಕಾಟಾಪುರದ ಮಹಾಬಲೇಶ್ವರ, ಚಂದಾಲಿಂಗದ ಈಶ್ವರ, ಮಾಟೂರಿನ ಈಶ್ವರ ಮತ್ತು ಪುರದ ಸೋಮಲಿಂಗೇಶ್ವರ ದೇವಾಲಯಗಳಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಶಿವಲಿಂಗಳಿವೆ. ಚಳಗೇರಾದ ವೀರಭದ್ರ ದೇವಾಲಯದ ಪಕ್ಕದ ಗರ್ಭಗ್ರಹದಲ್ಲಿ, ತಾವರಗೆರೆಯ ವೈಜನಾಥ ದೇವಾಲಯದ ಮೂರು ಗರ್ಭಗ್ರಹಗಳಲ್ಲಿ ಒಂದೊಂದರಂತೆ, ಹೂಲಗೇರಿಯ ಸಂಗಮೇಶ್ವರ, ಗುಂಡುಮಲ್ಲೇಶ್ವರ, ಗೋತಗಿಯ ರಾಮಲಿಂಗೇಶ್ವರ ದೇವಾಲಯಗಳಲ್ಲಿ ಸುಮಾರು ಒಂದು ಅಡಿ ಎತ್ತರದ ಶಿವಲಿಂಗಗಳಿವೆ.

ಪುರದಲ್ಲಿರುವ ಸೋಮೇಶ್ವರ ದೇವಾಲಯದಲ್ಲಿ ಸುಮಾರು ಒಂದು ಕೋಟಿ ಶಿವಲಿಂಗ ಗಳಿರುವ ಕಾರಣ ಇದಕ್ಕೆ ಕೋಟಿಲಿಂಗೇಶ್ವರ ದೇವಾಲಯ ಎಂದು ಕರೆಯುವುದು ರೂಢಿಯಲ್ಲಿದೆ. ಇಲ್ಲಿರುವ ಶಿವಲಿಂಗಗಳಲ್ಲಿ ನಕ್ಷತ್ರಾಕಾರದ ಶಿವಲಿಂಗಪೀಠ ವಿಶೇಷವಾಗಿದೆ. ಈ ಶಿವಲಿಂಗದ ಪಾಣಿಪೀಠಕ್ಕೆ ನಾಲ್ಕು ಜಲಧಾರೆಗಳಿವೆ. ಇದರ ಮಧ್ಯದಲ್ಲಿ ಸಣ್ಣದಾದ ಶಿವಲಿಂಗವಿದೆ. ಶಿವಲಿಂಗಕ್ಕೆ ಅಭಿಷೇಕ ಮಾಡಿದ ಮಜ್ಜನವು ನಾಲ್ಕು ಕಡೆಗಳ ಜಲಧಾರೆ ಮೂಲಕ ಹರಿದು ಹೋಗುವುದು. ಇಂಥಹ ಶಿವಲಿಂಗ ಅಪರೂಪ. ಕುಷ್ಟಗಿ ಪರಿಸರದ ಎಲ್ಲ ಶಿವಲಿಂಗಗಳು ಕಪ್ಪು ಶಿಲೆಯಲ್ಲಿ ನಿರ್ಮಿಸಿದವುಗಳಾಗಿವೆ.

ನಂದಿ

ಶಿವನ ವಾಹನ ವೃಷಭವಾಗಿದ್ದರಿಂದ ಶೈವ ದೇವಾಲಯಗಳಲ್ಲಿ ಶಿವಲಿಂಗದ ಎದುರಿಗೆ

[illegible]

[illegible]

[illegible]

[illegible]

ನಂದಿಯನ್ನು ಪ್ರತಿಷ್ಠಾಪಿಸಿರುತ್ತಾರೆ ಕುಷ್ಟಗಿ ಪರಿಸರದ ಅನೇಕ ಶೈವ ದೇವಾಲಯಗಳಲ್ಲಿ ಶಿವಲಿಂಗದ ಎದುರಿನಲ್ಲಿ ನಂದಿಗಳಿರುವುದನ್ನು ಕಾಣಬಹುದಾಗಿದೆ. ಹೂಲಗೇರಿ[೨೪], ಅಂಟೂರತಾಣ[೨೫], ಮುದೇನೂರು[೨೬], ಪುರ[೨೭], ಗೋತಗಿ[೨೮] ಮತ್ತು ತಾವರಗೆರೆಗಳಲ್ಲಿ[೨೯] ನಂದಿ ವಿಗ್ರಹಗಳಿವೆ. ಇವುಗಳಲ್ಲಿ ಅತ್ಯಂತ ಸುಂದರವಾದ ನಂದಿ ವಿಗ್ರಹ ಮುದೇನೂರಿನಲ್ಲಿ ಮತ್ತು ವಿಶೇಷವಾದ ಚತುರ್ಮುಖ ನಂದಿಯ ವಿಗ್ರಹ ಪುರದಲ್ಲಿದೆ.

ಮುದೇನೂರಿನ ಮಠದ ಪಕ್ಕದ ಕೈತೋಟದಲ್ಲಿರುವ ನಂದಿಯು ಭಕ್ತಿ ಭಾವ ತುಂಬಿದ ರೀತಿಯಲ್ಲಿ ಕುಳಿತ ಭಂಗಿಯಲ್ಲಿದೆ. ಕಿರಿದಾದ ಕೊಂಬುಗಳು, ನಿಚ್ಚಳವಾಗಿರುವ ಕಣ್ಣುಗಳು, ಚಿಕ್ಕ ಕಿವಿಗಳು, ದಷ್ಟ ಪುಷ್ಟವಾದ ಮೈಮಾಟ ನಂದಿಯ ಲಕ್ಷಣಗಳಾಗಿವೆ. ಕೊರಳೊಳಗಿರುವ ಗೆಜ್ಜೆಯ ಸರ, ಗಂಟೆ, ಹಣೆಯ ಪಟ್ಟಿಯ ಗೆಜ್ಜೆಸರಗಳನ್ನು ಕೆತ್ತಲಾಗಿದೆ. ಇದೇ ಮಾದರಿಯ ಚಿಕ್ಕ ನಂದಿ ಶಿಲ್ಪಗಳು ಇತರ ದೇವಾಲಯಗಳಲ್ಲಿ ಕಾಣಬಹುದು. ಪುರದಲ್ಲಿರುವ ಚುತುರ್ಮುಖ ನಂದಿಯ ವಿಶೇಷವೆಂದರೆ, ಒಂದೇ ದೇಹಕ್ಕೆ ನಾಲ್ಕು ಮುಖಗಳಿದ್ದು, ನಾಲ್ಕು ದಿಕ್ಕುಗಳಿಗೆ ಒಂದೊಂದು ಮುಖ ಮಾಡಿವೆ. ಇದು ಶಿಲ್ಪಿಯ ಕೈಚಳಕಕ್ಕೆ ನಿದರ್ಶನವಾಗಿದೆ.

ಜೈನ ಮೂರ್ತಿಶಿಲ್ಪ (ತೀರ್ಥಂಕರರ ಶಿಲ್ಪಗಳು)

ಭಾರತದಲ್ಲಿ ಅನೇಕ ಧರ್ಮಗಳಂತೆ ಜೈನ ಧರ್ಮವು ಮಾರ್ಪಾಡುಗಳಿಗೆ ಒಳಗಾಗಿದ್ದರೂ ಜೈನ ಮೂರ್ತಿಶಿಲ್ಪದಲ್ಲಿ ಮಾತ್ರ ಯಾವುದೇ ವ್ಯತ್ಯಾಸವಾಗಲಿಲ್ಲ. ತೀರ್ಥಂಕರರ ಅಥವಾ ಜಿನ ಬಿಂಬಗಳು ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತಿರುವ ಮತ್ತು ಕಾಯೋತ್ಸರ್ಗದಲ್ಲಿ ನಗ್ನವಾಗಿ ನಿಂತು ಧ್ಯಾನಿಸುತ್ತಿರುವ ಶಿಲ್ಪಗಳಿರುತ್ತವೆ.

ಕುಷ್ಟಗಿ ಪರಿಸರದಲ್ಲಿ ಮೇಲಿನ ಎರಡು ಮಾದರಿಯ ಶಿಲ್ಪಗಳು ಕಂಡುಬರುತ್ತವೆ. ಮುದೇನೂರು, ಅಂಟೂರತಾಣ ಮತ್ತು ಮಾಲಗಿತ್ತಿಗಳಲ್ಲಿ ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತಿರುವ ತೀರ್ಥಂಕರನ ಹಾಗೂ ಚಳಗೇರಿಯಲ್ಲಿ ಕಾಯೋತ್ಸರ್ಗದಲ್ಲಿ ನಗ್ನವಾಗಿ ನಿಂತು ಧ್ಯಾನಿಸುತ್ತಿರುವ ತೀರ್ಥಂಕರನ ಶಿಲ್ಪಗಳಿವೆ. ಮುದೇನೂರಿನಲ್ಲಿರುವ ತೀರ್ಥಂಕರನ ಶಿಲ್ಪವು[೩೦] ಸುಮಾರು ನಾಲ್ಕು ಅಡಿ ಎತ್ತರವಾಗಿದೆ. ಇದು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದ್ದು ಪದ್ಮಸನದಲ್ಲಿ ಕುಳಿತು ಧ್ಯಾನಿಸುತ್ತಿರುವ ತೀರ್ಥಂಕರನ ಕೆಳಗೆ ಪೀಠವಿದೆ. ಯಾವುದೇ ರೀತಿಯ ಅಂಕಾಕಾರವಿಲ್ಲ. ಅಗಲವಾದ ಭುಜ, ಕಠವಾದ ಎದೆ ಮತ್ತು ಮುಖದಲ್ಲಿ ಶಾಂತತೆ ಸುಂದರವಾಗಿ ಕೆತ್ತಲಾಗಿದೆ. ಮಾಲಗಿತ್ತಿಯಲ್ಲಿರುವ[೩೧] ಶಿಲ್ಪದ ಬಹುಭಾಗ ಭಗ್ನಗೊಂಡಿದೆ. ಚಳಗೇರಿಯಲ್ಲಿಯು ಪಾರ್ಶ್ವನಾರ್ಥನ ವಿಗ್ರಹವಿದೆ.[೩೨] ಈ ಶಿಲ್ಪವು ಸುಮಾರು ನಾಲ್ಕು ಅಡಿ ಎತ್ತರವಾಗಿದ್ದು ಕಪ್ಪು ಶಿಲೆಯಲ್ಲಿದೆ. ಕಾಯೋತ್ಸರ್ಗಭಂಗಿಯಲ್ಲಿ ಪಾರ್ಶ್ವನಾಥನು ನಿಂತಿದ್ದಾನೆ. ಇವನ ಹಿಂಭಾಗದಲ್ಲಿ ನೆಲದಿಂದ ತಲೆಯವರೆಗೆ ಏಳು ಹೆಡೆಗಳನ್ನು ಹೊಂದಿರುವ ಸರ್ಪವಿದೆ. ಹಡೆಯ ಮೇಲ್ಭಾಗ ಹಾಳಾಗಿದೆ. ಈ ಪಾಶ್ವನಾರ್ಥನಿಗೆ ಯಾವುದೇ ರೀತಿಯ ಅಲಂಕಾರವಿಲ್ಲ. ಅತ್ಯಂತ ಶಾಂತ ಚಿತ್ತವಾಗಿ ನಿಂತಿರುವಂತೆ ಕೆತ್ತಲಾಗಿದೆ.

ಅಂಟೂರತಾಣದಲ್ಲಿ ಅನಂತನಾಥನ ಶಿಲ್ಪವಿದೆ[೩೩]. ಈ ಭಾಗದಲ್ಲಿ ದೊರೆತಿರುವ ಸುಂದರ

ಜೈನ ಶಿಲ್ಪವಿದು. ಈ ಶಿಲ್ಪವು ಸುಮಾರು ನಾಲ್ಕು ಅಡಿಗಳಷ್ಟು ಎತ್ತರವಾಗಿದೆ. ಕಾಯೋತ್ಸರ್ಗ ಭಂಗಿಯಲ್ಲಿ ಶಾಂತಚಿತ್ತನಾಗಿ ಅನಂತನಾಥನು ನಿಂತಿದ್ದಾನೆ. ಇವನ ಸುತ್ತಲೂ ಇರುವ ಪ್ರಭಾವಳಿಯಲ್ಲಿ ಇಪ್ಪತ್ನಾಲ್ಕು ಜನ ತೀರ್ಥಂಕರರಿದ್ದಾರೆ. ಅನಂತನಾಥನ ಕೆಳಗೆ ಯಕ್ಷ–ಯಕ್ಷಿಯರನ್ನು ಬಿಡಿಸಲಾಗಿದೆ. ಈ ಶಿಲ್ಪದ ಕೆಳಗಿರುವ ಪೀಠದ ಮೇಲೆ ಶಾಸನವಿದೆ. ಶಾಸನದಲ್ಲಿ ದಾನದ ವಿಷಯ ಉಲ್ಲೇಖವಿದೆ. ಇದು ಕ್ರಿ.ಶ.೧೨೬೭ರ ಕಾಲದ್ದಾಗಿದೆ. ಈ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ.

೫.೩. ಕೋಟೆಗಳು

ಪ್ರಾಚೀನ ಕಾಲದ ಜನರು ರಾಜ್ಯ, ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಚಿಕ್ಕ–ಚಿಕ್ಕ ಗುಂಪುಗಳಾಗಿ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಗುಂಪುಗಳು ಊರುಗಳಾದವು. ಊರುಗಳು ಬೆಳೆದು, ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯ ಮತ್ತು ಪ್ರಜೆಗಳನ್ನು ದರೋಡೆಕೋರರಿಂದ, ಶತ್ರುಗಳಿಂದ, ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ರಾಜಧಾನಿ ಮತ್ತು ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿಸಿದರು.[೩೪] ಹೀಗಾಗಿ ಕೋಟೆ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾಲದಲ್ಲಿ ಮಹತ್ವದ್ದಾಗಿದೆ. ಕೋಟೆಯ ರಚನೆಯ ಕುರಿತು ಹರಿಹರನು ಗಿರಿಜಾ ಕಲ್ಯಾಣದಲ್ಲಿ ಹೀಗೆ ವರ್ಣಿಸಿದ್ದಾನೆ.

‘ಪಳಕಿನ ಕೋಂಟೆ ಬಟ್ಟದನೆ ಬೇವಿನದಂಡೆ ನಭಕ್ಕೆ ಮೀರುವ
ಟ್ಟಳೆ ನಿರ್ಮಿದರ್ೆರು ಪಾರುವ ವಿರಾಜಿತ ಗೊಂಟು ಗೊಂಟಿನೊಳ್
ಬಳಸಿದ ಕೊತ್ತಳಂ ಸೊಗಯಿ ಪಾಳ್ವರಿ ಡೆಂಕಣಿ ಸಾರಮಾರಿಯ
ಗ್ಗಳಲಿಸುವ ಗೋಪುರಂ ಪುಲಿಮೊಗಂ ಮೆರುಗು ಪುರದೊಳು ನಿರಂತರ’

ಭಾರತ ದೇಶದಲ್ಲಿ ಕೋಟೆಗಳ ನಿರ್ಮಾಣ, ಪರಂಪರೆ ಬಹು ಪ್ರಾಚೀನವಾಗಿದೆ. ಕ್ರಿ.ಪೂ.ಸು.೩೦೦೦ರ ಕಾಲದಲ್ಲಿ ಆಸ್ತಿತ್ವದಲ್ಲಿದ್ದ ಹರಪ್ಪ ಸಂಸ್ಕೃತಿಯ ಬಹುತೇಕ ನಗರಗಳು ಕೋಟೆಗಳನ್ನು ಹೊಂದಿದ್ದವು. ಆದಿಚಾರಿತ್ರಿಕ ಕಾಲದ ಮೌರ್ಯ ಸಾಮ್ರಾಜ್ಯ ಸ್ಥಾಪನೆಗೆ ಕಾರಣನಾದ ಚಾಣಕ್ಯನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ರಾಜ್ಯದ ಸಪ್ತಾಂಗಗಳಲ್ಲಿ ದುರ್ಗವು ಅತಿ ಮಹತ್ವದ್ದೆಂದು ಹೇಳಿದ್ದಾನೆ.

ಪ್ರಾಚೀನ, ಮಧ್ಯಯುಗ ಮತ್ತು ಆಧುನಿಕ ಯುಗಗಳಲ್ಲಿ ಯುದ್ಧಕಲೆ ಹಾಗೂ ಯುದ್ಧೋಪಕರಣಗಳು ಬದಲಾದಂತೆ ಅವುಗಳ ವಿನ್ಯಾಸ ಹಾಗೂ ನಿರ್ಮಾಣ ಪದ್ಧತಿಯಲ್ಲೂ ಬದಲಾಗಿವೆ. ಕನ್ನಡಿಗರು ಶಕ್ತಿಯ ಆರಾಧಕರು ರಕ್ಷಣೆಗಾಗಿ ‘ದುರ್ಗ’ಗಳನ್ನು ಕಟ್ಟಿ, ಅವುಗಳಿಗೆ ಶಕ್ತಿರೂಪಿಣಿ ದುರ್ಗಿಯ ಹೆಸರಿನಿಂದಲೇ ‘ದುರ್ಗ’ ಎಂದು ಕರೆದರು.[೩೫] ಒಟ್ಟಿನಲ್ಲಿ ರಾಜ್ಯದ ಸಂರಕ್ಷಣೆಯ ಸಲುವಾಗಿ ಅಂದಿನ ಯುದ್ಧ ಕೌಶಲ್ಯಕ್ಕೆ ಅನುಗುಣವಾಗಿ, ಶತ್ರುಗಳನ್ನು ಪರಿಣಾಮಕಾರಿಯಾಗಿ ಪ್ರತಿರೋಧಿಸುವುದಕ್ಕಾಗಿ ಕೋಟೆಗಳು ನಿರ್ಮಾಣವಾದವು.

ಕ್ರಿ.ಶ.೩ನೆಯ ಶತಮಾನದಲ್ಲಿ ಕರ್ನಾಟಕದ ಬಹುಭಾಗ ಮೌರ್ಯರ ಆಳ್ವಿಕೆ ಒಳಪಟ್ಟಿತ್ತು.

ಇವರ ಕಾಲದ ಕೋಟೆಯ ಅವಶೇಷಗಳು ಎಲ್ಲಿಯೂ ಕಂಡುಬಂದಿಲ್ಲ. ಮೌರ್ಯರ ನಂತರ ಶಾತವಾಹನರು ಆಳ್ವಿಕೆಯನ್ನಾರಂಭಿಸಿದರು. ಇವರ ಸಾಮಂತರಾದ ಚುಟು ಅರಸರು ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಶಾತವಾಹನರ ಕಾಲದ ಶಾಸನ, ಶಿಲ್ಪ ಮತ್ತಿತರ ಅವಶೇಷಗಳು ಸನ್ನತಿ ಮತ್ತು ಬನವಾಸಿಗಳಲ್ಲಿ ಕಂಡುಬಂದಿವೆ. ಈ ಎರಡು ಸ್ಥಳಗಳು ಆ ಕಾಲದ ಪ್ರಮುಖ ನಗರಗಳಾಗಿದ್ದವು. ಇಲ್ಲಿ ಕ್ರಿ.ಶ.೧-೨ನೆಯ ಶತಮಾನಗಳಲ್ಲಿ ಕಟ್ಟಿದ ಇಟ್ಟಿಗೆಯ ಕೋಟೆಗಳಿವೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ಕೋಟೆಗಳೇ ಪ್ರಥಮವೆನ್ನಬಹುದು.[೩೬]

ಕ್ರಿ.ಶ.೨೦೦೦ರಲ್ಲಿ ಸುಜಾತಾ ಮಲ್ಲನಗೌಡರ ಅವರು 'ರಾಯಚೂರು-ಕೊಪ್ಪಳ ಜಿಲ್ಲೆಯ ಕೋಟೆಗಳು' ಒಂದು ಅಧ್ಯಯನ ಎಂಬ ಪಿಎಚ್.ಡಿ. ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಕುಷ್ಟಗಿ ತಾಲ್ಲೂಕಿನ ಕಾಟಾಪುರ, ಹನುಮನಾಳ, ಚಳಗೇರಿ ಮತ್ತು ಕುರುಬನಾಳ ಗ್ರಾಮಗಳಲ್ಲಿರುವ ಒಟ್ಟು ನಾಲ್ಕು ಕೋಟೆಗಳ ಬಗ್ಗೆ ಬರೆದಿದ್ದಾರೆ. ನಾನು ಕ್ಷೇತ್ರಕಾರ್ಯ ಕೈಗೊಂಡು ಇನ್ನೂ ಮೂರು ಕೋಟೆಗಳನ್ನು ಗುರುತಿಸಿದ್ದೇನೆ. ಅವುಗಳು ಒಕ್ಕನದುರ್ಗ, ಚಂದ್ರಗಿರಿ ಮತ್ತು ತಾವರಗೆರೆಗಳಲ್ಲಿವೆ. ನನ್ನ ಅಧ್ಯಯನ ಪ್ರಕಾರ ಕುಷ್ಟಗಿ ತಾಲ್ಲೂಕಿನಲ್ಲಿ ಏಳು ಕೋಟೆಗಳಿವೆ. ಅವುಗಳು ಕಾಟಾಪುರ, ಹನುಮಸಾಗರ, ಕುರುಬನಾಳ, ಒಕ್ಕನದುರ್ಗ, ಚಳಗೇರಿ, ಚಂದ್ರಗಿರಿ ಮತ್ತು ತಾವರಗೆರೆಗಳಲ್ಲಿವೆ. ಇವುಗಳಲ್ಲಿ ಕಾಟಾಪುರ, ಚಂದ್ರಗಿರಿ ಮತ್ತು ಒಕ್ಕನದುರ್ಗಗಳಲ್ಲಿರುವ ಕೋಟೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಹನುಮಸಾಗರ, ಕುರುಬನಾಳ, ಚಂದ್ರಗಿರಿ ಮತ್ತು ತಾವರಗೆರೆಗಳಲ್ಲಿರುವ ಕೋಟೆಗಳನ್ನು ಅಳಿದುಳಿದ ಅವಶೇಷಗಳಿಂದ ಗುರುತಿಸಿ ವಿವರಿಸಲಾಗಿದೆ.

ಕುಷ್ಟಗಿ ಪರಿಸರದಲ್ಲಿರುವ ಕೋಟೆಗಳೆಲ್ಲವು ಕ್ರಿ.ಶ.ಸು.೧೭-೧೮ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿವೆ. ಈ ಕೋಟೆಗಳನ್ನು ದೊಡ್ಡ ಬಂಡೆಗಲ್ಲುಗಳನ್ನು ಕತ್ತರಿಸಿ ಕಟ್ಟಲಾಗಿದೆ. ಈ ಕಲ್ಲುಗಳು ಏಕಪ್ರಕಾರದಲ್ಲಿ ಇಲ್ಲ. ಕೋಟೆಯನ್ನು ಕಟ್ಟಲಿಕ್ಕೆ ಗಾರೆಯನ್ನು ಬಳಸದೆ ಮಣ್ಣಿನಿಂದಲೇ ಕಟ್ಟಲಾಗಿವೆ. ಈ ಕಾರಣದಿಂದಲೇ ಬೇಗನೆ ಶಿಥಿಲಗೊಂಡಿರಬಹುದು. ಕುಷ್ಟಗಿ ಪರಿಸರದಲ್ಲಿರುವ ಶಾಸನಗಳಲ್ಲಿ ಯಾವ ಕೋಟೆಗಳ ಬಗ್ಗೆ ಉಲ್ಲೇಖವಿಲ್ಲ. ತಾಲ್ಲೂಕಿನ ಕೋಟೆಗಳ ವಿವರ ಇಂತಿದೆ.

ಕಾಟಾಪುರ

ಕುಷ್ಟಗಿಯಿಂದ ೩೫ಕಿ.ಮೀ ದೂರದಲ್ಲಿ ಕಾಟಾಪುರ ಗ್ರಾಮವಿದೆ. ಈ ಗ್ರಾಮ ಒಂದು ಸಂಸ್ಥಾನವಾಗಿತ್ತು. ಮೊದಲು ಇಲ್ಲಿ ಜಂಗಮರು ಆಡಳಿತ ನಡೆಸಿದರು. ನಂತರ ಆದಿಲ್‌ಶಾಹಿಗಳ ಆಡಳಿತಕ್ಕೆ ಒಳಪಟ್ಟಿತ್ತು. ಆಗ ಕೊನೇರಿ ತಿಮ್ಮಪ್ಪಯ್ಯ ದೇಸಾಯಿ ಅವರು ಆಡಳಿತ ನಡೆಸಿದರು. ಈ ಸಂಸ್ಥಾನಕ್ಕೆ ಕುಷ್ಟಗಿ, ಹನುಮಸಾಗರ, ಚಳಗೇರಾ, ಮೂಗನೂರು ಮತ್ತು ಮಣೇವಾಳ ಉಪ ಸಂಸ್ಥಾನಗಳು ಒಳಪಟ್ಟಿದ್ದವು.[೩೭] ಕೊನೇರಿ ತಿಮ್ಮಪಯ್ಯ ಮಲಕಪಯ್ಯ, ಪುಟ್ಟಪ್ಪಯ್ಯ, ಹನುಮಪ್ಪಯ್ಯ, ರಂಗಪ್ಪಯ್ಯ ಮತ್ತು ಮುಂತಾದವರು ಆಳಿದರು.

ಇಂದಿನ ಕಾಟಾಪುರ ಗ್ರಾಮದ ಸುತ್ತಲೂ ಕೋಟೆ ಇತ್ತು. ಈ ಕೋಟೆಯು ಸುಮಾರು

ನಾಲ್ಕು ಮೈಲು ವ್ಯಾಪ್ತಿಯನ್ನು ಹೊಂದಿದೆ. ಈಗ ಸಂಪೂರ್ಣ ಹಾಳಾಗಿದೆ. ಸಂಸ್ಥಾನವನ್ನಾಳಿದ ದೇಸಾಯಿಯವರ ಮನೆಯ ಸುತ್ತಲೂ ಆಯತಾಕಾರದ ಕೋಟೆ ಇದೆ. ಈ ಕೋಟೆಯು ಬಹುಭಾಗ ಹಾಳಾಗಿದೆ. ಈ ಕೋಟೆಗೆ ಉತ್ತರ ದಿಕ್ಕಿನಲ್ಲಿ ಬಾಗಿಲು ಮತ್ತು ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಕಾವಲು ಗೋಪುರಗಳಿವೆ. ಈಗ ಇವುಗಳ ಬಹುಭಾಗ ಹಾಳಾಗಿವೆ. ಅವಶೇಷ ಗಳಿಂದ ಗುರುತಿಸಬಹುದಾಗಿದೆ. ಈ ಕೋಟೆಯನ್ನು ಕಲ್ಲುಗಳಿಂದ ಕಟ್ಟಿದ್ದು ಸುತ್ತಲೂ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಈ ಕೋತ್ತಳಗಳಿಗೆ ಆಯತಾಕಾರದ ಚಿಕ್ಕಬಾಗಿಲುಗಳಿವೆ. ಈಗ ಬಾಗಿಲುಗಳು ಉಳಿದಿಲ್ಲ.

ಈ ಕೋಟೆಯ ಒಳಗೆ ದೇಸಾಯಿಯವರ ಮನೆ, ಸಭಾಂಗಣದಂತಹ ಕಟ್ಟಡ ಮತ್ತು ಬಾವಿಗಳಿವೆ. ಪೂರ್ವಾಭಿಮುಖವಾಗಿರುವ ದೇಸಾಯಿಯವರ ದೊಡ್ಡದಾದ ಮನೆಯ ಕಟ್ಟಡ ಶಿಥಿಲಾವಸ್ಥೆಯಲ್ಲಿದೆ. ಈ ಕೋಟೆಯ ಹೊರಗೆ ಉತ್ತರಕ್ಕೆ ಮಣ್ಣಿನ ಕೋಟೆ ಇದೆ. ಈ ಕೋಟೆ ಯನ್ನು ಮಧ್ಯಮ ಮತ್ತು ಚಿಕ್ಕಗಾತ್ರದ ಕಲ್ಲುಗಳಿಂದ ಕ್ರಿ.ಶ.ಸು.೧೮ನೆಯ ಶತಮಾನದಲ್ಲಿ ಕಟ್ಟಲಾಗಿದೆ.

ಚಳಗೇರೆ

ಕುಷ್ಟಗಿಯಿಂದ ೧೫ಕಿ.ಮೀ ದೂರದಲ್ಲಿ ಚಳಗೇರಿ ಗ್ರಾಮವಿದೆ. ಈ ಗ್ರಾಮದ ಸುತ್ತ ಎರಡು ಸುತ್ತಿನ ಕೋಟೆಯಿತ್ತು. ಈಗ ಒಳಸುತ್ತು ಮತ್ತು ಅದರ ಸುತ್ತಲಿನ ಕಂದಕ ಮಾತ್ರ ಉಳಿದಿದೆ. ಈ ಕೋಟೆ ಆಯತಾಕಾರವಾಗಿದ್ದು ನಿಯಮಿತಾಕಾರದ ಕಲ್ಲು ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಈಗ ಕೋಟೆಯ ಬಹುಭಾಗ ಹಾಳಾಗಿದ್ದು ಅವಶೇಷಗಳನ್ನು ಮಾತ್ರ ಕಾಣಬಹು ದಾಗಿದೆ. ಕೋಟೆಯಲ್ಲಿ ಪಶ್ಚಿಮ ದಿಕ್ಕಿಗೆ ಒಂದು ಚೌಕಾಕಾರದ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಒಂದೊಂದು ವೃತ್ತಾಕಾರ ಕೊತ್ತಳಗಳಿವೆ. ಈ ಕೋಟೆಗೆ ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಒಂದೊಂದು ಬಾಗಿಲುಗಳಿವೆ.

ಈ ಕೋಟೆಯ ಹೊರಗೆ ಉತ್ತರ ದಿಕ್ಕಿನ ಬಾಗಿಲ ಪಕ್ಕದ ಕೊತ್ತಳದ ಪಕ್ಕದಲ್ಲಿ ಲಕ್ಷ್ಮಿಯ ಚಿಕ್ಕ ದೇವಾಲಯವಿದೆ. ಪಶ್ಚಿಮ ದಿಕ್ಕಿನ ಕೊತ್ತಳದ ಪಕ್ಕದಲ್ಲಿ ರಾಮಲಿಂಗ ದೇವಾಲಯವಿದೆ. ಈ ಕೋಟೆಯು ಕ್ರಿ.ಶ.ಸು.೧೭-೧೮ನೆಯ ಶತಮಾನದ್ದೆಂದು ಗುರುತಿಸಬಹುದಾಗಿದೆ.

ಕುರುಬನಾಳ

ಕುಷ್ಟಗಿಯಿಂದ ೫ಕಿ.ಮೀ ದೂರದಲ್ಲಿ ಕುರುಬನಾಳ ಗ್ರಾಮವಿದೆ. ಈ ಗ್ರಾಮದಲ್ಲಿ ಶಿಥಿಲವಾದ ಕೋಟೆಯ ಅವಶೇಷಗಳನ್ನು ಗುರುತಿಸಬಹುದಾಗಿದೆ. ಇದು ಒಂದು ಸುತ್ತಿನ ಕೋಟೆಯಾಗಿದೆ. ಈ ಕೋಟೆಗೆ ಎರಡು ಬಾಗಿಲುಗಳು ಮತ್ತು ನಾಲ್ಕು ವೃತ್ತಾಕಾರದ ಕೊತ್ತಳ ವಿರುವುದನ್ನು ಕಾಣುತ್ತೇವೆ. ಈ ಕೋಟೆಯನ್ನು ಚಿಕ್ಕ ಮತ್ತು ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಸಿ ಮಣ್ಣಿನಿಂದ ಕಟ್ಟಲ್ಪಟ್ಟಿದೆ. ಈ ಕೋಟೆಗೆ ಪ್ರವೇಶದ್ವಾರ ಉತ್ತರಾಭಿಮುಖವಾಗಿದೆ. ಈ ದ್ವಾರದ ಮೂಲಕ ಪ್ರವೇಶಿಸಿ ಪಶ್ಚಿಮಕ್ಕೆ ತಿರುಗಿದರೆ ಪೂರ್ವಾಭಿಮುಖವಾದ ಮತ್ತೊಂದು ಬಾಗಿಲನ್ನು ಕಾಣುತ್ತೇವೆ. ಕೋಟೆಯ ಪಶ್ಚಿಮ ದಿಕ್ಕಿನಲ್ಲಿ ಕೊತ್ತಳವಿದೆ. ಈ ಕೊತ್ತಳದಲ್ಲಿ ಚಿಕ್ಕ-ಚಿಕ್ಕ

[illegible]

[illegible]

[illegible]

ಕಿಂಡಿಗಳಿವೆ. ಈ ಕೋಟೆಯ ಬಹುಭಾಗ ಹಾಳಾಗಿದೆ. ಕೋಟೆಯ ಕಟ್ಟಡದಿಂದ ಇದು ಕ್ರಿ.ಶ.ಸು.೧೭-೧೮ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿದೆ.

ಹನುಮಸಾಗರ

ಕುಷ್ಟಗಿಯಿಂದ ೨೦ಕಿ.ಮೀ ದೂರದಲ್ಲಿರುವ ಹನುಮಸಾಗರ ಗ್ರಾಮದ ಬೆಟ್ಟದ ಮೇಲೆ ಕ್ರಿ.ಶ.ಸು.೧೭-೧೮ನೆಯ ಶತಮಾನದ ಕೋಟೆಯ ಕಟ್ಟಡವಿದೆ. ಈ ಕೋಟೆಯು ಸುಮಾರು ನಾಲ್ಕು ಮೈಲು ವ್ಯಾಪ್ತಿಯನ್ನು ಹೊಂದಿದೆ. ಎರಡು ಸುತ್ತಿನ ಈ ಕೋಟೆ ಆಯತಾಕಾರದಲ್ಲಿದೆ. ಹೊರಕೋಟೆಯ ಉತ್ತರ ದಿಕ್ಕಿಗೆ ಎರಡು, ದಕ್ಷಿಣ ದಿಕ್ಕಿನಲ್ಲಿ ಒಂದು ಬಾಗಿಲುಗಳಿವೆ. ಈ ಗೋಡೆಯನ್ನು ಚಪ್ಪಟೆಯಾದ ಚಿಕ್ಕ ಕಲ್ಲುಗಳಿಂದ ಕಟ್ಟಲಾಗಿದೆ. ಗೋಡೆಯ ಅಲ್ಲಲ್ಲಿ ಆಯತಾಕಾರದ ಕಿಂಡಿಗಳಿವೆ. ಈ ಕಿಂಡಿಗಳಿಗೆ ಬಂದೂಕು ಕಿಂಡಿಗಳು ಎನ್ನಲಾಗುತ್ತದೆ.

ಆಯತಾಕಾರದಲ್ಲಿರುವ ಒಳಕೋಟೆಯ ಪೂರ್ವಕ್ಕೆ ಒಂದು ಬಾಗಿಲು ಮತ್ತು ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಕೊತ್ತಳಗಳು ಇವೆ. ಈ ಗೋಡೆಯನ್ನು ಸಹ ಚಪ್ಪಟೆಯಾದ ಚಿಕ್ಕ ಕಲ್ಲುಗಳಿಂದ ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಈ ಗೋಡೆಯಲ್ಲಿಯೂ ಆಯತಾಕಾರದ ಕಿಂಡಿಗಳವೆ. ಈ ಕೋಟೆಯೊಳಗೆ ಒಂದು ಕಟ್ಟಡದ ಅವಶೇಷವಿದೆ.

ಒಕ್ಕನದುರ್ಗ

ಕುಷ್ಟಗಿಯಿಂದ ೩೦ಕಿ.ಮೀ ದೂರದಲ್ಲಿ ಒಕ್ಕನದುರ್ಗ ಗ್ರಾಮವಿದೆ. ಈ ಗ್ರಾಮಕ್ಕೆ ಹೊಂದಿಕೊಂಡಿರುವ ಬೆಟ್ಟದ ಮೇಲೆ ಆಯತಾಕಾರದ ಕೋಟೆ ಇದೆ. ಈ ಕೋಟೆಯು ಸುಮಾರು ಮೂರು ಮೈಲು ವ್ಯಾಪ್ತಿಯನ್ನು ಹೊಂದಿದೆ. ಈ ಕೋಟೆಯನ್ನು ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಿಂದ ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಕೋಟೆಯ ಬಹುಭಾಗ ಹಾಳಾಗಿದೆ. ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಒಂದೊಂದು ಬಾಗಿಲುಗಳಿವೆ. ಬಾಗಿಲನ ಅವಶೇಷಗಳೆಲ್ಲವು ನಾಶವಾಗಿವೆ. ನಾಲ್ಕು ದಿಕ್ಕುಗಳಲ್ಲಿ ಕೊತ್ತಳಗಳ ಅವಶೇಷಗಳಿವೆ. ಕೋಟೆಯ ಮಧ್ಯದಲ್ಲಿ ಕಟ್ಟಡಗಳ ಮತ್ತು ಬರುಜುಗಳ ಅವಶೇಷಗಳನ್ನು ಕಾಣುತ್ತೇವೆ. ಈ ಕೋಟೆಯನ್ನು ಕ್ರಿ.ಶ.ಸು.೧೭-೧೮ನೆಯ ಶತಮಾನದಲ್ಲಿ ನಿರ್ಮಿಸಿರಬಹುದು. ಕೋಟೆಯ ಕಟ್ಟಡ ಅಳಿವಿನ ಅಂಚಿನಲ್ಲಿದೆ.

ಚಂದ್ರಗಿರಿ

ಕುಷ್ಟಗಿಯಿಂದ ಸುಮಾರು ೨೮ಕಿ.ಮೀ ದೂರದಲ್ಲಿ ಚಂದಾಲಿಂಗೇಶ್ವರ ದೇವಾಲಯದ ಆವರಣವಿದೆ. ಈ ಆವರಣದ ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ಕೋಟೆ ಇದೆ. ಈ ಕೋಟೆಯು ಸುಮಾರು ನಾಲ್ಕು ಮೈಲು ವ್ಯಾಪ್ತಿಯನ್ನು ಹೊಂದಿದ್ದು ಆಯತಾಕಾರದಲ್ಲಿದೆ. ಇಂದಿನ ಚಂದ್ರಗಿರಿ ಗ್ರಾಮವು ಈ ಕೋಟೆಯ ಆವರಣದಲ್ಲಿಯೇ ನೆಲೆಸಿತ್ತು. ಕಾರಣಾಂತರ ಗಳಿಂದ ದಶಕಗಳ ಹಿಂದೆ ಈ ಗ್ರಾಮ ಕೋಟೆಯಿಂದ ಸುಮಾರು ಎರಡು ಕಿ.ಮೀ.ದೂರದಲ್ಲಿ ಸ್ಥಳಾಂತರಗೊಂಡಿದೆ.

ಬೆಟ್ಟದ ಮೇಲಿರುವ ಕೋಟೆಯು ಕ್ರಿ.ಶ.ಸು.೧೭-೧೮ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿದೆ. ಆಯತಾಕಾರದಲ್ಲಿರುವ ಈ ಕೋಟೆಯ ಗೋಡೆಯನ್ನು ಕಲ್ಲುಗಳಿಂದ ಕಟ್ಟಲಾಗಿದೆ. ಈಗಾಗಲೇ

ಕೋಟೆಯ ಬಹುಭಾಗ ಹಾಳಾಗಿದೆ. ಈ ಕೋಟೆಯಲ್ಲಿ ಕೊತ್ತಳಗಳಿದ್ದು, ಅವುಗಳಿಗೆ ಕಿಂಡಿಗಳನ್ನು ಬಿಡಲಾಗಿದೆ. ಕೋಟೆಯ ಆವರಣದಲ್ಲಿ ಕಟ್ಟಡ ಮತ್ತು ಶಿಲ್ಪಗಳ ಅವಶೇಷಗಳಿವೆ.

ತಾವರಗೆರೆ

ಕುಷ್ಟಗಿಯಿಂದ ಪೂರ್ವಕ್ಕೆ ೨೨ಕಿ.ಮೀ ದೂರದಲ್ಲಿ ತಾವರಗೆರೆ ಗ್ರಾಮವಿದೆ. ಈ ಗ್ರಾಮದ ಪ್ರದೇಶವು ಐತಿಹಾಸಿಕ ನೆಲೆಯನ್ನು ಹೊಂದಿದೆ. ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಕೆರೆಗೆ ಹೊಂದಿಕೊಂಡು ಕೋಟೆಯ ಅವಶೇಷಗಳಿರುವುದನ್ನು ಗುರುತಿಸಬಹುದಾಗಿದೆ. ಈ ಕೋಟೆಯು ಕ್ರಿ.ಶ.ಸು.೧೬–೧೭ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿದೆ. ಸರಿಯಾದ ಅಳತೆ ಇಲ್ಲದ ಕಲ್ಲುಗಳಿಂದ ಕಟ್ಟಲಾಗಿದೆ. ಈಗ ಕೋಟೆಯ ಸಂಪೂರ್ಣ ಭಾಗ ನಾಶವಾಗಿದೆ. ಈ ಕೋಟೆಯ ಒಳಗೆ ವೈಜನಾಥ ದೇವಾಲಯ ಮತ್ತು ಬಾವಿಗಳಿವೆ. ಇವುಗಳನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ಅಧ್ಯಯನ ಮಾಡಲಾಗಿದೆ.

೫.೪. ಜಲಮೂಲಗಳು

ಭೂಮಿಯ ಮೇಲೆ ವಾಸಿಸುತ್ತಿರುವ ಜೀವಿಗಳಿಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ನೀರು ಅಷ್ಟೇ ಮುಖ್ಯವಾದುದಾಗಿದೆ. ಪುರಾಣದ ಪ್ರಕಾರ, ಭಗೀರಥ ಗಂಗೆಯನ್ನು ಭೂಮಿಗೆ ಕರೆತಂದ ನಂತರ ಗಂಗೆ ಅನೇಕ ನದಿಗಳಾಗಿ ಉದ್ದಗಲಕ್ಕೂ ಹರಿದಳು. ನೈಸರ್ಗಿಕವಾಗಿ ಮಾನಸೂನಗಳಿಂದ ಮಳೆ ಬಂದು ನದಿ, ಕೆರೆ, ಬಾವಿಗಳಲ್ಲಿ ನೀರು ಸಂಗ್ರಹವಾಗಿ ಜನರ ದೈನಂದಿನ ಅವಶ್ಯಕತೆಗಳನ್ನು ಪೂರೈಸುತ್ತಿದ್ದಾಳೆ. ಮಹಾಭಾರತದ ಪ್ರಕಾರ, ಯಾವ ವ್ಯಕ್ತಿಯು ಕಟ್ಟಿಸಿದ ಕೆರೆ–ಬಾವಿಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು ಮತ್ತು ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವರೋ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ.[೩೮] ದಾನಗಳಲ್ಲಿ ಅನ್ನದಾನ, ವಸ್ತ್ರದಾನದಷ್ಟೇ ಜಲದಾನವು ಶ್ರೇಷ್ಠವಾದದ್ದೆಂದು ತಿಳಿದ ಅನೇಕ ಅರಸರು, ಅಧಿಕಾರಿಗಳು, ಶ್ರೀಮಂತರು ಮತ್ತು ಸಾಮಾನ್ಯ ಜನರು ಪ್ರಾಚೀನ ಕಾಲದಿಂದ ಕೆರೆ–ಬಾವಿಗಳನ್ನು ಕಟ್ಟಿಸುವ ಕಾರ್ಯಕೈಗೊಂಡಿದ್ದಾರೆ.

ಹಂಪೆಯ ಕ್ರಿ.ಶ.೧೪೧೧ರ ವಿಜಯನಗರ ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನು ಬರೆಯಿಸಿದ ಶಾಸನದಲ್ಲಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅದರೊಂದಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನು ರಕ್ತಗತವಾಗುವಂತೆ ಎರೆದಳೆಂಬುದನ್ನು ಶಾಸನದ ಕವಿ ಹೀಗೆ ಹೇಳಿದ್ದಾನೆ,

"ಕೆರೆಯಂ ಕಟ್ಟಿಸು ಬಾವಿಯಂ ಸವೆಸು
ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು
ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನ್ನುತ್ತಿಂ
ತೆಲ್ಲಮಂ ಪಿಂತೆತಾ

ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್
ಲಕ್ಷ್ಮೀಧರಾಮಾತ್ಯನಾ"

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕವಾಗು, ನಂಜಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಒಂದೊಂದು ತೊಟ್ಟು ಹಾಲನ್ನು ಬಾಯಿಯಲ್ಲಿ ಹಾಕಿದಳಂತೆ ಅವನ ತಾಯಿ. ಎಂಥಹ ಅರ್ಥವತ್ತಾದ ಕಲ್ಪನೆ ಕವಿಯದು. ಲಕ್ಷ್ಮೀಧರಾಮಾತ್ಯನ ಎಲ್ಲ ಸತ್ಕಾರ್ಯಗಳ ಹಿಂದೆ ಆ ಮಹಾತಾಯಿಯ ಮಹದಾಶಯದ ಆಶೀರ್ವಾದ ಅಮೃತ ರೂಪದಲ್ಲಿ ರಕ್ತಗತವಾಗಿ ನಿಂತಿರಬೇಕೆಂದು ಹೇಳಿದ ಕವಿ ನಮ್ಮ ಸಂಸ್ಕೃತಿಯ ತಿರುಳನ್ನೇ ಮುಂದಿಟ್ಟಿದ್ದಾನೆ.

ಈ ಕಾರ್ಯ ಒಂದು ಸಾಮಾಜಿಕ ಹೊಣೆಯಾಗಿದ್ದಷ್ಟೇ ಅಲ್ಲದೇ ಜನರ ಪ್ರೀತಿಗಳಿಸುವ ಮಾರ್ಗವು ಆಗಿತ್ತು. ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಬೆಳೆಗಳು ಸಮೃದ್ಧವಾಗಿ ಬೆಳೆಯಬೇಕು. ನೀರಾವರಿ ವ್ಯವಸ್ಥೆ ಕಲ್ಪಿಸಿದರೆ ಮಾತ್ರ ಇದು ಸಾಧ್ಯ. ಈ ಅನಿವಾರ್ಯತೆಯನ್ನರಿತ ಅರಸರು, ಅಧಿಕಾರಿಗಳು ಮತ್ತು ಶ್ರೀಮಂತರು ಅನೇಕ ಕೆರೆ–ಬಾವಿಗಳ ನಿರ್ಮಾಣ ಪ್ರಾರಂಭಿಸಿದರು. ಕುಷ್ಟಗಿ ಪರಿಸರದ ಶಾಸನಗಳಲ್ಲಿ ಕೆರೆಗಳ ಉಲ್ಲೇಖಗಳಿವೆ. ಬಾವಿಗಳ ಬಗ್ಗೆ ಉಲ್ಲೇಖಗಳಿಲ್ಲ.

ಕೆರೆಗಳು

ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದುದು. ಇವುಗಳು ಗ್ರಾಮದ ಸ್ವತ್ತು. ಕುಷ್ಟಗಿ ಪರಿಸರದ ಪುರ ಗ್ರಾಮದಲ್ಲಿರುವ ಎರಡು ಶಾಸನಗಳಲ್ಲಿ ಕೆರೆಗಳ ನಿರ್ಮಾಣದ ಬಗ್ಗೆ ಉಲ್ಲೇಖಗಳಿವೆ. ಪುರದಲ್ಲಿರುವ ಕ್ರಿ.ಶ.ಸು.೧೪೪೬ರ ಶಾಸನವು ವಿಜಯನಗರದ ಶ್ರೀವೀರಪ್ರತಾಪದೇವರಾಯನ ಕಾಲದ್ದಾಗಿದೆ.

"ಬನದಾಯವೆಗಳು ಆ ವ್ರೋಹಿಲಾಪುರದ ಆಗ್ಣೇಯ
ಭಾಗೆಯಲು ಕೆರೆಯನೂ ಕಟ್ಟಿಸಿ ರಾಯರಿಗೆ ಪುಂಣ್ಯ
ಆಗಬೇಕೆಂದು ಬನದಾಯವೆನು ದೇವರ ನಯಿವೇದ್ಯ
ಕೆಸಹಿರಂಣ್ಯೋಉದಕ ದಾನಧಾರಾಸಾಕ್ಷಿಕವಾಗಿ ಆ
ಚಂದ್ರಾರ್ಕ್ಕ ಸ್ಥಾಯಿಯಾಗೆ ತ್ರಿಸಂಧ್ಯಾಕಾಲದಲಿ ಆ ದೇವರ
ನಯಿವೇದ್ಯವ ನಡೆಸುವಸ್ತಾ ಶ್ರೀಸಜನ ಸುದ್ಧ ಶಿವಾಚಾರ ಸಂಪಂ
ನ್ನರಹ ಸೋಮಯಿದೇವಅಯ್ಯಗಳಕಯಿಗೆ ದೇವರ ನಯಿವೇಧ್ಯ
ಕ್ಕೆ ನೆಲ್ಲುಯಿಲ್ಲವೆಂಡು ವ್ರೊಹಿಲಾಪುರದ ಹೊಲದ ಒಳಗೆ
ಬನದಾಯವೆಗಳೂ ದರ್ಮ್ಮಕ್ಕೆ ಕಟ್ಟಿಸಿ ಕೊಟ್ಟ ಕೆರೆಯ ಸಿಲಾಶಾಸನ:"[೩೯]

ಪುರದ ಬನದಾಯವೆಯು ವ್ರೋಹಿಲಾಪುರದ ಆಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿ ರಾಯನಿಗೆ ಪುಣ್ಯವಾಗಬೇಕೆಂದು ದೇವರ ನೈವೇದ್ಯಕ್ಕೆ ತ್ರಿಸಂಧ್ಯಾ ಕಾಲದಲ್ಲಿ ಶ್ರೀಸಜ್ಜನ ಶುದ್ಧ

ಶಿವಾಚಾರ ಸಂಪನ್ನ ಸೋಮಯದೇವಅಯ್ಯನವರಿಗೆ ದೇವರ ನೈವೇದ್ಯಕ್ಕೆ ನೆಲ್ಲುಯಿಲ್ಲವೆಂದು ವೊಹಿಲಾಪುರದ ಹೊಲದ ಒಳಗೆ ಬನದಾಯವೆಗಳೂ ಕೆರೆಯನ್ನು ಕಟ್ಟಿಸಿಕೊಟ್ಟಂತೆ ಈ ಮೇಲಿನ ಶಾಸನ ಪದ್ಯದಿಂದ ತಿಳಿದುಬರುತ್ತದೆ. ಇದೇ ಗ್ರಾಮದ ಇನ್ನೊಂದು ಶಾಸನದಲ್ಲಿ ಕೆರೆ ನಿರ್ಮಾಣದ ಉಲ್ಲೇಖವಿದೆ.

"ತ್ರೈಲೋಕ್ಯವಿಜಯಭೂಶಣನಪ್ಪ ಸೌರಾ
ಷ್ಟ್ರ ಸೋಮನಾಥದೇವ ಓಹಿಲಂಗೆ ಕೊ(ಟ್ಟ)
ಕೆಲಸ ಹಲಿಯ ಹೆಕ್ಕು ದೇಗುಲವ ಮಾಡು
ವದು ಸರಿಗೆಯ ಹೆಕು ಕೆರೆಯನಗಳುವು"[೮೦]

ತ್ರೈಲೋಕ್ಯವಿಜಯಭೂಷಣನಾದ ಸೌರಾಷ್ಟ್ರ ಸೋಮನಾಥದೇವರು ಓಹಿಲನಿಗೆ ಹಳ್ಳಿಗೆ ಹೋಗಿ ದೇಗುಲವ ಮಾಡುವುದು ಮತ್ತು ಸರಿಗೆಯ ಹೆಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ಈ ಮೇಲಿನ ಶಾಸನ ಪದ್ಯ ತಿಳಿಸುತ್ತದೆ. ಇಂದಿಗೂ ಪುರದ ಹತ್ತಿರ ಈ ಕೆರೆ ಕಂಡುಬರುತ್ತದೆ. ವ್ಯವಸಾಯಕ್ಕೆ ಈ ಕೆರೆಯ ನೀರನ್ನು ಬಳಸಲಾಗುತ್ತದೆ.

ಕುಷ್ಟಗಿ ಪರಿಸರದ ತಾವರಗೆರೆಯಲ್ಲಿ ಒಂದು ಪುರಾತನ ಕೆರೆ ಇದೆ. ಇದರ ಬಗ್ಗೆ ದೊರೆತಿರುವ ಯಾವ ಶಾಸನಗಳಲ್ಲಿ ಉಲ್ಲೇಖವಿಲ್ಲ. ಆದರೆ ಇದರ ಬಗ್ಗೆ ಸ್ಥಳೀಯವಾಗಿ ಒಂದು ಐತಿಹ್ಯವಿದೆ. ಈ ಗ್ರಾಮವು ವಿಜಯನಗರದ ಪ್ರೌಢದೇವರಾಯನ ಆಳ್ವಿಕೆಗೆ ಒಳಪಟ್ಟಿದ್ದರಿಂದ ಇತನು ನಿರ್ಮಿಸಿದ ಕೆರೆಗೆ 'ರಾಯನಕೆರೆ' ಎಂದು ಕರೆದಿದ್ದಾರೆ. ಪ್ರೌಢದೇವರಾಯನ ಧರ್ಮಪತ್ನಿ ಪದ್ಮಲಾದೇವಿಯು ಕುಷ್ಟರೋಗ ಪೀಡಿತಳಾಗಿದ್ದಳು. ಆಗ ಪ್ರೌಢದೇವರಾಯನು ಹಿತಕರವಾದ ವಾತಾವರಣದಿಂದ ಕೂಡಿದ ಕುಷ್ಟಗಿ ಗ್ರಾಮದಲ್ಲಿ ನೆಲೆಸಲು ಅನುಕೂಲ ಮಾಡಿಕೊಟ್ಟನು. ಪದ್ಮಲಾದೇವಿಯು ಪ್ರತಿನಿತ್ಯ ತಾವರೆಹೂವಿನಿಂದ ದೇವರನ್ನು ಪೂಜಿಸುತ್ತಿದ್ದಳು. ತಾವರೆ ಹೂವುಗಳಿಗಾಗಿ ಪ್ರೌಢದೇವರಾಯನು ಇಂದಿನ ತಾವರಗೆರೆ ಹತ್ತಿರ ಕೆರೆಯನ್ನು ನಿರ್ಮಿಸಿ ಅದರಲ್ಲಿ ಯಥೇಚ್ಛವಾಗಿ ತಾವರೆ ಹೂವುಗಳನ್ನು ಬೆಳೆಯುವಂತೆ ಮಾಡಿದನು. ಪದ್ಮಲಾದೇವಿಯು ಪೂಜೆಗೆ ದಿನಾಲು ತಾವರಕೆರೆಯಿಂದಲೇ ತಾವರೆ ಹೂವುಗಳನ್ನು ಕಳುಹಿಸಲಾಗುತ್ತಿತ್ತು. ಈ ಕೆರೆಗೆ ತಾವರೆಕೆರೆ ಎಂದು ಕರೆಯುತ್ತಿದ್ದರು. ಬರಬರುತ್ತ ಜನರ ಬಾಯಿಂದ ಬಾಯಿಗೆ ತಾವರಕೆರೆ > ತಾವರಕೆರಾ > ತಾವರಗೆರಾ ಎಂದು ರೂಪ ನಿಷ್ಪತ್ತಿಯಾಗುತ್ತ ಬಂದಿತು. ಈ ಕೆರೆಯ ಮುಂದುಗಡೆ ಇರುವ ಗ್ರಾಮಕ್ಕೆ ತಾವರಕೆರೆಯಂದು ಈಗ ತಾವರಕೆರೆ > ತಾವರಗೆರೆ ಎಂದು ಕರೆಯಿಸಿಕೊಂಡಿದೆ.

ಬಾವಿಗಳು

ಕೆರೆಗಳಂತೆ ಬಾವಿಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದವು. ಇವುಗಳ ನಿರ್ಮಾಣಕಾರ್ಯ ಪುರಾತನ ಕಾಲದಿಂದ ಆರಂಭಗೊಂಡಿದೆ. ತೋಟ-ಗದ್ದೆಗಳಲ್ಲಿ ಬಾವಿಗಳಿರುತ್ತಿದ್ದವು. ದೇವಾಲಯಗಳಿಗೆ ಹೊಂದಿಕೊಂಡಂತೆ ಬಾವಿಗಳನ್ನು ನಿರ್ಮಿಸುವುದು ಸಾಮಾನ್ಯವಾಗಿ ಕಂಡುಬರುತ್ತವೆ. ಬಾವಿಗಳ ನಿರ್ಮಾಣ ಕಾರ್ಯದ ಜೊತೆಗೆ

ಅದರ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡಲಾಯಿತು. ಬಾವಿಗಳು ಆಕರ್ಷಕವಾಗಿ ಕಾಣಲೆಂದು ಅಂದಿನ ದೇಶದ ಮೂಲೆಮೂಲೆಯಲ್ಲಿರುವ ಕಲ್ಕುಟಕರನ್ನು ಬರಮಾಡಿಕೊಂಡು ಕಟ್ಟಲಾಗುತ್ತಿತ್ತು. 'ನಮ್ಮ ಸಂಸ್ಕೃತಿಯ ಕುರುಹುಗಳಾದ ರಾಮಾಯಣ, ಮಹಾಭಾರತ ಮತ್ತು ಪಂಚತಂತ್ರ ಕಥೆಗಳು, ಶಿವ, ವಿಷ್ಣು, ಬ್ರಹ್ಮ, ಗಣೇಶ, ಪಾರ್ವತಿ ಮತ್ತು ಮುಂತಾದ ದೇವತೆಗಳ ಉಬ್ಬುಶಿಲ್ಪಗಳನ್ನು ಬಾವಿ ಕಟ್ಟಲಿಕ್ಕೆ ಬಳಸುತ್ತಿದ್ದ ಕಲ್ಲುಗಳ ಮೇಲೆ ಕೆತ್ತಿ ನಮ್ಮ ಸಂಸ್ಕೃತಿ ಜನರ ಮನಸ್ಸಿನಲ್ಲಿ ಸದಾ ಅಚ್ಚಳಿಯದಂತೆ ಉಳಿಯಲು ಸಹಕರಿಸಿದ್ದಾರೆ'.[೪೧]

ಕುಷ್ಟಗಿ ಪರಿಸರದ ಶಾಸನಗಳಲ್ಲಿ ಬಾವಿಗಳ ಪ್ರಸ್ತಾಪ ಎಲ್ಲೂ ಕಂಡುಬಂದಿಲ್ಲ. ಆದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಾವರಗೆರೆ, ಕುಷ್ಟಗಿ, ಹನುಮಸಾಗರ, ಪುರ್ತಗೇರಿ, ಹಿರೇ ಮನ್ನಾಪುರ, ಗೋತಗಿ ಮತ್ತು ಬಲ್ಲುಟಗಿಗಳಲ್ಲಿ ಪುರಾತನ ಬಾವಿಗಳಿವೆ. ಕಷ್ಟಗಿ ಪ್ರದೇಶದ ಜನರು ಪುರಾತನ ಕಾಲದಿಂದ ಬಾವಿಯ ನೀರನ್ನೇ ಕುಡಿಯಲಿಕ್ಕೆ ಬಳಸುತ್ತಿದ್ದರು. ಕಾಲಾನಂತರ ಅಂತರಜಲಮಟ್ಟ ಕಡಿಮೆಯಾದಾಗ ಜನರು ಬೋರವೆಲ್‌ಗಳನ್ನು ಹಾಕಿಸಲಿಕ್ಕೆ ಪ್ರಾರಂಭಿಸಿದರು. ಭೂಮಿಯ ಆಳಕ್ಕೆ ಹೋದಂತೆ ಮಣ್ಣಿನಲ್ಲಿರುವ ಸುಣ್ಣದ ಅಂಶ ನೀರಿನೊಂದಿಗೆ ಬೆರೆತಿದೆ. ಈ ನೀರನ್ನೇ ನಿರಂತರವಾಗಿ ಕುಡಿಯುವ ಜನರು ಎಲುಬುಗಳ ಸವೆತ, ಮಂಡಿನೋವುಗಳಂಥ ರೋಗದಿಂದ ಬಳಲುತ್ತಿದ್ದಾರೆ. ಈಗ ಬಹುತೇಕ ಬಾವಿಗಳೆಲ್ಲ ಬರಿದಾಗಿವೆ. ಈ ಭಾಗದಲ್ಲಿರುವ ಪುರಾತನ ಬಾವಿಗಳ ಬಗ್ಗೆ ವಿವರಿಸಿದ್ದೇನೆ.

ಕುಷ್ಟಗಿ

ಕುಷ್ಟಗಿಯಲ್ಲಿರುವ ಅತ್ಯಂತ ಪುರಾತನ ಬಾವಿ ರಾಷ್ಟ್ರೀಯ ಹೆದ್ದಾರಿ ೧೩ರ ಪಕ್ಕದಲ್ಲಿದೆ. ಇದು ನಗರದ ಈಶಾನ್ಯ ದಿಕ್ಕಿನಲ್ಲಿದೆ. ಬಾವಿಯ ಪ್ರವೇಶವು ನೈಋತ್ಯ ಮೂಲೆಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹದಿನೈದು ಮೆಟ್ಟಲುಗಳಿದ್ದು ನಂತರ ದಕ್ಷಿಣದಿಂದ ಉತ್ತರಾ ಭಿಮುಖವಾಗಿ ನೀರಿನವರೆಗೆ ಮೆಟ್ಟಿಲುಗಳಿವೆ. ಈ ಬಾವಿಯು ಸುಮಾರು ೩೦ ಅಡಿ ಅಗಲ ೨೦ ಅಡಿ ಉದ್ದವಾಗಿದೆ. ಈ ಬಾವಿಯನ್ನು ಕಲ್ಲುಗಳಿಂದ ಕಟ್ಟಲಾಗಿದೆ.

ಬಾವಿಯ ದಕ್ಷಿಣ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ನೀರನ್ನು ಮೇಲೆತ್ತಲು ಮಂದೆ ಚಾಚಿಕೊಂಡಿರುವ ಜಗಲಿ ಇದೆ. ಇದರ ಮೇಲೆ ಮುಂದೆ ಚಾಚಿಕೊಂಡಿರುವ ಕೈಸಾಲೆ ಇದೆ. ಈ ಕೈಸಾಲೆಯ ಕೆಳಗೆ ನೀರಿನ ಕಡೆಗೆ ಮುಖಮಾಡಿರುವಂತೆ ವಜ್ರಾಕಾರದ ಹೂವುಗಳಿಂದ ಅಲಂಕರಿಸಲ್ಪಟ್ಟಿದೆ. ಎರಡು ಕಲ್ಲುಗಳ ಮೇಲೆ ಮೀನಿನ ಶಿಲ್ಪವನ್ನು ಕೆತ್ತಲಾಗಿದೆ. ಈ ಬಾವಿಯಲ್ಲಿ ಇಂದಿಗೂ ನೀರು ಇದೆ. ಆದರೆ ಈ ನೀರು ಯಾರು ಬಳಸುವುದಿಲ್ಲ. ಈ ಬಾವಿಯ ಉತ್ತರ ದಿಕ್ಕಿನ ಗೋಡೆಯು ಕುಸಿಯುತ್ತಿದೆ. ಗೋಡೆಗಳಲ್ಲಿ ಗಿಡ-ಮರಗಳು ಬೆಳೆದಿವೆ.

ಕುಷ್ಟಗಿ (ಕಲ್ಲುಬಾವಿ)

ಕುಷ್ಟಗಿ ನಗರದ ಮಧ್ಯದಲ್ಲಿ ಈ 'ಕಲ್ಲುಬಾವಿ' ಇದೆ. ಇದು ಸುಮಾರು ೧೦೦ಅಡಿ ಉದ್ದ ೮೦ ಅಡಿ ಅಗಲವಾದ ಅಳತೆಯನ್ನು ಹೊಂದಿದೆ. ಈ ಬಾವಿಯು ಪೂರ್ವಾಭಿಮುಖವಾಗಿದ್ದು ಚೌಕಾಕಾರವಾಗಿದೆ. ಈ ಬಾವಿಯನ್ನು ಪ್ರವೇಶಿಸಲಿಕ್ಕೆ ಬಾವಿಯ ದಕ್ಷಿಣ ಗೋಡೆಯಲ್ಲಿ

ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳು ಮೇಲಿನಿಂದ ಪೂರ್ವಭಿಮುಖವಾಗಿದ್ದು, ನಂತರ ಕಮಾನವಿದೆ. ಇಲ್ಲಿಂದ ಉತ್ತರಭಿಮುಖವಾಗಿ ಮೆಟ್ಟಿಲುಗಳಿವೆ. ಈ ಬಾವಿಯನ್ನು ತಳಭಾಗದಿಂದ ಕೆಂಪು ಮತ್ತು ಕಪ್ಪು ಮಿಶ್ರಿತ ಕಲ್ಲುಗಳನ್ನು ನೀಟಾಗಿ ಕಡೆದು ಕಟ್ಟಲಾಗಿದೆ. ಈ ಬಾವಿಯ ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕಿನ ಗೋಡೆಗಳಲ್ಲಿ ಕಮಾನುಗಳನ್ನು ನಿರ್ಮಿಸಲಾಗಿದೆ. ಈಗ ಈ ಬಾವಿಯಲ್ಲಿ ನೀರು ಬತ್ತಿಹೋಗಿ ಮಕ್ಕಳ ಆಟದ ಮೈದಾನವಾಗಿದೆ. ಈ ಬಾವಿಯ ಜಗಲಿಯ ಭಾಗ ಸಂಪೂರ್ಣ ಹಾಳಾಗಿದೆ.

ತಾವರಗೆರೆ

ತಾವರಗೆರೆಯಲ್ಲಿ ಮೂರು ಪುರಾತನ ಬಾವಿಗಳಿವೆ. ಅವುಗಳು ವೈಜನಾಥ ದೇವಾಲಯದ ಎದುರಿಗೆ ಒಂದು, ಇದೇ ದೇವಾಲಯದ ಉತ್ತರ ದಿಕ್ಕಿನಲ್ಲಿ ಒಂದು ಮತ್ತು ಗ್ರಾಮದ ಮಧ್ಯದಲ್ಲಿ ಒಂದು ಹೀಗೆ ಒಟ್ಟು ಮೂರು ಪುರಾತನ ಬಾವಿಗಳಿವೆ.

ವೈಜನಾಥ ದೇವಾಲಯದ ಎದುರಿಗಿರುವ ಬಾವಿಯನ್ನು 'ವೈಜನಾಥ ಬಾವಿ' ಎಂದು ಕರೆಯುತ್ತಾರೆ. ಈ ಬಾವಿಯು ಉತ್ತರಾಭಿಮುಖವಾಗಿದ್ದು ನೀರಿನ ಹತ್ತಿರ ಹೋಗಲಿಕ್ಕೆ ಉತ್ತರ ಭಾಗದಲ್ಲಿ ದಕ್ಷಿಣಾಭಿಮುಖವಾಗಿ ಮೆಟ್ಟಿಲುಗಳು ಇವೆ. ಚೌಕಾಕಾರವಾಗಿರುವ ಈ ಬಾವಿಯನ್ನು ಕಲ್ಲುಗಳಿಂದ ಕಟ್ಟಲಾಗಿದೆ. ದಕ್ಷಿಣ ಭಾಗದ ಗೋಡೆಯಲ್ಲಿ ನೀರನ್ನು ಮೇಲೆತ್ತುವ ಜಗಲಿಯ ಅವಶೇಷಗಳನ್ನು ಗುರುತಿಸಬಹುದಾಗಿದೆ. ಬಾವಿಗೆ ಸರಿಯಾದ ಸಂರಕ್ಷಣೆ ಇಲ್ಲದ ಕಾರಣ ಇದರ ಸುತ್ತಲೂ ಗಿಡ-ಗಂಟೆಗಳು ಬೆಳೆದಿರುವುದರಿಂದ ಬಾವಿಯ ಕಟ್ಟಡ ಶಥಿಲಾವಸ್ಥೆಯಲ್ಲಿದೆ. ಬಾವಿಯಲ್ಲಿ ಸದಾಕಾಲ ನೀರು ತುಂಬಿರುತ್ತದೆ. ಆದರೆ ಬಳಕೆ ಮಾತ್ರ ಇಲ್ಲ.

ಈ ವೈಜನಾಥ ದೇವಾಲಯದ ಉತ್ತರ ಭಾಗದಲ್ಲಿರುವ ಹೊಲದಲ್ಲಿ ಒಂದು ಪುರಾತನ ಬಾವಿ ಇದ್ದು, ಇದನ್ನು ಸ್ಥಳೀಯವಾಗಿ 'ಕಾಸಬಾವಿ' ಎಂದು ಕರೆಯುತ್ತಾರೆ. ಈ ಬಾವಿಯು ಚೌಕಾಕಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಬಾವಿಯ ಉತ್ತರ ಭಾಗದಿಂದ ಪ್ರವೇಶ ಮೆಟ್ಟಿಲುಗಳಿವೆ. ಬಾವಿಯನ್ನು ಕಲ್ಲುಗಳಿಂದ ಕಟ್ಟಲಾಗಿದೆ. ಜಗಲಿಯ ಭಾಗ ಸಂಪೂರ್ಣ ಹಾಳಾಗಿದ್ದು ಸದಾಕಾಲ ನೀರು ತುಂಬಿರುತ್ತದೆ. ಈ ಬಾವಿಯ ಕಟ್ಟಡದ ಕಲ್ಲುಗಳೆಲ್ಲವು ಕುಸಿಯುವ ಸ್ಥಿತಿಯಲ್ಲಿವೆ.

ಗ್ರಾಮದ ಮಧ್ಯದಲ್ಲಿರುವ ಕರಿವೀರಣ್ಣ ಗುಡಿಯ ದಕ್ಷಿಣ ಭಾಗದಲ್ಲಿ ಪುರಾತನ ಬಾವಿ ಇದೆ. ಈ ಬಾವಿಯು ಆಯತಾಕಾರದಲ್ಲಿದ್ದು ದಕ್ಷಿಣಾಭಿಮುಖವಾಗಿದೆ. ಬಾವಿಯನ್ನು ಪ್ರವೇಶಿಸಲಿಕ್ಕೆ ದಕ್ಷಿಣ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿವೆ. ಈ ಬಾವಿಯಲ್ಲಿ ಸದಾಕಾಲ ನೀರು ತುಂಬಿರುತ್ತದೆ. ಆದರೆ ಬಳಸುವುದಿಲ್ಲ. ಬಾವಿಯ ಜಗಲಿಯ ಕಟ್ಟಡ ಸಂಪೂರ್ಣ ಕುಸಿದಿದೆ. ಇದರ ಸುತ್ತಲೂ ಅನೇಕ ಕಟ್ಟಡಗಳನ್ನು ಕಟ್ಟಿದ್ದರಿಂದ ಬಾವಿಯ ಇತರ ಅವಶೇಷಗಳು ಗುರುತಿಸಲಿಕ್ಕೆ ಸಾಧ್ಯವಾಗುವುದಿಲ್ಲ.

ಹನುಮಸಾಗರ (ತಂಗಮ್ಮನ ಬಾವಿ)

ಹನುಮಸಾಗರದ ಕೆ.ಇ.ಬಿ.ಕಛೇರಿ ಎದುರಿಗೆ ಒಂದು ಪುರಾತನ ಬಾವಿ ಇದೆ. ಸ್ಥಳೀಯರು ಇದನ್ನು 'ತಂಗಮ್ಮನ ಬಾವಿ' ಎಂದು ಕರೆಯುತ್ತಾರೆ. ಚೌಕಾಕಾರದಲ್ಲಿರುವ ಈ ಬಾವಿಯನ್ನು ಪ್ರವೇಶಿಸಲಿಕ್ಕೆ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳು ಬಾವಿಯ ಕಟ್ಟಡದ ಪೂರ್ವಭಾಗದಲ್ಲಿವೆ. ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳನ್ನು ಇಳಿದರೆ ಮುಂದೆ ಬೃಹತ್ ಕಮಾನವಿದೆ. ಇಲ್ಲಿಂದ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿದ್ದು, ಅವುಗಳು ನೀರಿನ ಮಟ್ಟಕ್ಕೆ ಹೋಗುತ್ತವೆ. ಸಧ್ಯ ಬಾವಿಯು ನೀರಿಲ್ಲದೆ ಬರಿದಾಗಿದೆ.

ಬಾವಿಯನ್ನು ತಳಭಾಗದಿಂದ ನೀಟಾಗಿ ಕಡೆದ ದೊಡ್ಡದಾದ ಕಲ್ಲುಗಳಿಂದ ಕಟ್ಟಲಾಗಿದೆ. ದಕ್ಷಿಣ ಭಾಗದ ಗೋಡೆಯ ಮಧ್ಯಭಾಗದಲ್ಲಿ ನೀರು ಮೇಲೆತ್ತುವ ಜಗಲಿಯಿದೆ. ಇದರ ಮೇಲೆ ಮುಂದೆ ಚಾಚಿಕೊಂಡಿರುವ ಕೈಸಾಲೆ ಇದೆ. ಈ ಕೈಸಾಲೆಯಲ್ಲಿ ಕಿಡಕಿಗಳಿವೆ. ಸರಿಯಾದ ರಕ್ಷಣೆ ಇಲ್ಲದ ಕಾರಣ ಕೈ ಸಾಲೆಯ ಶಿಥಿಲಾವಸ್ಥೆಗೆ ತಲುಪಿದೆ. ಜಗಲಿಯ ಕಟ್ಟಡದ ಕಲ್ಲುಗಳ ಮೇಲೆ ಹಾವು ಮತ್ತು ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಬಾವಿಯ ಪ್ರವೇಶದ್ವಾರದ ಕಮಾನಿನ ಹತ್ತಿರ ಎತ್ತರದ ಗೋಡೆಯಲ್ಲಿ ದಕ್ಷಿಣಾಭಿಮುಖವಾಗಿ ಆಂಜನೇಯ ಮತ್ತು ಪೂರ್ವಾಭಿಮುಖವಾಗಿ ಶಿವಲಿಂಗವಿರುವ ದೇವಾಲಯಗಳಿವೆ.

ಹಿರೇಮನ್ನಾಪುರ (ಜಕಣಾಚಾರಿ ಬಾವಿ)

ಹಿರೇಮನ್ನಾಪುರದಿಂದ ಕುಷ್ಟಗಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ಒಂದು ಪುರಾತನ ಬಾವಿ ಇದೆ. ಇದನ್ನು ಸ್ಥಳಿಯವಾಗಿ 'ಜಕಣಾಚಾರಿ ಬಾವಿ' ಎಂದು ಕರೆಯುತ್ತಾರೆ. ಚೌಕಾಕಾರವಾಗಿರುವ ಈ ಬಾವಿಯು ಪೂರ್ವಾಭಿಮುಖವಾಗಿದೆ. ಈ ಬಾವಿಯನ್ನು ಪ್ರವೇಶಿಸಲಿಕ್ಕೆ ಮೆಟ್ಟಿಲುಗಳಿದ್ದು, ಇವುಗಳು ಬಾವಿಯ ಕಟ್ಟಡದ ಪೂರ್ವ ದಿಕ್ಕಿನಲ್ಲಿವೆ. ಈ ಮೆಟ್ಟಿಲುಗಳು ಉತ್ತರಾಭಿಮುಖವಾಗಿದ್ದು ಕೆಲವು ಮೆಟ್ಟಿಲುಗಳ ನಂತರ ಪಶ್ಚಿಮಾಭಿಮುಖವಾಗಿವೆ. ಈ ಬಾವಿಯಲ್ಲಿ ಬಹುಕಾಲ ನೀರು ತುಂಬಿರುತ್ತದೆ. ಪ್ರವೇಶದ ಮೆಟ್ಟಿಲುಗಳು ನೀರಲ್ಲಿ ಮುಚ್ಚಿಕೊಂಡಿರುತ್ತವೆ. ಹೀಗಾಗಿ ಬಾವಿಯ ಕಟ್ಟಡ ಮತ್ತು ತಳಭಾಗ ಕಾಣುವುದಿಲ್ಲ. ಪಶ್ಚಿಮ ಭಾಗದ ಗೋಡೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ನೀರನ್ನು ಮೇಲೆ ಎತ್ತುವ ಸರಳವಾದ ಜಗಲಿಯನ್ನು ನಿರ್ಮಿಸಲಾಗಿದೆ. ಈ ಬಾವಿಯನ್ನು ಕಡೆದ ಕಲ್ಲುಗಳಿಂದ ಕಟ್ಟಲಾಗಿದೆ.

ಪುರ್ತಗೇರಿ

ಈ ಗ್ರಾಮದ ದಕ್ಷಿಣ ಭಾಗದಲ್ಲಿ ಒಂದು ಪುರಾತನ ಬಾವಿ ಇದೆ. ಈ ಬಾವಿಯು ಚೌಕಾಕಾರವಾಗಿದ್ದು ಪೂರ್ವಾಭಿಮುಖವಾಗಿದೆ. ಇದರ ಸುತ್ತಲೂ ಸಾಕಷ್ಟು ಗಿಡ–ಕಂಟಿಗಳು ಬೆಳೆದಿವೆ. ರಕ್ಷಣೆ ಇಲ್ಲದ ಕಾರಣ ಬಾವಿಯ ಕಟ್ಟಡ, ಜಗಲಿಯ ಭಾಗಗಳೆಲ್ಲ ಕುಸಿದಿವೆ. ಈ ಬಾವಿಯನ್ನು ಪ್ರವೇಶಿಸಲಿಕ್ಕೆ ದಕ್ಷಿಣ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿವೆ. ಇದರಲ್ಲಿ ನೀರು ತುಂಬಿದ್ದು ಈ ಬಾವಿಯನ್ನು ಕಲ್ಲುಗಳಿಂದ ಕಟ್ಟಲಾಗಿದೆ.

ಗೋತಗಿ

ಗ್ರಾಮದ ಮಧ್ಯದಲ್ಲಿರುವ ನಾಗಕನ್ನಿಕಾ ದೇವಾಲಯದ ಉತ್ತರ ದಿಕ್ಕಿನಲ್ಲಿ ಒಂದು ಪುರಾತನ ಬಾವಿಯಿದೆ. ಬಾವಿಯ ದಕ್ಷಿಣ ಭಾಗದಲ್ಲಿ ಉತ್ತರಾಭಿಮುಖವಾಗಿ ಇಳಿಯಲು ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳನ್ನು ಕಲ್ಲುಗಳಿಂದ ಕಟ್ಟಲಾಗಿದ್ದು, ಇನ್ನುಳಿದ ಬಾವಿಯ ಗೋಡೆ ಹಾಗೆಯೇ ಇದೆ.

ಬಲ್ಲುಟಗಿ

ಗ್ರಾಮದ ಪಶ್ಚಿಮದಿಕ್ಕಿನಲ್ಲಿ ಒಂದು ಪುರಾತನ ಬಾವಿ ಇದು ಸಂಪೂರ್ಣ ಶಥಿಲಾವಸ್ಥೆಯಲ್ಲಿದೆ. ಈ ಬಾವಿಯನ್ನು ಕಲ್ಲುಗಳಿಂದ ಕಟ್ಟಲಾಗಿದ್ದು, ಜಗಲಿ ಮತ್ತು ಬಾವಿಯ ಕಟ್ಟಡ ಕುಸಿದಿದೆ. ಈ ಬಾವಿಯು ಪೂರ್ವಾಭಿಮುಖವಾಗಿದ್ದು, ಬಾವಿಯ ಕಟ್ಟದ ಕಲ್ಲುಗಳ ಮೇಲೆ ಹಾವು ಮತ್ತು ಮೀನಿನ ಶಿಲ್ಪಗಳು ಕಂಡುಬರುತ್ತವೆ.

ಹೀಗೆ ಕುಷ್ಟಗಿ ಪ್ರದೇಶದ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಬಾವಿಗಳನ್ನು ಗುರುತಿಸಿ ಚರ್ಚಿಸಲಾಗಿದೆ. ಅಂತರಜಲಮಟ್ಟ ಕುಸಿದಂತೆ ಬಾವಿಗಳು ಬತ್ತಿಹೋದವು. ಕೆಲವು ಬಾವಿಗಳಲ್ಲಿ ನೀರಿದ್ದರು ಸ್ವಚ್ಛತೆ ಇಲ್ಲದ ಕಾರಣ ಆ ನೀರನ್ನು ಯಾರೂ ಬಳಸುತ್ತಿಲ್ಲ.

ಅಡಿಟಿಪ್ಪಣಿ

೧. ಸುರೇಶ.ಕೆ.ಎಂ. ಮತ್ತು ಇತರರು ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ ಪು.೧೪
೨. ಅಪರ್ಣ.ಕೂ.ಸ. ದೇವಾಲಯ ವಾಸ್ತುಶಿಲ್ಪ ಪರಿಚಯ ಪು.೨
೩. ನಂದಿಮಠ.ಎಸ್.ಸಿ. ಕನ್ನಡ ನಾಡಿನ ಚರಿತ್ರೆ ಭಾಗ–೨ ಪು.೨೫
೪. ಅದೇ. ಪು.೬೪
೫. ಕೆ.ಶಿವರಾಂ ಕಾರಂತ ಭಾರತೀಯ ಶಿಲ್ಪ ಪು.೭
೬. ಎಚ್.ತಿಪ್ಪೇರುದ್ರಸ್ವಾಮಿ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪು.೬೨೮
೭. ಪುರ, ಕೋಟಿಲಿಂಗೇಶ್ವರ ದೇವಾಲಯದಲ್ಲಿ
೮. ಅಂಟೂರತಾಣ, ದುರ್ಗಮ್ಮ ದೇವಾಲಯದಲ್ಲಿ
೯. ಕಾಟಾಪುರ, ಮಹಾಬಳೇಶ್ವರ ದೇವಾಲಯದ ಆವರಣದಲ್ಲಿ
೧೦. ಚಂದಾಲಿಂಗ, ಈಶ್ವರ ದೇವಾಲಯದ ಮಂಟಪದಲ್ಲಿ
೧೧. ಪುರ, ಕೋಟಿಲಿಂಗೇಶ್ವರ ದೇವಾಲಯದಲ್ಲಿ
೧೨. ಗೋತಗಿ, ಆಂಜನೇಯ ದೇವಾಲಯದ ಹತ್ತಿರ
೧೩. ಆಚನೂರ, ಮಳೆಮಲ್ಲೇಶ್ವರ ದೇವಾಲಯದ ಹತ್ತಿರ
೧೪. ಚಂದ್ರಗಿರಿ, ಈಶ್ವರ ದೇವಾಲಯದ ಎದುರು
೧೫. ಕುಷ್ಟಗಿ, ರಾಮಲಿಂಗೇಶ್ವರ ದೇವಾಲಯದಲ್ಲಿ
೧೬. ಪುರ, ವೀರಭದ್ರ ದೇವಾಲಯದಲ್ಲಿ
೧೭. ಚಂದಾಲಿಂಗ ವೀರಭದ್ರ ದೇವಾಲಯದಲ್ಲಿ
೧೮. ಚಳಗೇರಿ, ವೀರಭದ್ರ ದೇವಾಲಯದಲ್ಲಿ
೧೯. ತಾವರಗೆರೆ, ವೀರಭದ್ರ ದೇವಾಲಯದಲ್ಲಿ
೨೦. ಗಂಗನಾಳ, ಪಂಚಪಕ್ಷಿ ಆಂಜನೇಯ ದೇವಾಲಯದ ಆವರಣದಲ್ಲಿ
೨೧. ಪುರ, ಸೋಮನಾಥ ದೇವಾಲಯದಲ್ಲಿ
೨೨. ಶ್ಯಾಡಲಗೇರಿ, ನಾರಾಯಣ ದೇವಾಲಯದಲ್ಲಿ
೨೩. ಶ್ರೀನಿವಾಸ ಪಾಡಿಗಾರ, ಗಣಪತಿ ಮತ್ತು ಕರ್ನಾಟಕ ಪ್ರಾಚೀನ ಗಣಪತಿ ಪ್ರತಿಮೆಗಳು ಪು.೫
೨೪. ಹೂಲಗೇರಿ, ಸಂಗಮೇಶ್ವರ ದೇವಾಲಯದ ಮಂಟಪದಲ್ಲಿ
೨೫. ಅಂಟೂರತಾಣ, ಜಂಬುನಾಥ ದೇವಾಲಯದ ಸಭಾಮಂಟಪದಲ್ಲಿ
೨೬, ಮುದೇನೂರು, ಶಶಿಧರಸ್ವಾಮಿ ಮಠದ ಎದುರಿಗೆ
೨೭. ಪುರ, ಸೋಮೇಶ್ವರ ದೇವಾಲಯದಲ್ಲಿ
೨೮. ಗೋತಗಿ, ಶಂಕರಲಿಂಗ ದೇವಾಲಯದಲ್ಲಿ
೨೯. ತಾವರಗೆರೆ, ವೈಜನಾಥ ದೇವಾಲಯದಲ್ಲಿ
೩೦. ಮುದೇನೂರ, ಶಶಿಧರಸ್ವಾಮಿ ಮಠದ ಎದುರಿಗೆ
೩೧. ಮಾಲಗಿತ್ತಿ, ಶಾಲೆಯ ಆವರಣದಲ್ಲಿ
೩೨. ಚಳಗೇರಿ, ದುರ್ಗಮ್ಮ ದೇವಾಲಯದ ಎದುರು
೩೩. ಅಂಟೂರತಾಣ, ದುರ್ಗಮ್ಮ ದೇವಾಲಯದಲ್ಲಿ
೩೪. ಪಾಟೀಲ್.ಸಿ.ಎಸ್. ಕರ್ನಾಟಕದ ಕೋಟೆಗಳು ಪು.೧
೩೫. ಹನುಮಾಕ್ಷಿ ಗೂಗಿ. ರಾಠೋಡ.ಪಿ.ಕೆ. ಡಂಬಳ ಸಾಂಸ್ಕೃತಿಕ ಅಧ್ಯಯನ ಪು.೬೯
೩೬. ಪಾಟೀಲ್.ಸಿ.ಎಸ್. ಕರ್ನಾಟಕದ ಕೋಟೆಗಳು ಪು.೬

೩೭. ಹನುಮಗೌಡ.ಸಿ. ಕುಷ್ಟಗಿ ತಾಲ್ಲೂಕ ದರ್ಶನ ಪು.೩೮

೩೮. ಚಿದಾನಂದಮೂರ್ತಿ.ಎಂ. ಕರ್ನಾಟಕದ ಶಾಸನಗಳ ಸಾಸ್ಕೃತಿಕ ಅಧ್ಯಯನ ಪು.೪೪೯

೩೯. ಕ.ವಿ.ವಿ.ಶಾ.ಸಂ–೨ ಕೊ.ಜಿ.ಕು.ತಾ ಶಾ.ಸಂ.೧೨ ಕ್ರಿ.ಶ.ಸು.೧೪೪೬

೪೦. ಅದೇ ಶಾ.ಸಂ.೧೨ ಕ್ರಿ.ಶ.ಸು.೧೪೪೬.

೪೧. ವಿನೋದಾ ಪಾಟೀಲ. ಕರ್ನಾಟಕದ ಪ್ರಾಚೀನ ಬಾವಿಗಳು ಪು.೨೩

ಅಧ್ಯಾಯ – ೬

ಸಮಾರೋಪ

ಅನುಬಂಧಗಳು

ನಕ್ಷೆಗಳು

ಗ್ರಂಥಋಣ

ಛಾಯಾಚಿತ್ರಗಳು

ಅಧ್ಯಾಯ – ೬

ಸಮಾರೋಪ

ಇತಿಹಾಸ ಎಂದರೆ ಕೇವಲ ಘಟನೆಗಳ ಸರಮಾಲೆಯಾಗಿರದೆ ಜೀವನದ ಮೌಲ್ಯಗಳನ್ನು ಬಿಂಬಿಸಿ ಜನರು ಅವುಗಳನ್ನು ರೂಢಿಸಿಕೊಳ್ಳುವಂತೆ ಪ್ರೇರಿಪಿಸುವುದಾಗಿದೆ. ಕನ್ನಡ ನಾಡಿನ ಪ್ರಾಚೀನ ಸಂಸ್ಕೃತಿಯ ಅಧ್ಯಯನಕ್ಕೆ ಮತ್ತು ರಾಜಕೀಯ ಇತಿಹಾಸಕ್ಕೆ ಪೂರಕವಾಗಿ ಶಾಸನಗಳು ಹೇಗೆ ಸಹಾಯವಾಗಿವೆ ಎಂಬುದನ್ನು ತಿಳಿಯುವುದೇ ಈ ಅಧ್ಯಯನದ ಮೂಲ ಉದ್ದೇಶ. ಹಾಗೆಯೇ ಕೊಪ್ಪಳ ಜಿಲ್ಲೆಯ ತಾಲ್ಲೂಕಿನಲ್ಲಿ ಅನಾಧರಕ್ಕೆ ಒಳಗಾಗಿದ್ದ ಶಾಸನ ಹಾಗೂ ಸ್ಮಾರಕ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳ ಮಹತ್ವವನ್ನು ಬಿಂಬಿಸುವುದು ಇಲ್ಲಿನ ಮತ್ತೊಂದು ಪ್ರಧಾನ ಅಂಶವಾಗಿದೆ.

ಕುಷ್ಟಗಿ ತಾಲ್ಲೂಕಿನಲ್ಲಿರುವ ಪ್ರಕಟಿತ ಮತ್ತು ಅಪ್ರಕಟಿತ ಶಾಸನ ಮತ್ತು ಸ್ಮಾರಕಗಳನ್ನು ಸಂರಕ್ಷಿಸದಿರುವುದು ಶಾಸನಾಸಕ್ತರಿಗೆ ಮತ್ತು ಶಾಸನ ಪ್ರಪಂಚಕ್ಕೆ ನೋವಿನ ಸಂಗತಿಯಾಗಿದೆ. ಇಂಥಹ ಸಂದರ್ಭದಲ್ಲಿ ಅವುಗಳನ್ನು ಶೋಧಿಸಿ ಮಾಹಿತಿ ಸಂಗ್ರಹಿಸಿ ಅಧ್ಯಯನ ನಡೆಸಿದ್ದೇವೆಂದು ಹೇಳಬಹುದು. ಈ ದೃಷ್ಟಿಯಿಂದ ಶಾಸನಗಳನ್ನು ಮತ್ತು ಸ್ಮಾರಕ ಶಾಸನಗಳನ್ನು ಒಂದೆಡೆ ಸಂಗ್ರಹಿಸಿ ಅಧ್ಯಯನ ಮಾಡಿರುವುದು ತಾಲ್ಲೂಕಿನ ಮಟ್ಟಿಗೆ ಮೊಟ್ಟಮೊದಲ ಪ್ರಯತ್ನ.

ಪ್ರತಿನಿತ್ಯವೂ ಹೊಸ ಶಾಸನಗಳು ಮತ್ತು ಸ್ಮಾರಕ ಶಾಸನಗಳು ಬೆಳಕಿಗೆ ಬರುತ್ತಲೇ ಇವೆ. ಹೀಗಾಗಿ ನಾವೂ ಕ್ಷೇತ್ರಕಾರ್ಯ ಮಾಡಿದಾಗ ನಮ್ಮ ಗಮನಕ್ಕೆ ಬರದೆ ದೊರಕದೆ ಇರುವ ಶಾಸನಗಳು ಮುಂದೆ ಅಧ್ಯಯನ ಕೈಗೊಂಡವರಿಗೆ ದೊರಕಬಹುದು. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿನ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ನಮ್ಮ ಅಧ್ಯಯನದ ಶಾಸನಗಳ ವಿಷಯವನ್ನು ಹಲವಾರು ಭಾಗಗಳಾಗಿ ವಿಭಜಿಸಿಕೊಂಡು ಹೆಚ್ಚು ವಿಶ್ಲೇಷಣೆಗೆ ಪ್ರಾಮುಖ್ಯತೆ ನೀಡಿ ಅಧ್ಯಯನ ನಡೆಸಲಾಗಿದೆ. ಸ್ಮಾರಕ ಶಾಸನಗಳಲ್ಲಿ ಕೂಡ ಹೊಸ ಅಂಶಗಳನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ.

ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿರುವ ಶಾಸನಗಳು ಮತ್ತು ಶಾಸನಶಿಲ್ಪಗಳ ಬಗ್ಗೆ ಜನರಿಗೆ ಇರುವ ಅಸಡ್ಡೆಯ ಮನೋಭಾವ, ತಪ್ಪು ತಿಳುವಳಿಕೆ ಅವುಗಳ ಬಗ್ಗೆ ಸರಿಯಾದ ಅರಿವಿಲ್ಲದಿರುವುದೇ ಇವುಗಳು ಅನಾಧರಕ್ಕೆ ಕಾರಣಗಳಾಗಿವೆ. ಶಾಸನಗಳು ಮತ್ತು ಶಾಸನಶಿಲ್ಪಗಳ ಮಹತ್ವ ಮತ್ತು ಅವುಗಳಲ್ಲಿನ ಉತ್ತಮ ವಿಷಯಗಳು ಜನಸಾಮಾನ್ಯರಿಗೆ ಅರ್ಥವಾದರೆ, ತಿಳಿದರೆ ಅವುಗಳನ್ನು ಕಾಪಾಡಿ, ಸಂರಕ್ಷಿಸುವ ಜವಾಬ್ದಾರಿಯನ್ನು ಹೊರಲು ಪ್ರಯತ್ನಿಸುತ್ತಾರೆ. ಹಾಗೂ ಪ್ರಸ್ತುತ ಸಮಯದಲ್ಲಿ ಇವುಗಳಿಂದ ಯಾವ ಪ್ರಯೋಜನವು ಇಲ್ಲ ಎಂಬ ಭಾವನೆ ಇರುವುದರಿಂದ ಶಾಸನಾಧ್ಯಯನ ಮಾಡುವವರು ವಿರಳವಾಗಿದ್ದಾರೆ.

[illegible]

ತಿರುಳ್ಗನ್ನಡ ಪ್ರದೇಶವೆಂದು ಕರೆಯಲ್ಪಟ್ಟಿರುವ ಕೊಪ್ಪಳ ಪ್ರದೇಶವು ಇತಿಹಾಸ ಪ್ರಸಿದ್ಧ ನಾಡು. ಈ ಪ್ರದೇಶದ ಕುಷ್ಟಗಿ ತಾಲ್ಲೂಕಿನಲ್ಲಿ ಕಲ್ಯಾಣ ಚಾಲುಕ್ಯರಿಂದ ವಿಜಯನಗರ ಅರಸರವರೆಗಿನ ಶಾಸನಗಳು ಕಂಡುಬಂದಿವೆ. ಈ ಶಾಸನಗಳ ಸಮಗ್ರ ಅಧ್ಯಯನದ ಪ್ರಸ್ತುತ ಪ್ರಬಂಧದ ತಲೆಬರಹ 'ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು'. ಈ ಮಹಾ ಪ್ರಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿದೆ.

'ಕುಷ್ಟಗಿ ಪರಿಸರದ ಪರಿಚಯ ಮತ್ತು ಹಿನ್ನೆಲೆ' ಅಧ್ಯಾಯದಲ್ಲಿ ಕುಷ್ಟಗಿ ಪ್ರದೇಶದ ಭೌಗೋಳಿಕ ವಿವರಗಳನ್ನು ವಿವರಿಸಲಾಗಿದೆ. ಈ ತಾಲ್ಲೂಕಿನಲ್ಲಿರುವ ಬೆಟ್ಟ, ಅರಣ್ಯ, ಸಸ್ಯ ಪ್ರಾಣಿಗಳು, ಮಣ್ಣು, ಶಿಲೆ, ಖನಿಜ, ಹವಾಮಾನ, ನದಿ, ಹಳ್ಳ, ಕೆರೆಗಳು, ನೀರಾವರಿ ಸೌಲಭ್ಯ ಮತ್ತು ಬೆಳೆಗಳನ್ನು ಕುರಿತು ವಿವರಿಸಲಾಗಿದೆ. ಪ್ರಾಗಿತಿಹಾಸದಲ್ಲಿ ಈ ತಾಲ್ಲೂಕಿನ ಪರಿಸರದಲ್ಲಿ ದೊರೆತಿರುವ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಗಮನಿಸಿ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ, ಶಿಲಾತಾಮ್ರಯುಗ ಮತ್ತು ಬೃಹತ ಶಿಲಾಯುಗ ಸಂಸ್ಕೃತಿಗಳ ಬಗ್ಗೆ ಚರ್ಚಿಸಲಾಗಿದೆ. ಹಾಗೆಯೇ ಪ್ರಾಗಿತಿಹಾಸ ಕಾಲದ ಚಿತ್ರಕಲೆ, ಗವಿವರ್ಣ ಚಿತ್ರಗಳು, ಬಯಲುಬಂಡೆ ಕೊರೆದ ಮತ್ತು ಕುಟ್ಟಿದ ಚಿತ್ರಗಳ ಬಗ್ಗೆ ಗಮನಿಸಲಾಗಿದೆ. ಇವುಗಳಿಂದ ಈ ಪ್ರದೇಶ ಶಿಲಾಯುಗ ಕಾಲದಿಂದ ಮಾನವನ ನೆಲೆಯಾಗಿತ್ತೆಂದು ಸ್ಪಷ್ಟವಾಗುತ್ತದೆ.

ಈ ತಾಲ್ಲೂಕಿನಲ್ಲಿರುವ ಶಾಸನಗಳ ಆಧಾರದಿಂದ ಈ ಪ್ರದೇಶದ ಇತಿಹಾಸವನ್ನು ಪುನರಚಿಸಲಾಗಿದೆ. ಈ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರ, ಕಲಚುರಿಗಳ, ದೇವಗಿರಿ ಸೇವುಣರ, ವಿಜಯನಗರಗಳ ಕಾಲಾವಧಿಯ ಶಾಸನಗಳಿವೆ. ಇವುಗಳಿಂದ ಈ ಪ್ರದೇಶದಲ್ಲಿ ಇವರುಗಳ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ. ಈ ಭಾಗದಲ್ಲಿ ಕ್ರಿ.ಶ.೯೯೭ ರಿಂದ ಕ್ರಿ.ಶ.೧೫೪೭ರ ವರೆಗಿನ ಶಾಸನಗಳಿವೆ. ಇವುಗಳಲ್ಲಿ ಪ್ರಾಚೀನ ಶಾಸನ ಹಿರೇಮನ್ನಾಪುರದಲ್ಲಿದೆ. ಈ ಶಾಸನಗಳಲ್ಲಿ ಬಹುತೇಕವು ದಾನಶಾಸನಗಳೇ ಆಗಿವೆ. ಈ ತಾಲ್ಲೂಕಿನಲ್ಲಿ ತಾಮ್ರ ಶಾಸನಗಳು ಈವರೆಗೆ ಪತ್ತೆಯಾಗಿಲ್ಲ. ಪ್ರಕಟಿತ ಶಾಸನಗಳನ್ನೇ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ಶಾಸನಗಳ ಅಧ್ಯಯನ' ಅಧ್ಯಾಯದಲ್ಲಿ ಶಾಸನ ಅಧ್ಯಯನದ ಇತಿಹಾಸ, ಶಾಸನಗಳಲ್ಲಿನ ವಸ್ತು, ವಿಷಯ ಮತ್ತು ವೈವಿಧ್ಯದ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಗಿದೆ. ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಿತ ಶೈವ ಮತ್ತು ವೈಷ್ಣವ ಪ್ರಾರ್ಥನಾ ಶ್ಲೋಕಗಳ ಬಗ್ಗೆ ವಿವೇಚಿಸಲಾಗಿದೆ. ಶಾಸನಗಳಲ್ಲಿ ಉಲ್ಲೇಖಿತ ಕಾಲದ ನಿರೂಪಣೆಗಳನ್ನು ಶಕವರ್ಷ, ವಿಕ್ರಮಶಕೆ, ಸಂವತ್ಸರಗಳು, ಪಕ್ಷಗಳು, ತಿಥಿಗಳು ಮತ್ತು ಗ್ರಹಣಗಳ ಬಗ್ಗೆ ಚರ್ಚಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಅರಸರು ತಮ್ಮ ಸಾಮ್ರಾಜ್ಯಗಳನ್ನು ಆಡಳಿತದ ಅನುಕೂಲಕ್ಕಾಗಿ ಪ್ರಾಂತ, ನಾಡು, ವಿಷಯ, ಪ್ರದೇಶ ಮುಂತಾದ ವಿಭಾಗಗಳ ರೂಪದಲ್ಲಿ ವಿಭಜಿಸಿ ಆಡಳಿತ ನಡೆಸುತ್ತಿದ್ದರು. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಎಡದೊರೆ-೨೦೦೦, ಕರಡಿಕಲ್ಲು-೩೦೦, ಕೆಳವಡಿ-೩೦೦, ಕಿಸುಕಾಡು-೭೦ ಮತ್ತು ನರೆಯಂಗಲು-೧೨ ಈ ಆಡಳಿತ ವಿಭಾಗಗಳ ಉಲ್ಲೇಖವಿದ್ದು ಇವುಗಳ ಬಗ್ಗೆ ಚರ್ಚಿಸಲಾಗಿದೆ.

ಪ್ರಾಚೀನ ಕಾಲದ ಆಡಳಿತವು ಅರಸ, ಮಂಡಳೇಶ್ವರ. ಮಹಾಮಂಡಳೇಶ್ವರ, ಸಾಮಂತ, ಮಹಾಸಾಮಂತರಿಂದ ಕೂಡಿದ್ದರೆ ಗ್ರಾಮಾಡಳಿತವು ಗಾವುಂಡ ಮತ್ತು ಪ್ರಭುಗಾವುಂಡರಿಂದ ಕೂಡಿರುತ್ತಿತ್ತು. ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ವಿವಿಧ ಸಾಮ್ರಾಜ್ಯಗಳ ಅರಸರು, ಮಂಡಳೇಶ್ವರರು, ಸಾಮಂತರು ಮತ್ತು ದಂಡನಾಯಕರುಗಳ ಹೆಸರು ಶಾಸನಗಳಲ್ಲಿ ಉಲ್ಲೇಖಗಳಿವೆ. ಸಾಮಂತರಲ್ಲಿ ವರ್ಮದೇವನ ಹೆಸರಿದ್ದು ಇವನು ಅಹವಮಲ್ಲದೇವನ ಮಹಾ ಸಾಮಂತನಾಗಿದ್ದು ಎಡದೊರೆ–೨೦೦೦ನ್ನು ಆಳುತ್ತಿದ್ದನೆಂದು ಶಾಸನದಿಂದ ತಿಳಿದುಬರುತ್ತದೆ.

ಅರಸ ಮತ್ತು ಪ್ರಜೆಗಳ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದವರು ದಂಡನಾಯಕರು. ರೇಚಿಮಯ್ಯ ದಂಡನಾಯಕ, ಚಿಮ್ಮಯ್ಯ ದಂಡನಾಯಕ, ಲಕ್ಷ್ಮೀದೇವ, ಬೊಪ್ಪ, ಚಾಮುಂಡ, ವಿಷ್ಣುವರಸ ಮತ್ತು ಸೋಭನರಸ ಈ ಎಲ್ಲ ದಂಡನಾಯಕರ ಹೆಸರು ಈ ಪ್ರದೇಶದ ಶಾಸನಗಳಲ್ಲಿವೆ. ಪ್ರಾಚೀನ ಕಾಲದ ಹಳ್ಳಿಗಳ ಆಡಳಿತವನ್ನು ಗಾವುಂಡರು ಮತ್ತು ಪ್ರಭುಗಾವುಂಡರು ನೋಡಿಕೋಳ್ಳುತ್ತಿದ್ದರು. ಬೊಮ್ಮಗಾವುಣ್ಡ, ಎಂಟುಗಾವುಂಡರು, ಸೊಪೊತ ರಾಚಮಗಾಮುಣ್ಡ, ನಿರಮೊಪ್ಪ ಆಚಗಾಮುಣ್ಡ, ಸಿಂಗಗಾವುಣ್ಡ ಮತ್ತು ಮೆಲರಿಗೌಡ ಇವರುಗಳ ಹೆಸರು ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಹೀಗೆ ಅರಸನ ಅಧೀನದಲ್ಲಿದ್ದ ಮಂಡಳೇಶ್ವರರು, ಸಾಮಂತರು ಮತ್ತು ಗಾವುಂಡರ ಕಾರ್ಯವೈಖರಿಯು ಸಾಮಾನ್ಯ ಜನರ ಹಾಗೂ ಅರಸನ ಮೇಲೆ ಪ್ರಭಾವದ ವಿವರಣೆ ಇಲ್ಲಿಯ ಶಾಸನಗಳಲ್ಲಿದೆ.

ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ವಿದ್ಯೆಗೆ ಅಪಾರ ಗೌರವವನ್ನು ನೀಡುತ್ತ ಸಾಧ್ಯವಾದಷ್ಟು ವ್ಯಾಪಕವಾಗಿ ಬೆಳೆಸುವ ಪ್ರಯತ್ನ ಮಾಡಲಾಗಿದೆ. ಪ್ರಾಚೀನ ವಿದ್ಯಾಕೇಂದ್ರಗಳಾದ ಅಗ್ರಹಾರ ಮತ್ತು ಘಟಿಕಸ್ಥಾನಗಳ ಉಲ್ಲೇಖ ಇಲ್ಲಿಯ ಶಾಸನಗಳಲ್ಲಿವೆ. ಬೆಳೆನೆಗೆಯೂರು (ಬಳಗೇರಿ), ಚಳಗೇರಾ, ಸಿಂಧನೂರು, ಮಾದನೂರು ಮತ್ತು ನಡುಗೊಳ ಇವುಗಳು ಅಗ್ರಹಾರ ಗಳಾಗಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಬ್ರಹ್ಮಪುರಿಯ ಉಲ್ಲೇಖಗಳಿಲ್ಲ. ಘಟಿಕಸ್ಥಾನ ವೆಂದು ಉಲ್ಲೇಖವಿದೆ ಆದರೆ ಸ್ಥಳದ ಹೆಸರಿಲ್ಲ.

ಕುಷ್ಟಗಿ ಪ್ರದೇಶದ ಶಾಸನಗಳಲ್ಲಿ ಅನೇಕ ವರ್ತಕ ಸಂಘಗಳ ಉಲ್ಲೇಖಗಳಿವೆ. ವೃತ್ತಿಯವರು ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಸೇರಿಕೊಂಡು ಕಟ್ಟಿದ, ಹುಟ್ಟುಹಾಕಿದ ಶ್ರೇಣಿಗಳೇ ವರ್ತಕ ಸಂಘಗಳು. ಇಲ್ಲಿಯ ಶಾಸನಗಳಲ್ಲಿ ನಾನಾದೇಶಿ, ಅಯ್ಯಾವೂಳೆ, ತಂಬುಲಿಗ ಸಾಸಿರ್ವ್ವರು, ತೆಲ್ಲಿಗರೈವತ್ತೊಕ್ಕಲು, ಮಾಲೆಗಾರ, ಮುಮ್ಮರಿದಂಡ, ಎಂಟುಹಿಟ್ಟು, ನಖರರು ಮತ್ತು ಸೆಟ್ಟಿಗಳ ಉಲ್ಲೇಖಗಳು ಕಂಡುಬರುತ್ತವೆ. ಇವುಗಳಿಂದ ಈ ಪ್ರದೇಶದಲ್ಲಿ ವ್ಯಾಪಾರಿಗಳು ಮತ್ತು ವೃತ್ತಿಸಂಘಗಳಿದ್ದವೆಂದು ತಿಳಿದುಬರುತ್ತದೆ.

ಪ್ರಾಚೀನ ಕಾಲದಿಂದ ಮಾನವನು ತನ್ನ ದಿನನಿತ್ಯದ ವ್ಯವಹಾರಕ್ಕಾಗಿ ತನ್ನದೆ ಆದ ವಿಧಾನಗಳನ್ನು ಅನುಸರಿಸಿ ಅಳತೆ ಮತ್ತು ಮಾಪನಗಳನ್ನು ಮಾಡಿಕೊಂಡಿದ್ದನು. ಕುಷ್ಟಗಿ ಪರಿಸರದಲ್ಲಿ ದಾನ ಶಾಸನಗಳ ಸಂಖ್ಯೆಯೇ ಹೆಚ್ಚಾಗಿದ್ದು, ಒಂದಲ್ಲ ಒಂದು ರೀತಿಯ ಅಳತೆ ಮಾಪನಗಳ ಉಲ್ಲೇಖ ಶಾಸನಗಳಲ್ಲಿವೆ. ಮತ್ತರು, ಕಮ್ಮ, ಪಣಂ ಮತ್ತು ಕೋಲುಗಳು ಅಳತೆಯ

ಮಾಪನಗಳಾಗಿದ್ದವೆಂದು ತಿಳಿಯುತ್ತದೆ. ಬೆಳೆದ ಧಾನ್ಯಗಳನ್ನು ಹಾಗೂ ಭೂಮಿಯನ್ನು ಅಳಯಲು ವಿವಿಧ ಮಾಪನಗಳನ್ನು ಬಳಸುತ್ತಿದ್ದರೆಂದು ಹೇಳಬಹುದಾಗಿದೆ.

ಕುಷ್ಟಗಿ ತಾಲ್ಲೂಕಿನಲ್ಲಿರುವ ಶಾಸನಗಳಲ್ಲಿ ಅನೇಕ ಸ್ಥಳನಾಮ ಮತ್ತು ವೃತ್ತಿಸೂಚಕ ನಾಮಗಳ ಉಲ್ಲೇಖಗಳಿವೆ. ಶಾಸನೋಕ್ತ ಹೆಸರುಗಳನ್ನು ಆಧುನಿಕ ಹೆಸರುಗಳೊಂದಿಗೆ ತಿಳಿಸಲಾಗಿದೆ. ಸ್ಥಳನಾಮಗಳಲ್ಲಿ ಅಡಗಿರುವ ನೈಸರ್ಗಿಕ ಲಕ್ಷಣಗಳನ್ನು ಗುರುತಿಸಿ, ವಿಭಜಿಸಿ ತಿಳಿಸುವ ಪ್ರಯತ್ನ ಮಾಡಲಾಗಿದೆ. ಇವುಗಳ ಜೊತೆಗೆ ವೃತ್ತಿಸೂಚಕ ನಾಮಗಳನ್ನು ಸಹ ತಿಳಿಸಲಾಗಿದೆ. ಶಾಸನಗಳಲ್ಲಿ ತಳವಾರ, ಕುಂಬಾರ, ಕ್ಷೌರಿಕ, ಬಡಗಿ ಇನ್ನೂ ಮುಂತಾದವುಗಳ ಉಲ್ಲೇಖಗಳಿವೆ. ಹಾಗೇ ತಂಮಣನಾಯಕ, ವಿರುಪಣನಾಯಕ, ಕೆಂಚಯ್ಯ, ರಾಮಯ್ಯ ಇಂಥ ಹೆಸರುಗಳ ಉಲ್ಲೇಖಗಳಿದ್ದು ಇವುಗಳು ಇಂದಿಗೂ ಜನಸಾಮಾನ್ಯರು ಬಳಸುತ್ತಿರುವುದನ್ನು ತಿಳಿಯಬಹುದಾಗಿದೆ. ತಾಲ್ಲೂಕಿನ ಒಂದು ಶಾಸನದಲ್ಲಿ ಮಾತ್ರ ಶಾಸನ ಕವಿಯ ಹೆಸರು ಸೇನಭೋವ ಬಂಮರಸನೆಂದು ಕಂಡುಬಂದಿದೆ. ಲಿಪಿಕಾರ ಬರೆದ ಅಕ್ಷರಗಳನ್ನು ಖಂಡರಣಿಗಳು ತಮ್ಮ ವಿಶೇಷವಾದ ಕೌಶಲ್ಯದಿಂದ ಶಿಲಾಫಲಕದ ಮೇಲೆ ಕೆತ್ತುತ್ತಿದ್ದರು. ಹೀಗೆ ರಚನೆಯಾದ ಶಾಸನಗಳು ಹಾಳಾಗಬಾರದೆಂಬ ಉದ್ಧೇಶದಿಂದ ಜನಸಾಮಾನ್ಯರಲ್ಲಿ ಪಾಪ-ಪುಣ್ಯದ ಭಾವನೆಯನ್ನು ತುಂಬಿ ಶಾಸನದ ಕೊನೆಯ ಸಾಲುಗಳಲ್ಲಿ ಶಾಪಾಶಯಗಳನ್ನು ರಚಿಸುತ್ತಿದ್ದರು.

ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿ ಹೆಚ್ಚಾಗಿ ದಾನಶಾಸನಗಳಾಗಿದ್ದು, ಅವುಗಳನ್ನು ಶೈವ, ವೈಷ್ಣವ ಹಾಗೂ ಜೈನ ದಾನ ಶಾಸನಗಳೆಂದು ವಿಂಗಡಿಸಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಸಮಾಜದಲ್ಲಿನ ದಾನದ ಮಹತ್ವವನ್ನು ವಿವರಿಸುತ್ತ ಈ ಭಾಗದಲ್ಲಿ ಕಂಡುಬಂದ ಅಧಿಕ ಸಂಖ್ಯೆಯಲ್ಲಿರುವ ಶೈವ ದಾನ ಶಾಸನಗಳನ್ನು ಅಧ್ಯಯನ ಮಾಡಲಾಗಿದೆ. ಈ ಪ್ರದೇಶದಲ್ಲಿ ಕಂಡುಬಂದ ಅತಿ ಪ್ರಾಚೀನ ಶೈವ ಶಾಸನ ಹಿರೇಮನ್ನಾಪುರದಲ್ಲಿದೆ. ಈ ತಾಲ್ಲೂಕಿನ ಪ್ರದೇಶದಲ್ಲಿ ಶೈವ ಧರ್ಮ ಪ್ರಮುಖ ಧರ್ಮವಾಗಿತ್ತೆಂದು ಇಲ್ಲಿನ ಶೈವ ಶಾಸನಗಳಿಂದ ತಿಳಿದುಬರುತ್ತದೆ. ಕಲ್ಯಾಣ ಚಾಲುಕ್ಯರಿಂದ ವಿಜಯನಗರದ ಅವಧಿಯವರೆಗಿನ ಶಾಸನಗಳು ಈ ಭಾಗದಲ್ಲಿ ಕಂಡು ಬಂದಿವೆ. ವೈಷ್ಣವ ದಾನ ಶಾಸನಗಳ ಸಂಖ್ಯೆ ಈ ತಾಲ್ಲೂಕಿನಲ್ಲಿ ತೀರ ಕಡಿಮೆಯೇ ಎಂದು ಹೇಳಬಹುದು. ಈವರೆಗೆ ಎರಡು ಶಾಸನಗಳು ಮಾತ್ರ ಕಂಡುಬಂದಿವೆ. ಇವುಗಳು ಈ ಭಾಗದಲ್ಲಿ ವೈಷ್ಣವ ಧರ್ಮದ ಪ್ರತೀಕಗಳಾಗಿವೆ. ಒಂದು ಜೈನ ಶಾಸನವು ಈ ಪ್ರದೇಶದಲ್ಲಿ ಕಂಡು ಬಂದಿಂದೆ. ಒಟ್ಟಿನಲ್ಲಿ ಈ ಪ್ರದೇಶದ ಶಾಸನಗಳಿಂದ ಧಾರ್ಮಿಕ ಸಮನ್ವಯತೆ ಎದ್ದು ಕಾಣುತ್ತದೆ. ಆದ್ದರಿಂದ ಈ ಭಾಗವು ಶೈವ, ವೈಷ್ಣವ ಮತ್ತು ಜೈನ ಧರ್ಮಗಳ ನೆಲೆವೀಡಾಗಿತ್ತು. ಶಾಸನಗಳನ್ನು ವಿದ್ಯಾವಂತರು ಹಾಗೂ ಕವಿಗಳು ಬರೆದಿರುವುದರಿಂದ ಈ ಶಾಸನಗಳನ್ನು ಶುದ್ಧ ಸಾಹಿತ್ಯ ಕೃತಿಗಳಂತೆಯೇ ಸಾಹಿತ್ಯ ಅಂಶಗಳಿಂದ ಕೂಡಿವೆ. ಕುಷ್ಟಗಿ ತಾಲ್ಲೂಕಿನ ಶಾಸನಗಳಲ್ಲಿರುವ ವರ್ಣನೆಗಳು, ಗದ್ಯರೂಪ, ಪದ್ಯರೂಪ, ವೃತ್ತಗಳು ಮತ್ತು ಕಂದಪದ್ಯಗಳ ಬಗ್ಗೆ ವಿವರಿಸಲಾಗಿದೆ.

ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ವಿವಿಧ ಬಗೆಯ ಸ್ಮಾರಕ ಶಾಸನಗಳು ಕಂಡುಬಂದಿವೆ. ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಯುದ್ಧದ ವೀರಗಲ್ಲುಗಳು, ತುಋುಗೋಳ ವೀರಗಲ್ಲುಗಳು ಮತ್ತು ಪ್ರಾಣಿಬೇಟೆ ಶಾಸನಗಳು ಈ ಪ್ರದೇಶದಲ್ಲಿ ಕಂಡುಬಂದಿವೆ. ಇವುಗಳು ಕ್ರಿ.ಶ.೭ನೆಯ

ಶತಮಾನದಿಂದ ಕ್ರಿ.ಶ.೧೪ನೆಯ ಶತಮಾನದವರೆಗಿನ ಕಾಲದ್ದಾಗಿವೆ. ಇವುಗಳಲ್ಲಿ ವೀರತ್ವದ ಶ್ರೇಷ್ಠ ಮೌಲ್ಯಗಳನ್ನು ಕಾಣಬಹುದಾಗಿದೆ. 'ಯುದ್ಧದಲ್ಲಿ ಗೆದ್ದರೆ ಸಂಪತ್ತು, ಸತ್ತರೆ ಸುರಾಂಗನೆಯರೊಂದಿಗೆ ಸ್ವರ್ಗ' ಎಂಬ ನಂಬಿಕೆ ಅಂದಿನ ವೀರರಲ್ಲಿ ಬಲವಾಗಿತ್ತು. ಗಂಡ ಸತ್ತ ಮೇಲೆ ಆತನ ಚಿತೆಯಲ್ಲಿ ಅವನ ಹೆಂಡತಿ ಆತ್ಮಾರ್ಪಣೆ ಮಾಡಿಕೊಳ್ಳುವುದೇ ಸತಿ ಆಚರಣೆ. ಇಂಥ ಸತಿಯರನ್ನು ಮಹಾಸತಿ, ಮಾಸ್ತಿ ಎಂದೆಲ್ಲ ಕರೆಯುತ್ತಾರೆ. ಸಹಗಮನವನ್ನು ಮಾಡಿ, ಮಹಾಸತಿಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಕಲ್ಲುಗಳು. ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿ ಒಂದು ಒಕ್ಕೈಮಾಸ್ತಿಕಲ್ಲು ಕಂಡುಬಂದಿದೆ. ಸತಿಕಲ್ಲುಗಳಲ್ಲಿ ವೀರನಿಗೂ ಪ್ರಧಾನವಿದ್ದು ಇಂಥವುಗಳನ್ನು ವೀರಮಾಸ್ತಿಕಲ್ಲುಗಳೆಂದು ಗುರುತಿಸಲಾಗುತ್ತದೆ. ಈ ಭಾಗದಲ್ಲಿ ಇಂಥ ಮೂರು ಕಲ್ಲುಗಳು ಕಂಡುಬಂದಿವೆ. ಆತ್ಮಬಲಿಕಲ್ಲುಗಳನ್ನು ಅಧ್ಯಯನದ ದೃಷ್ಟಿಯಿಂದ ನೋಡಲಾಗಿದೆ. ಈ ಪ್ರದೇಶದಲ್ಲಿರುವ ಒಂದು ನಿಷಿಧಿಕಲ್ಲನ್ನು ಹೊಸದಾಗಿ ಬೆಳಕಿಗೆ ತರಲಾಗಿದೆ. ಹೀಗೆ ಕುಷ್ಟಗಿ ತಾಲ್ಲೂಕಿನ ಪ್ರದೇಶದಲ್ಲಿರುವ ಸ್ಮಾರಕ ಶಾಸನಗಳನ್ನು ವಿಸ್ತೃತವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶಾಸನಗಳ ಮೂಲ ಉದ್ದೇಶ ವಿಷಯವನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವುದಾಗಿದೆ. ಇದರ ಜೊತೆಯಲ್ಲಿಯೇ ಶಾಸನಶಿಲ್ಪದ ಉದ್ದೇಶಗಳೇನು? ಉಬ್ಬುಶಿಲ್ಪ ರೂಢಿಗೆ ಬರಲು ಕಾರಣಗಳೇನು ಎಂಬುದನ್ನು ಚರ್ಚಿಸಿ ತಾಲ್ಲೂಕಿನಲ್ಲಿ ದೊರೆತ ಶಾಸನಶಿಲ್ಪಗಳನ್ನು ಶೈವ ಶಾಸನಶಿಲ್ಪ, ವೈಷ್ಣವ ಶಾಸನಶಿಲ್ಪ, ಜೈನ ಶಾಸನಶಿಲ್ಪ ಮತ್ತು ಧರ್ಮ ಸಮನ್ವಯ ಶಾಸನಶಿಲ್ಪಗಳೆಂದು ವಿಭಜಿಸಿಕೊಂಡು ಅಧ್ಯಯನ ಮಾಡಲಾಗಿದೆ. ಶೈವ ಶಾಸನಶಿಲ್ಪಗಳಲ್ಲಿ ಶಿವಲಿಂಗ, ನಂದಿ, ಯತಿ, ಹಸು, ಕರು ಮತ್ತು ಸೂರ್ಯ-ಚಂದ್ರರ ಶಿಲ್ಪಗಳಿವೆ. ಸಿರಗುಪ್ಪದಲ್ಲಿರುವ ಶೈವ ಶಾಸನದಲ್ಲಿ ಏತ ಶಾಸನಶಿಲ್ಪವಿರುವುದು ವಿಶೇಷವಾಗಿದೆ. ಈ ಭಾಗದಲ್ಲಿ ಕಂಡುಬಂದ ವಿಶೇಷ ಶಾಸನಶಿಲ್ಪವಿದು.

ವೈಷ್ಣವ ಶಾಸನಶಿಲ್ಪಗಳಲ್ಲಿ ವಿಷ್ಣು, ಗರುಡ ಮತ್ತು ಸೂರ್ಯ-ಚಂದ್ರರ ಶಿಲ್ಪಗಳಿವೆ. ಶೈವ ಮತ್ತು ವೈಷ್ಣವ ಧರ್ಮಗಳೆರಡು ಅನ್ಯೋನ್ಯವಾಗಿದ್ದವೆಂಬುದಕ್ಕೆ ಪುರ್ತಗೇರಿಯಲ್ಲಿರುವ ಶಾಸನಶಿಲ್ಪದಿಂದ ಸ್ಪಷ್ಟವಾಗುತ್ತದೆ. ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮವು ಒಂದು. ಈ ಧರ್ಮದ ಶಾಸನಶಿಲ್ಪಗಳಲ್ಲಿ ಪಾರ್ಶ್ವನಾಥ, ಅನಂತನಾಥ ಅಥವಾ ತೀರ್ಥಂಕರರನ್ನು ಕೆತ್ತಲಾಗಿರುತ್ತದೆ. ಕುಷ್ಟಗಿ ತಾಲ್ಲೂಕಿನ ಎರಡು ಶಾಸನಗಳಲ್ಲಿ ಇಂಥ ಶಿಲ್ಪಗಳಿರುವುದು ಕಂಡುಬಂದಿವೆ. ಇವುಗಳಿಂದ ಈ ಪ್ರದೇಶದಲ್ಲಿ ಜೈನ ಧರ್ಮದ ಅನುಯಾಯಿಗಳಿದ್ದರು ಎಂಬುದನ್ನು ಧೃಢಪಡಿಸುತ್ತವೆ.

ಕುಷ್ಟಗಿ ತಾಲ್ಲೂಕಿನ ವೀರಗಲ್ಲುಗಳ ಶಿಲ್ಪದ ವಿವಿಧ ಪ್ರಕಾರಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಯುದ್ಧದ ವೀರಗಲ್ಲುಗಳ ಶಿಲ್ಪ, ತುಱುಗೊಳ್ ಶಿಲ್ಪ, ಆನೆಬೇಟೆ ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಮಹಾಸತಿಶಿಲ್ಪಗಳಲ್ಲಿನ ಸಹಗಮನ ಮತ್ತು ಅನುಗಮನ ಶಿಲ್ಪಗಳನ್ನು, ಶೈವ ದೇವಾಲಯ ಮತ್ತು ಮಠಗಳ ಮೇರೆಗಳನ್ನು ಗುರುತಿಸುವ ಲಿಂಗಮುದ್ರೆಕಲ್ಲುಗಳ ಶಿಲ್ಪಗಳನ್ನು ಹಾಗೆಯೇ ವೈಷ್ಣವ ದೇವಾಲಯಗಳಿಗೆ ನೀಡಿದ

ಭೂಮಿಯ ಮೇರೆಗಳನ್ನು ಗುರುತಿಸುವ ವಾಮನಮುದ್ರೆಕಲ್ಲುಗಳ ಬಗ್ಗೆ ಚರ್ಚಿಸಲಾಗಿದೆ. ಈ ಪ್ರದೇಶದಲ್ಲಿ ಎರಡು ಯಂತ್ರಕಲ್ಲುಗಳು ಕಂಡಬಂದಿದ್ದು ಇವುಗಳಿಂದ ಈ ಭಾಗದ ಜನರಲ್ಲಿದ್ದ ಯಂತ್ರ-ಮಂತ್ರಗಳ ನಂಬಿಕೆಯನ್ನು ತೋರಿಸುತ್ತವೆ.

ಕುಷ್ಟಗಿ ತಾಲ್ಲೂಕಿನಲ್ಲಿರುವ ಸ್ಮಾರಕಗಳನ್ನು ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆಗಳು ಮತ್ತು ಕೆರೆ-ಬಾವಿಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ದೇವಾಲಯಗಳಲ್ಲಿ ಶೈವ, ವೈಷ್ಣವ ಮತ್ತು ಇತರೆ ದೇವಾಲಯಗಳ ವಾಸ್ತುಶೈಲಿ ಮತ್ತು ಶಿಲ್ಪಗಳನ್ನು ಕುರಿತು ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಕ್ರಿ.ಶ.೨೦೦೧ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ ಎಂಬ ಪುಸ್ತಕ ಪ್ರಕಟಿಸಿತು. ಈ ಪುಸ್ತಕದ ಪ್ರಕಾರ ಕುಷ್ಟಗಿ ತಾಲ್ಲೂಕಿನಲ್ಲಿ ಒಟ್ಟು ೩೦ ದೇವಾಲಯಗಳಿವೆ. ನಾನು ಕ್ಷೇತ್ರಕಾರ್ಯ ಕೈಗೊಂಡು ಪ್ರಕಟಗೊಳ್ಳದಿರುವ ೫ ದೇವಾಲಯಗಳನ್ನು ಗುರುತಿಸಿದ್ದೇನೆ. ನನ್ನ ಅಧ್ಯಯನದ ಪ್ರಕಾರ ಈ ತಾಲ್ಲೂಕಿನ ಪ್ರದೇಶದಲ್ಲಿ ಶೈವ-೨೭, ವೈಷ್ಣವ-೦೭ ಮತ್ತು ಇತರೆ-೦೧ ದೇವಾಲಯಗಳಿವೆ. ಒಟ್ಟು ೩೫ ಪುರಾತನ ದೇವಾಲಯಗಳಿವೆ. ಇವುಗಳು ಕ್ರಿ.ಶ.ಸು.೯ನೆಯ ಶತಮಾನದಿಂದ ಕ್ರಿ.ಶ.ಸು.೧೮-೧೯ನೆಯ ಶತಮಾನದ ಕಾಲದ್ದಾಗಿವೆ.

ಕುಷ್ಟಗಿ ತಾಲ್ಲೂಕಿನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಮಹಿಷಮರ್ದಿನಿ, ಸಪ್ತಮಾತೃಕೆ, ವೀರಭದ್ರ, ಗಜಲಕ್ಷ್ಮಿ, ಸೂರ್ಯ, ಗಣಪತಿ, ಶಿವಲಿಂಗ, ನಂದಿ ಮತ್ತು ಜೈನ ಮೂರ್ತಿಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ಕೋಟೆಯ ಪಾತ್ರ ಮಹತ್ವದ್ದಾಗಿದೆ. ರಾಜ್ಯದ ಸಂರಕ್ಷಣೆಯ ಸಲುವಾಗಿ ಅಂದಿನ ಯುದ್ಧ ಕೌಶಲ್ಯಕ್ಕೆ ಅನುಗುಣವಾಗಿ, ಶತ್ರುಗಳನ್ನು ಪರಿಣಾಮಕಾರಿಯಾಗಿ ಪ್ರತಿರೋಧಿಸುವುದಕ್ಕಾಗಿ ಕೋಟೆಗಳು ನಿರ್ಮಾಣವಾದವು. ಕ್ರಿ.ಶ.೨೦೦೦ರಲ್ಲಿ ಸುಜಾತಾ ಮಲ್ಲನಗೌಡರ ಅವರು ರಾಯಚೂರು-ಕೊಪ್ಪಳ ಜಿಲ್ಲೆಯ ಕೋಟೆಗಳು ಎಂಬ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಕುಷ್ಟಗಿ ತಾಲ್ಲೂಕಿನಲ್ಲಿರುವ ೪ ಕೋಟೆಗಳನ್ನು ವಿವರಿಸಿದ್ದಾರೆ. ನಾನು ಕ್ಷೇತ್ರಕಾರ್ಯ ಕೈಗೊಂಡು ಪ್ರಕಟಗೊಳ್ಳದಿರುವ ೩ ಕೋಟೆಗಳನ್ನು ಗುರುತಿಸಿದ್ದೇನೆ. ನನ್ನ ಅಧ್ಯಯನದ ಪ್ರಕಾರ ಕುಷ್ಟಗಿ ತಾಲ್ಲೂಕಿನಲ್ಲಿ ಏಳು ಸ್ಥಳಗಳಲ್ಲಿ ಕೋಟೆಗಳಿರುವುದನ್ನು ಗುರುತಿಸಿ ಚರ್ಚಿಸಲಾಗಿದೆ.

ಭೂಮಿಯ ಮೇಲೆ ವಾಸಿಸುತ್ತಿರುವ ಜೀವಿಗಳಿಗೆ ಉಸಿರಾಡಲು ಗಾಳಿಯಷ್ಟೇ ಮುಖ್ಯವಾದುದು ನೀರು. ಪ್ರಾಚೀನ ಕಾಲದಿಂದ ನೀರಿನ ಮಹತ್ವವನ್ನರಿತಿದ್ದ ಕುಷ್ಟಗಿ ಪ್ರದೇಶದ ಜನರು ನೀರು ಸಂಗ್ರಹಣೆಗಾಗಿ ಕೆರೆ-ಬಾವಿಗಳನ್ನು ಕಟ್ಟುತ್ತಿದ್ದದು ಶಾಸನಗಳಿಂದ ಮತ್ತು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದ ಬಾವಿಗಳಿಂದ ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಪ್ರಧಾನ ಅಂಶವೆಂದರೆ ನಮ್ಮ ಪೂರ್ವಜರ ಬದುಕಿನ ರೀತಿ ನೀತಿಗಳು. ಸಾಮಾನ್ಯವಾಗಿ ದಾನದ ಉದ್ದೇಶದಿಂದ ಶಾಸನಗಳನ್ನು ಹಾಕಿಸುವ ಪ್ರವೃತ್ತಿ ಪ್ರಾರಂಭಗೊಂಡು ಅದು ಕ್ರಮೇಣ ಬದುಕಿನ ಬೇರೆ ಬೇರೆ ಘಟನೆಗಳಿಗೆ

ಅನ್ವಯಗೊಂಡಿತು. ಪರಿಣಾಮವಾಗಿ ವೈವಿಧ್ಯ ವಿಷಯದ ಶಾಸನ ಪರಂಪರೆ ಪ್ರಾರಂಭವಾಗುತ್ತದೆ. ಅದರನ್ವಯ ಕುಷ್ಟಗಿ ಪರಿಸರದ ಶಾಸನಗಳು ಮತ್ತು ಅದಕ್ಕೆ ಪೂರಕವಾದ ಸ್ಮಾರಕ, ಶಿಲ್ಪಗಳನ್ನು ಇಲ್ಲಿ ಸಾಧ್ಯವಾದಷ್ಟು ವಿಶ್ಲೇಷಿಸಿ, ವಿಮರ್ಶೆಗೊಳಪಡಿಸಿ ಅಧ್ಯಯನ ಕೈಗೊಂಡಾಗ ಈ ಪರಿಸರದ ಪ್ರಾಚೀನ ಜನರ ಸಾಮಾಜಿಕ ಬದುಕಿನ ರೀತಿ ನೀತಿ, ಆಚರಣೆ, ನಂಬಿಕೆ ಮುಂತಾದ ಸಂಗತಿಗಳು ತಿಳಿದುಬಂದವು. ಈ ಅಂಶಗಳ ಮೇಲೆಯೇ ಇಂದಿನ ಕುಷ್ಟಗಿ ಪರಿಸರದ ಜೀವನ ಸಂಸ್ಕೃತಿ ಬೆಳೆದುಬಂದಿರುವುದು ವಿಧಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ಸಮಕಾಲೀನ ಪ್ರಸ್ತುತತೆಯನ್ನು ಪಡೆದುಕೊಂಡಿದೆ ಎಂಬ ನಂಬಿಕೆ ಇದೆ.

ಒಟ್ಟಿನಲ್ಲಿ ಕುಷ್ಟಗಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧ ಈ ಪ್ರದೇಶದಲ್ಲಿನ ಶಾಸನ ಮತ್ತು ಸ್ಮಾರಕಗಳ ಸಮಗ್ರ ಅಧ್ಯಯನವಾಗಿದ್ದರೂ ಇನ್ನೂ ಸಂಶೋಧನೆಗೆ ಅವಕಾಶವಿದೆ. ಹಳ್ಳಿಗಳಲ್ಲಿ ಶಾಸನಗಳ ಸ್ಥಿತಿ ಶೋಚನಿಯವಾಗಿದೆ. ಎಷ್ಟೋ ಶಾಸನಗಳು ಕಸದಗುಂಡಿಯೊಳಗೆ, ಕೆರೆಯ ಪಕ್ಕದಲ್ಲಿ, ನೆಲದಲ್ಲಿ ನಿಲ್ಲಿಸಿರುವುದರಿಂದ ಅವುಗಳು ನಶಿಸಿ ಹೋಗುವ ಸಾಧ್ಯತೆ ಇದೆ. ದೇವಾಲಯಗಳಲ್ಲಿ ಕೇವಲ ಪೂಜೆ ಪುನಸ್ಕಾರ, ಜಾತ್ರೆ, ಉತ್ಸವಗಳು ನಡೆದರೆ ಸಾಲದು. ಅವುಗಳ ರಕ್ಷಣಾಕಾರ್ಯವಾಗಬೇಕು. ಕುಷ್ಟಗಿ ತಾಲ್ಲೂಕಿನಲ್ಲಿರುವ ಕೆಲವು ಪುರಾತನ ದೇವಾಲಯಗಳ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆಯಲ್ಲಿವೆ. ಅಲ್ಲದೇ ಅನೇಕ ದೇವಾಲಯಗಳ ಕಟ್ಟಡದ ಮೇಲೆ ಗಿಡ-ಗಂಟಿಗಳು ಬೆಳೆದಿದ್ದು, ರಸ್ತೆ ಅಗಲೀಕರಣದ ನೆಪದಿಂದಾಗಿ ಪುರಾತನ ದೇವಾಲಯ ನಾಶಪಡಿಸುವುದು ನಿಲ್ಲಿಸಬೇಕು. ಜನರಲ್ಲಿರುವ ಇಂಥ ಅಜ್ಞಾನವನ್ನು ಹೊಗಲಾಡಿಸಿ ಶಾಸನ ಮತ್ತು ಸ್ಮಾರಕಗಳ ಮಹತ್ವವನ್ನು ತಿಳಿಸುವ ಪ್ರಯತ್ನವಾಗಬೇಕಿದೆ. ಇಲ್ಲವಾದಲ್ಲಿ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಶಪಿಸಬಹುದು.

ಅನುಬಂಧಗಳು

೧. ನಕ್ಷೆಗಳು

೨. ಗ್ರಂಥಋಣ

೩. ಛಾಯಾಚಿತ್ರಗಳು

ಕೊಪ್ಪಳ ಜಿಲ್ಲೆಯ ನಕ್ಷೆಯಲ್ಲಿ ಕುಷ್ಟಗಿ ತಾಲ್ಲೂಕು





ಕುಷ್ಟಗಿ ತಾಲ್ಲೂಕಿನ ಗ್ರಾಮಗಳು





ಕುಷ್ಟಗಿ ತಾಲ್ಲೂಕಿನ ಗ್ರಾಮಗಳು

೧. ನಿಲೂಗಲ್
೨. ರಂಗಾಪೂರ
೩. ವಕ್ಕಂದುರ್ಗ
೪. ಬೊಮ್ಮನಾಳ
೫. ಬಸಾಪೂರ
೬. ಆಚನೂರ
೭. ತುಗ್ಗಲದೋಣಿ
೮. ಮಿಟ್ಟಲಕೊಡಾ
೯. ಕಡಗೇರಾ
೧೦. ರಾಂಪುರ
೧೧. ಬಿಳೇಕಲ್
೧೨. ಹನುಮನಾಳ
೧೩. ಶ್ಯಾಡಲಗೇರಿ
೧೪. ನೀರಲಕೊಪ್ಪ
೧೫. ಕೋನಾಪುರ
೧೬. ಪರಮನಹಟ್ಟಿ
೧೭. ಕೊಡತಗೇರಿ
೧೮. ಹೊನಮಟ್ಟಿ
೧೯. ವೆಂಕಟಾಪೂರ
೨೦. ತಿಮ್ಮನಹಟ್ಟಿ
೨೧. ಗುಡದೂರಕಲ್ಲ
೨೨. ಮದನಾಳ
೨೩. ಯರಗೇರಾ
೨೪. ಬಾದಿಮನಾಳ
೨೫. ಜಿ.ದೇವಲಾಪುರ
೨೬. ಯು.ಕುರುಬನಾಳ
೨೭. ಮಾಲಗಿತ್ತಿ
೨೮. ಪಟ್ಟಲಚಿಂತಿ
೨೯. ಮಾಸ್ತಕಟ್ಟಿ
೩೦. ಅಕ್ಕೇರಿ
೩೧. ಮೂಗನೂರು
೩೨. ಗಡಚಿಂತಿ
೩೩. ಜಾಗೀರಗುಡದೂರ
೩೪. ಪರಸಾಪೂರ
೩೫. ತುಮರಿಕೊಪ್ಪ
೩೬. ಹಾಬಲಕೊಪ್ಪ
೩೭. ಹಿರೇಗೊಣ್ಣಾಗರ
೩೮. ವಾರಿಕಲ್
೩೯. ಅಮರಾಪುರ
೪೦. ಕುಂಬಳಾವತಿ
೪೧. ಗೊರೆಬಾಳ
೪೨. ಚಿಕ್ಕಗೊಣ್ಣಾಗರ
೪೩. ಹೂಲಗೇರಾ
೪೪. ಯರಿಗೋನಾಳ
೪೫. ಹುಚನೂರು
೪೬. ಅಂಟೂರುತಾಣ
೪೭. ಕಡೂರು
೪೮. ಪುರ್ತಗೇರಿ
೪೯. ತುರುಕನೂರು
೫೦. ಕಲ್ಲಗೋನಾಳ
೫೧. ಬಂಡರಗಲ್
೫೨. ಕಾಟಾಪುರ
೫೩. ತತ್ಕುಂಟಿ
೫೪. ಹುಸಲಕೊಪ್ಪ
೫೫. ಕಬ್ಬರಗಿ
೫೬. ಸೇಬಿನಕಟ್ಟಿ
೫೭. ಹನುಮಸಾಗರ
೫೮. ಚಂದ್ರಗಿರಿ
೫೯. ಬೀಳಗಿ
೬೦. ಮನ್ನೇರಾಳ
೬೧. ಮಾನುಟಗಿ
೬೨. ಮುದುಟಗಿ
೬೩. ಚಳಗೇರಾ
೬೪. ಮಡಿಕೇರಾ
೬೫. ಜುಂಜಲಕೊಪ್ಪ
೬೬. ಹೊಸಳ್ಳಿ
೬೭. ಮಲ್ಕಾಪುರ
೬೮. ಯಲಬುಣಚಿ
೬೯. ಹುಲಸಗೇರಾ
೭೦. ಅಡವಿಭಾವಿ
೭೧. ಜೂಲಕಟ್ಟಿ
೭೨. ಬೆನಕನಾಳ
೭೩. ಕಲಾಲಬಂಡಿ
೭೪. ತಳವಗೇರಾ
೭೫. ಬಿಂಗಿಕೊಪ್ಪ
೭೬. ಬಿಸನಾಳ
೭೭. ದೊಣ್ಣೆಗುಡ್ಡ
೭೮. ಪರಸಾಪುರ
೭೯. ಕನಕೊಪ್ಪ
೮೦. ಹಿರೇನಂದಿಹಾಳ
೮೧. ಚಿಕ್ಕನಂದಿಹಾಳ
೮೨. ಬ್ಯಾಲಿಹಾಳ
೮೩. ವಣಗೇರಾ
೮೪. ಕೊರಡಕೇರಾ
೮೫. ತೋಪಲಕಟ್ಟಿ
೮೬. ದೋಟಿಹಾಳ
೮೭. ದೇವಲಾಪುರ
೮೮. ಹನುಮಗಿರಿ
೮೯. ಮಿಯಾಪುರ
೯೦. ತಿಮ್ಮನಹಟ್ಟಿ
೯೧. ನಡವಲಕೊಪ್ಪ
೯೨. ಮೆಣಸಗೇರಾ
೯೩. ಕ್ಯಾದಿಗುಪ್ಪಾ

೯೪. ಕಡೇಕೊಪ್ಪ
೯೫. ಕಲಕೇರಾ
೯೬. ಕೇಸೂರು
೯೭. ಮಾಟೂರು
೯೮. ಹೆಸರೂರು
೯೯. ಉ.ಬಸಾಪುರ
೧೦೦. ಕೆ.ಬೋದುರು
೧೦೧. ಮಂಕಲ್ಕೇರಿ
೧೦೨. ಕಂದಕೂರ
೧೦೩. ಯಲಬರ್ತಿ
೧೦೪. ಬೆಂಚಮಟ್ಟಿ
೧೦೫. ಬ್ಯಾಲಿಹಾಳ
೧೦೬. ನಿಡಶೇಸಿ
೧೦೭. ಮದಲಗಟ್ಟಿ
೧೦೮. ಶಾಖಾಪೂರ
೧೦೯. ನೆರೆಬೆಂಚಿ
೧೧೦. ಕುರುಬನಾಳ
೧೧೧. ನಾಗರಾಳ
೧೧೨. ಗಂಗನಾಳ
೧೧೩. ಗುಮಗೇರಾ
೧೧೪. ಹಿರೇಮನ್ನಾಪೂರ
೧೧೫. ಬುಜಕಲ್
೧೧೬. ಟಕ್ಕಳಕಿ
೧೧೭. ಟೆಂಗುಂಟಿ
೧೧೮. ಕೆ.ಹೊಸೂರು
೧೧೯. ಎಂ.ಗುಡದೂರು
೧೨೦. ಹಂಚಿನಾಳ
೧೨೧. ನವಲಹಳ್ಳಿ
೧೨೨. ಮಾಯದುಣಿಕಿ
೧೨೩. ಮುದೇನೂರು
೧೨೪. ಗೋತಗಿ
೧೨೫. ತೋಣಸಿಹಾಳ
೧೨೬. ಜಾಲಿಹಾಳ
೧೨೭. ರ್‍ಯಾವಣಕಿ
೧೨೮. ಎಂ.ಬಸಾಪುರ
೧೨೯. ಗೋನಾಳ
೧೩೦. ಬಳೂಟಗಿ
೧೩೧. ಶಿರಗುಂಪಿ
೧೩೨. ಬನಹಟ್ಟಿ
೧೩೩. ಮೇಗೂರು
೧೩೪. ತೆಗ್ಗಿಹಾಳ
೧೩೫. ಕೂಡ್ಲೂರು
೧೩೬. ಬೆಂಚಮಟ್ಟಿ
೧೩೭. ಜುಮಲಾಪುರ
೧೩೮. ಮಾದಾಪುರ
೧೩೯. ಐನಾಪುರ
೧೪೦. ರಾಂಪೂರ
೧೪೧. ಇದ್ಲಾಪುರ
೧೪೨. ಸಾಸವಿಹಾಳ
೧೪೩. ಮುದ್ದಲಗುಂದಿ
೧೪೪. ಅಡವಿಬಾವಿ
೧೪೫. ಹಾಗಲದಾಳ
೧೪೬. ಜೂಲಕುಂಟಿ
೧೪೭. ಕಿಡದೂರು
೧೪೮. ಮ್ಯಾದಡಿಡೊಕ್ಕಿ
೧೪೯. ಕಳಮಳ್ಳಿ
೧೫೦. ಗರಜನಾಳ
೧೫೧. ಕಿಲಾರಹಟ್ಟಿ
೧೫೨. ತಾವರಗೆರೆ
೧೫೩. ಕುಷ್ಟಗಿ
೧೫೪. ನಂದಾಪುರ
೧೫೫. ವಿಠಲಾಪುರ
೧೫೬. ನಾರಿನಾಳ
೧೫೭. ಯು.ರಾಂಪುರ
೧೫೮. ಕೋನಾಪುರ
೧೫೯. ಮೇಣೆದಾಳ
೧೬೦. ನಿರಲೂಟಿ
೧೬೧. ಹುಲಿಯಾಪುರ
೧೬೨. ಲಿಂಗದಳ್ಳಿ
೧೬೩. ಹೊಮ್ಮಿನಾಳ
೧೬೪. ಹೊನಗಡ್ಡಿ
೧೬೫. ಗುಡ್ಡದಹನುಮಸಾಗರ
೧೬೬. ಹಿರೇಮುಕರ್ತಿನಾಳ
೧೬೭. ವಿರೂಪಾಪುರ
೧೬೮. ರಂಪೂರ
೧೬೯. ಬಚನಾಳ
೧೭೦. ಚಿಕ್ಕಮುಕರ್ತಿನಾಳ
೧೭೧. ಪುರ
೧೭೨. ಸಿದ್ದಾಪೂರ
೧೭೩. ಹಡಗಲಿ
೧೭೪. ತೆಮ್ಮಿನಾಳ
೧೭೫. ಮೆತ್ತನಾಳ
೧೭೬. ಸಂಗನಾಳ
೧೭೭. ಕನ್ನಾಳ

ಕುಷ್ಟಗಿ ತಾಲ್ಲೂಕಿನ ಶಾಸನಗಳಿರುವ ಗ್ರಾಮಗಳು



೧. ಮಂಕಲ್ಕೇರಿ
೨. ಹೆಸರೂರು
೩. ಸಿರಗುಪ್ಪಿ
೪. ಗೋತಗಿ
೫. ಮುದೇನೂರು
೬. ಹಿರೇಮನ್ನಾಪುರ
೭. ತಾವರಗೇರೆ
೮. ಪುರ
೯. ಚಳಗೇರಿ
೧೦. ಹನುಮಸಾಳ
೧೧. ಮಾಲಗಿತ್ತಿ
೧೨. ಹನುಮಸಾಳ
೧೩. ಆಚನೂರು
೧೪. ಚಂದ್ರಗಿರಿ
೧೫. ಪೂರ್ತಗೇರಿ
೧೬. ಅಂಟೂರತಾಣ

ಕುಷ್ಟಗಿ ತಾಲ್ಲೂಕಿನ ಪುರಾತನ ದೇವಾಲಯಗಳಿರುವ ಗ್ರಾಮಗಳು




೧. ಕುಷ್ಟಗಿ
೨. ಹಿರೇಮನ್ನಾಪುರ
೩. ತಾವರಗೇರೆ
೪. ಪುರ
೫. ಸಿರಗುಪ್ಪಿ
೬. ಗೋತಗಿ
೭. ಚಳಗೇರಾ
೮. ಚಂದ್ರಗಿರಿ
೯. ಪುರ್ತಗೇರಿ
೧೦. ಅಂಟೂರಠಾಣ
೧೧. ಕಡೂರ
೧೨. ಕಾಟಾಪುರ
೧೩. ಹುಲಗೇರಿ
೧೪. ಹನುಮಸಾಗರ
೧೫. ಶ್ಯಾಡಲಗೇರಿ
೧೬. ಆಚನೂರು




ಆನೆಬೇಟೆ-ಪುರ



ವೀರಗಲ್ಲು-ಯರಗೇರಿ



ವೀರಗಲ್ಲು-ತಾವರಗೇರೆ




ವೀರಗಲ್ಲು-ನಿಲೋಗಲ್



ಮಹಿಷಮರ್ದಿನಿ-ಚಂದ್ರಗಿರಿ



ಗಜಲಕ್ಷ್ಮೀ



ಮಹಾಬಲೇಶ್ವರ ದೇವಾಲಯ-ಕಾಟಾಪುರ

: ಗ್ರಂಥಸೂಚಿ :

ಕನ್ನಡ ಕೃತಿಗಳು

೦೧. ಅಪರ್ಣ.ಕೂ.ಸ, : **ದೇವಾಲಯ ವಾಸ್ತುಶಿಲ್ಪ ಪರಿಚಯ**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

೦೨. ಅಣ್ಣೀಗೇರಿ.ಎ.ಎಂ, : **ಶಾಸನ ಸಂಗ್ರಹ**
ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು. ೧೯೭೫

೦೩. ಕಲಬುರ್ಗಿ.ಎಂ.ಎಂ, : **ಶಾಸನ ವ್ಯಾಸಾಂಗ**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫
ಸಮಾಧಿ ಬಲಿದಾನ, ವೀರಮರಣ ಸ್ಮಾರಕಗಳು
ಐ.ಬಿ.ಎಚ್. ಪ್ರಕಾಶನ. ಬೆಂಗಳೂರು. ೧೯೮೦
ಕನ್ನಡ ನಾಮ ವಿಜ್ಞಾನ
ಸಪ್ನ ಬುಕ್ ಹೌಸ್, ಬೆಂಗಳೂರು. .೨೦೧೦(ತೃ.ಮು)

೦೪. ಕೊಪ್ಪ.ಎಸ್.ಕೆ, : **ತರ್ದವಾಡಿ ನಾಡು** ಒಂದು ಅಧ್ಯಯನ
ಪ್ರತಿಭಾ ಪ್ರಕಾಶನ, ಇಂಡಿ, ೧೯೯೦

೦೫. ಕೃಷ್ಣಕುಮಾರ.ಸಿ.ಪಿ, : **ಶಾಸನ ಶಾಸ್ತ್ರ ಪ್ರವೇಶ**
ಚೇತನ ಬುಕ್ ಹೌಸ್, ಮೈಸೂರು. .೨೦೧೧

೦೬. ಗುರುರಾಜರಾವ್.ಬಿ.ಕೆ, : **ಕರ್ನಾಟಕದ ಶಿಲಾಯುಗ ಸಂಸ್ಕೃತಿಗಳು**
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೦
ಕರ್ನಾಟಕದ ಲೋಹಯುಗ ಸಂಸ್ಕೃತಿಗಳು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೧

೦೭. ಗೋಪಾಲ.ಬಾ.ರಾ, : **ಕನ್ನಡ ಶಾಸನಗಳು**
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ೧೯೯೫
ಕರ್ನಾಟಕದಲ್ಲಿ ನವಶಿಲಾಯುಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧

೦೮. ಗೋಪಾಲ.ಬಿ.ಆರ್, : **ಕರ್ನಾಟಕ ಕಲೆಗಳು ಸಂ.೪ ವಾಸ್ತು**
ಬೆಂಗಳೂರು, ೧೯೯೩

೦೯. ಗೋಪಾಲರಾವ್.ಎಚ್.ಎಸ್, : **ಶಾಸನಗಳು ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು**
ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ೧೯೯೩

೧೦. ಚನ್ನಬಸಪ್ಪ.ಎಸ್.ಪಾಟೀಲ್, : **ಕರ್ನಾಟಕದ ಕೋಟೆಗಳು**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೧೧. ಚನ್ನಕ್ಕ ಎಲಿಗಾರ, : **ಮಾಸ್ತಿಕಲ್ಲು**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೭

೧೨. ಚಿದಾನಂದಮೂರ್ತಿ.ಎಂ, : **ಸಂಶೋಧನೆ**
ಮೈಸೂರು, ವಿಶ್ವವಿದ್ಯಾಲಯ. ಮೈಸೂರು. ೧೯೬೭
ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು
ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ೧೯೭೫
ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೦೨
ಕರ್ನಾಟಕ ಸಂಸ್ಕೃತಿ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೭

೧೩. ಜಯದೇವ.ಹು.ಕಾ, : **ಶಾಸನ ಮತ್ತು ಗದ್ಯ**
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೦

೧೪. ತಿಪ್ಪೇರುದ್ರಸ್ವಾಮಿ.ಎಚ್, : **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**
ಡಿ.ವಿ.ಕೆ. ಪ್ರಕಾಶನ, ಬೆಂಗಳೂರು. ೧೯೯೮

೧೫. ದೀಕ್ಷಿತ.ಪ್ಹಿ.ಜಿ, : **ಕರ್ನಾಟಕದ ಶಾಸನಗಳಲ್ಲಿ ವಿಶ್ವಬ್ರಾಹ್ಮಣ ಸಂಸ್ಕೃತಿ**
(ಭಾಗ-೧) ಮೂಲಸ್ತಂಭ ಸಾಹಿತ್ಯ ಪ್ರಕಾಶನ
ಧಾರವಾಡ. ೧೯೯೧

೧೬. ದುರುಗಪ್ಪ.ಎಂ.ಕೆ, : **ಕನಕಗಿರಿ ನಾಯಕರು**
ಪವಿತ್ರಾ ಪಬ್ಲಿಕೇಶನ್, ಬೆಂಗಳೂರು, ೨೦೦೭

೧೭. ದೇಸಾಯಿ.ಪಿ.ಬಿ, : **ಕನ್ನಡ ನಾಡಿನ ಶಾಸನಗಳು**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧.

೧೮. ನರಸಿಂಹಮೂರ್ತಿ.ಎ.ವಿ, : **ಕರ್ನಾಟಕ ಶಾಸನ ಸಂಪತ್ತು**
ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ೧೯೭೩

೧೯. ನಾಯಕರ ಹುಲಗಪ್ಪ, : **ಶಾಸನಗಳ ಪ್ರಕಾರ ಮತ್ತು ಅವುಗಳ ಮಹತ್ವ**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೨೦. ನಾಗರಾಜು.ಎಂ.ಜಿ, : **ಶಾಸನ ಶಿಲ್ಪಗಳು**
ಶ್ರೀ ಗೌರಿಗಂಗ ಪ್ರಕಾಶನ, ಬೆಂಗಳೂರು. ೧೯೯೦

೨೧. ನಾಗರಾಜು.ಎಂ.ಎಸ್, : **ಪುರಾಣಗಳಲ್ಲಿ ಕರ್ನಾಟಕ**
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು. ೧೯೮೩
ಕರ್ನಾಟಕದ ಪುರಾತನ ವಿದ್ಯಾಕೇಂದ್ರಗಳು
ಐ.ಬಿ.ಎಚ್. ಪ್ರಕಾಶನ. ಬೆಂಗಳೂರು, ೧೯೮೮

೨೨. ನಾಗಭೂಷಣ.ಸಿ, : **ಶಾಸನಗಳು ಮತ್ತು ಕನ್ನಡ ಸಾಹಿತ್ಯ**
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ. ೨೦೦೫
ಕನ್ನಡ ನಾಡಿನ ಶಾಸನಗಳ ಅಧ್ಯಯನ :
ಕೆಲವು ಗ್ರಹಿಕೆಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯

೨೩. ಪರಮಶಿವಮೂರ್ತಿ.ಡಿ.ವಿ, : **ಶಾಸನ ಸಂಶೋಧನೆ**
ಗುಣನಿಧಿ ಪ್ರಕಾಶನ, ಬೆಂಗಳೂರು. ೧೯೯೪
ಕನ್ನಡ ಶಾಸನಶಿಲ್ಪ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

ಪೆಣ್ಬುಯ್ಯಲ್
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೨೪. ಪಾಟೀಲ.ಎಚ್.ಎಸ್, : **ಕೊಪ್ಪಳ ತಾಲೂಕು ದರ್ಶನ**
ಬಸವ ಪ್ರಕಾಶನ, ಗುಲಬರ್ಗಾ. ೨೦೦೯

೨೫. ಪಾಟೀಲ.ಬಿ.ಸಿ, : **ಕೊಪ್ಪಳ: ಸಾಂಸ್ಕೃತಿಕ ಪರಂಪರೆ**
ಹರಿಹರ ಪ್ರಕಾಶನ, ಕೊಪ್ಪಳ, ೧೯೯೮

೨೬. ಪ್ರಭಾಕರ್.ಎಲ್, : **ದೇವಾಲಯ ವಾಸ್ತು**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೧

೨೭. ಬಸವರಾಜ ಕಲ್ಗುಡಿ, : **ಮಹಾಸತಿ ಆಚರಣೆ, ಒಂದು ಅಧ್ಯಯನ**
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೮೫

೨೮. ಮೋಹನ್.ಎಸ್, : **ನಾಗಾರಾಧನೆ ಪರಂಪರೆ ಸ್ಥಿತ್ಯಂತರಗಳು**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೨೯. ರಮೇಶ.ಕೆ.ವಿ, : **ಕರ್ನಾಟಕ ಶಾಸನ ಸಮೀಕ್ಷೆ**
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೧

೩೦. ರಮೇಶ.ಬೆ.ಗೋ, : **ನಮ್ಮ ದೇವಾಲಯಗಳು**
ಪ್ರಕಾಶ ಸಾಹಿತ್ಯ, ಬೆಂಗಳೂರು. ೧೯೮೯

೩೧. ರಾಮಚಂದ್ರರಾವ್.ಎಸ್.ಕೆ, : **ಭಾರತದ ದೇವಾಲಯ ನೆಲೆ ಹಿನ್ನೆಲೆ**
ಸುರಮಾ ಪ್ರಕಾಶನ, ಬೆಂಗಳೂರು.
೨೦೧೦ (ದ್ವಿಮು)
ಮೂರ್ತಿಶಿಲ್ಪ ನೆಲೆ ಹಿನ್ನೆಲೆ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೫

೩೨. ರಾಜಶೇಖರ.ಎಸ್, : **ಕರ್ನಾಟಕ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ**
ಸುಜಾತಾ ಪಬ್ಲಿಕೇಶನ್, ಧಾರವಾಡ. ೧೯೮೮

೩೩. ಲಿಂಗಸೂಗೂರ ಸೀಮಾಮಾ, : **ಪುರದ ಸೋಮೇಶ್ವರ ದೇವಾಲಯ ಚರಿತ್ರೆ**
ತಾವರಗೆರೆ. ೧೯೩೬

೩೪. ವಿರೇಶ್ ಬಡಿಗೇರ, : **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೩೫. ವಿನೋದಾ ಪಾಟೀಲ, : **ಕರ್ನಾಟಕದ ಪ್ರಾಚೀನ ಬಾವಿಗಳು**
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು. ೨೦೦೬

೩೬. ಶರಣಬಸಪ್ಪ ಕೋಲ್ಕಾರ, : **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಶಿಲ್ಪಗಳು**
ಎಂ.ಫಿಲ್ ಪ್ರಬಂಧ(ಅಪ್ರಕಟಿತ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪
ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸ ಕಾಲದ ಕಲೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೦೭

ಆನೆಗುಂದಿ
ಹೈ.ಕ.ಅ.ವಿ, ಶ್ರೀ ಕೊ.ಬ.ಖಾ.ಶಿ.ಸ.
ಸೇಡಂ ೨೦೦೮.
ಶಿಲಾಯುಗದ ಗವಿಚಿತ್ರಗಳು
ಬಸವ ಪ್ರಕಾಶನ, ಗುಲಬರ್ಗಾ. ೨೦೧೦.

೩೭. ಶರಣಪ್ಪ ವಡಗೇರಿ, : **ಕುಷ್ಟಗಿ ತಾಲ್ಲೂಕು ದರ್ಶನ**
ಬಸವ ಪ್ರಕಾಶನ, ಗುಲಬರ್ಗಾ. ೨೦೧೦

೩೮. ಶಿವರಾಮ ಕಾರಂತ.ಕೆ, : **ಚಾಲುಕ್ಯ ವಾಸ್ತುಶಿಲ್ಪ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೬೯
ಕರ್ನಾಟಕ ಶಿಲ್ಪ
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು. ೧೯೮೨

೩೯. ಶಿವತಾರಕ.ಕೆ.ಬಿ, : **ಕರ್ನಾಟಕದ ಪುರಾತತ್ವ ನೆಲೆಗಳು**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨

೪೦. ಶೇಠೆ.ಬಿ.ಎಸ್, : **ಕರ್ನಾಟಕದಲ್ಲಿ ಸತಿಪದ್ಧತಿ**
ವಿರಶೈವ ಅಧ್ಯಯನ ಅಕಾಡೆಮಿ, ಬೆಳಗಾವ. ೧೯೮೧

೪೧. ಶೇಷಶಾಸ್ತ್ರಿ.ಆರ್, : **ಕರ್ನಾಟಕದ ವೀರಗಲ್ಲುಗಳು**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೨
ಶಾಸನ ಪರಿಚಯ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೨೦೦೫

೪೨. ಶ್ರೀಕಂಠಶಾಸ್ತ್ರಿ.ಎಸ್, : **ಪುರಾತತ್ವ ಶೋಧನೆ**
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೫

೪೩. ಶ್ರೀನಿವಾಸ.ಎಲ್, : **ಹಂಪಿ ಪರಿಸರದ ಆದಿಮಾನವ ನೆಲೆಗಳು**
ಕನ್ನಡ ವಿಶ್ವವಿದ್ಯಾಲಯ, ಹಂಪಿ..೨೦೧೦

೪೪. ಹನುಮಗೌಡ.ಸಿ, : **ಕುಷ್ಟಗಿ ತಾಲೂಕು ದರ್ಶನ**
ಕುಂತಳ ಪ್ರಕಾಶನ, ಕೊರಡಕೇರಾ. ೨೦೦೧

೪೫. ಹನುಮಾಕ್ಷಿ ಗೋಗಿ,
ಪಿ.ಕೆ.ರಾಠೋಡ, : **ಡಂಬಳ ಸಾಂಸ್ಕೃತಿಕ ಅಧ್ಯಯನ**
ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ. ೨೦೦೮

೪೬. ಹೂಗಾರ.ಎಸ್.ಕೆ, : **ಕಲೆ ಮತ್ತು ಹಬ್ಬ**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೭

೪೭. ಹಿರೇಮಠ.ಎಸ್.ಎಂ, : **ವೀರಗಲ್ಲುಗಳು**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬

೪೮. ಹಿರೇಮಠ.ಬಿ.ಆರ್, : **ಶಾಸನಗಳಲ್ಲಿ ಕರ್ನಾಟಕದ ವರ್ತಕರು**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬

೪೯. ಹೊಂಗನೂರು ನಂಜಯ್ಯ.ಎಂ, : **ಸ್ಥಳನಾಮಗಳು**
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೨೦೦೯

೩೦. ಷಡಕ್ಷರಯ್ಯ.ಆರ್.ಎಂ
ಸುಶೀಲಾ.ಡಿ.ತಾಳಿಕೋಟಿ,
ಎಸ್.ಕೆ.ಮೇಲಕಾರ, : **ಕರ್ನಾಟಕ ವಾಸ್ತುಶಿಲ್ಪ ಕಲೆಯಲ್ಲಿ ಕೋಟಿ ಶಿವಲಿಂಗಗಳ ತಾಣ- ಪುರ,**
ಗಂಗಾವತಿ. ೨೦೧೦

೩೧. ಸದಾಶಿವ.ಕೆ, : **ಸಮಗ್ರ ಕರ್ನಾಟಕದ ಇತಿಹಾಸ**
ಪ್ರಿಯದರ್ಶಿನಿ ಪ್ರಕಾಶನ, ಮೈಸೂರು. ೧೯೯೯

೩೨. ಸದಾನಂದ.ಕೆ.ಎಸ್, : **ವಾಸ್ತುಶಿಲ್ಪ**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೦

೩೩. ಸತ್ಯನಾಥ ಅಯ್ಯರ್.ಆರ್, : **ಪ್ರಾಚೀನ ಭಾರತ** (ಅನು-ಆನವಟ್ಟಿ.ಎಂ.ಆರ್)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೨

೩೪. ಸಿದ್ದಲಿಂಗಪ್ಪ ಕೊಟ್ನೆಕಲ್, : **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ**
ಮೇಘನಾ ಪ್ರಕಾಶನ, ಕೊಪ್ಪಳ. ೨೦೧೦

೩೫. ಸುರೇಶ.ಕೆ.ಎಂ
ಮತ್ತು ಇತರರು, : **ಕರ್ನಾಟಕ ದೇವಾಲಯ ಕೋಶ. ಕೊಪ್ಪಳ ಜಿಲ್ಲೆ**
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧

೩೬. ಸೂರ್ಯನಾಥ ಕಾಮತ್, : **ಕರ್ನಾಟಕದ ಸಂಕ್ಷಿಪ್ತ ಇತಿಹಾಸ**
ಬಾಪ್ಕೊ ಪ್ರಕಾಶನ, ಬೆಂಗಳೂರು. ೧೯೮೭

೩೭. ಸ್ವಾಮಿ ಹರ್ಷಾನಂದ, : **ನಮ್ಮ ದೇವಾಲಯಗಳು**
ಶ್ರೀ ರಾಮಕೃಷ್ಣ ಅಶ್ರಮ, ಮೈಸೂರು. ೨೦೦೬

ಇಂಗ್ಲೀಷ್ ಕೃತಿಗಳು

01. Abhishankar.K,(Ed) : **Raichur District Gazzetter**
Mysore State. 1970

02. Channabasappa.S.Patil : **Temples of Raichur - Bellary District**
Directorte of Archaeology and Museums, Mysore.

03. Sunil Khosh : **Indian Art**
Sundee Prakashan Delhi. 1998.

04. Soundara Rajan, : **Indian Temple Styles**
Munshiram Manaoharlal New Delhi. 1972.

05. S.Rajasekhara, : **Karnataka Architecturer**
Sujata Publication Dharwad. 1985.

ಸಂಪಾದಿತ ಕೃತಿಗಳು

೦೧.	ಕಲಬುರ್ಗಿ.ಎಂ.ಎಂ.(ಸಂ)	:	**ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು** ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯
೦೨.	ಕೊಟ್ರೇಶ.ಎಂ,(ಸಂ)	:	**ಕಲ್ಯಾಣ ಕರ್ನಾಟಕದ ಅರಸು ಮನೆತನಗಳು** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦
೦೩.	ನಾರಾಯಣ.ಕೆ.ವಿ,(ಸಂ)	:	**ಸ್ಥಳನಾಮಗಳು, ಪರಿವರ್ತನೆ ಮತ್ತು ಪ್ರಭಾವ** ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯
೦೪.	ಪಾಟೀಲ ಎಚ್.ಎಸ್. ಅಲ್ಲಮಪ್ರಭು ಬೆಟ್ಟದೂರು,(ಸಂ)	:	**ಕೊಪ್ಪಳ ಜಿಲ್ಲಾ ದರ್ಶನ** ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. .೨೦೦೪
೦೫.	ಭಟಸೂರಿ.ಕೆ.ಜಿ,(ಸಂ)	:	**ಕರ್ನಾಟಕ ಶಾಸನ ಸಂಶೋಧನೆ** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯
೦೬.	ಭಾರತೀಯ ಇತಿಹಾಸ ಸಂಕಲನ ಸಮಿತಿ(ಸಂ)	:	**ಗುಡಿ-ಜನರ ಜೀವನಾಡಿ** ದಯಾನಂದ ಪೈ ಇತಿಹಾಸ ಸಂಶೋಧನಾ ಕೇಂದ್ರ,, ಮೈಸೂರು. ೧೯೯೪
೦೭.	ಲಕ್ಷ್ಮಣ ತೆಲಗಾವಿ,(ಸಂ)	:	**ಸ್ಥಳೀಯ ಚರಿತ್ರೆ** ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ
೦೮.	ಸಂಪದ್ಗಿರಿರಾವ್.ಕೆ,(ಸಂ)	:	**ಕರ್ನಾಟಕ ಪರಂಪರೆ** ಭಾಗ-೧ ಮತ್ತು ೨. ಮೈಸೂರು ರಾಜ್ಯ ಸರಕಾರ. ೧೯೭೦

ಶಾಸನ ಸಂಪುಟಗಳು

೦೧.	Channabasappa.S.Patil Vinoda Patil	:	Inscription of Karanataka-III **Inscriptions of Koppal District** Directorte of Archaeology and Museums, Mysore. 1998.
೦೨.	ದೇವರಕೊಂಡಾರೆಡ್ಡಿ, ಭಟಸೂರಿ.ಕೆ.ಜಿ, ಕಲವೀರ ಮನ್ವಾಚಾರ್, ಪರಮಶಿವಮೂರ್ತಿ.ಡಿ.ವಿ,	:	**ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧** ಬಳ್ಳಾರಿ ಜಿಲ್ಲೆ **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨** ಕೊಪ್ಪಳ ಜಿಲ್ಲೆ. ೧೯೯೯. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩** ಹಂಪಿ

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭
ರಾಯಚೂರು

ಸ್ಮರಣ ಸಂಚಿಕೆಗಳು

೦೧. ಚನ್ನಬಸಯ್ಯಸ್ವಾಮಿ(ಸಂ)	:	**'ಕಾಯಕಸಿರಿ'** ಶ್ರೀಮಲ್ಲಿಕಾರ್ಜುನ ಮಠ. ಗಂಗಾವತಿ. ೧೯೯೬.
೦೨. ನೂಲಿ ರಾಮಸ್ವಾಮಿ(ಸಂ)	:	**'ಎಡದೊರೆನಾಡು'** ಎ.ನಾ.ಉ.ಸ. ರಾಯಚೂರು. ೧೯೯೪.
೦೩. ವೃಷಬೇಂದ್ರ ಸ್ವಾಮಿ. ಎಸ್.ಎಮ್. ಮತ್ತು ಇತರರು(ಸಂ)	:	**'ಗವಿದೀಪ್ತಿ'** ಗವಿಮಠ ಕೊಪ್ಪಳ. ೧೯೭೬
೦೪. ಶರಣಬಸಪ್ಪ ಕೋಲ್ಕಾರ(ಸಂ)	:	**'ಅಕ್ಷಯ'** ಸವಿಸಂಚಿಕೆ ಗಂ.ತಾ.ಕ.ಸಾ.ಪ. ಗಂಗಾವತಿ. ೨೦೦೨ **'ಅಂತರಗಂಗೆ'** ಗಂ.ತಾ.ಕ.ಸಾ.ಪ. ಗಂಗಾವತಿ. ೨೦೧೦
೦೫. ಶರಣಪ್ಪ ನೀಡಶೇಸಿ(ಸಂ)	:	**'ಕೃಷ್ಣಗಿರಿ-ಸಾಹಿತ್ಯಸಿರಿ'** ಕ.ಸಾ.ಪ. ಕುಷ್ಟಗಿ. ೨೦೦೨.
೦೬. ಶರಣಪ್ಪ ವಡಗೇರಿ ರವೀಂದ್ರ ಬಾಕಳೆ(ಸಂ)	:	**'ತಾವರೆಕೆರೆ'** ಕ.ಸಾ.ಪ. ಕುಷ್ಟಗಿ. ೨೦೦೨.
೦೭. ಶೇಖರಗೌಡ ಮಾಲಿಪಾಟೀಲ(ಸಂ)	:	**'ಕಪಿಲತೀರ್ಥ'** ಕ.ಸಾ.ಪ.೩ನೆಯ ಜಿಲ್ಲಾ ಸಮ್ಮೇಳನ ಕೊಪ್ಪಳ. ೨೦೦೭.
೦೮. ಶ್ರೀನಿವಾಸ ಜಹಗೀರದಾರ(ಸಂ)	:	**'ಮಾನ್ಯಪುರ'** ಸ್ಮರಣ ಸಂಚಿಕೆ ಕು.ತಾ.ಹ.ಸಾ.ಸ. ಹಿರೇಮನ್ನಾಪುರ. ೨೦೦೬.

ನಿಘಂಟುಗಳು:

೦೧. ಬಸವಾರಾಧ್ಯ.ಎನ್,	:	**ಹಳಗನ್ನಡ ಶಬ್ದಾರ್ಥಕೋಶ** ಡಿ.ವಿ.ಕೆ. ಮೈಸೂರು. ೨೦೦೫.
೦೨. ಶಿವರಾಮ ಕಾರಂತ	:	**ಸಿರಿಗನ್ನಡ ಅರ್ಥಕೋಶ** ಎಸ್.ಬಿ.ಎಸ್ ಪಬ್ಲಿಷರ್ಸ್, ಬೆಂಗಳೂರು. ೧೯೯೨.
೦೩. ಶೀನಿವಾಸ ರೀತ್ತಿ (ಸಂ)	:	**ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ೨೦೦೦.

ಪತ್ರಿಕೆಗಳು:

೦೧. **ಇತಿಹಾಸ ದರ್ಶನ** — ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೦೨. **ಕರ್ನಾಟಕ ಭಾರತಿ** — ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೦೩. **ನಾಡು–ನುಡಿ** — ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೦೪. **ಶಾಸನ ಅಧ್ಯಯನ** — ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೫. **ಇತಿಹಾಸ ದರ್ಪಣ** — ಬೆಂಗಳೂರು.

೦೬. **ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ಪ್ರಜಾವಣಿ** ದಿನಪತ್ರಿಕೆಗಳು.

ಛಾಯಚಿತ್ರಗಳು


ದಾನಶಾಸನ–ಪುರ


ದಾನಶಾಸನ–ಪುರ


ದಾನಶಾಸನ–ಪುರ


ದಾನಶಾಸನ–ಪುರ



ದಾನಶಾಸನ–ಹನುಮನಾಳ



ದಾನಶಾಸನ–ತಾವರಗೆರೆ




ದಾನಶಾಸನ–ತಾವರಗೆರೆ



ದಾನಶಾಸನ–ಪುರ



ದಾನಶಾಸನ–ಚಳಗೇರಿ



ದಾನಶಾಸನ–ಮಂಕಲ್ಕೇರಿ



ಶಾಸನಶಿಲ್ಪ–ಆಚನೂರ



ದಾನಶಾಸನ–ಹೆಸರೂರು











ದಾನಶಾಸನ–ಗೋತಗಿ



ದಾನಶಾಸನ–ಅಂಟೂರಠಾಣ



ದಾನಶಾಸನ–ಹಿರೇಮನ್ನಾಪುರ



ಶಾಸನ–ಹಿರೇಮನ್ನಾಪುರ



ಶಾಸನಶಿಲ್ಪ–ಪೂರ್ತಗೇರಿ



ಶಾಸನಶಿಲ್ಪ–ಸಿರಗುಪ್ಪಿ



ಶಾಸನಶಿಲ್ಪ–ಚಳಗೇರಿ



ದಾನಶಾಸನ–ಹಿರೇಮನ್ನಾಪುರ











ಆನೆಬೇಟೆ–ಪುರ



ವೀರಗಲ್ಲು–ತಾವರಗೆರೆ



ವೀರಗಲ್ಲು–ಶ್ಯಾಡಲಗೇರಿ



ವೀರಗಲ್ಲು–ನಾರಿನಾಳ




ವೀರಗಲ್ಲು–ಶ್ಯಾಡಲಗೇರಿ



ವೀರಗಲ್ಲು–ನೀಲೊಗಲ




ವೀರಗಲ್ಲು–ಯರಗೇರಿ



ವೀರಗಲ್ಲು–ನೀಲೊಗಲ



ವೀರಗಲ್ಲು-ಗೋತಗಿ



ವೀರಗಲ್ಲು-ಅಂಟೂರಠಾಣ



ತುಱುಗೊಳ್-ಸಿರಗುಪ್ಪಿ



ತುಱುಗೊಳ್-ತಾವರಗೆರೆ



ವೀರಗಲ್ಲು–ಅಂಟೂರತಾಣ



ವೀರಗಲ್ಲು–ಹಿರೇಮನ್ನಾಪುರ




ಒಕ್ಕೈಮಾಸ್ತಿಕಲ್ಲು–ಗೋತಗಿ



ವೀರಗಲ್ಲು–ಗೋತಗಿ



ವೀರಗಲ್ಲು–ಜಾಲಿಹಾಳ



ವೀರಗಲ್ಲು–ಗಂಗನಾಳ




ವೀರಗಲ್ಲು–ಗಂಗನಾಳ



ವೀರಮಾಸ್ತಿಕಲ್ಲು–ಕುಷ್ಟಗಿ



ಯಂತ್ರಕಲ್ಲು–ಹನುಮನಾಳ



ಯಂತ್ರಕಲ್ಲು–ಸಿರಗುಪ್ಪ



ಲಿಂಗಮುದ್ರೆಕಲ್ಲು–ಕುಷ್ಟಗಿ



ವಾಮನಮೂರ್ತಿಕಲ್ಲು–ಗಂಗನಾಳ



ಸೋಮನಾಥ ದೇವಾಲಯ–ಪುರ್ತಗೇರಿ



ಈಶ್ವರ ದೇವಾಲಯ–ಚಂದಾಲಿಂಗ



ಸೋಮೇಶ್ವರ ದೇವಾಲಯ–ಹೂಲಗೇರಿ



ರಾಮಲಿಂಗೇಶ್ವರ ದೇವಾಲಯ–ಗೋತಗಿ



ಮೌನೇಶ್ವರ ದೇವಾಲಯ-ಅಂಟೂರಠಾಣ

ಮಹಾಬಲೇಶ್ವರ ದೇವಾಲಯ-ಕಾಟಾಪುರ





ಚಂದಾಲಿಂಗೇಶ್ವರ ದೇವಾಲಯ-ಚಂದ್ರಗಿರಿ

ಚಂದಾಲಿಂಗೇಶ್ವರ ದೇವಾಲಯದ
ಆವರಣ ಗೋಡೆ-ಚಂದ್ರಗಿರಿ





ಸೋಮೇಶ್ವರ ದೇವಾಲಯ–ಪುರ



ಈಶ್ವರ ದೇವಾಲಯದ–ಮಾಟೂರ



ನಾರಾಯಣ ದೇವಾಲಯ–ಶ್ಯಾಡಲಗೇರಿ



ಜಂಬುನಾಥ ದೇವಾಲಯ–ಅಂಟೂರಶಾಣ



ವೈಜನಾಥ ದೇವಾಲಯ–ತಾವರಗೆರೆ

ಆಂಜನೇಯ ದೇವಾಲಯ–ಮುದೇನೂರ






ನಾಗಕನ್ನಿಕಾ ದೇವಾಲಯ–ಗೋತಗಿ

ನಾಗಕನ್ನಿಕಾ ದೇವಾಲಯ–ಗೋತಗಿ







ಆಂಜನೇಯ ದೇವಾಲಯ–ಶಿರಗುಂಪಿ

ಆಂಜನೇಯ ದೇವಾಲಯ–ಶಿರಗುಂಪಿ





ಹೂಡೆವ್ವ ದೇವಾಲಯ–ಶ್ಯಾಡಲಗೇರಿ

ಕೋರಿಗುಡಿ–ಕುಷ್ಟಗಿ



ಈಶ್ವರ ದೇವಾಲಯ–ಪುರ



ಈಶ್ವರ ದೇವಾಲಯ–ಪುರ



ರಾಮಲಿಂಗೇಶ್ವರ ದೇವಾಲಯ–ಕುಷ್ಟಗಿ



ರಾಮಲಿಂಗೇಶ್ವರ ದೇವಾಲಯ–ಕುಷ್ಟಗಿ





ಈಶ್ವರ ದೇವಾಲಯ-ಹನುಮಸಾಗರ

ಸೋಮಲಿಂಗೇಶ್ವರ ದೇವಾಲಯ-ಹನುಮಸಾಗರ





ಆಂಜನೇಯ ದೇವಾಲಯ-ತಾವರಗೆರೆ

ಸಂಗಮೇಶ್ವರ ದೇವಾಲಯ-ಹೂಲಗೇರಿ











ಗಣಪತಿ–ಚಳಗೇರಿ



ವೀರಭದ್ರ–ಗಂಗನಾಳ



ಪಾರ್ಶ್ವನಾಥ–ಮುದೇನೂರ



ಮಹಿಷಾಸುರಮರ್ಧಿನಿ–ಕಾಟಾಪುರ



ತಾವರಗೆರೆ



ಕುಷ್ಟಗಿ



ಹಿರೇಮನ್ನಾಪುರ



ಹನುಮಸಾಗರ